॥ ಶ್ರೀಃ ॥

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ಸಂ. ೩೨)

ಶ್ರೀ ಶಿವರಹಸ್ಯ

ಸಂಪುಟ ೧೭

ಅನುವಾದಕ

ಆಸ್ಥಾನವಿದ್ವಾನ್ ಎಚ್. ಗಂಗಾಧರಶಾಸ್ತ್ರೀ

ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲು ಅಧ್ಯಾಪಕ

ಮೈಸೂರು

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

1949

॥ ಶ್ರೀಃ ॥

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ಸಂ. ೩೨)

ಶ್ರೀಶಿವರಹಸ್ಯ

ಸಂಪುಟ ೧೭

ಅನುವಾದಕ

ಆಸ್ಥಾನವಿದ್ವಾನ್ ಎಚ್. ಗಂಗಾಧರಶಾಸ್ತ್ರೀ

ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲು ಅಧ್ಯಾಪಕ

ಮೈಸೂರು

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

1949

Printed by D. Rajarathnam,
Sree Panchacharya Electric Press
Sayaji Rao Road, Mysore.

For The Palace Mysore.

ಮುನ್ನುಡಿ

ಮಾನವನ ಜ್ಞಾನಾರ್ಜನೆಗೆ ಚಿತ್ತಶುದ್ಧಿ ಆವಶ್ಯಕ. ಚಿತ್ತೈಕಾಗ್ರತೆಯಿಂದ ಚಿತ್ತಶುದ್ಧಿಯೊದಗುವುದು. ಪುರಾಣಶ್ರವಣ, ಸ್ತೋತ್ರಪಠನ, ದೇವತಾದರ್ಶನ, ತೀರ್ಥಯಾತ್ರೆ, ಇವು ಚಿತ್ತೈಕಾಗ್ರತೆಗೆ ಸಾಧನಗಳಾಗುವುವು. ಸಂಸಾರಸಮುದ್ರದಲ್ಲಿ ಬಿದ್ದು ತಮ್ಮ ಮನಸ್ಸನ್ನು ನಾನಾರೀತಿ ಹರಿಸಿ, ಪತ್ನೀಪುತ್ರಾದಿಗಳ ಮೋಹದಲ್ಲಿ ಸಿಲುಕಿ ನರಳುವ ಜನರಿಗೆ ಚಿತ್ತವು ಸ್ಥಾಯಿಯಾಗಿ ನಿಲ್ಲಲು ಅಸಾಧ್ಯವೇ ಸರಿ. ಇದನ್ನರಿತೇ ನಮ್ಮ ಪ್ರಾಚೀನರು ವಿಜನವಾಗಿ, ವಿಶಾಲವಾಗಿ, ಯಾವ ಈತಿಬಾಧೆಗಳಿಗೂ ಅವಕಾಶವಿಲ್ಲದಂತಹ ಕೆಲವು ನದೀತೀರ, ಸಮುದ್ರತೀರ, ಅರಣ್ಯಪ್ರದೇಶ, ಪರ್ವತಾಗ್ರ, ಮುಂತಾದ ಸ್ಥಳಗಳಲ್ಲಿ ದೇವತಾಪ್ರತಿಷ್ಠಾದಿಗಳನ್ನು ನಡೆಸಿ ಅದನ್ನು ಕ್ಷೇತ್ರವನ್ನಾಗಿ ಮಾರ್ಪಡಿಸಿದರು. ದೇವರು ಎಲ್ಲೆಲ್ಲಿಯೂ ಇದ್ದಾನೆ; ಭಕ್ತಿಯಿಂದ ಧ್ಯಾನಿಸಿದರೆ ನಿಂತಲ್ಲಿಯೇ ದೇವರು ಮೈದೋರುವನು ಎಂಬ ಭಾವನೆಯುಳ್ಳ ಪ್ರಹ್ಲಾದನಂತಹ ಪರಮಭಕ್ತರಿಗೆ ಯಾವ ತೀರ್ಥಕ್ಷೇತ್ರವೂ ಬೇಕಿಲ್ಲ. ಎಲ್ಲರೂ ಪ್ರಹ್ಲಾದಾದಿಗಳಂತಹ ಭಕ್ತರಾಗಿ ಜನಿಸಲು ಸಾಧ್ಯವಿಲ್ಲ. ವರ್ಷವೆಲ್ಲಾ ರಾಗದ್ವೇಷಾದಿಗಳಿಂದ ತೊಳಲುವ ಮಾನವರು ಕೆಲವು ದಿನಗಳಲ್ಲಾಗಲಿ, ಹಲವು ಕ್ಷಣಗಳಲ್ಲಾಗಲಿ ತಮ್ಮ ಮನಸ್ಸನ್ನು ಸ್ಥಿರಮಾರ್ಗದಲ್ಲಿ ನಿಲ್ಲಿಸಿ ಆಮುಷ್ಮಿಕಸುಖವನ್ನು ಸಾಧಿಸಿಕೊಳ್ಳಲೆಂಬುದೇ ತೀರ್ಥಕ್ಷೇತ್ರ ನಿರ್ಮಾಪಕರ ದೂರದೃಷ್ಟಿ.

ಶಿವರಹಸ್ಯದ ಈ ಭಾಗದಲ್ಲಿ ಕಾಶೀಕ್ಷೇತ್ರದ, ಮತ್ತು ಶ್ರೀಶೈಲಕ್ಷೇತ್ರದ ಮಹಿಮೆ ವಿಶೇಷವಾಗಿ ವರ್ಣಿತವಾಗಿರುವುದು. ಕ್ಷೇತ್ರದ ಮಹಿಮೆಯನ್ನು ಹೇಳುವಾಗಲೆಲ್ಲಾ, ಅಲ್ಲಿಯೇ ವಾಸಮಾಡಿ ಮುಕ್ತಿಗಳಿಸಿದ ಒಬ್ಬ ಮಹಾತ್ಮನ ಜೀವನಚರಿತ್ರೆ, ಅವನಿಂದ ರಚಿತವಾದ ಸ್ತೋತ್ರ ಇವುಗಳನ್ನು ತಪ್ಪದೆ ಹೇಳುವುದು ಈ ಗ್ರಂಥದ ವೈಶಿಷ್ಟ್ಯ. ಪುಷ್ಪದಂತ ವಿರಚಿತವಾದ ಶಿವಸ್ತುತಿಯೊಂದು ಈ ಭಾಗದ ಹದಿಮೂರನೆಯ ಅಧ್ಯಾಯದಲ್ಲಿ ಬಂದಿದೆ. ಈ ಸ್ತೋತ್ರವು ಇನ್ನೂ ಅನೇಕ ಪ್ರಾಚೀನಗ್ರಂಥಗಳಲ್ಲಿ ಉಕ್ತವಾಗಿದೆ. ಅದ್ವೈತವೇದಾಂತದಲ್ಲಿ ಮೂರ್ಧನ್ಯರಾದ ಮಧುಸೂದನ ಸರಸ್ವತಿಗಳು ಇದೇ ಸ್ತೋತ್ರಕ್ಕೆ ಹರಿ, ಹರ, ಏತದುಭಯಪರವಾಗಿ ವ್ಯಾಖ್ಯಾನ ಮಾಡಿರುವರು. ಈ ಗ್ರಂಥದಲ್ಲಿ ಮಾತ್ರ ಹರಪರವಾದ ಅರ್ಥವನ್ನೇ ತಾತ್ಪರ್ಯರೂಪವಾಗಿ ವಿವರಿಸಲಾಗಿದೆ. ಶಿವಾರಾಧನೆಗೆ ಅಧಿಕಾರಿಗಳು ಯಾರು ? ಅನಧಿಕಾರಿಗಳ

ಲಕ್ಷಣವೇನು ? ಎಂಬುದನ್ನೂ ಈ ಗ್ರಂಥಭಾಗದಲ್ಲಿ ತಿಳಿಯಬಹುದಾಗಿದೆ. ಶಿವ ಧರ್ಮಪ್ರಚೋದಕಗಳಾದ ಗ್ರಂಥಗಳಲ್ಲಿ ಈ ಶಿವರಹಸ್ಯಕ್ಕಿಂತ ಅತ್ಯುತ್ತಮವಾದ ಗ್ರಂಥ ಇನ್ನೊಂದಿಲ್ಲವೆಂಬುದನ್ನು ಧಾರಾಳವಾಗಿ ಹೇಳಬಹುದು.

ಶಿವರಹಸ್ಯದ ಈ ಏಳನೆಯ ಅಂಶವು ಪೂರ್ವಾರ್ಧ ಮತ್ತು ಉತ್ತರಾರ್ಧ ಗಳೆಂದು ಎರಡು ಭಾಗಗಳಾಗಿ, ಹದಿನಾಲ್ಕು ಸಾವಿರ ಶ್ಲೋಕಗಳಿಂದ ಕೂಡಿರುವುದು. ಪ್ರಾಯಿಕವಾಗಿ ಈ ಅಂಶವು ತೀರ್ಥಕ್ಷೇತ್ರಗಳ ವಿಷಯದಿಂದಲೇ ತುಂಬಿಹೋಗಿರು ವುದು. ಅಲ್ಲಲ್ಲಿ ಅಮೂಲ್ಯವಾದ ಶಿವಸ್ತುತಿಗಳು ಬಂದಿವೆ. ಈ ಭಾಗದಲ್ಲಿಯೇ ಹದಿಮೂರನೆಯ ಅಧ್ಯಾಯದಲ್ಲಿ "ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ" ಎಂಬ ಅಂತ್ಯಪಾದದಿಂದ ಕೂಡಿದ ಇಪ್ಪತ್ತು ಶ್ಲೋಕಗಳು ಶತರ್ಜನ ಕೃತಗಳೆಂದು ಉಕ್ತವಾಗಿವೆ. ಅವುಗಳಲ್ಲಿ ಕಂಡುಬರುವ ಶಬ್ದಸೌಷ್ಠವ, ಸುಲಭಶೈಲಿ, ಅರ್ಥ ಗಾಂಭೀರ್ಯ ಇವು ಎಂತಹವರ ಮನಸ್ಸನ್ನಾದರೂ ಆಕರ್ಷಿಸದೆ ಬಿಡದು. ಪ್ರಕೃತಿ ಸೌಂದರ್ಯದಿಂದ ತುಂಬಿತುಳುಕುವ ಶ್ರೀಶೈಲವೇ ಮುಂತಾದ ದಿವ್ಯಕ್ಷೇತ್ರಗಳಲ್ಲಿ, ಸಾಂಸಾರಿಕವಾದ ಸಕಲ ಮೋಹಾದಿಗಳನ್ನೂ ತೊರೆದು, ಲೋಕೇಶ್ವರನಾದ ಪರಮಾತ್ಮನ ಗುಣಗಣಗಳನ್ನು ಸ್ಮರಿಸುತ್ತಾ, ಹೃದಯಂಗಮವಾದ ಇಂತಹ ದಿವ್ಯಸ್ತೋತ್ರಗಳನ್ನು ಅರ್ಥವತ್ತಾಗಿ ಪಠಿಸುತ್ತಾ ಆನಂದಪಡುವವನ ಹೃದಯದಲ್ಲಿ ಭಗವಂತನ ದಿವ್ಯತೇಜಸ್ಸು ಪ್ರತಿಫಲಿಸುವುದೆಂಬುದರಲ್ಲಿ ಅನುಮಾನವೇನಿದೆ? ಪ್ರಕೃತಿಯ ಸೊಬಗು ಮಾನವನ ಮನಸ್ಸನ್ನು ಪರಿಪಾಕಗೊಳಿಸುವಂತೆ, ಪ್ರಾಚೀನರ ಒಂದೊಂದು ನುಡಿಯೂ ಸ್ವೇಚ್ಛೆಯಾಗಿ ಓಡುವ ಚಂಚಲಮನಸ್ಸನ್ನು ಹಿಡಿದೆಳೆದು ಸನ್ಮಾರ್ಗಕ್ಕೆ ಬರುವಂತೆ ತಿದ್ದುವುದು. ಈ ವಿಧವಾದ ಆರ್ಯೋಕ್ತಿಗಳು ಈ ಗ್ರಂಥದಲ್ಲಿ ಹೇರಳವಾಗಿ ಬರುವುವು. ಒಂದುವೇಳೆ ಈ ಶಿವರಹಸ್ಯದಲ್ಲಿ ಬರುವ ಪುನರುಕ್ತಿಗಳಿಂದ ವಾಚಕರು ಜುಗುಪ್ಸೆಪಡಬಹುದು. ವಿಷಯದಲ್ಲಿ ಪುನರುಕ್ತಿ ಇದ್ದರೂ ಭಾಷಾಶೈಲಿ ಯಲ್ಲಿ ನವೀನತೆ ಕಂಡುಬರುವುದು. ಸಂಸ್ಕೃತಭಾಷೆಯಲ್ಲಿ ಸಾಮಾನ್ಯಪರಿಚಯ ಪಡೆದವನಿಗೂ ಅರ್ಥವಾಗುವ ಶೈಲಿಯೇ ಇಲ್ಲಿ ಬಳಸಲ್ಪಟ್ಟಿದೆ. ಶಿವಧರ್ಮವನ್ನು ವಿಶದಗೊಳಿಸಬೇಕೆಂದು ಹೊರಟಿರುವ ಈ ಗ್ರಂಥವು ಸಂಸ್ಕೃತಭಾಷೆಯ ಏಳಿಗೆಗೂ ಸಹಕಾರಿಯಾಗಿದೆ ಎಂದರೆ ಅದು ಅತ್ಯುಕ್ತಿಯಲ್ಲ. ಇಲ್ಲಿರುವ ಅನೇಕ ಸ್ತೋತ್ರಗಳು ಪ್ರಾಚೀನವಾದ ಇತರ ಗ್ರಂಥಗಳಲ್ಲಿಯೂ ಕಂಡುಬರುತ್ತಿವೆ. ನವೀನಗ್ರಂಥಗಳಲ್ಲಿಯೂ ಇದರ ಹಲವಾರು ಶ್ಲೋಕಗಳು ಅಲ್ಲಲ್ಲಿ ಉದಾಹೃತಗಳಾಗಿವೆ. ಈ ನಿದರ್ಶನಗಳಿಂದ ಈ ಗ್ರಂಥದ ಕಾಲವನ್ನು ಸ್ಥಿರಪಡಿಸುವುದು ಅಷ್ಟು ಸುಲಭಸಾಧ್ಯವಲ್ಲ.

ಹೀಗೆ ಧರ್ಮಬೋಧಕಗಳಾದ ಪ್ರಾಚೀನ ಗ್ರಂಥಗಳನ್ನು ಪ್ರಕಾಶಕ್ಕೆ ತಂದು ಜನತೆಗೆ ಮಹೋಪಕಾರವೆಸಗಿರುವ ನಮ್ಮನ್ನಾಳುತ್ತಿರುವ ಶ್ರೀಮನ್ಮಹಾರಾಜ **ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ.** ಮಹಾಪ್ರಭುಗಳವರಿಗೂ ಅವರ ಕುಟುಂಬವರ್ಗಕ್ಕೂ ಸರ್ವೇಶ್ವರನು ಆಯು ರಾರೋಗ್ಯಸತ್ಸಂತಾನಾದಿ ಸಕಲ ಸೌಭಾಗ್ಯಗಳನ್ನೂ ಕರುಣಿಸಲೆಂದು ಈ ಗ್ರಂಥಾಭಿಮಾನಿದೇವತೆಯಾದ ಪರಮೇಶ್ವರನನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ಶ್ರೀ ವಿರೋಧಿ ಸಂವತ್ಸರದ
ಭಾದ್ರಪದ ಕೃಷ್ಣ ದ್ವಿತೀಯ
ಶುಕ್ರವಾರ
ತಾ॥ 9—9—1949.

ಸಜ್ಜನವಿಧೇಯ,
ಹೊನ್ನೇನಹಳ್ಳಿ ಗಂಗಾಧರಶಾಸ್ತ್ರೀ,
ಆಸ್ಥಾನವಿದ್ವಾನ್, ಮೈಸೂರು.

ಶ್ರೀಶಿವರಹಸ್ಯದ ಏಳನೆಯ ಅಂಶದ ವಿಷಯಾನುಕ್ರಮಣಿಕಾ

ಅಧ್ಯಾಯ ೧೨—೧೩

ಹನ್ನೆರಡನೆಯ ಅಧ್ಯಾಯ

ಹದಿಮೂರನೆಯ ಅಧ್ಯಾಯ

ಹದಿನಾಲ್ಕನೆಯ ಅಧ್ಯಾಯ

ಶ್ರೀಶೈಲದಲ್ಲಿ ತಪಸ್ಸುಮಾಡುತ್ತಿದ್ದ ಸ್ಕಂದಸ್ವಾಮಿಯನ್ನು ನೋಡಿಬರಲು ಮಹೇಶ್ವರನು ನಂದೀಶ್ವರನನ್ನು ಕಳುಹಿಸುವುದು. ಅಲ್ಲಿ ಸ್ಕಂದ ಮತ್ತು ನಂದೀಶ್ವರ ಇವರ ಸಂವಾದ. ಶ್ರೀಶೈಲಮಹಿಮಾವರ್ಣನೆ. ಅತ್ರಿಮಹರ್ಷಿಗೆ ಚಂದ್ರನು ಪುತ್ರನಾಗುವ ವರಪ್ರದಾನ. ಶಿವನು ಸರ್ವ ದೇವಸಾಮಾನ್ಯನೆಂದು ಒಬ್ಬ ಬ್ರಾಹ್ಮಣನು ಹೇಳುವನು. ಅದನ್ನು ನಿರಾಕರಿಸಲು ಅನೇಕ ಶ್ರುತಿವಾಕ್ಯಗಳ ನಿದರ್ಶನ. ದಕ್ಷಯಜ್ಞಭಂಗ, ಕಾಮನನಾಶ, ಶ್ರೀಶೈಲಪ್ರದಕ್ಷಿಣವರ್ಣನೆ—ಕಾಶಿಯನ್ನು ಕುರಿತು ಷಣ್ಮುಖಸ್ವಾಮಿಯು ಪ್ರಯಾಣಮಾಡುವುದು.

ಪುಟ ೨೫೧–೩೮೪

ಹದಿನೈದನೆಯ ಅಧ್ಯಾಯ

ಶಿವಪೂಜಾ ಸಾಧನಗಳು, ಶಿವಪೂಜೆಗೆ ಅಧಿಕಾರಿಗಳು, ಇವುಗಳ ವಿವರಣೆ. ಕಾಶೀ ವಿಶ್ವೇಶ್ವರಲಿಂಗದ ಮಹಿಮಾವರ್ಣನೆ. ಅನ್ನಪೂರ್ಣಾಷ್ಟಮೀ ಮಹಿಮೆ.

ಪುಟ ೩೮೫–೪೮೮

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಉಗ್ರಾಖ್ಯೇ

ಸಪ್ತಮಾಂಶೇ ಪೂರ್ವಾರ್ಧೇ

ದ್ವಾದಶೋಽಧ್ಯಾಯಃ

॥ ಶ್ರೀ ಶಿವ ಉವಾಚ ॥

ಕಾಶ್ಯಾಮನ್ಯನ್ಮಹತ್ಸ್ಥಾನಂ ಕೇದಾರಾಭಿಧಮುತ್ತಮಂ ।
ತತ್ರಾಪಿ ಲಿಂಗಮಸ್ತ್ಯೇಕಂ ಕೇದಾರೇಶ್ವರನಾಮಕಂ ॥೧॥

ಕುಂಡಮಸ್ತ್ಯೇಕಮಮಲಂ ತತ್ರೈವ ವಿಮಲೋದಕಂ ।
ತತ್ರ ಸ್ನಾತ್ವಾ ವಿಧಾನೇನ ಕೇದಾರೇಶಂ ಸಮರ್ಚಯೇತ್ ॥೨॥

ತತ್ರಾಪಿ ಮುನಯೋ ಭಕ್ತ್ಯಾ ಕೃತ್ವಾ ಮಲ್ಲಿಂಗಪೂಜನಂ ।
ತಿಷ್ಠಂತಿ ಕೋಟಿಶಃ ಶುದ್ಧಾಸ್ತಪೋಧ್ಯಾನಪರಾಯಣಾಃ ॥೩॥

ಹನ್ನೆರಡನೆಯ ಅಧ್ಯಾಯವು

ದೇವಿ, ಕಾಶೀಕ್ಷೇತ್ರದಲ್ಲಿ ಕೇದಾರವೆಂಬ ಹೆಸರುಳ್ಳ ಇನ್ನೊಂದು ಶ್ರೇಷ್ಠವಾದ ಕ್ಷೇತ್ರವಿರುವುದು. ಅಲ್ಲಿಯೂ ಕೇದಾರೇಶ್ವರವೆಂಬ ಹೆಸರುಳ್ಳ ಒಂದು ಶಿವಲಿಂಗ ವಿರುವುದು. ಎಂದು ಶಂಕರನು ಪಾರ್ವತಿಗೆ ಮತ್ತೂ ಕಾಶೀ ಮಹಿಮೆಯನ್ನು ವಿವರಿಸತೊಡಗಿದನು. ॥೧॥

ಅಲ್ಲಿಯೇ ನಿರ್ಮಲವಾದ ಜಲದಿಂದ ಕೂಡಿರುವ ಒಂದು ಕೊಳವಿರುವುದು. ಅಲ್ಲಿ ಶಾಸ್ತ್ರೋಕ್ತವಿಧಿಯಿಂದ ಸ್ನಾನವನ್ನಾಚರಿಸಿ ಕೇದಾರೇಶ್ವರನನ್ನು ಪೂಜಿಸಬೇಕು. ॥೨॥

ಅಲ್ಲಿಯೂ ಪರಿಶುದ್ಧರೂ, ತಪಸ್ಸು, ಶಿವಧ್ಯಾನ ಇವುಗಳಲ್ಲಿ ಆಸಕ್ತರೂ ಆಗಿರುವ ಅನೇಕಮಂದಿ ಮುನಿಗಳು ಶಿವಲಿಂಗವನ್ನು ಭಕ್ತಿಯಿಂದ ಪೂಜಿಸಿ ಅಲ್ಲಿಯೇ ವಾಸವಾಗಿರುವರು. ॥೩॥

ತತ್ಕುಂಡಸ್ನಾನಮನಿಶಂ ಕರ್ತವ್ಯಂ ಪ್ರೀತಿಪೂರ್ವಕಂ ।
ತಿಲೈಸ್ತು ಪಿತರೋ ನಿತ್ಯಂ ತರ್ಪಣೀಯಾಃ ಪ್ರಯತ್ನತಃ ॥೪॥

ತತ್ಕುಂಡಕುಹರಾನ್ನಿತ್ಯಂ ಸೋತ್ಸಾಹಂ ನಾಗಕನ್ಯಕಾಃ ।
ಮತ್ಪೂಜಾರ್ಥಂ ಸಮಾಯಾಂತಿ ನಾನಾಭರಣಭೂಷಿತಾಃ ॥೫॥

ಸಹಸ್ರಜಿಹ್ವಃ ಶೇಷೋಽಪಿ ಪ್ರತ್ಯಹಂ ಭಕ್ತಿಪೂರ್ವಕಂ ।
ಸ ಬಂಧುಸ್ತೇನ ಮಾರ್ಗೇಣ ಸಮಾಯಾತಿ ಮದರ್ಚಕಃ ॥೬॥

ಕರ್ಕೋಟಕೋಽಪಿ ತೇನೈವ ಮಾರ್ಗೇಣಾಯಾತಿ ಸಾದರಂ ।
ಅನ್ಯೇಽಪಿ ಬಹವೋ ನಾಗಾಃ ಸಮಾಯಾಂತ್ಯನಿಶಂ ಮುದಾ ॥೭॥

ತತ್ಕುಂಡದ್ವಾರಿ ಸತತಂ ತೀಕ್ಷ್ಣಶೂಲಾಸಿಪಾಣಯಃ ।
ಸಾರ್ಧಾಷ್ಟಕೋಟಿಗಣಪಾಸ್ತಿಷ್ಠಂತಿ ಕ್ರೂರವಿಕ್ರಮಾಃ ॥೮॥

ಪ್ರತಿದಿನವೂ ಆ ಕುಂಡದಲ್ಲಿ ಭಕ್ತಿಶ್ರದ್ಧೆಗಳಿಂದ ಸ್ನಾನವನ್ನಾಚರಿಸಿ ಪಿತೃಗಳಿಗೆ ತಿಲತರ್ಪಣವನ್ನು ಅರ್ಪಿಸಬೇಕು. ॥೪॥

ಪ್ರತಿದಿನವೂ ನಾಗಕನ್ನಿಕೆಯರು ನಾನಾಬಗೆಯ ಒಡವೆಗಳಿಂದ ಅಲಂಕೃತರಾಗಿ ಆ ಕುಂಡದಲ್ಲಿರುವ ಬಿಲದಿಂದ ನನ್ನನ್ನು ಅರ್ಚಿಸುವುದಕ್ಕೋಸ್ಕರ ಬರುವರು. ॥೫॥

ಸಹಸ್ರ ನಾಲಿಗೆಗಳುಳ್ಳ ಆದಿಶೇಷನೂ ಸಹ ಪ್ರತಿದಿನವೂ ತನ್ನ ಬಂಧುಗಳಿಂದೊಡಗೂಡಿ ಆ ಬಿಲದಿಂದ ನನ್ನನ್ನು ಅರ್ಚಿಸಲು ಅಲ್ಲಿಗೆ ಬರುವನು ॥೬॥

ಕರ್ಕೋಟಕನೂ ಅದೇ ಮಾರ್ಗದಿಂದಲೇ ನನ್ನನ್ನು ಅರ್ಚಿಸಲು ಬರುವನು. ಅಲ್ಲದೇ ಇನ್ನಿತರ ಅನೇಕ ಸರ್ಪಗಳು ಪ್ರತಿದಿನವೂ ನನ್ನನ್ನು ಪೂಜಿಸುವುದಕ್ಕೋಸ್ಕರ ಆ ಕುಹರದಿಂದ ಹೊರಬೀಳುವರು. ॥೭॥

ಆ ಕುಂಡದ ಬಾಗಿಲಿನಲ್ಲಿ ತೀಕ್ಷ್ಣವಾದ ಶೂಲ ಮತ್ತು ಕತ್ತಿಗಳನ್ನು ಧರಿಸಿ ಉಗ್ರರೂಪಿಗಳಾದ ಎಂಟೂವರೆ ಕೋಟಿ ಪ್ರಮಥಗಣಗಳು ನಿಂತು ಹಗಲಿರುಳೂ ಆ ಕುಂಡವನ್ನು ರಕ್ಷಿಸುತ್ತಿರುವುವು. ॥೮॥

ತಾನಗ್ರೇ ಪೂಜಯಿತ್ವೈವ ಪ್ರಸಾದ್ಯ ತದನಂತರಂ ।
ನಾಗಲೋಕಾತ್ಸಮಾಯಾಂತಿ ಸರ್ವೇ ಶೇಷಾದಯಃ ಸದಾ ॥೯॥

ಮಾಮಭ್ಯರ್ಚ್ಯ ಯಥಾಶಾಸ್ತ್ರಂ ಕೃತ್ವಾಚಾಂತರ್ಗೃಹಾದಿಕಂ ।
ಕುರ್ವಂತಿ ಕಾಲನಾಥಸ್ಯ ಪೂಜನಂ ಭಕ್ತಿಪೂರ್ವಕಂ ॥೧೦॥

ನೃತ್ಯಂತಿ ನಾಟ್ಯನಿಪುಣಾಸ್ಸರ್ವಾಸ್ತಾ ನಾಗಕನ್ಯಕಾಃ ।
ಕುರ್ವಂತಿ ಗಾನಮಮಲಂ ಗಾನಶಾಸ್ತ್ರಾನುರೋಧತಃ ॥೧೧॥

ನಾಗಚಂಪಕಪುನ್ನಾಗರತ್ನಬಿಲ್ವಾದಿಸಾಧನೈಃ ।
ಮಾಮಭ್ಯರ್ಚ್ಯ ಪುನರ್ಯಾಂತಿ ಪುನರಾಯಾಂತಿ ಯಾಂತಿ ಚ ॥೧೨॥

ತಸ್ಯ ಕೇದಾರನಾಥಸ್ಯ ಶ್ರಾವಣೇ ಸೋಮವಾಸರೇ ।
ಪೂಜಾ ಕಾರ್ಯಾ ವಿಶೇಷೇಣ ಸಾಧನೈರ್ವಿವಿಧೈಃ ಶುಭೈಃ ॥೧೩॥

ಆದಿಶೇಷನೇ ಮುಂತಾದವರು ಆ ಬಿಲದ ಬಳಿಯಿರುವ ಆ ಪ್ರಮಥಗಣಗಳನ್ನು ಮೊಟ್ಟಮೊದಲು ಪೂಜಿಸಿ ಅವರನ್ನು ಸಂತೋಷಪಡಿಸಿ ಬಳಿಕ ನಾಗಲೋಕದಿಂದ ಕುಂಡದ ಬಳಿಗೆ ಬರುವರು. ॥೯॥

ಬಳಿಕ ಅವರು ನನ್ನನ್ನು ಕ್ರಮವರಿತು ಅರ್ಚಿಸಿ ಅಂತರ್ಗೃಹಯಾತ್ರೆಯನ್ನು ಮುಗಿಸಿ ಭಕ್ತಿಶ್ರದ್ಧೆಗಳಿಂದ ಕಾಲಭೈರವನನ್ನು ಪೂಜಿಸುವರು. ॥೧೦॥

ನಾಟ್ಯಕಲಾವಿಶಾರದರಾದ ಆ ನಾಗಕನ್ನಿಕೆಯರೆಲ್ಲರೂ ಕೇದಾರೇಶ್ವರನ ಬಳಿಯಲ್ಲಿ ನೃತ್ಯವನ್ನಭಿನಯಿಸುವರು. ತರುವಾಯ ಗಾನಶಾಸ್ತ್ರದ ನಿಯಮಗಳನ್ನನುಸರಿಸಿ ಶಾಸ್ತ್ರೀಯವಾಗಿ ಗಾನಮಾಡುವರು. ॥೧೧॥

ಅವರು ನಾಗಸಂಪಿಗೆ, ಪುನ್ನಾಗ, ರತ್ನಖಚಿತವಾದ ಬಿಲ್ವಪತ್ರೆ ಮುಂತಾದ ಪೂಜಾಸಾಮಗ್ರಿಗಳಿಂದ ನನ್ನನ್ನು ಆರಾಧಿಸಿ ತಮ್ಮ ಲೋಕಕ್ಕೆ ತೆರಳುವರು. ಪುನಃ ಆಗಾಗ ಬರುವರು ಮತ್ತೆ ಹಿಂತಿರುಗುವರು. ॥೧೨॥

ಶ್ರಾವಣ ಮಾಸದ ಪ್ರತಿ ಸೋಮವಾರದಲ್ಲಿಯೂ ನಾನಾಬಗೆಯ ಪೂಜಾಸಾಮಗ್ರಿಗಳಿಂದ ಕೇದಾರೇಶ್ವರನನ್ನು ವಿಶೇಷವಾಗಿ ಪೂಜಿಸಬೇಕು. ॥೧೩॥

ಸೋಮವಾರವ್ರತಂ ಕಾರ್ಯಂ ಪ್ರಯತ್ನೇನ ಯಥಾವಿಧಿ ।
ಶಕ್ತೇನೋಪೋಷಣಂ ಕಾರ್ಯಮನ್ಯಥಾ ನಿಶಿ ಭೋಜನಂ ॥೧೪॥

ತಸ್ಯ ದಕ್ಷಿಣದಿಗ್ಭಾಗೇ ತಿಷ್ಠತ್ಯರ್ಕವಿನಾಯಕಃ ।
ತಸ್ಮಿನ್ನೇವ ದಿನೇ ಸೋಽಪಿ ಪೂಜನೀಯಃ ಪ್ರಯತ್ನತಃ ॥೧೫॥

ಸರ್ವವಿಘ್ನನಿವೃತ್ತ್ಯರ್ಥಂ ಪೂರ್ವಮರ್ಕೇಣ ಸಾದರಂ ।
ತಪಸ್ತಪ್ತಂ ಮಹದ್ಘೋರಮೇಕಪಾದೇನ ಸಾದರಂ ॥೧೬॥

ಅರ್ಕೇಣೈವ ಕೃತಂ ಕುಂಡಮೇಕಂ ತಿಷ್ಠತಿ ನಿರ್ಮಲಂ ।
ತತ್ತು ರತ್ನೌಘರಚಿತಂ ಪುರಾ ತೇನೈವ ಧೀಮತಾ ॥೧೭॥

ತತ್ಪ್ರಾಂತೇ ಸಂತಿ ಲಿಂಗಾನಿ ಸರ್ವಾಭೀಷ್ಟಪ್ರದಾನಿ ಚ ।
ತೇಷಾಮಪಿ ಯಥಾಯೋಗ್ಯಂ ಪೂಜಾ ಕಾರ್ಯಾ ಪ್ರಯತ್ನತಃ ॥೧೮॥

ಶಾಸ್ತ್ರಕ್ರಮವನ್ನನುಸರಿಸಿ ತಪ್ಪದೇ ಸೋಮವಾರ ವ್ರತವನ್ನಾಚರಿಸಬೇಕು. ಶಕ್ತರಾದವರು ಆದಿನ ಉಪವಾಸದಿಂದಿರಬೇಕು. ಅಶಕ್ತರು ರಾತ್ರಿ ಭೋಜನವನ್ನು ಆಚರಿಸಬಹುದು. ॥೧೪॥

ಕೇದಾರೇಶ್ವರನ ಆಲಯದ ದಕ್ಷಿಣದಿಕ್ಕಿನಲ್ಲಿ ಅರ್ಕವಿನಾಯಕನು ಇರುವನು. ಶ್ರಾವಣ ಸೋಮವಾರದ ದಿನ ಅವನನ್ನು ತಪ್ಪದೇ ಸರ್ವದಾ ಪೂಜಿಸಬೇಕು. ॥೧೫॥

ಹಿಂದೆ ಒಂದಾನೊಂದು ಸಮಯದಲ್ಲಿ ಸೂರ್ಯದೇವನು ತನಗೆ ಸಂಭವಿಸಿದ ಸಕಲ ವಿಘ್ನಗಳನ್ನೂ ಹೋಗಲಾಡಿಸಿಕೊಳ್ಳುವುದಕ್ಕೋಸ್ಕರ ಗಣೇಶನ ಸನ್ನಿಧಾನದಲ್ಲಿ ಒಂದೇ ಕಾಲಿನಿಂದ ನಿಂತು ಭಯಂಕರವಾದ ತಪಸ್ಸನ್ನಾಚರಿಸಿದನು. ॥೧೬॥

ಅಲ್ಲಿ ಸೂರ್ಯದೇವತೆಯಿಂದಲೇ ನಿರ್ಮಿಸಲ್ಪಟ್ಟ, ನಿರ್ಮಲವಾದ ಒಂದಾನೊಂದು ಕೊಳವಿರುವುದು. ಚತುರನಾದ ಆವನು ರತ್ನರಾಶಿಗಳಿಂದಲೇ ಆ ಕುಂಡವನ್ನು ನಿರ್ಮಿಸಿರುವನು. ॥೧೭॥

ಆ ಕುಂಡದ ಸಮೀಪದಲ್ಲಿ ಸಕಲ ಇಷ್ಟಾರ್ಥಗಳನ್ನೂ ನೆರವೇರಿಸುವಂತಹ ಅನೇಕ ಶಿವಲಿಂಗಗಳಿರುವುವು. ಅವುಗಳನ್ನೂ ಸಹ ಭಕ್ತಿಶ್ರದ್ಧೆಗಳಿಂದ ಯಥಾಯೋಗ್ಯವಾಗಿ ಪೂಜಿಸಬೇಕು. ॥೧೮॥

ಲೋಕಾರ್ಕೇಶಾಭಿಧಂ ಲಿಂಗಂ ತತ್ರಾಸ್ತಿ ಸಕಲಾರ್ಥದಂ ।
ತತ್ಪೂಜಾ ವಿಧಿವತ್ಕಾರ್ಯಾ [1]ಭಾನುಷಷ್ಠಿದಿನೇ ಶುಭೇ ॥೧೯॥

ಸಿದ್ಧೇಶ್ವರಾಭಿಧಂ ಲಿಂಗಂ ಕಾಶ್ಯಾಂ ತಿಷ್ಠತಿ ಕಾಮದಂ ।
ತತ್ರ ಪೂಜಾ ವಿಧಾನೇನ ಕರ್ತವ್ಯಂ ಪ್ರತ್ಯಹಂ ಜನೈಃ ॥೨೦॥

ತತ್ರೈವ ದುರ್ಗಾ ವಿಮಲಾ ತಿಷ್ಠತ್ಯಮಲಲೋಚನಾ ।
ಸರ್ವದುಃಖಹರಾ ನಿತ್ಯಂ ಸ್ವಭಕ್ತವರದಾಯಿನೀ ॥೨೧॥

ತತ್ರಾಶ್ವಿನೀ ಶುಕ್ಲಪಕ್ಷಪ್ರತಿಪದ್ಯವಧಿ ಪ್ರಿಯೇ ।
ನವಮೀದಿನಪರ್ಯಂತಂ ಪೂಜಾ ಕಾರ್ಯಾ ಪ್ರಯತ್ನತಃ ॥೨೨॥

ಅಲ್ಲಿ ಲೋಕಾರ್ಕೇಶವೆಂಬ ಹೆಸರುಳ್ಳ ಒಂದು ಶಿವಲಿಂಗವಿರುವುದು. ಅದು ಸಕಲ ಇಷ್ಟಾರ್ಥಗಳನ್ನೂ ಕೊಡುವುದು. ದೇವಿ, ಷಷ್ಠೀತಿಥಿಯಿಂದ ಕೂಡಿದ ಭಾನುವಾರದ ದಿನ ತಪ್ಪದೇ ಆ ಲಿಂಗವನ್ನು ಕ್ರಮವರಿತು ಪೂಜಿಸಬೇಕು. ॥೧೯॥

ಕಾಶೀಕ್ಷೇತ್ರದಲ್ಲಿ ಸಿದ್ಧೇಶ್ವರವೆಂಬ ಹೆಸರಿನಿಂದ ಪ್ರಸಿದ್ಧವಾದ ಇನ್ನೊಂದು ಲಿಂಗವಿರುವುದು. ಅದೂ ಸಹ ಸಕಲ ಇಷ್ಟಾರ್ಥಗಳನ್ನೂ ಕೊಡುವುದಾಗಿರುತ್ತದೆ. ಜನರು ಪ್ರತಿ ದಿನವೂ ತಪ್ಪದೇ ಶಾಸ್ತ್ರೋಕ್ತವಿಧಾನದಿಂದ ಆ ಲಿಂಗವನ್ನು ಪೂಜಿಸಬೇಕು. ॥೨೦॥

ಅಲ್ಲಿಯೇ, ಪವಿತ್ರವೂ ಸುಂದರವೂ ಆದ ದುರ್ಗೆಯ ವಿಗ್ರಹವಿರುವುದು. ಅಲ್ಲಿ ಭಕ್ತರಿಗೆ ಇಷ್ಟಾರ್ಥಗಳನ್ನು ನೀಡುವ ಮತ್ತು ಅವರ ಸಕಲ ದುಃಖಗಳನ್ನು ಹೋಗಲಾಡಿಸುವುದರಲ್ಲಿ ಸಮರ್ಥಳಾದ ದುರ್ಗೆಯು ನೆಲಸಿರುವಳು. ॥೨೧॥

ಎಲೌ ಪ್ರೇಯಸಿಯೇ, ಅಲ್ಲಿ ಆಶ್ವಯುಜ ಶುದ್ಧ ಪಾಡ್ಯದಿಂದ ಮೊದಲುಗೊಂಡು ನವಮಿಯ ವರೆಗೂ ಭಕ್ತಿಯಿಂದ ದುರ್ಗಾದೇವಿಯನ್ನು ಪೂಜಿಸಬೇಕು. ॥೨೨॥

---

1. ಭಾನುವಾರವೂ ಮತ್ತು ಷಷ್ಠೀತಿಥಿಯೂ ಇವೆರಡೂ ಒಂದೇ ದಿವಸ ಸಂಘಟಿಸಿದರೆ ಆ ದಿನಕ್ಕೆ "ಭಾನುಷಷ್ಠಿ" ಎಂದೆನ್ನುವರು.

ಸಾ ಸರ್ವಾರ್ತಿಹರಾ ದೇವಿ ನಿತ್ಯಂ ಕಾಶೀನಿವಾಸಿನಾಂ ।
ಪೂಜಿತಾ ಭಕ್ತವರದಾ ಭವತ್ಯೇವ ನ ಸಂಶಯಃ ॥೨೩॥

ತತ್ರೈವಾಮೃತಕುಂಡಾಖ್ಯಂ ತೀರ್ಥಮಸ್ತ್ಯೇಕಮುತ್ತಮಂ ।
ತತ್ರ ಸ್ನಾನೇನ ದುಃಖಾನಿ ನ ಭವಿಷ್ಯಂತಿ ಸರ್ವಥಾ ॥೨೪॥

ಕಾಮಾಕ್ಷೀಸ್ಥಾನಮನಘಮೇಕಮಸ್ತಿ ವರಾನನೇ ।
ತತ್ರಕುಂಡಮಭೂದ್ದಿವ್ಯಂ ತಜ್ಜಲಂ ಚಾಮೃತೋಪಮಂ ॥೨೫॥

ತತ್ರಾಪಿ ಶ್ರಾವಣೇ ಮಾಸಿ ಪ್ರತ್ಯಹಂ ವಿಧಿವಜ್ಜನೈಃ ।
ಪೂಜಾ ಕಾರ್ಯಾ ವಿಧಾನೇನ ಸರ್ವಥಾ ಭೌಮವಾಸರೇ ॥೨೬॥

ತತ್ರಾಪಿ ಶಿವಲಿಂಗಾನಿ ಸಂತಿ ಕೋಟ್ಯವಧಿ ಪ್ರಿಯೇ ।
ಕುಂಡಾನ್ಯಪಿ ಮನೋಜ್ಞಾನಿ ನಿರ್ಮಲಾನಿ ಚ ಸಂತಿ ಹಿ ॥೨೭॥

ಜಗನ್ಮಾತೆಯಾದ ಅವಳು ಅನವರತವೂ ಕಾಶೀಕ್ಷೇತ್ರದಲ್ಲಿ ವಾಸವಾಗಿರುವ ಜನರ ಸಕಲ ಮನಃಸ್ಸಂತಾಪವನ್ನೂ ಹೋಗಲಾಡಿಸುವಳು. ಅವಳನ್ನು ಪೂಜಿಸಿದ ಭಕ್ತರ ಸಕಲ ಇಷ್ಟಾರ್ಥಗಳನ್ನೂ ಪೂರೈಸುವಳು. ಇದರಲ್ಲಿ ಸಂಶಯಪಡಬೇಕಾದುದಿಲ್ಲ. ॥೨೩॥

ಅಲ್ಲಿಯೇ ಅಮೃತಕುಂಡವೆಂಬ ಹೆಸರುಳ್ಳ ಒಂದಾನೊಂದು ಪುಣ್ಯತೀರ್ಥವಿರುವುದು. ಆದರಲ್ಲಿ ಸ್ನಾನವನ್ನಾಚರಿಸುವುದರಿಂದ ಯಾವ ದುಃಖವೂ ಸಂಭವಿಸುವುದಿಲ್ಲ. ॥೨೪॥

ಎಲೌ ಸುಮುಖಿಯೇ, ಕಾಶೀಕ್ಷೇತ್ರದಲ್ಲಿ ಕಾಮಾಕ್ಷಿಯು ನೆಲಸಿರುವ ಇನ್ನೊಂದು ಪವಿತ್ರವಾದ ಸ್ಥಳವಿರುವುದು. ಅಲ್ಲಿಯೂ ಒಂದು ಕೊಳವಿರುವುದು. ಆದರ ಉದಕವು ಅಮೃತಸದೃಶವಾಗಿರುವುದು. ॥೨೫॥

ಅಲ್ಲಿಯೂ ಸಹ ಶ್ರಾವಣಮಾಸದಲ್ಲಿ ಪ್ರತಿದಿನವೂ ತಪ್ಪದೆ ಕಾಮಾಕ್ಷಿಯನ್ನು ಪೂಜಿಸಬೇಕು. ಅದರಲ್ಲಿಯೂ ಮಂಗಳವಾರದ ದಿನ ವಿಶೇಷವಾಗಿ ದೇವಿಯನ್ನು ಆರಾಧಿಸಬೇಕು. ॥೨೬॥

ಅಲ್ಲಿಯೂ ಕೋಟ್ಯಂತರ ಶಿವಲಿಂಗಗಳೂ, ಸುಂದರವಾದ ಮತ್ತು ನಿರ್ಮಲವಾದ ಅನೇಕ ಕುಂಡಗಳೂ ಇರುವುವು. ॥೨೭॥

ತಾನ್ಯಪಿ ಶ್ರದ್ಧಯಾ ನಿತ್ಯಂ ಪೂಜನೀಯಾನಿ ಯತ್ನತಃ ।
ನಿರ್ಮಲೇಷು ಚ ಕುಂಡೇಷು ಸ್ನಾನಂ ಕಾರ್ಯಂ ಯಥಾವಿಧಿ ॥೨೮॥

ಆದಿಧುಂಡೀಶ್ವರೋ ನಾಮ ಗಣೇಶಸ್ತಿಷ್ಠತಿ ಪ್ರಿಯೇ ।
ಸರ್ವವಿಘ್ನಹರೋ ನಿತ್ಯಂ ಸರ್ವಾಭೀಷ್ಟಪ್ರದಾಯಕಃ ॥೨೯॥

ಪ್ರತಿಶುಕ್ಲಚತುರ್ಥ್ಯಾಂ ತು ಸ ದೂರ್ವಾಲಡ್ಡುಕಾದಿಭಿಃ ।
ಪೂಜನೀಯಃ ಪ್ರಯತ್ನೇನ ಕಾಶೀವಾಸೇಪ್ಸುಭಿರ್ನರೈಃ ॥೩೦॥

ಕಾಲೇಶ್ವರಾಭಿಧಂ ಲಿಂಗಮೇಕಮಸ್ತಿ ವರಾನನೇ ।
ತತ್ಪೂಜಾ ಸರ್ವಥಾ ಕಾರ್ಯಾ ಪ್ರತ್ಯಹಂ ವಿಧಿವಜ್ಜನೈಃ ॥೩೧॥

ಗೋಕರ್ಣಾಭಿಧಮಸ್ತ್ಯೇಕಂ ಲಿಂಗಂ ಪಾಪೌಘನಾಶಕಂ ।
ತತ್ರಾಪಿ ಕುಂಡಮಸ್ತ್ಯೇಕಂ ತತ್ರ ಸ್ನಾನಮಘಾಪಹಂ ॥೩೨॥

ಅವುಗಳನ್ನೂ ಸಹ ಪ್ರತಿ ದಿನವೂ ತಪ್ಪದೇ ಶ್ರದ್ಧೆಯಿಂದ ಪೂಜಿಸಬೇಕು. ಅಲ್ಲದೇ, ನಿರ್ಮಲವಾದ ಆ ಕುಂಡಗಳಲ್ಲಿ ವಿಧಿವತ್ತಾಗಿ ಸ್ನಾನವನ್ನಾಚರಿಸಬೇಕು. ||೨೮||

ಎಲೌ ಪ್ರಿಯೆಯೇ, ಕಾಶಿಯಲ್ಲಿ ಆದಿಧುಂಡೀಶ್ವರನೆಂಬ ಗಣನಾಯಕನು ಇರುವನು. ಅವನು ಸಕಲ ವಿಘ್ನಗಳನ್ನು ನಾಶಮಾಡುವವನೂ, ಸಕಲ ಇಷ್ಟಾರ್ಥಗಳನ್ನು ಪೂರೈಸುವವನೂ ಆಗಿರುವನು. ||೨೯||

ಕಾಶೀಕ್ಷೇತ್ರದಲ್ಲಿ ವಾಸಮಾಡಲು ಅಪೇಕ್ಷಿಸುವ ಜನರು ಪ್ರತಿ ತಿಂಗಳ ಶುಕ್ಲಪಕ್ಷದ ಚತುರ್ಥಿಯಲ್ಲಿ ಆದಿಧುಂಡಿಯನ್ನು ದೂರ್ವಾಂಕುರ ಮೊದಲಾದ ಪೂಜಾ ಸಾಮುಗ್ರಿಗಳಿಂದ ಪೂಜಿಸಿ ಲಡ್ಡುಕವೇ ಮೊದಲಾದುವುಗಳನ್ನು ನಿವೇದಿಸಬೇಕು. ||೩೦||

ಎಲೌ ಸುಮುಖಿಯೇ, ಕಾಲೇಶ್ವರವೆಂಬ ಹೆಸರುಳ್ಳ ಇನ್ನೊಂದು ಶಿವಲಿಂಗವಿರುವುದು. ಕಾಶೀಕ್ಷೇತ್ರದಲ್ಲಿ ವಾಸವಾಗಿರುವ ಜನರು ಪ್ರತಿದಿನವೂ ತಪ್ಪದೇ ಆ ಲಿಂಗವನ್ನು ಪೂಜಿಸಬೇಕು. ||೩೧||

ಗೋಕರ್ಣವೆಂಬ ಹೆಸರುಳ್ಳ ಮತ್ತೊಂದು ಶಿವಲಿಂಗವಿರುವುದು. ಅದು ಸಕಲ ಪಾಪಗಳನ್ನೂ ಪರಿಹರಿಸುವ ಸಾಮರ್ಥ್ಯವುಳ್ಳದ್ದು. ಅಲ್ಲಿ ಒಂದು ಕೊಳವಿರುವುದು. ಅದರಲ್ಲಿ ಸ್ನಾನವನ್ನಾಚರಿಸುವುದರಿಂದ ಸಕಲಪಾಪಗಳೂ ಕ್ಷಯಿಸುವುವು. ||೩೨||

ಶಿವರಾತ್ರಿದಿನೇ ತತ್ರ ಸ್ನಾನಂ ಕಾರ್ಯಂ ಪ್ರಯತ್ನತಃ ।
ತಲ್ಲಿಂಗಪೂಜನಂ ಚಾಪಿ ಕರ್ತವ್ಯಂ ತದ್ದಿನೇ ಶುಭೇ ॥೩೩॥

ದಿವ್ಯಲಿಂಗಾನ್ಯನೇಕಾನಿ ಕಾಶ್ಯಾಂ ತಿಷ್ಠಂತಿ ಸರ್ವಥಾ ।
ತೇಷಾಂ ಪ್ರಭಾವಃ ಕೇನಾಪಿ ವಕ್ತುಮೇವ ನ ಶಕ್ಯತೇ ॥೩೪॥

ಅಗ್ರೇಽಪಿ ಋಷಿಭಿರ್ದಿವ್ಯೈರ್ಭೌಮ್ಯೈಶ್ಚ ಕಮಲಾನನೇ ।
ಸ್ಥಾಪನೀಯಾನಿ ಲಿಂಗಾನಿ ಕಾಶ್ಯಾಮನ್ಯೈರಪಿ ಧ್ರುವಂ ॥೩೫॥

ಕುಂಡಾನ್ಯಪಿ ಚ ಕಾರ್ಯಾಣಿ ತೈರೇವ ಋಷಿಸತ್ತಮೈಃ ।
ತಪಶ್ಚರ್ಯಾಂ ಕರಿಷ್ಯಂತಿ ತ ಏವಾತ್ರ ಸದಾ ಶಿವೇ ॥೩೬॥

ಇತಃ ಶತೋತ್ತರೇ ಕಲ್ಪೇ ಕನ್ಯಾ ಹಿಮವತಃ ಶುಭೇ ।
ಭವಿಷ್ಯತ್ಯಮಲಾ ಸಾಧ್ವೀ ರೂಪಲಾವಣ್ಯಶೋಭಿತಾ ॥೩೭॥

ದೇವಿ, ವಿಶೇಷವಾಗಿ ಶಿವರಾತ್ರಿಯ ದಿವಸದಲ್ಲಿ ಆ ಕುಂಡದಲ್ಲಿ ಸ್ನಾನವನ್ನಾಚರಿಸಿ ಆ ಲಿಂಗವನ್ನು ಭಕ್ತಿಶ್ರದ್ಧೆಗಳಿಂದ ಪೂಜಿಸಬೇಕು. ||೩೩||

ಈ ರೀತಿಯಲ್ಲಿ ಪವಿತ್ರವಾದ ಕಾಶೀಕ್ಷೇತ್ರದಲ್ಲಿ ಮಹಾಮಹಿಮೆಯುಳ್ಳ ಅಗಣಿತ ಶಿವಲಿಂಗಗಳಿರುವುವು. ಅವುಗಳ ಪ್ರಭಾವವನ್ನು ವರ್ಣಿಸಲು ಯಾರಿಗೂ ಸಾಧ್ಯವಿಲ್ಲ. ||೩೪||

ಇನ್ನುಮುಂದೆಯೂ ಸಹ ಋಷಿಗಳು, ದೇವತೆಗಳು ಮತ್ತು ಭೂಲೋಕವಾಸಿಗಳಾದ ಜನರು ಈ ಕಾಶೀಕ್ಷೇತ್ರದಲ್ಲಿ ಅನೇಕ ಶಿವಲಿಂಗಗಳನ್ನು ಸ್ಥಾಪಿಸಲಿರುವರು. ಆ ಋಷಿಗಳೇ ಕುಂಡಗಳನ್ನೂ ಸಹ ನಿರ್ಮಿಸಿ ಅಲ್ಲಿ ತಪಸ್ಸನ್ನಾಚರಿಸುವರು. ||೩೫-೩೬||

ದೇವಿ, ಈ ಕಲ್ಪದಿಂದ ಮೊದಲುಗೊಂಡು ಇನ್ನು ನೂರು ಕಲ್ಪಗಳು ಕಳೆದ ಬಳಿಕ ನೂರೊಂದನೆಯ ಕಲ್ಪದಲ್ಲಿ ಹಿಮವಂತನಿಗೆ ಪತಿವ್ರತೆಯೂ, ಸುಶೀಲೆಯೂ ಸುಂದರಿಯೂ ಆದ ಓರ್ವ ಕನ್ಯೆಯು ಜನಿಸುವಳು. ||೩೭||

ಶಿವಪತ್ನೀ ಭವಾಮೀತಿ ಮಾಮುದ್ದಿಶ್ಯೈವ ಸಾ ಶುಭಾ ।
ಪಂಚಾಗ್ನಿಮಧ್ಯಸಂವಿಷ್ಟಾ ತಪಶ್ಚರ್ಯಾಂ ಕರಿಷ್ಯತಿ ॥೩೮॥

ದ್ವಾತ್ರಿಂಶತ್ಕಲ್ಪಪರ್ಯಂತಂ ತಪಃ ಕೃತ್ವಾತಿದಾರುಣಂ ।
ವಹ್ನಿಮಧ್ಯಗತಾ ಸಾಧ್ವೀ ಜಲೇ ಕೃತ್ವಾ ತಪಃ ಪುನಃ ॥೩೯॥

ತತಃ ಕದಾಚಿದ್ಯತ್ನೇನ ಬ್ರಹ್ಮಲೋಕಂ ಗಮಿಷ್ಯತಿ ।
ಬ್ರಹ್ಮಾದಯೋಽಪಿ ತಾಂ ದೃಷ್ಟ್ವಾ ಭವಿಷ್ಯಂತ್ಯೇವ ಮೋಹಿತಾಃ ॥೪೦॥

ತತಸ್ತೇಭ್ಯೋಽತಿವಿಮಲಾ ಶಾಪಂ ದಾಸ್ಯತಿ ದಾರುಣಂ ।
ಶಿವಸಾಯುಜ್ಯರೂಪೋ ವೋ ಮೋಕ್ಷೋ ಮಾಸ್ತ್ವಿತಿ ಸಾ ಪ್ರಿಯೇ ॥೪೧॥

ಮದೀಯರೂಪಮಮಲಂ ಸರ್ವೇಷಾಂ ಮೋಹಕಾರಣಂ ।
ತ್ಯಕ್ಷ್ಯಾಮ್ಯೇತದಿತಿ ಪ್ರೇತ್ಯಾ ಜಲರೂಪಾ ಭವಿಷ್ಯತಿ ॥೪೨॥

ಅವಳು ಶಿವನನ್ನೇ ಪತಿಯನ್ನಾಗಿ ವರಿಸಬೇಕೆಂದು ಸಂಕಲ್ಪಿಸಿ ಪಂಚಾಗ್ನಿಗಳ ನಡುವೆ ನಿಂತು ನನ್ನನ್ನೇ ಉದ್ದೇಶಿಸಿ ತಪಸ್ಸನ್ನಾಚರಿಸುವಳು. ॥೩೮॥

ಈ ರೀತಿಯಲ್ಲಿ ಆ ಸಾಧ್ವಿಯು ಮೂವತ್ತೆರಡು ಕಲ್ಪಗಳು ಕಳೆಯುವವರೆಗೂ ಪಂಚಾಗ್ನಿಗಳ ನಡುವೆಯೇ ನಿಂತು ತಪಸ್ಸನ್ನಾಚರಿಸಿ, ಬಳಿಕ ಜಲದಲ್ಲಿ ನಿಂತು ತಪಸ್ಸನ್ನಾಚರಿಸಿ, ತರುವಾಯ ಒಂದಾನೊಂದು ಸಮಯದಲ್ಲಿ ಅವಳು ತನ್ನ ತಪಃ ಶಕ್ತಿಯಿಂದ ಬ್ರಹ್ಮಲೋಕಕ್ಕೆ ತೆರಳುವಳು. ಆಗ ಅವಳನ್ನು ನೋಡಿ ಬ್ರಹ್ಮಾದಿ ದೇವತೆಗಳೂ ಸಹ ಮೋಹಿಸುವರು. ॥೪೦॥

ಆಗ ಸುಶೀಲೆಯಾದ ಅವಳು "ಬ್ರಹ್ಮಾದಿದೇವತೆಗಳಿಗೆ" ನಿಮಗೆ ಶಿವಸಾಯುಜ್ಯರೂಪವಾದ ಮೋಕ್ಷವು ಸಿದ್ಧಿಸದೇ ಹೋಗಲಿ ಎಂದು ಭಯಂಕರವಾದ ಶಾಪವನ್ನೀಯುವಳು. ॥೪೧॥

ಬಳಿಕ ಅವಳು "ನನ್ನ ಈ ರೂಪವು ಸಕಲರಿಗೂ ಮೋಹವನ್ನುಂಟು ಮಾಡುವುದು. ಆದುದರಿಂದ ನಾನು ಈ ರೂಪದಿಂದ ಇರುವುದು ಉಚಿತವಲ್ಲ. ಇನ್ನಾದರೂ ಈ ಶರೀರವನ್ನು ತ್ಯಜಿಸುವೆನು" ಎಂದು ಸಂಕಲ್ಪಿಸಿ ಆ ಕೂಡಲೇ ಜಲರೂಪವನ್ನು ಧರಿಸುವಳು. ॥೪೨॥

ತತಸ್ತಜ್ಜಲಮಾಲೋಕ್ಯ ಬ್ರಹ್ಮಾ ವಿಸ್ಮಯಸಂಯುತಃ ।
ವಾರುಣೈರ್ಬಹುಭಿಃ ಪಾಶೈರ್ನಿರೋಧಂ ಚ ಕರಿಷ್ಯತಿ ॥೪೩॥

ತತಃ ಪೂರ್ವಕೃತಾನಲ್ಪತಪಸಾ ಮದನುಗ್ರಹಾತ್ ।
ಜಲರೂಪೈವ ಸಾ ಭವ್ಯಾ ಕಾಶೀಮಾಯಾಸ್ಯತಿ ಪ್ರಿಯೇ ॥೪೪॥

ಸ್ವತಃ ಪ್ರಚಲಿತಾಂ ದೃಷ್ಟ್ವಾ ತದಾ ಬ್ರಹ್ಮಾದಯಃ ಸುರಾಃ ।
ಗಂಗಾ ಗಂಗೇತಿ ಸರ್ವೇಽಪಿ ಪ್ರವದಿಷ್ಯಂತಿ ತಾಂ ಶುಭಾಂ ॥೪೫॥

ತದಾ ಪ್ರಭೃತಿ [1]ಗಂಗೇತಿ ನಾಮ ತಸ್ಯಾ ಭವಿಷ್ಯತಿ ।
ಪಾವಯಿಷ್ಯತಿ ಸಾ ಲೋಕಾನ್ಮೃತಾಪ್ಯಘವಿನಾಶಿನೀ ॥೪೬॥

ಬಳಿಕ ಎಲ್ಲೆಡೆಯಲ್ಲಿಯೂ ಪ್ರವಹಿಸುತ್ತಿರುವ ಆ ನೀರನ್ನು ನೋಡಿ ಬ್ರಹ್ಮನು ಅತ್ಯಂತ ಆಶ್ಚರ್ಯಗೊಂಡು ವಾರುಣಪಾಶಗಳಿಂದ ಅದನ್ನು ಬಂಧಿಸುವನು. ॥೪೩॥

ಪ್ರಿಯೇ, ತರುವಾಯ ಪೂರ್ವಜನ್ಮದಲ್ಲಿ ಅವಳು ಆಚರಿಸಿದ ತಪಸ್ಸಿನಿಂದ ನನ್ನ ಅನುಗ್ರಹಕ್ಕೆ ಪಾತ್ರಳಾಗಿ ಜಲರೂಪದಿಂದಲೇ ಕಾಶೀಕ್ಷೇತ್ರಕ್ಕೆ ಬರುವಳು. ವರುಣಪಾಶವು ಆಕೆಗೆ ತಪ್ಪುವುದು. ॥೪೪॥

ಜಲರೂಪಧಾರಿಯಾದ ಅವಳು ವಾರುಣಪಾಶದ ಬಂಧವನ್ನು ಪರಿಗಣಿಸದೇ ತನ್ನ ಸಾಮರ್ಥ್ಯದಿಂದಲೇ ದೇವಲೋಕದಿಂದ ಭೂಲೋಕಕ್ಕೆ ಪ್ರವಹಿಸಿದುದನ್ನು ನೋಡಿ, ಬ್ರಹ್ಮಾದಿದೇವತೆಗಳು ದುಃಖಿತರಾಗಿ "ಗಂಗಾ, ಗಂಗಾ" ಎಂದು ಆರ್ತಧ್ವನಿಗೊಳ್ಳುವರು. ॥೪೫॥

ಅಂದಿನಿಂದ ಮೊದಲುಗೊಂಡು ಅವಳು ಗಂಗಾ ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಹೊಂದುವಳು. ಈ ರೀತಿಯಲ್ಲಿ ಆ ಸಾಧ್ವಿಯು ತನ್ನ ಪೂರ್ವಶರೀರವನ್ನು ತ್ಯಜಿಸಿದರೂ ಸಹ ಜನರ ಪಾಪಗಳನ್ನು ನಾಶಪಡಿಸುತ್ತಾ ಅವರನ್ನು ಪವಿತ್ರೀಕರಿಸುವಳು. ॥೪೬॥

---

1. ಟಿ. ಗಾಂ, ಭೂಲೋಕಂ ಗಚ್ಛತೀತಿ, ಗಂಗಾ ಎಂಬ ವ್ಯುತ್ಪತ್ತಿಯನ್ನನುಸರಿಸಿ ಭೂಲೋಕಕ್ಕೆ ಹೋಗುವಳು ಎಂಬ ಅರ್ಥವು ಲಭಿಸುವುದು. ಇವಳು ಬ್ರಹ್ಮನ ವಾರುಣಪಾಶವನ್ನು ಕಡಿದು, ಭೂಲೋಕಕ್ಕೆ ತೆರಳಿದುದರಿಂದ ಅದನ್ನನುಸರಿಸಿ, ಗಂಗಾ ಎಂದು ದೇವತೆಗಳು ಸಂಬೋಧಿಸಿದರು. ಅಂದಿನಿಂದ ಮೊದಲುಗೊಂಡು ಅವಳಿಗೆ ಗಂಗಾ ಎಂಬ ಅನ್ವರ್ಥಸಂಜ್ಞೆಯು ಪ್ರಾಪ್ತವಾಗಿರುವುದೆಂದು ತಿಳಿಯಬೇಕು.

ಸಾಪಿ ಕಾಶ್ಯಾಂ ಸ್ವನಾಮ್ನೈವ ಲಿಂಗಂ ಸಂಸ್ಥಾಪ್ಯ ಸಾದರಂ ।
ಜ್ಞಾನವಾಪೀತಟೇ ರಮ್ಯೇ ತಪಶ್ಚರ್ಯಾಂ ಕರಿಷ್ಯತಿ ॥೪೭॥

ಕಾಶೀಂ ಸಂಪ್ರಾಪ್ಯ ವಿಮಲಾಮನರ್ಘ್ಯಾಂ ಶಿವರೂಪಿಣೀಂ ।
ತಪಶ್ಚರ್ಯಾಂ ವಿನಾ ಲೋಕೇ ಕಃ ಸ್ಥಾಸ್ಯತಿ ವರಾನನೇ ॥೪೮॥

ತತ್ಕಾಶೀಕ್ಷೇತ್ರಮಾಲೋಕ್ಯ ಬಾಲಕಸ್ಯಾಪಿ ಸರ್ವಥಾ ।
ತಪಶ್ಚರ್ಯಾರತಿಃ ಶುದ್ಧಾ ಭವತ್ಯೇವ ನ ಸಂಶಯಃ ॥೪೯॥

ಕಾಶ್ಯಾಂ ತು ಬಹವೋ ವಿಘ್ನಾಃ ಕಾಶೀವಾಸವಿಯೋಗಕಾಃ ।
ತಚ್ಛಾಂತ್ಯರ್ಥಂ ಢುಂಢಿರಾಜಃ ಪೂಜನೀಯಃ ಪ್ರಯತ್ನತಃ ॥೫೦॥

॥ ಢುಂಢಿರಾಜಾಷ್ಟೋತ್ತರಶತನಾಮಾನಿ ॥

ಅಷ್ಟೋತ್ತರಶತೈರ್ದಿವ್ಯೈರ್ಗಣೇಶಸ್ಯೈವ ನಾಮಭಿಃ ।
ಕರ್ತವ್ಯಮತಿಯತ್ನೇನ ನವದೂರ್ವಾಂಕುರಾರ್ಪಣಂ ॥೫೧॥

ಬಳಿಕ ಅವಳು ತನ್ನ ಹೆಸರಿನಿಂದಲೇ ಕಾಶೀಕ್ಷೇತ್ರದಲ್ಲಿ ಒಂದು ಶಿವಲಿಂಗವನ್ನು ಸ್ಥಾಪಿಸಿ, ಮನೋಹರವಾದ ಜ್ಞಾನವಾಪೀ ಎಂಬ ಕುಂಡದ ತೀರದಲ್ಲಿ ತಪಸ್ಸನ್ನಾಚರಿಸುವಳು. ||೪೭||

ದೇವಿ, ಶಿವಲಿಂಗಾಕಾರವಾಗಿಯೂ, ಪವಿತ್ರವಾಗಿಯೂ ಇರುವ ಕಾಶೀಕ್ಷೇತ್ರವನ್ನು ಸೇರಿ ಯಾವನು ತಾನೇ ತಪೋನುಷ್ಠಾನವನ್ನು ಕೈಗೊಳ್ಳಲಾರನು ? ||೪೮||

ಆ ಕಾಶೀಕ್ಷೇತ್ರವನ್ನು ನೋಡಿದೊಡನೆಯೇ ಚಿಕ್ಕ ಬಾಲಕನೂ ಸಹ ಅಲ್ಲಿ ತಪಸ್ಸನ್ನಾಚರಿಸಲು ಇಚ್ಛಿಸುವನು. ಇದರಲ್ಲಿ ಸಂಶಯವಿರುವುದಿಲ್ಲ. ||೪೯||

ಕಾಶಿಯಲ್ಲಿ ವಾಸವಾಗಿರುವವರಿಗೆ ಕಾಶೀಕ್ಷೇತ್ರವಾಸವನ್ನು ತಪ್ಪಿಸುವ ಅನೇಕ ವಿಘ್ನಗಳು ಸಂಭವಿಸುವುವು. ಅವುಗಳನ್ನು ನಿವಾರಿಸುವುದಕ್ಕೋಸ್ಕರ ಪ್ರತಿದಿನವೂ ತಪ್ಪದೇ ಭಕ್ತಿಶ್ರದ್ಧೆಗಳಿಂದ ಢುಂಢಿರಾಜನನ್ನು ಪೂಜಿಸಬೇಕು. ||೫೦||

ಗಣಪತಿಯ ದಿವ್ಯವಾದ ಅಷ್ಟೋತ್ತರಶತನಾಮಗಳಿಂದ ಅವನಿಗೆ ಭಕ್ತಿಶ್ರದ್ಧಾಪೂರ್ವಕ ದೂರ್ವಾಂಕುರಗಳನ್ನು ಸಮರ್ಪಿಸಬೇಕು. ಮೊದಲು ಸುವರ್ಣಮಯವಾದ

ಹಿರಣ್ಮಯತನುಂ ಶುದ್ಧಂ ಸರ್ವಾರ್ತಿಹರಮವ್ಯಯಂ ।
ವರದಂ ಗಣಪಂ ಧ್ಯಾತ್ವಾ ಪೂಜಾ ಕಾರ್ಯಾ ಪ್ರಯತ್ನತಃ ॥೫೨॥

[1] ಋಷಿರ್ವಿಘ್ನೇಶ ಇತ್ಯಾದಿನಾಮ್ನಾಂ ಸರ್ವೇಶ್ವರಃ ಶಿವಃ ।
ದೇವತಾ ವಿಘ್ನರಾಜೋಽತ್ರ ಛಂದೋಽನುಷ್ಟುಪ್ಶುಭಪ್ರದಃ ॥೫೩॥

ಸರ್ವಪ್ರತ್ಯೂಹಶಮನಂ ಫಲಂ ಶಕ್ತಿಃ ಸುಧಾತ್ಮಿಕಾ ।
ಕೀಲಕಂ ಗಣನಾಥಸ್ಯ ಪೂಜಾಕಾರ್ಯೇತಿ ಕಾಮದಾ ॥೫೪॥

ಓಂ ವಿಘ್ನೇಶೋ ವಿಶ್ವವದನೋ ವಿಶ್ವಚಕ್ಷುರ್ಜಗತ್ಪತಿಃ ।
ಹಿರಣ್ಯರೂಪಃ ಸರ್ವಾತ್ಮಾ ಜ್ಞಾನರೂಪೋ ಜಗನ್ಮಯಃ ॥೫೫॥

ಊರ್ಧ್ವರೇತಾ ಮಹಾಬಾಹುರವ್ಯಯೋಽಮಿತವಿಕ್ರಮಃ ।
ವೇದವೇದ್ಯೋ ಮಹಾಕಾಯೋ ವಿದ್ಯಾನಿಧಿರನಾಮಯಃ ॥೫೬॥

ಶರೀರವುಳ್ಳವನೂ, ಪವಿತ್ರನೂ, ಸಕಲ ವಿಘ್ನಗಳನ್ನೂ ಹೋಗಲಾಡಿಸುವವನೂ ಆದ ಗಣೇಶನನ್ನು ಧ್ಯಾನಿಸಿ ಬಳಿಕ ಢುಂಡಿರಾಜನನ್ನು ಪೂಜಿಸಬೇಕು. ||೫೧-೫೨||

ಮುಂದೆ ಹೇಳುವ ಧ್ಯಾನ ಶ್ಲೋಕಗಳಲ್ಲಿ ಅಡಗಿರುವ "ವಿಘ್ನೇಶ" ವಿಶ್ವವದನ" ಮುಂತಾದ ಗಣೇಶನಾಮಗಳಿಗೆ ಸರ್ವೇಶ್ವರನಾದ ಶಿವನೇ ಋಷಿಯು, ವಿಘ್ನೇಶನೇ ದೇವತೆಯು, ಅನುಷ್ಟುಪ್ ಛಂದಸ್ಸು. ||೫೩||

ಗಣೇಶಧ್ಯಾನಕ್ಕೆ ಸಕಲ ವಿಘ್ನನಿವಾರಣೆಯೇ ಫಲ. ಸುಧಾತ್ಮಿಕಾ ಎಂಬುದು ಶಕ್ತಿ. "ಗಣನಾಥಸ್ಯ ಪೂಜಾ ಕಾರ್ಯಾ" ಎಂಬುದೇ ಕೀಲಕವು. ||೫೪||

ಮಹಾಗಣಪತಿಯು ಸರ್ವವಿಘ್ನನಾಶಕನು, ಪ್ರಪಂಚವೇ ವದನವಾಗಿ ಉಳ್ಳವನು, ಲೋಕವನ್ನೇ ಕಣ್ಣುಗಳನ್ನಾಗಿ ಮಾಡಿಕೊಂಡಿರುವನು, ಜಗದೊಡೆಯನು, ಸುವರ್ಣರೂಪನು, ಸರ್ವವ್ಯಾಪಿಯು, ಜ್ಞಾನಸ್ವರೂಪನು, ಜಗದ್ವ್ಯಾಪಿಯು, ಊರ್ಧ್ವಭಾಗಕ್ಕೆ ಪ್ರಸರಿಸುವ ರೇತಸ್ಸುಳ್ಳವನು, ಬಾಹುಬಲಿಷ್ಠನು,

---

1. ಮೇಲ್ಕಂಡ ಶ್ಲೋಕದಲ್ಲಿ ಗಣೇಶನ ಧ್ಯಾನಶ್ಲೋಕಕ್ಕೆ ಉಪಯುಕ್ತವಾದ ಋಷಿ, ದೇವತಾ, ಛಂದಸ್ಸು, ಕೀಲಕ, ಮುಂತಾದುವುಗಳನ್ನು ತಿಳಿಸುವರು. ಋಷಿ ದೇವತೆ ಛಂದಸ್ಸು ಮೊದಲಾದುವುಗಳನ್ನು ಪಠಿಸದಿದ್ದರೆ ಧ್ಯಾನವು ಸಾಂಗವಾಗಿ ನೆರವೇರಿದಂತಾಗುವುದಿಲ್ಲ. ಆದುದರಿಂದ ಸಾಂಗವಾದ ಧ್ಯಾನಶ್ಲೋಕವನ್ನು ಇಲ್ಲಿ ತಿಳಿಯಪಡಿಸುವರೆಂದು ತಿಳಿಯಬೇಕು.

ಸರ್ವಜ್ಞಃ ಸರ್ವಗಃ ಶಾಂತೋ ಗಜಾಸ್ಯೋ ವಿಗತಜ್ವರಃ ।
ವಿಶ್ವಮೂರ್ತಿರಮೇಯಾತ್ಮಾ ವಿಶ್ವಾಧಾರಃ ಸನಾತನಃ ॥೫೭॥

ಸಾಮಗಾನಪ್ರಿಯೋ ಮಂತ್ರೀ ಸತ್ವಾಧಾರಃ ಸುರಾಧಿಪಃ ।
[1] ಸಮಸ್ತಸಾಕ್ಷೀ ನಿರ್ದ್ವಂದ್ವೋ ನಿರ್ಲಿಪ್ತೋಽಮೋಘವಿಕ್ರಮಃ ॥೫೮॥

ನಿಯತೋ ನಿರ್ಮಲಃ ಪುಣ್ಯಃ ಕಾಮದಃ ಕಾಂತಿದಃ ಕವಿಃ ।
ಕಾಮರೂಪೀ ಕಾಮವೇಷೋ ಕಮಲಾಕ್ಷಃ ಕಲಾಧರಃ ॥೫೯॥

ಸುಮುಖಃ ಸರ್ವದಃ ಶುದ್ಧೋ ಮೂಷಕಾಧಿಪವಾಹನಃ ।
ದೀರ್ಘತುಂಡಧರಃ ಶ್ರೀಮಾನನಂತೋ ಮೋಹವರ್ಜಿತಃ ॥೬೦॥

ನಾಶರಹಿತನು, ಹೆಚ್ಚು ಪರಾಕ್ರಮಿಯು, ವೇದದಿಂದ ತಿಳಿಯಲ್ಪಡುವವನು, ದೊಡ್ಡ ದೇಹವುಳ್ಳವನು, ವಿದ್ಯಾನಿಧಿಯು, ರೋಗಾದಿಗಳಿಲ್ಲದವನು. ॥೫೫-೫೬॥

ಸರ್ವವನ್ನೂ ಅರಿತವನು, ಸರ್ವವ್ಯಾಪಿಯು, ಶಾಂತನು, ಗಜಮುಖನು, ಜ್ವರಾದಿರೋಗರಹಿತನು, ವಿಶ್ವಮೂರ್ತಿಯು, ಅಪರಿಚ್ಛಿನ್ನರೂಪನು, ಜಗತ್ತಿಗೆ ಆಧಾರನಾಗಿರುವವನು, ಅನಾದಿಪುರುಷನು, ಸಾಮಗಾನದಲ್ಲಿ ಪ್ರೀತಿಯುಳ್ಳವನು, ಮಂತ್ರಜ್ಞನು, ಸತ್ತ್ವಗುಣಾಶ್ರಯನು, ದೇವದೇವನು, ಸಮಸ್ತ ಕಾರ್ಯಗಳನ್ನೂ ನೋಡುವವನು, ಏಕಾತ್ಮನು, ಪಾಪಲೇಪವಿಲ್ಲದವನು, ಅತಿಶಯವಾದ ಪರಾಕ್ರಮವುಳ್ಳವನು. ॥೫೭-೫೮॥

ನಿಯಮಬದ್ಧನು, ಶುದ್ಧನು, ಪುಣ್ಯರೂಪಿಯು, ಇಷ್ಟಾರ್ಥಪ್ರದನು, ಕಾಂತಿಯನ್ನು ಕೊಡುವವನು, ಕವಿಯು, ಇಷ್ಟಬಂದ ರೂಪವನ್ನು ಧರಿಸುವವನು, ಬೇರೆ ಬೇರೆ ಆಕಾರ ತಾಳುವವನು, ಕಮಲದಂತೆ ಕಣ್ಣುಳ್ಳವನು, ಚಂದ್ರಕಲೆಯನ್ನು ಧರಿಸಿದವನು, ಪ್ರಸನ್ನಮುಖನು, ಸರ್ವವನ್ನೂ ದಯಪಾಲಿಸುವವನು, ಶುದ್ಧಸ್ವರೂಪನು, ಇಲಿಯೇ ವಾಹನವಾಗುಳ್ಳವನು, ನೀಳವಾದ ಮುಖವುಳ್ಳವನು, ಸಂಪದ್ಯುಕ್ತನು, ಅಂತವಿಲ್ಲದವನು, ಮೋಹಾದಿವಿವರ್ಜಿತನು. ॥೫೯-೬೦॥

---

1. ಟಿ.—ಇವು ಗಣೇಶನ ನಾಮಗಳಿಂದೊಳಗೊಂಡ ಧ್ಯಾನಶ್ಲೋಕವು. ಗಣೇಶನನ್ನು ಧ್ಯಾನಿಸುವಾಗ ಹಿಂದೆ ಹೇಳಿದ ಋಷಿದೇವತಾ ಛಂದಸ್ಸುಗಳನ್ನು ಹೇಳಿ ಬಳಿಕ ಈ ಶ್ಲೋಕಗಳನ್ನು ಪಠಿಸಬೇಕು.

ವಕ್ರತುಂಡಃ ಶೂರ್ಪಕರ್ಣಃ ಪವನಃ ಪಾವನೋ ವರಃ ।
ಯೋಗೀಶೋ ಯೋಗಿವಂದ್ಯಾಂಘ್ರಿರುಮಾಸೂನುರಘಾಪಹಃ॥೬೧॥

ಏಕದಂತೋ ಮಹಾಗ್ರೀವಃ ಶರಣ್ಯಃ ಸಿದ್ಧಸೇವಿತಃ ।
ಸಿದ್ಧಿದಃ ಕರುಣಾಸಿಂಧುರ್ಭಗವಾನ್ಭವ್ಯವಿಗ್ರಹಃ ॥೬೨॥

ವಿಕಟಃ ಕಪಿಲೋ ಢುಂಢಿರುಗ್ರೋ ಭೀಮೋದರಃ ಶುಭಃ ।
ಗುಣಾಧ್ಯಕ್ಷೋ ಗುಣಾರಾಧ್ಯೋ ಗಣೇಶೋ ಗಣನಾಯಕಃ ॥೬೩॥

ಜ್ಯೋತಿಃಸ್ವರೂಪೋ ಭೂತಾತ್ಮಾ ಧೂಮಕೇತುರನಾಕುಲಃ ।
ಕುಮಾರಗುರುರಾನಂದೋ ಹೇರಂಬೋ ವೇದಸಂಸ್ತುತಃ ॥೬೪॥

ನಾಗೋಪವೀತೀ ದುರ್ಧರ್ಶೋ ಬಾಲದೂರ್ವಾಂಕುರಪ್ರಿಯಃ ।
ಭಾಲಚಂದ್ರೋ ವಿಶ್ವಧಾಮಾ ಶಿವಪುತ್ರೋ ವಿನಾಯಕಃ ॥೬೫॥

ವಕ್ರವಾದ ಮುಖವುಳ್ಳವನು, ಮೊರದಂತೆ ಕಿವಿಯುಳ್ಳವನು, ವಾಯುರೂಪಿಯು, ಪರಿಶುದ್ಧರೂಪಿಯು, ಶ್ರೇಷ್ಠನು, ಯೋಗಿಗಳಿಗೆ ಒಡೆಯನು, ಯೋಗಿಗಳಿಂದ ನಮಸ್ಕೃತನಾದವನು, ಪಾರ್ವತೀಪುತ್ರನು, ಪಾಪನಾಶಕನು, ಒಂದೇ ದಂತವುಳ್ಳವನು, ದೊಡ್ಡ ಕತ್ತುಳ್ಳವನು, ರಕ್ಷಕನು, ಸಿದ್ಧಪುರುಷರಿಂದ ಪೂಜಿತನಾದವನು, ಸಿದ್ಧಿಯನ್ನು ಕೊಡುವವನು, ದಯಾಸಮುದ್ರನು, ಷಡ್ಗುಣೈಶ್ವರ್ಯಸಂಪನ್ನನು, ಸುಂದರ ದೇಹಿಯು. ॥೬೧-೬೨॥

ವಿಕಾರರೂಪುಳ್ಳವನು, ಕಪಿಲವರ್ಣದವನು, ಢುಂಡಿರಾಜನು, ಭಯಂಕರನು, ದೊಡ್ಡ ಹೊಟ್ಟೆಯುಳ್ಳವನು, ಮಂಗಳಕರನು, ಗುಣಗಳಿಗೆ ಒಡೆಯನು, ಗುಣವುಳ್ಳವರಿಂದ ಪೂಜಿತನಾದವನು, ಗಣನಾಯಕನು, ಗಣಗಳಿಗೆ ಒಡೆಯನು, ತೇಜೋರೂಪನು, ಪಂಚಭೂತಾತ್ಮಕನು, ಧೂಮ್ರವರ್ಣದ ಧ್ವಜವುಳ್ಳವನು, ವ್ಯಾಕುಲವಿಲ್ಲದವನು, ಕುಮಾರಸ್ವಾಮಿಗೂ ಗುರುವಾದವನು, ಆನಂದಾತ್ಮಕನು, ಪಾರ್ವತೀಪ್ರಿಯಸುತನು, ವೇದದಿಂದ ಸ್ತುತ್ಯನಾದವನು. ॥೬೩-೬೪॥

ಸರ್ಪವನ್ನೇ ಯಜ್ಞೋಪವೀತವನ್ನಾಗಿ ಉಳ್ಳವನು, ಎಲ್ಲರನ್ನೂ ಬಲಾತ್ಕಾರವಾಗಿ ಎಳೆಯುವವನು, ಎಳೆಗರುಕೆಯಲ್ಲಿ ಪ್ರೀತಿಯುಳ್ಳವನು, ಹಣೆಯಲ್ಲಿ ಚಂದ್ರನನ್ನುಳ್ಳವನು, ಪ್ರಪಂಚಕ್ಕೆ ಆಶ್ರಯವಿತ್ತಿರುವವನು, ಶಂಕರನ ಪ್ರಿಯಸುತನು,

ಲೀಲಾವಲಂಬಿತವಪುಃ ಪೂರ್ಣಃ ಪರಮಸುಂದರಃ ।
ವಿಘ್ನಾಂಧಕಾರಮಾರ್ತಂಡೋ ವಿಘ್ನಾರಣ್ಯದವಾನಲಃ ॥೬೬॥

ಸಿಂದೂರವದನೋ ನಿತ್ಯೋ ವಿಭುಃ ಪ್ರಮಥಪೂಜಿತಃ ।
ಶರಣ್ಯದಿವ್ಯಪಾದಾಬ್ಜೋ ಭಕ್ತಮಂದಾರಭೂರುಹಃ ॥೬೭॥

ರತ್ನಸಿಂಹಾಸನಾಸೀನೋ ಮಣಿಕುಂಡಲಮಂಡಿತಃ ।
ಭಕ್ತಕಲ್ಯಾಣದೋಽಮೇಯಃ ಕಲ್ಯಾಣಗುಣಸಂಶ್ರಯಃ ॥೬೮॥

ಏತಾನಿ ದಿವ್ಯನಾಮಾನಿ ಗಣೇಶಸ್ಯ ಮಹಾತ್ಮನಃ ।
ಪಠನೀಯಾನಿ ಯತ್ನೇನ ಸರ್ವದಾ ಸರ್ವದೇಹಿಭಿಃ ॥೬೯॥

ನಾಮ್ನಾಮೇಕೈಕಮೇತೇಷಾಂ ಸರ್ವಸಿದ್ಧಿಪ್ರದಾಯಕಂ ।
ಸರ್ವವಿಘ್ನೇಶನಾಮ್ನಾಂ ತು ಫಲಂ ವಕ್ತುಂ ನ ಶಕ್ಯತೇ ॥೭೦॥

ದೇವಸೇನಾನಾಯಕನು, ಲೀಲಾರ್ಥವಾಗಿ ನೇತಾಡುವ ದೇಹವುಳ್ಳವನು, ಪರಿಪೂರ್ಣ ರೂಪನು, ಸುಂದರಪುರುಷನು, ವಿಘ್ನಗಳೆಂಬ ಅರಣ್ಯಕ್ಕೆ ಕಾಡುಕಿಚ್ಚಿನಂತಿರುವವನು. ॥೬೫-೬೬॥

ಸಿಂದೂರವರ್ಣದಿಂದ ರಂಜಿಸುವ ಮುಖವುಳ್ಳವನು, ನಿತ್ಯಸ್ವರೂಪನು, ಸರ್ವವ್ಯಾಪಿಯು, ಪ್ರಮಥಗಣಗಳಿಂದ ಪೂಜಿತನಾದವನು, ಸರ್ವರಿಗೂ ಆಶ್ರಯ ಕೊಡುವ ಪಾದಗಳುಳ್ಳವನು, ಭಕ್ತರಿಗೆ ಕಲ್ಪವೃಕ್ಷದಂತೆ ಫಲಕೊಡುವವನು, ರತ್ನಸಿಂಹಾಸನದಲ್ಲಿ ಮಂಡಿಸಿರುವನು, ರತ್ನಖಚಿತವಾದ ಕುಂಡಲಗಳುಳ್ಳವನು, ಭಕ್ತರಿಗೆ ಸಂಪೂರ್ಣವಾದ ಮಂಗಳವನ್ನು ಕೊಡುವವನು, ಅಳತೆಗೆ ಸಿಕ್ಕದವನು, ಕಲ್ಯಾಣಪ್ರದವಾದ ಗುಣಗಳಿಗೆ ಆಶ್ರಯವಿತ್ತವನು, ಈ ಅರ್ಥಕೊಡುವ ಮಹಾ ಗಣಪತಿಯ ನಾಮಾವಳಿಗಳನ್ನು ತಪ್ಪದೆ ಮಾನವರು ಪ್ರತಿನಿತ್ಯವೂ ಪಠನೆಮಾಡುತ್ತಿರಬೇಕು. ಇದರಿಂದ ಮಹಾಗಣಪತಿಯ ಅನುಗ್ರಹವು ಸುಲಭವಾಗಿ ಲಭಿಸುವುದು. ॥೬೭-೬೮-೬೯॥

ಇವುಗಳಲ್ಲಿ ಒಂದೊಂದು ನಾಮವೂ ಸಕಲ ಸಿದ್ಧಿಗಳನ್ನೂ ಉಂಟುಮಾಡುವುದಾಗಿರುತ್ತದೆ. ಈ ಸಕಲ ನಾಮಗಳ ಫಲವನ್ನು ವರ್ಣಿಸಲು ಸಾಧ್ಯವಿಲ್ಲ. ॥೭೦॥

ಏಕೈಕಮೇವ ತನ್ನಾಮದಿವ್ಯಂ ಜಪ್ತ್ವಾ ಮುನೀಶ್ವರಾಃ ।
ಪ್ರತ್ಯೂಹಮಾತ್ರರಹಿತಾಸ್ತಿಷ್ಠಂತಿ ಶಿವಪೂಜಕಾಃ ॥೨೦॥

ದೂರ್ವಾಯುಗ್ಮಾನಿ ಸಂಗೃಹ್ಯ ನೂತನಾನ್ಯತಿಯತ್ನತಃ ।
ಪೂಜನೀಯೋ ಗಣಾಧ್ಯಕ್ಷೋ ನಾಮ್ನಾಮೇಕೈಕಸಂಖ್ಯಯಾ ॥೨೧॥

ನಭಸ್ಯಶುಕ್ಲಪಕ್ಷಸ್ಯ ಚತುರ್ಥ್ಯಾಂ ವಿಧಿಪೂರ್ವಕಂ ।
ವಕ್ರಕುಂಡೇಶಕುಂಡೇ ತು ಸ್ನಾನಂ ಕೃತ್ವಾ ಪ್ರಯತ್ನತಃ ॥೨೩॥

ವಕ್ರಕುಂಡೇಶಮಾರಾಧ್ಯಂ ಸರ್ವಾಭೀಷ್ಟಪ್ರದಾಯಕಂ ।
ಧ್ಯಾಯೇದಘಹರಂ ಶುದ್ಧಂ ಕಾಂಚನಾಭಮನಾಮಯಂ ॥೨೪॥

ತತಃ ಪೂಜಾಂ ಯಥಾಶಾಸ್ತ್ರಂ ಕೃತ್ವಾ ದೂರ್ವಾಂಕುರೈರ್ನವೈಃ ।
ಪೂಜಾ ಕಾರ್ಯಾ ವಿಶೇಷೇಣ ನಾಮೋಚ್ಚಾರಣಪೂರ್ವಕಂ ॥೨೫॥

ಮುನಿಶ್ರೇಷ್ಠರು ಈ ನಾಮಗಳಲ್ಲಿ ಒಂದೊಂದು ನಾಮವನ್ನೇ ಜಪಿಸಿ, ಯಾವ ತೊಂದರೆಗೂ ಗುರಿಯಾಗದೇ ಶಿವನನ್ನು ಪೂಜಿಸುತ್ತಾ, ಕಾಶೀಕ್ಷೇತ್ರದಲ್ಲಿ ವಾಸಿಸುತ್ತಿರುವರು. ||೨೦||

ಶ್ರಮವಹಿಸಿ ನೂತನವಾದ ದೂರ್ವೆಗಳನ್ನು ಸಂಗ್ರಹಿಸಿ, ಒಂದೊಂದು ನಾಮವನ್ನುಚ್ಚರಿಸುತ್ತಾ ಒಂದೊಂದು ದೂರ್ವಾಂಕುರದಿಂದ ಗಣಪತಿಯನ್ನು ಪೂಜಿಸಬೇಕು. ||೨೧||

ವಿಶೇಷವಾಗಿ ಭಾದ್ರಪದಮಾಸದ ಶುಕ್ಲಪಕ್ಷದ ಚತುರ್ಥಿಯ ದಿವಸದಲ್ಲಿ ವಕ್ರತುಂಡೇಶಕುಂಡದಲ್ಲಿ ಸ್ನಾನವನ್ನಾಚರಿಸಿ, ಪೂಜ್ಯನೂ ಸಕಲ ಇಷ್ಟಾರ್ಥಗಳನ್ನು ದಯಪಾಲಿಸುವವನೂ, ಪಾಪಹರನೂ, ಪವಿತ್ರನೂ, ಹಿರಣ್ಮಯನೂ ಆದ ಗಣೇಶನನ್ನು ಧ್ಯಾನಿಸಬೇಕು. ||೨೩-೨೪||

ಬಳಿಕ ನೂತನವಾದ ದೂರ್ವಾಂಕುರಗಳಿಂದ ಮಂತ್ರಪೂರ್ವಕವಾಗಿ ಪೂಜಿಸಿ, ಅಷ್ಟೋತ್ತರಶತನಾಮಗಳಿಂದ ಪೂಜಿಸಬೇಕು. ||೨೫||

ತತಶ್ಚ ನೋದಕೈರ್ದಿವ್ಯೈಃ ಸುಗಂಧಘೃತಪಾಚಿತೈಃ ।
ನೈವೇದ್ಯಂ ಕಲ್ಪಯೇದ್ದಿವ್ಯಂ ಗಣೇಶಾಯ ಶುಭಾವಹಂ ॥೭೬॥

ಅನ್ನೈಶ್ಚ ಪರಮಾನ್ನಾದ್ಯೈರ್ಭಕ್ಷ್ಯೈರ್ಭೋಜ್ಯೈರ್ಮನೋಹರೈಃ ।
ತೋಷಣೀಯಃ ಪ್ರಯತ್ನೇನ ವಕ್ರತುಂಡೋ ವಿನಾಯಕಃ ॥೭೭॥

ಪ್ರದಕ್ಷಿಣನಮಸ್ಕಾರೈರ್ದಿವ್ಯತನ್ನಾಮಸಂಖ್ಯಯಾ ।
ಕರ್ತವ್ಯಂ ನಿಯತಂ ಶುದ್ಧೈರ್ಮೌನವ್ರತಪರಾಯಣೈಃ ॥೭೮॥

ತತಃ ಸಂತರ್ಪ್ಯ ವಿಧಿವಚ್ಛೈವಾನ್ಬ್ರಾಹ್ಮಣಸತ್ತಮಾನ್ ।
ಪುನರಭ್ಯರ್ಚ್ಯ ವಿಶ್ವೇಶಮಿಮಂ ಮಂತ್ರಮುದೀರಯೇತ್ ॥೭೯॥

॥ ಅಥ ಮಂತ್ರಃ ॥

ವಕ್ರತುಂಡ ಸುರಾರಾಧ್ಯ ಸೂರ್ಯಕೋಟಿಸಮಪ್ರಭ ।
ನಿರ್ವಿಘ್ನೇನೈವ ಸತತಂ ಕಾಶೀವಾಸಂ ಪ್ರಯಚ್ಛ ಮೇ ॥೮೦॥

ಬಳಿಕ ಪರಿಮಳಯುಕ್ತವಾದ ಘೃತದಿಂದ ಸಿದ್ಧಪಡಿಸಿದ ಕಡುಬುಗಳನ್ನು ಗಣೇಶನಿಗೆ ನಿವೇದಿಸಬೇಕು. ॥೭೬॥

ಮತ್ತು ರುಚಿಕರವಾದ ಅನ್ನ, ಪರಮಾನ್ನ, ಭಕ್ಷ್ಯ, ಭೋಜ್ಯ ಇವುಗಳಿಂದ ಗಣೇಶನನ್ನು ತೃಪ್ತಿಪಡಿಸಬೇಕು. ॥೭೭॥

ದಿವ್ಯವಾದ ಗಣೇಶನ ನಾಮಗಳನ್ನು ಪಠಿಸುತ್ತಾ, ಮೌನವ್ರತವನ್ನು ಕೈಗೊಂಡು ಅಷ್ಟೋತ್ತರ ಶತನಮಸ್ಕಾರಗಳನ್ನಾಚರಿಸಬೇಕು. ॥೭೮॥

ಆದಾದ ಬಳಿಕ ಈಶ್ವರಭಕ್ತರಾದ ಬ್ರಾಹ್ಮಣಶ್ರೇಷ್ಠರನ್ನು ಅನ್ನ ವಸ್ತ್ರಾದಿಗಳಿಂದ ತೃಪ್ತಿಗೊಳಿಸಿ ಮತ್ತೊಮ್ಮೆ ಪೂಜಿಸಿ ಈ ಮಂತ್ರವನ್ನು ಪಠಿಸಬೇಕು. ॥೭೯॥

ಇದು ಪ್ರಾರ್ಥನಾಮಂತ್ರದ, ಮಂತ್ರಾರ್ಥ– ದೇವತೆಗಳಿಗೂ ಪೂಜ್ಯನೂ, ಕೋಟಿಸೂರ್ಯರಿಗೆ ಸಮಾನವಾದ ತೇಜಸ್ಸುಳ್ಳವನೂ ಆದ ಗಣೇಶನೇ, ನನ್ನ ಕಾಶೀಕ್ಷೇತ್ರವಾಸವು ನಿರ್ವಿಘ್ನವಾಗುವಂತೆ ಅನುಗ್ರಹಿಸು. ॥೮೦॥

ಇತಿ ಸಂಪ್ರಾರ್ಥ್ಯ ವಿಧಿವತ್ಪೂಜಾಂ ಕೃತ್ವಾ ಪುನರ್ಮುದಾ ।
ನಮುಸ್ಕೃತ್ವಾ ಪ್ರಸಾದ್ಯೈನಂ ಗಚ್ಛೇದ್ಧುಂಡಿವಿನಾಯಕಂ ॥೮೧॥

ಧುಂಡಿರಾಜಾರ್ಚನಂ ಸಮ್ಯಕ್ಕರ್ತವ್ಯಂ ವಿಧಿಪೂರ್ವಕಂ ।
ತತ್ರೈವಾಚ್ಯಾರ್ವಿಶೇಷೇಣ ಪೂಜಾಂ ಕೃತ್ವಾ ತತಃ ಪರಂ ॥೮೨॥

ಪೂಜನೀಯಾಃ ಪ್ರಯತ್ನೇನ ಸರ್ವದಾ ಮೋದಕಪ್ರಿಯಾಃ ।
ಶಿವಪ್ರೀತಿಕರಾ ನಿತ್ಯಂ ಶುದ್ಧಾಃ ಪಂಚವಿನಾಯಕಾಃ ॥೮೩॥

ಕ್ಷಿಪ್ರಸಿದ್ಧಿಕರಂ ಕ್ಷಿಪ್ರಗಣೇಶಂ ಸುರವಂದಿತಂ ।
ಸಂಪೂಜ್ಯ ಪೂರ್ವವತ್ಸಮ್ಯಗ್ಗಚ್ಛೇದಾಶಾವಿನಾಯಕಂ ॥೮೪॥

ಆಶಾವಿನಾಯಕಂ ಸಮ್ಯಕ್ಪೂಜಯಿತ್ವಾ ತತಃ ಪರಂ ।
ಅರ್ಕವಿಘ್ನೇಶ್ವರಃ ಸಮ್ಯಕ್ಪೂಜನೀಯಃ ಪ್ರಯತ್ನತಃ ॥೮೫॥

ಪೂರ್ವವತ್ಪೂಜಯಿತ್ವಾ ತಂ ತತ್ರ ಸಿದ್ಧಿವಿನಾಯಕಂ ।
ಪೂಜನೀಯಸ್ತತಃ ಸಮ್ಯಕ್ಚಿಂತಾಮಣಿವಿನಾಯಕಃ ॥೮೬॥

ಧುಂಡಿರಾಜನನ್ನು ಹೀಗೆಂದು ಪ್ರಾರ್ಥಿಸಿ ಮತ್ತೊಮ್ಮೆ ವಿಧಿವತ್ತಾಗಿ ಪೂಜಿಸಿ ನಮುಸ್ಕರಿಸಿ ಅವನನ್ನು ತೃಪ್ತಿಪಡಿಸಿ ಅಲ್ಲಿಂದ ತೆರಳಬೇಕು. ||೮೧||

ಧುಂಡಿರಾಜಗಣಪನನ್ನು ಮಾತ್ರ ಶಾಸ್ತ್ರೋಕ್ತವಿಧಾನದಿಂದ ಭಕ್ತಿಶ್ರದ್ಧಾಸಮನ್ವಿತನಾಗಿ, ತಪ್ಪದೇ ಪೂಜಿಸಬೇಕು. ಆದರಲ್ಲಿಯೂ ವಿಶೇಷವಾಗಿ ಅಷ್ಟೋತ್ತರನಾಮಪೂಜೆಯನ್ನು ನೆರವೇರಿಸಬೇಕು. ಆದಾದ ಬಳಿಕ ಶಿವನಿಗೆ ಪ್ರಿಯವಾದ ಪಂಚವಿನಾಯಕರನ್ನು ಪೂಜಿಸಿ, ಮೋದಕವೇ ಮೊದಲಾದ ರುಚಿಕರವಾದ ಭಕ್ಷ್ಯಗಳಿಂದ ಅವರನ್ನು ತೃಪ್ತಿಗೊಳಿಸಬೇಕು. ಪಂಚವಿನಾಯಕರ ಪೂಜಾಕ್ರಮ ಹೀಗಿದೆ. ||೮೨-೮೩||

ಕ್ಷಿಪ್ರವಾಗಿ ಸಿದ್ಧಿಯನ್ನುಂಟುಮಾಡುವ ಕ್ಷಿಪ್ರಗಣೇಶನನ್ನು ಕ್ರಮವರಿತು ಪೂಜಿಸಿ ಆಶಾವಿನಾಯಕನ ಸನ್ನಿಧಿಗೆ ತೆರಳಬೇಕು. ||೮೪||

ಆಶಾವಿನಾಯಕನನ್ನು ಪೂಜಿಸಿ ಬಳಿಕ ಅರ್ಕಗಣಪತಿಯನ್ನು ಪೂಜಿಸಬೇಕು. ಅಲ್ಲಿಯೇ ಇರುವ ಸಿದ್ಧಿವಿನಾಯಕನನ್ನು ಹಿಂದಿನಂತೆ ಪೂಜಿಸಿ, ಅವನನ್ನೇ ಚಿಂತಾಮಣಿ ವಿನಾಯಕನೆಂದು ಭಾವಿಸಬೇಕು. ||೮೫-೮೬||

ಸೇನಾವಿನಾಯಕೋಽಸ್ಯೈವ ಸಂಪೂಜ್ಯಸ್ತದನಂತರಂ ।
ದುರ್ಗಾವಿನಾಯಕಸ್ಯಾಪಿ ಪೂಜಾ ಕಾರ್ಯಾ ತತಃ ಪರಂ ॥೮೭॥

ಏವಂ ಸಂಪೂಜ್ಯ ವಿಧಿವದ್ಭಕ್ತಿಶ್ರದ್ಧಾಸಮನ್ವಿತೈಃ ।
ಶೈವಾಃ ಶಂಕರತತ್ತ್ವಜ್ಞಾಃ ಪೂಜನೀಯಾಃ ಪ್ರಯತ್ನತಃ ॥೮೮॥

ಏವಂ ಸಂಪೂಜಿತಾಃ ಸಮ್ಯಕ್ಪ್ರೀತಾಸ್ತೇ ಗಣನಾಯಕಾಃ ।
ಕಾಶೀವಾಸಂ ಪ್ರಯಚ್ಛಂತಿ ನಿರ್ವಿಘ್ನೇನೈವ ಸಾದರಂ ॥೮೯॥

ಆಜ್ಯೇನ ಕಾಪಿಲೇನೈವ ಸಾರ್ಧಲಕ್ಷತ್ರಯೋಽಹುತೀಃ ।
ಹುತ್ವೈತನ್ನಾಮಭಿಃ ಸಮ್ಯಕ್ಸರ್ವವಿದ್ಯಾಧಿಪೋ ಭವೇತ್ ॥೯೦॥

ಏತಾನಿ ದಿವ್ಯನಾಮಾನಿ ಪ್ರತಿವಾಸರಮಾದರಾತ್ ।
ಪಠಿತ್ವಾ ಗಣನಾಥಸ್ಯ ಪೂಜಾ ಕಾರ್ಯಾ ಪ್ರಯತ್ನತಃ ॥೯೧॥

ಯಸ್ಯ ಕಸ್ಯಾಪಿ ಸಂತುಷ್ಟೋ ಗಣಪಃ ಸರ್ವಸಿದ್ಧಿದಃ ।
ಅತ ಏವ ಸದಾ ಪೂಜ್ಯೋ ಗಣನಾಥೋ ವಿಚಕ್ಷಣೈಃ ॥೯೨॥

ಇದೇರೀತಿಯಲ್ಲಿ ಸೇನಾವಿನಾಯಕನನ್ನೂ ಪೂಜಿಸಬೇಕು. ಆದಾದ ಬಳಿಕ ದುರ್ಗಾವಿನಾಯಕನನ್ನು ಆರ್ಚಿಸಬೇಕು. ||೮೭||

ಈ ಪ್ರಕಾರವಾಗಿ ಪಂಚಗಣಾಧಿಪರನ್ನು ಭಕ್ತಿಶ್ರದ್ಧೆಗಳಿಂದ ಪೂಜಿಸಿ ತರುವಾಯ ಶಿವರಹಸ್ಯವನ್ನು ಅರಿತ ಈಶ್ವರಭಕ್ತರನ್ನು ಸೇವಿಸಬೇಕು. ||೮೮||

ಈ ರೀತಿಯಲ್ಲಿ ಭಕ್ತಿಯಿಂದ ಪೂಜಿಸಲ್ಪಟ್ಟ ಆ ಗಣಾಧಿಪರು ಸುಪ್ರೀತರಾಗಿ ನಿರ್ವಿಘ್ನವಾಗಿ ಕಾಶೀಕ್ಷೇತ್ರದಲ್ಲಿ ವಾಸವಾಗಿರುವಂತೆ ಭಕ್ತರಿಗೆ ಅನುಗ್ರಹಿಸುವರು. ||೮೯||

ಧುಂಡಿರಾಜನ ಅಷ್ಟೋತ್ತರಶತನಾಮುಗಳನ್ನು ಪಠಿಸುತ್ತಾ ಪರಿಶುದ್ಧವಾದ ಕಪಿಲಗೋವಿನ ಆಜ್ಯದಿಂದ ಒಂದೂವರೆ ಲಕ್ಷ ಆಹುತಿಗಳನ್ನಿತ್ತರೆ ಆಗ ಆತನು ಸಕಲವಿದ್ಯೆಗಳಿಗೂ ಅಧಿಪತಿಯಾಗುವನು. ||೯೦||

ಧುಂಡಿರಾಜನ ದಿವ್ಯವಾದ ಈ ನಾಮುಗಳನ್ನೂ ಪ್ರತಿದಿನವೂ ಭಕ್ತಿಯಿಂದ ಪಠಿಸಿ ಗಣೇಶನನ್ನು ಪೂಜಿಸಬೇಕು. ||೯೧||

ಗಣಪನು ಯಾರಲ್ಲಿ ಸಂತುಷ್ಟನಾಗುವನೋ ಅವರಿಗೆ ಸಕಲ ಸಿದ್ಧಿಗಳನ್ನೂ

ಗಣೇಶಾದಪರೋ ಲೋಕೇ ವಿಘ್ನಹರ್ತಾ ನ ವಿದ್ಯತೇ ।
ತಸ್ಮಾದನ್ಯಹನಾರಾಧ್ಯೋ ಗಣೇಶಃ ಸರ್ವಸಿದ್ಧಿದಃ ॥೯೩॥

ಕಾಶೀನಿವಾಸಸಿದ್ಧ್ಯರ್ಥಂ ವಿಷ್ಣುನಾ ಪೂಜಿತಃ ಪುರಾ ।
ಪುರಾ ವಿಘ್ನೇಶ್ವರಃ ಸಮ್ಯಕ್ಪೂಜಿತೋ ದಂಡಪಾಣಿನಾ ॥೯೪॥

ಕರ್ಕೋಟಕೇನ ನಾಗೇನ ಗಣೇಶಃ ಪೂಜಿತಃ ಪುರಾ ।
ಶೇಷೇಣ ಪೂಜಿತಃ ಪೂರ್ವಂ ಗಣೇಶಃ ಸಿದ್ಧಿದಾಯಕಃ ॥೯೫॥

ಕಾಶೀಯಾತ್ರಾರ್ಥಮುದ್ಯುಕ್ತೋ ವಿಧಿರ್ವಿಘ್ನಕುಲಾಕುಲಃ ।
ಪೂಜಯಾಮಾಸ ವಿಘ್ನೇಶಂ ವಿಧಿವದ್ಭಕ್ತಿಪೂರ್ವಕಂ ॥೯೬॥

ಸೂರ್ಯೇಣಾಭ್ಯರ್ಚಿತಃ ಪೂರ್ವಂ ಚಂದ್ರೇಣೇಂದ್ರೇಣ ಚ ಪ್ರಿಯೇ ।
ದೇವೈರನ್ಯೈಶ್ಚ ವಿಧಿವತ್ಪೂಜಿತೋ ಗಣನಾಯಕಃ ॥೯೭॥

ದಯಪಾಲಿಸುವನು. ಆದುದರಿಂದ ಚತುರರಾದ ಮನುಜರು ಗಣನಾಥನನ್ನು ಪ್ರತಿದಿನವೂ ಪೂಜಿಸಬೇಕು. ॥೯೨॥

ಲೋಕದಲ್ಲಿ ವಿಘ್ನಗಳನ್ನು ಪರಿಹರಿಸುವುದರಲ್ಲಿ ಗಣೇಶನಿಗಿಂತಲೂ ಸಮರ್ಥನಾದ ಇನ್ನೊಬ್ಬನಿರುವುದಿಲ್ಲ. ಆದುದರಿಂದ ಸಕಲ ಇಷ್ಟಾರ್ಥಗಳನ್ನೂ ಪೂರಯಿಸುವ ಅವನನ್ನು ಪ್ರತಿದಿನವೂ ತಪ್ಪದೇ ಆರಾಧಿಸಬೇಕು. ॥೯೩॥

ಹಿಂದೆ ವಿಷ್ಣುವು ತನಗೆ ಸ್ಥಿರವಾದ ಕಾಶೀಕ್ಷೇತ್ರವಾಸವು ಲಭಿಸುವುದಕ್ಕೋಸ್ಕರ ಗಣೇಶನನ್ನು ಪೂಜಿಸಿದ್ದನು. ಅಲ್ಲದೆ ದಂಡಪಾಣಿಯೂ ಒಂದಾನೊಂದು ಸಮಯದಲ್ಲಿ ಅವನನ್ನು ಪೂಜಿಸಿದ್ದನು. ॥೯೪॥

ಕರ್ಕೋಟಕನೆಂಬ ಸರ್ಪನೂ ಮತ್ತು ಆದಿಶೇಷನೂ ಇಷ್ಟಸಿದ್ಧಿಗಾಗಿ ಪೂರ್ವಕಾಲದಲ್ಲಿ ಸಿದ್ಧಿವಿನಾಯಕನನ್ನು ಪೂಜಿಸಿದ್ದರು. ॥೯೫॥

ಹಿಂದೆ ಒಂದಾನೊಂದು ಕಾಲದಲ್ಲಿ ಬ್ರಹ್ಮನು ಕಾಶೀಯಾತ್ರೆಗೋಸ್ಕರ ಹೊರಡಲುದ್ಯುಕ್ತನಾದನು. ಅವನಿಗೆ ಅನೇಕ ವಿಘ್ನಗಳು ಸಂಭವಿಸಿದುವು. ಆಗ ಅವನು ಭಕ್ತಿಯಿಂದ ಮಂತ್ರಪೂರ್ವಕವಾಗಿ ವಿನಾಯಕನನ್ನು ಅರ್ಚಿಸಿದನು. ॥೯೬॥

ಪ್ರಿಯೇ, ಇದಲ್ಲದೇ ಸೂರ್ಯ, ಚಂದ್ರ, ಇಂದ್ರಾದಿದೇವತೆಗಳು ಇವರೆಲ್ಲರೂ ಗಣೇಶನನ್ನು ವಿಧಿವತ್ತಾಗಿ ಪೂಜಿಸಿರುವರು. ॥೯೭॥

ಮರ್ತ್ಯಾನಾಮಮರಾಣಾಂ ಚ ಮುನೀನಾಂ ಚ ವರಾನನೇ।
ನ ಸಿದ್ಧ್ಯಂತ್ಯೇವ ಕಾರ್ಯಾಣಿ ಗಣೇಶಾಭ್ಯರ್ಚನಂ ವಿನಾ ॥೯೮॥

ಕಾಶೀಯಾತ್ರಾವಿಧಿಂ ವಕ್ಷ್ಯೇ ಶೃಣು ಸಾದರಮಂಬಿಕೇ ।
ನಿಯಮಾ ಬಹವಃ ಸಂತಿ ಕಾಶೀಯಾತ್ರಾರತಾತ್ಮನಾಂ ॥೯೯॥

ಬ್ರಹ್ಮಕ್ಷತ್ರಿಯವಿಟ್‌ಶೂದ್ರೈಃ ಸ್ವಸ್ವವೃತ್ತ್ಯಾ ಯಥೋಚಿತಂ ।
ನ್ಯಾಯೇನೈವ ಧನಂ ಸಮ್ಯಗಾರ್ಜನೀಯಂ ಪ್ರಯತ್ನತಃ ॥೧೦೦॥

ಬ್ರಾಹ್ಮಣೈಃ ಶುಕ್ಲವೃತ್ತ್ಯೈವ ಕರ್ತವ್ಯೋ ಧನಸಂಗ್ರಹಃ ।
ಶೂದ್ರದ್ರವ್ಯಂ ನ ಗೃಹ್ಣೀಯಾದ್ರಾಜದ್ರವ್ಯಂ ಚ ವಿಡ್ಧನಂ ॥೧೦೧॥

ಅಯಾಚ್ಞಯೈವ ವಿಪ್ರೈಶ್ಚ ಯಾಂಚ್ಞಯಾ ಜೀವಿಭಿರ್ದ್ವಿಜೈಃ ।
ದತ್ತಮಲ್ಪಮನಲ್ಪಂ ಚ ಗ್ರಾಹ್ಯಂ ವಿತ್ತಂ ದ್ವಿಜೋತ್ತಮೈಃ ॥೧೦೨॥

ಎಲೌ ಸುಮುಖಿಯೇ, ಮನುಷ್ಯರಿಗಾಗಲಿ, ದೇವತೆಗಳಿಗಾಗಲಿ, ಮುನಿಗಳಿಗಾಗಲಿ, ಸಿದ್ಧಿವಿನಾಯಕನನ್ನು ಪೂಜಿಸದೇ ಯಾವ ಕಾರ್ಯಗಳೂ ಸಿದ್ಧಿಸುವುದಿಲ್ಲ. ॥೯೮॥

ದೇವಿ, ಕಾಶೀಯಾತ್ರೆಯ ಕ್ರಮವನ್ನು ಹೇಳುವೆನು ಕೇಳು, ಕಾಶೀಯಾತ್ರೆಗೆ ಹೋಗಬಯಸುವವರಿಗೆ ಅನೇಕ ನಿಯಮಗಳು ವಿಹಿತವಾಗಿರುವುವು.॥೯೯॥

ಕಾಶೀಕ್ಷೇತ್ರಕ್ಕೆ ಹೋಗಬಯಸುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಈ ಚತುರ್ವರ್ಣದವರೂ ತಮ್ಮ ತಮ್ಮ ಶಾಸ್ತ್ರವಿಹಿತವಾದ ವೃತ್ತಿಯನ್ನವಲಂಬಿಸಿ ನ್ಯಾಯಮಾರ್ಗದಿಂದ ಧನವನ್ನು ಸಂಗ್ರಹಿಸಬೇಕು. ॥೧೦೦॥

ಬ್ರಾಹ್ಮಣರು ಭಿಕ್ಷಾಟನೆಯಿಂದಲೇ ಧನವನ್ನು ಸಂಗ್ರಹಿಸಬೇಕು. ಅವನು ಇತರ ಕ್ಷತ್ರಿಯ, ವೈಶ್ಯ, ಶೂದ್ರರೆಂಬ ತ್ರಿವರ್ಗದವರಿಂದ ದ್ರವ್ಯವನ್ನು ಸ್ವೀಕರಿಸಬಾರದು. ॥೧೦೧॥

ಬ್ರಾಹ್ಮಣರು, ಭಿಕ್ಷಾಟನೆಯಿಂದ ಜೀವಿಸದಿರುವ ಬ್ರಾಹ್ಮಣರಿಂದಲೂ ಮತ್ತು ಭಿಕ್ಷಾಟನೆಯಿಂದ ಜೀವಿಸುವ ತನ್ನಂತಹ ಇತರ ಬ್ರಾಹ್ಮಣರಿಂದಲೂ ಕೊಡಲ್ಪಟ್ಟ ಧನವನ್ನು ಅಲ್ಪವಾಗಲಿ ಹೇರಳವಾಗಿರಲಿ ಅದನ್ನು ಸ್ವೀಕರಿಸಬಹುದು. ॥೧೦೨॥

ಗೃಹೀತ್ವಾ ತತ್ತ್ರಿಧಾ ಕೃತ್ವಾ ಭಾಗೇನೈಕೇನ ಸಾದರಂ ।
ಶ್ರಾದ್ಧಂ ಕಾರ್ಯಂ ಪ್ರಯತ್ನೇನ ತತೋ ಮುಂಡನಪೂರ್ವಕಂ ॥೧೦೩॥

ಕಾಲಭೈರವಮುದ್ದಿಶ್ಯ ತದನ್ಯೇದ್ಯುರ್ದ್ವಿಜೋತ್ತಮಾಃ ।
ಭೋಜನೀಯಾಃ ಪ್ರಯತ್ನೇನ ಶೈವಾ ಏವ ಶಿವಪ್ರಿಯಾಃ ॥೧೦೪॥

ಭೋಜನೀಯಾಃ ಪ್ರಯತ್ನೇನ ಮದರ್ಥಮಪಿ ಶಾಂಕರಾಃ ।
ತತೋ ಗಣೇಶಮುದ್ದಿಶ್ಯ ಭೋಜನೀಯಾಃ ಶಿವದ್ವಿಜಾಃ ॥೧೦೫॥

ತತಶ್ಚ ದುರ್ಗಾಂ ಸಂಪೂಜ್ಯ ಸರ್ವದುರ್ಗವಿನಾಶಿನೀಂ ।
ಪುನರ್ಮಲ್ಲಿಂಗಮಮಲಂ ಪೂಜನೀಯಂ ಪ್ರಯತ್ನತಃ ॥೧೦೬॥

ದ್ವಿಜೇಭ್ಯೋ ಬಂಧುವರ್ಗೇಭ್ಯಃ ಪ್ರತಿಗೃಹ್ಯಾಶಿಷಸ್ತತಃ ।
ಶಿಷ್ಟಂ ಧನಂ ಗೃಹೀತ್ವೈವ ದ್ವಿಜಃ ಸಂತುಷ್ಟಮಾನಸಃ ॥೧೦೭॥

ಪೂರ್ಣಕುಂಭದ್ವಯಂ ಲಿಂಗಂ ಪೂಜಿತಂ ಕನ್ಯಕಾದ್ವಯಂ ।
ದಧಿಕ್ಷೀರಫಲಾನ್ನಾದಿ ಕೃತ್ವಾಗ್ರೇ ಯತ್ನಪೂರ್ವಕಂ ॥೧೦೮॥

ಈ ರೀತಿಯಲ್ಲಿ ತ್ರಿವರ್ಗಸ್ಥರಿಂದ ತೆಗೆದುಕೊಂಡ ಆ ಧನವನ್ನು ಮೂರು ಪಾಲಾಗಿ ವಿಂಗಡಿಸಿ ಅವುಗಳಲ್ಲಿ ಒಂದು ಭಾಗದಿಂದ ಮುಂಡನವನ್ನು ಮಾಡಿಸಿಕೊಂಡುಪಿತೃಶ್ರಾದ್ಧವನ್ನು ನೆರವೇರಿಸಬೇಕು. ಬಳಿಕ ಮಾರನೆಯ ದಿವಸ ಕಾಲಭೈರವನ ಪ್ರೀತ್ಯರ್ಥವಾಗಿ ಈಶ್ವರಪ್ರಿಯರಾದ ಭಕ್ತರಿಗೆ ಭೋಜನವನ್ನು ಏರ್ಪಡಿಸಬೇಕು. ॥೧೦೩-೧೦೪॥

ನನ್ನನ್ನು ತೃಪ್ತಿಗೊಳಿಸುವುದಕ್ಕೋಸ್ಕರ ಈಶ್ವರಭಕ್ತರಾದ ಬ್ರಾಹ್ಮಣರಿಗೆ ಉಣಬಡಿಸಬೇಕು. ಬಳಿಕ ಗಣೇಶ, ದುರ್ಗಿ ಇವರನ್ನುದ್ದೇಶಿಸಿ ಬ್ರಾಹ್ಮಣಸಂತರ್ಪಣೆಯನ್ನು ನೆರವೇರಿಸಬೇಕು. ತರುವಾಯ ಪವಿತ್ರವಾದ ನನ್ನ ಲಿಂಗವನ್ನು ಪೂಜಿಸಬೇಕು. ॥೧೦೫-೧೦೬॥

ಆನಂತರ ಬಂಧುಗಳಿಂದಲೂ ಮತ್ತು ಬ್ರಾಹ್ಮಣರಿಂದಲೂ ಆಶೀರ್ವಾದಗಳನ್ನು ಪಡೆದು ಉಳಿದ ಹಣವನ್ನು ತೆಗೆದುಕೊಂಡು ಸಂತೋಷದಿಂದ ಕಾಶೀಯಾತ್ರೆಗೆ ಹೊರಡಬೇಕು. ಹೊರಡುವಾಗ ಯಾತ್ರಿಕನು ತನ್ನ ಮುಂಭಾಗದಲ್ಲಿ

ತತಸ್ತ್ವಯಂ ಸಮುಚ್ಚಾರ್ಯೋ ಮಂತ್ರಃ ಸರ್ವಾರ್ಥಸಾಧಕಃ ।
ಪೂಜಯಿತ್ವಾ ವಿಶೇಷೇಣ ಲಿಂಗರೂಪಿಣಮೀಶ್ವರಂ ॥೧೦೯॥

॥ ಶಿವಪ್ರಾರ್ಥನಾ ಮಂತ್ರಃ ॥

ಶಿವ ಗೌರೀಪತೇ ಶ್ರೀಮನ್ಭಕ್ತವತ್ಸಲ ಶಂಕರ ।
ಕಾಶೀಯಾತ್ರಾಂ ಕರಿಷ್ಯೇಽಹಂ ನಿರ್ವಿಘ್ನಾಂ ಕುರು ಸರ್ವದಾ ॥೧೧೦॥

॥ ಅಥ ಗಣೇಶ ಪ್ರಾರ್ಥನಾ ಮಂತ್ರಃ ॥

ವಿಘ್ನೇಶ ಭಕ್ತವರದ ವಿಘ್ನರಾಜ ಗಣಾಧಿಪ ।
ಕಾಶೀಯಾತ್ರಾಂ ಕರಿಷ್ಯೇಽಹಂ ನಿರ್ವಿಘ್ನಾಂ ಕುರು ಸರ್ವದಾ ॥೧೧೧॥

ಎರಡು ಪೂರ್ಣ ಕುಂಭಗಳನ್ನೂ ಒಂದು ಶಿವಲಿಂಗವನ್ನೂ ಮತ್ತು ಇಬ್ಬರು ಕನ್ನಿಕೆಯರನ್ನೂ ಹೊಂದಿರಬೇಕು. ಅಲ್ಲದೇ ಮುಂದುಗಡೆಯಲ್ಲಿ ಮೊಸರು, ಹಾಲು, ತುಪ್ಪ, ಅನ್ನ, ವಿವಿಧವಾದ ಭಕ್ಷ್ಯಭೋಜ್ಯಗಳು, ಹಣ್ಣುಹಂಪಲುಗಳು ಇವನ್ನು ಹೊರಿಸಿ ಕಳುಹಿಸಬೇಕು. ಬಳಿಕ ಯಾತ್ರಿಕನು ಲಿಂಗರೂಪಿಯಾದ ಶಿವನನ್ನು ಷೋಡಶೋಪಚಾರಗಳಿಂದ ಪೂಜಿಸಿ ತನ್ನ ಯಾತ್ರೆಯು ನಿರ್ವಿಘ್ನದಿಂದ ನೆರವೇರುವುದಕ್ಕೋಸ್ಕರ ಮುಂದೆ ಹೇಳುವ ಮಂತ್ರಗಳನ್ನು ಉಚ್ಚರಿಸಬೇಕು. ||೧೦೭-೧೦೮-೧೦೯||

ಶಿವನನ್ನು ಪ್ರಾರ್ಥಿಸುವ ಮಂತ್ರವು

(ಮಂತ್ರಾರ್ಥ)—ಓ ಶಿವನೇ, ಗಿರಿಜಾಪತಿಯೇ, ಸಂಪದ್ಭರಿತನೇ, ಭಕ್ತವತ್ಸಲನೇ, ನಾನು ಕಾಶೀಯಾತ್ರೆಯನ್ನು ನೆರವೇರಿಸುವೆನು. ನನಗೆ ನಿರ್ವಿಘ್ನವನ್ನುಂಟು ಮಾಡು. ||೧೧೦||

ಗಣೇಶನನ್ನು ಪ್ರಾರ್ಥಿಸುವ ಮಂತ್ರ

ವಿಘ್ನೇಶ್ವರನೇ, ಭಕ್ತರಿಗೆ ವರವನ್ನು ನೀಡುವವನೇ, ಪ್ರಮಥಗಣಾಧೀಶನೇ, ಈಗ ನಾನು ಕಾಶೀಯಾತ್ರೆಮಾಡುತ್ತೇನೆ. ಅದಕ್ಕೆ ಸ್ವಲ್ಪವೂ ವಿಘ್ನಬರದಂತೆ ಕರುಣಿಸು. ||೧೧೧||

॥ ಅಥ ಭೈರವ ಸ್ರಾರ್ಥನಾ ಮಂತ್ರಃ ॥

ಕಾಲಭೈರವ ಸರ್ವಾತ್ಮನ್ಕಾಲನಾಥ ಜಗತ್ಪ್ರಭೋ ।
ಕಾಶೀಯಾತ್ರಾಂ ಕರಿಷ್ಯೇಽಹಂ ನಿರ್ವಿಘ್ನಂ ಕುರು ಸರ್ವದಾ ॥೧೧೨॥

॥ ಅಥ ದುರ್ಗಾ ಪ್ರಾರ್ಥನಾ ಮಂತ್ರಃ ॥

ಜಯ ದುರ್ಗೇ ಜಗದ್ವಂದ್ಯೇ ಜಯ ದುರ್ಗೇ ಶಿವಪ್ರಿಯೇ ।
ಕಾಶೀಯಾತ್ರಾಂ ಕರಿಷ್ಯೇಽಹಂ ನಿರ್ವಿಘ್ನಂ ಕುರು ಸರ್ವದಾ ॥೧೧೩॥

ತತೋ ಮಾಂ ವೃಷಭಾರೂಢಂ ದಿವ್ಯಮಂಗಲವಿಗ್ರಹಂ ।
ಮುಕ್ತಾದಾಮಪರೀತಾಂಗಂ ಮಂಗಲಪ್ರದಮುತ್ತಮಂ ॥೧೧೪॥

ಗೌರೀಭೂಷಿತವಾಮಾಂಗಮಭಯಪ್ರದಮುತ್ತಮಂ ।
ಧ್ಯಾತ್ವಾ ಸಮ್ಯಕ್ತತೋ ಗಚ್ಛೇದನ್ಯಗ್ರಾಮಂ ಶುಭೇ ದಿನೇ ॥೧೧೫॥

ಭೈರವನನ್ನು ಪ್ರಾರ್ಥಿಸುವ ಮಂತ್ರ

ಸರ್ವವ್ಯಾಪಿಯೂ ಕಾಲನಾಥನಾಗಿಯೂ ಇರುವ ಜಗದೊಡೆಯನೇ, ಈಗ ನಾನು ಮಾಡುವ ಕಾಶೀಯಾತ್ರೆಯನ್ನು ನಿರ್ವಿಘ್ನವಾಗಿ ನೆರವೇರಿಸು. ॥೧೧೨॥

ದುರ್ಗಾದೇವಿಯನ್ನು ಪ್ರಾರ್ಥಿಸುವ ಮಂತ್ರ

ಜಗತ್ಪೂಜ್ಯಳೂ, ಶಿವಾನಂದದಾಯಕಳೂ ಆದ ದುರ್ಗಾದೇವಿಯೇ, ನಿನಗೆ ನಮಸ್ಕರಿಸುವೆನು. ಈಗ ನಾನು ಮಾಡಲಿರುವ ಕಾಶೀಯಾತ್ರೆಗೆ ಯಾವ ಅಡ್ಡಿ ಆತಂಕಗಳೂ ಇಲ್ಲದಂತೆ ವರವನ್ನು ಕರುಣಿಸು. ॥೧೧೩॥

ಹಿಂದೆ ಹೇಳಿದ ಆಯಾ ಮಂತ್ರಗಳಿಂದ ಆಯಾ ದೇವತೆಗಳನ್ನು ಪ್ರಾರ್ಥಿಸಬೇಕು. ಬಳಿಕ ವೃಷಭಾರೂಢನೂ, ಮಂಗಲಮೂರ್ತಿಯೂ, ಮುಕ್ತಾಮಾಲೆಗಳಿಂದ ಅಲಂಕೃತನೂ, ಕಲ್ಯಾಣಕರನೂ ವಾಮಭಾಗದಲ್ಲಿ ಪ್ರಿಯತಮೆಯಾದ ಗಿರಿಜೆಯನ್ನು ಕುಳ್ಳಿರಿಸಿಕೊಂಡಿರುವವನೂ, ಅಭಯಪ್ರದನೂ ಆದ ನನ್ನನ್ನು ಧ್ಯಾನಿಸಿ ಶುಭವಾದ ದಿವಸದಲ್ಲಿ ತನ್ನ ವಾಸಸ್ಥಳವನ್ನು ಬಿಟ್ಟು, ಬೇರೆಯ ಗ್ರಾಮಕ್ಕೆ ತೆರಳಬೇಕು. ॥೧೧೪-೧೧೫॥

ನಿರಾಹಾರೇಣ ನಿರ್ಗಚ್ಛೇನ್ಮೌನವ್ರತಪರಾಯಣಃ ।
ಅಗೃಹೀತ್ವೋಪಾನಹಾದೀನ್ಕೀಟಾನಸ್ಪೃಶ್ಯ ಭೂಗತಾನ್ ॥೧೧೬॥

ಶಿವಗೌರೀಪತೇ ಶ್ರೀಮನ್ವಿಶ್ವನಾಥ ಸದಾಶಿವ ।
ಕಲ್ಯಾಣದೇತಿ ಸತತಂ ಸ್ಮರನ್ಮಂತ್ರಮಿಮಂ ಜಪನ್ ॥೧೧೭॥

ಅದೂರಗ್ರಾಮಮಾಶ್ರಿತ್ಯ ಪ್ರಥಮೇ ದಿವಸೇ ಶುಚಿಃ ।
ಪುನಃ ಶೈವವರಾನ್ಸಮ್ಯಗ್ಭೋಜಯಿತ್ವಾ ಯಥಾವಿಧಿ ॥೧೧೮॥

ಭೋಕ್ತವ್ಯಂ ನಿಯಮೇನೈವ ಸ್ವೇನ ಶಿಷ್ಟಂ ತತಃ ಪರಂ ।
ಸಾಯಮಭ್ಯರ್ಚ್ಯ ವಿಧಿನಾ ಶಿವಂ ಸಂಧ್ಯಾದಿಪೂರ್ವಕಂ ॥೧೧೯॥

ಯಾಮಮಾತ್ರಂ ಶಿವಧ್ಯಾನಂ ಕರ್ತವ್ಯಂ ವಿಧಿಪೂರ್ವಕಂ ।
ತತೋ ನಿದ್ರಾಂ ಯಥಾಯೋಗ್ಯಂ ಕರ್ತವ್ಯಾ ವಿಧಿಪೂರ್ವಕಾಂ ॥೧೨೦॥

ಸ್ವಗೃಹದಿಂದ ಹೊರಡುವಾಗ ನಿರಾಹಾರವ್ರತವನ್ನು ಕೈಗೊಂಡು ಮೌನದಿಂದಿರಬೇಕು. ಪಾದರಕ್ಷೆಯನ್ನಾಗಲಿ, ಅಶ್ವಾದಿ ವಾಹನಗಳನ್ನಾಗಲಿ ತೆಗೆದುಕೊಳ್ಳದೇ, ಕಾಲ್ನಡಗೆಯಿಂದಲೇ ಹೋಗಬೇಕು. ದಾರಿಯಲ್ಲಿ ಹೋಗುವಾಗ ಕ್ರಿಮಿಕೀಟಗಳಿಗೆ ಯಾವ ವಿಧವಾದ ನೋವನ್ನೂ ಉಂಟುಮಾಡಬಾರದು. ಗೌರೀಪತೇ, ಶ್ರೀಮನ್ ವಿಶ್ವನಾಥ, ಸದಾಶಿವ, ಕಲ್ಯಾಣಪ್ರದ ಎಂದು ಶಿವನಾಮಗಳನ್ನು ನಿರಂತರವೂ ಸ್ಮರಿಸುತ್ತಾ ಶಿವಮಂತ್ರವನ್ನು ಜಪಿಸುತ್ತಾ ಮುಂದೆರಳಬೇಕು. ||೧೧೬-೧೧೭||

ಮೊದಲನೆಯ ದಿವಸದಲ್ಲಿ ಶುಚಿರ್ಭೂತನಾಗಿ, ಸ್ವಗೃಹಕ್ಕೆ ಸಮೀಪದಲ್ಲಿರುವ ಒಂದಾನೊಂದು ಗ್ರಾಮಕ್ಕೆ ಹೋಗಿ ಅಲ್ಲಿ ವಿಧಿಪೂರ್ವಕವಾಗಿ ಈಶ್ವರಭಕ್ತರಿಗೆ ಭೋಜನವನ್ನು ಮಾಡಿಸಿ, ಅವರು ಊಟಮಾಡಿ ಉಳಿದ ಭಾಗವನ್ನು ತಾನು ನಿಯಮದಿಂದ ಭುಂಜಿಸಬೇಕು. ಬಳಿಕ ಸಂಧ್ಯಾಕಾಲವು ಬರಲು ಶಿವನನ್ನು ವಿಧಿಪೂರ್ವಕವಾಗಿ ಆರಾಧಿಸಿ, ಮುಂದೆ ಹೇಳುವ ನಿಯಮವನ್ನನುಸರಿಸಿ ನಿದ್ದೆ ಹೋಗಬೇಕು. ||೧೧೮-೧೧೯-೧೨೦||

ಸಂಪ್ರೋಕ್ಷ್ಯ ಭುವಮತ್ಯಲ್ಪಾನ್ಕುಶಾಸಾಸ್ತೀರ್ಯ ಸಾದರಂ ।
ಏಕಾಕಿನೈವ ನಿಯಮಾನ್ನಿದ್ರಾ ಕಾರ್ಯಾ ಪ್ರಯತ್ನತಃ ॥೧೨೧॥

ತತಶ್ಚ ಪಶ್ಚಿಮೇ ಯಾಮೇ ನಿದ್ರಾಂ ತ್ಯಕ್ತ್ವಾ ತತಃ ಪರಂ ।
ಕೃತ್ವಾ ಶೌಚಾದಿಕಂ ಸಮ್ಯಗ್ಧ್ಯಾತ್ವಾ ಮಾಂ ಪರಮೇಶ್ವರಂ ॥೧೨೨॥

ಸ್ನಾನಾದಿಕಂ ತತಃ ಕಾರ್ಯಂ ಲಿಂಗಂ ಪೂಜ್ಯ ವಿಶೇಷತಃ ।
ವಿಘ್ನೇಶಂ ಭೈರವಂ ದುರ್ಗಾಂ ಸಂಪೂಜ್ಯ ತದನಂತರಂ ॥೧೨೩॥

ಶೈವಾನ್ಸಂಪೂಜ್ಯ ವಿಧಿವತ್ತತೋ ಗಚ್ಛೇದ್ಯಥಾವಿಧಿ ।
ಧ್ಯಾತ್ವಾ ಹೃದಿ ಶಿವಂ ಸಮ್ಯಗ್ಜಪನ್ಪಂಚಾಕ್ಷರಂ ಶುಭಂ ॥೧೨೪॥

ಕಾಶೀಮಾರ್ಗಗತೈರ್ಮರ್ತ್ಯೈರ್ನ ಗ್ರಾಹ್ಯಂ ಯಾನಪಾದುಕೇ ।
ಯಾತ್ರಾಫಲಚತುರ್ಥಾಂಶೋ ನಷ್ಟಃ ಸ್ಯಾತ್ಪಾದುಕೈರ್ಯತಃ॥೧೨೫॥

ಭೂಮಿಯನ್ನು ಸಂಪ್ರೋಕ್ಷಿಸಿ ಸ್ವಲ್ಪ ದರ್ಭೆಗಳನ್ನು ಹಾಸಿ ಏಕಾಕಿಯಾಗಿ ದರ್ಭಶಯ್ಯೆಯ ಮೇಲೆ ನಿದ್ರಿಸಬೇಕು. ॥೧೨೧॥

ಬಳಿಕ ಅಂತ್ಯಯಾಮದಲ್ಲಿ ನಿದ್ರೆಯಿಂದೆಚ್ಚೆತ್ತು ಶೌಚಾದಿಗಳನ್ನು ನೆರವೇರಿಸಿ, ಪರಮೇಶ್ವರನಾದ ನನ್ನನ್ನು ಧ್ಯಾನಿಸಿ, ಸ್ನಾನಮಾಡಿ ಶಿವಲಿಂಗವನ್ನು ಪೂಜಿಸ ಬೇಕು. ಆದಾದ ಬಳಿಕ ವಿಘ್ನೇಶ, ಭೈರವ, ದುರ್ಗಿ ಇವರನ್ನು ಪೂಜಿಸಿ ಈಶ್ವರ ಭಕ್ತರಾದ ಜನರನ್ನು ವಿಧಿವತ್ತಾಗಿ ಆರಾಧಿಸಿ, ಶಿವನನ್ನು ಮನದಲ್ಲಿ ನೆನೆಯುತ್ತಾ, ಶಿವಪಂಚಾಕ್ಷರಿಯನ್ನು ಜಪಿಸುತ್ತಾ ಅಲ್ಲಿಂದ ಮುಂದೆರಳಬೇಕು. ॥೧೨೨-೧೨೩-೧೨೪॥

ಕಾಶೀಕ್ಷೇತ್ರಕ್ಕೆ ಹೊರಟ ಜನರು ಮಾರ್ಗದಲ್ಲಿ ಕುದುರೆ, ಎತ್ತಿನಗಾಡಿ, ಮೇನಾ ಮುಂತಾದ ವಾಹನಗಳನ್ನೇರಿ ಮಾರ್ಗವನ್ನತಿಕ್ರಮಿಸಬಾರದು. ಪಾದುಕೆ ಗಳನ್ನು ಧರಿಸಬಾರದು. ಪಾದುಕೆಗಳನ್ನು ಧರಿಸಿ ಮಾರ್ಗವನ್ನತಿಕ್ರಮಿಸಿದರೆ ಯಾತ್ರೆಯಿಂದ ಸಂಭವಿಸಬಹುದಾದ ಫಲದಲ್ಲಿ ನಾಲ್ಕನೆಯ ಒಂದು ಅಂಶವು ನಷ್ಟ ವಾಗುವುದು. ॥೧೨೫॥

ಅರ್ಧಂ ನಶ್ಯತ್ಯಶ್ವಯಾನಾದ್ಯಾತ್ರಾಫಲಮನುತ್ತಮಂ ।
ಕಾಷ್ಠಖಟ್ವಾಧಿಯಾನೈಸ್ತು ಸರ್ವಂ ನಶ್ಯತಿ ತತ್ಫಲಂ ॥೧೨೬॥

ಮಾರ್ಗೇ ವಿಲೋಕ್ಯ ಕೀಟಾದೀನ್ಗಂತವ್ಯಂ ಪಥಿ ಯತ್ನತಃ ।
ನೋ ಚೇದ್ಯಾತ್ರಾಫಲಂ ನ್ಯೂನಂ ಭವಿಷ್ಯತಿ ನ ಸಂಶಯಃ ॥೧೨೭॥

ಯಾತ್ರಾಕಾಲೇ ವಿಶೇಷೇಣ ಯಸ್ಯ ಕಸ್ಯಾಪಿ ದೇಹಿನಃ ।
ನ ದೇಯಾನ್ಯೇವ ದುಃಖಾನಿ ವಿಚಾರ್ಯ ವಿಧಿಮಾದರಾತ್ ॥೧೨೮॥

ಮೌನಮೇವ ಸದಾ ಕಾರ್ಯಂ ಕರ್ತವ್ಯಂ ಶಿವಚಿಂತನಂ ।
ಅನೃತಂ ನೈವ ವಕ್ತವ್ಯಂ ಕದಾಚಿದಪಿ ಸರ್ವಥಾ ॥೧೨೯॥

ನಿಂದಾನ್ಯಸ್ಯ ನ ಕರ್ತವ್ಯಾ ನ ಶ್ರೋತವ್ಯಾ ಚ ಸರ್ವಥಾ ।
ನಗ್ನಾಂ ಸ್ತ್ರಿಯಂ ನ ವೀಕ್ಷೇತ ಸ್ವೀಯಾಮಪಿ ಕದಾಚನ ॥೧೩೦॥

ಕುದುರೆಯನ್ನೇರಿ ಹೋಗುವುದರಿಂದ ಯಾತ್ರಾಫಲದಲ್ಲಿ ಅರ್ಧಫಲವು ವ್ಯರ್ಥವಾಗುವುದು. ಮೇನಾ, ಪಲ್ಲಕ್ಕಿ ಮುಂತಾದುವುಗಳನ್ನೇರಿ ನಡೆದರೆ ಯಾತ್ರೆಯಿಂದ ಸಂಭವಿಸಬಹುದಾದ ಸಂಪೂರ್ಣಫಲವೂ ನಷ್ಟವಾಗುವುದು. ॥೧೨೬॥

ಮಾರ್ಗವನ್ನು ಚೆನ್ನಾಗಿ ಪರೀಕ್ಷಿಸಿ ಕ್ರಿಮಿಕೀಟಾದಿಗಳಿಗೆ ಯಾವ ಬಾಧೆಯೂ ಉಂಟಾಗದಂತೆ ಜಾಗರೂಕತೆಯಿಂದ ಮಾರ್ಗವನ್ನತಿಕ್ರಮಿಸಬೇಕು. ಹಾಗಿಲ್ಲದಿದ್ದರೆ ಯಾತ್ರಾಫಲವು ಸಂಪೂರ್ಣವಾಗಿ ಲಭಿಸಲಾರದು. ॥೧೨೭॥

ಮುಖ್ಯವಾಗಿ ಯಾತ್ರಿಕರು ಯಾತ್ರಾವಿಧಿಯನ್ನು ಚೆನ್ನಾಗಿ ಗಮನಿಸಿ ಯಾತ್ರಾಕಾಲದಲ್ಲಿ ಯಾವ ಪ್ರಾಣಿಗಳ ಮನಸ್ಸನ್ನೂ ನೋಯಿಸದಂತೆ ಮುಂಜಾಗ್ರತೆಯಿಂದಿರಬೇಕು. ॥೧೨೮॥

ನಿರಂತರವೂ ಮೌನದಿಂದಿದ್ದು ಈಶ್ವರನನ್ನು ಧ್ಯಾನಿಸುತ್ತಿರಬೇಕು. ಯಾವ ವಿಧದಿಂದಲೂ ಸುಳ್ಳನೆಂದಿಗೂ ನುಡಿಯಬಾರದು. ॥೧೨೯॥

ಪರರನ್ನು ನಿಂದಿಸಬಾರದು, ಪರನಿಂದೆಯನ್ನು ಕೇಳಲೂ ಬಾರದು, ನಗ್ನ (ಬೆತ್ತಲೆಯಾಗಿರುವ ಸ್ತ್ರೀ) ಸ್ತ್ರೀಯನ್ನು ಎಂದಿಗೂ ನೋಡಬಾರದು. ನಗ್ನಳಾದ ಕಾಲದಲ್ಲಿ ತನ್ನ ಪತ್ನಿಯನ್ನೂ ಸಹ ನೋಡಬಾರದು. ॥೧೩೦॥

ಋತುಕಾಲೇऽಪಿ ಸಂಪ್ರಾಪ್ತೇ ಸ್ವಸ್ತ್ರಿಯಾ ಸಹ ಸರ್ವಥಾ ।
ನೈಕತ್ರ ಶಯನಂ ಕಾರ್ಯಂ ಬ್ರಹ್ಮಚರ್ಯವ್ರತಂ ಚರೇತ್ ॥೧೩೧॥

ಪ್ರತಿಗ್ರಹೋ ನ ಕರ್ತವ್ಯೋ ಯಾತ್ರಾಕಾಲೇಷು ಸರ್ವಥಾ ।
ನಾಶೈವೈರಭಿಭಾಷೇತ ಪ್ರಮಾದೇನಾಪಿ ಸರ್ವಥಾ ॥೧೩೨॥

ಅಶೈವಪತಿತವ್ರಾತ್ಯಚಂಡಾಲಮ್ಲೇಂಛಪುಲ್ಕಸೈಃ ।
ಕದಾಚಿದಪಿ ಯಾತ್ರಾಯಾಂ ನಾಭಿಭಾಷೇತ ಸರ್ವಥಾ ॥೧೩೩॥

ಕದಾಚಿಚ್ಚೇತ್ಪ್ರಮಾದೇನ ಯದಿ ದೃಷ್ಟ್ವಾ ನರಾಧಮಾಃ ।
ತದಾ ಶಿವ ಶಿವೇತ್ಯುಕ್ತ್ವಾ ಭಾನುಂ ಪಶ್ಯೇದ್ಯಥಾವಿಧಿ ॥೧೩೪॥

ಪ್ರಮಾದೇನ ಕದಾಚಿತ್ತೈಃ ಸ್ಪೃಷ್ಟಶ್ಚೇದ್ವಸನಾನ್ವಿತಂ ।
ಸ್ನಾನಂ ಕಾರ್ಯಂ ವಿಧಾನೇನ ಮೃತ್ತಿಕಾಸ್ನಾನಪೂರ್ವಕಂ ॥೧೩೫॥

---

[1] ಋತುಕಾಲದಲ್ಲಿಯೂ ಸಹ ಸ್ತ್ರೀಸಂಗವನ್ನು ಬೆಳೆಸಬಾರದು, ಒಂದು ಕಡೆ ಮಲಗಬಾರದು. ಇಬ್ಬರೂ ಬ್ರಹ್ಮಚರ್ಯದಿಂದಲೇ ಇರಬೇಕು. ||೧೩೧||

ಯಾತ್ರಾಕಾಲಗಳಲ್ಲಿ ಯಾವ ವಿಧದಿಂದಲೂ ಏನನ್ನೂ ಪ್ರತಿಗ್ರಹಿಸಬಾರದು. ಶಿವದ್ವೇಷಿಗಳೊಂದಿಗೆ ಆಕಸ್ಮಾತ್ತಾಗಿಯಾದರೂ ಸಂಭಾಷಣೆಯನ್ನು ಮಾಡಬಾರದು. ||೧೩೨||

ಯಾತ್ರಾಕಾಲದಲ್ಲಿ ಶಿವದ್ವೇಷಿಗಳೂ, ಪತಿತರೂ, ಅನಾಚಾರಿಗಳೂ, ಚಂಡಾಲರೂ, ಮ್ಲೇಂಛರೂ, ವ್ಯಾಧರೂ, ಕಟುಕರು ಇವರೊಂದಿಗೆ ಎಂದಿಗೂ ಸಂಭಾಷಿಸಬಾರದು. ||೧೩೩||

ಒಂದು ವೇಳೆ ಅಜಾಗರೂಕತೆಯಿಂದ ಮ್ಲೇಂಛರೇ ಮುಂತಾದ ಹೀನ ಜಾತಿಯ ಮನುಷ್ಯರು ದೃಷ್ಟಿಗೋಚರರಾದರೆ ಆಗ ಶಿವ ಶಿವ ಎಂದು ಶಿವನನ್ನು ಸ್ಮರಿಸುತ್ತಾ ಸೂರ್ಯನನ್ನು ನೋಡಬೇಕು. ||೧೩೪||

ಒಂದು ವೇಳೆ ಆಕಸ್ಮಾತ್ತಾಗಿ ಅವರ ಅಂಗಸ್ಪರ್ಶ ಉಂಟಾದರೆ ಆಗ

---

1 ಸ್ತ್ರೀಯು ಋತುವಾದ ನಾಲ್ಕನೆಯ ದಿನದಿಂದ ಮೊದಲುಗೊಂಡು ಹದಿನಾರು ದಿನಗಳ ವರೆಗೆ ಇರುವ ಕಾಲಕ್ಕೆ ಋತುಕಾಲವೆಂದು ವ್ಯವಹರಿಸಲ್ಪಡುವುದು. ಆ ದಿನದಲ್ಲಿ, ಪುರುಷನು ಸ್ತ್ರೀಸಂಗವನ್ನು ಆಚರಿಸಬೇಕೆಂದು ವಿಧಿಯಿರುವುದು. ಆದರೆ ಯಾತ್ರಿಕರು ಮಾತ್ರ ಆ ನಿಯಮವನ್ನು ಸರ್ವಥಾ ವರ್ಜಿಸಬೇಕು.

ರುದ್ರಾಧ್ಯಾಯಸ್ಯ ಚಾವೃತ್ತಿಃ ಕರ್ತವ್ಯಾ ವಿಧಿಪೂರ್ವಕಂ ।
ತತೋ ರುದ್ರಾಕ್ಷಭಸ್ಮಾದಿ ಧೃತ್ವಾ ಗಚ್ಛೇದ್ಯಥಾ ಸುಖಂ ॥೧೩೬॥

ಏವಂ ಪ್ರಯತ್ನತೋ ನಿತ್ಯಂ ಗಂತವ್ಯಂ ವಿಧಿಪೂರ್ವಕಂ ।
ಯಾತ್ರಾಫಲೇಪ್ಸುಭಿರ್ಮರ್ತ್ಯೈಃ ಶೈವೈಃ ಶಿವಪರಾಯಣೈಃ ॥೧೩೭॥

ಕಾಲತ್ರಯೇಽಪಿ ಕರ್ತವ್ಯಂ ಶಿವಲಿಂಗಸ್ಯ ಪೂಜನಂ ।
ಮಧ್ಯಾಹ್ನೇ ಶಿವತುಷ್ಟ್ಯರ್ಥಂ ಭೋಜನೀಯಾಃ ಶಿವಾರ್ಚಕಾಃ ॥೧೩೮॥

ತತಃ ಶಿವಕಥಾಃ ಶ್ರಾವ್ಯಾಃ ಶ್ರೋತವ್ಯಾಃ ಪಾಪನಾಶಕಾಃ ।
ಆಸಾಯಮತಿಯತ್ನೇನ ತತಃ ಸಂಧ್ಯಾ ಶಿವಾರ್ಚನಂ ॥೧೩೯॥

ಏವಂ ಯಾತ್ರಾರತೈಃ ಶೈವೈರ್ಮದ್ಭಕ್ತೈಸ್ತು ಪದೇ ಪದೇ ।
ಅಶ್ವಮೇಧಫಲಂ ಪೂರ್ಣಂ ಪ್ರಾಪ್ಯತೇ ನಾತ್ರ ಸಂಶಯಃ ॥೧೪೦॥

ಕೂಡಲೇ ಮೃತ್ತಿಕಾಸ್ನಾನವನ್ನಾಚರಿಸಿ ಬಳಿಕ ಸಚೇಲ (ಬಟ್ಟೆಗಳ ಸಹಿತ) ಸ್ನಾನವನ್ನಾಚರಿಸಬೇಕು. ||೧೩೫||

ತರುವಾಯ ವಿಧಿವತ್ತಾಗಿ ರುದ್ರಾಧ್ಯಾಯವನ್ನು ಆವೃತ್ತಿಯಿಂದ ಪಠಿಸಬೇಕು. ಬಳಿಕ ರುದ್ರಾಕ್ಷ, ಭಸ್ಮ ಇವುಗಳನ್ನು ಧರಿಸಿ ಅಲ್ಲಿಂದ ಮುಂದೆರಳಬೇಕು. ||೧೩೬||

ಈರೀತಿಯಲ್ಲಿ ಕಾಶೀಯಾತ್ರೆಯ ಫಲವನ್ನಪೇಕ್ಷಿಸುವ ಈಶ್ವರ ಭಕ್ತರು ಕ್ರಮವರಿತು ಆಯಾ ನಿಯಮಗಳನ್ನು ಅನುಸರಿಸಿಯೇ ಯಾತ್ರೆಗೆ ಹೊರಡಬೇಕು. ||೧೩೭||

ತ್ರಿಕಾಲಗಳಲ್ಲಿಯೂ ಶಿವಲಿಂಗವನ್ನು ಪೂಜಿಸಬೇಕು. ಮಧ್ಯಾಹ್ನಕಾಲದಲ್ಲಿ ಈಶ್ವರನನ್ನು ತೃಪ್ತಿಗೊಳಿಸುವುದಕ್ಕೋಸ್ಕರ ಈಶ್ವರಾರಾಧಕರಾದ ಬ್ರಾಹ್ಮಣರನ್ನು ಭೋಜನದಿಂದ ತೃಪ್ತಿಪಡಿಸಬೇಕು. ||೧೩೮||

ಬಳಿಕ ಸಾಯಂಕಾಲವು ಬರುವವರೆಗೂ, ಕರ್ಣಮಧುರವೂ ಪಾಪನಾಶಕವೂ ಆದ ಶಿವಕಥೆಗಳನ್ನು ಕೇಳಬೇಕು. ಸಾಯಂಕಾಲವು ಸಮೀಪಿಸಿದೊಡನೆಯೇ ಸಂಧ್ಯಾವಂದನೆಯನ್ನು ನೆರವೇರಿಸಿ ಶಿವನನ್ನು ಆರಾಧಿಸಬೇಕು. ||೧೩೯||

ಹಿಂದೆ ಹೇಳಿದ ನಿಯಮಗಳನ್ನನುಸರಿಸಿ ಭಕ್ತರು ಯಾತ್ರೆಯನ್ನು ಕೈಗೊಂಡರೆ ಅವರಿಗೆ ಅಶ್ವಮೇಧ ಯಾಗದ ಅನುಷ್ಠಾನದಿಂದ ಉಂಟಾಗಬಹುದಾದ

ತಥಾ ಯಾತ್ರಾಪರಂ ಶೈವಂ ದೃಷ್ಟ್ವಾ ತತ್ಪಿತರಃ ಶಿವೇ ।
ಅತ್ಯಂತಂ ಮೋದಮಾನಾಸ್ತೇ ನೃತ್ಯಂ ಕುರ್ವಂತಿ ಯತ್ನತಃ ॥೧೪೧॥

ನರಕೇ ಪತಿತಾನಸ್ಮಾನುದ್ಧರಿಷ್ಯತ್ಯಯಂ ಸುತಃ ।
ಕಾಶ್ಯಾಂ ಶ್ರಾದ್ಧಂ ವಿಶೇಷೇಣ ಕರಿಷ್ಯತಿ ನ ಸಂಶಯಃ ॥೧೪೨॥

ಜ್ಞಾನವಾಪೀಜಲಂ ರಮ್ಯಂ ಧಿಕ್ಕೃತಾಮೃತಮುತ್ತಮಂ ।
ದಾಸ್ಯತ್ಯಸ್ಮಭ್ಯಮಮಲಮಯಂ ನಾಸ್ತ್ಯತ್ರ ಸಂಶಯಃ ॥೧೪೩॥

ಜ್ಞಾನವಾಪೀತಟೇ ರಮ್ಯೇ ಸೋಽಯಮಸ್ಮಭ್ಯಮಾದರಾತ್ ।
ಶ್ರಾದ್ಧಂ ಕೃತ್ವಾ ವಿಧಾನೇನ ಪಿಂಡದಾನಂ ಕರಿಷ್ಯತಿ ॥೧೪೪॥

ಮಣಿಕರ್ಣೀಜಲೇ ಸ್ನಾತ್ವಾ ಶ್ರಾದ್ಧಂ ಕೃತ್ವಾ ವಿಧಾನತಃ ।
ಪಿಂಡದಾನಮಯಂ ಸಮ್ಯಕ್ಕರಿಷ್ಯತಿ ನ ಸಂಶಯಃ ॥೧೪೫॥

ಪುಣ್ಯಕ್ಕೆ ಸಮಾನವಾದ ಪುಣ್ಯವು ಲಭಿಸುವುದು. ಇದರಲ್ಲಿ ಸಂಶಯಪಡಬೇಕಾದುದಿಲ್ಲ. ॥೧೪೦॥

ದೇವಿ, ಈರೀತಿಯಲ್ಲಿ ಯಾತ್ರಾಸಕ್ತನಾದ ನನ್ನ ಆ ಭಕ್ತನನ್ನು ನೋಡಿ ಅವನ ಪಿತೃಗಳು ಅತ್ಯಂತ ಸಂತೋಷಗೊಂಡು ನೃತ್ಯವನ್ನಭಿನಯಿಸುವರು. ॥೧೪೧॥

ಆಗ ಅವರು ಹೀಗೆನ್ನುವರು.—ನಮ್ಮ ಈ ಪುತ್ರನು ನರಕದಲ್ಲಿ ಬಿದ್ದಿರುವ ನಮ್ಮನ್ನು ಉದ್ಧರಿಸಲಿರುವನು. ಅವನು ಕಾಶೀಕ್ಷೇತ್ರದಲ್ಲಿ ಶ್ರಾದ್ಧವನ್ನಾಚರಿಸುವನು. ಇದರಲ್ಲಿ ಸಂಶಯವಿರುವುದಿಲ್ಲ. ॥೧೪೨॥

ಈತನು ಮನೋಹರವೂ, ರುಚಿಯಲ್ಲಿ ಅಮೃತವನ್ನು ಮೀರಿಸುವುದೂ ಆದ ಜ್ಞಾನವಾಪಿಯ ಜಲವನ್ನು ನಮಗೆ ಅರ್ಪಿಸುವನು. ॥೧೪೩॥

ಈತನು ಮನೋಹರವಾದ ಜ್ಞಾನವಾಪಿಯ ದಡದಲ್ಲಿ ಪಿತೃಶ್ರಾದ್ಧವನ್ನು ನೆರವೇರಿಸಿ ನಮಗೆ ಅತ್ಯಾದರದಿಂದ ಪಿಂಡದಾನ ಮಾಡುವನು. ॥೧೪೪॥

ಮಣಿಕರ್ಣಿಯ ಜಲದಲ್ಲಿ ಸ್ನಾನವನ್ನಾಚರಿಸಿ, ವಿಧಿಪೂರ್ವಕವಾಗಿ ಶ್ರಾದ್ಧವನ್ನು ನೆರವೇರಿಸಿ ಶ್ರದ್ಧೆಯಿಂದ ನಮಗೆ ಪಿಂಡದಾನವನ್ನು ಮಾಡುವನು. ॥೧೪೫॥

ವೀರೇಶಕುಂಡೇ ವಿಮಲೇ ಯಾತನಾಭಯನಾಶಕೇ ।
ಶ್ರಾದ್ಧಂ ಕರಿಷ್ಯತಿ ಪ್ರೀತ್ಯಾ ತರ್ಪಣಂ ಚ ಕರಿಷ್ಯತಿ ॥೧೪೬॥

ಶ್ರೀಮತ್ಪಶುಪತೀಶಸ್ಯ ಕುಂಡೇ ಸ್ನಾತ್ವಾ ಯಥಾವಿಧಿ ।
ಶ್ರಾದ್ಧಂ ಕೃತ್ವಾ ವಿಧಾನೇನ ಪಿಂಡದಾನಂ ಕರಿಷ್ಯತಿ ॥೧೪೭॥

ಸ್ನಾತ್ವಾಯಂ ಶಿವಗಂಗಾಯಾಂ ವಂಶೋದ್ಧಾರಕರಃ ಸುತಃ ।
ಶ್ರಾದ್ಧಂ ಕೃತ್ವಾ ವಿಧಾನೇನ ಪಿಂಡದಾನಂ ಕರಿಷ್ಯತಿ ॥೧೪೮॥

ಅಯಂ ಕರ್ಕೋಟಕೇ ಕುಂಡೇ ವಿಷದುಃಖವಿನಾಶಕೇ ।
ಸ್ನಾತ್ವಾ ಶ್ರಾದ್ಧಂ ಪಿಂಡದಾನಂ ಕರಿಷ್ಯತಿ ನ ಸಂಶಯಃ ॥೧೪೯॥

ಶ್ರೀಮದೋಂಕಾರಕುಂಡೇಽಪಿ ಸ್ನಾತ್ವಾ ಸ್ನಾನಂ ಕರಿಷ್ಯತಿ ।
ಪಿಂಡದಾನಮಯಂ ಕೃಷ್ಣತಿಲೈಃ ಸಾರ್ಧಂ ಕರಿಷ್ಯತಿ ॥೧೫೦॥

ಭೈರವನ ಯಾತನೆಯ ಭಯವನ್ನು ಹೋಗಲಾಡಿಸುವ ಪರಿಶುದ್ಧವಾದ ವೀರೇಶಕುಂಡದಲ್ಲಿ ಶ್ರಾದ್ಧವನ್ನಾಚರಿಸಿ ಪ್ರೀತಿಯಿಂದ ತರ್ಪಣವನ್ನು ನೆರವೇರಿಸುವನು. ॥೧೪೬॥

ಪಶುಪತೀಶನ ಕುಂಡದಲ್ಲಿ ಸ್ನಾನವನ್ನು ನೆರವೇರಿಸಿ ವಿಧಿಪೂರ್ವಕವಾಗಿ ಶ್ರಾದ್ಧಕರ್ಮವನ್ನು ಮಾಡಿ ಪಿಂಡದಾನವನ್ನು ಮಾಡುವನು. ॥೧೪೭॥

ತನ್ನ ವಂಶವನ್ನು ಉದ್ಧರಿಸುವ ಈತನೂ ಶಿವಗಂಗೆಯಲ್ಲಿ ಸ್ನಾನವನ್ನು ಮಾಡಿ, ಶ್ರಾದ್ಧಕರ್ಮವನ್ನು ನೆರವೇರಿಸಿ ವಿಧಿಪೂರ್ವಕವಾಗಿ ಪಿಂಡದಾನವನ್ನು ಮಾಡುವನು. ॥೧೪೮॥

ಈತನು ವಿಷಬಾಧೆಯನ್ನು ಹೋಗಲಾಡಿಸುವ ಕರ್ಕೋಟಕ ಕುಂಡದಲ್ಲಿ ಸ್ನಾನವನ್ನಾಚರಿಸಿ ಶ್ರಾದ್ಧಕರ್ಮವನ್ನೂ ಮತ್ತು ಪಿಂಡದಾನವನ್ನೂ ನೆರವೇರಿಸುವನು. ॥೧೪೯॥

ಓಂಕಾರಕುಂಡದಲ್ಲಿಯೂ ಸ್ನಾನಮಾಡಿ ಕೃಷ್ಣತಿಲಗಳೊಂದಿಗೆ (ಕರಿಯ ಎಳ್ಳು) ಪಿಂಡದಾನವನ್ನು ಮಾಡುವನು. ॥೧೫೦॥

ಕೇದಾರಕುಂಡೇ ವಿಮಲೇ ಪಿಂಡದಾನಂ ಕರಿಷ್ಯತಿ ।
ಜಲಂ ಕೃಷ್ಣತಿಲೈಃ ಸಾರ್ಧಂ ಬಹುದಾಸ್ಯತ್ಯಸಂಶಯಂ ॥೧೫೧॥

ಪದ್ಭ್ಯಾಂ ವಾ ಯಜ್ಜಲಂ ಸ್ಪೃಷ್ಟ್ವಾ ಕಾಶೀಸ್ಥಮಘನಾಶಕಂ ।
ದಾಸ್ಯತ್ಯಕ್ಷಯ್ಯಮಮಲಂ ದುಃಖಂ ತ್ಯಾಜ್ಯಂ ತತಃ ಪರಂ ॥೧೫೨॥

ಕಾಶ್ಯಾಂ ತು ಲೀಲಯಾ ವಾಯಂ ಮೃತ್ಪಿಂಡಂ ಚ ಕದಾಚನ ।
ದಾಸ್ಯತ್ಯೇವ ನ ಸಂದೇಹಃ ಪಿತೄನುದ್ದಿಶ್ಯ ದುಃಖಹಂ ॥೧೫೩॥

ಅಸ್ಮದ್ಗೋತ್ರಸಮುತ್ಪನ್ನಃ ಕಾಶೀಂ ಯಾಸ್ಯತ್ಯಯಂ ಮುದಾ ।
ಅಸ್ಮಾಭಿಃ ಸಾವಧಾನೇನ ರಕ್ಷಣೀಯಃ ಪ್ರಯತ್ನತಃ ॥೧೫೪॥

ಏತಸ್ಯ ಕಂಟಕಾದಿಭ್ಯೋ ಯಥಾ ದುಃಖಂ ನ ಜಾಯತೇ ।
ತಥಾ ಪ್ರಯತ್ನತಃ ಸಮ್ಯಗ್ರಕ್ಷಣೀಯೋಽಯಮಾದರಾತ್ ॥೧೫೫॥

ಅತ್ಯಲ್ಪೈರೇವ ದಿವಸೈರಘೋರನರಕಾದಯಂ ।
ಉದ್ಧರಿಷ್ಯತಿ ದತ್ತ್ವಾಸ್ಮಾನ್ ಕಾಶೀಸ್ಥಂ ಜಲಮೇವ ವಾ ॥೧೫೬॥

ಕೇದಾರೇಶ್ವರನ ಕುಂಡದಲ್ಲಿ ಪಿಂಡದಾನವನ್ನು ಮಾಡುವನು. ತಿಲಗಳೊಂದಿಗೆ ಜಲವನ್ನು ಕೊಡುವನು. ॥೧೫೧॥

ಕಾಶೀಕ್ಷೇತ್ರದಲ್ಲಿರುವ ಪಾಪನಾಶಕವಾದ ಜಲವನ್ನು ತನ್ನ ಪಾದಗಳಿಂದ ಸ್ಪರ್ಶಿಸಿದರೂ ಅದರಿಂದ ನಮಗೆ ಮುಕ್ತಿಯನ್ನುಂಟುಮಾಡುವನು. ಬಳಿಕ ನಮ್ಮ ದುಃಖವು ದೂರವಾಗುವುದು. ॥೧೫೨॥

ಇವನು ಕಾಶೀಕ್ಷೇತ್ರದಲ್ಲಿ ಪಿತೃಗಳಿಗೆ ಮೃತ್ಪಿಂಡವನ್ನು ದಾನಮಾಡುವನು. ಅದರಿಂದ ನಮ್ಮ ದುಃಖವು ಕ್ಷಯಿಸುವುದು. ॥೧೫೩॥

ನಮ್ಮ ಗೋತ್ರದಲ್ಲಿ ಜನಿಸಿದ ಈತನು ಸಂತೋಷದಿಂದ ಕಾಶೀಯಾತ್ರೆಗೆ ತೆರಳುವನು. ನಾವು ಈತನನ್ನು ಬಹು ಜಾಗರೂಕತೆಯಿಂದ ರಕ್ಷಿಸಬೇಕು. ॥೧೫೪॥

ಇವನಿಗೆ ಕಲ್ಲು, ಮುಳ್ಳುಗಳ ದೆಸೆಯಿಂದ ಯಾವ ದುಃಖವೂ ಸಂಭವಿಸದಂತೆ ಜಾಗರೂಕತೆಯಿಂದ ಈತನನ್ನು ರಕ್ಷಿಸುವುದು ನಮ್ಮ ಕರ್ತವ್ಯವಾಗಿರುವುದು. ॥೧೫೫॥

ಇವನು ಕೆಲವೇ ದಿವಸಗಳಲ್ಲಿ ನಮಗೆ ಕಾಶೀಕ್ಷೇತ್ರದಲ್ಲಿರುವ ಜಲವನ್ನು ಅರ್ಪಿಸಿ ನಮ್ಮನ್ನು ಭಯಂಕರವಾದ ಈ ನರಕದಿಂದ ಉದ್ಧರಿಸಲಿರುವನು. ॥೧೫೬॥

ಕ್ತೆ ಘೋರಯಾತನಾಭೀತಿರಯಮಸ್ಮತ್ಕುಲೋದ್ಭವಃ ।
ಕಾಶೀಂ ಗಚ್ಛತಿ ತತ್ರಾಯಂ ಸಮ್ಯಕ್ಶ್ರಾದ್ಧಂ ಕರಿಷ್ಯತಿ ॥೧೫೭॥

ನಾಸ್ಮನ್ಮಾರ್ಗೇ ಸಮಾಯಾಂತು ಯಮದೂತಾ ಭಯಾನಕಾಃ ।
ಅಯಂ ಗಚ್ಛತಿ ಮದ್ವಂಶ್ಯಃ ಕಾಶೀಂ ಪ್ರತಿ ಶಿವಾರ್ಚಕಃ ॥೧೫೮॥

ಮಾ ಯಾಂತು ಸರ್ವಥಾಸ್ಮಾಕಂ ನಿಕಟೇ ಯಮಕಿಂಕರಾಃ ।
ಅಯಮಸ್ಮತ್ಕುಲೋದ್ಭೂತಃ ಕಾಶೀಂ ಪ್ರತಿ ಗಮಿಷ್ಯತಿ ॥೧೫೯॥

ಕಸ್ಯಚಿತ್ಪಿತರಃ ಪೂರ್ವಂ ನರಕೇ ಪತಿತಾಃ ಸ್ಥಿತಾಃ ।
ಘೋರಾಣ್ಯನಂತಪಾಪಾನಿ ತೈಃ ಕೃತಾನಿ ಪುರಾ ಬಲಾತ್ ॥೧೬೦॥

ಕೇನಚಿದ್ಗೋಸಹಸ್ರಾಣಿ ನಿಹತಾನಿ ದಿನೇ ದಿನೇ ।
ಗೋಮಾಂಸಮೇವ ಬಹುಧಾ ಭಕ್ಷಿತಂ ತೇನ ಸಾದರಂ ॥೧೬೧॥

ನಮ್ಮ ಕುಲದಲ್ಲಿ ಜನಿಸಿದ ಈ ಸುಪುತ್ರನು ಕಾಶಿಗೆ ಹೋಗಿ ಅಲ್ಲಿ ಪಿತೃಶ್ರಾದ್ಧವನ್ನಾಚರಿಸುವನು. ಹೀಗಿರುತ್ತಿರಲು ನಮಗೆ ಭಯಂಕರವಾದ ನರಕದ ಯಾತನೆಯು ಹೇಗೆ ತಾನೇ ಸಂಭವಿಸೀತು? ॥೧೫೭॥

ನಮ್ಮ ವಂಶದಲ್ಲಿ ಜನಿಸಿದ ಈತನು ಕಾಶೀಕ್ಷೇತ್ರಕ್ಕೆ ಹೋಗುವನಾದುದರಿಂದ ಕ್ರೂರರಾದ ಯಮಕಿಂಕರರು ನಮ್ಮ ಮಾರ್ಗವನ್ನು ತಡೆಯದಿರಲಿ. ॥೧೫೮॥

ನಮ್ಮ ವಂಶದಲ್ಲಿ ಉತ್ಪನ್ನನಾದ ಈತನು ಕಾಶೀಕ್ಷೇತ್ರಕ್ಕೆ ಹೋಗಲಿರುವನು. ಆದುದರಿಂದ ಯಮದೂತರು ಎಂದಿಗೂ ನಮ್ಮ ಹತ್ತಿರ ಬರದಿರಲಿ. ॥೧೫೯॥

ಹಿಂದೆ ಒಂದಾನೊಂದು ಕಾಲದಲ್ಲಿ ಓರ್ವ ಮನುಜನ ಪಿತೃಗಳು, ನರಕದಲ್ಲಿ ಬಿದ್ದು ದಾರುಣವಾದ ಯಾತನೆಯನ್ನನುಭವಿಸಿದ್ದರು. ಅವರು ಹಿಂದಿನಜನ್ಮದಲ್ಲಿ ಬುದ್ಧಿಪೂರ್ವಕವಾಗಿ ಅನೇಕ ಘೋರವಾದಪಾಪಕರ್ಮಗಳನ್ನಾಚರಿಸಿದ್ದರು. ॥೧೬೦॥

ಅದರಲ್ಲಿ ಒಬ್ಬಾನೊಬ್ಬನು ಪ್ರತಿದಿನವೂ ಸಾವಿರಾರು ಗೋವುಗಳನ್ನು ಸಂಹರಿಸುತ್ತಿದ್ದನು. ಮತ್ತು ಅನೇಕವೇಳೆ ಗೋಮಾಂಸವನ್ನೇ ಭಕ್ಷಿಸಿದ್ದನು. ॥೧೬೧॥

ಬ್ರಹ್ಮಹತ್ಯಾಸಹಸ್ರಾಣಿ ಗೋಹತ್ಯಾನಿ ಶತಾನಿ ಚ ।
ಅಶ್ವಹತ್ಯಾಸಹಸ್ರಾಣಿ ಪುರಾ ತೇನ ಕೃತಾನಿ ಹಿ ॥೧೬೨॥

ಯಾವಜ್ಜೀವಂ ಕದಾಚಿದ್ವಾ ತೇನೈವ ಹಿ ದುರಾತ್ಮನಾ ।
ವಿಪ್ರಜನ್ಮಾಪಿ ಸಂಪ್ರಾಪ್ಯ ನ ಸ್ನಾತಂ ತೀರ್ಥವಾರಿಣಾ ॥೧೬೩॥

ಸಂಧ್ಯಾ ನ ವಂದಿತಾ ತೇನ ಸರ್ವಪಾಪಾಪನೋದಿನೀ ।
ನ ಜಪ್ತೈವ ಹಿ ಗಾಯತ್ರೀ ನಿರ್ಮಲಾ ಸಾ ಶಿವಾತ್ಮಿಕಾ ॥೧೬೪॥

ಸರ್ವಪಾಪಹರಂ ಶುದ್ಧಂ ಭಸಿತಂ ಸಿತಮುತ್ತಮಂ ।
ನ ಧೃತಂ ವಿಧಿವತ್ತೇನ ಶಿವಮಂತ್ರಾಭಿಮಂತ್ರಿತಂ ॥೧೬೫॥

ಕ್ಷಣೇ ಕ್ಷಣೇಽಪಿ ರುದ್ರಾಕ್ಷಾಃ ಪೂತಾಃ ಪಾಪವಿನಾಶಕಾಃ ।
ತೇನ ಪಾಪಾತ್ಮನಾ ಶುದ್ಧಾಃ ಲೀಲಯಾಪಿ ನ ತೇ ಧೃತಾಃ ॥೧೬೬॥

ಆದಕ್ಕಿಂತಲೂ ಹಿಂದಿನ ಜನ್ಮದಲ್ಲಿ ಸಾವಿರಾರು ಬ್ರಹ್ಮಹತ್ಯೆಗಳನ್ನೂ ನೂರಾರು ಗೋಹತ್ಯಗಳನ್ನೂ, ಸಾವಿರಾರು ಅಶ್ವಹತ್ಯೆಗಳನ್ನೂ ಮಾಡಿದ್ದನು.॥೧೬೨॥

ಈರೀತಿ ದುರುಳನಾದ ಅವನು ಒಂದಾನೊಂದು ಸಮಯದಲ್ಲಿ ದೈವಯೋಗ ದಿಂದ ಬ್ರಾಹ್ಮಣಜನ್ಮವನ್ನು ತಾಳಿದನು. ಆದರೂ ಅವನು ಯಾವ ತೀರ್ಥಜಲ ದಿಂದಲೂ ಸ್ನಾನವನ್ನಾಚರಿಸಲಿಲ್ಲ. ॥೧೬೩॥

ಅವನು ಸಕಲ ಪಾಪಗಳನ್ನೂ ಹೋಗಲಾಡಿಸುವ ಸಂಧ್ಯೆಯನ್ನು ಒಂದು ಬಾರಿಯಾದರೂ ವಂದಿಸಲಿಲ್ಲ. ಪವಿತ್ರವೂ ಶಿವಸ್ವರೂಪವೂ ಆದ ಗಾಯತ್ರೀಮಂತ್ರ ವನ್ನು ಜಪಿಸಲಿಲ್ಲ. ॥೧೬೪॥

ಒಂದುಬಾರಿಯಾದರೂ ಶಿವಪಂಚಾಕ್ಷರವನ್ನು ಜಪಿಸಿ ಆದರಿಂದ ಪವಿತ್ರವೂ ಶುದ್ಧವೂ ಆದ ವಿಭೂತಿಯನ್ನು ಧರಿಸಲಿಲ್ಲ. ॥೧೬೫॥

ಪಾಪಿಯಾದ ಅವನು ಪ್ರತಿಕ್ಷಣದಲ್ಲಿಯೂ ಪಾಪಗಳನ್ನು ನಾಶಮಾಡಲು ಸಮರ್ಥಗಳಾದ ರುದ್ರಾಕ್ಷಗಳನ್ನು ವಿನೋದಕ್ಕೋಸ್ಕರವಾದರೂ ಧರಿಸಲಿಲ್ಲ. ॥೧೬೬॥

ಸರ್ವಾರ್ಥದಾಯಕಂ ನಿತ್ಯಂ ವಿಹಿತಂ ಲಿಂಗಪೂಜನಂ ।
ಸರ್ವಾಘಶಾಮಕಂ ತೇನ ನ ಕೃತಂ ಚ ಕದಾಚನ ॥೧೬೭॥

ಬಿಲ್ವೈರ್ವನೋಹರೈಃ ಶುದ್ಧೈಃ ಕೋಮಲೈಃ ಶಿವಸಂಮತೈಃ ।
ನ ಕೃತಂ ಪೂಜನಂ ಶಂಭೋಸ್ತೇನೈವ ಹಿ ಕದಾಚನ ॥೧೬೮॥

ಧೂಪದೀಪಾದಿಭಿಃ ಸಮ್ಯಕ್ತೇನ ನಾಭ್ಯರ್ಚಿತಃ ಶಿವಃ ।
ಅರ್ಚಿತಂ ಶಿವಲಿಂಗಂ ಚ ತೇನೈವ ನ ನಿರೀಕ್ಷಿತಂ ॥೧೬೯॥

ಪ್ರಣಾಮೋ ದಂಡವದ್ಭೂಮಾ ಏಕೋ ವಾ ಪಾಪನಾಶಕಃ ।
ಶಿವಾರ್ಥಂ ನ ಕೃತಸ್ತೇನ ಕದಾಚಿದಪಿ ಸಾದರಂ ॥೧೭೦॥

ನೃತ್ಯಪ್ರದಕ್ಷಿಣಾದ್ಯೈಶ್ಚ ಸರ್ವಪಾಪವಿನಾಶಕೈಃ ।
ನಾರಾಧಿತೋ ಮಹಾದೇವಸ್ತೇನೈವ ಹಿ ದುರಾತ್ಮನಾ ॥೧೭೧॥

ವೇದೋಪವಿಣಿತಮಮಲಂ ಮೋಕ್ಷಪ್ರದಮನುತ್ತಮಂ ।
ಶಿವನಾಮ ಶಿವಾಕಾರಂ ನ ಜಪ್ತಂ ತೇನ ಸರ್ವಥಾ ॥೧೭೨॥

ಸಕಲ ಇಷ್ಟಾರ್ಥಗಳನ್ನು ದಯಪಾಲಿಸಲು ಶಕ್ತವೂ ವೇದವಿಹಿತವೂ, ಪಾಪನಾಶಕವೂ ಆದ ಶಿವಲಿಂಗಪೂಜೆಯನ್ನು ಎಂದೂ ಆಚರಿಸಲಿಲ್ಲ. ||೧೬೭||

ಅವನು ಶಿವನಿಗೆ ಪ್ರಿಯವೂ, ಕೋಮಲವೂ ಆದ ಬಿಲ್ವಪತ್ರೆಗಳಿಂದ ಶಿವನನ್ನು ಹೇಗೂ ಪೂಜಿಸಲಿಲ್ಲ. ||೧೬೮||

ಒಂದುಸಾರಿಯೂ ಧೂಪದೀಪಾದಿಗಳಿಂದ ಶಿವನನ್ನು ಅರ್ಚಿಸಲಿಲ್ಲ. ಶಿವ ಲಿಂಗವನ್ನು ನೋಡಲಿಲ್ಲ. ||೧೬೯||

ಅವನು ಶಿವನಿಗೋಸ್ಕರ ಪಾಪನಾಶಕವಾದ ಒಂದೇ ಒಂದು ದಂಡಪ್ರಣಾ ಮವನ್ನಾದರೂ ಕೈಗೊಳ್ಳಲಿಲ್ಲ. ||೧೭೦||

ದುರಾತ್ಮನಾದ ಅವನು ನೃತ್ಯ, ಪ್ರದಕ್ಷಿಣೆ ಇವುಗಳಿಂದ ಶಿವನನ್ನು ಸಂತೋ ಷಗೊಳಿಸಲಿಲ್ಲ. ||೧೭೧||

ವೇದಗೋಚರವೂ, ಮುಕ್ತಿಪ್ರದವೂ, ಶ್ರೇಷ್ಠವೂ, ಶಿವರೂಪವೂ ಆದ ಶಿವ ನಾಮಗಳನ್ನು ಒಮ್ಮೆಯಾದರೂ ಜಪಿಸಲಿಲ್ಲ. ||೧೭೨||

ಸ್ವಹೃತ್ಸಿಂಹಾಸನಾರೂಢಂ ಕೃತ್ವಾ ದೇವೋತ್ತಮಂ ಶಿವಂ ।
ಧ್ಯಾನಂ ಚ ನ ಕೃತಂ ತೇನ ಕದಾಚಿದಪಿ ಸರ್ವಥಾ ॥೧೭೩॥

ದಿವ್ಯಾಃ ಶಿವಕಥಾಃ ಶ್ರಾವ್ಯಾಃ ಸರ್ವಪಾಪವಿನೋದಕಾಃ ।
ತೇನೈವ ಪಾಪರೂಪೇಣ ಕದಾಚಿದಪಿ ನ ಶ್ರುತಾಃ ॥೧೭೪॥

ಶಿವಲಿಂಗಾರ್ಚಕೈಃ ಶುದ್ಧೈಃ ಶೈವೈಃ ಶಿವಪರಾಯಣೈಃ ।
ಪ್ರೀತಿಶ್ಚ ನ ಕೃತಾ ತೇನ ಶೈವಾ ನಾಭ್ಯರ್ಚಿತಾಃ ಪುರಾ ॥೧೭೫॥

ಶಿವತೀರ್ಥಾಟನಂ ಶುದ್ಧಮಘಹಂ ಚ ಕ್ಷಣೇ ಕ್ಷಣೇ ।
ಕದಾಚಿದಪಿ ತೇನೈವ ನ ಕೃತಂ ಪಾಪಕಾರಿಣಾ ॥೧೭೬॥

ಶಿವಾಲಯಸ್ಯ ನಿರ್ಮಾಣಂ ಸ್ವರ್ಗಾದಿಫಲಸಾಧನಂ ।
ನ ಕೃತಂ ತೇನ ದುಷ್ಟೇನ ಧನಿನಾಪಿ ಕದಾಚನ ॥೧೭೭॥

ಈದೃಶಾ ಬಹವೋ ನಷ್ಟಾಸ್ತಸ್ಯೈವ ಪಿತರಃ ಸ್ಥಿತಾಃ ।
ತೇಷಾಮಘೋರನರಕೇ ವಾಸಃ ಕ್ಷಣಮಭೂತ್ಪುರಾ ॥೧೭೮॥

ಒಮ್ಮೆಯಾದರೂ ಪೂಜ್ಯನಾದ ಶಿವನನ್ನು ತನ್ನ ಹೃದಯವೆಂಬ ಸಿಂಹಾಸನದಲ್ಲಿರಿಸಿ ಧ್ಯಾನಿಸಲಿಲ್ಲ. ॥೧೭೩॥

ಪಾಪಿಯಾದ ಅವನು ದಿವ್ಯವೂ ಸುಶ್ರಾವ್ಯವೂ ಆದ ಶಿವಕಥೆಗಳನ್ನು ಎಂದೂ ಕೇಳಲಿಲ್ಲ. ॥೧೭೪॥

ಈಶ್ವರಲಿಂಗಾರಾಧಕರೂ, ಶುದ್ಧರೂ, ಶಿವಧ್ಯಾನಾಸಕ್ತರೂ ಆದ ಈಶ್ವರಭಕ್ತರ ಪ್ರೀತಿಯನ್ನು ಸಂಪಾದಿಸಲಿಲ್ಲ. ಈಶ್ವರನ ಭಕ್ತರನ್ನು ಎಂದೂ ಪೂಜಿಸಲಿಲ್ಲ.॥೧೭೫॥

ಪಾಪಿಯಾದ ಅವನು ಪಾಪನಾಶಕವೂ ಶುದ್ಧವೂ ಆದ ಶಿವತೀರ್ಥಗಳಿಗೆ ಹೋಗಲಿಲ್ಲ. ॥೧೭೬॥

ಆ ದುಷ್ಟನು ತನ್ನ ಬಳಿಯಲ್ಲಿ ಹೇರಳವಾದ ದ್ರವ್ಯವಿದ್ದರೂ ಸಹ ಪರಲೋಕಕ್ಕೆ ಸಾಧನವಾದ ಶಿವದೇವಾಲಯದ ನಿರ್ಮಾಣವನ್ನು ಕೈಗೊಳ್ಳಲಿಲ್ಲ. ॥೧೭೭॥

ಈ ರೀತಿಯಲ್ಲಿ ಅವನಂತೆಯೇ ಅನೇಕ ಪಾಪಕರ್ಮಗಳನ್ನಾಚರಿಸಿ ಅನೇಕ ಮಂದಿ ಅವನ ಪಿತೃಗಳು ನರಕವನ್ನು ಸೇರಿ ಕಷ್ಟಪರಂಪರೆಗಳಿಗೆ ಗುರಿಯಾದರು. ॥೧೭೮॥

ಆಚಂದ್ರಾರ್ಕಮಘೋರೇಷು ನರಕೇಷು ಸದಾ ಸ್ಥಿತಿಃ ।
ಏತದೇಕೈಕಪಾಪೇನ ಯುಕ್ತಾ ಭವತಿ ಸರ್ವಥಾ ॥೧೭೯॥

ತತ್ಕೃತಾನೇಕಪಾಪಾನಾಂ ನಿಷ್ಕೃತಿಃ ಶಾಸ್ತ್ರಮಾರ್ಗತಃ ।
ಅನೇಕಬ್ರಹ್ಮಕಲ್ಪೈರ್ವಾ ನ ಭವಿಷ್ಯತಿ ಸರ್ವಥಾ ॥೧೮೦॥

ಬಹುಕಾಲಮನೇಕೇಷು ನರಕೇಷ್ವೇವ ಸರ್ವಥಾ ।
ವಸತಿಃ ಸಂಮತಾ ತೇಷಾಮಶೈವಾನಾಂ ದುರಾತ್ಮನಾಂ ॥೧೮೧॥

ತತಸ್ತದ್ವಂಶಜಃ ಶುದ್ಧಃ ಶೈವಃ ಶಿವಪರಾಯಣಃ ।
ಅಯಾಚಿತವ್ರತೇನೈವ ವಸನ್ನಿಯಮಪೂರ್ವಕಂ ॥೧೮೨॥

ನ್ಯಾಯೇನಾಲ್ಪಂ ಧನಂ ಶುದ್ಧಂ ಸಂಪಾದ್ಯ ತದನಂತರಂ ।
ಕಾಶೀಂ ಗಂತುಂ ಸಮುದ್ಯುಕ್ತೋ ವ್ರತೀ ನಿಯಮಮಾಸ್ಥಿತಃ॥೧೮೩॥

ಕಾಶೀಮುದ್ದಿಶ್ಯ ನಿಯಮಾತ್ಕ್ರೋಶಾರ್ಧಂ ಸಮುಪಾಗತಃ ।
ತದಾ ತತ್ಪಿತರಃ ಸರ್ವೇ ನರಕೇಭ್ಯೋ ವಿನಿರ್ಗತಾಃ ॥೧೮೪॥

ಅವರು ಆಚರಿಸಿದ ಒಂದೊಂದು ಪಾಪಕ್ಕೆ ಆಚಂದ್ರಾರ್ಕವೂ ನರಕವಾಸವೇ ಉಚಿತವಾಗಿದ್ದಿತು. ॥೧೭೯॥

ಅವರು ಆಚರಿಸಿದ ಅಗಣಿತವಾದ ಪಾಪಕರ್ಮಗಳಿಗೆ ಶಾಸ್ತ್ರಕ್ರಮದಂತೆ ಅಗಣಿತವಾದ ಬ್ರಹ್ಮಕಲ್ಪಗಳು ಕಳೆದರೂ ಪ್ರಾಯಶ್ಚಿತ್ತವಿರುವುದಿಲ್ಲ. ॥೧೮೦॥

ದುಷ್ಟರೂ, ಈಶ್ವರದ್ವೇಷಿಗಳೂ ಆದ ಅವರಿಗೆ ಬಹುಕಾಲದ ವರೆಗೆ ನಾನಾ ವಿಧವಾದ ನರಕಗಳಲ್ಲಿ ವಾಸವು ಉಚಿತವೆನಿಸಿದ್ದಿತು. ॥೧೮೧॥

ಹೀಗಿರುತ್ತಿರಲು ಒಂದಾನೊಂದು ಸಮಯದಲ್ಲಿ ಅವರ ವಂಶದಲ್ಲಿ ಓರ್ವ ಸುಪುತ್ರನು ಜನಿಸಿದನು. ಅವನು ಶಿವನ ಏಕಾಂತಭಕ್ತನೂ ಸದಾ ಶಿವಧ್ಯಾನಾಸಕ್ತನೂ, ಶುದ್ಧನೂ ಆಗಿದ್ದನು. ಅವನು ನಿಯಮದಿಂದ ವಾಸವಾಗಿರುತ್ತಾ ನ್ಯಾಯಮಾರ್ಗದಿಂದ ಸ್ವಲ್ಪ ಹಣವನ್ನು ಸಂಪಾದಿಸಿ ನಿಯಮಬದ್ಧನಾಗಿ ಕಾಶೀಕ್ಷೇತ್ರಕ್ಕೆ ಹೋಗಲುದ್ಯುಕ್ತನಾಗಿ ತನ್ನ ವಾಸಸ್ಥಳದಿಂದ ಅರ್ಧ ಹರಿದಾರಿ ಮಾರ್ಗವನ್ನು ಅತಿಕ್ರಮಿಸಲು, ಅಷ್ಟರೊಳಗೆ ಅವನ ಪಿತೃಗಳು ನರಕದಿಂದ ಹೊರಗೆ ಹೊರಟರು. ॥೧೮೨-೧೮೩-೧೮೪॥

ತೇನ ಕಾಶ್ಯಾಂ ಜ್ಞಾನವಾಪ್ಯಾಂ ಪಿಂಡದಾನಂ ಕೃತಂ ತತಃ ।
ತೇನ ತತ್ಪಿತರಃ ಸರ್ವೇ ಬ್ರಹ್ಮಲೋಕಂ ಯಯುರ್ಮುದಾ ॥೧೮೫॥

ಅಸ್ಮಾಭಿಃ ಸ್ಮರ್ಯತೇ ತತ್ತು ಭವತಾಂ ಕಿಂ ನ ಸಂಸ್ಮೃತಿಃ ।
ಚಿಂತಯಂತು ನ ಸಂಸ್ಕಾರೋ ಲುಪ್ತಃ ಸ ಭವತಾಂ ಧ್ರುವಂ ॥೧೮೬॥

ಯದ್ಯಸ್ಮನ್ನಿಕಟೇ ಯೂಯಮಾಯಾಸ್ಯಂತಿ ತದಾ ಯಮಃ ।
ಭವತಾಂ ರಕ್ಷಣಂ ಶಾಸ್ತಾ ನ ಕರಿಷ್ಯತಿ ಸರ್ವಥಾ ॥೧೮೭॥

ಯಾಂತು ದೂರಂ ಯಮಭಟಾಃ ಸಶಸ್ತ್ರಾಃ ಕ್ರೂರವಿಗ್ರಹಾಃ ।
ಕಾಶೀಂ ಗಚ್ಛತಿ ತೀವ್ರೇಣ ಮದ್ವಂಶ್ಯಃ ಪುರುಷರ್ಷಭಃ ॥೧೮೮॥

ಮಾಯಾಂತು ನಿಕಟೇ ಯೂಯಮಸ್ಮಾಕಂ ಯಮಕಿಂಕರಾಃ ।
ತದ್ವಿಚಾರ್ಯೈವ ಬಹುಧಾ ದೂರಂ ಯಾಂತ್ವತಿಶೀಘ್ರತಃ ॥೧೮೯॥

ಅವನು ಕಾಶೀಕ್ಷೇತ್ರಕ್ಕೆ ಹೋಗಿ ಅಲ್ಲಿ ಜ್ಞಾನವಾಪಿಯೆಂಬ ಸರೋವರದಲ್ಲಿ ಪಿತೃಗಳಿಗೆ ಪಿಂಡವನ್ನು ಸಮರ್ಪಿಸಿದನು. ಅದರಿಂದ ಅವನ ಸಕಲ ಪಿತೃಗಳೂ ಸಹ ಬ್ರಹ್ಮಲೋಕವನ್ನು ಸೇರಿದರು. ||೧೮೫||

ಎಲೈ ಯಮಕಿಂಕರರೇ, ಅದನ್ನು ನಾವು ಇನ್ನೂ ಸ್ಮರಿಸುತ್ತಿರುವೆವು. ಹೀಗಿರುತ್ತಿರಲು ನೀವು ಅದನ್ನೇಕೆ ಸ್ಮರಿಸಲಾರಿರಿ. ನೀವು ಇನ್ನೊಂದು ಬಾರಿ ಯೋಚಿಸಿರಿ. ನಿಮ್ಮ ಆ ಸಂಸ್ಕಾರವು ಇನ್ನೂ ನಾಶವಾಗಿರುವುದಿಲ್ಲ. ||೧೮೬||

ನೀವು ನಮ್ಮನ್ನು ಹಿಂಸೆಗೊಳಿಸಲು ನಮ್ಮ ಸಮೀಪಕ್ಕೆ ಬಂದದ್ದೇ ಆದರೆ ಆಗ ದುಷ್ಟಶಿಕ್ಷಕನಾದ ಯಮನು ನಿಮ್ಮನ್ನು ಎಂದಿಗೂ ರಕ್ಷಿಸಲಾರನು. ||೧೮೭||

ಎಲೈ ಯಮಭಟರೇ, ಶಸ್ತ್ರಧಾರಿಗಳೂ, ಕ್ರೂರರೂ ಆದ ನೀವು ಇಲ್ಲಿಂದ ದೂರಕ್ಕೆ ತೆರಳಿರಿ. ನಮ್ಮ ವಂಶದಲ್ಲಿ ಜನಿಸಿದ ನಮ್ಮ ಸುಪುತ್ರನು ಶೀಘ್ರವಾಗಿ ಕಾಶೀಕ್ಷೇತ್ರಕ್ಕೆ ತೆರಳುತ್ತಿರುವನು. ||೧೮೮||

ಯಮದೂತರೆ, ನೀವು ನಮ್ಮ ಹತ್ತಿರಕ್ಕೇ ಬರಬೇಡಿ. ಇದಕ್ಕೆ ಕಾರಣವನ್ನರಿತು ಬಹುದೂರದಲ್ಲಿಯೇ ನಿಂತು ಮಾತಾಡಿರಿ. ||೧೮೯||

ಮಾ ದರ್ಶಯಂತು ಶಸ್ತ್ರಾಣಿ ತೂಷ್ಣೀಂ ತಿಷ್ಠಂತು ದೂರತಃ ।
ಅಯಂ ಮದ್ವಂಶಜೋ ಧನ್ಯಃ ಕಾಶೀಂ ಪ್ರತಿ ಗಮಿಷ್ಯತಿ ॥೧೯೦॥

ವಕ್ತವ್ಯೋಽದ್ಯ ಯಮೋಽಸ್ಮಾಭಿರ್ಮದ್ವಂಶ್ಯಃ ಶೈವಪುಂಗವಃ ।
ಕಾಶೀಂ ಗಚ್ಛತಿ ಶೀಘ್ರೇಣೇತ್ಯತೋ ಯಾಂತು ಶಿವಪ್ರಿಯಾಃ ॥೧೯೧॥

ಯಮೋಽಪ್ಯಸ್ಮದ್ವಚಃ ಶ್ರುತ್ವಾ ಭೀತಿಂ ಯಾಸ್ಯತ್ಯಸಂಶಯಂ ।
ಭವಂತೋ ದೂರತೋ ಯಾಂತು ಪ್ರಾಣೇಚ್ಛಾ ಯದಿ ವಸ್ತದಾ॥೧೯೨

ಇದಾನೀಮೇವ ಶಮನಃ ಸಮಾಯಾಸ್ಯತಿ ಸಾದರಂ ।
ಪೂಜಾಮಸ್ಮಭ್ಯಮಮಲಃ ಕರಿಷ್ಯತಿ ನ ಸಂಶಯಃ ॥೧೯೩॥

ಶೈವೋ ಮದ್ವಂಶಜಃ ಸಮ್ಯಕ್ಕಾಶೀಂ ಗಚ್ಛತಿ ಸಾದರಂ ।
ಪೂರ್ವಮಸ್ಮತ್ಕೃತಾಃ ಸರ್ವಾಃ ದಗ್ಧಾಃ ಪಾತಕಕೋಟಯಃ ॥೧೯೪॥

ನಿಮ್ಮ ಶಸ್ತ್ರಗಳನ್ನು ನಮಗೆ ತೋರ್ಪಡಿಸದೇ ದೂರದಲ್ಲಿರಿ. ನಮ್ಮ ವಂಶದಲ್ಲಿ ಜನಿಸಿದ ಒಬ್ಬನು ಕಾಶೀಕ್ಷೇತ್ರಕ್ಕೆ ತೆರಳುತ್ತಿರುವನು. ||೧೯೦||

ನಮ್ಮ ವಂಶಜನಾದ ಓರ್ವ ಈಶ್ವರಭಕ್ತಾಗ್ರೇಸರನು ನಮ್ಮನ್ನು ಈ ನರಕದಿಂದ ಉದ್ಧರಿಸುವುದಕ್ಕೋಸ್ಕರ ಶೀಘ್ರದಲ್ಲಿಯೇ ಕಾಶೀಕ್ಷೇತ್ರಕ್ಕೆ ಹೋಗಲಿರುವನು, ಎಂಬುದನ್ನು ನಾವು ಯಮನಿಗೆ ತಿಳಿಸಬೇಕಾಗಿರುವುದು. ಆದುದರಿಂದ ಯಮಕಿಂಕರರಾದ ನೀವು ಇಲ್ಲಿಂದ ತೆರಳಿರಿ. ||೧೯೧||

ನಮ್ಮ ಮಾತನ್ನು ಕೇಳಿ ಯಮನೂ ಸಹ ಭಯಭ್ರಾಂತನಾಗುವನು. ಇದರಲ್ಲಿ ಸಂಶಯವಿಲ್ಲ. ನಿಮಗೆ ಪ್ರಾಣಗಳ ಮೇಲೆ ಆಸೆಯಿದ್ದರೆ ಇಲ್ಲಿಂದ ದೂರಕ್ಕೆ ತೆರಳಿರಿ. ||೧೯೨||

ಇದೀಗಲೇ ಯಮನು ಇಲ್ಲಿಗೆ ಬಂದು ಈ ವಿಷಯವನ್ನರಿತು ನಮ್ಮನ್ನು ಪೂಜಿಸುವನು. ಇದು ನಿಜ. ||೧೯೩||

ನಮ್ಮ ಕುಲದಲ್ಲಿ ಜನಿಸಿದ ಈಶ್ವರಭಕ್ತನು ಕಾಶೀಕ್ಷೇತ್ರಕ್ಕೆ ಹೋಗಲಿರುವನು. ಈ ಹಿಂದೆ ನಾವು ಆಚರಿಸಿದ ಪಾಪರಾಶಿಗಳೆಲ್ಲವೂ ಇದೀಗಲೇ ದಹಿಸಿದುವು. ||೧೯೪||

ಇತಿ ತತ್ಪಿತರಃ ಸರ್ವೇ ವದಂತಃ ಸಾದರಂ ಮುಹುಃ ।
ನೃತ್ಯಂ ಕುರ್ವಂತಿ ಸತತಂ ಪ್ರಸ್ತುವಂತಿ ಚ ಸಾದರಂ ॥೧೯೫॥

ಏವಂ ನಿಯಮಮಾಸಾದ್ಯ ಕಾಶೀಂ ಸಂಪ್ರಾಪ್ಯ ಸಾದರಂ ।
ಕಾಶೀಂ ಸಂಪ್ರಾಪ್ಯ ವಿಧಿವತ್ಕುರ್ಯಾತ್ತದನು ಮುಂಡನಂ ॥೧೯೬॥

ದಂಡಪಾಣಿಪ್ರಸಾದೇನ ತಸ್ಮಿನ್ನೇವ ದಿನೇ ಶುಭೇ ।
ಸ್ನಾನಂ ಕಾರ್ಯಂ ಪ್ರಯತ್ನೇನ ಜ್ಞಾನವಾಪೀತಟೇ ಶುಭೇ ॥೧೯೭॥

ಆಮದ್ರವ್ಯೇಣ ವಿಧಿವಚ್ಛ್ರಾದ್ಧಂ ಕರ್ತವ್ಯಮಾದರಾತ್ ।
ಹಿರಣ್ಯೇನಾಥವಾ ಶ್ರಾದ್ಧಂ ಕುರ್ಯಾತ್ತದ್ದಿನ ಏವ ಹಿ ॥೧೯೮॥

ಹವ್ಯಶ್ಯಾಮಾಕನೀವಾರಯವಚೂರ್ಣಾದಿಭಿಃ ಕ್ರಮಾತ್ ।
ಪಿಂಡದಾನಂ ಯಥಾಶಾಸ್ತ್ರಂ ಕರ್ತವ್ಯಂ ನಿಯಮೇನ ಹಿ ॥೧೯೯॥

ಪಿತುಃ ಪಿಂಡತ್ರಯಂ ದೇಯಂ ಮಾತುರಪ್ಯಾದರಾತ್ತಥಾ ।
ಅನ್ಯೇಷಾಂ ತು ಯಥಾಯೋಗ್ಯಮೇಕೈಕಂ ಸ್ಯಾದ್ಯಥಾಕ್ರಮಂ ॥೨೦೦॥

ಹೀಗೆಂದು ಹೇಳುತ್ತಾ ಅವನ ಪಿತೃಗಳೆಲ್ಲರೂ ನೃತ್ಯವನ್ನಭಿನಯಿಸಿ ಸ್ತುತಿಸುವರು. ॥೧೯೫॥

ಈರೀತಿಯಲ್ಲಿ ನಿಯಮಬದ್ಧರಾಗಿ ಕಾಶೀಕ್ಷೇತ್ರಕ್ಕೆ ತೆರಳಿ ಅಲ್ಲಿ ವಿಧಿಪೂರ್ವಕವಾಗಿ ಮುಂಡನವನ್ನು ಮಾಡಿಸಿಕೊಳ್ಳಬೇಕು. ॥೧೯೬॥

ಅದೇ ದಿನ ದಂಡಪಾಣಿಯ ಅನುಗ್ರಹದಿಂದ ತಪ್ಪದೇ ಜ್ಞಾನವಾಪಿಯಲ್ಲಿ ಸ್ನಾನವನ್ನಾಚರಿಸಬೇಕು. ॥೧೯೭॥

ಮತ್ತು ಅದೇ ದಿವಸದಲ್ಲಿ ಜ್ಞಾನವಾಪಿಯ ದಡದಲ್ಲಿ ಆಮದ್ರವ್ಯದಿಂದಾಗಲಿ ಅಥವಾ ಹಿರಣ್ಯದಿಂದಾಗಲಿ ವಿಧಿಪೂರ್ವಕವಾಗಿ ಪಿತೃಶ್ರಾದ್ಧವನ್ನಾಚರಿಸಬೇಕು. ॥೧೯೮॥

ನವಣೆ, ನೀವಾರ, ಯವಧಾನ್ಯ ಇವುಗಳ ಹಿಟ್ಟನಿಂದ ವಿಧಿಪೂರ್ವಕವಾಗಿ ಪಿಂಡದಾನವನ್ನು ಮಾಡಬೇಕು. ॥೧೯೯॥

ಪಿತೃವರ್ಗಕ್ಕೆ ಮೂರುಪಿಂಡಗಳನ್ನೂ, ಮಾತೃವರ್ಗಕ್ಕೆ ಮೂರು ಪಿಂಡ

ತತಃ ಕೃಷ್ಣತಿಲೈಃ ಶುದ್ಧೈಃ ಕೃತ್ವಾ ತು ತಿಲತರ್ಪಣಂ ।
ಜ್ಞಾನವಾಪೀಂ ಸಮಭ್ಯರ್ಚ್ಯ ಜ್ಞಾನೇಶಂ ತು ಸಮರ್ಚಯೇತ್ ॥೨೦೧॥

ವಿನಾಯಕಾನ್ ಧುಂಡಿರಾಜಂ ಸಮಭ್ಯರ್ಚ್ಯ ತತಃ ಪರಂ ।
ಮುಕ್ತಿಮಂಡಪಮಾಸಾದ್ಯ ಧ್ಯಾತ್ವಾ ಮಾಮಜಮವ್ಯಯಂ ॥೨೦೨॥

ನಂದಿಕೇಶಂ ಸಮಭ್ಯರ್ಚ್ಯ ದ್ವಾರಪಾಲಾನಪಿ ಕ್ರಮಾತ್ ।
ತತೋ ಮತ್ಪೂಜನಂ ಕಾರ್ಯಂ ಸ್ವಶಕ್ತ್ಯಾ ಚ ಯಥಾವಿಧಿ ॥೨೦೩॥

ತತೋ ವೀರೇಶಕುಂಡಾದೌ ಸ್ನಾನಂ ಕೃತ್ವಾ ಯಥಾಕ್ರಮಂ ।
ಶ್ರಾದ್ಧಂ ಪಿಂಡಪ್ರದಾನಾದಿ ಕರ್ತವ್ಯಂ ವಿಧಿಪೂರ್ವಕಂ ॥೨೦೪॥

ಶ್ರಾದ್ಧಾವಶಿಷ್ಟದ್ವಿತ್ರಾನ್ವಾ ಭಕ್ಷಯಿತ್ವಾ ತಿಲಾಂಸ್ತತಃ ।
ಕುರ್ಯಾಜ್ಜಾಗರಣಂ ಸಮ್ಯಙ್ನಿರಾಹಾರೇಣ ಸಾದರಂ ॥೨೦೫॥

ಗಳನ್ನೂ ಸಮರ್ಪಿಸಬೇಕು. ಇನ್ನುಳಿದವರಿಗೆ ಯಥಾಯೋಗ್ಯವಾಗಿ ಒಂದೊಂದು ಪಿಂಡವನ್ನು ಕೊಡಬೇಕು. ॥೨೦೦॥

ಬಳಿಕ ಕೃಷ್ಣತಿಲಗಳಿಂದ ಪಿತೃತರ್ಪಣವನ್ನು ನೆರವೇರಿಸಿ ಜ್ಞಾನವಾಪಿಯನ್ನು ಪೂಜಿಸಿ ಜ್ಞಾನೇಶನನ್ನು ಆರಾಧಿಸಬೇಕು. ॥೨೦೧॥

ಬಳಿಕ ಪಂಚವಿನಾಯಕರನ್ನೂ, ಧುಂಡಿರಾಜನನ್ನೂ ಪೂಜಿಸಿ ಮುಕ್ತಿ ಮಂಟಪಕ್ಕೆ ಬಂದು ಅಲ್ಲಿ ಅಜನೂ, ನಾಶರಹಿತನೂ, ಆದ ನನ್ನನ್ನು ಧ್ಯಾನಿಸಿ, ನಂದಿಕೇಶನನ್ನೂ ಮತ್ತು ದ್ವಾರಪಾಲಕರನ್ನೂ ಪೂಜಿಸಿ ತನ್ನ ಶಕ್ತಿಗೆ ಅನುಗುಣ ವಾಗಿ ನನ್ನನ್ನು ಪೂಜಿಸಬೇಕು. ॥೨೦೩॥

ಬಳಿಕ ವೀರೇಶಕುಂಡವೇ ಮೊದಲಾದ ಕುಂಡಗಳಲ್ಲಿ ಕ್ರಮವರಿತು ಸ್ನಾನವ ನ್ನಾಚರಿಸಿ ವಿಧಿವತ್ತಾಗಿ ಶ್ರಾದ್ಧಕರ್ಮವನ್ನೂ ಮತ್ತು ಪಿಂಡಪ್ರದಾನವನ್ನೂ ನೆರವೇರಿಸಬೇಕು. ॥೨೦೪॥

ಶ್ರಾದ್ಧಕರ್ಮವನ್ನಾಚರಿಸಿ ಅವಶಿಷ್ಟವಾದ ಎರಡು ಮೂರು ಎಳ್ಳಿನ ಕಾಳುಗಳನ್ನು ಮಾತ್ರ ಭಕ್ಷಿಸಿ, ಬಳಿಕ ರಾತ್ರಿ ನಿರಾಹಾರದಿಂದಿದ್ದು, ಜಾಗರಣವನ್ನಾ ಚರಿಸಬೇಕು. ॥೨೦೫॥

ತತಸ್ತು ಪಶ್ಚಿಮೇ ಯಾಮೇ ಪಂಚಕ್ರೋಶಾದ್ಬಹಿರ್ವ್ರಜೇತ್ ।
ಕೃತ್ವಾ ಶೌಚಾದಿಕಂ ತತ್ರ ಯಥಾಶಾಸ್ತ್ರಮನುಕ್ರಮಾತ್ ॥೨೦೬॥

ತತಃ ಕಾಶ್ಯಾಂ ಸಮಾಗಮ್ಯ ಸ್ನಾತ್ವಾ ತೀರ್ಥೋದಕೇ ಶುಭೇ ।
ಸಂಧ್ಯಾದಿನಿತ್ಯಯಾತ್ರಾಂತಂ ಕರ್ಮ ಕೃತ್ವಾ ಯಥಾಕ್ರಮಂ ॥೨೦೭॥

ಶೈವಾನ್ದ್ವಿಜವರಾನ್ ಶ್ರೇಷ್ಠಾನಾಹೂಯ ಶಿವವಿಗ್ರಹಾನ್ ।
ತೇಷಾಮಾಮಂತ್ರಣಂ ದೇಯಂ ಯಥಾಶಾಸ್ತ್ರಂ ಯಥಾಕ್ರಮಂ॥೨೦೮॥

ತತಃ ಸ್ನಾತ್ವಾ ವಿಧಾನೇನ ಶ್ರಾದ್ಧಂ ಕಾರ್ಯಂ ಪ್ರಯತ್ನತಃ ।
ಸ್ವಾದ್ವನ್ನೈಃ ಶಿವಭಕ್ತಾಸ್ತೇ ಭೋಜನೀಯಾ ಯಥಾವಿಧಿ ॥೨೦೯॥

ಶೈವಂ ಭೋಕ್ತಾರಮುತ್ಕೃಷ್ಟಂ ನಿಕಟಸ್ಥಮನುತ್ತಮಂ ।
ತ್ಯಕ್ತ್ವಾ ಯಃ ಕುರುತೇ ಶ್ರಾದ್ಧಂ ತದ್ವ್ಯರ್ಥಂ ನಾತ್ರ ಸಂಶಯಃ ॥೨೧೦॥

ಅಷ್ಟದಿಕ್ಷ್ವಷ್ಟತೀರ್ಥಾನಿ ಜ್ಞಾನವಾಪ್ಯಾಂ ವಸಂತಿ ಚ ।
ತೇಷು ಸ್ನಾನಂ ಯಥಾಶಾಸ್ತ್ರಂ ಕರ್ತವ್ಯಂ ಪ್ರೀತಿಪೂರ್ವಕಂ ॥೨೧೧॥

ಬಳಿಕ ನಾಲ್ಕನೆಯ ಯಾಮದಲ್ಲಿ ಪಂಚಕ್ರೋಶವನ್ನು ಬಿಟ್ಟು ಹೊರಗೆ ಹೋಗಿ ಶೌಚಾದಿಗಳನ್ನು ನೆರವೇರಿಸಿ ಕಾಶೀಕ್ಷೇತ್ರಕ್ಕೆ ಬಂದು ಅಲ್ಲಿ ನಿರ್ಮಲವಾದ ತೀರ್ಥಜಲದಲ್ಲಿ ಸ್ನಾನವನ್ನಾಚರಿಸಿ, ಸಂಧ್ಯಾವಂದನೆಯೇ ಮೊದಲಾದ ನಿತ್ಯಕರ್ಮಗಳನ್ನು ಸಾಂಗವಾಗಿ ನೆರವೇರಿಸಿ, ದ್ವಿಜಶ್ರೇಷ್ಠರೂ, ಈಶ್ವರಸ್ವರೂಪಿಗಳೂ ಆದ ಭಕ್ತರನ್ನು ಕರೆದು ಭೋಜನಕ್ಕೆ ಆಮಂತ್ರಿಸಬೇಕು. ॥೨೦೭-೨೦೮॥

ತರುವಾಯ ಸ್ನಾನವನ್ನಾಚರಿಸಿ ತಪ್ಪದೇ ಶ್ರಾದ್ಧಕರ್ಮವನ್ನು ನೆರವೇರಿಸಬೇಕು. ಈಶ್ವರಭಕ್ತರಾದ ಆ ಬ್ರಾಹ್ಮಣರನ್ನು ರುಚಿಕರವಾದ ಭಕ್ಷ್ಯಗಳಿಂದ ತೃಪ್ತಿಗೊಳಿಸಬೇಕು. ॥೨೦೯॥

ಯಾವನು ತನ್ನ ಸಮೀಪದಲ್ಲಿ ಈಶ್ವರಭಕ್ತನಿರುವುದನ್ನು ತಿಳಿದು ಅವನನ್ನು ಬಿಟ್ಟು ಶ್ರಾದ್ಧಕರ್ಮವನ್ನಾಚರಿಸುವನೋ ಅವನ ಆ ಕರ್ಮವು ವಿಫಲವಾಗುವುದು. ಇದರಲ್ಲಿ ಸಂಶಯವಿರುವುದಿಲ್ಲ. ॥೨೧೦॥

ಜ್ಞಾನವಾಪಿಯ ಎಂಟು ದಿಕ್ಕುಗಳಲ್ಲಿಯೂ ಎಂಟು ತೀರ್ಥಗಳಿರುವುವು. ಅವುಗಳಲ್ಲಿ ಭಕ್ತಿಶ್ರದ್ಧೆಗಳಿಂದ ಸ್ನಾನವನ್ನಾಚರಿಸಬೇಕು. ॥೨೧೧॥

ಅಷ್ಟದಿಕ್ಷ್ವಪಿ ಕರ್ತವ್ಯಮೇಕೈಕತ್ರ ಯಥಾಕ್ರಮಂ ।
ಪಂಚಧಾ ಶ್ರಾದ್ಧಮನರ್ಘ್ಯೈ ರತ್ನೈಶ್ಚಾಪಿ ಯಥಾವಿಧಿ ॥೨೧೨॥

ಪೂರ್ವದಿಗ್ಭಾಗಮಾರಭ್ಯ ಸವ್ಯೇನೈವ ಯಥಾಕ್ರಮಂ ।
ಸ್ನಾನಂ ಶ್ರಾದ್ಧಾದಿ ಕರ್ತವ್ಯಮಪ್ರಮಾದೇನ ಸರ್ವಥಾ ॥೨೧೩॥

ವೇದಗೌರೀಜ್ಞಾನಧರ್ಮಮೋಕ್ಷಪುಣ್ಯಕರಾಣಿ ಚ ।
ಪಿತೃವಾರುಣತೀರ್ಥಾನಿ ಜ್ಞೇಯಾನ್ಯಷ್ಟೌ ಶುಭಾನನೇ ॥೨೧೪॥

ಚತ್ವಾರಿಂಶದ್ಯಥಾಶಾಸ್ತ್ರಂ ಜ್ಞಾನವಾಪೀತಟೇ ಶುಭೇ ।
ಶ್ರಾದ್ಧಾನಿ ನಿಯಮೇನೈವ ಕರ್ತವ್ಯಾನಿ ನ ಸಂಶಯಃ ॥೨೧೫॥

ಏತೇಷು ಚ ಸಮಾಪ್ತೇಷು ತದನಂತರಮಾದರಾತ್ ।
ಪಂಚಶ್ರಾದ್ಧಾನಿ ಕಾರ್ಯಾಣಿ ವಿಧಿವನ್ಮುಕ್ತಿಮಂಡಪೇ ॥೨೧೬॥

ಏಕೈಕಶ್ರಾದ್ಧಮೇಕೈಕದಿನೇ ಕಾರ್ಯಂ ಯಥಾಕ್ರಮಂ ।
ನೈಕಸ್ಮಿನ್ದಿವಸೇಽನೇಕಂ ಶ್ರಾದ್ಧಂ ಕರ್ಮ ವಿಧೀಯತೇ ॥೨೧೭॥

ಆ ಎಂಟು ದಿಕ್ಕುಗಳಲ್ಲಿ ಪ್ರತಿಯೊಂದು ದಿಕ್ಕಿನಲ್ಲಿಯೂ ಪರಿಶುದ್ಧರಾಗಿ ಐದೈದು ಬಾರಿ ಅಮೂಲ್ಯವಾದ ರತ್ನಗಳಿಂದ ಶ್ರಾದ್ಧವನ್ನಾಚರಿಸಬೇಕು. ॥೨೧೨॥

ಪೂರ್ವದಿಕ್ಕಿನಿಂದ ಮೊದಲುಗೊಂಡು ಪ್ರದಕ್ಷಿಣಕ್ರಮದಿಂದ ಪ್ರತಿಯೊಂದು ದಿಕ್ಕಿನಲ್ಲಿಯೂ ತಪ್ಪದೇ ಸ್ನಾನವನ್ನಾಚರಿಸಿ ಪಿತೃಶ್ರಾದ್ಧವನ್ನು ನೆರವೇರಿಸಬೇಕು.॥೨೧೩॥

ಎಲೌ ಸುಮುಖಿಯೇ, ವೇದತೀರ್ಥ, ಗೌರೀತೀರ್ಥ, ಜ್ಞಾನತೀರ್ಥ, ಧರ್ಮತೀರ್ಥ, ಮೋಕ್ಷತೀರ್ಥ, ಪುಣ್ಯತೀರ್ಥ, ಪಿತೃತೀರ್ಥ ಮತ್ತು ವಾರುಣತೀರ್ಥವೆಂಬ ಈ ಎಂಟು ತೀರ್ಥಗಳೇ ಅಷ್ಟತೀರ್ಥಗಳೆಂದು ಕರೆಯಲ್ಪಡುವುವೆಂದು ತಿಳಿಯಬೇಕು. ॥೨೧೪॥

ಜ್ಞಾನವಾಪಿಯ ತೀರದಲ್ಲಿ ಶಾಸ್ತ್ರೋಕ್ತರೀತಿಯಂತೆ ನಲವತ್ತು ಶ್ರಾದ್ಧಗಳನ್ನು ಆಚರಿಸಬೇಕಾಗುವುದು. ಅವು ಮುಗಿದ ಮೇಲೆ ಮುಕ್ತಿಮಂಟಪದಲ್ಲಿ ಐದು ಶ್ರಾದ್ಧಗಳನ್ನು ಆಚರಿಸಬೇಕು. ॥೨೧೫-೨೧೬॥

ಅವುಗಳಲ್ಲಿ ಪ್ರತಿಯೊಂದು ಶ್ರಾದ್ಧವನ್ನೂ ಒಂದೊಂದು ದಿನದಲ್ಲಿ ಆಚರಿಸಬೇಕು. ಏಕೆಂದರೆ ಒಂದೇ ದಿನದಲ್ಲಿ ಅನೇಕ ಶ್ರಾದ್ಧಗಳನ್ನು ನೆರವೇರಿಸುವುದು ಅಶಾಸ್ತ್ರೀಯವಾಗಿರುವುದು. ॥೨೧೭॥

ಶ್ರಾದ್ಧಾನ್ಯೇವಂ ವಿಧಾಯೈವ ಜ್ಞಾನವಾಪೀತಟೇ ಶುಭೇ ।
ಮಣಿಕರ್ಣೀತಟೇ ಕುರ್ಯಾತ್ತತಃ ಶ್ರಾದ್ಧಂ ಯಥಾವಿಧಿ ॥೨೧೮॥

ವೀರೇಶಕುಂಡನಿಕಟೇ ತತಃ ಕಾರ್ಯಂ ಪ್ರಯತ್ನತಃ ।
ತತಃ ಪಶುಪತೀಶಸ್ಯ ಕುಂಡಪ್ರಾಂತೇ ಮನೋಹರೇ ॥೨೧೯॥

ಕಾಲಕುಂಡತಟೇ ಕಾರ್ಯಂ ತದನಂತರಮಾದರಾತ್ ।
ಶಿವಗಂಗಾತಟೇ ಕಾರ್ಯಂ ತತಃ ಸಮ್ಯಗ್ಯಥಾವಿಧಿ ॥೨೨೦॥

ತತಃ ಕರ್ಕೋಟಕಸ್ಯಾಪಿ ಕುಂಡಪ್ರಾಂತೇ ಮನೋಹರೇ ।
ತತಃ ಪಿಶಾಚತೀರ್ಥೇಽಪಿ ಕರ್ತವ್ಯಂ ವಿಧಿಪೂರ್ವಕಂ ॥೨೨೧॥

ಓಂಕಾರಕುಂಡಪ್ರಾಂತೇಽಪಿ ಕರ್ತವ್ಯಂ ತದನಂತರಂ ।
ತತಃ ಪಿಲಿಪ್ಪಿಲಾಕುಂಡೇ ಕರ್ತವ್ಯಂ ವಿಧಿಪೂರ್ವಕಂ ॥೨೨೨॥

ಹಂಸತೀರ್ಥತಟೇ ಕಾರ್ಯಂ ತದನಂತರಮಾದರಾತ್ ।
ವಕ್ರತುಂಡೇಶಕುಂಡೇಽಪಿ ತತ್ರ ಕಾರ್ಯಂ ಪ್ರಯತ್ನತಃ ॥೨೨೩॥

ಈ ರೀತಿಯಲ್ಲಿ ಆಯಾ ತೀರ್ಥಗಳಲ್ಲಿ ಕ್ರಮವರಿತು ಶ್ರಾದ್ಧಕರ್ಮವನ್ನು ನೆರವೇರಿಸಿ ಬಳಿಕ ಮಣಿಕರ್ಣೀಕುಂಡಕ್ಕೆ ಬಂದು ಅದರ ದಡದಲ್ಲಿ ವಿಧಿವತ್ತಾಗಿ ಶ್ರಾದ್ಧವನ್ನಾಚರಿಸಬೇಕು. ॥೨೧೮॥

ಬಳಿಕ ವೀರೇಶಕುಂಡದ ಬಳಿಯಲ್ಲಿ ಶ್ರಾದ್ಧವನ್ನು ನೆರವೇರಿಸಿ ಪಾಶುಪತ ಕುಂಡದ ಬಳಿ ಶ್ರಾದ್ಧವನ್ನಾಚರಿಸಬೇಕು. ಅದಾದ ಮೇಲೆ ಕಾಲಕುಂಡದಲ್ಲಿ ಶ್ರಾದ್ಧ ವನ್ನು ನೆರವೇರಿಸಿ ಶಿವಗಂಗೆಯ ದಡದಲ್ಲಿ ಶ್ರಾದ್ಧವನ್ನಾಚರಿಸಬೇಕು.॥೨೧೯-೨೨೦॥

ತರುವಾಯ ಕರ್ಕೋಟಕಕುಂಡದ ಸಮೀಪದಲ್ಲಿಯೂ ಮತ್ತು ಪಿಶಾಚ ತೀರ್ಥದ ಬಳಿಯಲ್ಲಿಯೂ ಶ್ರಾದ್ಧಕರ್ಮವನ್ನು ನೆರವೇರಿಸಬೇಕು. ॥೨೨೧॥

ಆನಂತರ ಓಂಕಾರಕುಂಡದ ಬಳಿಯಲ್ಲಿಯೂ ಅದಾದ ಬಳಿಕ ಪಿಲಿಪ್ಪಿಲಾ ಕುಂಡದ ಬಳಿಯಲ್ಲಿಯೂ ಯಥಾಕ್ರಮವಾಗಿ ಶ್ರಾದ್ಧವನ್ನಾಚರಿಸಬೇಕು. ॥೨೨೨॥

ಬಳಿಕ ಹಂಸತೀರ್ಥದಲ್ಲಿಯೂ, ವಕ್ರತುಂಡೇಶಕುಂಡದಲ್ಲಿಯೂ, ಕೇದಾರೇಶ ಕುಂಡದಲ್ಲಿಯೂ, ಅರ್ಕಕುಂಡದಲ್ಲಿಯೂ, ಚಂದ್ರಕೂಪದಲ್ಲಿಯೂ, ಸಿದ್ಧೇಶಕುಂಡ

ತತಃ ಕೇದಾರಕುಂಡೇಽಪಿ ಕರ್ತವ್ಯಂ ವಿಧಿಪೂರ್ವಕಂ ।
ಅರ್ಕಕುಂಡೇ ತತಃ ಕಾರ್ಯಂ ಚಂದ್ರಕೂಪೇ ತತಃ ಪರಂ ॥೨೨೪॥

ತತಃ ಸಿದ್ಧೇಶಕುಂಡೇಽಪಿ ದುರ್ಗಾಕುಂಡೇ ತತಃ ಪರಂ ।
ಕಾಮಾಕ್ಷೀಕುಂಡನಿಕಟೇ ತತಃ ಕರ್ತವ್ಯಮಾದರಾತ್ ॥೨೨೫॥

ಸಾರ್ಧಾಷ್ಟಕೋಟಿಲಿಂಗಾನಿ ಕುಂಡಾನ್ಯಪಿ ವರಾನನೇ ।
ಶ್ರೀಮದಂತರ್ಗೃಹೇ ರಮ್ಯೇ ಸಂತಿ ದಿವ್ಯಾನಿ ಭೂರಿಶಃ ॥೨೨೬॥

ಅಂತರ್ಗೃಹಬಹಿರ್ದೇವಿ ಲಿಂಗಸಂಖ್ಯಾ ನ ವಿದ್ಯತೇ ।
ಕುಂಡಾನಾಮಪಿ ದಿವ್ಯಾನಾಂ ಸಂಖ್ಯಾ ನಾಸ್ತ್ಯೇವ ಸರ್ವಥಾ ॥೨೨೭॥

ತೇಷು ಸರ್ವತ್ರ ಕರ್ತವ್ಯಂ ಶ್ರಾದ್ಧಂ ಯದ್ಯಪಿ ಸರ್ವಥಾ ।
ತಥಾಪಿ ಶಕ್ತಿಹೀನೈಸ್ತು ಶ್ರಾದ್ಧಂ ಕಾರ್ಯಂ ಕ್ವಚಿತ್ಕ್ವಚಿತ್ ॥೨೨೮॥

ಉಕ್ತಸ್ಥಲೇಷು ಕರ್ತವ್ಯಮವಶ್ಯಂ ಪಿತೃತತ್ಪರೈಃ ।
ಶ್ರಾದ್ಧಮನ್ನೇನ ವಿಮಲೈರ್ಯಥಾಶಾಸ್ತ್ರಂ ಯಥಾಕ್ರಮಂ ॥೨೨೯॥

ದಲ್ಲಿಯೂ ಮತ್ತು ಕಾಮಾಕ್ಷಿಕುಂಡದಲ್ಲಿಯೂ ಯಥಾಪ್ರಕಾರವಾಗಿ ಶ್ರಾದ್ಧಗಳನ್ನಾಚರಿಸಬೇಕು. ||೨೨೩-೨೨೪-೨೨೫||

ಎಲೌ ಸುಮುಖಿಯೇ, ಕಾಶೀಕ್ಷೇತ್ರದ ಅಂತರ್ಗೃಹದಲ್ಲಿ ಪವಿತ್ರವಾದ ಎಂಟೂವರೆ ಕೋಟಿ ಶಿವಲಿಂಗಗಳಿರುವುವು. ||೨೨೬||

ದೇವಿ, ಅಂತರ್ಗೃಹದ ಬಹಿರ್ಭಾಗದಲ್ಲಿ ಇರುವ ಶಿವಲಿಂಗಗಳನ್ನು ಮತ್ತು ಕುಂಡಗಳನ್ನೂ ಲೆಕ್ಕಿಸಲು ಸಾಧ್ಯವಿಲ್ಲ. ||೨೨೭||

ಆ ಸಕಲ ಕುಂಡಗಳಲ್ಲಿಯೂ ಶ್ರಾದ್ಧವನ್ನಾಚರಿಸಬೇಕು. ಆದರೂ ಶಕ್ತಿಹೀನರಾದವರು ಕೆಲವೆಡೆಯಲ್ಲಾದರೂ ಅದನ್ನು ನೆರವೇರಿಸಬೇಕು. ||೨೨೮||

ಹಿಂದೆ ಹೇಳಿದ ಆ ಸಕಲ ಸ್ಥಳಗಳಲ್ಲಿಯೂ ಪಿತೃಭಕ್ತಿಯುಳ್ಳವರು ಅವಶ್ಯವಾಗಿ ಶಾಸ್ತ್ರೋಕ್ತವಾದ ರೀತಿಯಿಂದ ಕ್ರಮವರಿತು ಅನ್ನಶ್ರಾದ್ಧಕರ್ಮವನ್ನು ಆಚರಿಸಬೇಕು. ||೨೨೯||

ಉಕ್ತಸ್ಥಲೇಷು ಸರ್ವತ್ರ ಪಂಚವಾರಂ ಯಥಾಕ್ರಮಮ್ ।
ಶ್ರಾದ್ಧಂ ಕರ್ತವ್ಯಮನ್ನೇನ ಸರ್ವಥೈವಾಪ್ರಮಾದತಃ ॥೨೩೦॥

ಅಶಕ್ತೈಸ್ತು ತ್ರಿವಾರಂ ವಾ ಶ್ರಾದ್ಧಂ ಕರ್ತವ್ಯಮಾದರಾತ್ ।
ದ್ವಿವಾರಮಧಮೇನಾಪಿ ಕರ್ತವ್ಯಂ ನಾತ್ರ ಸಂಶಯಃ ॥೨೩೧॥

ಶ್ರಾದ್ಧಾನ್ಯೇವಂ ಯಥಾಶಾಸ್ತ್ರಂ ಕೃತ್ವಾ ತದನುಸಾದರಂ ।
ಸ್ವಶಕ್ತ್ಯಾ ಶೈವವರ್ಯಾಣಾಂ ಪೂಜಾ ಕಾರ್ಯಾ ಪ್ರಯತ್ನತಃ ॥೨೩೨॥

ಶೈವಕ್ಷೇತ್ರಮಿತಿ ಜ್ಞಾತ್ವಾ ಕಾಶೀಂ ಶೈವಜನಾಶ್ರಯಾಂ ।
ಶೈವಾನುರಾಗಃ ಕರ್ತವ್ಯೋ ಧನಧಾನ್ಯಾದಿಭಿಃ ಶುಭೈಃ ॥೨೩೩॥

ತುಷ್ಟೋ ಭವಾಮ್ಯಹಂ ನಿತ್ಯಂ ಶೈವಾನಾಮೇವ ಪೂಜಯಾ ।
ತಸ್ಮಾನ್ಮದರ್ಥಂ ಶೈವಾನಾಂ ಪೂಜಾ ಕಾರ್ಯಾ ಪ್ರಯತ್ನತಃ ॥೨೩೪॥

ಹಿಂದೆ ಹೇಳಿದ ಎಲ್ಲಾ ಸ್ಥಳಗಳಲ್ಲಿಯೂ ಕ್ರಮವರಿತು ಐದೈದು ಬಾರಿ ತಪ್ಪದೇ ಅನ್ನದಿಂದ ಪಿತೃಶ್ರಾದ್ಧವನ್ನು ನೆರವೇರಿಸಬೇಕು. ॥೨೩೦॥

ಅಶಕ್ತರಾದವರು ಮೂರು ಬಾರಿಯಾದರೂ ಶ್ರಾದ್ಧವನ್ನಾಚರಿಸಬೇಕು. ಅತ್ಯಂತ ದರಿದ್ರರು ಎರಡು ಬಾರಿಯಾದರೂ ಅದನ್ನಾಚರಿಸಲೇಬೇಕು. ॥೨೩೧॥

ಈ ರೀತಿಯಲ್ಲಿ ಶಾಸ್ತ್ರೋಕ್ತರೀತಿಯಿಂದ ಯಥಾಶಕ್ತಿ ಶ್ರಾದ್ಧಗಳನ್ನು ನೆರವೇರಿಸಿ, ಬಳಿಕ ತಮ್ಮ ತಮ್ಮ ಶಕ್ತಿಗೆ ಅನುಗುಣವಾಗಿ ಈಶ್ವರಭಕ್ತಾಗ್ರೇಸರರನ್ನು ಆರಾಧಿಸಬೇಕು. ॥೨೩೨॥

ಈಶ್ವರಭಕ್ತಾಗ್ರೇಸರರು ನೆಲಸಿರುವ ಕಾಶೀಕ್ಷೇತ್ರವನ್ನು ಶೈವಕ್ಷೇತ್ರವೆಂದೇ ಭಾವಿಸಿ, ಅಮೂಲ್ಯವಾದ ಧನಧಾನ್ಯಗಳಿಂದ ಈಶ್ವರಭಕ್ತರ ಪ್ರೀತಿಯನ್ನು ಸಂಪಾದಿಸಬೇಕು. ॥೨೩೩॥

ನನ್ನ ಭಕ್ತರನ್ನು ಪೂಜಿಸಿದ ಮಾತ್ರದಿಂದಲೇ ನಾನು ಸುಪ್ರೀತನಾಗುವೆನು. ಆದುದರಿಂದ ನನ್ನನ್ನು ತೃಪ್ತಿಗೊಳಿಸುವುದಕ್ಕೋಸ್ಕರ ನನ್ನ ಭಕ್ತರನ್ನು ಭಕ್ತಿಶ್ರದ್ಧೆಗಳಿಂದ ಆರಾಧಿಸಬೇಕು. ॥೨೩೪॥

ಕಾಶ್ಯಾಂ ಶೈವೋತ್ತಮೇ ದತ್ತಮೇಕಂ ವಾ ಗ್ರಾಸಮುತ್ತಮಂ ।
ಅನಂತಪುಣ್ಯಫಲದಂ ಭವತ್ಯೇವ ನ ಸಂಶಯಃ ॥೨೩೫॥

ದುರ್ಲಭೇಯಂ ಯಥಾ ಕಾಶೀ ತಥಾ ಶೈವೋಽಪಿ ದುರ್ಲಭಃ ।
ಅನೇಕಜನ್ಮತಪಸಾ ಶೈವೋ ಭವತಿ ಮಾನವಃ ॥೨೩೬॥

ಯಥಾ ಸದಾಶಿವಾದನ್ಯೋ ನಾಸ್ತಿ ದೇವೋತ್ತಮಃ ಶಿವೇ ।
ತಥಾ ಶೈವದ್ವಿಜಾದನ್ಯೋ ನಾಸ್ತಿ ವಿಪ್ರೋತ್ತಮೋ ಭುವಿ ॥೨೩೭॥

ಯಥಾ ಕಾಶೀಸಮಂ ಕ್ಷೇತ್ರಂ ನಾಸ್ತಿ ಬ್ರಹ್ಮಾಂಡಗೋಲಕೇ ।
ತಥಾ ಶೈವಸಮೋ ವಿಪ್ರೋ ನಾಸ್ತಿ ಬ್ರಹ್ಮಾಂಡಗೋಲಕೇ ॥೨೩೮॥

ಚರಲಿಂಗಾಯ ಶೈವಾಯ ಯಃ ಪೂಜಾಂ ನ ಕರಿಷ್ಯತಿ ।
ಸ ಏವ ಯಾತನಾಭೋಕ್ತಾ ಸ ಏವಾಘಕುಲಾಶ್ರಯಃ ॥೨೩೯॥

ಕಾಶೀಕ್ಷೇತ್ರದಲ್ಲಿ ಈಶ್ವರಭಕ್ತಾಗ್ರೇಸರನಿಗೆ ಅರ್ಪಿಸಿದ ಒಂದೇ ಒಂದು ಗ್ರಾಸವೂ ಸಹ ಅಗಣಿತವಾದ ಪುಣ್ಯವನ್ನು ದಯಪಾಲಿಸುವುದು. ॥೨೩೫॥

ಕಾಶೀಕ್ಷೇತ್ರವೇ ದುರ್ಲಭವಾಗಿರುವುದು. ಅದರಂತೆಯೇ ಈಶ್ವರಭಕ್ತನೂ ಸಹ ದುರ್ಲಭನು. ಮನುಷ್ಯನು ತನ್ನ ಹಿಂದಿನ ಅನೇಕ ಜನ್ಮಗಳಲ್ಲಿ ತಪಸ್ಸನ್ನಾಚರಿಸಿ, ಬಳಿಕ ಆ ತಪಸ್ಸುಗಳ ಮಹಿಮೆಯಿಂದ ನನ್ನ ಭಕ್ತನಾಗುವನು. ॥೨೩೬॥

ದೇವಿ, ಲೋಕದಲ್ಲಿ ಶಿವನಿಗಿಂತಲೂ ಶ್ರೇಷ್ಠನಾದ ಇನ್ನೊಬ್ಬ ದೇವತೆಯು ಹೇಗೆ ಇರುವುದಿಲ್ಲವೋ ಅದರಂತೆಯೇ ಈಶ್ವರಭಕ್ತನಿಗಿಂತಲೂ ಶ್ರೇಷ್ಠನಾದ ಇನ್ನೊಬ್ಬ ಬ್ರಾಹ್ಮಣನಿರುವುದಿಲ್ಲ. ॥೨೩೭॥

ಬ್ರಹ್ಮಾಂಡದಲ್ಲಿ ಕಾಶೀಕ್ಷೇತ್ರಕ್ಕೆ ಸದೃಶವಾದ ಇನ್ನೊಂದು ಕ್ಷೇತ್ರವು ಹೇಗೆ ಇರುವುದಿಲ್ಲವೋ, ಅದರಂತೆ ಈಶ್ವರಭಕ್ತನಿಗೆ ಸದೃಶನಾದ ಇನ್ನೊಬ್ಬ ಬ್ರಾಹ್ಮಣನಿರುವುದಿಲ್ಲ. ॥೨೩೮॥

ಈಶ್ವರಧ್ಯಾನದಲ್ಲಿಯೇ ಆಸಕ್ತನಾಗಿ ಸದಾ ಸಂಚರಿಸುತ್ತಿರುವ ಭಕ್ತನೇ ಚರಲಿಂಗವು. ಅವನನ್ನು ಯಾವನು ಪೂಜಿಸುವುದಿಲ್ಲವೋ ಅವನು ಘೋರವಾದ ಯಾತನೆಗಳಿಗೆ ಗುರಿಯಾಗುವನಲ್ಲದೇ ಪಾಪರಾಶಿಗೆ ಗುರಿಯಾಗುವನು. ॥೨೩೯॥

ತಸ್ಮಾತ್ತ್ವಕಶ್ಯಾಂ ವಿಶೇಷೇಣ ಶೈವಾಃ ಶಿವಪರಾಯಣಾಃ ।
ಪೂಜನೀಯಾಃ ಪ್ರಯತ್ನೇನ ಶಿವಪ್ರೀತ್ಯರ್ಥಮಾದರಾತ್ ॥೨೪೦॥

ಪುರಾ ಕಶ್ಚಿದ್ದ್ವಿಜವರೋ ವಿಶುದ್ಧಃ ಶೈವಪುಂಗವಃ ।
ಶಿವೈಕಶರಣೋ ನಿತ್ಯಂ ಲಿಂಗಪೂಜಾಪರಾಯಣಃ ॥೨೪೧॥

ದೀರ್ಘಪಿಂಗಜಟಾಧಾರೀ ಸದಾ ರುದ್ರಾಕ್ಷಭೂಷಣಃ ।
ಭಸಿತೋ ಧೂಲಿತವಪುಸ್ತ್ರಿಪುಂಡ್ರಾಂಕಿತಮಸ್ತಕಃ ॥೨೪೨॥

ಶೈವಶಾಸ್ತ್ರಾರ್ಥತತ್ತ್ವಜ್ಞಃ ಶಿವತತ್ತ್ವೈಕಚಿಂತಕಃ ।
ನಿರ್ಮಮೋ ನಿರ್ಮಲಃ ಶಾಂತೋ ವೀತರಾಗೋ ವಿಚಕ್ಷಣಃ ॥೨೪೩॥

ಮಲಯಾಚಲದೇಶೇಷು ನಿವಸನ್ಸ ಕದಾಚನ ।
ಕ್ವ ಸ್ಥಾತವ್ಯಂ ಮಯಾ ನಿತ್ಯಮಿತಿ ಚಿಂತಾಪರೋಽಭವತ್ ॥೨೪೪॥

ಆದುದರಿಂದ ಶಿವನು ಸುಪ್ರೀತನಾಗುವುದಕ್ಕೋಸ್ಕರ ಈಶ್ವರಭಕ್ತಾಗ್ರೇಸರರಾದ ದ್ವಿಜಶ್ರೇಷ್ಠರನ್ನು ವಿಶೇಷವಾಗಿ ತಪ್ಪದೇ ಭಕ್ತಿಶ್ರದ್ಧೆಗಳಿಂದ ಪೂಜಿಸಬೇಕು. ॥೨೪೦॥

ಹಿಂದೆ ಒಂದಾನೊಂದು ಸಮಯದಲ್ಲಿ ಮಲಯಪರ್ವತದಲ್ಲಿ ಓರ್ವ ಈಶ್ವರಭಕ್ತಾಗ್ರೇಸರನೂ ಶಿವಲಿಂಗಪೂಜೆಯಲ್ಲಿಯೇ ಆಸಕ್ತನೂ ಆದ ದ್ವಿಜಶ್ರೇಷ್ಠನಿದ್ದನು. ಅವನು ದೀರ್ಘವೂ ಹೊಂಬಣ್ಣದಿಂದ ಯುಕ್ತವೂ ಆದ ಜಟೆಗಳನ್ನು ಧರಿಸಿದವನೂ, ಅನವರತವೂ ಭಸ್ಮ ರುದ್ರಾಕ್ಷ ಇವುಗಳಿಂದ ಅಲಂಕೃತನೂ, ತ್ರಿಪುಂಡ್ರಧಾರಿಯೂ ಆಗಿದ್ದನು. ಮತ್ತು ಅವನು ಶೈವಶಾಸ್ತ್ರವಿಶಾರದನೂ, ಶಿವಧ್ಯಾನಾಸಕ್ತನೂ, ನಿರಹಂಕಾರಿಯೂ, ಶುದ್ಧಚಿತ್ತನೂ, ಶಾಂತನೂ, ರಾಗದ್ವೇಷಗಳಿಂದ ರಹಿತನೂ ಆಗಿದ್ದನು. ॥೨೪೧-೨೪೨-೨೪೩॥

ಮಲಯಪರ್ವತದಲ್ಲಿ ವಾಸವಾಗಿದ್ದ ಅವನು ಒಂದಾನೊಂದು ದಿನ ಈಶ್ವರಭಕ್ತನಾದ ತನಗೆ ವಾಸಕ್ಕೆ ಯೋಗ್ಯವಾದ ಪ್ರದೇಶವು ಅದಾವುದಿರುವುದೆಂದು ಯೋಚಿಸುತ್ತಾ ಬಹುಕಾಲದವರೆಗೆ ಚಿಂತಾಕ್ರಾಂತನಾದನು.. ॥೨೪೪॥

ಕ್ವ ವಾ ಮುಕ್ತಿಪ್ರದಂ ಕ್ಷೇತ್ರಂ ಕ್ವ ವಾ ಸರ್ವಾರ್ಥಸಾಧಕಂ ।
ಕ್ವ ಸರ್ವವೇದವೇದಾಂತವೇದ್ಯಮಾದ್ಯಂತವರ್ಜಿತಂ ॥೨೪೫॥

ಕ್ವ ವಾ ಬಹೂನಿ ಲಿಂಗಾನಿ ಸಂತಿ ದಿವ್ಯಾನಿ ಸರ್ವದಾ ।
ಕ್ವ ವಾ ತೀರ್ಥೋದಕಂ ರಮ್ಯಂ ಸ್ನಾನಯೋಗಮಘಾಪಹಂ ॥೨೪೬॥

ಕ್ವ ವಾ ಶಿವಪರಾಃ ಶೈವಾಃ ಶಿವಲಿಂಗಾರ್ಚನಪ್ರಿಯಾಃ ।
ಕ್ವ ವಾ ಶಿವಕಥಾಲಾಪಾಃ ಶ್ರಾವ್ಯಾಃ ಪಾಪವಿನಾಶಕಾಃ ॥೨೪೭॥

ಕ್ವ ವಾ ಶಿವಶಿವೇತ್ಯೇವಂ ಧ್ವನಿಃ ಸಂಶ್ರೂಯತೇ ಸದಾ ।
ಕ್ವ ವಾ ಬಿಲ್ವವನಂ ರಮ್ಯಂ ಶಿವಪ್ರಿಯಕರಂ ಶುಭಂ ॥೨೪೮॥

ಕ್ವ ವಾ ರಮ್ಯಂ ಶಿವಸ್ಥಾನಂ ನೇತ್ರೋತ್ಸವಕರಂ ಪರಂ ।
ಕ್ವ ವಾ ಶಿವೇಶ ಶರ್ವೇತಿ ವದಂತಃ ಸಂತಿ ಸಾಧವಃ ॥೨೪೯॥

ಆಗ ಅವನು ಹೀಗೆಂದು ಚಿಂತಿಸಿದನು—ಮೋಕ್ಷವನ್ನು ದಯಪಾಲಿಸುವ ಕ್ಷೇತ್ರವು ಯಾವುದಿರುವುದು? ಸಕಲ ವೇದಗಳಿಗೂ ಮತ್ತು ವೇದಾಂತಗಳಿಗೂ ಗೋಚರನೂ ಉತ್ಪತ್ತಿ ನಾಶರಹಿತನೂ ಆದ ಶಿವನು ಯಾವ ಕ್ಷೇತ್ರದಲ್ಲಿ ನೆಲಸಿರುವನು? ॥೨೪೫॥

ಶ್ರೇಷ್ಠತಮವಾದ ಶಿವಲಿಂಗಗಳು ನೆಲಸಿರುವ ಪ್ರದೇಶವಾವುದಿರಬಹುದು? ಸ್ನಾನಯೋಗ್ಯವೂ, ಪಾಪಹರವೂ ಆದ ದಿವ್ಯವಾದ ತೀರ್ಥವು ಇರುವ ಸ್ಥಳವಾವುದಿರಬಹುದು? ॥೨೪೬॥

ಈಶ್ವರಧ್ಯಾನಾಸಕ್ತರೂ, ಶಿವಲಿಂಗವನ್ನು ಅರ್ಚಿಸುವವರೂ ಆದ ಜನರು ವಾಸಿಸುವ ಕ್ಷೇತ್ರವಾವುದಿರಬಹುದು? ಯಾವ ಕ್ಷೇತ್ರದಲ್ಲಿ ಸುಶ್ರಾವ್ಯವಾದ ಶಿವಕಥೆಗಳು ಪ್ರಚಾರದಲ್ಲಿರಬಹುದು? ಯಾವ ಕ್ಷೇತ್ರದಲ್ಲಿ ಶಿವ, ಶಿವ ಎಂಬ ಶಿವನಾಮದ ಧ್ವನಿಯನ್ನು ಕೇಳಬಹುದು. ಸುಂದರವೂ ಶಿವನಿಗೆ ಪ್ರಿಯವೂ ಆದ ಬಿಲ್ವವನವು ಇರುವ ಸ್ಥಳವು ಆದಾವುದಿರಬಹುದು. ॥೨೪೭-೨೪೮॥

ನೇತ್ರಾನಂದಕರವೂ, ಶಿವನಿಗೆ ಪ್ರಿಯವೂ, ರಮ್ಯವೂ ಆದ ಕ್ಷೇತ್ರವು ಯಾವುದಿರಬಹುದು. ಯಾವ ಕ್ಷೇತ್ರದಲ್ಲಿ ಸತ್ಪುರುಷರು "ಶಿವ, ಈಶ ಶರ್ವ" ಎಂದು

ಕ್ವ ವಾ ಪಾಶುಪತಾಃ ಶುದ್ಧಾಃ ಶಿವೈಕಪರದೇವತಾಃ ।
ಕ್ವ ವಾ ಕರ್ಣಫಲಭ್ರಾಜದ್ರುದ್ರಾಕ್ಷಾಭರಣಾಃ ಶುಭಾಃ ॥೨೫೦॥

ಕ್ವ ವಾ ಭಸ್ಮಲಸದ್ಭಾಲಾಃ ಫಾಲಲೋಚನಪೂಜಕಾಃ ।
ಕ್ವ ವಾ ಬ್ರಹ್ಮಾದಯೋ ದೇವಾ ಪೂಜಯಂತಿ ಸದಾಶಿವಂ ॥೨೫೧॥

ಕ್ವ ವಾ ಗಂಧರ್ವಯಕ್ಷಾದ್ಯಾಃ ಪೂಜಯಂತಿ ಮಹೇಶ್ವರಂ ।
ಕ್ವ ವಾ ವಸಂತಿ ಸರ್ವೇಽಪಿ ವಾಮದೇವಾದಯೋ ದ್ವಿಜಾಃ ॥೨೫೨॥

ಕ್ವ ವಾ ತಿಷ್ಠತಿ ಶೈವೇಂದ್ರಃ ಕಪಿಲಃ ಸಿದ್ಧಸೇವಿತಃ ।
ಕ್ವ ವಾ ಘೋರಂ ತಪಸ್ತಪ್ತಂ ವಿಷ್ಣುನಾ ಸಾರ್ವಸಿದ್ಧಿದಂ ॥೨೫೩॥

ಕ್ವ ವಾ ಪೂರ್ವಂ ತಪಸ್ತಪ್ತಂ ಸರ್ವೈರಪಿ ಮುಮುಕ್ಷುಭಿಃ ।
ಕ್ವ ವಾ ಪಂಚಾಕ್ಷರೋ ಮಂತ್ರೋ ಮಹೇಶೇನೋಪದಿಶ್ಯತೇ॥೨೫೪॥

ಶಿವನಾಮಗಳನ್ನು ಉಚ್ಚರಿಸುವರು. ಪಾಶುಪತರೂ, ಶಿವಪರಾಯಣರೂ ಆದ ಭಕ್ತರು ನೆಲಸಿರುವ ಪ್ರದೇಶವು ಅದಾವುದಿರಬಹುದು. ರುದ್ರಾಕ್ಷಗಳಿಂದ ಅಲಂಕೃತರಾದ ಈಶ್ವರ ಭಕ್ತರು ವಾಸಿಸುವ ಪ್ರದೇಶವಾವುದು? ||೨೪೯-೨೫೦||

ಹಣೆಯಲ್ಲಿ ಭಸ್ಮವನ್ನು ಧರಿಸಿ, ಈಶ್ವರನ ಪೂಜಿಸುತ್ತಿರುವ ಭಕ್ತರು ವಾಸವಾಗಿರುವ ಕ್ಷೇತ್ರವು ಯಾವುದಿರಬಹುದು? ಯಾವ ಸ್ಥಳದಲ್ಲಿ ಬ್ರಹ್ಮಾದಿ ದೇವತೆಗಳು ಶಿವನನ್ನು ಪೂಜಿಸುತ್ತಿರುವರು? ||೨೫೧||

ಯಾವ ಸ್ಥಳದಲ್ಲಿ ಗಂಧರ್ವರೂ ಮತ್ತು ಯಕ್ಷರೂ ಶಿವನನ್ನು ಪೂಜಿಸುವರು? ವಾಮದೇವನೇ ಮೊದಲಾದ ದ್ವಿಜಶ್ರೇಷ್ಠರು ವಾಸವಾಗಿರುವ ಪ್ರದೇಶವಾವುದು? ಈಶ್ವರ ಭಕ್ತಾಗ್ರಣಿಗಳಾದ ಸಿದ್ಧರಿಂದ ಸೇವಿಸಲ್ಪಡುವವನೂ ಆದ ಕಪಿಲಮಹರ್ಷಿಯ ವಾಸಸ್ಥಳವು ಯಾವುದಿರಬಹುದು? ವಿಷ್ಣುವು ಯಾವ ಕ್ಷೇತ್ರದಲ್ಲಿ ಸಕಲ ಇಷ್ಟಾರ್ಥಗಳನ್ನೂ ದಯಪಾಲಿಸುವ ಭಯಂಕರವಾದ ತಪಸ್ಸನ್ನು ಆಚರಿಸಿದ್ದನು? ||೨೫೨-೨೫೩||

ಈ ಹಿಂದೆ ಯಾವ ಕ್ಷೇತ್ರದಲ್ಲಿ ಮುಮುಕ್ಷುಗಳು ತಪಸ್ಸನ್ನಾಚರಿಸಿರಬಹುದು? ಯಾವ ಸ್ಥಳದಲ್ಲಿ ಪರಮೇಶ್ವರನು ಪಂಚಾಕ್ಷರೀಮಂತ್ರವನ್ನು ಉಪದೇಶಿಸುವನು. ||೨೫೪||

ಕ್ವ ವಾ ಮರಣಮಾತ್ರೇಣ ಮುಕ್ತಿಃ ಶೈವೈರವಾಪ್ಯತೇ ।
ಕ್ವ ವಾ ಲೀಲಾಂ ಮಹಾದೇವಃ ಕರೋತಿ ಶಿವಯಾ ಸಹ ॥೨೫೫॥

ಕ್ವ ವಾ ಶ್ರೀನಂದಿಕೇಶಾದಿಗಣನಾಥಾಃ ಶಿವಪ್ರಿಯಾಃ ।
ಕ್ವ ವಾ ಧರ್ಮರತಾಃ ಶುದ್ಧಾಃ ಶಿವಲಿಂಗಾರ್ಚನಪ್ರಿಯಾಃ ॥೨೫೬॥

ಉಕ್ತಸರ್ವಗುಣೋಪೇತಮನ್ಯತ್ಕ್ಷೇತ್ರಂ ನ ಸರ್ವಥಾ ।
ಉಕ್ತಸರ್ವಗುಣೋಪೇತಾ ಕಾಶೀ ತಿಷ್ಠತಿ ಸಾ ಧ್ರುವಂ ॥೨೫೭॥

ಶೀರ್ಣಂ ಶರೀರಮೇತನ್ಮೇ ಪಾದೇ ನಾಸ್ತಿ ಬಲಂ ಮಮ ।
ಮಯಾ ದೂರಸ್ಥಿತಾ ಕಾಶೀ ಪ್ರಾಪ್ತವ್ಯಾ ಕಥಮುತ್ತಮಾ ॥೨೫೮॥

ಅದೂರಸ್ಥಮಪಿ ಸ್ಪಷ್ಟಂ ವಸ್ತು ನೈವ ಹಿ ದೃಶ್ಯತೇ ।
ನಿಕಟೋಚ್ಚರಿತೋಽಪೀಷ್ಟಃ ಶಬ್ದೋ ನ ಶ್ರೂಯತೇ ತಥಾ ॥೨೫೯॥

ಭುಜ್ಯಂತೇ ಸ್ವಲ್ಪಮಪ್ಯನ್ನಂ ತನ್ನ ಜೀರ್ಯತಿ ಸರ್ವಥಾ ।
ಮಯಾ ದೂರಸ್ಥಿತಾ ಕಾಶೀ ಪ್ರಾಪ್ತವ್ಯಾ ಕಥಮುತ್ತಮಂ ॥೨೬೦॥

ಯಾವ ಕ್ಷೇತ್ರದಲ್ಲಿ ಮರಣಮಾತ್ರದಿಂದ ಈಶ್ವರ ಭಕ್ತಾಗ್ರಣಿಗಳು ಮುಕ್ತಿಯನ್ನು ಹೊಂದುವರು? ಯಾವ ಸ್ಥಳದಲ್ಲಿ ಶಿವನು ತನ್ನ ಪ್ರೇಯಸಿಯಾದ ಗಿರಿಜೆಯೊಂದಿಗೆ ಕ್ರೀಡಿಸುವನು? ಶಿವನಿಗೆ ಪ್ರಿಯರಾದ ನಂದಿಕೇಶನೇ ಮೊದಲಾದ ಪ್ರಮಥಗಣಗಳು ನೆಲಸಿರುವ ಪ್ರದೇಶವಾವುದು? ತಮ್ಮ ತಮ್ಮ ವರ್ಣಾಶ್ರಮ ಧರ್ಮಗಳಲ್ಲಿ ನಿರತರೂ, ಶಿವಲಿಂಗಾರ್ಚನೆಯಲ್ಲಿಯೇ ಆಸಕ್ತರೂ ಆದ ಜನರು ವಾಸವಾಗಿರುವ ಕ್ಷೇತ್ರವು ಅದಾವುದಾಗಿರಬಹುದು? ||೨೫೫-೨೫೬||

ಕಾಶೀಕ್ಷೇತ್ರವೊಂದಲ್ಲದೆ ಹಿಂದೆ ಹೇಳಿದ ಸಕಲ ಲಕ್ಷಣಗಳಿಂದ ಕೂಡಿರುವ ಇನ್ನಾವ ಕ್ಷೇತ್ರವೂ ಜಗತ್ತಿನಲ್ಲಿ ಇರುವುದಿಲ್ಲ. ||೨೫೭||

ನನ್ನ ಈ ಶರೀರವು ಜರ್ಜರಿತವಾಗಿರುವುದು. ಕಾಲುಗಳಲ್ಲಿ ಬಲವಿಲ್ಲ. ದೂರದೇಶದಲ್ಲಿರುವ ಕಾಶೀಕ್ಷೇತ್ರಕ್ಕೆ ನಾನು ಹೋಗುವ ಬಗೆ ಹೇಗೆ? ||೨೫೮||

ಅತ್ಯಂತ ಸಮೀಪದಲ್ಲಿರುವ ವಸ್ತುವೂ ಸಹ ಸ್ಪಷ್ಟವಾಗಿ ಕಾಣಿಸುವುದಿಲ್ಲ. ಸಮೀಪದಲ್ಲಿ ಉಚ್ಚರಿಸಿದ ಶಬ್ದವೂ ಸಹ ಕೇಳಿಸುವುದಿಲ್ಲ. ||೨೫೯||

ಸ್ವಲ್ಪವಾದ ಅನ್ನವನ್ನು ಮಾತ್ರ ತಿನ್ನುತ್ತಿರುವೆನು. ಆದರೂ ಅದು ಜೀರ್ಣಿಸ

ವಕ್ತುಂ ವಾಕ್ಯಾನಿ ನಾಯಾಂತಿ ಮಾರ್ಗಪ್ರಶ್ನಾರ್ಥಮಾಶು ಮೇ ।
ವಿತ್ತಂ ನಾಸ್ತ್ಯೇವ ಭಕ್ಷ್ಯಾರ್ಥಂ ನ ಪೂರ್ವಂ ಧನಮಾರ್ಜಿತಂ ॥೨೬೧॥

ಮಯಾ ದೂರಸ್ಥಿತಾ ಕಾಶೀ ಪ್ರಾಪ್ತವ್ಯಾ ಕಥಮುತ್ತಮಾ ।
ಕಾಶೀಯಾತ್ರಾರ್ಥಮುದ್ಯೋಗೋ ಯೌವನೇ ನ ಕೃತೋ ಮಯಾ ॥೨೬೨॥

ಅತಃ ಪರಂ ಕಥಂ ಪ್ರಾಪ್ಯಾ ಕಾಶೀ ಮೋಕ್ಷಪ್ರದಾ ಶುಭಾ ।
ಕಾಶೀಪ್ರಭಾವೋ ನ ಮಯಾ ಪೂರ್ವಂ ಜ್ಞಾತಃ ಕಥಂಚನ ॥೨೬೩॥

ಇದಾನೀಂ ಜೀರ್ಣದೇಹೇನ ಕಾಶೀ ಪ್ರಾಪ್ಯಾ ಕಥಂ ಮಯಾ ।
ಯಾವದಂಘ್ರಿಬಲಂ ಯಾವಚ್ಛ್ರೋತ್ರನೇತ್ರಬಲಂ ಪರಂ ॥೨೬೪॥

ಯಾವದ್ಬಾಹುಬಲಂ ತಾವತ್ಕಾಶೀ ಪ್ರಾಪ್ಯಾ ನರೋತ್ತಮೈಃ ।
ಯಾವನ್ನಾಶೋ ನ ದೇಹಸ್ಯ ಯಾವನ್ನಾಯಾರ್ಜಿತಂ ಧನಂ ॥೨೬೫॥

ಲಾರದು. ಹೀಗಿರುತ್ತಿರಲು ನಾನು ದೂರದೇಶದಲ್ಲಿರುವ ಕಾಶೀಕ್ಷೇತ್ರವನ್ನು ಪಡೆಯುವ ಬಗೆ ಹೇಗೆ? ॥೨೬೦॥

ಕಾಶೀಕ್ಷೇತ್ರಕ್ಕೆ ಹೋಗುವ ಮಾರ್ಗವು ಯಾವುದೆಂದು ಪಥಿಕರನ್ನು ಕೇಳಿ, ಅದರಿಂದ ಮಾರ್ಗವನ್ನು ತಿಳಿದು, ಕಾಶಿಗೆ ಹೋಗೋಣವೆಂದರೆ ಮಾರ್ಗವನ್ನು ಕೇಳಲು ಬಾಯಿಯಿಂದ ಮಾತುಗಳೇ ಹೊರಡಲಾರವು. ಮಾರ್ಗದಲ್ಲಿ ಆಹಾರ ಪದಾರ್ಥಗಳನ್ನು ಕೊಳ್ಳಲು ಸಾಕಷ್ಟು ದ್ರವ್ಯವೂ ನನ್ನ ಬಳಿ ಇರುವುದಿಲ್ಲ. ॥೨೬೧॥

ದೂರದೇಶದಲ್ಲಿರುವ ಆ ಕಾಶೀಕ್ಷೇತ್ರವನ್ನು ನಾನು ಸೇರುವ ಬಗೆ ಹೇಗೆ? ಯೌವ್ವನಕಾಲದಲ್ಲಿ ನಾನು ಕಾಶೀಯಾತ್ರೆಯನ್ನು ಕೈಗೊಳ್ಳಲಿಲ್ಲ. ॥೨೬೨॥

ಹೀಗಿರುವಾಗ ಈ ವಾರ್ಧಕ್ಯಾವಸ್ಥೆಯಲ್ಲಿ ಕಾಶೀಕ್ಷೇತ್ರವನ್ನು ಸೇರಲು ಸಾಧ್ಯವೇ? ಇದಕ್ಕೆ ಮುಂಚೆ ನಾನು ಕಾಶೀಕ್ಷೇತ್ರದ ಮಹಿಮೆಯನ್ನಾದರೂ ತಿಳಿದುಕೊಳ್ಳಲಿಲ್ಲ. ॥೨೬೩॥

ಈಗ ಜರ್ಜರಿತವಾದ ಈ ಶರೀರವನ್ನು ಹೊತ್ತುಕೊಂಡು ನಾನು ಕಾಶಿಗೆ ತೆರಳುವ ಬಗೆ ಹೇಗೆ? ಕಾಲುಗಳು, ಕಿವಿ, ಕಣ್ಣು, ಬಾಹುಗಳು ಇವು ಬಲವಾಗಿರುವವರೆಗೆ ಮನುಷ್ಯರು ಕಾಶೀಕ್ಷೇತ್ರಕ್ಕೆ ಹೋಗಬಹುದು. ಮತ್ತು ಶರೀರವು ದೃಢವಾಗಿ

ತಾವದೇವ ನರೈಃ ಕಾಶೀ ಪ್ರಾಪ್ತವ್ಯಾ ಮುಕ್ತಿದಾಯಿನೀ ||೨೬೬||

ಯಾವತ್ಪುಷ್ಟಿಃ ಶರೀರಸ್ಯ ಯಾವನ್ನ ವ್ಯಾಧಿಪೀಡನಂ ।
ಯಾವದತ್ಯಂತಸಂತೋಷಸ್ತಾವತ್ಕಾಶೀ ಸಮಾಶ್ರಯೇತ್ ||೨೬೭||

ಯೇನ ನಾಲೋಕಿತಾ ಕಾಶೀ ಸ ನರೋ ನ ನರಃ ಸ್ಮೃತಃ ।
ಕಿಂ ತು ವಿಡ್ಭಕ್ಷಣಪ್ರೀತಃ ಸಾರಮೇಯೋ ನ ಸಂಶಯಃ ||೨೬೮||

ಯೇನ ನಾಭ್ಯರ್ಚಿತಂ ಲಿಂಗಂ ಶ್ರೀಮದ್ವಿಶ್ವೇಶ್ವರಾಭಿಧಂ ।
ಸ ಕುಲೀನೋಽಪಿ ತಜ್ಜನ್ಮ ವ್ಯರ್ಥಂ ನಾಸ್ತ್ಯತ್ರ ಸಂಶಯಃ ||೨೬೯||

ಏಕೋ ವಾ ಯದಿ ಯದ್ವಂಶೇ ಕಾಶೀಂ ಪ್ರತಿ ನ ಗಚ್ಛತಿ ।
ತತ್ಕುಲಂ ಪುಲ್ಕಸಕುಲಂ ಭವತ್ಯೇವ ನ ಸಂಶಯಃ ||೨೭೦||

ಯೇನ ನಾಲೋಕಿತಾ ಕಾಶೀ ಯೇನ ನಾಭ್ಯರ್ಚಿತಃ ಶಿವಃ ।
ಸೋಽಪಿ ಕಿಂ ಮನುಜಃ ಕಿಂ ತು ಕ್ರಿಮಿರ್ವಿಷ್ಠಾಗತೋ ಯಥಾ ||೨೭೧||

ರುವವರೆಗೂ, ನ್ಯಾಯಮಾರ್ಗದಿಂದ ಸಂಪಾದಿಸಿದ ದ್ರವ್ಯವು ತನ್ನ ಬಳಿ ಇರುವವರೆಗೂ ಕಾಶೀಕ್ಷೇತ್ರಕ್ಕೆ ತೆರಳುವುದು ಸಾಧ್ಯ. ||೨೬೪-೨೬೫||

ಎಲ್ಲಿನವರೆಗೆ ಶರೀರಸೌಷ್ಠವವು ಇರುವುದೋ ಮತ್ತು ಎದುವರೆಗೆ ಮನಸ್ಸಂತೋಷವೂ ದೀರ್ಘವಾದ ಆರೋಗ್ಯವೂ ಇರುವುದೋ, ಅದುವರೆಗೆ ಕಾಶೀಕ್ಷೇತ್ರಕ್ಕೆ ತೆರಳಬಹುದು. ||೨೬೬-೨೬೭||

ಕಾಶೀಕ್ಷೇತ್ರವನ್ನು ನೋಡದಿರುವವನು ನಿಜವಾಗಿಯೂ ಮನುಷ್ಯನಾಗಿರದೆ ಅವನು ಅಮೇಧ್ಯಭಕ್ಷಣದಿಂದ ಸಂತೋಷಗೊಂಡಿರುವ ನಾಯಿಯೇ ಆಗಿರುವನು ಇದು ನಿಜ. ||೨೬೮||

ವಿಶ್ವೇಶ್ವರಲಿಂಗವನ್ನು ಆರಾಧಿಸದಿರುವವನು ಸತ್ಕುಲಪ್ರಸೂತನಾಗಿದ್ದರೂ ಸಹ ಅವನ ಜನ್ಮವು ವ್ಯರ್ಥವೇ ಸರಿ. ||೨೬೯||

ಯಾವ ಮನುಷ್ಯನ ವಂಶದಲ್ಲಿ ಒಬ್ಬನಾದರೂ ಕಾಶೀಕ್ಷೇತ್ರಕ್ಕೆ ಹೋಗುವುದಿಲ್ಲವೋ, ಅವನ ವಂಶವು ಚಂಡಾಲನ ವಂಶವೇ ಆಗಿರುವುದು. ಇದುನಿಜ. ||೨೭೦||

ಯಾವ ಮನುಜನು ಕಾಶೀಕ್ಷೇತ್ರವನ್ನು ನೋಡಿರುವುದಿಲ್ಲವೋ ಮತ್ತು ಯಾರು ಶಿವನನ್ನು ಆರಾಧಿಸುವುದಿಲ್ಲವೋ ಅವನು ಮನುಷ್ಯನೆಂದೆನಿಸಿಕೊಳ್ಳ

ಸರ್ವರಾಷ್ಟ್ರಾಧಿಪೋ ರಾಜಾ ಜಿತಶಕ್ರೋಽಪಿ ಸರ್ವಥಾ ।
ನ ಕಾಶೀದೇಶಕೀಟೇನ ಸದೃಶಃ ಸತ್ಯಮುಚ್ಯತೇ ॥೨೭೨॥

ಅಧೀತವೇದಶಾಸ್ತ್ರೋಽಪಿ ಕಾಶೀದರ್ಶನವರ್ಜಿತಃ ।
ನ ಕಾಶೀದೇಶಕೀಟೇನ ಸದೃಶಂ ಸತ್ಯಮುಚ್ಯತೇ ॥೨೭೩॥

ಅನೇಕಧನದೋ ನಿತ್ಯಂ ಮಹಾದಾನಪ್ರದೋಽಪಿ ವಾ ।
ನ ಕಾಶೀಕ್ಷೇತ್ರಕೀಟೇನ ಸದೃಶಃ ಸತ್ಯಮುಚ್ಯತೇ ॥೨೭೪॥

ವರಂ ಭಿಕ್ಷಾಟನಂ ಕಾಶ್ಯಾಂ ನಾತ್ರ ರಾಷ್ಟ್ರೇಶತಾ ವರಾ ।
ನ ಕಾಶೀದೇಶಕೀಟೇನ ಸದೃಶಃ ಸತ್ಯಮುಚ್ಯತೇ ॥೨೭೫॥

ಬಲ್ಲನೇ ? ಎಂದಿಗೂ ಇಲ್ಲ. ಮತ್ತೇನೆಂದರೆ ಅವನು ನಿರಂತರವೂ ಮಲಮೂತ್ರಗಳಲ್ಲಿ ಬಿದ್ದು ಒದ್ದಾಡುವ ಕ್ರಿಮಿಕೀಟಗಳಂತೆ ಯಾವ ಪ್ರಯೋಜನವನ್ನೂ ಸಾಧಿಸಲಾರನು. ||೨೭೧||

ದೇವೇಂದ್ರನನ್ನು ಸಹ ಜಯಿಸಿ, ಸಕಲ ರಾಜ್ಯಗಳಿಗೂ ಅಧಿಪತಿಯಾದ ರಾಜನೂ ಕೂಡ ಕಾಶೀಕ್ಷೇತ್ರವನ್ನೊಂದನ್ನು ನೋಡದಿದ್ದರೆ ಅವನು ಕಾಶೀಕ್ಷೇತ್ರದಲ್ಲಿರುವ ಒಂದಾನೊಂದು ಕೀಟಕ್ಕೂ ಸಮಾನನೆನಿಸುವುದಿಲ್ಲ. ||೨೭೨||

ವೇದವೇದಾಂಗಗಳಲ್ಲಿ ಪಾರಂಗತನಾಗಿದ್ದರೂ ಸಹ ಯಾವನು ಕಾಶೀಕ್ಷೇತ್ರವನ್ನು ನೋಡಿರುವುದಿಲ್ಲವೋ ಅವನು ಕಾಶಿಯಲ್ಲಿರುವ ಕೀಟಕ್ಕಿಂತಲೂ ತುಚ್ಛನಾಗಿರುವನು. ||೨೭೩||

ನಾನಾಬಗೆಯ ಧನಗಳನ್ನು ದಾನಮಾಡುವವನಾಗಿಯೂ, ಪ್ರತಿದಿನವೂ ಮಹಾದಾನಗಳನ್ನು ಮಾಡುವವನಾಗಿದ್ದರೂ ಸಹ ಕಾಶೀಕ್ಷೇತ್ರವನ್ನು ನೋಡದಿರುವವನು ಕಾಶಿಯಲ್ಲಿರುವ ಕೀಟಕ್ಕಿಂತಲೂ ಲಾಘವವನ್ನು ಹೊಂದುವನು. ||೨೭೪||

ದೇಶಾಂತರದಲ್ಲಿ ರಾಜನಾಗಿರುವುದಕ್ಕಿಂತಲೂ ಕಾಶೀಕ್ಷೇತ್ರದಲ್ಲಿ ಭಿಕ್ಷಾಟನೆಯಿಂದ ಜೀವಿಸುವುದೇ ಲೇಸು. ಹೀಗಿರುವಾಗ ಯಾವನು ಕಾಶೀಕ್ಷೇತ್ರಕ್ಕೆ ತೆರಳುವುದಿಲ್ಲವೋ ಅವನು ಕಾಶೀಕ್ಷೇತ್ರದಲ್ಲಿರುವ ಒಂದಾನೊಂದು ಕೀಟಕ್ಕಿಂತಲೂ ತುಚ್ಛನು. ||೨೭೫||

ವರಂ ಶಾಕಾಶನಂ ಕಾಶ್ಯಾಂ ನಾತ್ರ ಶಾಲ್ಯಶನಂ ವರಂ ।
ಜಲಪಾನಂ ವರಂ ಕಾಶ್ಯಾಂ ಸರ್ವಾಘೌಘವಿನಾಶನಂ ॥೨೭೬॥

ವರಂ ನಾತ್ರಾಮೃತಸ್ಯಾಪಿ ಪಾನಂ ಸತ್ಯಂ ನ ಸಂಶಯಃ ।
ಅತ್ರ ಪುಷ್ಟಿಕರಂ ಭೈಕ್ಷ್ಯಂ ನವರಂ ಘೃತಪಾಚಿತಂ ॥೨೭೭॥

ದೇಹಶುದ್ಧಿಕರಂ ಕಾಶ್ಯಾಂ ಜೀರ್ಣಪರ್ಣಾಶನಂ ವರಂ ।
ಮಾಂ ನಯಾಖಿಲದೇವೇಶ ಕಾಶೀಂ ವಿಶ್ವೇಶ್ವರ ಪ್ರಭೋ ॥೨೭೮॥

ದೀನಾನಾಥೈಕಶರಣ ಕರುಣಾಕರ ಶಂಕರ ।
ಹರ ಧೀರಾನುರಾಧಾರ ಮಾಮನಾಧಾರಮುದ್ಧರ ॥೨೭೯॥

ಅಪಾರಘೋರಸಂಸಾರಪಾರಾವಾರಾದತಿತ್ವರಂ ।
ನೋಪೇಕ್ಷ್ಯಾ ಮಯಿ ಕರ್ತವ್ಯಾ ಸರ್ವಥಾ ಸರ್ವಥಾ ಪ್ರಭೋ॥೨೮೦॥

ಇಲ್ಲಿ ರುಚಿಕರವಾದ ಪಕ್ವಾನ್ನವನ್ನು ತಿಂದು ಜೀವಿಸುವುಕ್ಕಿಂತಲೂ ಕಾಶೀಕ್ಷೇತ್ರದಲ್ಲಿ ಕೇವಲ ಕಾಯಿಪಲ್ಯಗಳನ್ನು ತಿಂದು ಜೀವಿಸುವುದೇ ಲೇಸು. ಕಾಶೀಕ್ಷೇತ್ರದಲ್ಲಿದ್ದು ಸಕಲ ಪಾಪಗಳನ್ನೂ ನಾಶಮಾಡುವ ತೀರ್ಥಜಲವನ್ನು ಪಾನ ಮಾಡಿ ಜೀವಿಸುವುದು ಮತ್ತೂ ಶ್ರೇಯಸ್ಕರವಾಗಿರುವುದು. ॥೨೭೬॥

ಇಲ್ಲಿ ಅಮೃತವನ್ನು ಪಾನಮಾಡಿ ಜೀವಿಸಿರುವುದೂ ಸಹ ಶ್ರೇಯಸ್ಕರವಲ್ಲ. ಇಲ್ಲಿ ಘೃತದಿಂದ ಸಿದ್ಧಪಡಿಸಿದ ಪುಷ್ಟಿಕರವಾದ ಪಕ್ವಾನ್ನಕ್ಕಿಂತಲೂ, ಕಾಶೀಕ್ಷೇತ್ರ ದಲ್ಲಿ ಭಿಕ್ಷಾಟನೆಯಿಂದ ಜೀವಿಸುವುದೇ ಮೇಲು. ॥೨೭೭॥

ಕಾಶೀಕ್ಷೇತ್ರದಲ್ಲಿ ಈ ದೇಹವನ್ನು ಪವಿತ್ರೀಕರಿಸುವ ಜೀರ್ಣವಾದ ತರಗೆಲೆ ಗಳನ್ನು ತಿಂದು ಜೀವಿಸುವುದೇ ಲೇಸು. ಓ ವಿಶ್ವೇಶ್ವರನೇ, ದೇವೇಶನೇ, ನನ್ನನ್ನು ಕಾಶೀಕ್ಷೇತ್ರಕ್ಕೆ ಕರೆದುಕೊಂಡು ಹೋಗು. ॥೨೭೮॥

ಓ ದೀನದಯಾಲುವೇ, ಅನಾಥರಕ್ಷಕನೇ, ಕರುಣಾಕರನೇ, ಶಂಕರ, ಹರ, ದೇವೇಶನೇ, ನಿರಾಧಾರನಾದ ನನ್ನನ್ನು ಉದ್ಧರಿಸು. ॥೨೭೯॥

ಓ ಪ್ರಭುವೇ, ಅಪಾರವೂ, ಭಯಂಕರವೂ ಆದ ಈ ಸಂಸಾರಸಾಗರದಿಂದ ನನ್ನನ್ನು ಉದ್ಧರಿಸು. ನನ್ನನ್ನು ಅಲ್ಲಗಳೆಯಬೇಡ. ॥೨೮೦॥

ಕಾಶೀಂ ಸ್ರಾಪಯ ಮಾಮೀಶ ಶರಣಾಗತವತ್ಸಲ ।
ಕದಾ ಕಾಶೀಂ ಗಮಿಷ್ಯಾಮಿ ದ್ರಕ್ಷ್ಯೇ ವಿಶ್ವೇಶ್ವರಂ ಪ್ರಭುಂ ॥೨೮೧॥

ಕದಾ ಧನ್ಯೋ ಭವಿಷ್ಯಾಮಿ ಕದಾ ಶಂಭುಃ ಪ್ರಸೀದತಿ ।
ಕದಾ ವಾಶೇಷಪಾಪೌಘವಿನಾಶಕರಮುತ್ತಮಂ ॥೨೮೨॥

ಶ್ರೀ ವಿಶ್ವೇಶ್ವರ ಲಿಂಗಸ್ಯ ಪಾಸ್ಯೇ ನಿರ್ಣೇ ಜನೋದಕಂ ।
ದಂಡಪಾಣಿಪ್ರಸಾದೇನ ಜ್ಞಾನವಾಪ್ಯಾಂ ಕದಾ ಮುದಾ ॥೨೮೩॥

ಏಕಂ ವಾ ಮಜ್ಜನಂ ಸಮ್ಯಕ್ಕರಿಷ್ಯಾಮ್ಯಘಶಾಂತಯೇ ।
ಕದಾವಧೀರಿತಸುಧೈರ್ಜ್ಞಾನವಾಪೀಜಲೈರಹಂ ॥೨೮೪॥

ಪಿತೃಮುಕ್ತಿಪ್ರದೈಃ ಶುದ್ಧೈಃ ಕರಿಷ್ಯೇ ತರ್ಪಣಂ ಮುದಾ ।
ಪ್ರದಕ್ಷಿಣತ್ರಯಂ ವಾಪಿ ಕೃತ್ವಾ ಸಮ್ಯಗ್ಯಥಾವಿಧಿ ॥೨೮೫॥

ಓ ಶರಣಾಗತವತ್ಸಲನೇ, ಜಗದೀಶನೇ, ನನ್ನನ್ನು ಕಾಶೀಕ್ಷೇತ್ರಕ್ಕೆ ಕೊಂಡೊಯ್ದುಬಿಡು. ಅಶಕ್ತನಾದ ನಾನು ಕಾಶೀಕ್ಷೇತ್ರಕ್ಕೆ ಯಾವಾಗ ಹೋಗುವೆನು? ಮತ್ತು ವಿಶ್ವೇಶ್ವರನನ್ನು ನೋಡುವ ಸಮಯವಾವುದು? ||೨೮೧||

ನಾನು ಯಾವಾಗ ಕೃತಕೃತ್ಯನಾಗುವೆನು! ನನಗೆ ಶಂಭುವು ಪ್ರಸನ್ನನಾಗುವ ಸಮಯವು ಆದಾವುದು? ಸಕಲ ಪಾಪಗಳನ್ನೂ ಹೋಗಲಾಡಿಸುವ ವಿಶ್ವೇಶ್ವರ ಲಿಂಗವನ್ನು ಸಂದರ್ಶಿಸುವ ಸಮಯವಾವುದು? ||೨೮೨||

ವಿಶ್ವೇಶ್ವರಲಿಂಗಕ್ಕೆ ಸ್ನಾನಮಾಡಿಸಿದ ಉದಕವನ್ನು ಯಾವಾಗ ಹೊಂದುವೆನು? ದಂಡಪಾಣಿಯ ಅನುಗ್ರಹವನ್ನು ಸಂಪಾದಿಸಿ, ಪಾಪನಾಶಕ್ಕೋಸ್ಕರ ಜ್ಞಾನವಾಪಿಯಲ್ಲಿ ಒಂದು ಬಾರಿಯಾದರೂ ಮುಳುಗಿ ಸಂತೋಷವನ್ನು ಹೊಂದುವ ಕಾಲವಾದರೂ ಆದಾವುದು? ||೨೮೩||

ಪಿತೃಗಳಿಗೆ ಮುಕ್ತಿಯನ್ನುಂಟುಮಾಡುವುದೂ, ಪವಿತ್ರವೂ, ರುಚಿಯಲ್ಲಿ ಅಮೃತವನ್ನು ಮೀರಿಸುವುದೂ ಆದ ಜ್ಞಾನವಾಪಿಯ ನೀರಿನಿಂದ ತರ್ಪಣವನ್ನು ಕೊಡುವ ಸಮಯವಾದರೂ ಯಾವುದು? ||೨೮೪||

ವಿಶ್ವನಾಥನಿಗೆ ಮೂರೇ ಮೂರು ಪ್ರದಕ್ಷಿಣೆಗಳನ್ನಾದರೂ ನೆರವೇರಿಸಿ ವಿಶ್ವನಾಥನಿಗೆ ನಮಸ್ಕರಿಸುವ ಸಮಯವಾವುದು? ||೨೮೫||

ಕದಾ ವಾ ವಿಶ್ವನಾಥಸ್ಯ ಪ್ರಣಾಮಂ ಕರವಾಣ್ಯಹಂ ।
ಕದಾ ಶಿವಪ್ರಸಾದೇನ ಮಣಿಮಂಡಲಮಂಡಿತಂ ॥೨೮೬॥

ಮುಕ್ತಿಮಂಡಪಮಾಸಾದ್ಯ ವಸಾಮಿ ಕ್ಷಣಮಾದರಾತ್ ।
ಕದಾ ಧುಂಡೀಶಮಮಲಮುಮಾಪುತ್ರಮಘಾಪಹಂ ॥೨೮೭॥

ನವದೂರ್ವಾಂಕುರೈಃ ಶುದ್ಧೈಃ ಪೂಜಯಾಮಿ ಮಹೇಶ್ವರಂ ।
ಶ್ರೀಮದ್ವಿಶ್ವೇಶ್ವರೇ ಲಿಂಗೇ ಬ್ರಹ್ಮವಿಷ್ಣ್ವಾದಿಪೂಜಿತೇ ॥೨೮೮॥

ಕದಾ ಪೂಜಾಂ ಕರಿಷ್ಯಾಮಿ ಬಹುಬಿಲ್ವದಲೈಃ ಶುಭೈಃ ।
ವೀರೇಶ್ವರಾಭಿಧಂ ಲಿಂಗಂ ಕದಾ ದ್ರಕ್ಷ್ಯೇ ಮನೋಹರಂ ॥೨೮೯॥

ಕದಾ ಪಶುಪತೀಶಂ ಚ ಪಶ್ಯಾಮಿ ಸಕಲಾರ್ಥದಂ ।
ಶ್ರೀ ಕಾಲಭೈರವಂ ದೇವಂ ದೇವಾನಾಮಪಿ ಶಾಸಕಂ ॥೨೯೦॥

ಕದಾ ಪಾಪೌಘಶಾಂತ್ಯರ್ಥಂ ದ್ರಕ್ಷ್ಯೇ ಯಕ್ಷಾದಿಸೇವಿತಂ ।
ವಿಘ್ನಾಂಧಕಾರಮಾರ್ತಾಂಡಮಂಡಲೋಪಮಮುತ್ತಮಂ ॥೨೯೧॥

ಈಶ್ವರಾನುಗ್ರಹಕ್ಕೆ ಪಾತ್ರನಾಗಿ ರತ್ನಮಾಲೆಗಳಿಂದ ಅಲಂಕೃತವಾದ ಮುಕ್ತಿ ಮಂಟಪವನ್ನು ಸೇರಿ ಕ್ಷಣಕಾಲವಾದರೂ ಅಲ್ಲಿ ವಾಸಮಾಡುವ ಸಮಯವು ಯಾವುದು ? ॥೨೮೬॥

ಉಮಾಪುತ್ರನೂ ಪರಿಶುದ್ಧನೂ ಆದ ಧುಂಡಿರಾಜನನ್ನು ಯಾವಾಗ ನೂತನ ವಾದ ದೂರ್ವಾಂಕುರಗಳಿಂದ ಪೂಜಿಸುವೆನು ? ಬ್ರಹ್ಮ, ವಿಷ್ಣು ಮುಂತಾದ ದೇವತೆ ಗಳಿಂದಲೂ ಪೂಜಿಸಲ್ಪಟ್ಟ ವಿಶ್ವೇಶ್ವರಲಿಂಗದಲ್ಲಿ ಬಿಲ್ವಪತ್ರೆಗಳಿಂದ ಶಿವನನ್ನು ಅರ್ಚಿಸುವ ಕಾಲವಾವುದು ? ॥೨೮೭-೨೮೮॥

ಸುಂದರವಾದ ವೀರೇಶ್ವರಲಿಂಗವನ್ನು ಯಾವಾಗ ನೋಡುವೆನು ? ಪಶುಪತಿ ಯನ್ನು ನೋಡುವ ಕಾಲವಾವುದು? ಯಾವ ಸಮಯದಲ್ಲಿ ಯಕ್ಷಾದಿಗಳಿಂದ ಸೇವಿತನೂ, ದೇವತೆಗಳಿಗೂ ಶಿಕ್ಷಕನೂ ಆದ ಕಾಲಭೈರವನನ್ನು ನೋಡಿ ನನ್ನ ಪಾಪಗಳನ್ನು ಕಳೆದುಕೊಂಡೇನು ? ॥೨೮೯-೨೯೦॥

ಸೂರ್ಯನೋಪಾದಿಯಲ್ಲಿ ವಿಘ್ನವೆಂಬ ಅಂಧಕಾರವನ್ನು ಹೋಗಲಾಡಿಸು ವವನೂ, ಈಶ್ವರನಿಗೆ ಪ್ರಿಯನೂ ಆದ ವಕ್ರತುಂಡೇಶನನ್ನು ಅದಾವಾಗ ಸಂದರ್ಶಿ ಸುವೆನು ? ॥೨೯೧॥

ವಕ್ರತುಂಡೇಶಮನಘಂ ಕದಾ ದ್ರಕ್ಷ್ಯೇ ಶಿವಪ್ರಿಯಂ ।
ಶಿವಗಂಗಾಜಲೇ ರಮ್ಯೇ ಸನ್ಮಂಗಲಕರೇ ಶುಭೇ ॥೨೯೨॥

ಕದಾ ಸ್ನಾನಂ ಕರಿಷ್ಯಾಮಿ ತರ್ಪಣಂ ಚ ಯಥಾವಿಧಿ ।
ಅಶೇಷವಿಷಶಾಂತ್ಯರ್ಥಂ ಜನ್ಮರೋಗೌಷಧೇ ಪರೇ ॥೨೯೩॥

ಕದಾ ಕರ್ಕೋಟಕೇ ತೀರ್ಥೇ ಕರಿಷ್ಯೇ ಸ್ನಾನಮಾದರಾತ್ ।
ಶ್ರೀಮದೋಂಕಾರನಾಥಂ ಚ ಕದಾ ಪಶ್ಯಾಮಿ ಸಾದರಂ ॥೨೯೪॥

ಓಂಕಾರತೀರ್ಥೇ ಚ ಕದಾ ಕರಿಷ್ಯೇ ಸ್ನಾನಮಾದರಾತ್ ।
ಕದಾ ಪಿಲಿಪ್ಪಿಲಾಕುಂಡೇ ಸ್ನಾತ್ವಾ ಸಂತರ್ಪ್ಯ ಪೂರ್ವಜಾನ್ ॥೨೯೫॥

ತ್ರಿಲೋಚನೇಶಮಾರಾಧ್ಯಂ ಕದಾ ದ್ರಕ್ಷ್ಯೇ ಮನೋಹರಂ ।
ಕದಾ ಸ್ನಾತ್ವಾ ಹಂಸತೀರ್ಥೇ ಕೃತ್ತಿವಾಸೇಶ್ವರಂ ಪ್ರಭುಂ ॥೨೯೬॥

ಪೂಜಯಿತ್ವಾ ವಿಧಾನೇನ ಧ್ವಸ್ತಪಾಪೋ ಭವಾಮ್ಯಹಂ ।
ಕದಾ ಕೇದಾರಕುಂಡೇಽಪಿ ಸ್ನಾತ್ವಾಭ್ಯರ್ಚ್ಯ ಪಿತೄನ್ಮುದಾ ॥೨೯೭॥

ರಮ್ಯವೂ ಮಂಗಳಕರವೂ ಆದ ಶಿವಗಂಗೆಯಲ್ಲಿ ಸ್ನಾನವನ್ನಾಚರಿಸಿ ಪಿತೃ ತರ್ಪಣವನ್ನು ನೆರವೇರಿಸುವ ಕಾಲವಾವುದು? ॥೨೯೨॥

ವಿಷದೋಷವನ್ನು ಹೋಗಲಾಡಿಸಿಕೊಳ್ಳುವುದಕ್ಕೋಸ್ಕರ ಜನ್ಮವೆಂಬ ರೋಗವನ್ನು ಕಳೆದೋಡಿಸುವ ಕರ್ಕೋಟಕತೀರ್ಥದಲ್ಲಿ ಯಾವ ಕಾಲದಲ್ಲಿ ಸ್ನಾನವನ್ನಾಚರಿಸುವೆನು. ॥೨೯೩॥

ಯಾವ ಸಮಯದಲ್ಲಿ ಓಂಕಾರೇಶ್ವರನನ್ನು ಸಂದರ್ಶಿಸುವೆನು? ಮತ್ತು ಎಷ್ಟುಹೊತ್ತಿಗೆ ಓಂಕಾರತೀರ್ಥದಲ್ಲಿ ಸ್ನಾನಮಾಡುವೆನು. ॥೨೯೪॥

ಪಿಲಿಪ್ಪಿಲಾಕುಂಡದಲ್ಲಿ ಸ್ನಾನಮಾಡಿ ಪಿತೃತರ್ಪಣಗಳನ್ನು ನೆರವೇರಿಸಿ ಪೂಜ್ಯನಾದ ತ್ರಿಲೋಚನೇಶ್ವರನನ್ನು ನೋಡುವ ಕಾಲವಾವುದು? ॥೨೯೫॥

ಯಾವಾಗ ಹಂಸತೀರ್ಥದಲ್ಲಿ ಸ್ನಾನವನ್ನಾಚರಿಸಿ ಕೃತ್ತಿವಾಸೇಶ್ವರನನ್ನು ಪೂಜಿಸಿ ಪಾಪಗಳಿಂದ ವಿನಿರ್ಮುಕ್ತನಾಗುವೆನು? ॥೨೯೬॥

ಕೇದಾರೇಶ್ವರಕುಂಡದಲ್ಲಿ ಸ್ನಾನವನ್ನು ಮಾಡಿ ಪಿತೃಗಳನ್ನು ಆರಾಧಿಸಿ

ಕೇದಾರೇಶ್ವರಮಭ್ಯರ್ಚ್ಯ ತುಷ್ಟಚಿತ್ತೋ ಭವಾಮ್ಯಹಂ ।
ಸ್ನಾತ್ವಾ ಲೋಲಾರ್ಕಕುಂಡೇಽಪಿ ಲೋಲಾರ್ಕೇಶಂ ಪ್ರಣಮ್ಯ ಚ ॥೯೮॥

ಕದಾ ಪುಣ್ಯಪ್ರಭಾವೇಣ ದ್ರಕ್ಷ್ಯಾಮ್ಯರ್ಕವಿನಾಯಕಂ ।
ನತ್ವಾ ಸಿದ್ಧೇಶ್ವರಂ ಸಮ್ಯಗ್ದುರ್ಗಾಕುಂಡೇ ಮನೋಹರೇ ॥೯೯॥

ಸ್ನಾತ್ವಾ ದುರ್ಗಾಂ ಜಗದ್ವಂದ್ಯಾಂ ಕದಾ ದ್ರಕ್ಷ್ಯೇ ಶಿವಪ್ರಿಯಾಂ ।
ಸರ್ವಸಿದ್ಧಿಪ್ರದೈಃ ಶುದ್ಧೈಃ ಕಾಮಾಕ್ಷೀತೀರ್ಥವಾರಿಭಿಃ ॥೧೦೦॥

ಸ್ನಾತ್ವಾ ತತ್ರ ಕರಿಷ್ಯಾಮಿ ಕದಾ ತರ್ಪಣಮಾದರಾತ್ ।
ನವಬಿಲ್ವದಲೈಃ ಶುದ್ಧೈಃ ಕಾಮಾಕ್ಷೀಂ ಸಾದರಂ ಮುದಾ ॥೧೦೧॥

ಕದಾ ಸಮರ್ಚಯಿಷ್ಯಾಮಿ ಸರ್ವಾಭೀಷ್ಟಪ್ರದಾಯಿನೀಂ ।
ಅನ್ನಪೂರ್ಣಾಮನನ್ನಾನಾಮನ್ನದಾತ್ರೀಂ ಭಯಾಪಹಾಂ ॥೧೦೨॥

ಬಳಿಕ ಕೇದಾರೇಶ್ವರನನ್ನು ಪೂಜಿಸಿ ಮನಃಸಂತೋಷವನ್ನು ಹೊಂದುವ ಕಾಲವು ಆದಾವುದು? ॥೯೭॥

ಲೋಲಾರ್ಕಕುಂಡದಲ್ಲಿ ಸ್ನಾನವನ್ನಾಚರಿಸಿ, ಲೋಲಾರ್ಕೇಶನಿಗೆ ನಮಸ್ಕರಿಸಿ ಅರ್ಕವಿನಾಯಕನನ್ನು ಸಂದರ್ಶಿಸುವ ಕಾಲವಾವುದು? ॥೯೮॥

ಯಾವ ಕಾಲದಲ್ಲಿ ಸಿದ್ಧೇಶ್ವರನಿಗೆ ನಮಸ್ಕರಿಸಿ, ರಮ್ಯವಾದ ದುರ್ಗಾಕುಂಡದಲ್ಲಿ ಸ್ನಾನಮಾಡಿ ಜಗದ್ವಂದ್ಯಳಾದ ದುರ್ಗಾದೇವಿಯನ್ನು ಸಂದರ್ಶಿಸುವೆನು? ॥೯೯॥

ಸಕಲ ಸಿದ್ಧಿಗಳನ್ನೂ ಪೂರಯಿಸುವುದೂ, ಶುದ್ಧವೂ ಆದ ಕಾಮಾಕ್ಷೀತೀರ್ಥದ ಜಲದಿಂದ ಸ್ನಾನಮಾಡಿ ಅಲ್ಲಿ ಆದಾವಾಗ ಪಿತೃತರ್ಪಣವನ್ನು ನೆರವೇರಿಸುವೆನು? ॥೧೦೦॥

ನಿರ್ಗತಿಕರಿಗೆ ಅನ್ನವನ್ನು ನೀಡುವವಳೂ, ಸಂಸಾರಭಯವನ್ನು ಹೋಗಲಾಡಿಸುವವಳೂ ಆದ ಅನ್ನಪೂರ್ಣೆಯನ್ನು ಸಂದರ್ಶಿಸುವ ಕಾಲವು ಯಾವಾಗ ಸಂಭವಿಸಲಿರುವುದು? ॥೧೦೨॥

ಕದಾ ದ್ರಕ್ಷ್ಯಾಮಿ ಸುಭಗಾಂ ವರದಾನವಿಚಕ್ಷಣಾಂ ।
ಕದಾ ತಪಃ ಕರಿಷ್ಯಾಮಿ ಜ್ಞಾನವಾಪೀತಟೇ ಶುಭೇ ॥೩೦೩॥

ಶಿವಭಾವಂ ಪ್ರಪದ್ಯಾಮಿ ಶಂಕರಾನುಗ್ರಹಾತ್ಕದಾ ।
ಕದಾ ಶಿವ ಮಹೇಶಾನ ಪಾರ್ವತೀರಮಣ ಪ್ರಭೋ ॥೩೦೪॥

ಮಹಾದೇವೇತಿ ವಿಲಪನ್ಕಾಶ್ಯಾಂ ತ್ಯಕ್ಷ್ಯೇ ತನುಂ ಮುದಾ ।
ಏವಮುಕ್ತ್ವಾ ಸಕೃದ್ವಾಪಿ ಕೃತ್ವಾ ಶಂಕರಪೂಜನಂ ॥೩೦೫॥

ಶನೈಃ ಶನೈರಾಜಗಾಮ ಕಾಶೀಂ ಪ್ರತಿ ಶಿವಾರ್ಚಕಃ ।
ಕಾಶೀಮಾಗತ್ಯ ಸ ತತೋ ದಂಡಪಾಣಿಪ್ರಸಾದತಃ ॥೩೦೬॥

ಜ್ಞಾನವಾಪೀಜಲೇ ಶುದ್ಧೇ ಚಕಾರ ಸ್ನಾನಮಾದರಾತ್ ।
ತತಶ್ಚಕಾರ ವಿಮಲಃ ಶ್ರಾದ್ಧಮನ್ನೇನ ಸಾದರಂ ॥೩೦೭॥

ಪಿಂಡದಾನಂ ಚ ಪಿಷ್ಟೇನ ಚಕಾರ ವಿಧಿಪೂರ್ವಕಂ ।
ತದಾ ತತ್ಪಿತರಃ ಪೂರ್ವಮಘೋರೇ ನರಕೇ ಸ್ಥಿತಾಃ ॥೩೦೮॥

ಯಾವಾಗ ಜ್ಞಾನವಾಪಿಯ ದಡದಲ್ಲಿ ತಪಸ್ಸನ್ನಾಚರಿಸಿ, ಈಶ್ವರಾನುಗ್ರಹದಿಂದ ಶಿವಸಾಯುಜ್ಯವನ್ನು ಹೊಂದುವೆನು. ॥೩೦೩॥

ಶಿವ, ಮಹೇಶ, ಪಾರ್ವತೀರಮಣ, ಜಗತ್ಪ್ರಭೋ, ಮಹಾದೇವ ಎಂದು ಶಿವನಾಮಗಳನ್ನೇ ನಿರಂತರವೂ ಉಚ್ಚರಿಸುತ್ತಾ ಅದಾವಾಗ ಪವಿತ್ರವಾದ ಕಾಶೀಕ್ಷೇತ್ರದಲ್ಲಿ ಶರೀರವನ್ನು ತ್ಯಜಿಸುವೆನು? ॥೩೦೪॥

ಹೀಗೆಂದು ಹೇಳಿ ಆ ಬ್ರಾಹ್ಮಣನು ಒಂದು ಬಾರಿ ಶಿವನನ್ನು ಪೂಜಿಸಿ, ಬಳಿಕ ತಾನಿದ್ದ ಸ್ಥಳದಿಂದ ಮೆಲ್ಲಮೆಲ್ಲನೆ ಕಾಶೀಕ್ಷೇತ್ರಕ್ಕೆ ನಡೆತಂದನು. ॥೩೦೫॥

ಬಳಿಕ ಅವನು ದಂಡಪಾಣಿಯ ಅನುಗ್ರಹದಿಂದ ಕಾಶೀಕ್ಷೇತ್ರಕ್ಕೆ ಬಂದು ಅಲ್ಲಿ ಜ್ಞಾನವಾಪಿಯ ಜಲದಲ್ಲಿ ಭಕ್ತಿಯಿಂದ ಸ್ನಾನವನ್ನಾಚರಿಸಿ ಅನ್ನಶ್ರಾದ್ಧವನ್ನು ನೆರವೇರಿಸಿದನು. ॥೩೦೬-೩೦೭॥

ಅಲ್ಲದೇ, ಪಿತೃಗಳಿಗೆ ಹಿಟ್ಟಿನಿಂದ ಪಿಂಡದಾನವನ್ನೂ ಸಹ ನೆರವೇರಿಸಿದನು. ಆಗ ಪೂರ್ವದಲ್ಲಿ ಭಯಂಕರವಾದ ನರಕದಲ್ಲಿ ಬಿದ್ದು ದಾರುಣವಾದ ಯಾತನೆಯನ್ನು ಅನುಭವಿಸುತ್ತಿದ್ದ ಒಂದೂವರೆ ಅರ್ಬುದ ಸಂಖ್ಯಾಕರಾದ ಅವನ ಪಿತೃಗಳು ಆ

ನರಕಾದುತ್ಥಿತಾಃ ಸರ್ವೇ ಸಾರ್ಧಾರ್ಬುದಮಿತಾಸ್ತದಾ ।
ತತೋ ಯಮಭಟಾಃ ಸರ್ವೇ ಯಮಮೂಚುರ್ಭಯಾನತಾಃ ॥೩೦೯॥

|| ಯಮಭಟಾ ಊಚುಃ ||

ವಿನೈವ ಕಾರಣಂ ಕೇಚಿನ್ನರಕಾದುತ್ಥಿತಾ ಇತಿ ।
ತತೋ ವಿಲೋಕ್ಯ ತಾನ್ಸರ್ವಾನ್ನರಕಾದುತ್ಥಿತಾನ್ಪಿತೄನ್ ॥೩೧೦॥

ಯಮಃ ಪ್ರೋವಾಚ ವಚನಂ ಕೃತಾಂಜಲಿಪುಟಸ್ತಥಾ ।
ಕಿಂ ಭವದ್ವಂಶಜೈಃ ಶೈವೈಃ ಪುಣ್ಯಂ ಕೃತಮಘಾಪಹಂ ॥೩೧೧॥

ಕಥಮುದ್ಧರಣಂ ಜಾತಂ ಭವತಾಮಪಿ ಸಾದರಂ ॥೩೧೨॥

|| ಪಿತರ ಊಚುಃ ||

ಶೈವೇನಾಸ್ಮದ್ವಂಶಜೇನ ಕಾಶೀಂ ಪ್ರತಿ ಸಮಾಗತಂ ।
ಜ್ಞಾನವಾಪ್ಯಾಂ ಕೃತಂ ಶ್ರಾದ್ಧಂ ಯಥಾಶಾಸ್ತ್ರಂ ಯಥಾಕ್ರಮಂ ॥೩೧೩॥

ನರಕದಿಂದ ಹೊರಡಲುದ್ಯುಕ್ತರಾದರು. ಆಗ ಯಮದೂತರು ಯಮನ ಸಮೀಪಕ್ಕೆ ತೆರಳಿ ಹೀಗೆಂದರು. ||೩೦೮-೩೦೯||

"ಓ ಕೃತಾಂತನೇ, ಇವರೆಲ್ಲರೂ ನಿಷ್ಕಾರಣವಾಗಿ ನರಕದಿಂದ ಹೊರಡುತ್ತಿರುವರು." ಯಮದೂತರು ಹೀಗೆನ್ನಲು ಬಳಿಕ ಯಮನು ನರಕದಿಂದ ಮೇಲಕ್ಕೆದ್ದ ಆ ಪಿತೃಗಳನ್ನೆಲ್ಲಾ ನೋಡಿ ಹೀಗೆಂದನು. "ನಿಮ್ಮ ವಂಶದಲ್ಲಿ ಯಾವ ಪುಣ್ಯಶಾಲಿಗಳು ಜನಿಸಿ ಈಶ್ವರಭಕ್ತರಾಗಿ ಪಾಪನಾಶಕವಾದ ಪುಣ್ಯಕರ್ಮವನ್ನು ಆಚರಿಸಿರುವರು ? ನೀವು ಈ ನರಕದಿಂದ ಹೊರಬೀಳುವುದಕ್ಕೆ ಕಾರಣವೇನು." ಯಮನ ಈ ಮಾತನ್ನು ಕೇಳಿ ಪಿತೃಗಳು, ||೩೧೦-೩೧೧-೩೧೨||

"ಎಲೈ ಅಂತಕನೇ, ನಮ್ಮ ವಂಶದಲ್ಲಿ ಜನಿಸಿದ ಓರ್ವ ಈಶ್ವರ ಭಕ್ತನು ಕಾಶೀಕ್ಷೇತ್ರಕ್ಕೆ ಹೋಗಿ ಅಲ್ಲಿ ಜ್ಞಾನವಾಪಿಯ ದಡದಲ್ಲಿ ಶಾಸ್ತ್ರೋಕ್ತವಾದ ರೀತಿಯಿಂದ ಕ್ರಮವರಿತು ಪಿತೃಶ್ರಾದ್ಧವನ್ನು ನೆರವೇರಿಸಿರುವನು. ||೩೧೩||

ಶೈವೋತ್ತಮೇನ ಶೈವೇನ ವಯಂ ಪಾಪಕುಲಾಶ್ರಯಾಃ ।
ಉದ್ಧೃತಾ ಯಮ ಸರ್ವಜ್ಞ ಯಾಸ್ಯಾಮೋ ಬ್ರಹ್ಮಣಃ ಪದಂ ॥೩೧೪॥

ಇತಿ ತದ್ವಚನಂ ಶ್ರುತ್ವಾ ಯಮಃ ಸಂತುಷ್ಟಮಾನಸಃ ।
ಪೂಜಾಂ ಚಕಾರ ಸರ್ವಜ್ಞೋ ಯಥಾಕ್ರಮಮತಂದ್ರಿತಃ ॥೩೧೫॥

ತತೋ ರತ್ನವಿಮಾನಾನಿ ದತ್ತ್ವಾ ತೇಭ್ಯೋ ಯಮಃ ಸ್ವಯಂ ।
ದೇವೇಂದ್ರಲೋಕಪರ್ಯಂತಂ ತೈಃ ಸಹೈವ ಜಗಾಮ ಸಃ ॥೩೧೬॥

ತದಾ ಕೋಲಾಹಲೋ ಭೂಯಾನಭೂದತ್ಯದ್ಭುತಸ್ತತಃ ।
ಪುಷ್ಪವೃಷ್ಟಿರಭೂದ್ದಿವ್ಯಾ ದಿವ್ಯಗಂಧಸಮನ್ವಿತಾ ॥೩೧೭॥

ತತಸ್ತಾನಮಲಾನ್ದೃಷ್ಟ್ವಾ ದೇವೇಂದ್ರಃ ಪ್ರೀತಮಾನಸಃ ।
ರತ್ನಾಸನೇಷೂಪವಿಶ್ಯ ಚಕ್ರೇ ಪೂಜಾಂ ಯಥಾಕ್ರಮಂ ॥೩೧೮॥

ಈಶ್ವರಭಕ್ತಾಗ್ರೇಸರನಾದ ಅವನಿಂದ ಪರಮಪಾಪಿಗಳಾದ ನಾವು ಈ ನರಕವಾಸದಿಂದ ಬಿಡುಗಡೆಯನ್ನು ಹೊಂದಿ ಇದೀಗ ಬ್ರಹ್ಮಲೋಕಕ್ಕೆ ತೆರಳುವೆವು" ಎಂದು ನುಡಿದರು. ॥೩೧೪॥

ಅವರ ಆ ಮಾತನ್ನು ಕೇಳಿ ಸರ್ವಜ್ಞನಾದ ಯಮನು ಆನಂದಭರಿತನಾಗಿ ಅವರನ್ನು ಕ್ರಮವರಿತು ಪೂಜಿಸಿದನು. ॥೩೧೫॥

ಬಳಿಕ ಯಮನು ತಾನಾಗಿಯೇ ಅವರಿಗೆ ರತ್ನಖಚಿತವಾದ ವಿಮಾನಗಳನ್ನು ಕೊಟ್ಟು ಅವರೊಂದಿಗೆ ದೇವೇಂದ್ರಲೋಕದ ವರೆಗೂ ಹೋದನು. ॥೩೧೬॥

ಆಗ ಎಲ್ಲೆಡೆಯಲ್ಲಿಯೂ ಕಲಕಲಧ್ವನಿಯುಂಟಾಯಿತು. ದಿವ್ಯವಾದ ಪುಷ್ಪವೃಷ್ಟಿಯುಂಟಾಯಿತು. ॥೩೧೭॥

ಬಳಿಕ ಪರಿಶುದ್ಧರಾದ ಆ ಪಿತೃಗಳನ್ನು ನೋಡಿ ದೇವೇಂದ್ರನು ಸುಪ್ರೀತನಾಗಿ ಅವರನ್ನು ರತ್ನಖಚಿತವಾದ ಪೀಠಗಳಲ್ಲಿ ಕುಳ್ಳಿರಿಸಿ ಕ್ರಮವರಿತು ಪೂಜಿಸಿದನು. ॥೩೧೮॥

ತತಸ್ತೇ ಪೂಜಿತಾಸ್ತೇನ ದೇವೇಂದ್ರೇಣಾಪಿ ಸಾದರಂ ।
ಬ್ರಹ್ಮಲೋಕಂ ಯಯುಃ ಪ್ರೀತಾ ದೇವೇಂದ್ರೇಣಾಪಿ ಸಂಯುತಾಃ॥೩೯॥

ಪಿತೄನ್ದೃಷ್ಟ್ವಾ ವಿಮಾನಸ್ಥಾನ್ಬ್ರಹ್ಮಾ ಪ್ರತ್ಯುಜ್ಜಗಾಮ ತಾನ್ ।
ತತೋಽತಿಶ್ರದ್ಧಯಾ ಯುಕ್ತೋ ನನಾಮ ವಿಧಿವತ್ಕ್ರಮಾತ್ ॥೩೦॥

ರತ್ನಾಸನೇಷೂಪವೇಶ್ಯ ಪೂಜಾದ್ರವ್ಯೇಣ ಸಾದರಂ ।
ಚಕಾರ ವಿಧಿವತ್ಪೂಜಾಂ ವಿಧಿಜ್ಞೋ ವಿಧಿವತ್ಕ್ರಮಾತ್ ॥೩೧॥

ತತೋ ಬ್ರಹ್ಮಸಭಾಸದ್ಭಿರತಿವಿಸ್ಮಯಪೂರ್ವಕಂ ।
ಏತೇ ಕೇ ಇತಿ ಸಂಪೃಷ್ಟೋ ಜಗಾದ ವಚನಂ ಮುದಾ ॥೩೨॥

ಅತಿಘೋರತಪೋಲಭ್ಯೋ ಬ್ರಹ್ಮಲೋಕ ಇತಿ ಪ್ರಥಾ ।
ಪೂರ್ವಮಾಸೀನ್ನ ಸೇದಾನೀಂ ಕಿಂ ವಕ್ತವ್ಯಮತಃ ಪರಂ ॥೩೩॥

ತರುವಾಯ ದೇವೇಂದ್ರನಿಂದ ಯಥೋಚಿತವಾಗಿ ಭಕ್ತಿಶ್ರದ್ಧೆಗಳಿಂದ ಪೂಜಿಸಲ್ಪಟ್ಟ ಅವರು ಇಂದ್ರನೊಂದಿಗೆ ಬ್ರಹ್ಮಲೋಕಕ್ಕೆ ಹೋದರು. ||೩೯||

ವಿಮಾನದಲ್ಲಿ ಕುಳಿತಿದ್ದ ಆ ಪಿತೃಗಳನ್ನು ನೋಡಿ ಬ್ರಹ್ಮನು ಅವರನ್ನು ತನ್ನ ಸಮೀಪಕ್ಕೆ ಬರಮಾಡಿಕೊಂಡು ಶ್ರದ್ಧೆಯಿಂದ ನಮಸ್ಕರಿಸಿದನು. ||೩೦||

ಅನಂತರ ಅವರನ್ನು ರತ್ನಾಸನದಲ್ಲಿ ಕುಳ್ಳಿರಿಸಿ ಪೂಜಾವಿಧಿಯನ್ನು ಚೆನ್ನಾಗಿ ಅರಿತ ಆ ಬ್ರಹ್ಮನು ಶಾಸ್ತ್ರೋಕ್ತರೀತಿಯಲ್ಲಿ ಕ್ರಮವರಿತು ಅವರನ್ನು ಪೂಜಿಸಿದನು. ||೩೧||

ಬಳಿಕ ಬ್ರಹ್ಮನ ಸಭೆಯಲ್ಲಿದ್ದ ಬ್ರಹ್ಮಾದಿಗಳು ಬ್ರಹ್ಮನನ್ನು ಕುರಿತು 'ಇವರಾರು' ಎಂದು ಕೇಳಲು, ಆಗ ಬ್ರಹ್ಮನು ಪ್ರೀತಿಯಿಂದ ಅವರನ್ನು ಕುರಿತು ಹೀಗೆಂದನು. ||೩೨||

"ಎಲೈ ಸಭಾಸದರೇ, ಈ ಹಿಂದೆ ಬ್ರಹ್ಮಲೋಕವು ಅತ್ಯಂತ ಕಠಿಣವಾದ ತಪಸ್ಸಿನಿಂದ ಲಭಿಸಲು ಯೋಗ್ಯವಾದುದೆಂಬ ಒಂದಾನೊಂದು ನಾಣ್ನುಡಿಯಿತ್ತು. ಆದರೆ ಅದು ಈಗ ಅಸತ್ಯವಾಗಿರುವುದು. ಇದಕ್ಕಿಂತಲೂ ಹೆಚ್ಚನ್ನು ಇನ್ನೇನು ಹೇಳಲಿ. ||೩೩||

ವನಪರ್ಣಕುಟೀವಾಯಂ ಬ್ರಹ್ಮಲೋಕೋ ಮುದಾಶ್ರಯಃ ।
ಸುಲಭೋಭೂನ್ಮನುಷ್ಯಾಣಾಮಪಿ ಪಾತಕಿನಾಮಪಿ ॥೩೨೪॥

ಏತತ್ಪಾತಕಸಂಘಾನಾಮಿಯತ್ತಾ ನಾಸ್ತಿ ಸರ್ವಥಾ ।
ತಾದೃಶಾನ್ಯತಿಘೋರಾಣಿ ಕೃತಾನಿ ಬಹುಲಾನಿ ಹಿ ॥೩೨೫॥

ಸಿಕತಾವರ್ಷಧಾರಾಣಾಂ ತಾರಕಾಣಾಂ ಕದಾಚನ ।
ಶಕ್ಯತೇ ಗಣನಾಕರ್ತುಮನೇತೇಷಾಂ ಪಾತಕಸ್ಯ ತು ॥೩೨೬॥

ಆಬ್ರಹ್ಮಕಲ್ಪಪರ್ಯಂತಂ ನರಕೇ ಯದಿ ಸಂಸ್ಥಿತಿಃ ।
ತಥಾಪಿ ನೈತತ್ಪಾಪಾನಾಂ ನಾಶೋ ಭವತಿ ಸರ್ವಥಾ ॥೩೨೭॥

ಈದೃಶಾನಾಂ ತು ನರಕೇ ಕ್ಷಣಮಾತ್ರಮಪಿ ಸ್ಥಿತಿಃ ।
ಅತಿದುಃಖಕರಾ ಘೋರಾ ನ ಜಾತೈವ ಕದಾಚನ ॥೩೨೮॥

ಅಪಾರವಾದ ಆನಂದವನ್ನು ನೀಡುವ ಈ ಬ್ರಹ್ಮಲೋಕವು, ಅರಣ್ಯದಲ್ಲಿರುವ ಪರ್ಣಕುಟೀರದಂತೆ ಪಾಪಿಗಳಾದ ಮನುಷ್ಯರಿಗೂ ಸುಲಭಸಾಧ್ಯವಾಯಿತು.॥೩೨೪॥

ಇವರು ಆಚರಿಸಿರುವ ಪಾಪಕರ್ಮಗಳಿಗೆ ಪರಿಮಿತಿಯೇ ಇರುವುದಿಲ್ಲ. ಅಂತಹ ಭಯಂಕರವಾದ ಅನೇಕ ಪಾಪಕರ್ಮಗಳನ್ನು ಇವರು ನಡೆಸಿರುವರು. ॥೩೨೫॥

ಧಾರಾಕಾರವಾಗಿ ಮೇಲಿನಿಂದ ಕೆಳಕ್ಕೆ ಬೀಳುವ ಮರಳಿನ ಕಣಗಳನ್ನಾದರೂ ಪರಿಗಣಿಸಬಹುದು. ಅಂತರಿಕ್ಷದಲ್ಲಿರುವ ನಕ್ಷತ್ರಗಳನ್ನಾದರೂ ಲೆಕ್ಕಿಸಬಹುದು. ಆದರೆ ಇವರು ಆಚರಿಸಿದ ಪಾತಕಗಳನ್ನು ಲೆಕ್ಕಿಸಲು ಸಾಧ್ಯವೇ ಇಲ್ಲ. ॥೩೨೬॥

ಒಂದು ಬ್ರಹ್ಮಕಲ್ಪವು ಮುಗಿಯುವವರೆಗೆ ನರಕದಲ್ಲಿಯೇ ವಾಸವಾಗಿದ್ದರೂ ಸಹ ಇವರು ಆಚರಿಸಿದ ಪಾತಕಗಳು ಎಂದಿಗೂ ಕ್ಷಯಿಸಲಾರವು. ॥೩೨೭॥

ಭಯಂಕರವಾದ ಪಾತಕಗಳನ್ನು ಆಚರಿಸಿದ್ದರೂ ಕೂಡ ಇವರು ಒಂದು ಕ್ಷಣಕಾಲವಾದರೂ ನರಕಲೋಕದಲ್ಲಿ ವಾಸವಾಗಿದ್ದು, ದಾರುಣವಾದ ನರಕಲೋಕದ ಯಾತನೆಯನ್ನು ಅನುಭವಿಸಲಿಲ್ಲ. ॥೩೨೮॥

ಏತೇಷಾಂ ಭೂರಿಭಾಗ್ಯೇನ ಕಶ್ಚಿಚ್ಛೈವೋಽಭವತ್ಕುಲೇ ।
ತೇನ ವಿಧ್ಯುಕ್ತಮಾರ್ಗೇಣ ಕಾಶೀಯಾತ್ರಾ ಕೃತಾ ಶುಭಾ ॥೩೨೯॥

ಜ್ಞಾನವಾಪ್ಯಾಂ ವಿಶೇಷೇಣ ಪಿತ್ರ್ಯಾನುದ್ದಿಶ್ಯ ಶಾಂಕರಃ ।
ಚಕಾರ ವಿಧಿವಚ್ಛ್ರಾದ್ಧಂ ಪಿಂಡದಾನಂ ಚ ಸಾದರಂ ॥೩೩೦॥

ತಿರಸ್ಕೃತಾಮೃತೈರ್ದಿವ್ಯೈರ್ಜ್ಞಾನವಾಪೀಜಲೈಃ ಶುಭೈಃ ।
ಚಕಾರ ತರ್ಪಣಂ ಶೈವಃ ಶುದ್ಧಕೃಷ್ಣತಿಲಾನ್ವಿತೈಃ ॥೩೩೧॥

ತೇನೈವ ಪುಣ್ಯಲೇಶೇನ ತಸ್ಯೈತೇ ಪಿತರಸ್ತತಃ ।
ಅಘೋರನರಕಂ ತೀರ್ತ್ವಾ ಮಲ್ಲೋಕಂ ಸಮುಪಾಗತಾಃ ॥೩೩೨॥

ಕಾಶ್ಯಾಂ ಶೈವಕೃತಂ ಶ್ರಾದ್ಧಂ ಜ್ಞಾನವಾಪ್ಯಾಂ ವಿಶೇಷತಃ ।
ಪಿತೃಮುಕ್ತಿಪ್ರದಂ ನೂನಂ ಸತ್ಯಮೇವೋಚ್ಯತೇ ಮಯಾ। ॥೩೩೩॥

ಇವರು ಪೂರ್ವಜನ್ಮದಲ್ಲಿ ಆಚರಿಸಿದ ಒಂದಾನೊಂದು ಮಹತ್ತರವಾದ ಪುಣ್ಯಕರ್ಮದ ಮಹಿಮೆಯಿಂದ ಇವರ ಕುಲದಲ್ಲಿ ಓರ್ವ ಈಶ್ವರಭಕ್ತನು ಜನಿಸಿದನು. ಅವನು ಶಾಸ್ತ್ರೋಕ್ತವಾದ ರೀತಿಯಿಂದ ಕಾಶೀಯಾತ್ರೆಯನ್ನು ಕೊನೆಗಾಣಿಸಿದನು. ||೩೨೯||

ಈಶ್ವರಭಕ್ತನಾದ ಅವನು ಕಾಶೀಕ್ಷೇತ್ರಕ್ಕೆ ಹೋಗಿ ಜ್ಞಾನವಾಪಿಯ ದಡದಲ್ಲಿ, ಪಿತೃಗಳನ್ನುದ್ದೇಶಿಸಿ ಶ್ರಾದ್ಧವನ್ನು ನೇರವೇರಿಸಿ ಪಿಂಡಗಳನ್ನು ಸಮರ್ಪಿಸಿದನು. ||೩೩೦||

ಈಶ್ವರ ಭಕ್ತನಾದ ಆತನು, ಸವಿಯಲ್ಲಿ ಅಮೃತವನ್ನು ಮೀರಿಸಿರುವ ಜ್ಞಾನವಾಪಿಯ ಉದಕದಿಂದ ಪಿತೃಗಳಿಗೆ ತಿಲತರ್ಪಣವನ್ನು ಸಮರ್ಪಿಸಿದನು. ||೩೩೧||

ಆ ಪುಣ್ಯಲೇಶದಿಂದಲೇ ಅವನ ಪಿತೃಗಳೆಲ್ಲರೂ ಅಘೋರವೆಂಬ ನರಕವನ್ನು ಬಿಟ್ಟು ನನ್ನ ಲೋಕಕ್ಕೆ ಬಂದಿರುವರು. ||೩೩೨||

ಕಾಶೀಕ್ಷೇತ್ರದಲ್ಲಿ ಈಶ್ವರಭಕ್ತನಾದವನು ಆಚರಿಸಿದ ಪಿತೃಶ್ರಾದ್ಧವು ತಪ್ಪದೇ ಪಿತೃಗಳಿಗೆ ಶಾಶ್ವತವಾದ ಮೋಕ್ಷವನ್ನು ದಯಪಾಲಿಸುವುದು. ಅದರಲ್ಲಿಯೂ ವಿಶೇಷವಾಗಿ ಜ್ಞಾನವಾಪಿಯೆಂಬ ಕುಂಡದ ಬಳಿಯಲ್ಲಿ ಶ್ರಾದ್ಧಕರ್ಮವನ್ನು ನೆರವೇರಿಸಿದರೆ ಶೀಘ್ರದಲ್ಲಿಯೇ ಪಿತೃಗಳು ಮುಕ್ತರಾಗುವರು. ಇದು ನಿಜ. ||೩೩೩||

ಕಾಶ್ಯಾಂ ತತ್ಕುಲಜಾತೇನ ಕೃತಂ ಶ್ರಾದ್ಧಮಘಾಪಹಂ ।
ಪಿತೃಣಾಂ ಮುಕ್ತಿದಂ ಶ್ರೇಷ್ಠಂ ಮಹಾಪಾತಕಿನಾಮಪಿ ॥೩೩೪॥

ದೇವಗಂಧರ್ವಮನುಜಯಕ್ಷಾಣಾಮಪಿ ಸರ್ವಥಾ ।
ಕಾಶ್ಯೇವ ಮುಕ್ತಿದಾ ನಾನ್ಯನ್ಮುಕ್ತಿದಂ ಜಗತೀತಲೇ ॥೩೩೫॥

ಕಾಶ್ಯಾಂ ಮೃದಾ ವಾ ಯಃ ಕುರ್ಯಾತ್ಪಿಂಡದಾನಂ ಪಿತೄನ್ಪ್ರತಿ ।
ಸೋಽಪಿ ಧನ್ಯಃ ಪಿತೄನ್ಸ್ವೀಯಾನುದ್ಧರಿಷ್ಯತ್ಯಸಂಶಯಂ ॥೩೩೬॥

ಕಾಶ್ಯಾಂ ಪಾದೇನ ನಾಥಸ್ತಾಜ್ಜಲಂ ದಾಸ್ಯತಿ ಮಾನವಃ ।
ಪಿತ್ರರ್ಥಂ ತೇನ ಸ ಪಿತೄನುದ್ಧರಿಷ್ಯತ್ಯಸಂಶಯಃ ॥೩೩೭॥

ಕಾಶ್ಯಾಂ ಪಿಂಡಪ್ರದಾನೇನ ಪಿತೄಣಾಂ ಋಣಬಂಧನಾತ್ ।
ಮುಕ್ತೋ ಭವತಿ ಪುಣ್ಯಾತ್ಮಾ ನ ಸ ತದೃಣಭಾಗ್ಭವೇತ್ ॥೩೩೮॥

ನರಕದಲ್ಲಿ ಬಿದ್ದು ಒದ್ದಾಡುತ್ತಿರುವ ಪಿತೃಗಳ ವಂಶದಲ್ಲಿ ಜನಿಸಿದ ಒಬ್ಬನೇ ಒಬ್ಬ ಸತ್ಪುತ್ರನು ಕಾಶೀಕ್ಷೇತ್ರದಲ್ಲಿ ಪಿತೃಶ್ರಾದ್ಧವನ್ನಾಚರಿಸಿದರೆ ಪವಿತ್ರವಾದ ಆ ಕರ್ಮವು ಮಹಾಪಾಪಿಗಳಾದ ಪಿತೃಗಳನ್ನೂ ಸಹ ಮುಕ್ತರನ್ನಾಗಿ ಮಾಡುವುದು. ||೩೩೪||

ಲೋಕದಲ್ಲಿ ದೇವತೆಗಳು, ಗಂಧರ್ವರು, ಮನುಷ್ಯರು, ಯಕ್ಷರು ಇವರೆಲ್ಲರಿಗೂ ಕಾಶೀಕ್ಷೇತ್ರವೇ ಮೋಕ್ಷವನ್ನು ದಯಪಾಲಿಸುವುದಲ್ಲದೇ, ಇನ್ನಾವ ಕ್ಷೇತ್ರವೂ ಮುಕ್ತಿಪ್ರದವಾಗಲಾರದು. ||೩೩೫||

ಯಾವನು ಕಾಶೀಕ್ಷೇತ್ರದಲ್ಲಿ ಮಣ್ಣಿನಿಂದಲಾದರೂ ಪಿಂಡವನ್ನು ಮಾಡಿ, ಆದರಿಂದ ಪಿತೃಗಳನ್ನು ಸಂತೋಷಗೊಳಿಸುವನೋ ಅವನೇ ಧನ್ಯನು. ಅವನೇ ತನ್ನ ಪಿತೃಗಳನ್ನು ನರಕದಿಂದ ಉದ್ಧರಿಸುವನು. ||೩೩೬||

ಯಾವ ಮನುಜನು ಕಾಶೀಕ್ಷೇತ್ರದಲ್ಲಿಯಾಗಲಿ, ಗಯೆಯಲ್ಲಿರುವ ವಿಷ್ಣುಪಾದದಲ್ಲಾಗಲಿ ಪಿಂಡಪ್ರದಾನಮಾಡುವನೋ, ಅವನು ಪಿತೃಗಳನ್ನು ತಪ್ಪದೇ ನರಕದಿಂದ ಉದ್ಧರಿಸುವನು. ಇದು ನಿಜ. ||೩೩೭||

ಕಾಶೀಕ್ಷೇತ್ರದಲ್ಲಿ ಯಾವನು ತನ್ನ ಪಿತೃಗಳಿಗೆ ಪಿಂಡಪ್ರದಾನವನ್ನು ನೆರವೇರಿಸುವನೋ ಅವನು ಪಿತೃಋಣದಿಂದ ಮುಕ್ತನಾಗಿ ಪುನಃ ಪಿತೃಋಣವೆಂಬ ಬಂಧನಕ್ಕೆ ಗುರಿಯಾಗುವುದಿಲ್ಲ. ||೩೩೮||

ಯಃ ಕಾಶ್ಯಾಮತಿಯತ್ನೇನ ಸ್ವಪಿತೃಭ್ಯೋ ಯಥಾವಿಧಿ ।
ಶ್ರಾದ್ಧದೋ ಭವತಿ ಪ್ರೀತ್ಯಾ ಸ ವಂದ್ಯಃ ಸರ್ವದಾ ಸುರೈಃ ॥೩೯॥

ಪುತ್ರಃ ಪಿತೃವಿಮುಕ್ತ್ಯರ್ಥಂ ಕಾಶ್ಯಾಂ ಶ್ರಾದ್ಧಂ ಕರಿಷ್ಯತಿ ।
ಯಥಾವಿಧಿ ಪ್ರಯತ್ನೇನ ಸ ಪುತ್ರಃ ಪುತ್ರ ಉಚ್ಯತೇ ॥೪೦॥

ಪುತ್ರಃ ಕಾಶ್ಯಾಂ ವಿಧಾನೇನ ಯಃ ಶ್ರಾದ್ಧಂ ನ ಕರಿಷ್ಯತಿ ।
ಸ ಪುತ್ರೋ ನ ಭವತ್ಯೇವ ಪುತ್ರಲಕ್ಷಣವರ್ಜಿತಃ ॥೪೧॥

ಅಸ್ಮದ್ಗೋತ್ರಸಮುತ್ಪನ್ನಃ ಕಾಶ್ಯಾಂ ಯಃ ಕಶ್ಚನಾದರಾತ್ ।
ನ ಕರಿಷ್ಯತಿ ಕಿಂ ಶ್ರಾದ್ಧಂ ಸ್ವಾದ್ವನ್ನೈರ್ಭಕ್ತಿಪೂರ್ವಕಂ ॥೪೨॥

ಕಾಶ್ಯಾಂ ಮತ್ಕುಲಜೋ ಮರ್ತ್ಯಃ ಪಿತೄಣಾಂ ಮುಕ್ತಿಕಾರಣಂ ।
ಸತಿಲಂ ವಿಮಲಂ ಭಕ್ತ್ಯಾ ಜಲಂ ಕಿಂ ವಾ ನ ದಾಸ್ಯತಿ ॥೪೩॥

ಯಾವನು ಕಾಶೀಕ್ಷೇತ್ರದಲ್ಲಿ ಅತ್ಯಂತ ಪ್ರಯತ್ನಪಟ್ಟು ತನ್ನ ಪಿತೃಗಳನ್ನು ಶ್ರಾದ್ಧಕರ್ಮದಿಂದ ತೃಪ್ತಿಪಡಿಸುವನೋ ಅವನಿಗೆ ದೇವತೆಗಳು ಅನವರತವೂ ನಮಸ್ಕರಿಸುವರು. ॥೩೯॥

ಯಾವ ಪುತ್ರನು ತನ್ನ ಪಿತೃಗಳನ್ನು ಉದ್ಧರಿಸುವುದಕ್ಕೋಸ್ಕರ ಕಾಶೀಕ್ಷೇತ್ರದಲ್ಲಿ ವಿಧಿವತ್ತಾಗಿ ಪಿತೃಶ್ರಾದ್ಧವನ್ನಾಚರಿಸುವನೋ ಅವನೇ ನಿಜವಾದ ಪುತ್ರನು.

ಯಾವ ಪುತ್ರನು ಕಾಶೀಕ್ಷೇತ್ರದಲ್ಲಿ ವಿಧಿವತ್ತಾಗಿ ಪಿತೃಶ್ರಾದ್ಧವನ್ನು ಆಚರಿಸುವುದಿಲ್ಲವೋ, ಪುತ್ರನಿಗಿರುವ ಲಕ್ಷಣಗಳಿಂದ ರಹಿತನಾದ ಅವನು ನಿಜವಾದ ಪುತ್ರನೆಂದೆನಿಸಿಕೊಳ್ಳಲಾರನು. ॥೪೧॥

ಕಾಶೀಕ್ಷೇತ್ರಕ್ಕೆ ಹೋಗಿ ಪಿತೃಗಳಿಗೆ ಶ್ರಾದ್ಧವನ್ನಾಚರಿಸದಿದ್ದರೆ ನರಕದಲ್ಲಿ ವಾಸವಾಗಿ ದಾರುಣವಾದ ದುಃಖವನ್ನು ಅನುಭವಿಸುತ್ತಿರುವ ಪಿತೃಗಳು ಅನ್ಯೋನ್ಯವಾಗಿ ಹೀಗೆಂದು ಹೇಳುತ್ತಾ ರೋದಿಸುವರು. " ನಮ್ಮ ವಂಶದಲ್ಲಿ ಜನಿಸಿದ ಯಾವನಾದರೂ ಓರ್ವ ಪುತ್ರನು ರುಚಿಕರವಾದ ಅನ್ನದಿಂದ ಭಕ್ತಿಪೂರ್ವಕವಾಗಿ ನಮಗೆ ಶ್ರಾದ್ಧವನ್ನು ಆಚರಿಸಲಾರನೇ! ॥೪೨॥

ನನ್ನ ಕುಲದಲ್ಲಿ ಜನಿಸಿದ ಒಬ್ಬಾನೊಬ್ಬ ಮನುಷ್ಯನಾದರೂ ಪಿತೃಗಳನ್ನು ತಿಲೋದಕದಿಂದ ತೃಪ್ತಿಗೊಳಿಸಿ ನಮ್ಮನ್ನು ಉದ್ಧರಿಸಲಾರನೇ! ॥೪೩॥

ಕಾಶ್ಯಾಂ ಭೋಜನಕಾಲೇ ವಾ ಸ್ವಪಿತೃಭ್ಯಃ ಸ್ವಧಾಸ್ತ್ವಿತಿ।
ಮುಷ್ಟಿಮಾತ್ರಮಪಿ ಪ್ರೀತ್ಯಾ ಕಿಮನ್ನಂ ನೈವ ದಾಸ್ಯತಿ ॥೩೪೪॥

ಕಾಶ್ಯಾಂ ಕ್ರೀಡಾರತೋ ವಾಪಿ ಮದ್ವಂಶ್ಯಃ ಕಶ್ಚಿದುತ್ತಮಃ।
ಮೃದ್ಗೋಲಕಂ ವಾ ಸಜಲಂ ಕಿಂ ನ ದಾಸ್ಯತಿ ಸಾದರಂ ॥೩೪೫॥

ಅಸ್ಮಾಭಿರ್ದುರದೃಷ್ಟೇನ ನರಕೇ ಸ್ಥೀಯತೇ ಸದಾ।
ಕಾಶ್ಯಾಂ ಪಿಂಡಪ್ರದಾನೇನ ಕೋ ವಾಸ್ಮಾನುದ್ಧರಿಷ್ಯತಿ ॥೩೪೬॥

ಅಘೋರಯಾತನಾಮೇತ್ಯ ಸ್ಥೀಯತೇಸ್ಮಾಭಿರನ್ವಹಂ।
ಕಶ್ಚಿತ್ಕಾಶ್ಯಾಂ ಜಲಂ ದತ್ವಾ ಕಿಮಸ್ಮಾನ್ನೋದ್ಧರಿಷ್ಯತಿ ॥೩೪೭॥

ಇತಿ ಘೋರತರೇ ಕ್ರೂರೇ ನರಕೇ ಪತಿತಾ ಸದಾ।
ವದಂತಿ ಪಿತರಃ ಸರ್ವೇ ವಿಲುಠಂತಿ ರುದಂತಿ ಚ ॥೩೪೮॥

ನಮ್ಮ ವಂಶದಲ್ಲಿ ಜನಿಸಿದ ಒಬ್ಬ ಪುತ್ರನಾದರೂ ಕಾಶೀಕ್ಷೇತ್ರದಲ್ಲಿ ಭೋಜನ ಕಾಲದಲ್ಲಿ "ನನ್ನ ಪಿತೃಗಳು ತೃಪ್ತರಾಗಲಿ" ಎಂದು ಸಂಕಲ್ಪಿಸಿ, ನಮಗೆ ಕೇವಲ ಒಂದು ಮುಷ್ಟಿ ಅನ್ನವನ್ನಾದರೂ ನೀಡಲಾರನೇ! ॥೩೪೪॥

ನಮ್ಮ ವಂಶದಲ್ಲಿ ಜನಿಸಿದ ಒಬ್ಬಾನೊಬ್ಬನು ಕಾಶೀಕ್ಷೇತ್ರದಲ್ಲಿ ಕ್ರೀಡಾಸಕ್ತನಾಗಿ ವಿನೋದಕ್ಕೋಸ್ಕರವಾದರೂ ನಮಗೆ ಉದಕದೊಂದಿಗೆ ಶ್ರದ್ಧೆಯಿಂದ ಒಂದು ಮೃತ್ಪಿಂಡವನ್ನು ಸಮರ್ಪಿಸಲಾರನೇ! ॥೩೪೫॥

ನಾವು ನಮ್ಮ ದುರ್ಭಾಗ್ಯದ ದೆಸೆಯಿಂದ ನಿರಂತರವೂ ನರಕದಲ್ಲಿಯೇ ವಾಸವಾಗಿರುವೆವು. ಹೀಗಿರುತ್ತಿರಲು ನಮಗೆ ಪಿಂಡವನ್ನು ಕೊಟ್ಟು ನಮ್ಮನ್ನು ಈ ನರಕದಿಂದ ಉದ್ಧರಿಸುವವನು ಆದಾವನಿರುವನು? ॥೩೪೬॥

ನಾವು ನಿರಂತರವೂ ಅಘೋರನೆಂಬ ಯಮಕಿಂಕರನ ಯಾತನೆಯನ್ನು ಅನುಭವಿಸುತ್ತಾ ಈ ನರಕದಲ್ಲಿ ವಾಸವಾಗಿರುವೆವು. ಹೀಗಿದ್ದರೂ ನಮ್ಮ ಕುಲದಲ್ಲಿ ಜನಿಸಿದ ಒಬ್ಬ ಪುತ್ರನಾದರೂ ಕಾಶೀಕ್ಷೇತ್ರಕ್ಕೆ ಹೋಗಿ ನಮಗೆ ಉದಕವನ್ನು ಸಮರ್ಪಿಸಿ ನಮ್ಮನ್ನೇಕೆ ಉದ್ಧರಿಸುವುದಿಲ್ಲ?" ॥೩೪೭॥

ಭಯಂಕರವಾದ ನರಕದಲ್ಲಿ ಬಿದ್ದಿರುವ ಆ ಪಿತೃಗಳು ಅನವರತವೂ ಹೀಗೆಂದು ಹೇಳುವರು. ಶೋಕದಿಂದ ಕೆಳಕ್ಕೆ ಬಿದ್ದು ಹೊರಳಾಡುತ್ತಾ ಅಳುವರು. ॥೩೪೮॥

ಏತದ್ವಂಶೇಽಪಿ ಸುಭಗಃ ಶೈವಃ ಶಿವವರಾರ್ಚಕಃ ।
ಏಕ ಏವಾಭವತ್ತೇನ ಕಾಶೀಂ ಪ್ರತಿ ಸಮಾಗತಃ ॥೩೪೯॥

ಕಾಶ್ಯಾಂ ವಿಧ್ಯುಕ್ತಮಾರ್ಗೇಣ ಪೂರ್ವಂ ನ್ಯಾಯಾರ್ಜಿತೈರ್ಧನೈಃ ।
ಸ ಚಕ್ರೇ ವಿಧಿವಚ್ಛ್ರಾದ್ಧಂ ಜ್ಞಾನವಾಪೀತಟೇ ಶುಭೇ ॥೩೫೦॥

ತೇನೈವ ಘೋರನರಕಾದೇತೇ ಸರ್ವೇ ಸಮುದ್ಧೃತಾಃ ।
ಪುನರಾವೃತ್ತಿರಹಿತಂ ಸ್ಥಾಸ್ಯಂತ್ಯತ್ರೈವ ಸರ್ವದಾ ॥೩೫೧॥

ತೃಪ್ತಾ ಭವಂತಿ ಪಿತರಃ ಕಾಶೀ ಸಲಿಲತರ್ಪಣಾತ್ ।
ವಿನಾ ತೇನ ನ ಹಿ ಪ್ರೀತಿಃ ಸುಧಾಪಾನೇಽಪಿ ಸರ್ವಥಾ ॥೩೫೨॥

ಏತೇ ಪೂಜ್ಯತಮಾ ನಿತ್ಯಂ ಭವತಾಮಪಿ ಸಾದರಂ ।
ಮಯಾ ತು ನಿತ್ಯಮೇತೇಷಾಂ ಪೂಜಾ ಕಾರ್ಯಾ ಯಥಾಕ್ರಮಂ ॥೩೫೩॥

ಈ ಪಿತೃಗಳ ವಂಶದಲ್ಲಾದರೋ ಈಶ್ವರಾರಾಧಕನೂ, ಈಶ್ವರನ ಪರಮ ಭಕ್ತನೂ ಆದ ಓರ್ವ ಸತ್ಪುತ್ರನು ಜನಿಸಿರುವನು. ಆವನು ಕಾಶೀಕ್ಷೇತ್ರಕ್ಕೆ ಹೋಗಿ ಅಲ್ಲಿ ಶಾಸ್ತ್ರೋಕ್ತವಾದ ರೀತಿಯಿಂದ, ತಾನು ಪೂರ್ವದಲ್ಲಿ ನ್ಯಾಯಮಾರ್ಗದಿಂದ ಸಂಪಾದಿಸಿದ ಹಣದಿಂದ ಪವಿತ್ರವಾದ ಜ್ಞಾನವಾಪಿಯ ದಡದಲ್ಲಿ ಪಿತೃಶ್ರಾದ್ಧವನ್ನು ಆಚರಿಸಿದನು. ॥೩೪೯-೩೫೦॥

ಅವನೇ ಇವರೆಲ್ಲರನ್ನೂ ಭಯಂಕರವಾದ ನರಕದಿಂದ ಉದ್ಧರಿಸಿರುವನು. ಇದೀಗ ಇವರು ಶಾಶ್ವತವಾದ ಈ ಬ್ರಹ್ಮಲೋಕವನ್ನು ಪಡೆದು ನಿರಂತರವೂ ಇಲ್ಲಿಯೇ ನೆಲಸುವರು. ॥೩೫೧॥

ಕಾಶೀಕ್ಷೇತ್ರದಲ್ಲಿ ಉದಕವನ್ನಿತ್ತರೆ ಪಿತೃಗಳು ತೃಪ್ತರಾಗುವರು. ಅದಿಲ್ಲ ದಿದ್ದರೆ ಅವರು ಅಮೃತಪಾನದಿಂದಲೂ ತೃಪ್ತರಾಗಲಾರರು. ॥೩೫೨॥

ಇವರು ನಿಮಗೂ ಸಹ ಸದಾ ಪೂಜ್ಯರಾಗಿರುವರು. ನಾನಾದರೋ ಇವರನ್ನು ಪ್ರತಿದಿನವೂ ಕ್ರಮವರಿತು ಪೂಜಿಸಲೇಬೇಕು. ॥೩೫೩॥

ಇತ್ಯುಕ್ತಾಸ್ತೇಽಪಿ ತದ್ವಾಕ್ಯಾತ್ಪಿತೄಣಾಂ ತು ಯಥಾಕ್ರಮಂ ।
ಪೂಜಾಂ ಚಕ್ರುರ್ಯಥಾಶಾಸ್ತ್ರಂ ತತಸ್ತತ್ರೈವ ತೇ ಸ್ಥಿತಾಃ ॥೩೫೪॥

ಅತೋ ನಿಯಮತಃ ಕಾರ್ಯಾ ಕಾಶೀಯಾತ್ರಾ ವರಾನನೇ ।
ಕಾಶೀ ತಪಃ ಪ್ರಭಾವೇನ ಯತೋ ಲಭ್ಯಾ ನರೋತ್ತಮೈಃ ॥೩೫೫॥

ಶೃಣು ವಕ್ಷ್ಯೇ ವಿಧಿಂ ಸಮ್ಯಕ್ಪಂಚಕ್ರೋಶಪ್ರದಕ್ಷಿಣೇ ।
ಯತ್ಪ್ರದಕ್ಷಿಣಮಾತ್ರೇಣ ನಶ್ಯತ್ಯಘಕುಲಂ ಕ್ಷಣಾತ್ ॥೩೫೬॥

ಉಪವಾಸಃ ಪ್ರಯತ್ನೇನ ಕಾರ್ಯೋ ಮುಂಡನಪೂರ್ವಕಂ ।
ಪಂಚಗವ್ಯಂ ತತೋ ಗ್ರಾಹ್ಯಂ ಸ್ನಾತ್ವಾ ಜ್ಞಾನೇಶಸನ್ನಿಧೌ ॥೩೫೭॥

ತತೋಽಂತರ್ಗೃಹಯಾತ್ರಾಪಿ ಕರ್ತವ್ಯಾ ವಿಧಿಪೂರ್ವಕಂ ।
ಮುಕ್ತಿಮಂಡಪಮಾಸಾದ್ಯ ತತಃ ಸಂಕಲ್ಪಮಾಚರೇತ್ ॥೩೫೮॥

ಬ್ರಹ್ಮನು ಹೀಗೆನ್ನಲು ಅವನ ಮಾತಿನ ಮೇರೆಗೆ ಸಭೆಯಲ್ಲಿದ್ದವರೆಲ್ಲರೂ ಶಾಸ್ತ್ರೋಕ್ತರೀತಿಯಿಂದ ಪಿತೃಗಳನ್ನು ಪೂಜಿಸಿದರು. ಬಳಿಕ ಆ ಪಿತೃಗಳೆಲ್ಲರೂ ಅಲ್ಲಿಯೇ ಶಾಶ್ವತವಾಗಿ ನೆಲಸಿದರು. ॥೩೫೪॥

ದೇವಿ, ಆದುದರಿಂದ ಪ್ರತಿಯೊಬ್ಬನೂ ತಪ್ಪದೇ ಕಾಶೀಯಾತ್ರೆಯನ್ನು ಕೊನೆಗಾಣಿಸಲೇಬೇಕು. ಕಾಶೀಕ್ಷೇತ್ರವು ತಪೋಮಹಿಮೆಯಿಂದ ಲಭಿಸಬೇಕಾಗಿರುವುದಲ್ಲದೇ ಅದನ್ನು ಹೊಂದಲು ಬೇರೆಯ ಮಾರ್ಗವಿರುವುದಿಲ್ಲ. ॥೩೫೫॥

ದೇವಿ, ಇನ್ನು ಮುಂದೆ ಪಂಚಕ್ರೋಶಯಾತ್ರೆಯಿಂದ ಪ್ರದಕ್ಷಿಣೆಮಾಡುವ ವಿಧಾನವನ್ನು ನಿನಗೆ ಹೇಳುವೆನು ಕೇಳು. ಆದರ ಪ್ರದಕ್ಷಿಣೆಯಿಂದ ಸಕಲ ಪಾಪಗಳೂ ಕ್ಷಣಮಾತ್ರದಲ್ಲಿಯೇ ನಾಶವನ್ನು ಹೊಂದುವುವು. ॥೩೫೬॥

ಪ್ರದಕ್ಷಿಣೆಗಳನ್ನು ಆಚರಿಸುವವನು ತಪ್ಪದೇ ಉಪವಾಸದಿಂದಿರಬೇಕು. ಮೊದಲು ಜ್ಞಾನೇಶನ ಸನ್ನಿಧಿಯಲ್ಲಿ ಮುಂಡನವನ್ನು ಮಾಡಿಸಿಕೊಂಡು, ಸ್ನಾನಮಾಡಿ ಬಳಿಕ ಪಂಚಗವ್ಯವನ್ನು ಸ್ವೀಕರಿಸಬೇಕು. ॥೩೫೭॥

ಆದಾದ ಬಳಿಕ ವಿಧಿವತ್ತಾಗಿ ಅಂತರ್ಗೃಹಯಾತ್ರೆಯನ್ನು ನೆರವೇರಿಸಿ ಮುಕ್ತಿಮಂಟಪಕ್ಕೆ ಬಂದು ಅಲ್ಲಿ ಮುಂದೆ ಹೇಳುವಂತೆ ಸಂಕಲ್ಪವನ್ನಾಚರಿಸಬೇಕು. ॥೩೫೮॥

ಕರಿಷ್ಯೇ ವಿಶ್ವನಾಥಾಹಂ ಪಂಚಕ್ರೋಶಪ್ರದಕ್ಷಿಣಂ ।
ಆಜ್ಞಾಂ ದೇಹಿ ಕೃಪಾಸಿಂಧೋ ಸರ್ವಪಾಪಾಪನುತ್ತಯೇ ॥೩೫॥

ನಿಷ್ಠೀವನಂ ಕೃತಂ ಕಾಶ್ಯಾಂ ದತ್ತೌ ಚ ಚರಣೌ ಮಯಾ ।
ಲಿಂಗೇಷ್ವೇವ ಸದಾ ಶಂಭೋ ತತ್ಪಾಪಂ ಶಾಂತಿಮೇಷ್ಯತು ॥೩೬೦॥

ಕಾಶ್ಯಾಂ ಜಲಚರಾಃ ಕೇಚಿತ್ಪಾದಘಾತೇನ ಸಂಹತಾಃ ।
ಕರೇಣ ನಿಹತಾಃ ಕೇಚಿತ್ತತ್ಪಾಪಂ ಶಾಂತಿಮೇಷ್ಯತು ॥೩೬೧॥

ಕಾಶ್ಯಾಮನ್ನಾರ್ಥಿನಾಮನ್ನಂ ಶಕ್ತೇನಾಪಿ ಮಯಾ ಶಿವ ।
ನ ದತ್ತಂ ಲೋಭಮಾಸಾದ್ಯ ತತ್ಪಾಪಂ ಶಾಂತಿಮೇಷ್ಯತು ॥೩೬೨॥

ಅಶಕ್ತೇನೈಕದಾ ಸಮ್ಯಗಂತರ್ಗೇಹಪ್ರದಕ್ಷಿಣಂ ।
ಮಯಾ ನ ಕೃತಮೀಶಾನ ತತ್ಪಾಪಂ ಶಾಂತಿಮೇಷ್ಯತು ॥೩೬೩॥

ಓ ವಿಶ್ವನಾಥನೇ, ನಾನು ನನ್ನ ಸಕಲ ಪಾಪಗಳನ್ನೂ ಹೋಗಲಾಡಿಸುವುದಕ್ಕೋಸ್ಕರ ಪಂಚಕ್ರೋಶಪ್ರದಕ್ಷಿಣೆ ಮಾಡುವೆನು. ಓ ಕರುಣಾಸಾಗರನೇ, ನನಗೆ ಅನುಜ್ಞೆಯನ್ನೀಯಿ. ॥೩೫॥

ನಾನು ಪವಿತ್ರವಾದ ಈ ಕಾಶೀಕ್ಷೇತ್ರದಲ್ಲಿ ಸ್ವೇಚ್ಛೆಯಾಗಿ ಉಗುಳಿರುವೆನು, ಅಸಹ್ಯಮಾಡಿರುವೆನು. ಶಿವಲಿಂಗಗಳ ಮೇಲೆಯೆ ಪಾದಗಳನ್ನಿರಿಸಿರುವೆನು. ನನ್ನ ಆ ಪಾಪವು ಶಾಂತವಾಗಲಿ. ॥೩೬೦॥

ಈ ಕಾಶೀಕ್ಷೇತ್ರದಲ್ಲಿ ಹಲವಾರು ಜಲಚರಗಳನ್ನು ಕಾಲಿನಿಂದ ತುಳಿದಿರುವೆನು. ಅದರಿಂದ ಉಂಟಾಗುವ ಪಾಪವು ಶಾಂತವಾಗಲಿ. ॥೩೬೧॥

ಓ ಪ್ರಭುವೇ, ಅನ್ನವನ್ನು ಇಕ್ಕುವುದರಲ್ಲಿ ಶಕ್ತನಾಗಿದ್ದರೂ, ಧನಲೋಭದಿಂದ ಅನ್ನವನ್ನಪೇಕ್ಷಿಸುವ ಬಡಬಗ್ಗರಿಗೆ ಅನ್ನವನ್ನಿಕ್ಕಲಿಲ್ಲ. ಅಶಕ್ತನಾದ ನಾನು ಒಂದು ಬಾರಿಯಾದರೂ ಅಂತರ್ಗೃಹದ ಪ್ರದಕ್ಷಿಣೆಯನ್ನು ನೆರವೇರಿಸಲಿಲ್ಲ. ಅದರಿಂದುಂಟಾಗುವ ನನ್ನ ಪಾಪವು ಶಾಂತವಾಗಲಿ. ॥೩೬೨-೩೬೩॥

ಕದಾಚಿದನೃತಾ ವಾಣೀ ನಿಃಸೃತಾ ಮನ್ಮುಖಾಚ್ಛಿವ ।
ಸರ್ವಪುಣ್ಯಹರಾ ಶಂಭೋ ತತ್ಪಾಪಂ ಶಾಂತಿಮೇಽಸ್ತು ॥೩೬೪॥

ಕದಾಚಿನ್ನ ಕೃತಂ ದೈವಾಚ್ಛೈವವರ್ಯಸ್ಯ ವಂದನಂ ।
ಸರ್ವಪಾಪಹರಂ ಶಂಭೋ ತತ್ಪಾಪಂ ಶಾಂತಿಮೇಽಸ್ತು ॥೩೬೫॥

ಕದಾಚಿದುದಕಂ ಪೀತಮಕೃತ್ವಾ ಭಸ್ಮಧಾರಣಂ ।
ಪ್ರಮಾದೇನ ಮಹಾದೇವ ತತ್ಪಾಪಂ ಶಾಂತಿಮೇಽಸ್ತು ॥೩೬೬॥

ಕದಾಚಿಚ್ಛಿವಲಿಂಗಸ್ಯ ನಿರ್ಣೇಜನಜಲಂ ಶುಭಂ ।
ನ ಪೀತಂ ಪಾರ್ವತೀನಾಥ ತತ್ಪಾಪಂ ಶಾಂತಿಮೇಽಸ್ತು ॥೩೬೭॥

ಕದಾಚಿದ್ಬಿಲ್ವಪತ್ರೇಣ ಪ್ರಮಾದೇನ ಹಿ ಸರ್ವಥಾ ।
ಲಿಂಗಂ ನಾಭ್ಯರ್ಚಿತಂ ಶಂಭೋ ತತ್ಪಾಪಂ ಶಾಂತಿಮೇಽಸ್ತು॥೩೬೮॥

ಜ್ಞಾನವಾಪೀಜಲೇ ರಮ್ಯೇ ಭ್ರಮೇಣೈವ ಕದಾಚನ ।
ನ ಸ್ನಾನಂ ಕೃತಮೀಶಾನ ತತ್ಪಾಪಂ ಶಾಂತಿಮೇಽಸ್ತು ॥೩೬೯॥

ಓ ಶಿವನೇ, ಆಕಸ್ಮಿಕವಾಗಿ ನನ್ನ ಮುಖದಿಂದ ಅಸತ್ಯವಾದ ವಚನವು ಸಂಭವಿಸಿರಬಹುದು. ಅದರಿಂದ ನನಗೆ ಪಾಪವು ಸಂಘಟಿಸದಿರಲಿ. ॥೩೬೪॥

ದೈವಯೋಗದಿಂದ ಈಶ್ವರಭಕ್ತಾಗ್ರೇಸರರನ್ನು ವಂದಿಸದೇ ಇದ್ದಿರಬಹುದು. ಅದರಿಂದ ನನಗೆ ಪಾಪವು ಸಂಭವಿಸದಿರಲಿ. ॥೩೬೫॥

ಆಕಸ್ಮಿಕವಾಗಿ ಭಸ್ಮವನ್ನು ಧರಿಸದೇ ಉದಕಪಾನವನ್ನು ಮಾಡಿರಬಹುದು. ಅದರಿಂದ ಸಂಭವಿಸಬಹುದಾದ ಪಾಪವು ಶಾಂತವಾಗಲಿ. ॥೩೬೬॥

ಒಂದಾನೊಂದು ದಿವಸದಲ್ಲಿ ಶಿವನ ತೀರ್ಥೋದಕವನ್ನು ಪಾನಮಾಡದೇ ಇರಬಹುದು. ಅದರಿಂದ ಪಾಪವು ಸಂಘಟಿಸದಿರಲಿ. ॥೩೬೭॥

ಒಂದುವೇಳೆ ಅಜ್ಞಾನದಿಂದ ಈಶ್ವರನ ಲಿಂಗವನ್ನು ಆರಾಧಿಸದೇ ಇರಬಹುದಾದ ಪಾಪವು ಶಾಂತವಾಗಲಿ. ॥೩೬೮॥

ಒಂದಾನೊಂದು ವೇಳೆಯಲ್ಲಿ ಅಜ್ಞಾನದಿಂದ ರಮ್ಯವಾದ ಜ್ಞಾನವಾಪಿಯ ಜಲದಲ್ಲಿ ಸ್ನಾನವನ್ನು ಆಚರಿಸದೇ ಇರಬಹುದು. ದಂಡಪಾಣಿಯನ್ನಾಗಲಿ,

ಕದಾಚಿನ್ನ ಕೃತಂ ಶಂಭೋ ದಂಡಪಾಣ್ಯರ್ಚನಂ ಮಯಾ ।
ನಾರ್ಚಿತೋ ಧುಂಡಿರಾಜೋಽಪಿ ತತ್ಪಾಪಂ ಶಾಂತಿಮೇಷ್ಯತು ॥೩೭೦॥

ವೀರೇಶ್ವರೋ ಭ್ರಮೇಣೈವ ಕದಾಚಿನ್ನಾರ್ಚಿತೋ ಮಯಾ ।
ಸರ್ವಾರ್ಥದಃ ಕೃಪಾಸಿಂಧೋ ತತ್ಪಾಪಂ ಶಾಂತಿಮೇಷ್ಯತು ॥೩೭೧॥

ಶ್ರೀಕಾಲಭೈರವಃ ಶಾಸ್ತಾ ಭ್ರಮೇಣೈವ ಕದಾಚನ ।
ನಾರಾಧಿತೋ ಮಹಾದೇವ ತತ್ಪಾಪಂ ಶಾಂತಿಮೇಷ್ಯತು ॥೩೭೨॥

ಪ್ರಚಂಡವಿಘ್ನಸಂಹರ್ತಾ ವಕ್ರತುಂಡೇಶ್ವರೋ ಮಯಾ ।
ಕದಾಚಿನ್ನಾರ್ಚಿತಃ ಶಂಭೋ ತತ್ಪಾಪಂ ಶಾಂತಿಮೇಷ್ಯತು ॥೩೭೩॥

ಶಿವಗಂಗಾಜಲೇ ಸ್ನಾನಂ ಕದಾಚಿನ್ನ ಕೃತಂ ಮಯಾ ।
ಆಲಸೇನ ವಿರೂಪಾಕ್ಷ ತತ್ಪಾಪಂ ಶಾಂತಿಮೇಷ್ಯತು ॥೩೭೪॥

ಓಂಕಾರಾಖ್ಯಂ ಮಹಾಲಿಂಗಂ ಭ್ರಾಂತೇನೈವ ಕದಾಚನ ।
ಮಯಾ ನಾಭ್ಯರ್ಚಿತಂ ಶಂಭೋ ತತ್ಪಾಪಂ ಶಾಂತಿಮೇಷ್ಯತು॥೩೭೫॥

ಧುಂಡಿರಾಜನನ್ನಾಗಲಿ ಅರ್ಚಿಸದೇ ಇರಬಹುದು. ಆ ಪಾಪವು ಶಾಂತವಾಗಲಿ. ||೩೬೯-೩೭೦||

ಓ ದಯಾಸಾಗರನೇ, ಅಜ್ಞಾನದಿಂದ ಒಂದಾನೊಂದು ಕಾಲದಲ್ಲಿ ವೀರೇಶ್ವರನನ್ನು ಅರ್ಚಿಸದೇ ಇರಬಹುದು. ದುಷ್ಟಶಿಕ್ಷಕನಾದ ಕಾಲಭೈರವನನ್ನು ಆರಾಧಿಸದೇ ಇರಬಹುದು. ಆದರಿಂದ ನನಗೆ ಪಾಪವು ಸಂಭವಿಸದಿರಲಿ. ||೩೭೧-೩೭೨||

ವಿಘ್ನನಿವಾರಕನಾದ ವಕ್ರತುಂಡೇಶ್ವರನನ್ನು ಅಕಸ್ಮಾತ್ತಾಗಿ ಆರಾಧಿಸದೇ ಇರಬಹುದು. ಆ ಪಾಪವು ಶಾಂತವಾಗಲಿ. ||೩೭೩||

ಓ ವಿರೂಪಾಕ್ಷನೇ, ಒಂದಾನೊಂದು ವೇಳೆಯಲ್ಲಿ ಆಲಸ್ಯದಿಂದ ಶಿವಗಂಗೆಯಲ್ಲಿ ಸ್ನಾನವನ್ನಾಚರಿಸದಿರಬಹುದು. ಆದರಿಂದ ನನಗೆ ಪಾಪವು ಸಂಘಟಿಸದಿರಲಿ.||೩೭೪||

ಎಷ್ಟೋ ವೇಳೆಯಲ್ಲಿ ಅಜ್ಞಾನಕ್ಕೆ ಅಧೀನನಾಗಿ ಓಂಕಾರೇಶ್ವರಲಿಂಗವನ್ನು ಅರ್ಚಿಸದಿರಬಹುದು. ಆ ಪಾಪವು ಶಾಂತವಾಗಲಿ. ||೩೭೫||

ಶ್ರೀಮಾನ್ ಪಶುಪತೀಶೋಪಿ ಪಶುಪಾಶವಿಮೋಚಕಃ ।
ಕದಾಚಿನ್ನಾರ್ಚಿತಶ್ಶಂಭೋ ತತ್ಪಾಪಂ ಶಾಂತಿಮೇಸ್ಯತು ॥೩೭೬॥

ಕೇದಾರೇಶ್ವರಮಾರಾಧ್ಯಮನಾರಾಧ್ಯೈವ ಸಂಸ್ಥಿತಂ ।
ಮಯಾ ಕದಾಚಿದ್ವಿಶ್ವೇಶ ತತ್ಪಾಪಂ ಶಾಂತಿಮೇಸ್ಯತು ॥೩೭೭॥

ಏವಮುಚ್ಚಾರ್ಯ ಸಕಲಾನಪರಾಧಾನ್ಯಥಾಕ್ರಮಂ ।
ತತಃ ಸ್ನಾತ್ವಾ ಜ್ಞಾನವಾಪ್ಯಾಂ ಪುನಃ ಸಂಪೂಜ್ಯ ಮಾಂ ತತಃ॥೩೭೮॥

ವೀರೇಶ್ವರಾದಿಸ್ಥಾನೇಷು ಗತ್ವಾ ಸಂಪೂಜ್ಯ ಸಾದರಂ ।
ಪುನರಭ್ಯರ್ಚನಂ ಕಾರ್ಯಂ ಮಯಿ ಭಕ್ತಿಪುರಃಸರಂ ॥೩೭೯॥

ತತೋ ಮೌನೇನ ನಿಯಮಾತ್ಕೃತಾಂಜಲಿಪುಟೈರ್ನರೈಃ ।
ದಂಡಪಾಣಿಂ ಪ್ರಣಮ್ಯೈವ ಗಂತವ್ಯಂ ಮುಕ್ತಿಮಂಟಪಾತ್ ॥೩೮೦॥

ದಿನಾಷ್ಟಕೇನ ವಿಧಿವತ್ಪಂಚಕ್ರೋಶಪ್ರದಕ್ಷಿಣಂ ।
ಕರ್ತವ್ಯಮತಿಯತ್ನೇನ ಭಕ್ತಿಶ್ರದ್ಧಾಸಮನ್ವಿತೈಃ ॥೩೮೧॥

ಅಜ್ಞಾನಿಗಳ ಬಂಧನವನ್ನು ಜ್ಞಾನಪ್ರದಾನತೆಯಿಂದ ಸಡಲಿಸುವ ಪಶುಪತೀಶ್ವರನನ್ನು ನಾನು ಒಮ್ಮೆಯೂ ಪೂಜಿಸಲಿಲ್ಲ. ಶಂಕರನೇ, ಆ ಅಪರಾಧವನ್ನು ಕ್ಷಮಿಸು. ॥೩೭೬॥

ಓ ವಿಶ್ವನಾಥನೇ, ಪೂಜ್ಯನಾದ ಕೇದಾರೇಶ್ವರನನ್ನು ಆಲಸ್ಯದಿಂದ ಆರಾಧಿಸದೇ ಇರಬಹುದು. ಅದರಿಂದುಂಟಾದ ಪಾಪವು ಫಲಿಸದೇ ಶಾಂತವಾಗಲಿ. ॥೩೭೭॥

ಈರೀತಿಯಲ್ಲಿ ಸಕಲ ಅಪರಾಧಗಳನ್ನೂ ಉಚ್ಚರಿಸಿ ಬಳಿಕ ಜ್ಞಾನವಾಪಿಯಲ್ಲಿ ಸ್ನಾನಮಾಡಿ, ಪುನಃ ನನ್ನನ್ನು ಪೂಜಿಸಿ, ವೀರೇಶಲಿಂಗವೇ ಮೊದಲಾದ ಶಿವಲಿಂಗಗಳು ಇರುವ ಸ್ಥಳಕ್ಕೆಹೋಗಿ ಅಲ್ಲಿ ನನ್ನನ್ನು ಭಕ್ತಿಶ್ರದ್ಧೆಗಳಿಂದ ಪೂಜಿಸಿ ಮತ್ತೊಮ್ಮೆ ನನ್ನನ್ನು ಪೂಜಿಸಬೇಕು. ॥೩೭೮-೩೭೯॥

ಆದಾದ ಬಳಿಕ ಮೌನಿಗಳಾಗಿ ಅಂಜಲಿಬದ್ಧರಾಗಿ ದಂಡಪಾಣಿಗೆ ನಮಸ್ಕರಿಸಿ ಮುಕ್ತಿಮಂಟಪದಿಂದ ಮೊದಲು ಹೊರಡಬೇಕು. ॥೩೮೦॥

ಎಂಟು ದಿನಗಳ ಪರ್ಯಂತ ಭಕ್ತಿಶ್ರದ್ಧೆಗಳಿಂದ ಕೂಡಿದವರಾಗಿ ವಿಧಿವತ್ತಾಗಿ ಯಾವ ಪ್ರಮಾದವೂ ಸಂಭವಿಸದಂತೆ ಪಂಚಕ್ರೋಶದ ಪ್ರದಕ್ಷಿಣೆಯನ್ನು ಮಾಡಬೇಕು. ॥೩೮೧॥

ಮಧ್ಯೇ ಸರ್ವೇಷು ತೀರ್ಥೇಷು ಸ್ನಾತ್ವಾ ಸಮ್ಯಗ್ಯಥಾವಿಧಿ ।
ಶ್ರಾದ್ಧಂ ಕಾರ್ಯಂ ಪ್ರಯತ್ನೇನ ಸ್ವಾದ್ವನ್ನೈ ರತಿಶೋಭನೈಃ ॥೩೮೨॥

ಪೂಜನೀಯಾಃ ಪ್ರಯತ್ನೇನ ಪಂಚಕ್ರೋಶಸ್ಯ ರಕ್ಷಕಾಃ ।
ಯಾತ್ರಾವಿಘ್ನಹರಾಃ ಸರ್ವೇ ವಂದನೀಯಾಃ ಪ್ರಯತ್ನತಃ ॥೩೮೪॥

ಸಹಸ್ರಕೋಟಿಲಿಂಗಾನಿ ದಿವ್ಯಾನ್ಯತ್ಯದ್ಭುತಾನಿ ಚ ।
ಪಂಚಕ್ರೋಶಮಹಾಮಾರ್ಗೇ ತಿಷ್ಠಂತಿ ಕಮಲಾನನೇ ॥೩೮೫॥

ಬಿಲ್ವಪತ್ರಾಕ್ಷತಾದ್ಯೈಸ್ತು ತಾನಿ ಯತ್ನೇನ ಸರ್ವಥಾ ।
ಪೂಜನೀಯಾನಿ ಲಿಂಗಾನಿ ಯಥಾಶಕ್ತಿ ಯಥಾಕ್ರಮಂ ॥೩೮೫॥

ಭೈರವಾಣಾಂ ಗಣೇಶಾನಾಂ ದುರ್ಗಾಣಾಂ ಚ ವರಾನನೇ ।
ಸಂಖ್ಯಾ ನ ವರ್ತತೇ ತೇಷಾಂ ದರ್ಶನಂ ಚಾಪಿ ದುರ್ಲಭಂ ॥೩೮೬॥

ಮಾರ್ಗಮಧ್ಯದಲ್ಲಿ ಸಿಕ್ಕುವ ಸಕಲ ತೀರ್ಥಗಳಲ್ಲಿಯೂ ಯಥಾವಿಧಿಯಾಗಿ ಸ್ನಾನವನ್ನಾಚರಿಸಿ ರುಚಿಕರವಾದ ಪಕ್ವಾನ್ನಗಳಿಂದ ಪಿತೃಶ್ರಾದ್ಧವನ್ನು ನೆರವೇರಿಸಬೇಕು. ॥೩೮೨-೩೮೩॥

ಪಂಚಕ್ರೋಶವನ್ನು ರಕ್ಷಿಸುತ್ತಿರುವ ದೇವತೆಗಳನ್ನು ತಪ್ಪದೇ ಪೂಜಿಸಬೇಕು. ಯಾತ್ರೆಯ ಮಧ್ಯದಲ್ಲಿ ಸಂಭವಿಸಬಹುದಾದ ವಿಘ್ನಗಳನ್ನು ಪರಿಹರಿಸುವ ದೇವತೆಗಳನ್ನೂ ಪೂಜಿಸಬೇಕು. ॥೩೮೪॥

ಎಲೌ ಪದ್ಮಮುಖಿಯೇ, ಪಂಚಕ್ರೋಶಕ್ಕೆ ಹೋಗುವ ಹೆದ್ದಾರಿಯಲ್ಲಿ ಅತ್ಯದ್ಭುತವೂ ದಿವ್ಯವೂ ಆದ ಸಾವಿರಾರು ಕೋಟಿ ಶಿವಲಿಂಗಗಳಿರುವುವು. ॥೩೮೫॥

ಅವೆಲ್ಲವನ್ನೂ ಬಿಲ್ವಪತ್ರೆ, ಅಕ್ಷತೆ ಮುಂತಾದ ಪೂಜಾಸಾಮಗ್ರಿಗಳಿಂದ ಯಥಾಶಕ್ತಿ ಕ್ರಮವರಿತು ಪೂಜಿಸಬೇಕು. ॥೩೮೫॥

ಎಲೌ ಸುಮುಖಿಯೇ, ಅಲ್ಲಿರುವ ಭೈರವ, ಗಣೇಶ, ದುರ್ಗಾ ಈ ದೇವತೆಗಳನ್ನೂ ಲೆಕ್ಕಿಸಲು ಸಾಧ್ಯವಿಲ್ಲ. ಅವುಗಳ ದರ್ಶನವೂ ದುರ್ಲಭವಾಗಿರುವುದು. ॥೩೮೬॥

ನಿರಾಹಾರೇಣ ಕುರ್ವಂತಿ ದೇವಗಂಧರ್ವದಾನವಾಃ ।
ಕೇಚಿನ್ಮುನೀಶ್ವರಾಃ ದಿವ್ಯಾಃ ಪಂಚಕ್ರೋಶಪ್ರದಕ್ಷಿಣಂ ॥೩೮೭॥

ಪಂಚಕ್ರೋಶಸ್ಯ ಯಾತ್ರಾಯಾಂ ತಿಲಮಾತ್ರಮಪಿ ಪ್ರಿಯೇ ।
ನಾತಿಕ್ರಮೇದ್ಯಥಾಮಾರ್ಗಂ ಗಂತವ್ಯಮತಿಯತ್ನತಃ ॥೩೮೮॥

ಕರಸಂಚಲನಂ ತ್ಯಕ್ತ್ವಾ ಕೃತಾಂಜಲಿಪುಟೈಃ ಸದಾ ।
ಮೌನೇನೈವ ಹಿ ಕರ್ತವ್ಯಂ ಪಂಚಕ್ರೋಶಪ್ರದಕ್ಷಿಣಂ ॥೩೮೯॥

ಮಾಮೇವ ಸರ್ವದಾ ಧ್ಯಾತ್ವಾ ಶಿವಮದ್ವಯಮವ್ಯಯಂ ।
ಮತ್ಕಥಾಶ್ರವಣಾಸಕ್ತೈಸ್ತತ್ಕರ್ತವ್ಯಂ ಪ್ರಯತ್ನತಃ ॥೩೯೦॥

ರಾತ್ರೌ ಜಾಗರಣಂ ಕಾರ್ಯಮಾದಿನಾಷ್ಟಕಮಾದರಾತ್ ।
ಭೋಜನೀಯಾಃ ಪ್ರಯತ್ನೇನ ಶೈವಾ ಬ್ರಾಹ್ಮಣಪುಂಗವಾಃ ॥೩೯೧॥

ದೇವತೆಗಳು, ಗಂಧರ್ವರು, ರಾಕ್ಷಸರು ಮತ್ತು ಹಲವಾರು ಮುನಿಗಳು ನಿರಾಹಾರವ್ರತವನ್ನು ಕೈಗೊಂಡು ಪಂಚಕ್ರೋಶಪ್ರದಕ್ಷಿಣೆಯನ್ನು ಮಾಡುವರು ॥೩೮೭॥

ಪ್ರಿಯೇ, ಪಂಚಕ್ರೋಶದ ಯಾತ್ರೆಯ ನಿಯಮವನ್ನು ತಿಲಮಾತ್ರದಷ್ಟು ಉಲ್ಲಂಘಿಸದೇ ಸಾವಧಾನದಿಂದ ಮಾರ್ಗವನ್ನು ಅತಿಕ್ರಮಿಸಬೇಕು. ॥೩೮೮॥

ಕೈಗಳನ್ನು ಅತ್ತಿತ್ತ ಅಲ್ಲಾಡಿಸದೇ, ಅಂಜಲಿಬದ್ಧರಾಗಿ ಮೌನದಿಂದ ಪಂಚಕ್ರೋಶದ ಪ್ರದಕ್ಷಿಣೆಯನ್ನು ನೆರವೇರಿಸಬೇಕು. ॥೩೮೯॥

ಅನವರತವೂ, ಅದ್ವಿತೀಯಸ್ವರೂಪನೂ, ನಾಶರಹಿತನೂ, ಶಾಂತಮೂರ್ತಿಯೂ ಆದ ನನ್ನನ್ನೇ ಧ್ಯಾನಿಸುತ್ತಾ ನನ್ನ ಕಥೆಗಳನ್ನು ಕೇಳುವುದರಲ್ಲಿ ಆಸಕ್ತರಾಗಿ ಯಾತ್ರೆಯನ್ನು ಮುಗಿಸಬೇಕು. ॥೩೯೦॥

ಮೊದಲನೆಯ ದಿನದಿಂದ ಮೊದಲುಗೊಂಡು ಎಂಟು ದಿವಸಗಳು ಕಳೆಯುವವರೆಗೂ ರಾತ್ರಿ ಜಾಗರಣೆಯನ್ನು ಆಚರಿಸಬೇಕು. ಪ್ರತಿದಿನವೂ ತಪ್ಪದೇ ಈಶ್ವರಾರಾಧಕರಾದ ಬ್ರಾಹ್ಮಣಶ್ರೇಷ್ಠರನ್ನು ಭೋಜನದಿಂದ ತೃಪ್ತಿಪಡಿಸಬೇಕು. ॥೩೯೧॥

ತತೋ ಮಮಾಂತಿಕಂ ಪ್ರಾಪ್ಯ ಮಾಮಭ್ಯರ್ಚ್ಯ ಸದಾಶಿವಂ ।
ಯಾತ್ರಾಂ ನಿವೇದ್ಯ ಶುಭದಾಂ ತತಃ ಸ್ವಗೃಹಮಾವಿಶೇತ್ ॥೩೯೨॥

ಪ್ರತಿಪಕ್ಷೇಽಪಿ ಕರ್ತವ್ಯಂ ಪಂಚಕ್ರೋಶಪ್ರದಕ್ಷಿಣಂ ।
ಏವಮೇವಾತಿಯತ್ನೇನ ಕಾಶೀವಾಸರತೈರ್ಜನೈಃ ॥೩೯೩॥

ಏವಂ ತು ಸ್ಥೂಲಮಾರ್ಗೇಣ ಪಂಚಕ್ರೋಶಪ್ರದಕ್ಷಿಣಂ ।
ಯಥಾ ಕಥಂಚಿತ್ಕರ್ತವ್ಯಂ ಮನುಜೈರಲ್ಪಸಾಧನೈಃ ॥೩೯೪॥

ಯಥಾಶಾಸ್ತ್ರಂ ತು ತತ್ಕರ್ತುಂ ದೇವೈರಪಿ ನ ಶಕ್ಯತೇ ।
ಯಥಾಶಾಸ್ತ್ರಂ ಕೃತಂ ಚೇತ್ಸ್ಯಾನ್ಮೋಕ್ಷಃ ಸ್ಯಾದೇವ ತತ್ಕ್ಷಣಾತ್ ॥೩೯೫॥

ಬ್ರಹ್ಮವಿಷ್ಣ್ವಾದಯೋ ದೇವಾಃ ಪಂಚಕ್ರೋಶಪ್ರದಕ್ಷಿಣಂ ।
ಏಕವಾರಂ ಯಥಾಶಾಸ್ತ್ರಂ ಕರ್ತವ್ಯಮಿತಿ ನಿರ್ಯಯುಃ ॥೩೯೬॥

ಯಾತ್ರೆಯು ಮುಗಿದ ಬಳಿಕ ನನ್ನ ಬಳಿಗೆ ಬಂದು ಸದಾಶಿವನಾದ ನನ್ನನ್ನು ಪೂಜಿಸಿ ತನ್ನ ಯಾತ್ರೆಯು ಸಾಂಗವಾಗಿ ಮುಗಿದ ಶುಭವಾರ್ತೆಯನ್ನು ನನ್ನಲ್ಲಿ ವಿಜ್ಞಾಪಿಸಿ ಮನೆಗೆ ತೆರಳಬೇಕು. ॥೩೯೨॥

ಕಾಶೀಕ್ಷೇತ್ರದಲ್ಲಿ ವಾಸವಾಗಿರುವ ಜನರು ಇದೇ ರೀತಿಯಲ್ಲಿ ಪ್ರತಿಯೊಂದು ಪಕ್ಷದಲ್ಲಿಯೂ ಪಂಚಕ್ರೋಶಪ್ರದಕ್ಷಿಣೆಯನ್ನು ನೆರವೇರಿಸಬೇಕು. ॥೩೯೩॥

ಯಾತ್ರೆಯನ್ನು ಮುಗಿಸಲು ತಕ್ಕ ಸಾಮಗ್ರಿಗಳಿಲ್ಲದವರು ಮಹಾಮಾರ್ಗದಿಂದ ನಡೆದು ಆತ್ಮಸಾಧ್ಯವಾದ ಪ್ರಯತ್ನದಿಂದ ಪಂಚಕ್ರೋಶಪ್ರದಕ್ಷಿಣೆಯನ್ನು ನೆರವೇರಿಸಬೇಕು. ॥೩೯೪॥

ಶಾಸ್ತ್ರೋಕ್ತವಾದ ಕ್ರಮವನ್ನನುಸರಿಸಿ ಪಂಚಕ್ರೋಶಯಾತ್ರೆಯನ್ನು ಮುಗಿಸಲು ದೇವತೆಗಳಿಗೂ ಅಸಾಧ್ಯವಾಗಿರುವುದು. ಶಾಸ್ತ್ರಕ್ರಮದಂತೆ ನೆರವೇರಿಸಿದರೆ ಆ ಕೂಡಲೆಯೇ ಮೋಕ್ಷವು ಸಂಭವಿಸುವುದು. ॥೩೯೫॥

ಒಂದಾನೊಂದು ಸಮಯದಲ್ಲಿ ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳು ಒಂದೇ ಒಂದು ಬಾರಿ, ಶಾಸ್ತ್ರೋಕ್ತವಾದ ಕ್ರಮದಿಂದ ಪಂಚಕ್ರೋಶದ ಪ್ರದಕ್ಷಿಣೆಯನ್ನು ನೆರವೇರಿಸಬೇಕೆಂಬ ಇಚ್ಛೆಯಿಂದ ತಮ್ಮ ತಮ್ಮ ಲೋಕದಿಂದ ಪಂಚಕ್ರೋಶಯಾತ್ರೆಗಾಗಿ ಹೊರಟರು. ॥೩೯೬॥

ಸಾಂಗಂ ಪ್ರತ್ಯೇಕಮೇಕೈಕಂ ಲಿಂಗಂ ಸಂಪೂಜ್ಯ ಸಾದರಂ ।
ಭೈರವಾನ್ಗಣಪಾನ್ಸಮ್ಯಕ್ಪೂಜಯಾಮ ಇತಿ ಪ್ರಿಯಾನ್ ॥೩೯೭॥

ಪಂಚಕ್ರೋಶಸ್ಯ ಯಾತ್ರಾರ್ಥಂ ಸಂಕಲ್ಪ್ಯ ವಿಧಿವತ್ತತಃ ।
ನಿರ್ಯಯುಶ್ಚಾಮರಾಃ ಸರ್ವೇ ಬ್ರಹ್ಮವಿಷ್ಣುಪುರೋಗಮಾಃ ॥೩೯೮॥

ಪ್ರತ್ಯೇಕಂ ದಿವ್ಯಲಿಂಗಾನಾಂ ಕುರ್ವಂತಃ ಪೂಜನಂ ಮುದಾ ।
ರವಿರಕ್ತಾಕ್ಷಗಂಧರ್ವಂ ಪ್ರಾಪುರ್ವಿಂಶತಿವತ್ಸರೈಃ ॥೩೯೯॥

ತತೋ ವಿಶ್ರಾಂತಚಿತ್ತಾಸ್ತೇ ಪ್ರತ್ಯೇಕಂ ವಿಸ್ಮಯಂ ಗತಾಃ ।
ಯಾತ್ರೇಯಂ ವಿಧಿವತ್ಕರ್ತುಂ ನ ಶಕ್ಯೇತ ಇತಿ ಪ್ರಿಯೇ ॥೪೦೦॥

ಸ್ಥಿತಾನಿ ಪಶ್ಚಾಲ್ಲಿಂಗಾನಿ ಸ್ವಲ್ಪಾನ್ಯೇವ ಪುರಃಸರಂ ।
ಬಹೂನಿ ಸಂತಿ ಲಿಂಗಾನಿ ದಿವ್ಯಾನ್ಯತ್ಯದ್ಭುತಾನಿ ಚ ॥೪೦೧॥

ಅವರು ಹೊರಡುವಾಗ ಪಂಚಕ್ರೋಶದ ದಾರಿಯಲ್ಲಿ ಸಿಕ್ಕುವ ಪ್ರತಿಯೊಂದು ಲಿಂಗವನ್ನೂ ಸಾಂಗವಾಗಿ ಪೂಜಿಸಿ, ಭೈರವರನ್ನೂ, ಗಣೇಶರನ್ನೂ ಪೂಜಿಸುವೆವೆಂದು ನಿರ್ಧರಿಸಿ, ಪಂಚಕ್ರೋಶಯಾತ್ರೆಯನ್ನು ಯಥಾಶಾಸ್ತ್ರವಾಗಿ ನೆರವೇರಿಸುವೆವೆಂದು ಸಂಕಲ್ಪಿಸಿ ತಮ್ಮ ವಾಸಸ್ಥಳದಿಂದ ಹೊರಟರು. ||೩೯೮||

ಈ ರೀತಿಯಲ್ಲಿ ಪಂಚಕ್ರೋಶಯಾತ್ರೆಗೆ ಹೊರಟ ಅವರು ಪ್ರತಿಯೊಂದು ಲಿಂಗವನ್ನೂ ಭಕ್ತಿಯಿಂದ ಪೂಜಿಸುತ್ತಾ ರವಿರಕ್ತಾಕ್ಷನೆಂಬ ಗಂಧರ್ವನು ಇದ್ದ ಸ್ಥಳಕ್ಕೆ ಬಂದರು. ||೩೯೯||

ಪ್ರಿಯೇ, ಬಳಿಕ ಅವರು ಮಾರ್ಗಾತಿಕ್ರಮಣದಿಂದ ಆಯಾಸಗೊಂಡು, ಪಂಚಕ್ರೋಶದ ಯಾತ್ರೆಯನ್ನು ಶಾಸ್ತ್ರೋಕ್ತವಾದ ರೀತಿಯಿಂದ ನೆರವೇರಿಸಲು ಅಸಾಧ್ಯವಾಗಿರುವುದೆಂದು ತಿಳಿದು ಅವರೆಲ್ಲರೂ ಅಚ್ಚರಿಗೊಂಡರು. ||೪೦೦||

ಆಗ ಅವರು ಅನ್ಯೋನ್ಯವಾಗಿ ಹೀಗೆಂದು ಮಾತನಾಡಿಕೊಂಡರು.— ಈಗಾಗಲೇ ನಾವು ಅತಿಕ್ರಮಿಸಿದ ಮಾರ್ಗದಲ್ಲಿ ಅನೇಕ ಶಿವಲಿಂಗಗಳು ಅಲ್ಲಲ್ಲಿ ಇದ್ದುವು. ಆದರೆ ಇನ್ನು ಮುಂದೆ ನಡೆಯಬೇಕಾದ ಮಾರ್ಗದಲ್ಲಿ ಅತ್ಯದ್ಭುತವೂ ದಿವ್ಯವೂ ಆದ ಇನ್ನೂ ಅನೇಕ ಲಿಂಗಗಳಿರುವುವು. ||೪೦೧||

ಗಣೇಶಭೈರವಾದೀನಾಂ ಗಣನಾ ನೈವ ಸರ್ವಥಾ ।
ಪ್ರತ್ಯೇಕಂ ಪೂಜನಾತ್ಕಾಲೋ ಭೂಯಾನೇವ ಗಮಿಷ್ಯತಿ ॥೪೦೨॥

ಕ್ವ ತಾವದಾಯುರಸ್ಮಾಕಂ ಕ್ವ ತಾವತ್ಪಾದಯೋರ್ಬಲಂ ।
ಯಾವದೇವಂ ಯಥಾಶಾಸ್ತ್ರಂ ಪೂಜನಂ ಮೋಕ್ಷಸಾಧಕಂ ॥೪೦೩॥

ಯಥಾಶಾಸ್ತ್ರಂ ಕೃತಂ ಚೇತ್ಸ್ಯಾತ್ಪಂಚಕ್ರೋಶಪ್ರದಕ್ಷಿಣಂ ।
ಮೋಕ್ಷೋ ಭವತಿ ಶೀಘ್ರೇಣ ತತ್ತು ಕರ್ತುಂ ನ ಶಕ್ಯತೇ ॥೪೦೪॥

ಸಂಕಲ್ಪಸ್ತು ಕೃತಃ ಪೂರ್ವಂ ಕಿಂ ಕರ್ತವ್ಯಮತಃ ಪರಂ ।
ಸಂಕಲ್ಪಪ್ರಚ್ಯವಾದನ್ಯತ್ಪಾತಕಂ ಚ ಸಮಾಗತಂ ॥೪೦೫॥

ಘೋರಪಂಚಾಗ್ನಿಮಧ್ಯೇಽಪಿ ತಪಃ ಕರ್ತುಂ ಹಿ ಶಕ್ಯತೇ ।
ಪಂಚಕ್ರೋಶಸ್ಯ ಯಾತ್ರೇಯಂ ಕರ್ತುಮೇವ ನ ಶಕ್ಯತೇ ॥೪೦೬॥

ಇನ್ನು ಮುಂದಿನ ಮಾರ್ಗದಲ್ಲಿರುವ ಗಣೇಶ ಮತ್ತು ಭೈರವನ ವಿಗ್ರಹಗಳನ್ನು ಲೆಕ್ಕಿಸಲು ಸಾಧ್ಯವಿರುವುದಿಲ್ಲ. ಅವುಗಳನ್ನೆಲ್ಲಾ ಪ್ರತ್ಯೇಕವಾಗಿ ಪೂಜಿಸಿದರೆ ದೀರ್ಘಕಾಲವು ಅತಿಕ್ರಮಿಸುವುದು. ॥೪೦೨॥

ಸಕಲ ದೇವತೆಗಳನ್ನೂ ಶಾಸ್ತ್ರೋಕ್ತರೀತಿಯನ್ನನುಸರಿಸಿ ಪೂಜಿಸಿದರೆ ಮೋಕ್ಷವೇನೋ ಲಭಿಸುವುದು. ಆದರೆ ನಮ್ಮ ಅಲ್ಪವಾದ ಜೀವಿತವೆಲ್ಲಿ? ನಮ್ಮ ಪಾದಗಳಿಗೆ ಇರುವ ಬಲವೆಲ್ಲಿ ? ಅದು ನಮ್ಮಿಂದ ಸಾಧ್ಯವೆ ? ॥೪೦೩॥

ಶಾಸ್ತ್ರೋಕ್ತವಾದ ಕ್ರಮದಿಂದ ಪಂಚಕ್ರೋಶದ ಪ್ರದಕ್ಷಿಣೆಯನ್ನು ನೆರವೇರಿಸಿದರೆ ಶೀಘ್ರದಲ್ಲಿಯೇ ಮುಕ್ತಿಯು ಸಿದ್ಧಿಸುವುದು. ಆದರೆ ಆರೀತಿಯಲ್ಲಿ ಅನುಷ್ಠಾನವನ್ನು ಮಾಡುವುದೇ ಅಸಾಧ್ಯವಾಗಿರುವುದು. ॥೪೦೪॥

ಈ ಹಿಂದೆಯೇ ಪಂಚಕ್ರೋಶಯಾತ್ರೆಯನ್ನು ಯಥಾಶಾಸ್ತ್ರವಾಗಿ ನೆರವೇರಿಸುವೆನೆಂದು ಸಂಕಲ್ಪವನ್ನೇನೋ ಮಾಡಿರುವೆವು. ಮುಂದೇನು ಗತಿ. ನಮ್ಮ ಆ ಸಂಕಲ್ಪವು ನೆರವೇರದಿದ್ದುದರಿಂದ ನಮಗೆ ಪಾಪವೂ ಸಹ ಸಂಘಟಿಸಿತು. ॥೪೦೫॥

ಘೋರವಾದ ಪಂಚಾಗ್ನಿಗಳ ನಡುವೆಯೂ ಸಹ ನಿಂತು ತಪಸ್ಸನ್ನು ಆಚರಿಸಬಹುದು. ಆದರೆ, ಪಂಚಕ್ರೋಶದ ಯಾತ್ರೆಯನ್ನು ಯಥಾಶಾಸ್ತ್ರವಾಗಿ ನೆರವೇರಿಸಲು ಸಾಧ್ಯವೇ ಇಲ್ಲ. ॥೪೦೬॥

ಇತ್ಯುಕ್ತ್ವಾ ದುಃಖಿತಾಃ ಸರ್ವೇ ಪಂಚಕ್ರೋಶಪ್ರದಕ್ಷಿಣಂ ।
ಸ್ಥೂಲಮಾರ್ಗೇಣ ಸರ್ವೇ ತೇ ಕೃತ್ವಾ ಕಾಶೀಮುಪಾಗತಾಃ ॥೪೦೭॥

ಏಕವಾರಂ ಕೃತಂ ಪೂರ್ವಂ ಪಂಚಕ್ರೋಶಪ್ರದಕ್ಷಿಣಂ ।
ಶಕ್ತೇನ ನಂದಿಕೇಶೇನ ಯಥಾಶಾಸ್ತ್ರಂ ಯಥಾಕ್ರಮಂ ॥೪೦೮॥

ಗಣೇಶೇನಾಪಿ ಯತ್ನೇನ ಯಥಾಶಾಸ್ತ್ರಂ ಯಥಾಕ್ರಮಂ ।
ಕೃತಂ ತದ್ಭೈರವೇಣಾಪಿ ಪಂಚಕ್ರೋಶಪ್ರದಕ್ಷಿಣಂ ॥೪೦೯॥

ಕಾಶೀನಿವಾಸಿನಾಂ ಧರ್ಮಾ ವಿಹಿತಾಃ ಸಂತಿ ಭೂರಿಶಃ ।
ತಾನ್ಕೃತ್ವಾ ವಿಧಿವತ್ಕಾಶ್ಯಾಂ ವಾಸಃ ಕಾರ್ಯೋ ನರೋತ್ತಮೈಃ॥೪೧೦॥

ಉತ್ಕೃಷ್ಟಚಾರರತೈಃ ಕಾಶ್ಯಾಂ ಸ್ಥಾತವ್ಯಂ ಧರ್ಮತತ್ಪರೈಃ ।
ಅನ್ಯೈರ್ನಸ್ಥೇಯಮಮಲೇ ಸತ್ಯಂ ಸತ್ಯಂ ನ ಸಂಶಯಃ ॥೪೧೧॥

ಹೀಗೆಂದು ಹೇಳಿ, ಅವರೆಲ್ಲರೂ ಬಹುವಾಗಿ ದುಃಖಿಸಿ, ಮಹಾಮಾರ್ಗದಿಂದ ಪಂಚಕ್ರೋಶದ ಪ್ರದಕ್ಷಿಣೆಯನ್ನು ಮುಗಿಸಿ, ಕಾಶೀಕ್ಷೇತ್ರವನ್ನು ಸೇರಿದರು. ॥೪೦೭॥

ಹಿಂದೆ ಸಾಧನಸಂಪನ್ನನಾದ ನಂದಿಕೇಶ್ವರನು ಒಂದು ಬಾರಿ ಶಾಸ್ತ್ರೋಕ್ತವಾದ ರೀತಿಯಿಂದ ಕ್ರಮವರಿತು ಪಂಚಕ್ರೋಶದ ಪ್ರದಕ್ಷಿಣೆಯನ್ನು ಮುಗಿಸಿದನು.॥೪೦೮॥

ಇದಲ್ಲದೇ ಗಣೇಶ ಮತ್ತು ಭೈರವ ಇವರಿಬ್ಬರೂ ಸಹ ಯಥಾಶಾಸ್ತ್ರವಾಗಿ ಕ್ರಮವರಿತು ಪಂಚಕ್ರೋಶದ ಯಾತ್ರೆಯನ್ನು ನೆರವೇರಿಸಿರುವರು. ॥೪೦೯॥

ಕಾಶೀಕ್ಷೇತ್ರದಲ್ಲಿ ವಾಸವಾಗಿರುವ ಜನರಿಗೆ ಅನೇಕ ಧರ್ಮಗಳು ವಿಧಿಸಲ್ಪಟ್ಟಿರುವುವು. ಪ್ರತಿಯೊಬ್ಬನೂ ಆ ಧರ್ಮಗಳನ್ನು ಪರಿಪಾಲಿಸಿ ಕಾಶೀಕ್ಷೇತ್ರದಲ್ಲಿ ವಾಸವಾಗಿರಬೇಕು. ॥೪೧೦॥

ಎಲೌ ಪರಮಪಾವನಳಾದ ಗಿರಿಜೆಯೇ, ಈ ಹಿಂದೆ ಹೇಳಿರುವ ಧರ್ಮಗಳನ್ನೆಲ್ಲಾ ಶ್ರದ್ಧೆಯಿಂದ ಆಚರಿಸುವ ಜನರೇ ಕಾಶೀಕ್ಷೇತ್ರದಲ್ಲಿ ನೆಲಸಿರಬೇಕು. ಅದಿಲ್ಲದವರು ಕಾಶಿಯಲ್ಲಿ ಎಂದಿಗೂ ಇರಬಾರದು. ಇದು ನಿಜ. ಇದರಲ್ಲಿ ಸಂಶಯ ಪಡಬೇಕಾದುದಿಲ್ಲ. ॥೪೧೧॥

ಬಹುಯತ್ನೇನ ಸಾ ಕಾಶೀ ಪ್ರಾಪ್ತವ್ಯಾ ಮೋಕ್ಷದಾ ಪರಾ ।
ವಿನಾ ಕಾಶೀನಿವಾಸೇನ ಮೋಕ್ಷಸ್ತು ನ ಭವಿಷ್ಯತಿ ॥೪೧೨॥

ಕಾಶ್ಯಾಮುಷ್ಯತಿಯತ್ನೇನ ಸ್ಥಾತವ್ಯಂ ಧರ್ಮತತ್ಪರೈಃ ।
ಅಧರ್ಮಲೇಶರಹಿತೈಃ ಸರ್ವದಾ ಶಿವಪೂಜಕೈಃ ॥೪೧೩॥

ಕಾಶೀತಿ ಸ್ಮರಣಾದೇವ ಮಹಾಪಾತಕಕೋಟಯಃ ।
ಕ್ಷಣಾಚ್ಛಿವೇ ವಿನಶ್ಯಂತಿ ಸಾ ಕಾಶೀ ಕ್ವೋಪಮೀಯತೇ ॥೪೧೪॥

ಯಸ್ಯಾಂ ಮರಣಮಾತ್ರೇಣ ಪುನರ್ಜನ್ಮ ನ ಜಾಯತೇ ।
ದುಷ್ಟಸ್ಯಾಪಿ ಮಹಾದೇವಿ ಸಾ ಕಾಶೀ ಕ್ವೋಪಮೀಯತೇ ॥೪೧೫॥

ಯಸ್ಯಾಂ ಮರಣಮಿಚ್ಛಂತಿ ಬ್ರಹ್ಮವಿಷ್ಣ್ವಾದಯಃ ಸುರಾಃ ।
ಶಿವಾಕಾರಾ ಸುರಾರಾಧ್ಯಾ ಸಾ ಕಾಶೀ ಕ್ವೋಪಮೀಯತೇ ॥೪೧೬॥

ಮೋಕ್ಷದಾಯಕವೂ, ಪವಿತ್ರವೂ ಆದ ಕಾಶೀಕ್ಷೇತ್ರವನ್ನು ಅತ್ಯಂತ ಪ್ರಯಾಸದಿಂದ ಪಡೆಯಲು ಸಾಧ್ಯ. ಕಾಶಿಯಲ್ಲಿ ವಾಸಮಾಡದಿದ್ದರೆ ಮೋಕ್ಷವು ಲಭಿಸುವುದೇ ಇಲ್ಲ. ॥೪೧೨॥

ಧರ್ಮಪರಾಯಣರೂ, ಅಧರ್ಮಾಚರಣೆಯಿಲ್ಲದವರೂ, ನಿರಂತರವೂ ಈಶ್ವರಾರಾಧನೆಯನ್ನು ಕೈಗೊಳ್ಳುವವರೂ ಆದ ಮನುಜರು ಕಾಶೀಕ್ಷೇತ್ರದಲ್ಲಿ ವಾಸವಾಗಿರಲೇಬೇಕು. ॥೪೧೩॥

ದೇವಿಯೇ, "ಕಾಶೀ" ಎಂದು ಕಾಶೀಕ್ಷೇತ್ರದ ನಾಮವನ್ನು ಸ್ಮರಿಸಿದ ಮಾತ್ರದಿಂದಲೇ ಕೋಟ್ಯಂತರವಾದ ಮಹಾಪಾತಕಗಳೂ ಸಹ ಕ್ಷಣಕಾಲದಲ್ಲಿಯೇ ಕ್ಷಯಿಸುವುವು. ಹೀಗಿರುತ್ತಿರಲು ಪವಿತ್ರವಾದ ಆ ಕ್ಷೇತ್ರವನ್ನು ಹೋಲುವ ಇನ್ನೊಂದು ಕ್ಷೇತ್ರವಿರುವುದಿಲ್ಲ. ॥೪೧೪॥

ಯಾವ ಕ್ಷೇತ್ರದಲ್ಲಿ ಮರಣಮಾತ್ರದಿಂದಲೇ ಎಂತಹ ಪಾಪಿಗೂ ಸಹ ಪುನರ್ಜನ್ಮವು ಇರುವುದಿಲ್ಲವೋ, ಅದಕ್ಕೆ ಸಮಾನವಾದ ಇನ್ನೊಂದು ಪವಿತ್ರ ಕ್ಷೇತ್ರವಿರುವುದೇ ? ॥೪೧೫॥

ಯಾವ ಕಾಶೀಕ್ಷೇತ್ರದಲ್ಲಿ ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳು ಮರಣವನ್ನು ಬಯಸುವರೋ, ದೇವತೆಗಳಿಗೆ ಪೂಜ್ಯವೂ, ಶಿವಲಿಂಗಾಕಾರವೂ ಆದ ಆ ಕಾಶೀಕ್ಷೇತ್ರಕ್ಕೆ ಹೋಲುವ ಇನ್ನೊಂದು ಕ್ಷೇತ್ರವಿರುವುದೇ ! ॥೪೧೬॥

ಕಾಕಾದಯೋಽಪಿ ಕಾಶೀಸ್ಥಾ ಗಣಯಂತ್ಯೇವ ನಾಮರಾನ್ ।
ತಾದೃಶೀ ದಿವ್ಯರೂಪಾಯಾ ಸಾ ಕಾಶೀ ಕ್ವೋಪಮೀಯತೇ ॥೪೧೭॥

ಯಸ್ಯಾಂ ಕಾಶ್ಯಾಂ ಮೃತಾನಾಂ ತು ಮರಣಂ ಮಂಗಲಾಯತೇ ।
ದಿವ್ಯಾಶನಾಯತೇ ಪರ್ಣಂ ಸಾ ಕಾಶೀ ಕ್ವೋಪಮೀಯತೇ ॥೪೧೮॥

ಯಸ್ಯಾಂ ಕಾಶ್ಯಾಂ ಜಲಂ ಪೀತ್ವಾ ಸೋಮಪಾನ್ಪ್ರತಿವಾಸರಂ ।
ತಿರಸ್ಕರೋತಿ ಕಾಕೋಽಪಿ ಸಾ ಕಾಶೀ ಕ್ವೋಪಮೀಯತೇ ॥೪೧೯॥

ಯಸ್ಯಾಂ ಕ್ಷೌಮಾಯತೇ ಚೀರಂ ವಿಭೂತಿಶ್ಚಂದನಾಯತೇ ।
ದಿವ್ಯಾಮೃತಾಯತೇ ನೀರಂ ಸಾ ಕಾಶೀ ಕ್ವೋಪಮೀಯತೇ ॥೪೨೦॥

ಯಸ್ಯಾಂ ರುದ್ರಾಕ್ಷಮಾಲಾಪಿ ರತ್ನಮಾಲಾಯತೇ ಸದಾ ।
ಸುಖಶಯ್ಯಾಯತೇ ಘಾಸಃ ಸಾ ಕಾಶೀ ಕ್ವೋಪಮೀಯತೇ ॥೪೨೧॥

ಕಾಶೀಕ್ಷೇತ್ರದಲ್ಲಿ ನೆಲಸಿರುವ ಕಾಗೆ ಮುಂತಾದ ಪಕ್ಷಿಗಳೂ ಸಹ ಮಹಿಮೆಯಲ್ಲಿ ದೇವತೆಗಳನ್ನು ತಿರಸ್ಕರಿಸುವುವು. ಹೀಗಿರುತ್ತಿರಲು ಪವಿತ್ರವಾದ ಆ ಕ್ಷೇತ್ರಕ್ಕೆ ಸಮಾನವಾದ ಇನ್ನೊಂದು ಕ್ಷೇತ್ರವಿರುವುದೇ! ॥೪೧೭॥

ಯಾವ ಕ್ಷೇತ್ರದಲ್ಲಿ ಮೃತರಾದವರಿಗೆ ಮರಣವೂ ಸಹ ಕಲ್ಯಾಣಪ್ರದವಾಗುವುದೋ, ಮತ್ತು ಯಾವ ಕ್ಷೇತ್ರದಲ್ಲಿರುವ ತರಗೆಲೆಗಳೂ ಸಹ ದಿವ್ಯವಾದ ಆಹಾರವಾಗಿ ತೋರುವುವೋ, ಅಂತಹ ಪವಿತ್ರವಾದ ಆ ಕಾಶೀಕ್ಷೇತ್ರಕ್ಕೆ ಹೋಲುವ ಇನ್ನೊಂದು ಕ್ಷೇತ್ರವಿರುವುದೇ ? ॥೪೧೮॥

ಯಾವ ಪವಿತ್ರವಾದ ಕ್ಷೇತ್ರದಲ್ಲಿ ಕಾಗೆಯೂ ಸಹ ಗಂಗೋದಕವನ್ನು ಪಾನಮಾಡಿ, ಸೋಮಪಾನವನ್ನು ಮಾಡಿರುವ ಸೋಮಯಾಜಿಗಳನ್ನೂ ಸಹ ಧಿಕ್ಕರಿಸುವುದೋ, ಆ ಕಾಶೀಕ್ಷೇತ್ರಕ್ಕೆ ಸಮಾನವಾದ ಇನ್ನೊಂದು ಕ್ಷೇತ್ರವಿರುವುದೇ ?॥೪೧೯॥

ಯಾರಿಗೆ ಕಾಶೀಕ್ಷೇತ್ರದಲ್ಲಿ ನಾರುಬಟ್ಟೆಯೇ ಪಟ್ಟವಸ್ತ್ರವಾಗಿರುವುದೋ ಮತ್ತು ವಿಭೂತಿಯೇ ಚಂದನವಾಗಿರುವುದೋ ಆ ಕಾಶೀಕ್ಷೇತ್ರಕ್ಕೆ ಸಮಾನವಾದ ಇನ್ನೊಂದು ಕ್ಷೇತ್ರವಿರುವುದಿಲ್ಲ. ॥೪೨೦॥

ಯಾವ ಕಾಶೀಕ್ಷೇತ್ರದಲ್ಲಿ ಸುಕೃತಿಗಳಿಗೆ ರುದ್ರಾಕ್ಷಗಳ ಮಾಲೆಯೇ ರತ್ನಮಾಲಿಕೆಯಂತಿರುವುದೋ ಮತ್ತು ಬಾಲತೃಣವೂ ಸಹ ಸುಖಕರವಾದ ಹಾಸಿಗೆಯಂತಿರುವುದೋ, ಆ ಕಾಶೀಕ್ಷೇತ್ರಕ್ಕೆ ಹೋಲುವ ಇನ್ನೊಂದು ಕ್ಷೇತ್ರವಿರುವುದೇ ? ॥೪೨೧॥

ಯಸ್ಯಾಂ ತೃಣಾಸನಂ ಶುಭ್ರಂ ರತ್ನಸಿಂಹಾಸನಾಯತೇ ।
ಚಕ್ರೇಶ್ವರಾಯತೇ ದೀನಃ ಸಾ ಕಾಶೀ ಕ್ವೋಪಮೀಯತೇ ॥೪೨೨॥

ಯಸ್ಯಾಂ ಧನವಿಹೀನೋಽಪಿ ದರಿದ್ರೋ ಮನುಜೋಽಧಮಃ ।
ತಿರಸ್ಕರೋತಿ ಧನದಂ ಸಾ ಕಾಶೀ ಕ್ವೋಪಮೀಯತೇ ॥೪೨೩॥

ಯಾವಂತೋ ಮುಕ್ತಿಮಿಚ್ಛಂತಿ ದೇವರ್ಷಿಮುನಿಮಾನವಾಃ ।
ತಾವತಾಮಪಿ ಸರ್ವೇಷಾಂ ಗತಿಃ ಕಾಶ್ಯೇವ ಸರ್ವಥಾ ॥೪೨೪॥

ಕಾಶೀ ಕಲ್ಪತರುರ್ನಿತ್ಯಂ ಮುಕ್ತಿಪುಷ್ಪಫಲಾನ್ವಿತಃ ।
ಮುಮುಕ್ಷವೋಽನಿಶಂ ತತ್ರ ವಸಂತಿ ತಮುಪಾಶ್ರಿತಾಃ ॥೪೨೫॥

ಕಾಶ್ಯಾಮೇವ ಮುನಿಶ್ರೇಷ್ಠೈಃ ಸ್ಥಾತವ್ಯಂ ಧರ್ಮತತ್ಪರೈಃ ।
ವಿನಾ ಕಾಶೀಂ ನ ಚಾನ್ಯತ್ರ ಮೋಕ್ಷೋ ಭವತಿ ಸರ್ವಥಾ ॥೪೨೬॥

ಯಾವ ಕಾಶೀಕ್ಷೇತ್ರದಲ್ಲಿ ತೃಣಾಸನವೂ ಸಹ ರತ್ನಸಿಂಹಾಸನದಂತಿರುವುದೋ, ಮತ್ತು ದರಿದ್ರನೂ ಸಹ ಚಕ್ರವರ್ತಿಯಾಗುವನೋ ಆ ಕಾಶೀಕ್ಷೇತ್ರವನ್ನು ಇನ್ನಾವ ಕ್ಷೇತ್ರದೊಂದಿಗೂ ಹೋಲಿಸುವಂತಿಲ್ಲ. ॥೪೨೨॥

ಯಾವ ಕ್ಷೇತ್ರದಲ್ಲಿ ದರಿದ್ರನೂ, ಅಧಮನೂ ಆದ ಮನುಷ್ಯನೂ ಕೂಡ ಧನಪತಿಯಾದ ಕುಬೇರನನ್ನೇ ಧಿಕ್ಕರಿಸುವನೋ, ಆ ಕಾಶೀಕ್ಷೇತ್ರಕ್ಕೆ ಸರಿಯಾದ ಇನ್ನೊಂದು ಕ್ಷೇತ್ರವಿರುವುದೇ ? ॥೪೨೩॥

ಮುಕ್ತಿಯನ್ನು ಬಯಸುವ ದೇವತೆಗಳು, ಋಷಿಗಳು ಮತ್ತು ಮನುಷ್ಯರು ಇವರೆಲ್ಲರಿಗೂ ಕಾಶೀಕ್ಷೇತ್ರವೇ ಮೋಕ್ಷಸಿದ್ಧಿಗೆ ಪರಮಕಾರಣವಾಗಿರುವುದು. ॥೪೨೪॥

ಕಾಶೀಕ್ಷೇತ್ರವೆಂಬುದು ಸದಾ ಒಂದು ಕಲ್ಪತರುವಿನಂತಿರುವುದು. ಮುಕ್ತಿಯೇ ಆ ತರುವಿನ ಪುಷ್ಪ, ಮುಕ್ತಿಯೇ ಫಲ. ಮೋಕ್ಷವನ್ನು ಬಯಸುವ ಜ್ಞಾನಿಗಳು ಹಗಲಿರುಳೂ ಆ ವೃಕ್ಷವನ್ನು ಆಶ್ರಯಿಸಿ ಅಲ್ಲಿಯೇ ವಾಸವಾಗಿರುವರು. ॥೪೨೫॥

ಮುನಿಶ್ರೇಷ್ಠರು, ಧರ್ಮತತ್ಪರರಾಗಿ ಕಾಶೀಕ್ಷೇತ್ರದಲ್ಲಿಯೇ ನೆಲಸಿರಬೇಕು. ಕಾಶಿಯನ್ನು ಬಿಟ್ಟು ಇನ್ನಾವ ಪ್ರದೇಶದಲ್ಲಿಯೂ ಅವರಿಗೆ ಮುಕ್ತಿಯು ಲಭಿಸಲಾರದು. ॥೪೨೬॥

ಅನಂತಕಾಲಮಮಲೈರನಂತರಸನೈರಪಿ ।
ಕಾಶೀಪ್ರಭಾವೋ ನ ಮಯಾ ಶಕ್ಯತೇ ವಕ್ತುಮಂಬಿಕೇ ॥೪೨೭॥

ವೇದೈರಪಿ ನ ವಿಜ್ಞಾತಂ ಕಾಶೀತತ್ತ್ವಂ ವರಾನನೇ ।
ಕಿಂ ಪುನರ್ವಿಧಿವಿಷ್ಣ್ವಾದ್ಯೈಃ ಸಿದ್ಧೈರ್ಮುನಿವರೈರಪಿ ॥೪೨೮॥

ಕಾಶೀಸ್ತುತಿಪರಾ ಜಿಹ್ವಾ ಧನ್ಯಾ ಧನ್ಯಾ ವರಾನನೇ ।
ಕಾಶೀಧ್ಯಾನಪರಂ ಧನ್ಯಂ ಧನ್ಯಂ ಧನ್ಯಂ ಮನಃ ಸದಾ ॥೪೨೯॥

ಇಯಂ ಪುಣ್ಯಸಮೃದ್ಧ್ಯರ್ಥಂ ಕಥಾ ಪಾಪೌಘನಾಶಿನೀ ।
ಶ್ರೋತವ್ಯಾ ನಿಯತಂ ಕಾಶ್ಯಾಮತಿಯತ್ನೇನ ಮಾನವೈಃ ॥೪೩೦॥

ಯಸ್ತ್ವೇತಾನ್ನಿತ್ಯಮಧ್ಯಾಯಾನ್ಪಠಿಷ್ಯತಿ ಶಿವಾಲಯೇ ।
ಸ ಮಹಾಪಾತಕೇಭ್ಯೋಽಪಿ ಮುಚ್ಯತೇ ನಾತ್ರ ಸಂಶಯಃ ॥೪೩೧॥

ದೇವಿ, ನಾನು ಸಾವಿರಾರು ನಿರ್ಮಲವಾದ ನಾಲಿಗೆಗಳಿಂದ ಬಹುಕಾಲದವರೆಗೆ ಕಾಶೀಕ್ಷೇತ್ರದ ಪ್ರಭಾವವನ್ನು ವರ್ಣಿಸತೊಡಗಿದರೂ ಅದನ್ನು ಕೊನೆಗಾಣಿಸಲು ನಾನು ಅಸಮರ್ಥನಾಗಿರುವೆನು. ॥೪೨೭॥

ಎಲೌ ಸುಮುಖಿಯೇ, ಪವಿತ್ರವಾದ ಕಾಶೀಕ್ಷೇತ್ರದ ರಹಸ್ಯವನ್ನು ವೇದಗಳೂ ಅರಿತಿರುವುದಿಲ್ಲ. ಹೀಗಿರುತ್ತಿರಲು ಬ್ರಹ್ಮ, ವಿಷ್ಣು ಮುಂತಾದ ದೇವತೆಗಳಾಗಲಿ, ಸಿದ್ಧರಾಗಲಿ, ಮುನಿಪುಂಗವರಾಗಲಿ ಅದನ್ನು ಅರಿಯಲು ಸಾಧ್ಯವೇ? ॥೪೨೮॥

ಕಾಶೀಕ್ಷೇತ್ರವನ್ನು ಸ್ತುತಿಸುವುದರಲ್ಲಿ ಆಸಕ್ತವಾದ ನಾಲಿಗೆಯೇ ಸಾರ್ಥಕವೆನಿಸುವುದು. ಅದನ್ನು ನೆನೆಸುವ ಮನಸ್ಸು ಸದಾ ಧನ್ಯವಾಗಿರುವುದು. ॥೪೨೯॥

ಜನರು ಕಾಶೀಕ್ಷೇತ್ರದಲ್ಲಿ ವಾಸವಾಗಿದ್ದು ಪಾಪನಾಶಕವಾದ ಕಾಶೀಕ್ಷೇತ್ರದ ಈ ಕಥೆಯನ್ನು ಪ್ರತಿದಿನವೂ ತಪ್ಪದೇ ಕೇಳಬೇಕು. ಅದರಿಂದ ಪುಣ್ಯವು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುವುದು. ॥೪೩೦॥

ಯಾವ ಮನುಜನು ಕಾಶೀಕ್ಷೇತ್ರದ ಮಹಿಮೆಯಿಂದೊಳಗೊಂಡ ಈ ಅಧ್ಯಾಯಗಳನ್ನು ಶಿವದೇವಾಲಯದಲ್ಲಿ ಪಠಿಸುವನೋ, ಅವನು ಮಹಾಪಾತಕಗಳಿಂದಲೂ

ಯಃ ಕಾಶ್ಯಾಂ ಕೃತಪಾಪೋಽಪಿ ಮನುಷ್ಯೋ ನಿತ್ಯಮಾದರಾತ್ ।
ಏತಾನ್ಪಠಿತ್ವಾಹ್ಯಧ್ಯಾಯಾನ್ಸಪಾಪೇಭ್ಯೋ ವಿಮುಚ್ಯತೇ ॥೪೩೨॥

ಕಾಶ್ಯಾಂ ತು ಕೃತಪಾಪಾನಿ ಪ್ರತ್ಯಹಂ ಮುದಿತಾನನೇ ।
ಪ್ರತ್ಯಹಾಧ್ಯಾಯಪಾಠೇನ ವಿನಶ್ಯಂತಿ ನ ಸಂಶಯಃ ॥೪೩೩॥

ಸಹಸ್ರವಾರಮಧ್ಯಾಯಾಃ ಪಠಿತಾ ಮುನಿಸತ್ತಮೈಃ ।
ಕಾಶ್ಯಾಂ ಪುರಾಕೃತಂ ಪಾಪಂ ನಾಶಯಂತ್ಯಗ್ನಿಸನ್ನಿಭೈಃ ॥೪೩೪॥

ಸಹಸ್ರವಾರಮಧ್ಯಾಯಾನ್ಪಠಿತ್ವೈವ ತಿಲಾದಿಭಿಃ ।
ತನ್ಮಂತ್ರೈರ್ಲಕ್ಷಹೋಮೋಽಪಿ ಕಾರ್ಯಸ್ತತ್ಪಾಪನಾಶಕಃ ॥೪೩೫॥

ಕಾಶೀಮಾಹಾತ್ಮ್ಯಮಮಲಮಿದಂ ಪ್ರತ್ಯಹಮಾದರಾತ್ ।
ಯಃ ಪಠೇದ್ಯಾತನಾ ತಸ್ಯ ನ ಭವಿಷ್ಯತಿ ಭೈರವೀ ॥೪೩೬॥

ಸಹ ಬಿಡುಗಡೆಯನ್ನು ಹೊಂದುವನು. ಇದರಲ್ಲಿ ಸಂಶಯಪಡಬೇಕಾದುದಿಲ್ಲ. ||೪೩೧||

ಪಾಪಿಯಾಗಿದ್ದರೂ ಸಹ ಯಾವ ಮನುಜನು ಕಾಶೀಕ್ಷೇತ್ರದಲ್ಲಿ ವಾಸವಾಗಿದ್ದು ಈ ಅಧ್ಯಾಯಗಳನ್ನು ಪಠಿಸುವನೋ ಅವನು ಸಕಲ ಪಾಪಗಳಿಂದಲೂ ವಿನಿರ್ಮುಕ್ತನಾಗುವನು. ||೪೩೨||

ಎಲೌ ಹಸನ್ಮುಖಿಯೇ, ಕಾಶೀಕ್ಷೇತ್ರದಲ್ಲಿ ಯಾವ ಪಾಪಕರ್ಮಗಳನ್ನು ಆಚರಿಸಿದರೂ ಸಹ ಅಲ್ಲಿ ಪ್ರತಿದಿನವೂ ಈ ಅಧ್ಯಾಯಗಳನ್ನು ಪಠಿಸುವುದರಿಂದ ಅವರ ಸಕಲ ಪಾಪಗಳೂ ಕ್ಷಯಿಸುವುವು. ಇದರಲ್ಲಿ ಸಂಶಯಪಡಬೇಕಾದುದಿಲ್ಲ. ||೪೩೩||

ಹಿಂದೆ ಅನೇಕ ಮುನಿಪುಂಗವರು ಸಾವಿರಬಾರಿ ಈ ಅಧ್ಯಾಯಗಳನ್ನು ಪಠಿಸಿರುವರು. ಅವರು ಕಾಶೀಕ್ಷೇತ್ರದಲ್ಲಿ ಅಗ್ನಿಸದೃಶವಾದ ಈ ಅಧ್ಯಾಯಗಳಿಂದ ತಾವು ಪೂರ್ವದಲ್ಲಿ ಆಚರಿಸಿದ ಪಾಪವನ್ನು ಹೋಗಲಾಡಿಸುವರು. ||೪೩೪||

ಈ ಅಧ್ಯಾಯಗಳನ್ನು ಸಹಸ್ರಾವೃತ್ತಿ ಪಠಿಸಿ, ಮಂತ್ರಪೂರ್ವಕವಾಗಿ ತಿಲಹೋಮವನ್ನು ಆಚರಿಸಬೇಕು. ಆದರಿಂದ ಸಮಸ್ತಪಾಪವು ಕ್ಷಯಿಸುವುದು. ||೪೩೫||

ಪವಿತ್ರವಾದ ಈ ಕಾಶೀಮಾಹಾತ್ಮ್ಯೆಯನ್ನು ಪ್ರತಿದಿನವೂ ಯಾವನು ಪ್ರೀತಿಯಿಂದ ಪಠಿಸುವನೋ ಅವನು ಭೈರವನ ಯಾತನೆಗೆ ಗುರಿಯಾಗುವುದಿಲ್ಲ. ||೪೩೬||

ಇದಂ ಮಾಹಾತ್ಮ್ಯಮಮಲಂ ಕಾಲಭೈರವಸನ್ನಿಧೌ ।
ಪ್ರತ್ಯಷ್ಟಮ್ಯಾಂ ಪ್ರಯತ್ನೇನ ಪಠನೀಯಂ ಪ್ರಯತ್ನತಃ ॥೪೩೭॥

ಏತಚ್ಛ್ಲೋಕಮಹಾಮಂತ್ರಲಕ್ಷಾವೃತ್ತ್ಯಾ ತಿಲಾದಿಭಿಃ ।
ಶಿವನಿಂದಾಘಶಾಂತ್ಯರ್ಥಂ ಹೋಮಃ ಕಾರ್ಯಃ ಪ್ರಯತ್ನತಃ ॥೪೩೮॥

ಬಿಲ್ವಾಶ್ವತ್ಥಪಲಾಶಾರ್ಕಸಮಿದಾಜ್ಯಾನ್ವಿತಾಸ್ತಿಲಾಃ ।
ತದ್ಧೋಮಸಾಧನೀಭೂತಾಃ ಶುದ್ಧಾಃ ಕೀಟಾದ್ಯದೂಷಿತಾಃ ॥೪೩೯॥

ಸ್ವಸ್ವಶಾಖೋಕ್ತಮಾರ್ಗೇಣ ಪ್ರತಿಷ್ಠಾಪ್ಯ ಹುತಾಶನಂ ।
ತಸ್ಮಿನ್ನಗ್ನೌ ಯಥಾಶಾಸ್ತ್ರಂ ಹೋಮಃ ಕಾರ್ಯೋ ದ್ವಿಜೋತ್ತಮೈಃ ॥೪೪೦॥

ಕಾಶೀಮಾಹಾತ್ಮ್ಯಮಂತ್ರಸ್ಯ ಮಹಾದೇವಃ ಸ್ವಯಂ ಋಷಿಃ ।
ಕಾಶ್ಯೇವ ದೇವತಾ ಶಕ್ತಿಃ ಭೈರವೀ ಯಾತನಾಪಹಾ ॥೪೪೧॥

ಪವಿತ್ರವಾದ ಈ ಕಾಶೀಮಹಿಮೆಯನ್ನು ವಿಶೇಷವಾಗಿ ಪ್ರತಿಯೊಂದು ಅಷ್ಟಮಿಯ ತಿಥಿಯ ದಿನ ಕಾಲಭೈರವನ ಸನ್ನಿಧಿಯಲ್ಲಿ ತಪ್ಪದೇ ಪಠಿಸಬೇಕು. ॥೪೩೭॥

ಮುಂದೆ ಹೇಳುವ ಕಾಶೀಮಾಹಾತ್ಮ್ಯೆಯಿಂದೊಳಗೊಂಡ ಮಹಾಮಂತ್ರವನ್ನು ಲಕ್ಷಬಾರಿ ಉಚ್ಚರಿಸಿ, ಶಿವನಿಂದೆಯಿಂದುಂಟಾದ ಪಾಪದ ಪರಿಹಾರಕ್ಕೋಸ್ಕರವಾಗಿ ಎಳ್ಳಿನಿಂದ ಹೋಮವನ್ನಾಚರಿಸಬೇಕು. ॥೪೩೮॥

ಬಿಲ್ವ, ಅಶ್ವತ್ಥ, ಮುತ್ತುಗ, ಎಕ್ಕ ಇವುಗಳ ಸಮಿತ್ತುಗಳು, ಆಜ್ಯ, ಎಳ್ಳು ಇವೇ ಹೋಮದ ಸಾಮಗ್ರಿಗಳಾಗಿರುವುವು. ಈ ಹೋಮಸಾಮಗ್ರಿಗಳು ಕ್ರಿಮಿಕೀಟಾದಿಗಳ ಬಾಧೆಗೆ ಒಳಗಾಗಿರದೆ ಶುದ್ಧವಾಗಿರಬೇಕು. ॥೪೩೯॥

ದ್ವಿಜಶ್ರೇಷ್ಠರು ತಮ್ಮ ತಮ್ಮ ಶಾಖೆಗಳಲ್ಲಿ ಹೇಳಿರುವ ರೀತಿಯನ್ನನುಸರಿಸಿ ಅಗ್ನಿಯನ್ನು ಸ್ಥಾಪಿಸಿ, ಅದರಲ್ಲಿ ಶಾಸ್ತ್ರೋಕ್ತವಾದ ರೀತಿಯಿಂದ ಹೋಮವನ್ನು ಆಚರಿಸಬೇಕು. ॥೪೪೦॥

ಕಾಶೀಮಾಹಾತ್ಮ್ಯದ ಮಂತ್ರಕ್ಕೆ ಮಹಾದೇವನೇ ಋಷಿಯು. ಭೈರವನ ಯಾತನೆಯನ್ನು ಹೋಗಲಾಡಿಸುವ ಕಾಶೀಕ್ಷೇತ್ರವೇ ಶಕ್ತಿದೇವತೆಯು. ॥೪೪೧॥

ಕೀಲಕಂ ಸರ್ವಯತ್ನೇನ ಕಾಶೀಪ್ರಾಪ್ತಿರಿಹೇಪ್ಸಿತಾ।
ಛಂದೋ ನಾನಾಫಲಂ ದಿವ್ಯಂ ಮೋಕ್ಷರೂಪಮುದಾಹೃತಂ ॥೪೪೨॥

ಸಹಸ್ರವದನಾಂ ದಿವ್ಯಾಂ ಸಹಸ್ರಾಕ್ಷಿಕರಾನ್ವಿತಾಂ।
ವಿರಾಡ್ರೂಪಧರಾಂ ನಿತ್ಯಾಂ ಧ್ಯಾಯೇತ್ಕಾಶ್ಯಧಿದೇವತಾಂ ॥೪೪೩॥

ಶ್ಲೋಕಮುಚ್ಚಾರ್ಯ ತದನು ಕಾಶ್ಯೈ ಸ್ವಾಹೇತಿ ಚಾಹುತಿಃ।
ದೇಯೋ ಭವತಿ ಯತ್ನೇನ ಯಾಜ್ಞಿಕೈರ್ಹೋಮಕರ್ಮಣಿ ॥೪೪೪॥

ದಶಷಡ್ದ್ವಾದಶಾವೃತ್ತ್ಯಾ ತಚ್ಛ್ಲೋಕಾನಾಂ ಯಥಾಕ್ರಮಂ ।
ಭೋಜನೀಯಾ ದ್ವಿಜಶ್ರೇಷ್ಠಾ ದೇಯಾ ಸ್ಯಾದ್ದಕ್ಷಿಣಾ ತಥಾ ॥೪೪೫॥

ಕಾಶೀಮಾಹಾತ್ಮ್ಯಮಮಲಂ ಲಿಖಿತ್ವಾ ಪುಸ್ತಕೇ ಶುಭೇ।
ದೇಯಂ ಶೈವಾಯ ಲಿಂಗಂ ಚ ಸಸಾಧನಮನುತ್ತಮಂ ॥೪೪೬॥

ಕಾಶೀಪ್ರಾಪ್ತಿಯೇ ಕೀಲಕವು. ವಿವಿಧವಾದ ಫಲವನ್ನುಂಟುಮಾಡುವ ಮೋಕ್ಷವೆಂಬ ಮಹಾಫಲವೇ ಕಾಶೀಮಾಹಾತ್ಮ್ಯೆಯ ಮಂತ್ರಕ್ಕೆ ಛಂದಸ್ಸು. ॥೪೪೨॥

ಸಹಸ್ರ ಮುಖಗಳುಳ್ಳವಳೂ, ದಿವ್ಯಮೂರ್ತಿಯೂ, ಸಹಸ್ರ ಕಣ್ಣುಗಳುಳ್ಳವಳೂ, ಸಹಸ್ರ ಕೈಗಳಿಂದ ಶೋಭಿಸುವವಳೂ, ವಿರಾಡ್ರೂಪವನ್ನು ಧರಿಸಿರುವವಳೂ ನಿತ್ಯಳೂ ಆದ ಕಾಶೀದೇವತೆಯನ್ನೇ ಧ್ಯಾನಿಸಬೇಕು. ॥೪೪೩॥

ಯಾಜ್ಞಿಕರು ಹೋಮಮಾಡುವಾಗ ಈ ಧ್ಯಾನಶ್ಲೋಕವನ್ನು ಉಚ್ಚರಿಸಿ ಬಳಿಕ "ಕಾಶ್ಯೈ ಸ್ವಾಹಾ" ಎಂದು ಹೇಳಿ, ಅಗ್ನಿಯಲ್ಲಿ ಆಹುತಿಯನ್ನು ನೀಡಬೇಕು. ॥೪೪೪॥

ಈ ರೀತಿಯಲ್ಲಿ ಇಪ್ಪತ್ತೆಂಟು ಬಾರಿ ಶ್ಲೋಕಗಳನ್ನು ಉಚ್ಚರಿಸಿ ಪ್ರತಿಯೊಂದು ಶ್ಲೋಕಸಂಖ್ಯೆಗೂ ಒಂದೊಂದು ಆಹುತಿಯಂತೆ ಆಹುತಿಗಳನ್ನು ಕೊಟ್ಟು, ಬಳಿಕ ಆ ಆಹುತಿಗಳಿಗನುಗುಣವಾಗಿ ಇಪ್ಪತ್ತೆಂಟುಮಂದಿ ಬ್ರಾಹ್ಮಣಶ್ರೇಷ್ಠರಿಗೆ ಭೋಜನ ಮಾಡಿಸಿ ಅವರನ್ನು ದಕ್ಷಿಣೆಯಿಂದ ಸಂತೋಷಗೊಳಿಸಬೇಕು. ॥೪೪೫॥

ದೇವಿ, ಪವಿತ್ರವಾದ ಆ ಕಾಶೀಮಾಹಾತ್ಮ್ಯೆಯನ್ನು ಪುಸ್ತಕದಲ್ಲಿ ಬರೆದು ಅದನ್ನು ಈಶ್ವರಭಕ್ತನಾದ ಬ್ರಾಹ್ಮಣನಿಗೆ ದಾನಮಾಡಬೇಕು. ಮತ್ತು ಅದರೊಂದಿಗೆ

॥ ಶ್ರೀ ಪಾರ್ವತ್ಯುವಾಚ ॥

ಏವಂ ಕೇನ ಕೃತೋ ಹೋಮಃ ಕೇನ ಕಿಂ ಪಾತಕಂ ಕೃತಂ।
ತತ್ಸರ್ವಂ ವದ ಸರ್ವಜ್ಞ ಶಿವಲಿಂಗಾರ್ಚನಪ್ರಿಯ ॥೪೪೭॥

॥ ಶ್ರೀ ಶಿವ ಉವಾಚ ॥

ವಸಿಷ್ಠೇನ ಪುರಾ ಕಾಶ್ಯಾಮಂತರ್ಗೇಹೇ ಶಿವಾತ್ಮಕೇ।
ಶಿವಲಿಂಗಾರ್ಚಕೋ ದೃಷ್ಟಃ ಶೈವಃ ಶಿವಪರಾಯಣಃ ॥೪೪೮॥

ವಸಿಷ್ಠಃ ಶಿವತತ್ತ್ವಜ್ಞಸ್ತದಾ ಶೈವಂ ಶಿವಾರ್ಚಕಂ।
ವಿಲೋಕ್ಯ ನಿಜಗಾದೈವಂ ಜ್ಞಾತುಂ ತಸ್ಯ ಮನಸ್ತದಾ ॥೪೪೯॥

॥ ವಸಿಷ್ಠ ಉವಾಚ ॥

ಕಿಮರ್ಥಂ ಪೂಜ್ಯತೇ ಲಿಂಗಮೇತತ್ಕಿಂ ತೇ ಪ್ರಯಚ್ಛತಿ।
ಅದೃಷ್ಟೇನ ವಿನಾ ಲೋಕೇ ವಸ್ತುಪ್ರಾಪ್ತಿರ್ನ ಸರ್ವಥಾ ॥೪೫೦॥

ಶ್ರೇಷ್ಠವಾದ ಒಂದು ಶಿವಲಿಂಗವನ್ನೂ, ಅದನ್ನು ಪೂಜಿಸುವುದಕ್ಕೆ ಉಪಯುಕ್ತವಾದ ಪೂಜಾಸಾಮಗ್ರಿಗಳನ್ನೂ ದಾನಮಾಡಬೇಕು. ಎಂದು ಶಂಕರನು ಹೇಳಲು, ॥೪೪೬॥

ಆಗ ಪಾರ್ವತಿಯು ಶಿವನನ್ನು ಕುರಿತು—ಶಿವಲಿಂಗಾರ್ಚನೆಯಲ್ಲಿ ಪ್ರೀತಿಯುಳ್ಳ ಓ ವಲ್ಲಭನೇ, ಪೂರ್ವದಲ್ಲಿ ಯಾವ ಮಹಾತ್ಮನು ಈ ರೀತಿಯಲ್ಲಿ ಹೋಮವನ್ನು ಆಚರಿಸಿರುವನು? ಮತ್ತು ಯಾರು ಆ ರೀತಿಯ ಪಾಪಕರ್ಮಗಳನ್ನು ಆಚರಿಸಿದ್ದರು? ಎಂಬುದನ್ನು ನನಗೆ ತಿಳಿಯಪಡಿಸು. ಎಂದು ಮತ್ತೆ ಪ್ರಾರ್ಥಿಸಿದಳು.॥೪೪೭॥

ಆಗ ಶಿವನು—ದೇವಿ, ಹಿಂದೆ ಒಂದಾನೊಂದು ಕಾಲದಲ್ಲಿ ವಸಿಷ್ಠಮಹರ್ಷಿಯು ಕಾಶೀಕ್ಷೇತ್ರದ ಅಂತರ್ಗೃಹದಲ್ಲಿ ಈಶ್ವರಲಿಂಗಾರಾಧಕನೂ, ಈಶ್ವರಧ್ಯಾನಾಸಕ್ತನೂ ಆದ ಈಶ್ವರಭಕ್ತನನ್ನು ನೋಡಿದನು. ॥೪೪೮॥

ಆಗ ಶಿವನ ಸ್ವರೂಪವನ್ನು ಚೆನ್ನಾಗಿ ತಿಳಿದ ವಸಿಷ್ಠಮಹರ್ಷಿಯು, ಈಶ್ವರಭಕ್ತನಾದ ಅವನನ್ನು ನೋಡಿ ಅವನ ಮನಸ್ಸನ್ನು ಪರೀಕ್ಷಿಸಬೇಕೆಂಬ ಕುತೂಹಲದಿಂದ ಹೀಗೆಂದನು. ॥೪೪೯॥

“ಎಲೈ ಈಶ್ವರಾರಾಧಕನೇ, ನೀನು ಈ ಶಿವಲಿಂಗವನ್ನೇಕೆ ಪೂಜಿಸುವೆ? ಇದು ನಿನಗೆ ಯಾವ ಫಲವನ್ನು ಕೊಡುವುದು? ಲೋಕದಲ್ಲಿ ಯಾವ ಫಲವನ್ನು

ಕಿಮರ್ಥಮತಿಯತ್ನೇನ ಕ್ರಿಯತೇ ಭಸ್ಮಧಾರಣಂ ।
ಚಂದನಂ ಶೀತಲಂ ರಮ್ಯಮಂಗೇ ಸಮ್ಯಗ್ವಿಲೇಪಯ ॥೪೫೧॥

ಕಿಮರ್ಥಂ ಸ್ಥೀಯತೇ ಕಾಶ್ಯಾಂ ನಿರಾಹಾರೇಣ ಸರ್ವದಾ ।
ಭುಂಕ್ಷ್ವ ನಾನಾವಿಧಾನ್ನಾನಿ ಯಥೇಷ್ಟಮತಿಯತ್ನತಃ ॥೪೫೨॥

ಕಿಮಾರಾಧ್ಯೋ ಹರೋ ನಿತ್ಯಂ ಶ್ಮಶಾನನಿಲಯಸ್ತವ ।
ಶೂಲೀ ಕಪಾಲಮಾಲಾಂಗಃ ಸರ್ವದಾ ವೃಷವಾಹನಃ ॥೪೫೩॥

ನ ದೃಷ್ಟೋಽಸ್ತಿ ಮಯಾ ವಿಪ್ರ ಲೋಕೇ ಪಾಷಾಣಪೂಜಕಃ ।
ಅಭಾಗ್ಯೋಽಸಿ ಭವಾನ್ನೂನಂ ಕೃತಂ ಚಾಘಮಹರ್ನಿಶಂ ॥೪೫೪॥

ಇತಿ ಶ್ರುತ್ವಾ ವಸಿಷ್ಠಸ್ಯ ವಾಕ್ಯಂ ದುಃಖಕರಂ ದ್ವಿಜಃ ।
ರುರೋದ ದುಃಖಸಂಕ್ರಾಂತೋ ಹಾ ಹಾ ಶಿವಶಿವೇತಿ ಸಃ ॥೪೫೫॥

ಪಡೆಯಬೇಕಾದರೂ ಅದೃಷ್ಟವೊಂದಿಲ್ಲದಿದ್ದರೆ ಸಾಧ್ಯವಿಲ್ಲ. ಅದೃಷ್ಟವೇ ನಮ್ಮ ಇಷ್ಟಾರ್ಥಗಳನ್ನು ಕೊಡುವುದಲ್ಲದೇ, ಈಶ್ವರಲಿಂಗವು ಯಾವ ಫಲವನ್ನೂ ಕೊಡಲಾರದು. ॥೪೫೦॥

ಅತ್ಯಂತ ಪ್ರಯಾಸದಿಂದ ಭಸ್ಮವನ್ನೇಕೆ ಧರಿಸುವೆ? ಶೀತಲವೂ ಮನೋಹರವೂ ಆದ ಚಂದನವನ್ನು ಅಂಗಗಳಿಗೆ ಲೇಪಿಸು. ॥೪೫೧॥

ಈ ಕಾಶೀಕ್ಷೇತ್ರದಲ್ಲಿ ನಿರಾಹಾರದಿಂದೇಕೆ ವಾಸವಾಗಿರುವೆ? ಬಗೆಬಗೆಯಾದ ಪಕ್ವಾನ್ನಗಳನ್ನು ಸಿದ್ಧಪಡಿಸಿ ಅವುಗಳನ್ನು ಭಕ್ಷಿಸು. ॥೪೫೨॥

ಸ್ಮಶಾನದಲ್ಲಿಯೇ ನೆಲಸಿರುವವನೂ, ಶೂಲವನ್ನು ಧರಿಸಿರುವವನೂ, ಕೊರಳಲ್ಲಿ ನರಕಪಾಲಗಳ ಮಾಲಿಕೆಗಳನ್ನು ಧರಿಸಿರುವವನೂ, ನಿರಂತರವೂ ವೃಷಭವನ್ನೇರಿದವನೂ ಆದ ಆ ಶಿವನನ್ನೇಕೆ ಆರಾಧಿಸುವೆ? ॥೪೫೩॥

ಎಲೈ ಬ್ರಾಹ್ಮಣನೇ, ಲೋಕದಲ್ಲಿ ಜಡವಾದ ಪಾಷಾಣವನ್ನು ಪೂಜಿಸುವ ಮನುಜನನ್ನು ನಾನೆಲ್ಲಿಯೂ ನೋಡಿರುವುದಿಲ್ಲ. ಹಗಲಿರುಳೂ ಪಾಪವನ್ನಾಚರಿಸುತ್ತಿರುವ ಈಗ ನೀನು ದುರ್ಭಾಗ್ಯಶಾಲಿಯಾಗಿರುವೆ.'' ॥೪೫೪॥

ವಸಿಷ್ಠನು ಆಡಿದ ದುಃಖಕರವಾದ ಆ ಮಾತನ್ನು ಕೇಳಿ ಬ್ರಾಹ್ಮಣನು ದುಃಖಿತನಾಗಿ "ಹಾ, ಹಾ, ಶಿವ, ಶಿವ" ಎಂದು ಪ್ರಲಾಪಿಸುತ್ತಾ ಅತ್ತನು.॥೪೫೫॥

ತದಾ ತದ್ರೋದನಂ ಶ್ರುತ್ವಾ ಬ್ರಹ್ಮಾ ಶಿವಪರಾಯಣಃ ।
ತಮುವಾಚಾತಿಯತ್ನೇನ ಕಿಮಾಸೀದಿತಿ ದುಃಖಿತಃ ॥೪೫೬॥

॥ ದ್ವಿಜ ಉವಾಚ ॥

ಶಿವನಿಂದಾ ಕೃತಾನೇನ ಶ್ರುತಾ ಸಾ ಪುಣ್ಯನಾಶಿನೀ ।
ಅಶೈವೋ ದುರದೃಷ್ಟೇನ ದೃಷ್ಟೋಽಯಂ ಪಾತಕಾಶ್ರಯಃ ॥೪೫೭॥

ಇತಿ ತದ್ವಚನಂ ಶ್ರುತ್ವಾ ದುಃಖಿತೋ ವಿಧಿರುತ್ತಮಂ ।
ಪುರಃ ಸ್ಥಿತಂ ವಸಿಷ್ಠಂ ತಂ ದೃಷ್ಟ್ವಾ ವಚನಮಬ್ರವೀತ್ ॥೪೫೮॥

॥ ಬ್ರಹ್ಮೋವಾಚ ॥

ಹಾ ವಸಿಷ್ಠ ತ್ವಯಾ ಮೂಢ ಶಿವನಿಂದಾ ಕಥಂ ಕೃತಾ ।
ದುಃಖಿತೋಽಯಂ ಮಹಾಶೈವಃ ಶಂಕರಸ್ಯೈವ ನಿಂದಯಾ ॥೪೫೯॥

ಭೂಲೋಕೇ ಸ್ವರ್ಗಲೋಕೇ ವಾ ಪಾತಾಲೇ ವಾ ಕದಾಚನ ।
ಏತಾವತ್ಕಾಲಪರ್ಯಂತಂ ನ ದೃಷ್ಟಃ ಶಿವನಿಂದಕಃ ॥೪೬೦॥

ಹಾಗೆ ಅಳುವ ಧ್ವನಿಯನ್ನು ಕೇಳಿ ಈಶ್ವರನಿಷ್ಠನಾದ ಬ್ರಹ್ಮನು ದುಃಖಿತನಾಗಿ ಆ ಬ್ರಾಹ್ಮಣನನ್ನು ಕುರಿತು "ನಿನಗೇನಾಯಿತು" ಎಂದು ಕೇಳಿದನು॥೪೫೬॥

ಆಗ ಬ್ರಾಹ್ಮಣನು ಹೀಗೆಂದನು--ಈ ಪಾಪಿಯು, ಶಿವನನ್ನು ನಿಂದಿಸಿದನು. ಶಿವನಿಂದೆಯು ಪುಣ್ಯವನ್ನು ನಾಶಪಡಿಸುವುದು. ಅದನ್ನು ನಾನೀಗ ಕೇಳಿರುವೆನು. ನನ್ನ ದುರದೃಷ್ಟದ ದೆಸೆಯಿಂದ ಇದೀಗ ನಾನು ಪಾಪಿಯಾದ ಶಿವದ್ವೇಷಿಯನ್ನು ನೋಡಿದೆನು. ॥೪೫೭॥

ಬ್ರಾಹ್ಮಣನ ಆ ವಚನವನ್ನು ಕೇಳಿ ಬ್ರಹ್ಮನು ಅತ್ಯಂತ ದುಃಖಗೊಂಡು ಮುಂದೆ ನಿಂತಿರುವ, ವಸಿಷ್ಠನನ್ನು ನೋಡಿ, ॥೪೫೮॥

"ಎಲೈ ಅಜ್ಞಾನಿಯಾದ ವಸಿಷ್ಠನೇ, ನೀನೇಕೆ ಶಿವನನ್ನು ನಿಂದಿಸಿದೆ? ಶಿವನ ಪರಮಭಕ್ತನಾದ ಈ ಬ್ರಾಹ್ಮಣನು ಶಿವನಿಂದೆಯನ್ನು ಕೇಳಿದ ಮಾತ್ರದಿಂದಲೇ ದುಃಖಗೊಂಡಿರುವನು. ॥೪೫೯॥

ನಾನು ಇದುವರೆಗೆ ಭೂಲೋಕದಲ್ಲಾಗಲಿ, ಸ್ವರ್ಗಲೋಕದಲ್ಲಾಗಲಿ, ಪಾತಾಳಲೋಕದಲ್ಲಾಗಲಿ, ಶಿವನಿಂದಕನಾದ ಒಬ್ಬ ಮನುಜನನ್ನೂ ನೋಡಿರುವುದಿಲ್ಲ. ॥೪೬೦॥

ಅಘೋರಪಾತಕೌಘಸ್ಯ ಪರಿಪಾಕಸ್ತವಾಧುನಾ ।
ಜಾತಸ್ತ್ವಯಾ ಯಶೋ ನಿಂದಾ ಶಂಕರಸ್ಯ ಕೃತಾ ಧ್ರುವಂ ॥೪೬೧॥

ಯಸ್ಯಾಃ ಪುತ್ರೋ ಮಹಾದೇವಂ ದೂಷಯಿಷ್ಯತಿ ದುರ್ಭಗಃ ।
ದುರ್ಭಗಾ ತಸ್ಯ ಜನನೀ ಜನ್ಮ ತಸ್ಯ ವೃಥಾ ಧ್ರುವಂ ॥೪೬೨॥

ಶೈವದುಃಖಪ್ರದೋ ಮರ್ತ್ಯಸ್ತಥಾ ಶಂಕರನಿಂದಕಃ ।
ಅನೇಕಜನ್ಮಪರ್ಯಂತಮಮೇಧ್ಯೇ ಜಾಯತೇ ಕ್ರಿಮಿಃ ॥೪೬೩॥

ವಿಷ್ಠಾಯಾಂ ಕ್ರಿಮಿರೂಪೇಣ ಬಹುದುಃಖೇನ ಸರ್ವದಾ ।
ಭವಿಷ್ಯತಿ ಸ್ಥಿತಿರ್ದುಷ್ಟ ತವ ಶಂಕರನಿಂದಕ ॥೪೬೪॥

ಇತಿ ಬ್ರಹ್ಮವಚಃ ಶ್ರುತ್ವಾ ವಸಿಷ್ಠೋ ಭಯವಿಹ್ವಲಃ ।
ಪ್ರಣಿಪತ್ಯ ವಚಃ ಪ್ರಾಹ ಚತುರ್ವಕ್ತ್ರಂ ಶಿವಾರ್ಚಕಂ ॥೪೬೫॥

ನೀನು ಶಿವನನ್ನು ನಿಂದಿಸಿರುವುದರಿಂದ ಇದೀಗ ನಿನ್ನ ಭಯಂಕರವಾದ ಪಾಪರಾಶಿಗಳು ಪರಿಪಕ್ವವಾಗಿರುವುವು. ಇದು ನಿಜ. ॥೪೬೧॥

ಯಾವ ಸ್ತ್ರೀಯಲ್ಲಿ ಜನಿಸಿದ ಪುತ್ರನು ಮಹಾದೇವಿಯನ್ನು ನಿಂದಿಸುವನೋ ಆ ಜನನಿಯು ಮಹಾಪಾಪಿಯು, ಮತ್ತು ಆ ಪುತ್ರನ ಜನ್ಮವೇ ವ್ಯರ್ಥವು. ॥೪೬೨॥

ಈಶ್ವರ ಭಕ್ತನಿಗೆ ದುಃಖವನ್ನುಂಟುಮಾಡುವವನೂ ಮತ್ತು ಶಿವದ್ವೇಷಿಯೂ ಆದ ಇಬ್ಬರೂ ಸಹ ಅನೇಕ ಜನ್ಮಗಳ ವರೆಗೆ ಅಮೇಧ್ಯದಲ್ಲಿ ಕ್ರಿಮಿಯಾಗಿ ಜನಿಸುವರು. ॥೪೬೩॥

ಶಿವನಿಂದಕನಾದ ನೀನು ದುಃಖಭೂಯಿಷ್ಠವಾದ ಕ್ರಿಮಿಯ ಶರೀರವನ್ನು ಪಡೆದು ಅಸಹ್ಯವಾದ ಅಮೇಧ್ಯದಲ್ಲಿ ವಾಸಮಾಡುವೆ.'' ॥೪೬೪॥

ಬ್ರಹ್ಮನ ಆ ಮಾತನ್ನು ಕೇಳಿ ವಸಿಷ್ಠನು ಭಯಚಕಿತನಾಗಿ ಬ್ರಹ್ಮನಿಗೆ ನಮಸ್ಕರಿಸಿ, ಈಶ್ವರಾರಾಧಕನಾದ ಆ ಚತುರ್ಮುಖಬ್ರಹ್ಮನನ್ನು ಕುರಿತು, ಹೀಗೆಂದನು. ॥೪೬೫॥

॥ ವಸಿಷ್ಠ ಉವಾಚ ॥

ಏತಸ್ಯ ಹೃದಯಂ ಜ್ಞಾತುಂ ಮಯ್ಯೈವೋಕ್ತಂ ಚತುರ್ಮುಖ ।
ಶಿವಸ್ಯ ದೇವದೇವಸ್ಯ ನಿಂದಾ ಕಾರ್ಯಾ ಕಥಂ ಮಯಾ ॥೪೬೬॥

॥ ಬ್ರಹ್ಮೋವಾಚ ॥

ಭ್ರಮೇಣ ಪರಿಹಾಸೇನ ಶಾಠ್ಯೇನಾನ್ಯೇನ ವಾ ದ್ವಿಜ ।
ಶಿವನಿಂದಾ ಕೃತಾ ಯೇನ ತೇನ ಪ್ರಾಪ್ಯೈವ ಯಾತನಾ ॥೪೬೭॥

ಭ್ರಮೇಣಾಪಿ ಕರಸ್ಪೃಷ್ಟೋ ವಹ್ನಿರ್ದುಃಖಕರೋ ಯಥಾ ।
ತಥೈವ ದುಃಖದಂ ಮನ್ಯೇ ನಿತ್ಯಂ ಶಂಕರದೂಷಣಂ ॥೪೬೮॥

ಕೃತಸ್ಪರ್ಶಂ ದಹತ್ಯಗ್ನಿಃ ಶಿವದೂಷಣಪಾವಕಃ ।
ಶಿವದೂಷಕಪಾಪಿಷ್ಠಕುಲಂ ದಹತಿ ಸರ್ವಥಾ ॥೪೬೯॥

‘ ಓ ಚತುರ್ಮುಖನೇ, ಈತನ ಹೃದಯವನ್ನು ಅರಿಯುವುದಕ್ಕೋಸ್ಕರ ಇವನ ಬಳಿಯಲ್ಲಿ ಈ ರೀತಿ ಮಾತನಾಡಿದೆನು. ದೇವೇಶನಾದ ಶಿವನನ್ನು ನಾನು ಬುದ್ಧಿ ಪೂರ್ವಕವಾಗಿ ನಿಂದಿಸುವೆನೇ ? ’ ಎಂದು ವಿನಯದಿಂದ ನುಡಿದನು. ಆಗ ಬ್ರಹ್ಮನು, ॥೪೬೬॥

“ ಎಲೈ ವಿಪ್ರನಾದ ವಸಿಷ್ಠನೇ, ಯಾವನು ಅಜ್ಞಾನದಿಂದಾಗಲಿ ಪರಿಹಾಸ ಕ್ಕೋಸ್ಕರವಾಗಲಿ ದುಷ್ಟತನದಿಂದಾಗಲಿ ಶಿವನನ್ನು ನಿಂದಿಸುವನೋ ಅವನು ದುಃಖವನ್ನು ಅನುಭವಿಸಲೇಬೇಕು. ॥೪೬೭॥

ಅಜ್ಞಾನದಿಂದ ಅಗ್ನಿಯನ್ನು ಮುಟ್ಟಿದರೂ ಸಹ ಅದು ದಹಿಸಿಯೇ ದಹಿಸು ವುದಲ್ಲವೆ ? ಅಗ್ನಿಯು ಹೇಗೆ ದುಃಖವನ್ನುಂಟುಮಾಡುವುದೋ ಅದರಂತೆ ಸರ್ವದಾ ಶಿವನಿಂದೆಯು ದುಃಖವನ್ನುಂಟುಮಾಡುವುದು. ॥೪೬೮॥

ಅಗ್ನಿಯು ತನ್ನನ್ನು ಸ್ಪರ್ಶಿಸಿದವನನ್ನು ಮಾತ್ರ ದಹಿಸುವುದು. ಆದರೆ ಶಿವನಿಂದೆಯೆಂಬ ಅಗ್ನಿಯಾದರೋ ಶಿವದೂಷಕನಾದ ಪಾಪಿಯ ವಂಶವನ್ನೇ ಭಸ್ಮಮಾಡುವುದು. ॥೪೬೯॥

ಬ್ರಹ್ಮಹತ್ಯಾರ್ಜಿತಂ ಪಾಪಂ ಕದಾಚಿನ್ನಾಶಮೇಷ್ಯತಿ ।
ಶಿವನಿಂದಾರ್ಜಿತಂ ಪಾಪಂ ನ ನಶ್ಯತ್ಯೇವ ಸರ್ವಥಾ ॥೪೭೦॥

ಶಿವನಿಂದಕಜಿಹ್ವಾಗ್ರಂ ಯಮಸ್ತಪ್ತಾಸ್ತ್ರಧಾರಯಾ ।
ಸದಾ ದಹತಿ ತೀವ್ರೇಣ ಕ್ಷುಭಿತಃ ಕ್ರೋಧಸಂಯುತಃ ॥೪೭೧॥

ಧಿಗ್ಜನ್ಮ ತವ ದುರ್ವೃತ್ತ ಹಾ ಮಹಾಪಾತಕಾಶ್ರಯ ।
ಧಿಕ್ಶೀಲಂ ತವ ದುಃಶೀಲ ಶಿವದೂಷಕ ದುರ್ಭಗ ॥೪೭೨॥

ತ್ವತ್ತೋ ನ ಪಾತಕೀ ಲೋಕೇ ನ ತ್ವತ್ತೋ ನಾರಕೀ ಧ್ರುವಂ ।
ಅಸಂಭಾಷ್ಯೋಽನಿರೀಕ್ಷ್ಯೋಽಸಿ ಯತಸ್ತ್ವಂ ಶಿವನಿಂದಕಃ ॥೪೭೩॥

ಅಸ್ಮಾಭಿರಪಿ ಪಾಪಾನಿ ಸಂಪ್ರಾಪ್ತಾನಿ ನ ಸಂಶಯಃ ।
ಮಹೇಶನಿಂದಕೇನಾದ್ಯ ಯತಃ ಸಂಭಾಷಣಂ ಕೃತಂ ॥೪೭೪॥

ಬ್ರಹ್ಮಹತ್ಯೆಯಿಂದ ಸಂಪಾದಿಸಿದ ಪಾಪವೂ ಸಹ ಒಂದು ವೇಳೆ ಕ್ಷಯಿಸಿದರೂ ಕ್ಷಯಿಸಬಹುದು. ಆದರೆ, ಶಿವನಿಂದೆಯಿಂದುಂಟಾದ ಪಾಪವು ಎಂದಿಗೂ ಕ್ಷಯಿಸಲಾರದು. ॥೪೭೦॥

ಶಿವನಿಂದಕನ ನಾಲಗೆಯ ತುದಿಯನ್ನು ಯಮನು, ಕೋಪಗೊಂಡು, ಕೆಂಪಾಗಿ ಕಾದ ತನ್ನ ಹರಿತವಾಗಿ ಅಸ್ತ್ರದಿಂದ ನಿರ್ದಯೆಯಿಂದ ದಹಿಸುವನು. ॥೪೭೧॥

ಎಲೈ ದುರುಳನೇ, ಮಹಾಪಾತಕಿಯೇ, ದುಃಶೀಲನೇ, ಶಿವದ್ವೇಷಿಯೇ, ಮಂದಭಾಗ್ಯನೇ, ನಿನ್ನ ಜನ್ಮಕ್ಕೆ ಧಿಕ್ಕಾರವಿರಲಿ. ನಿನ್ನ ಸ್ವಭಾವಕ್ಕೆ ಧಿಕ್ಕಾರವು. ॥೪೭೨॥

ಈ ಲೋಕದಲ್ಲಿ ನಿನಗಿಂತಲೂ ಪಾಪಿಯಾದ ಇನ್ನೊಬ್ಬನಿರುವುದಿಲ್ಲ. ನಿನಗಿಂತಲೂ ಕ್ರೂರವಾದ ನರಕದಲ್ಲಿ ವಾಸಿಸುವವನು ಇನ್ನೊಬ್ಬನಿರುವುದಿಲ್ಲ. ನೀನು ಸಂಭಾಷಣೆಗೆ ಅಯೋಗ್ಯನಾಗಿರುವೆಯಲ್ಲದೇ ನಿನ್ನನ್ನು ಅವಲೋಕಿಸುವುದೂ ಸಹ ಅನುಚಿತವು. ॥೪೭೩॥

ಇದೀಗ ಶಿವನಿಂದಕನಾದ ನಿನ್ನೊಂದಿಗೆ ಮಾತನಾಡಿದುದರಿಂದ ನಮಗೂ ಸಹ ಪಾಪಗಳು ಸಂಘಟಿಸಿದವು. ಇದರಲ್ಲಿ ಸಂಶಯವಿಲ್ಲ." ಎಂದು ಹೇಳಿದನು. ॥೪೭೪॥

ಇತಿ ತದ್ವಚನಂ ಶ್ರುತ್ವಾ ವಸಿಷ್ಠೋ ದುಃಖಿತಸ್ತದಾ ।
ರುರೋದೋಚ್ಚೈಸ್ತದಾ ನಾಚಮುವಾಚ ಸ ಕೃತಾಂಜಲಿಃ ॥೪೭೫॥

॥ ವಸಿಷ್ಠ ಉವಾಚ ॥

ಪ್ರಾಯಶ್ಚಿತ್ತಂ ವದ ಶ್ರೀಮನ್ನೇತತ್ಪಾತಕನಾಶಕಂ ।
ಪ್ರಾಯಶ್ಚಿತ್ತಂ ಯದಸ್ತ್ಯತ್ರ ತತ್ಕರಿಷ್ಯಾಮಿ ಸರ್ವಥಾ ॥೪೭೬॥

॥ ಬ್ರಹ್ಮೋವಾಚ ॥

ಉಪವಾಸೇನ ವಿಧಿವದಾದೌ ಮುಂಡನಪೂರ್ವಕಂ ।
ಪಂಚಗವ್ಯಂ ಚ ವಿಧಿವದ್ಗ್ರಾಹ್ಯಂ ಶಂಕರದೂಷಕೈಃ ॥೪೭೭॥

ತತೋಽಂತರ್ಗೃಹಯಾತ್ರಾಣಾಂ ಕಾರ್ಯಂ ಸಾರ್ಧಶತತ್ರಯಂ ।
ತತಃ ಪಂಚಕ್ರೋಶಯಾತ್ರಾಶತಕಂ ಕಾರ್ಯಮಾದರಾತ್ ॥೪೭೮॥

ಬ್ರಹ್ಮನ ಆ ಮಾತನ್ನು ಕೇಳಿ ವಸಿಷ್ಠನು ಅತ್ಯಂತ ದುಃಖಗೊಂಡವನಾಗಿ ಗಟ್ಟಿಯಾಗಿ ಅತ್ತನು. ಬಳಿಕ ಆವನು ಅಂಜಲಿಬದ್ಧನಾಗಿ ನಿಂತು ಬ್ರಹ್ಮನನ್ನು ಕುರಿತು, ॥೪೭೫॥

"ಶ್ರೀಯುತನಾದ ಬ್ರಹ್ಮನೇ, ಶಿವನಿಂದೆಯಿಂದ ಸಂಘಟಿಸಿದ ಈ ಪಾಪವನ್ನು ಹೋಗಲಾಡಿಸುವ ಪ್ರಾಯಶ್ಚಿತ್ತವನ್ನು ನನಗೆ ಹೇಳು. ಅಂತಹ ಪ್ರಾಯಶ್ಚಿತ್ತವೊಂದಿದ್ದರೆ ಅದನ್ನು ಈಗಲೇ ಕೈಗೊಳ್ಳುವೆನು" ಎಂದನು. ॥೪೭೬॥

ಆಗ ಬ್ರಹ್ಮನು ಹೀಗೆಂದನು—ಶಿವನಿಂದಕರು, ಶಿವನಿಂದೆಯಿಂದ ಸಂಭವಿಸಿದ ಪಾಪವನ್ನು ಹೋಗಲಾಡಿಸಿಕೊಳ್ಳುವುದಕ್ಕೋಸ್ಕರ ಮೊದಲು ಉಪವಾಸದಿಂದಿದ್ದು ಮುಂಡನವನ್ನು ಮಾಡಿಸಿಕೊಂಡು ವಿಧಿವತ್ತಾಗಿ ಪಂಚಗವ್ಯವನ್ನು ಸ್ವೀಕರಿಸಬೇಕು. ॥೪೭೭॥

ಬಳಿಕ ಮುನ್ನೂರ ಐವತ್ತು ಬಾರಿ ಅಂತರ್ಗೃಹಯಾತ್ರೆಯನ್ನು ಕೈಕೊಳ್ಳಬೇಕು. ಆದಾದ ಬಳಿಕ ನೂರು ಬಾರಿ ಪಂಚಕ್ರೋಶದ ಯಾತ್ರೆಯನ್ನು ನೆರವೇರಿಸಬೇಕು. ॥೪೭೮॥

ತತಃ ಶಿವರಹಸ್ಯಸ್ಯ ಕಾಶೀಮಾಹಾತ್ಮ್ಯಮುತ್ತಮಂ ।
ಸಹಸ್ರವಾರಂ ಯತ್ನೇನ ಪಠನೀಯಂ ಸಮಾಹಿತೈಃ ॥೪೭॥

ತತಸ್ತಚ್ಛ್ಲೋಕಮಂತ್ರೈಸ್ತು ತಿಲಹೋಮೋ ಯಥಾಕ್ರಮಂ ।
ಕರ್ತವ್ಯೋ ಲಕ್ಷಪರ್ಯಂತಂ ತಿಲಾಜ್ಯಾದಿಭಿರುತ್ತಮೈಃ ॥೪೮॥

ತದಷ್ಟಾವಿಂಶದಾವೃತ್ತ್ಯಾ ಶೈವಾಃ ಶಿವಪರಾಯಣಾಃ ।
ಭೋಜನೀಯಾಃ ಪ್ರಯತ್ನೇನ ದದ್ಯಾಚ್ಚ ಸ್ವರ್ಣದಕ್ಷಿಣಾಂ ॥೪೯॥

ಏತಾವದತಿಯತ್ನೇನ ಕ್ರಿಯತೇ ಯದಿ ಸಾದರಂ ।
ತದಾ ತತ್ಪಾಪಶಾಂತಿಸ್ತೇ ಭವಿಷ್ಯತಿ ನ ಸಂಶಯಃ ॥೫೦॥

ಇದಂ ಪುರಾ ಮಹಾದೇವಃ ಪೃಷ್ಟಃ ಸನ್ ಜಗದಂಬಯಾ ।
ಪ್ರಾಯಶ್ಚಿತ್ತಂ ಜಗಾದೈವಂ ಶಿವನಿಂದಾಘನಾಶಕಂ ॥೫೧॥

ತರುವಾಯ ಶಿವರಹಸ್ಯದಲ್ಲಿರುವ ಕಾಶೀಮಾಹಾತ್ಮ್ಯವನ್ನು ಒಂದುಸಾವಿರ ಬಾರಿ ಶ್ರದ್ಧೆಯಿಂದ ಪಠಿಸಬೇಕು. ॥೪೭॥

ಬಳಿಕ ಕಾಶೀಮಾಹಾತ್ಮ್ಯೆಯಿಂದೊಳಗೊಂಡ ಶ್ಲೋಕದಿಂದ ಕ್ರಮವರಿತು ಒಂದು ಲಕ್ಷಬಾರಿ ತಿಲ, ಆಜ್ಯ ಮುಂತಾದ ಹೋಮದ್ರವ್ಯಗಳಿಂದ ಹೋಮವನ್ನಾ ಚರಿಸಬೇಕು. ॥೪೮॥

ಬಳಿಕ ಈಶ್ವರನಿಷ್ಠರಾದ ಇಪ್ಪತ್ತೆಂಟು ಸಂಖ್ಯಾವೃತ್ತಿ ಮಂದಿ ಭಕ್ತರಿಗೆ ಊಟ ಮಾಡಿಸಿ ಸುವರ್ಣವನ್ನು ದಕ್ಷಿಣೆಯನ್ನಾಗಿ ಕೊಡಬೇಕು. ॥೪೯॥

ಇಷ್ಟನ್ನು ಮಾತ್ರ ಭಕ್ತಿಯಿಂದ ಆಚರಿಸಿದರೆ ಆಗ ನಿನ್ನ ಪಾಪವು ಶಾಂತ ವಾಗುವುದು. ಇದರಲ್ಲಿ ಸಂಶಯಪಡಬೇಕಾದುದಿಲ್ಲ. ॥೫೦॥

ಪೂರ್ವದಲ್ಲಿ ಜಗನ್ಮಾತೆಯಾದ ಗಿರಿಜೆಯು ಶಿವನನ್ನು ಕುರಿತು, "ಶಿವನಿಂದೆ" ಯ ಪ್ರಾಯಶ್ಚಿತ್ತವೇನೆಂದು ಕೇಳಲು, ಆಗ ಶಿವನು ಶಿವನಿಂದೆಯ ಪಾಪವನ್ನು ಹೋಗಲಾಡಿಸುವ ಈ ಪ್ರಾಯಶ್ಚಿತ್ತವನ್ನು ಹೇಳಿದನು. ॥೫೧॥

ಶಿವನಿಂದಾ ಶ್ರುತಾ ಯೇನ ಕಾರಿತಾ ವಾ ಭವಿಷ್ಯತಿ ।
ತೇನಾಪಿ ಯತ್ನತಃ ಕಾರ್ಯಂ ಪ್ರಾಯಶ್ಚಿತ್ತಮಿದಂ ಕ್ರಮಾತ್ ॥೪೮೪॥

ಶಿವಲಿಂಗಸ್ಥಾನಭಂಗಃ ಕೃತೋ ಯೇನ ಭ್ರಮಾದ್ಭವೇತ್ ।
ತದಾ ದಶಗುಣಂ ಕಾರ್ಯಂ ಪ್ರಾಯಶ್ಚಿತ್ತಮಿದಂ ಕ್ರಮಾತ್ ॥೪೮೫॥

ಭ್ರಮೇಣ ಚರಣಾಘಾತಃ ಶಿವಲಿಂಗೇ ಕೃತೋ ಯದಿ ।
ತದಾ ದಶಗುಣಂ ಕಾರ್ಯಂ ಪ್ರಾಯಶ್ಚಿತ್ತಮಿದಂ ಕ್ರಮಾತ್ ॥೪೮೬॥

ಏವಮುಕ್ತಸ್ತದಾ ದೇವಿ ವಸಿಷ್ಠೋ ಬ್ರಹ್ಮಣಾ ತತಃ ।
ತದುಕ್ತಂ ತತ್ಪ್ರಕಾರೇಣ ಪ್ರಾಯಶ್ಚಿತ್ತಂ ಚಕಾರ ಸಃ ॥೪೮೭॥

॥ ಸೂತ ಉವಾಚ ॥

ಕಾಶೀಮಾಹಾತ್ಮ್ಯಪೀಯೂಷವರ್ಷಧಾರಾಪರಿಪ್ಲುತಾಂ ।
ಸಂಶ್ಲಿಷ್ಯ ಗೌರೀಂ ವಿಶ್ವೇಶಃ ಪ್ರಾಪಾನಂದಂ ಜಗತ್ಪಿತಾ ॥೪೮೮॥

ಶಿವನಿಂದೆಯನ್ನು ಕೇಳಿದವನೂ ಮತ್ತು ಶಿವನಿಂದೆಯನ್ನು ಮಾಡಿಸಿದವನೂ, ಇವರಿಬ್ಬರೂ ಸಹ ಈ ಪ್ರಾಯಶ್ಚಿತ್ತವನ್ನು ತಪ್ಪದೇ ಆಚರಿಸಬೇಕು. ॥೪೮೪॥

ಯಾವನು ಅಜ್ಞಾನದಿಂದ ಶಿವಲಿಂಗವಿರುವ ಸ್ಥಳವನ್ನು ಹಾಳುಮಾಡುವನೋ ಅವನು, ಹಿಂದೆ ಹೇಳಿದ ಈ ಪ್ರಾಯಶ್ಚಿತ್ತವನ್ನು ಹತ್ತರಷ್ಟು ಹೆಚ್ಚಾಗಿ ಆಚರಿಸಬೇಕು. ॥೪೮೫॥

ಅಜ್ಞಾನದಿಂದ ಶಿವಲಿಂಗದ ಮೇಲೆ ಪಾದವನ್ನಿಟ್ಟರೆ ಆಗ ಈ ಪ್ರಾಯಶ್ಚಿತ್ತವನ್ನು ದಶಗುಣವಾಗಿ ಆಚರಿಸಬೇಕು.'' ॥೪೮೬॥

ದೇವಿ ಬ್ರಹ್ಮನು ಹೀಗೆನ್ನಲು ಆಗ ವಸಿಷ್ಠನು ಅವನು ಹೇಳಿದ ಕ್ರಮವನ್ನನುಸರಿಸಿ ಪ್ರಾಯಶ್ಚಿತ್ತವನ್ನು ನೆರವೇರಿಸಿದನು. ॥೪೮೭॥

ಅನಂತರದಲ್ಲಿ ಸೂತನು ಮುನಿಪುಂಗವರನ್ನು ಕುರಿತು ಹೀಗೆಂದನು— ಎಲೈ ದ್ವಿಜಶ್ರೇಷ್ಠರೇ, ಬಳಿಕ ಲೋಕಜನಕನಾದ ಪರಮೇಶ್ವರನು ಧಾರಾಕಾರವಾಗಿ ಪ್ರವಹಿಸುತ್ತಿದ್ದ ಕಾಶೀಮಾಹಾತ್ಮ್ಯೆಯೆಂಬ ಅಮೃತಲಹರಿಯಲ್ಲಿ ಮುಳುಗಿದ ಗಿರಿಜೆಯನ್ನು ಬಿಗಿದಪ್ಪಿ, ಪರಮಾನಂದವನ್ನು ಹೊಂದಿದನು. ॥೪೮೮॥

ತತೋ ವೃಷೇಶಮಾರುಹ್ಯ ಕಾಶೀದರ್ಶನಲೋಲುಪಃ ।
ಕೈಲಾಸಾದಗಮತ್ಕಾಶೀಮುಮಯಾ ಸಹ ಸರ್ವಗಃ ॥೪೯॥

ಭವದ್ಭಿರಪಿ ವಿಪ್ರೇಂದ್ರಾಃ ಕಾಶೀ ವಿಶ್ವೇಶಸಂಶ್ರಯಾ ।
ಸಮ್ಯಗಾಶ್ರಯಣೀಯೈವ ಮೋಕ್ಷಾರ್ಥಿಭಿರಹರ್ನಿಶಂ ॥೯೦॥

ಇದಂ ಮಾಹಾತ್ಮ್ಯಮಮಲಂ ಯಃ ಶೃಣೋತಿ ಪಠಿಷ್ಯತಿ ।
ಸ ಸರ್ವಪಾಪನಿರ್ಮುಕ್ತಃ ಶಿವಲೋಕಂ ಗಮಿಷ್ಯತಿ ॥೯೧॥

ಇದಂ ಮಾಹಾತ್ಮ್ಯಮಮಲಂ ಲಿಖಿತ್ವಾ ಪುಸ್ತಕಂ ಯದಿ ।
ಪೂಜಾಂ ಕರಿಷ್ಯತಿ ಪ್ರೀತ್ಯಾ ಯಸ್ತಸ್ಯಾಘಂ ಪ್ರಣಶ್ಯತಿ ॥೯೨॥

ಇದಮೇವ ಹಿ ಮಾಹಾತ್ಮ್ಯಂ ಯತ್ರ ಕುತ್ರಾಪಿ ಯಃ ಪಠೇತ್ ।
ತತ್ರೈವ ಕಾಶೀವಿಶ್ವೇಶವಸತಿರ್ನಾತ್ರ ಸಂಶಯಃ ॥೯೩॥

ಬಳಿಕ ಸರ್ವವ್ಯಾಪಿಯಾದ ಪರಮೇಶ್ವರನು ಕಾಶೀಕ್ಷೇತ್ರವನ್ನು ನೋಡಬೇಕೆಂಬ ಕುತೂಹಲದಿಂದ ವೃಷಭವನ್ನೇರಿ ಗಿರಿಜೆಯೊಂದಿಗೆ ಕಾಶೀಕ್ಷೇತ್ರಕ್ಕೆ ಹೋದನು. ॥೮೯॥

ಎಲೈ ದ್ವಿಜೋತ್ತಮರೇ, ಮುಮುಕ್ಷುಗಳಾದ ನೀವೂ ಸಹ ವಿಶ್ವನಾಥನು ನೆಲಸಿರುವ ಕಾಶೀಕ್ಷೇತ್ರದಲ್ಲಿಯೇ ಹಗಲಿರುಳೂ ವಾಸವಾಗಿರಬೇಕು. ॥೯೦॥

ಪವಿತ್ರವಾದ ಈ ಕಾಶೀಕ್ಷೇತ್ರದ ಮಹಿಮೆಯನ್ನು ಯಾವ ನರನು ಕೇಳುವನೋ ಮತ್ತು ಯಾವನು ಪಠಿಸುವನೋ ಆವನು ಸಕಲ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದಿ ಅಂತ್ಯದಲ್ಲಿ ಶಿವಲೋಕಕ್ಕೆ ಹೋಗುವನು. ॥೯೧॥

ಪವಿತ್ರವಾದ ಈ ಕಾಶೀಕ್ಷೇತ್ರದ ಮೂರ್ತಿಯನ್ನು ಬರೆದು ಯಾವನು ಲಿಖಿತವಾದ ಆ ಪುಸ್ತಕವನ್ನು ಪೂಜಿಸುವನೋ ಆವನ ಪಾಪವು ಕ್ಷಯಿಸುವುದು. ॥೯೨॥

ಕಾಶೀಕ್ಷೇತ್ರದ ಈ ಮಾಹಾತ್ಮ್ಯವನ್ನು ಯಾವ ಮನುಜನು ಯಾವ ಪ್ರದೇಶದಲ್ಲಿ ಪಠಿಸುವನೋ, ಅಲ್ಲಿಯೇ ಕಾಶೀವಿಶ್ವನಾಥನು ನೆಲಸುವನು. ಇದರಲ್ಲಿ ಸಂಶಯಪಡಬೇಕಾದುದಿಲ್ಲ. ॥೯೩॥

ಇದಂ ಮಾಹಾತ್ಮ್ಯಮನಿಶಮಿಂದ್ರಾದ್ಯೈರಮರೈರ್ಮುದಾ ।
ಶ್ರೂಯತೇ ಸುಖದಂ ಚಿತ್ತೇ ಸರ್ವಪಾಪೌಘನಾಶಕಂ ॥೪೯೪॥

ಇದಮೇವ ಹಿ ಮಾಹಾತ್ಮ್ಯಂ ಬ್ರಹ್ಮಾ ಶಿವಪರಾಯಣಃ ।
ಬ್ರಹ್ಮಲೋಕೇ ಸದಾ ಸಮ್ಯಕ್ಪಠತಿ ಪ್ರೀತಮಾನಸಃ ॥೪೯೫॥

ವಿಷ್ಣುರಪ್ಯನಿಶಂ ಭಕ್ತ್ಯಾ ಶಿವಲಿಂಗಾರ್ಚನಪ್ರಿಯಃ ।
ಪಠತಿ ಪ್ರೀತಹೃದಯೋ ಮಾಹಾತ್ಮ್ಯಮಿದಮೇವ ಹಿ ॥೪೯೬॥

ಯೇನೇದಂ ಪಠ್ಯತೇ ಪ್ರೀತ್ಯಾ ಮಾಹಾತ್ಮ್ಯಮತಿಶೋಭನಂ ।
ತೇನ ಪ್ರಾಪ್ತಾ ಮುಕ್ತಿಕಾಂತಾ ಸತ್ಯಂ ಸತ್ಯಂ ನ ಸಂಶಯಃ ॥೪೯೭॥

ದೇಶಾಂತರೇಽಪಿ ವಾ ಸ್ಥಿತ್ವಾ ಮಾಹಾತ್ಮ್ಯಮಿದಮುತ್ತಮಂ ।
ಯಃ ಪಠಿಷ್ಯತಿ ಪುಣ್ಯಾತ್ಮಾ ಸ ಕಾಶ್ಯಾಂ ಸಂಸ್ಥಿತೋ ಭವೇತ್॥೪೯೮॥

ಸುಖದಾಯಕವಾದ ಈ ಮಾಹಾತ್ಮ್ಯವನ್ನು ಇಂದ್ರಾದಿದೇವತೆಗಳು ಸಂತೋಷದಿಂದ ಕೇಳುವರು. ಇದನ್ನು ಕೇಳುವುದರಿಂದ ಚಿತ್ತದಲ್ಲಿ ಲಿಪ್ತವಾದ ಸಕಲ ಪಾಪರಾಶಿಗಳೂ ಸಹ ಕ್ಷಯಿಸುವುವು. ||೪೯೪||

ಈಶ್ವರಧ್ಯಾನತತ್ಪರನಾದ ಬ್ರಹ್ಮನು ತನ್ನ ಲೋಕದಲ್ಲಿ ನಿರಂತರವೂ ಇದೇ ಮಾಹಾತ್ಮ್ಯವನ್ನು ಸಂತೋಷದಿಂದ ಪಠಿಸುತ್ತಿರುವನು. ||೪೯೫||

ವಿಷ್ಣುವೂ ಸಹ ಶಿವಲಿಂಗಾರ್ಚನೆಯಲ್ಲಿ ಪ್ರೀತಿಯುಳ್ಳವನಾಗಿ ಹಗಲಿರುಳೂ ಭಕ್ತಿಯಿಂದ ಇದೇ ಮಾಹಾತ್ಮ್ಯವನ್ನು ಸಂತೋಷದಿಂದ ಪಠಿಸುತ್ತಿರುವನು.||೪೯೬||

ಕಲ್ಯಾಣಪ್ರದವಾದ ಈ ಮಾಹಾತ್ಮ್ಯವನ್ನು ಯಾವನು ಪ್ರೀತಿಯಿಂದ ಪಠಿಸುವನೋ ಅವನು ಮುಕ್ತಿಯೆಂಬ ರಮಣಿಯನ್ನು ವರಿಸಿದಂತೆಯೇ ಸರಿ.||೪೯೭||

ಕಾಶೀಕ್ಷೇತ್ರವನ್ನು ಬಿಟ್ಟು ದೇಶಾಂತರದಲ್ಲಿ ಶ್ರೇಷ್ಠವಾದ ಈ ಮಾಹಾತ್ಮ್ಯವನ್ನು ಪಠಿಸುವವನೂ ಸಹ ಅಂತ್ಯದಲ್ಲಿ ಕಾಶೀಕ್ಷೇತ್ರದಲ್ಲಿಯೇ ಮರಣವನ್ನು ಹೊಂದುವನು. (ದೇಶಾಂತರದಲ್ಲಾದರೂ ವಾಸವಾಗಿದ್ದು ಯಾವನು ಈ ಮಾಹಾತ್ಮ್ಯವನ್ನು ಪಠಿಸುವನೋ ಪುಣ್ಯಶಾಲಿಯಾದ ಅವನು ಕಾಶೀಕ್ಷೇತ್ರದಲ್ಲಿದ್ದಂತೆಯೇ ಸರಿ.) ||೪೯೮||

ಅಶಕ್ತೈಃ ಪಂಗುಭಿರ್ವೃದ್ಧೈರಿದಂ ಮಾಹಾತ್ಮ್ಯಮನ್ವಹಂ ।
ಕಾಶ್ಯಾನ್ಯದೇಶೇ ಸ್ಥಿತ್ವಾಪಿ ಪಠನೀಯಂ ಪ್ರಯತ್ನತಃ ॥೯೯॥

ಯೇ ಜನ್ಮದುಃಖಾದಿವಿನಾಶಕಂ ಸದಾ
ಶೃಣ್ವಂತಿ ಮಾಹಾತ್ಮ್ಯಮಿದಂ ಮನೋಹರಂ ।
ತೇ ಶಂಕರಸ್ಯಾತಿಹಿತಾಃ ಶಿವಾರ್ಚಕಾಃ
ಶಿವೈಕದೇವಾಃ ಶಿವಸಂಮತಾಃ ಸದಾ ॥೩೦೦॥

ಸಂಸಾರದಾವಾನಲದಹ್ಯಮಾನೈಃ
ಕಾಶೀಸುಧಾಬ್ಧಿಃ ಸುರವೃಂದಸೇವ್ಯಃ ।
ಸೇವ್ಯೋ ಹಿ ಸರ್ವೈರಪಿ ಸರ್ವದಾಯಂ
ಪಾಪಾಪನುತ್ತ್ಯೈ ಜನುದುಃಖಶಾಂತ್ಯೈ ॥೩೦೧॥

ಇತಿ ಶ್ರೀಶಿವರಹಸ್ಯೇ ಉಗ್ರಾಖ್ಯೇ ಸಪ್ತಮಾಂಶೇ ದ್ವಾದಶೋಽಧ್ಯಾಯಃ

ಅಶಕ್ತರು, ಕುಂಟರು, ಮತ್ತು ವೃದ್ಧರೂ ದೇಶಾಂತರದಲ್ಲಾದರೂ ಈ ಕಾಶೀಮಹಿಮೆಯನ್ನು ತಪ್ಪದೇ ಪಠಿಸಬೇಕು. ॥೯೯॥

ಯಾರು ಜನ್ಮಜರಾಮರಣಗಳನ್ನು ಹೋಗಲಾಡಿಸುವ ರಮ್ಯವಾದ ಈ ಕಾಶೀ ಕ್ಷೇತ್ರದ ಮಾಹಾತ್ಮ್ಯವನ್ನು ಕೇಳುವರೋ ಶಿವನ ಹಿತಕಾರಿಗಳೂ, ಈಶ್ವರಾರಾಧಕರೂ, ಶಿವನನ್ನೊಬ್ಬನನ್ನೇ ಮರೆಹೋಗುವವರೂ ಆದ ಅವರು ನಿರಂತರವೂ ಈಶ್ವರಾನುಗ್ರಹಕ್ಕೆ ಪಾತ್ರರಾಗುವರು. ॥೩೦೦॥

ಸಂಸಾರವೆಂಬ ಕಾಡುಕಿಚ್ಚಿನಲ್ಲಿ ಬಿದ್ದು ಬೇಯುತ್ತಿರುವ ಮನುಜರು ದೇವತೆಗಳಿಂದ ಸೇವಿಸಲ್ಪಡುವ ಕಾಶೀಕ್ಷೇತ್ರವೆಂಬ ಅಮೃತಸಮುದ್ರವನ್ನು ಸೇವಿಸಬೇಕು. ಈ ರೀತಿಯಲ್ಲಿ ಸರ್ವರೂ ಸಹ ತಮ್ಮ ಪಾಪಗಳಿಂದ ಬಿಡುಗಡೆಯನ್ನು ಹೊಂದಬೇಕಾದರೆ ನಿರಂತರವೂ ಈ ಸುಧಾಸಾಗರವನ್ನೇ ಸೇವಿಸಬೇಕು. ॥೩೦೧॥

ಇಲ್ಲಿಗೆ ಶ್ರೀಶಿವರಹಸ್ಯದ ಉಗ್ರವೆಂಬ ಏಳನೆಯ ಅಂಶದಲ್ಲಿ
ಹನ್ನೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಉಗ್ರಾಖ್ಯೇ

ಸಪ್ತಮಾಂಶೇ ಪೂರ್ವಾರ್ಧೇ

ತ್ರಯೋದಶೋಽಧ್ಯಾಯಃ

॥ ಋಷಯ ಊಚುಃ ॥

ಸೂತ ವೇದಾರ್ಥತತ್ತ್ವಜ್ಞ ಕಾಶೀತತ್ತ್ವಂ ಯಥಾರ್ಥತಃ ।
ಯಥಾಜ್ಞಾತಂ ತಥೈವೋಕ್ತಂ ತ್ವಯಾಸ್ಮಭ್ಯಂ ಪ್ರಯತ್ನತಃ ॥೧॥

ವಯಂ ಪುನೀತಾಃ ಸರ್ವೇಽಪಿ ತ್ವತ್ಪ್ರಸಾದಾನ್ಮುನೀಶ್ವರಾಃ ।
ತತ್ತ್ವಾವಬೋಧೋಽದ್ಯ ಕೃತಸ್ತ್ವಯಾಸ್ಮಾಸು ಕೃಪಾನಿಧೇ ॥೨॥

ಸಂಸಾರಾನಲಸಂದಗ್ಧಾಃ ವಯಂ ಸರ್ವೇ ತ್ವಯಾಧುನಾ ।
ತರ್ಪಿತಾಃ ಸತ್ಕಥಾಲಾಪಾಮೃತವೃಷ್ಟ್ಯಾ ನ ಸಂಶಯಃ ॥೩॥

ಹದಿಮೂರನೆಯ ಅಧ್ಯಾಯ

ಸಕಲ ವೇದಾರ್ಥಗಳ ರಹಸ್ಯವನ್ನು ಅರಿತ ಸೂತಮಹರ್ಷಿಯೇ, ಇದುವರೆಗೆ ನೀನು ಅತ್ಯಂತ ಪ್ರಯಾಸದಿಂದ ಕಾಶೀಕ್ಷೇತ್ರದ ಮಹಿಮೆಯನ್ನು ನಿನಗೆ ತಿಳಿದಿರುವ ಹಾಗೆಯೇ ನಮಗೆ ಹೇಳಿರುವೆ. ॥೧॥

ಓ ಕರುಣಾಸಾಗರನೇ, ಮುನಿಪುಂಗವರಾದ ನಾವು ನಿನ್ನ ಅನುಗ್ರಹದ ದೆಸೆಯಿಂದ ಪವಿತ್ರರಾಗಿರುವೆವು. ಏಕೆಂದರೆ ನೀನು ನಮಗೆಲ್ಲರಿಗೂ ಶಿವರಹಸ್ಯವನ್ನು ತಿಳಿಯಪಡಿಸಿರುವೆ. ॥೨॥

ಮುನಿಶ್ರೇಷ್ಠನೇ, ಸಂಸಾರವೆಂಬ ಅಗ್ನಿಯಲ್ಲಿ ಬಿದ್ದು ಬೆಂದಿರುವ ನಾವೆಲ್ಲರೂ ನಿನ್ನ ಸತ್ಕಥಾಲಾಪವೆಂಬ ಅಮೃತಲಹರಿಯನ್ನು ಪಾನಮಾಡಿ ತೃಪ್ತರಾಗಿರುವೆವು. ಇದರಲ್ಲಿ ಸಂಶಯವಿಲ್ಲ. ॥೩॥

ಕಾಶೀಕಥಾಮೃತಂ ಶ್ರೇಷ್ಠಂ ದುಷ್ಪ್ರಾಪಮಮೃತಾದಪಿ ।
ತತ್ಪಾಯಿತಂ ತ್ವಯಾಸ್ಮಭ್ಯಮಸ್ಮದ್ಭಾಗ್ಯವಶಾದ್ಧ್ರುವಂ ॥೪॥

ಕೃತಕೃತ್ಯಾ ವಯಂ ಸರ್ವೇ ಸಂಭೂತಾಸ್ತ್ವದನುಗ್ರಹಾತ್ ।
ಅನುಗ್ರಹೋಽಯಮಸ್ಮಾಭಿರ್ಲಬ್ಧಪ್ರಾಯಸ್ತಪಸ್ಯಯಾ ॥೫॥

ತ್ವಯಾ ಹಿತೋಪದೇಶೋಽಯಮಸ್ಮಭ್ಯಂ ಯಃ ಕೃತೋಽಧುನಾ ।
ಸುದುರ್ಲಭತರೋ ನೂನಮನ್ಯಾಪ್ರಾಪ್ಯೋ ನ ಸಂಶಯಃ ॥೬॥

ಸೂತ ಕಾಶೀಕಥಾಃ ಶ್ರುತ್ವಾ ದಗ್ಧಾಃ ಪಾತಕಕೋಟಯಃ ।
ಸಂಪ್ರಾಪ್ತಾಃ ಪುಣ್ಯನಿಚಯಾಃ ದುರ್ಲಭಾ ಮೋಕ್ಷಸಾಧನಾಃ ॥೭॥

ಕಾಶೀಕಥಾಸುಧಾಪಾನಸಮುತ್ಕಂಠಾ ಭವತ್ಪುರಾ ।
ಸಫಲಾದ್ಯ ಸಮುತ್ಕಂಠಾ ಜಾತಾ ಸಾ ತ್ವತ್ಪ್ರಸಾದತಃ ॥೮॥

ಶ್ರೇಷ್ಠವಾದ ಕಾಶೀಕ್ಷೇತ್ರದ ಕಥೆಯೆಂಬ ಅಮೃತವು ಸ್ವಭಾವಸಿದ್ಧವಾದ ಅಮೃತಕ್ಕಿಂತಲೂ ದುರ್ಲಭವಾಗಿರುವುದು. ಹೀಗಿದ್ದರೂ ಸಹ ನಮ್ಮ ಭಾಗ್ಯವಶದಿಂದಲೇ ನೀನು ನಮಗೆ ಆ ಅಮೃತವನ್ನು ಪಾನಮಾಡಿಸಿರುವೆ. ಇದು ನಿಜ. ॥೪॥

ನಿನ್ನ ಅನುಗ್ರಹದ ದೆಸೆಯಿಂದ ನಾವೆಲ್ಲವೂ ಕೃತಕೃತ್ಯರಾಗಿರುವೆವು. ನಮ್ಮ ತಪಸ್ಸಿನ ಮಹಿಮೆಯಿಂದ ನಾವು ನಿನ್ನ ಆ ಅನುಗ್ರಹಕ್ಕೆ ಪಾತ್ರರಾದೆವು. ॥೫॥

ನೀನು ನಮಗೆ ಮಾಡಿರುವ ಈ ಹಿತೋಪದೇಶವು ನಮಗೆ ಅತ್ಯಂತ ಪ್ರಯಾಸದಿಂದ ಹೊಂದಲು ಸಾಧ್ಯವೂ, ಇತರರಿಗೆ ಅತ್ಯಂತ ದುರ್ಲಭವೂ ಆಗಿರುವುದು. ॥೬॥

ಓ ಸೂತಮುನಿಯೇ, ಕಾಶೀಕ್ಷೇತ್ರದ ಕಥೆಯನ್ನು ಕೇಳಿ ನಮ್ಮ ಅನಂತವಾದ ಪಾಪರಾಶಿಗಳು ನಾಶವನ್ನು ಹೊಂದಿದುವು. ದುರ್ಲಭವೂ ಮೋಕ್ಷಸಾಧನವೂ ಆದ ಪುಣ್ಯರಾಶಿಗಳು ಸಂಭವಿಸಿದುವು. ॥೭॥

ಇದಕ್ಕೆ ಮೊದಲು ನಮಗೆ ಕಾಶೀಕ್ಷೇತ್ರದ ಕಥೆಯೆಂಬ ಅಮೃತವನ್ನು ಪಾನಮಾಡುವ ಕುತೂಹಲವಿದ್ದಿತು. ಅದೀಗ ನಿನ್ನ ಅನುಗ್ರಹದಿಂದ ಸಫಲವಾಯಿತು. ॥೮॥

ಕಾಶೀಕಥಾಸುಧಾಪಾನಾತ್ಸಂತೋಷೋ ಯಾದೃಶೋ ಭವೇತ್ ।
ಸಂತೋಷಸ್ತಾದೃಶಃ ಪ್ರಾಯಃ ಸುಧಾಪಾನೇಽಪಿ ನ ಧ್ರುವಂ ॥೯॥

ಕಾಶೀಕಥಾಸುಧಾಪಾನಂ ಕೃತಂ ಯೇನ ನ ಸಾದರಂ ।
ಸ ಜೀವನ್ಮೃತ ಏವಾದ್ಧಾ ಸ ನೀಚಃ ಪುಲ್ಕಸಾದಪಿ ॥೧೦॥

ಯಥಾ ದೇವಾಃ ಸುಧಾಂ ಪ್ರಾಪ್ಯ ಸುಪ್ರೀತಾಶ್ಚ ಸುಧಾಶನಾಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೧೧॥

ವಿದ್ಯಾಃ ಸಮಗ್ರಾಃ ಸಂಪ್ರಾಪ್ಯ ಯಥಾ ಪ್ರೀತಾಃ ದ್ವಿಜೋತ್ತಮಾಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೧೨॥

ಯಥಾ ನವನಿಧೀನ್ಪ್ರಾಪ್ಯ ಸಂತುಷ್ಟೋಽಭೂದ್ಧನಾಧಿಪಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೧೩॥

ಯಥಾ ಶಿವಾರ್ಚನಾಲ್ಲಕ್ಷ್ಮೀಂ ಲಬ್ಧ್ವಾ ಪ್ರೀತೋ ಜನಾರ್ದನಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೧೪॥

ಕಾಶೀಕ್ಷೇತ್ರದ ಕಥಾಮೃತದಿಂದ ಎಷ್ಟು ಸಂತೋಷವುಂಟಾಗುವುದೋ ಅಂತಹ ಸಂತೋಷವು ಪ್ರಾಯಶಃ ಅಮೃತಪಾನದಿಂದಲೂ ಉಂಟಾಗಲಾರದು. ಇದು ನಿಜ. ॥೯॥

ಯಾವನು ಕಾಶೀಕಥಾಮೃತವನ್ನು ಪ್ರೀತಿಯಿಂದ ಪಾನಮಾಡುವುದಿಲ್ಲವೋ ಅವನು ಜೀವಿಸಿದ್ದರೂ ಸಹ ಮೃತನಾದಂತೆಯೇ ಸರಿ. ಅಂತಹ ಮನುಜನು ಬೇಡನಿಗಿಂತಲೂ ನೀಚನು. ॥೧೦॥

ಅಮೃತಪಾಯಿಗಳಾದ ದೇವತೆಗಳು ಅಮೃತವನ್ನು ಪಡೆದು ಸುಪ್ರೀತರಾಗುವಂತೆ ನಾವು ಕಾಶೀಕ್ಷೇತ್ರದ ಕಥಾಮೃತವನ್ನು ಹೊಂದಿ ಸಂತೋಷಗೊಂಡಿರುವೆವು. ॥೧೧॥

ತ್ರೈವರ್ಣಿಕರು ಸಾಂಗವಾದ ವಿದ್ಯೆಯನ್ನು ಸಂಪಾದಿಸಿ ಅದರಿಂದ ತೃಪ್ತರಾಗುವಂತೆ, ನಾವು ಕಾಶೀಕಥಾಮೃತವನ್ನು ಪಾನಮಾಡಿ ತೃಪ್ತರಾಗಿರುವೆವು. ॥೧೨॥

ಧನಪತಿಯಾದ ಕುಬೇರನು ಪದ್ಮಶಂಖಾದಿ ಒಂಬತ್ತು ನಿಧಿಗಳನ್ನು ಪಡೆದು ತೃಪ್ತನಾದಂತೆಯೂ, ವಿಷ್ಣುವು ಶಿವಲಿಂಗಾರ್ಚನೆಯ ಮಹಿಮೆಯಿಂದ ಲಕ್ಷ್ಮಿಯನ್ನು

ಯಥೇಶಾತ್ಪ್ರಾಪ್ಯ ವೈಕುಂಠಂ ಸುಪ್ರೀತೋಽಭೂಜ್ಜನಾರ್ದನಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೧೫॥

ಯಥಾ ಶಿವಾರ್ಚನಾಲ್ಲಬ್ಧ್ವಾ ಸ್ವರ್ಗಂ ಪ್ರೀತಃ ಶಚೀಪತಿಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೧೬॥

ಯಥಾ ನವತೃಣಂ ಪ್ರಾಪ್ಯ ಪ್ರೀತಾ ಗಾವಃ ಕ್ಷುಧಾತುರಾಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೧೭॥

ಯಥಾ ಪ್ರೀತಾನಿ ಸಸ್ಯಾನಿ ವೃಷ್ಟಿಂ ಪ್ರಾಪ್ಯ ಯಥಾಹಿತಂ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೧೮॥

ಯಥಾ ಯಥೇಚ್ಛಮನ್ನಾನಿ ಲಬ್ಧ್ವಾ ಪ್ರೀತಾಃ ಕ್ಷುಧಾತುರಾಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೧೯॥

ಯಥೇಚ್ಛಂ ಚೈವ ವಸ್ತ್ರಾಣಿ ಲಬ್ಧ್ವಾ ಪ್ರೀತಾ ಹಿಮಾತುರಾಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೨೦॥

ವರಿಸಿ ಸಂತುಷ್ಟನಾದಂತೆಯೂ ನಾವು ಕಾಶೀಕಥಾಮೃತವನ್ನು ಪಡೆದು ಸುಪ್ರೀತರಾಗಿರುವೆವು. ||೧೩-೧೪||

ವಿಷ್ಣುವು ಈಶ್ವರನಿಂದ ವೈಕುಂಠವನ್ನು ಪಡೆದು ಸುಪ್ರೀತನಾದಂತೆಯೂ, ಇಂದ್ರನು ಈಶ್ವರಾರಾಧನೆಯಿಂದ ಸ್ವರ್ಗಲೋಕವನ್ನು ಪಡೆದು ತೃಪ್ತನಾದಂತೆಯೂ, ಮತ್ತು ಹಸಿವಿನಿಂದ ಪೀಡಿತಗಳಾದ ಹಸುಗಳು ಹಸುರು ಹುಲ್ಲನ್ನು ನೋಡಿ ಸಂತೋಷಗೊಂಡಂತೆಯೂ, ನಾವು ಕಾಶೀಕಥೆಯೆಂಬ ಸುಧೆಯನ್ನು ಪಾನಮಾಡಿ ತೃಪ್ತರಾಗಿರುವೆವು. ||೧೫-೧೬-೧೭||

ಸಸ್ಯಗಳು ಹದವಾದ ಮಳೆಯನ್ನು ಹೊಂದಿ ಹುಲುಸಾಗಿ ಬೆಳೆದಂತೆಯೂ, ಹಸಿದವರು ಯಥೇಚ್ಛವಾದ ಅನ್ನವನ್ನು ಹೊಂದಿ ತೃಪ್ತರಾದಂತೆಯೂ, ಹಿಮಬಾಧೆಯಿಂದ ಪೀಡಿತರಾದವರು ಯಥೇಚ್ಛವಾದ ಬಟ್ಟೆಗಳನ್ನು ಪಡೆದು ಸಂತೋಷಗೊಂಡಂತೆಯೂ, ನಾವು ಕಾಶೀಕಥಾಮೃತವನ್ನು ಪಾನಮಾಡಿ ಸಂತುಷ್ಟರಾಗಿರುವೆವು. ||೧೮-೧೯||

ಯಥಾ ಯಥೇಷ್ಟಂ ದ್ರವಿಣಂ ಲಬ್ಧ್ವಾ ಪ್ರೀತಾ ಧನೈಷಿಣಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೨೧॥

ಯಥಾ ಕಾಮಾತುರಾಃ ಪ್ರಾಪ್ಯ ಸುಪ್ರೀತಾ ನವಯೌವನಾಂ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೨೨॥

ಯಥಾ ಪುತ್ರೇಷಿಣಃ ಪುತ್ರಾನ್ಲಬ್ಧ್ವಾ ಪ್ರೀತಾಶ್ಚಿರಾಯುಷಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೨೩॥

ಯಥಾ ಪಿತಾ ಸುತಾನ್ದೃಷ್ಟ್ವಾ ಪ್ರೀತೋ ವಿದ್ಯಾಮದಾನ್ವಿತಾನ್ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೨೪॥

ಯಥಾ ವಿದ್ಯಾ ದ್ವಿಜಂ ಪ್ರಾಪ್ಯ ಸುಪ್ರೀತಾಃ ಶಿಷ್ಟಸಂಮತಂ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೨೫॥

ಯಥಾ ಪಾತ್ರಮನುಪ್ರಾಪ್ಯ ಸುಪ್ರೀತೋ ದಾನತತ್ಪರಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೨೬॥

ಯಥಾ ದಾತಾರಮಭ್ಯೇತ್ಯ ಸುಪ್ರೀತೋಽತಿಥಿರಾತುರಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೨೭॥

ಕಾಮಪೀಡಿತರು ನವಯೌವ್ವನದಿಂದ ಕೂಡಿರುವ ತರುಣಿಯನ್ನು ಪಡೆದು ಸಂತುಷ್ಟರಾಗುವಂತೆಯೂ, ಪುತ್ರಾರ್ಥಿಗಳು ದೀರ್ಘಾಯುಸ್ಸಿನಿಂದ ಕೂಡಿದ ಪುತ್ರರನ್ನು ಹೊಂದಿ ಆನಂದಭರಿತರಾಗುವಂತೆಯೂ, ಮತ್ತು ಧನಾರ್ಥಿಗಳು ಹೇರಳವಾದ ಧನವನ್ನು ಪಡೆದು ಸಂತುಷ್ಟರಾಗುವಂತೆಯೂ, ಕಾಶೀಕಥಾಮೃತವನ್ನು ಪಾನಮಾಡಿ ನಾವು ಸಂತೋಷಭರಿತರಾಗಿರುವೆವು. ||೨೧-೨೨-೨೩||

ತಂದೆಯು ವಿದ್ಯೆಯಿಂದ ಗರ್ವಿಷ್ಠರಾದ ತನ್ನ ಮಕ್ಕಳನ್ನು ನೋಡಿ ಸಂತುಷ್ಟನಾದಂತೆಯೂ, ವಿದ್ಯೆಗಳು ಸಜ್ಜನರ ಮನ್ನಣೆಗೆ ಪಾತ್ರನಾದ ಬ್ರಾಹ್ಮಣನನ್ನು ಪಡೆದು ತೃಪ್ತವಾದಂತೆಯೂ, ಮತ್ತು ದಾನಶೀಲನು ಸತ್ಪಾತ್ರನನ್ನು ಪಡೆದು ಸಂತುಷ್ಟನಾಗುವಂತೆಯೂ ನಾವು ಕಾಶೀಕಥಾಮೃತವನ್ನು ಪಡೆದು ಸುಪ್ರೀತರಾಗಿರುವೆವು. ||೨೪-೨೫-೨೬||

ಹಸಿವಿನಿಂದ ಪೀಡಿತನಾದ ಅತಿಥಿಯು ಅನ್ನದಾನಿಯ ಸಮೀಪವನ್ನು

ಯಥಾ ಚಕೋರಃ ಸುಪ್ರೀತೋ ಲಬ್ಧ್ವಾ ಚಂದ್ರಕಲಾಮೃತಂ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೨೮॥

ಯಥಾ ಮಾಕಂದಮಾಲೋಕ್ಯ ಸುಪ್ರೀತಾ ಪಿಕಸುಂದರೀ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೨೯॥

ಮಕರಂದಂ ಯಥಾಲೋಕ್ಯ ಸುಪ್ರೀತಾ ಮಕರಂದಪಾಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೩೦॥

ಯಥಾ ಪ್ರೋಷಿತಮಾಲೋಕ್ಯ ಪತಿಂ ಪ್ರೀತಾ ಪತಿವ್ರತಾ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೩೧॥

ಯಥಾ ಶೀತಜಲಂ ಪ್ರಾಪ್ಯ ಪಾಂಥಃ ಪ್ರೀತೋಽರ್ಕತಾಪಿತಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೩೨॥

ಯಥಾ ಯಾನಮನುಪ್ರಾಪ್ಯ ಸುಪ್ರೀತಾಃ ಪಾದಪಂಗವಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೩೩॥

ಪಡೆದು ಸಂತೋಷಭರಿತನಾಗುವಂತೆಯೂ, ಚಕೋರ ಪಕ್ಷಿಯು ಅಮೃತತುಲ್ಯವಾದ ಚಂದ್ರಿಕೆಯನ್ನು ಹೊಂದಿ ಸಂತೋಷದಿಂದ ಹಿಗ್ಗಿ ಮೆರೆಯುವಂತೆಯೂ, ಮತ್ತು ಹೆಣ್ಣುನವಿಲು ಕೋಮಲವಾದ ಮಾವಿನ ಚಿಗುರನ್ನು ನೋಡಿ ಸಂತೋಷಗೊಳ್ಳುವಂತೆಯೂ ನಾವು ಕಾಶೀಕಥಾಮೃತವನ್ನು ಹೊಂದಿ ಸುಪ್ರೀತರಾಗಿರುವೆವು. ॥೨೭-೨೮-೨೯॥

ಭ್ರಮರಗಳು ಮಕರಂದವನ್ನು ನೋಡಿ ಸಂತೋಷವನ್ನು ಹೊಂದಿದಂತೆಯೂ, ಪತಿವ್ರತೆಯಾದ ರಮಣಿಯು ದೇಶಾಂತರಕ್ಕೆ ಹೋಗಿ ಮರಳಿ ಬಂದ ತನ್ನ ಪತಿಯನ್ನು ನೋಡಿ ಸಂತೋಷಭರಿತಳಾಗುವಂತೆಯೂ, ಮತ್ತು ಸೂರ್ಯನ ಪ್ರಖರವಾದ ಕಿರಣಗಳಿಂದ ಸಂತಪ್ತನಾದವನು ತಣ್ಣಗಿರುವ ನೀರನ್ನು ಪಡೆದು ಸುಪ್ರೀತನಾಗುವಂತೆಯೂ, ನಾವು ಕಾಶೀಕಥೆಯೆಂಬ ಅಮೃತವನ್ನು ಪಾನಮಾಡಿ ಆನಂದತುಂದಿಲರಾಗಿರುವೆವು. ॥೩೦-೩೧-೩೨॥

ಹೆಳವನು (ಕಾಲಿಲ್ಲದವನು, ಕುಂಟನು) ಗಮನೋಪಯೋಗಿಯಾದ ವಾಹನವನ್ನು ಪಡೆದು ಸಂತೋಷಭರಿತನಾಗುವಂತೆಯೂ, ಮೂಕನು ಉಜ್ಜ್ವಲ

ಯಥೈವಮೂಕಃ ಸಂಪ್ರಾಪ್ಯ ಪ್ರೀತೋ ವಾಗ್ಜಾಲಮುತ್ತಮಂ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೩೪॥

ಯಥಾ ನೇತ್ರಬಲಂ ಪ್ರಾಪ್ಯ ಪ್ರೀತಾ ಜನ್ಮಾಂಧವೃತ್ತಯಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೩೫॥

ಯಥಾ ಶ್ರೋತ್ರಬಲಂ ಪ್ರಾಪ್ಯ ಪ್ರೀತಾ ಬಧಿರವೃತ್ತಯಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೩೬॥

ಯಥಾ ಜಿಹ್ವೇಂದ್ರಿಯಂ ಪ್ರಾಪ್ಯ ಪ್ರೀತಾಃ ಸ್ವಾದುರಸಗ್ರಹಾಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೩೭॥

ಯಥಾ ಘ್ರಾಣಮನುಪ್ರಾಪ್ಯ ಪ್ರೀತಾ ಘ್ರಾಣವಿವರ್ಜಿತಾಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೩೮॥

ಯಥಾ ತ್ವಗಿಂದ್ರಿಯಂ ಪ್ರಾಪ್ಯ ಪ್ರೀತಾಃ ಸ್ತಬ್ಧತ್ವಗಿಂದ್ರಿಯಾಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೩೯॥

ಯಥಾ ಮನೋ ವಶೀಕೃತ್ಯ ಸುಪ್ರೀತಾಶ್ಚಿತ್ತಚಂಚಲಾಃ ।
ಕಾಶೀಕಥಾಸುಧಾಂ ಪ್ರಾಪ್ಯ ಸುಪ್ರೀತಾಃ ಸ್ಮ ತಥಾ ವಯಂ ॥೪೦॥

ವಾದ ವಾಕ್ಯಲಹರಿಯುನ್ನು ಹೊಂದಿ ಸಂತೋಷಭರಿತನಾಗುವಂತೆಯೂ ಮತ್ತು ಕುರುಡನು ಚಕ್ಷುರಿಂದ್ರಿಯವನ್ನು ಪಡೆದು ಆನಂದಭರಿತನಾಗುವಂತೆಯೂ ನಾವು ಕಾಶೀಕ್ಷೇತ್ರದ ಕಥಾಮೃತವನ್ನು ಹೊಂದಿ ಸಂತುಷ್ಟರಾಗಿರುವೆವು. ||೩೩-೩೪-೩೫||

ಕಿವುಡರು ಶ್ರೋತ್ರೇಂದ್ರಿಯದ ಶಕ್ತಿಯನ್ನು ಪಡೆದು ಸಂತೋಷಭರಿತರಾಗುವಂತೆಯೂ, ರಸನೇಂದ್ರಿಯವಿಲ್ಲದವರು ಅದನ್ನು ಹೊಂದಿ ಸವಿಯಾದ ರಸವನ್ನು ಆಸ್ವಾದಿಸಿ ಆನಂದಪಡುವಂತೆಯೂ ನಾವು ಕಾಶೀಕ್ಷೇತ್ರವನ್ನು ಪಡೆದು ಸಂತೋಷಭರಿತರಾಗಿರುವೆವು. ||೩೬-೩೭||

ಘ್ರಾಣೇಂದ್ರಿಯವಿಲ್ಲದವರು ಅದನ್ನು ಹೊಂದಿ ಸಂತುಷ್ಟರಾಗುವಂತೆಯೂ, ತ್ವಗಿಂದ್ರಿಯವಿಲ್ಲದವರು ತ್ವಗಿಂದ್ರಿಯವನ್ನು ಪಡೆದು ಸುಪ್ರೀತರಾಗುವಂತೆಯೂ

ಪ್ರಾಯಃ ಕೃತಾನಿ ಪುಣ್ಯಾನಿ ಪೂರ್ವಮಸ್ಮಾಭಿರಾದರಾತ್ ।
ಕಥಂ ಪ್ರಾಪ್ಸ್ಯಾಮ್ಯನ್ಯಥಾಸ್ಮಾಭಿಃ ನ್ಯೈಷಾ ಕಾಶೀಕಥಾಸುಧಾ ॥೪೧॥

ಕಾಶೀಕಥಾಸುಧಾದಾನಂ ಮಹದ್ದಾನಮಿದಂ ಮುನೇ ।
ನ ತಸ್ಮಾದಧಿಕಂ ದಾನಂ ಸತ್ಯಂ ಸತ್ಯಂ ನ ಸಂಶಯಃ ॥೪೨॥

ಅಸ್ಮಾಸು ದಾನಪಾತ್ರೇಷು ದತ್ತಾ ಕಾಶೀಕಥಾಸುಧಾ ।
ಕಾಶೀಕಥಾಸುಧಾಂ ಪ್ರಾಪ್ಯ ನ ಶೋಚಾಮಃ ಕದಾಚನ ॥೪೩॥

ಅತಃ ಪರಂ ಮುನೇಽಸ್ಮಭ್ಯಂ ಕಾಶೀಸಂಪ್ರಾಪ್ತಿಸಾಧನಂ ।
ವದ ಕಾರುಣಿಕೋ ಯಸ್ಮಾದ್ಭವಾನಸ್ತಿ ವಿಚಕ್ಷಣಃ ॥೪೪॥

ಮತ್ತು ಚಂಚಲವಾದ ಮನೋವೃತ್ತಿಯುಳ್ಳವರು ಮನಸ್ಸನ್ನು ನಿಗ್ರಹಿಸಿ ತಮ್ಮ ವಶದಲ್ಲಿಟ್ಟುಕೊಂಡು ಅದರಿಂದ ಆನಂದಭರಿತರಾಗುವಂತೆಯೂ, ನಾವು ಅಮೃತ ತುಲ್ಯವಾದ ಕಾಶೀಕ್ಷೇತ್ರದ ಕಥೆಯನ್ನು ಕೇಳಿ ಸುಪ್ರೀತರಾಗಿರುವೆವು.॥೩೮-೩೯-೪೦॥

ನಾವು ಪೂರ್ವಜನ್ಮದಲ್ಲಿ ಪ್ರಾಯಶಃ ಅನೇಕ ಪುಣ್ಯಕರ್ಮಗಳನ್ನು ಆಚರಿಸಿರ ಬಹುದು. ಹಾಗಿಲ್ಲದಿದ್ದರೆ ನಾವು ಪವಿತ್ರವಾದ ಮತ್ತು ಅಮೃತದಂತೆ ಸವಿಯಾದ ಈ ಕಾಶೀಕ್ಷೇತ್ರದ ಕಥೆಯನ್ನು ಕೇಳುತ್ತಿದ್ದೆವೆ? ॥೪೧॥

ಓ ಮುನಿಯೇ, ಅಮೃತತುಲ್ಯವಾದ ಕಾಶೀಕ್ಷೇತ್ರಕಥೆಯ ದಾನವು ಮಹ ತ್ತರವಾದ ದಾನವಾಗಿರುವುದು. ಅದಕ್ಕಿಂತಲೂ ಶ್ರೇಷ್ಠವಾದ ಇನ್ನೊಂದು ದಾನ ವಿರುವುದೇ? ಇಲ್ಲ. ಇದು ನಿಜ. ॥೪೨॥

ನೀನು ದಾನಪಾತ್ರರಾದ ನಮಗೆ ಕಾಶೀಕಥೆಯೆಂಬ ಸುಧೆಯನ್ನು ದಾನ ಮಾಡಿರುವೆ. ನಾವು ಅದನ್ನು ಸ್ವೀಕರಿಸಿ ಇನ್ನು ಮುಂದೆ ಎಂದಿಗೂ ಶೋಕಕ್ಕೆ ಗುರಿಯಾಗಲಾರೆವು. ॥೪೩॥

ಸೂತಮುನಿಯೇ, ಇನ್ನುಮುಂದೆ ಕಾಶೀಕ್ಷೇತ್ರವನ್ನು ಪಡೆಯುವುದಕ್ಕೆ ಯೋಗ್ಯವಾದ ಸಾಧನಗಳನ್ನು ನಮಗೆ ಹೇಳು. ಚತುರನಾದ ನೀನು ಕರುಣಾನಿಧಿ ಯಾಗಿರುವೆ. ಹೀಗೆಂದು ಶೌನಕಾದಿ ಮುನಿಗಳು ಸೂತಮಹರ್ಷಿಯನ್ನು ಪ್ರಾರ್ಥಿ ಸಲು, ಆಗ ಪರಮ ಕಾರುಣಿಕನಾದ ಸೂತಮುನಿಯು ಅವರನ್ನು ಕುರಿತು ಇಂತೆಂದನು. ॥೪೪॥

॥ ಸೂತ ಉವಾಚ ॥

ಯೂಯಂ ಧನ್ಯತಮಾ ವಿಪ್ರಾ ವಿಪ್ರವೀರ್ಯಸಮುದ್ಭವಾಃ ।
ಯತೋ ಯುಷ್ಮಾಕಮುತ್ಪನ್ನಾ ಪ್ರೀತಿಃ ಕಾಶೀಕಥಾಮೃತೇ ॥೪೫॥

ಕಾಶ್ಯಾಂ ಕಾಶೀಕಥಾಯಾಂ ಚ ಯಸ್ಯ ಶ್ರದ್ಧಾನಪಾಯಿನೀ ।
ಸ ಏವ ಧನ್ಯಃ ಪೂತಾತ್ಮಾ ಸತ್ಯಂ ಸತ್ಯಂ ನ ಸಂಶಯಃ ॥೪೬॥

ಕಾಶ್ಯಾಂ ಶಿವಃ ಸ್ವಯಂ ಸಾಕ್ಷಾತ್ಸಚ್ಚಿದಾನಂದಲಕ್ಷಣಃ ।
ತಸ್ಮಿನ್ಯಸ್ಯ ಭವೇಚ್ಛ್ರದ್ಧಾ ಸ ತು ಧನ್ಯೋ ಮಹಾಶಯಃ ॥೪೭॥

ಯಃ ಕಾಶೀಂ ದ್ವೇಷ್ಟಿ ಮೂಢಾತ್ಮಾ ಸ ಶಿವಂ ದ್ವೇಷ್ಟಿ ವಸ್ತುತಃ ।
ತತಃ ಸ ನಿರಯಂ ಯಾತಿ ಸವಂಶೋ ನಾತ್ರ ಸಂಶಯಃ ॥೪೮॥

ಎಲೈ ಬ್ರಾಹ್ಮಣವೀರ್ಯದಿಂದ ಜನಿಸಿರುವ ವಿಪ್ರರೇ, ಇದೀಗ ನಿಮಗೆ ಕಾಶೀಕಥಾಮೃತವನ್ನು ಕೇಳುವುದರಲ್ಲಿ ಅಗಾಧವಾದ ಪ್ರೀತಿಯು ಜನಿಸಿರುವುದರಿಂದ ನೀವೇ ಧನ್ಯರಾಗಿರುವಿರಿ. ॥೪೫॥

ಯಾವನಿಗೆ ಕಾಶೀಕ್ಷೇತ್ರದಲ್ಲಿಯೂ ಮತ್ತು ಕಾಶೀಕ್ಷೇತ್ರದ ಕಥೆಯಲ್ಲಿಯೂ ಅಗಾಧವಾದ ಮತ್ತು ಅನನ್ಯವಾದ ಭಕ್ತಿಯಿರುವುದೋ ಅವನೇ ಪವಿತ್ರನೂ ಕೃತಕೃತ್ಯನೂ ಆಗಿರುವನು. ॥೪೬॥

ಪವಿತ್ರವಾದ ಕಾಶೀಕ್ಷೇತ್ರದಲ್ಲಿ ಸಚ್ಚಿದಾನಂದಸ್ವರೂಪಿಯಾದ ಪರಶಿವನು ತಾನೇತಾನಾಗಿ ವಾಸವಾಗಿರುವನು. ಹೀಗಿರುತ್ತಿರಲು ಯಾವ ಮನುಜನಿಗೆ ಆ ಪರಶಿವನಲ್ಲಿ ಶ್ರದ್ಧೆಯುಂಟಾಗುವುದೋ ಅವನೇ ಮಹಾತ್ಮನು, ಅವನೇ ಧನ್ಯನು. ॥೪೭॥

ಯಾವ ಮೂಢನು ಕಾಶೀಕ್ಷೇತ್ರವನ್ನು ದ್ವೇಷಿಸುವನೋ ಅವನು ನಿಜವಾಗಿಯೂ ಶಿವದ್ವೇಷಕನೇ ಆಗಿರುವನು. ಅವನು ಅಂತ್ಯದಲ್ಲಿ ನರಕವನ್ನು ಹೊಂದುವನಲ್ಲದೇ ಅವನ ವಂಶದಲ್ಲಿ ಜನಿಸಿದವರೆಲ್ಲರೂ ನರಕವನ್ನು ಪಡೆಯುವರು. ಇದರಲ್ಲಿ ಸಂಶಯಪಡಬೇಕಾದುದಿಲ್ಲ. ॥೪೮॥

ಶಿವಂ ವಿಶ್ವಾಧಿಕಂ ಸಾಂಬಮನನ್ಯಸದೃಶಂ ಪ್ರಭುಂ ।
ಯೋಽನ್ಯಥಾ ಮನುತೇ ಮೋಹಾತ್ಸ ಭವೇತ್ಪುಲ್ಕಸಾಧಮಃ ॥೪೯॥

ಶಿವದ್ವೇಷೋಽಪಿ ವಿವಿಧಃ ಸ ಮಯಾತ್ರ ನಿರೂಪ್ಯತೇ ।
ಶ್ರೋತವ್ಯಂ ಸಾವಧಾನೇನ ಶುದ್ಧನಿಶ್ಚಲಚೇತಸಾಂ ॥೫೦॥

ವಿಷ್ಣ್ವಾದಿದೇವತಾಸಾಮ್ಯಂ ಯೋ ವದೇದೀಶ್ವರೇ ಶಿವೇ ।
ಸ ದುರ್ಭಗಃ ಶಿವದ್ವೇಷ್ಟಾ ದ್ವೇಷಸ್ತತ್ಸಾಮ್ಯಧೀಃ ಶಿವೇ ॥೫೧॥

ಶಿವೇನ ದೇವದೇವೇನ ಸದೃಶೋ ನಾಸ್ತಿ ಸರ್ವಥಾ ।
ಯಸ್ಮಾದ್ವಿಶ್ವಾಧಿಕತ್ವೇನ ಶಿವಃ ಸರ್ವಶ್ರುತಿಶ್ರುತಃ ॥೫೨॥

ಯತಃ ಶ್ರುತೌ ಶಿವಾನ್ಯಸ್ಯ ವಿಷ್ಣೋರನ್ಯಸ್ಯ ವಾ ದ್ವಿಜಾಃ ।
ವಿಶ್ವಾಧಿಕತ್ವಂ ನೈವೋಕ್ತಂ ಸ್ತೋತ್ರಾರ್ಥಮಪಿ ಸರ್ವಥಾ ॥೫೩॥

ಶಾಂತಮೂರ್ತಿಯೂ, ವಿಶಾಲವಾದ ಈ ಪ್ರಪಂಚಕ್ಕಿಂತಲೂ ಅಧಿಕವಾದ ಪಾರಮಾರ್ಥಿಕಸತ್ತೆಯುಳ್ಳವನೂ, ಅರ್ಧನಾರೀಶ್ವರಸ್ವರೂಪನೂ, ನಿರುಪಮನೂ, ನಿಗ್ರಹಾನುಗ್ರಹಶಕ್ತನೂ ಆದ ಆ ಶಿವನನ್ನು ಯಾವನು ಅಜ್ಞಾನಕ್ಕೆ ಗುರಿಯಾಗಿ ದ್ವೇಷಿಸುವನೋ, ಅವನು ಚಂಡಾಲನಿಗಿಂತಲೂ ನೀಚನಾಗಿರುವನು. ॥೪೯॥

ಎಲೈ ಮುನಿಪುಂಗವರೇ, ಶಿವದ್ವೇಷವು ನಾನಾವಿಧವಾಗಿರುವುದು. ಅದನ್ನೀಗ ನಾವು ನಿಮಗೆ ತಿಳಿಯಪಡಿಸುವೆನು. ಜಾಗರೂಕರಾಗಿ ಚಿತ್ತೈಕಾಗ್ರ್ಯದಿಂದ ಕೇಳಿರಿ. ॥೫೦॥

ಯಾವನು, ಈಶ್ವರನನ್ನು ವಿಷ್ಣುವೇ ಮೊದಲಾದ ದೇವತೆಗಳಿಗೆ ಸಮಾನನೆಂದು ಹೇಳುವನೋ, ಪಾಪಿಯಾದ ಅವನೂ ಶಿವದ್ವೇಷಿಯೆಂದೆನಿಸಿಕೊಳ್ಳುವನು. ಶಿವನು ವಿಷ್ಣುವಿಗೆ ಸಮಾನನೆಂಬ ತಿಳಿವಳಿಕೆಯೇ ದ್ವೇಷವೆಂದೆನಿಸಿಕೊಳ್ಳುವುದು. ॥೫೧॥

ದೇವೇಶನಾದ ಶಿವನಿಗೆ ಸದೃಶನಾದ ಇನ್ನೊಬ್ಬನೆಂದಿಗೂ ಇರುವುದಿಲ್ಲ. ಸಕಲ ವೇದಗಳೂ ಸಹ ಶಿವನೇ ಸರ್ವಶ್ರೇಷ್ಠನಾಗಿರುವನೆಂದು ಸಾರಿಸಾರಿ ಹೇಳುತ್ತಿರುವುವು. ॥೫೨॥

ಏಕೆಂದರೆ ವೇದದಲ್ಲಿ ವಿಷ್ಣುವನ್ನಾಗಲಿ ಅಥವಾ ಇನ್ನಿತರ ಯಾವ ದೇವತೆಗಳನ್ನೇ ಆಗಲಿ ಸ್ತುತಿಗೋಸ್ಕರವಾದರೂ ಸರ್ವಶ್ರೇಷ್ಠರೆಂದು ಹೇಳಿರುವುದಿಲ್ಲ. ॥೫೩॥

ಅತೋ ವಿಶ್ವಾಧಿಕೋ ರುದ್ರಃ ಕಥಂ ವಿಷ್ಣುಸಮೋ ಭವೇತ್ ।
ರುದ್ರೋ ವಿಶ್ವಾಧಿಕಃ ಶ್ರೇಷ್ಠೋ ದೇವೋತ್ತಮ ಇತಿ ಶ್ರುತೇಃ ॥೫೪॥

ವಿಪ್ರಾ ವಿಶ್ವಾಧಿಕೋ ರುದ್ರೋ ಯದಿ ವಿಷ್ಣುಸಮಸ್ತದಾ ।
ಶ್ರುತಿರ್ವಿಶ್ವಾಧಿಕೋ ರುದ್ರ ಇತ್ಯೇಷಾ ಬಾಧಿತಾ ಭವೇತ್ ॥೫೫॥

ವಿಷ್ಣೋರ್ವಿಶ್ವಾಧಿಕಃ ಸೋಮೋ ಜನಿತೇತಿ ಶ್ರುತಿರ್ಯತಃ ।
ತತೋ ವಿಷ್ಣುರ್ನ ಸೋಮೇನ ಜನಕೇನ ಸಮೋ ಧ್ರುವಂ ॥೫೬॥

ಶಿವಂ ವಿಶ್ವಾಧಿಕತ್ವೇನ ಶ್ರುತಿಶ್ರುತಮನಾಮಯಂ ।
ಯೋ ವಿಷ್ಣುಸಾಮ್ಯತಾಂ ಬ್ರೂಯಾತ್ಸ ವೇದೇಭ್ಯೋ ಬಹಿಷ್ಕೃತಃ ॥೫೭॥

ಪವನಾದಿಭಿರಪ್ಯೇವಂ ನ ಸಮಃ ಸೋಮ ಉಚ್ಯತೇ ।
ಸೋಮೋಽಯಂ ಪವನಾದೀನಾಂ ಜನಿತೇತಿ ಶ್ರುತಿರ್ಯತಃ ॥೫೮॥

ಆದುದರಿಂದ ಸರ್ವಶ್ರೇಷ್ಠನಾದ ರುದ್ರನು ವಿಷ್ಣುವಿಗೆ ಸಮಾನನಾಗಿರುವ ಬಗೆ ಹೇಗೆ? "ಆ ರುದ್ರನು ಸರ್ವಶ್ರೇಷ್ಠನೂ ದೇವತೆಗಳಲ್ಲಿ ಅಗ್ರೇಸರನೂ ಆಗಿರುವನು" ಎಂದು ವೇದವು ಹೇಳುವುದು. ॥೫೪॥

ಎಲೈ ಬ್ರಾಹ್ಮಣರೇ, ಸರ್ವಶ್ರೇಷ್ಠನಾದ ರುದ್ರನು ವಿಷ್ಣುವಿಗೆ ಸದೃಶನಾಗಿರುವುದಾದರೆ "ರುದ್ರನು ಸರ್ವಶ್ರೇಷ್ಠನು" ಎಂದು ತಿಳಿಸುವ ವೇದವು ಅಪ್ರಮಾಣವಾದೀತು. ॥೫೫॥

ಸರ್ವಶ್ರೇಷ್ಠನಾದ ರುದ್ರನಿಂದ ವಿಷ್ಣುವು ಜನಿಸಿದನೆಂದು ಶ್ರುತಿಯು ಹೇಳುವುದು. ಹೀಗಿರುತ್ತಿರಲು ರುದ್ರನ ಪುತ್ರನಾದ ವಿಷ್ಣುವು ಜನಕನಾದ ರುದ್ರನಿಗೆ ಎಂದಿಗೂ ಸದೃಶನಾಗಲಾರನು. ॥೫೬॥

ವೇದಗಳಲ್ಲಿ ಸರ್ವಶ್ರೇಷ್ಠನೆಂದು ಪ್ರಸಿದ್ಧನೂ ನಿಷ್ಕಲಂಕನೂ ಆದ ಶಿವನನ್ನು ಯಾವ ಮನುಷ್ಯನು ವಿಷ್ಣುವಿಗೆ ಸದೃಶನೆಂದು ಹೇಳುವನೋ, ಅವನನ್ನು ವೇದಗಳು ಬಹಿಷ್ಕರಿಸುವುವು. ॥೫೭॥

ಇದೇ ರೀತಿಯಲ್ಲಿ ಉಮಾಸಹಿತನಾದ ಪರಶಿವನು ವಾಯು, ಆಕಾಶ, ಪೃಥಿವೀ ಮುಂತಾದ ವಸ್ತುಗಳ ಸಾಮ್ಯವನ್ನೂ ಸಹ ಪಡೆಯಲಾರನು. ಏಕೆಂದರೆ

ಶಿವಂ ವಿಶ್ವಾಧಿಕತ್ವೇನ ಶ್ರುತಿಶ್ರುತಮನಾಮಯಂ ।
ಯೋ ವಿಷ್ಣುಸಾಮ್ಯತಾಂ ಬ್ರೂಯಾತ್ಸ ವೇದೇಭ್ಯೋ ಬಹಿಷ್ಕೃತಃ ॥೫೮॥

ವಿಶ್ವಾಧಿಕಃ ಶಿವೋ ನೇತಿ ಯೋ ವದೇನ್ಮೋಹಿತೋಽಪಿ ವಾ ।
ಸ ಮದ್ಯಪಜಚಂಡಾಲರೇತೋಬುದ್ಬುದಜೋ ಧ್ರುವಂ ॥೫೯॥

ವಿಶ್ವಾಧಿಕೇ ಮಹಾರುದ್ರೇ ಯೋ ವಿಷ್ಣುಸಮತಾಂ ವದೇತ್ ।
ಸ ಮದ್ಯಪಜಚಂಡಾಲರೇತೋಬುದ್ಬುದಜೋ ಧ್ರುವಂ ॥೬೦॥

ವಿಶ್ವಾಧಿಕಂ ಮಹಾರುದ್ರಂ ಯೋಽನ್ಯಥಾ ವರ್ಣಯೇದ್ಭ್ರಮಾತ್ ।
ಸ ಮದ್ಯಪಜಚಂಡಾಲರೇತೋಬುದ್ಬುದಜೋ ಧ್ರುವಂ ॥೬೧॥

ಆ ಪರಶಿವನು ವಾಯುವೇ ಮೊದಲಾದ ವಸ್ತುಗಳಿಗೆ ಜನಕನಾಗಿರುವನೆಂದು ವೇದವೇ ಹೇಳುತ್ತಿರುವುದು. ॥೫೮॥

ಸರ್ವಶ್ರೇಷ್ಠನೆಂದು ವೇದಗಳಲ್ಲಿ ಪ್ರಸಿದ್ಧನೂ, ನಿಷ್ಕಲಂಕನೂ ಆದ ಪರಶಿವನನ್ನು ಯಾವ ಮನುಜನು ವಿಷ್ಣುವಿಗೆ ಸದೃಶನೆಂದು ಹೇಳುವನೋ, ಅವನನ್ನು ವೇದಗಳು ಬಹಿಷ್ಕರಿಸುವುವು. ॥೫೮॥

ಅಜ್ಞಾನದಿಂದಲೇ ಆಗಲಿ, ಯಾವನು ಶಿವನು ಸರ್ವಶ್ರೇಷ್ಠನಲ್ಲವೆಂಬುದಾಗಿ ಹೇಳುವನೋ ಅವನು ಮದ್ಯಪಾನಮಾಡುವವನಿಂದ ಜನಿಸಿದ ಚಂಡಾಲನ ರೇತಸ್ಸಿನಿಂದಲೇ ಜನಿಸಿದವನಾಗಿರುವನು. ಇದು ನಿಜ. ॥೫೯॥

ಸರ್ವಶ್ರೇಷ್ಠನಾದ ಶಿವನು ವಿಷ್ಣುವಿಗೆ ಸದೃಶನಾದವನೆಂದು ಯಾವನು ಹೇಳುವನೋ, ಅವನು ಸುರಾಪಾನವನ್ನು ಮಾಡುವ ಚಂಡಾಲನ ವೀರ್ಯದಿಂದಲೇ ಜನಿಸಿದವನಾಗಿರುವನು. ಇದು ನಿಜ. ॥೬೦॥

ಯಾವ ನರನು ಅಜ್ಞಾನದಿಂದ ಸರ್ವಶ್ರೇಷ್ಠನಾದ ಶಿವನನ್ನು ಅನಿತ್ಯವಾದ ಇತರ ವಸ್ತುಗಳೊಂದಿಗೆ ಹೋಲಿಸುವನೋ, ಅವನು ನಿಜವಾಗಿಯೂ ಸುರಾಪಾನವನ್ನು ಮಾಡುವ ಚಂಡಾಲನ ರೇತಸ್ಸಿನಿಂದಲೇ ಜನಿಸಿದವನಾಗಿರುವನು. ॥೬೧॥

ಚಕ್ರಾಂಕಗ್ರಾವಸಾಮ್ಯೇನ ಶಿವಲಿಂಗಸ್ಯ ಪೂಜನಂ ।
ಶಿವದ್ವೇಷಃ ಸ ತು ದ್ವೇಷಃ ಸರ್ವಥಾ ನಿರಯಪ್ರದಃ ॥೬೨॥

ಶಿವಲಿಂಗಂ ಶಿವಾಕಾರಂ ಚಕ್ರಾಂಕಪ್ರಸ್ತರೈಃ ಸಹ ।
ಸಂನಿವೇಶ್ಯ ಮಹಾಪಾಪೈಃ ಸಂಯುತೋ ಭವತಿ ಧ್ರುವಂ ॥೬೩॥

ಅತ್ಯುತ್ತಮಸ್ಥಾನಸಂಸ್ಥಂ ಶಿವಲಿಂಗಂ ಶಿವಾತ್ಮಕಂ ।
ಪೂಜನೀಯಂ ಪ್ರಯತ್ನೇನ ತ್ಯಕ್ತ್ವಾನ್ಯಾರಾಧನಂ ಯತಃ ॥೬೪॥

ಪತಿವ್ರತಾನ್ಯಭರ್ತಾರಂ ತ್ಯಕ್ತ್ವಾ ಸ್ವಪತಿಗಾ ಯಥಾ ।
ತಥಾ ದ್ವಿಜೈರನ್ಯದೇವಾಸ್ತ್ಯಾಜ್ಯಾಃ ಪೂಜ್ಯೋ ಮಹೇಶ್ವರಃ ॥೬೫॥

ಮಹೇಶ್ವರಾತಿರಿಕ್ತಂ ಯೋ ಭ್ರಮೇಣಾಪ್ಯುಪಧಾವತಿ ।
ಸ ಚಂಡಾಲ ಇತಿ ಜ್ಞೇಯಃ ಸತ್ಯಂ ಸತ್ಯಂ ನ ಸಂಶಯಃ ॥೬೬॥

ಶಿವಲಿಂಗವನ್ನು ಚಕ್ರಾಂಕಿತವಾದ ಸಾಲಿಗ್ರಾಮ ಶಿಲೆಗೆ ಸಮಾನವೆಂದು ತಿಳಿದು ಪೂಜಿಸುವುದು ಶಿವದ್ವೇಷವೆಂದೆನಿಸಿಕೊಳ್ಳುವುದು. ಇದರಿಂದ ನರಕಪ್ರಾಪ್ತಿಯು ತಪ್ಪದು. ||೬೨||

ಈಶ್ವರಸ್ವರೂಪವಾದ ಶಿವಲಿಂಗವನ್ನು ಚಕ್ರಾಂಕಶಿಲೆಗಳೊಂದಿಗೆ ಸಮವಾಗಿ ಭಾವಿಸಿ ಮಹತ್ತರವಾದ ಪಾಪಗಳಿಗೆ ಗುರಿಯಾಗುವನು. ಇದು ನಿಜ. ||೬೩||

ಇತರ ಕ್ಷುದ್ರದೇವತೆಗಳ ಆರಾಧನೆಯನ್ನು ಬಿಟ್ಟು ಶಿವಾಕಾರವಾದ ಶಿವ ಲಿಂಗವನ್ನು ಅತ್ಯಂತ ಪರಿಶುದ್ಧವಾದ ಸ್ಥಳದಲ್ಲಿರಿಸಿ ತಪ್ಪದೇ ಆರಾಧಿಸಬೇಕು.||೬೪||

ಪತಿವ್ರತೆಯಾದ ಸ್ತ್ರೀಯು ಪರಪುರುಷರನ್ನು ಸೇರದೇ ತನ್ನ ಪತಿಯನ್ನೇ ಸೇರುವಂತೆ, ದ್ವಿಜರು ಇತರ ದೇವತೆಗಳನ್ನು ಆರಾಧಿಸದೇ ಪರಶಿವನನ್ನೇ ಆರಾಧಿಸ ಬೇಕು. ||೬೫||

ಅಜ್ಞಾನದಿಂದಲಾದರೂ ಆಗಲಿ, ಯಾವನು ಶಿವನನ್ನು ಬಿಟ್ಟು ಇತರ ದೇವತೆ ಗಳನ್ನು ಆರಾಧಿಸುವನೋ ಅವನನ್ನು ಚಂಡಾಲನೆಂದೇ ಭಾವಿಸಬೇಕಾಗಿರುವುದು. ಇದು ನಿಜ. ಇದರಲ್ಲಿ ಸಂಶಯಪಡಬೇಕಾದುದಿಲ್ಲ. ||೬೬||

ವಿಭೂತಿಧಾರಣಂ ತ್ಯಕ್ತ್ವಾ ಯಃ ಶಿವಂ ಪೂಜಯಿಷ್ಯತಿ ।
ಸ ದುರ್ಭಗಃ ಶಿವದ್ವೇಷ್ಟಾ ಸ ದ್ವೇಷೋ ನರಕಪ್ರದಃ ॥೬೭॥

ಸರ್ವಕರ್ಮಬಹಿರ್ಭೂತೋ ಭಸ್ಮಧಾರಣವರ್ಜಿತಃ ।
ಭಸ್ಮನಾ ರಹಿತಂ ಕರ್ಮ ವೃಥಾ ಭವತಿ ಸರ್ವಥಾ ॥೬೮॥

ವಿಭೂತಿಧಾರಣಂ ತ್ಯಕ್ತ್ವಾ ಕುರ್ವನ್ ಹೇಮತುಲಾಮಪಿ ।
ತತ್ಫಲಂ ನ ಸಮಾಪ್ನೋತಿ ಪತಿತೋಽಪಿ ಭವಿಷ್ಯತಿ ॥೬೯॥

ಸಂಧ್ಯಾಶಿವಾರ್ಚನಾದೀನಿ ಕರ್ಮಾಣ್ಯೇತಾನಿ ವಸ್ತುತಃ ।
ವೈದಿಕಾನಿ ತತಸ್ತೇಷು ಕರ್ತವ್ಯಂ ಭಸ್ಮಧಾರಣಂ ॥೭೦॥

ಯಥೋಪವೀತರಹಿತೈಃ ಸಂಧ್ಯಾ ನ ಕ್ರಿಯತೇ ದ್ವಿಜೈಃ ।
ತಥಾ ಸಂಧ್ಯಾ ನ ಕರ್ತವ್ಯಾ ವಿಭೂತಿರಹಿತೈರಪಿ ॥೭೧॥

ಯಾವನು ವಿಭೂತಿಯನ್ನು ಧರಿಸದೇ ಶಿವನನ್ನು ಪೂಜಿಸುವನೋ, ದುರ್ಭಾಗ್ಯನಾದ ಅವನೇ ಶಿವದ್ವೇಷಿಯೆಂದೆನಿಸಿಕೊಳ್ಳುವನು. ಆದರಿಂದ ಅವನಿಗೆ ನರಕವು ತಪ್ಪದು. ॥೬೭॥

ಭಸ್ಮವನ್ನು ಧರಿಸದಿರುವವನು ಸಕಲ ಕರ್ಮಗಳಿಂದಲೂ ಬಹಿಷ್ಕೃತನಾಗಿರುವನು. ಭಸ್ಮವನ್ನು ಧರಿಸದೇ ಆಚರಿಸಿದ ಕರ್ಮವು ಸರ್ವಪ್ರಕಾರಗಳಿಂದಲೂ ನಿಷ್ಫಲವಾದ ಕರ್ಮವೇ ಸರಿ. ॥೬೮॥

ಭಸ್ಮಧಾರಣೆಯನ್ನು ಬಿಟ್ಟು ಚಿನ್ನದ ತುಲಾಭಾರವನ್ನು ಮಾಡಿಸಿಕೊಂಡರೂ ಸಹ ಆ ಕರ್ಮವು ನಿಷ್ಫಲವಾಗುವುದಲ್ಲದೇ ಅವನು ಪತಿತನೂ ಆಗುವನು. ॥೬೯॥

ಸಂಧ್ಯಾವಂದನೆ, ಈಶ್ವರಾರಾಧನೆ ಮುಂತಾದ ಕರ್ಮಗಳು, ವೇದೋಕ್ತವಾದ ಕರ್ಮಗಳಾಗಿರುವುವು. ಆದುದರಿಂದ ಅವುಗಳನ್ನು ಆಚರಿಸುವಾಗ ತಪ್ಪದೇ ಭಸ್ಮಧಾರಣೆಯನ್ನು ಮಾಡಲೇಬೇಕು. ॥೭೦॥

ತ್ರೈವರ್ಣಿಕರು ಯಜ್ಞೋಪವೀತವಿಲ್ಲದ ಸಮಯದಲ್ಲಿ ಸಂಧ್ಯಾವಂದನೆಯನ್ನು ಹೇಗೆ ಆಚರಿಸುವುದಿಲ್ಲವೋ ಅದರಂತೆಯೇ ಭಸ್ಮವನ್ನು ಧರಿಸದೇ ಸಂಧ್ಯಾವಂದನೆಯನ್ನು ಆಚರಿಸಬಾರದು. ॥೭೧॥

ಗತೋಪವೀತ್ಯೈಃ ಸಂಧ್ಯಾಯಾಂ ಕಾರ್ಯಃ ಪ್ರತಿನಿಧಿಃ ಕ್ವಚಿತ್ ।
ವಿಭೂತಿಧಾರಣೇ ತ್ವನ್ಯೋ ನಾಸ್ತಿ ಪ್ರತಿನಿಧಿರ್ಧ್ರುವಂ ॥೭೨॥

ವಿಭೂತಿಧಾರಣಾಭಾವೇ ಸಂಧ್ಯಾತ್ಯಾಗೇಽಪಿ ವಸ್ತುತಃ ।
ದ್ವಿಜೋ ನ ಪ್ರಚ್ಯವತ್ಯೇವ ನಾಧಿಕಾರೀ ಯತಸ್ತತಃ ॥೭೩॥

ವಿಭೂತಿಧಾರಣಾಭಾವೇ ಯದಿ ಸಂಧ್ಯಾಂ ಕರೋತಿ ಸಃ ।
ಪ್ರತ್ಯವೇತ್ಯೈವ ಯೇನಾಸೌ ನಾಧಿಕಾರೀ ಯತಸ್ತತಃ ॥೭೪॥

ಆಕಸ್ಮಿಕವಾಗಿ ಯಜ್ಞೋಪವೀತವು [1]ಛಿನ್ನವಾದರೆ ಅಥವಾ ಕಳೆದು ಹೋದರೆ ಆಗ ದ್ವಿಜನು ತನ್ನ ಸ್ಥಳದಲ್ಲಿ ಇನ್ನೊಬ್ಬ ಪ್ರತಿನಿಧಿಯನ್ನಿರಿಸಿ ಅವನ ಮೂಲಕ ತನ್ನ ಸಂಧ್ಯಾವಂದನೆಯನ್ನು ನೆರವೇರಿಸಿಕೊಳ್ಳಬಹುದು. ಆದರೆ ಸಂಧ್ಯಾವಂದನೆಗೆ ಪ್ರತಿನಿಧಿಯು ಇರುವಂತೆ ಭಸ್ಮಧಾರಣೆಗೆ ಪ್ರತಿನಿಧಿಯು ವಿಧಿಸಲ್ಪಟ್ಟಿರುವುದಿಲ್ಲ. ॥೭೨॥

ಒಂದು ವೇಳೆ ದ್ವಿಜನು ವಿಭೂತಿಯನ್ನು ಧರಿಸದೇ ಸಂಧ್ಯಾವಂದನೆಯನ್ನು ಆಚರಿಸದೇ ಇದ್ದರೆ ಆಗ ಅವನು ಪತಿತನಾಗುವುದಿಲ್ಲ. ಏಕೆಂದರೆ ವಿಭೂತಿಯನ್ನು ಧರಿಸದಿರುವಾಗ ಅವನು ಸಂಧ್ಯಾವಂದನೆಗೆ ತಕ್ಕ ಅಧಿಕಾರಿಯೇ ಅಲ್ಲ. ॥೭೩॥

ವಿಭೂತಿಯನ್ನು ಧರಿಸದಿದ್ದರೆ ದ್ವಿಜನಿಗೆ ಸಂಧ್ಯಾವಂದನೆಯಲ್ಲಿ ಅಧಿಕಾರವೇ ಇರುವುದಿಲ್ಲ. ಹೀಗಿರಲು ವಿಭೂತಿಯನ್ನು ಧರಿಸದೇ ಯಾವನು ಸಂಧ್ಯಾವಂದನೆಯನ್ನಾಚರಿಸುವನೋ ಅವನು ಪತಿತನೇ ಆಗುವನು. ಏಕೆಂದರೆ ಭಸ್ಮಧಾರಣೆಯಿಲ್ಲದಿದ್ದರೆ ಅವನು ಸಂಧ್ಯಾವಂದನೆಗೆ ತಕ್ಕ ಅಧಿಕಾರಿಯೇ ಅಲ್ಲ. ಹೀಗಿದ್ದರೂ ಭಸ್ಮಧಾರಣೆಯಿಲ್ಲದೆ ಅವನು ಸಂಧ್ಯಾವಂದನೆಯನ್ನಾಚರಿಸಿದುದರಿಂದ ಪತಿತನೇ ಆಗುವನು. ॥೭೪॥

---

1 ಟಿಪ್ಪಣಿ—ದ್ವಿಜನು ರೋಗಪೀಡಿತನಾಗಿ ಸಂಧ್ಯೆಯನ್ನಾಚರಿಸಲು ಅಶಕ್ತನಾದರೆ ಅಥವಾ ಅಕಸ್ಮಾತ್ತಾಗಿ ಅವನ ಉಪವೀತವು ಅಕಾಲದಲ್ಲಿ ಛಿನ್ನವಾದರೆ, ಆಗ ಅವನು ತನ್ನ ಪುತ್ರ ಪೌತ್ರಾದಿಗಳ ಮೂಲಕವಾಗಲಿ ಅಥವಾ ತನ್ನ ಸಹೋದರರ ಮೂಲಕವಾಗಲಿ ಸಂಧ್ಯಾವಂದನೆಯನ್ನು ಮಾಡಿಸಬಹುದೆಂದು ಶಾಸ್ತ್ರಕಾರರು ಹೇಳಿರುವರು. ಆದರೆ ಭಸ್ಮಧಾರಣೆಯ ವಿಷಯದಲ್ಲಾದರೋ ಪ್ರತಿನಿಧಿಯನ್ನು ಶಾಸ್ತ್ರವು ವಿಧಿಸಿರುವುದಿಲ್ಲ ಎಂದರ್ಥವು.

ಯಥಾಧೀತ್ಯ ತ್ಯಜೇದ್ವೇದಾನ್ಪ್ರತ್ಯವೈತಿ ದ್ವಿಜೋತ್ತಮಃ ।
ಪ್ರತ್ಯವೈತಿ ನ ಸಂದೇಹಃ ಸಂಧ್ಯಾಕೃದ್ಭಸ್ಮವರ್ಜಿತಃ ॥೭೫॥

ಸಂಧ್ಯಾಯಾಂ ನಾಧಿಕಾರೋಽಸ್ತಿ ಮೂರ್ಛಿತಾನಾಂ ಯಥಾ ತಥಾ ।
ವಿಭೂತಿರಹಿತಾನಾಂ ಚ ಸಂಧ್ಯಾಯಾಂ ನಾಧಿಕಾರಿತಾ ॥೭೬॥

ಸಂಪಾದನೀಯಂ ಯತ್ನೇನ ಶ್ರೌತಭಸ್ಮ ಸದಾ ದ್ವಿಜೈಃ ।
ಸ್ಮಾರ್ತಂ ವಾ ತದಭಾವೇಽಪಿ ಲೌಕಿಕಂ ವಾ ಸಮಾಹಿತೈಃ ॥೭೭॥

ಯಾದೃಶಂ ತಾದೃಶಂ ವಾಸ್ತು ಪವಿತ್ರಂ ಭಸ್ಮ ಸಂತತಂ ।
ಧಾರಣೀಯಂ ಪ್ರಯತ್ನೇನ ದ್ವಿಜೈಃ ಸಂಧ್ಯಾದಿಕರ್ಮಸು ॥೭೮॥

ದ್ವಿಜನು ವೇದಾಧ್ಯಯನವನ್ನು ನೆರವೇರಿಸಿ ಬಳಿಕ ಅದನ್ನು ಆವರ್ತಿಸದೇ ಮರೆತರೆ ಪತಿತನಾಗುವಂತೆ, ಭಸ್ಮವನ್ನು ಧರಿಸದೇ ಸಂಧ್ಯಾವಂದನೆಯನ್ನಾಚರಿಸುವವನು ನಿಜವಾಗಿಯೂ ಪತಿತನಾಗುವನು. ಇದರಲ್ಲಿ ಸಂಶಯವಿಲ್ಲ. ॥೭೫॥

ಮೂರ್ಛೆಗೊಂಡವರಿಗೆ ಸಂಧ್ಯಾವಂದನೆಯಲ್ಲಿ ಅಧಿಕಾರವಿಲ್ಲದಿರುವಂತೆ ಭಸ್ಮವನ್ನು ಧರಿಸದಿದ್ದವರಿಗೂ ಸಹ ಸಂಧ್ಯಾವಂದನೆಯಲ್ಲಿ ಅಧಿಕಾರವಿರುವುದಿಲ್ಲ. ॥೭೬॥

ದ್ವಿಜರು ನಿರಂತರವೂ ಪರಿಶುದ್ಧರಾಗಿದ್ದು ಶ್ರೌತಭಸ್ಮವನ್ನು ಸಂಗ್ರಹಿಸಿರಬೇಕು. ಅದಿಲ್ಲದಿದ್ದರೆ ಸ್ಮಾರ್ತಭಸ್ಮವನ್ನು ಸಂಗ್ರಹಿಸಬೇಕು. ಆದೂ ಇಲ್ಲದಿದ್ದರೆ ಕೇವಲ ಲೌಕಿಕವಾದ ಭಸ್ಮವನ್ನಾದರೂ ಧರಿಸಬೇಕು. ॥೭೭॥

ಬ್ರಾಹ್ಮಣನು ಸಂಧ್ಯಾವಂದನೆಯ ಕಾಲದಲ್ಲಿ ಶ್ರೌತಭಸ್ಮ, ಸ್ಮಾರ್ತಭಸ್ಮ, ಲೌಕಿಕಭಸ್ಮವೆಂಬ ಈ ಮೂರು ಬಗೆಯ ಭಸ್ಮದಲ್ಲಿ ಯಾವ ಭಸ್ಮವನ್ನಾದರೂ ಧರಿಸಿರಲೇಬೇಕು. ॥೭೮॥

ಯಜ್ಞಕುಂಡ, ಅಥವಾ ಹೋಮಕುಂಡದಲ್ಲಿದ್ದ ಭಸ್ಮಕ್ಕೆ ಶ್ರೌತಭಸ್ಮವೆಂದೂ, ನಾವು ಸ್ವತಃ ಮಂತ್ರಿಸಿದ ಭಸ್ಮಕ್ಕೆ ಸ್ಮಾರ್ತಭಸ್ಮವೆಂದೂ ಇವೆರಡೂ ಅಲ್ಲದಿರುವ ಕೇವಲ ಅಸಂಸ್ಕೃತವಾದ ಭಸ್ಮಕ್ಕೆ ಲೌಕಿಕಭಸ್ಮವೆಂದೂ ಹೆಸರು.

ನ ಸಂವಿಶಂತಿ ಪಾಪಾನಿ ಭಸ್ಮನಿಷ್ಠೇ ತತಃ ಸದಾ ।
ಕರ್ತವ್ಯಮುತಿಯತ್ನೇನ ಬ್ರಾಹ್ಮಣೈರ್ಭಸ್ಮಧಾರಣಂ ॥೭೯॥

ಯತ್ಕೃತಂ ಭಸ್ಮನಿಷ್ಠೇನ ಶ್ರೀಮಹಾದೇವಪೂಜನಂ ।
ತತ್ಸರ್ವಾಭೀಷ್ಟದಂ ತಸ್ಮಾತ್ಕರ್ತವ್ಯಂ ಭಸ್ಮಧಾರಣಂ ॥೮೦॥

ಶಿವಸ್ಯಾರ್ಧನಮಸ್ಕಾರಃ ಶಿವದ್ವೇಷ ಇತಿ ಶ್ರುತಃ ।
ಸ ಪುಣ್ಯನಾಶಕಸ್ತಸ್ಮಾತ್ತತ್ಕರ್ತಾ ಪಾಪಕೃದ್ಭವೇತ್ ॥೮೧॥

ಸಾಷ್ಟಾಂಗಂ ದಂಡವದ್ಭೂಮೌ ಪ್ರಣಾಮಾ ಭಕ್ತಿಪೂರ್ವಕಂ ।
ಕರ್ತವ್ಯಾಃ ಶ್ರೀಮಹೇಶಾಯ ದೇವಾಧೀಶಾಯ ಸರ್ವದಾ ॥೮೨॥

ಮಾಹೇಶ್ವರಜನದ್ವೇಷಃ ಶಿವದ್ವೇಷ ಇತಿ ಶ್ರುತಃ ।
ಸ ಪುಣ್ಯನಾಶಕಸ್ತಸ್ಮಾತ್ತತ್ಕರ್ತಾ ಪಾಪಕೃದ್ಭವೇತ್ ॥೮೩॥

ನಿರಂತರವೂ ಭಸ್ಮವನ್ನೇ ಧರಿಸಿರುವವನಿಗೆ ಪಾಪವು ಸಂಘಟಿಸುವುದಿಲ್ಲ. ಆದುದರಿಂದ ಬ್ರಾಹ್ಮಣರು ಅನವರತವೂ ತಪ್ಪದೇ ಭಸ್ಮವನ್ನು ಧರಿಸಿರಲೇಬೇಕು.

ನಿರಂತರವೂ ಭಸ್ಮಧಾರಿಯಾದವನು ಆಚರಿಸಿದ ಈಶ್ವರಾರಾಧನೆಯು ಸಕಲ ಇಷ್ಟಾರ್ಥಗಳನ್ನೂ ಈಡೇರಿಸುವುದು. ಆದುದರಿಂದ ಸರ್ವಪ್ರಯತ್ನಗಳಿಂದ ಭಸ್ಮವನ್ನು ಧರಿಸಲೇಬೇಕು. ॥೮೦॥

ಶಿವನನ್ನು ಸಂಪೂರ್ಣವಾಗಿ ನಮಸ್ಕರಿಸದೇ, ಅರ್ಧ ನಮಸ್ಕಾರವನ್ನು ಆಚರಿಸುವುದು ಶಿವದ್ವೇಷವೆಂದೆನಿಸಿಕೊಳ್ಳುವುದು. ಶಿವದ್ವೇಷವು ಇವನು ಸಂಗ್ರಹಿಸಿದ ಪುಣ್ಯವನ್ನು ನಾಶಗೊಳಿಸುವುದು. ಆದುದರಿಂದ ಶಿವನಿಗೆ ಅರ್ಧ ನಮಸ್ಕಾರಗೈಯ್ಯುವವನು ಪಾಪಿಯಾಗುವನು. ॥೮೧॥

ದೇವೇಶನೂ, ಮಂಗಳಮೂರ್ತಿಯೂ ಆದ ಆ ಪರಶಿವನಿಗೆ ಭಕ್ತಿಯಿಂದ ದಂಡಾಕಾರವಾಗಿ ಸಾಷ್ಟಾಂಗಪ್ರಣಾಮಗೈಯ್ಯಬೇಕು. ॥೮೨॥

ಈಶ್ವರಭಕ್ತರೊಂದಿಗೆ ದ್ವೇಷವನ್ನು ಬೆಳೆಸುವುದೇ ಶಿವದ್ವೇಷವೆಂದೆನಿಸಿಕೊಳ್ಳುವುದು. ಅವನ ಪುಣ್ಯಗಳು ಕ್ಷಯಿಸುವುವು. ಆದುದರಿಂದ ಈಶ್ವರಭಕ್ತರನ್ನು ದ್ವೇಷಿಸುವವನು ಪಾಪಿಷ್ಠನೆನಿಸುವನು. ॥೮೩॥

ಸ ದ್ವೇಷಃ ಪಾಪಫಲದಃ ಪಾಪಕರ್ಮಪ್ರವರ್ಧಕಃ ।
ಶಿವಭಕ್ತಾಃ ಪೂಜನೀಯಾಃ ಸ್ವಶಕ್ತ್ಯಾ ಸಾಧು ಸಂತತಂ ॥೮೪॥

ಹೇಮರತ್ನಾನ್ನವಸ್ತ್ರಾದ್ಯೈಃ ಪ್ರೀಣನೀಯಃ ಪ್ರಯತ್ನತಃ ।
ಶಾಂಭವಾನ್ಮಧುರಾಲಾಪೈಃ ಪ್ರಣಾಮಾದ್ಯೈಶ್ಚ ಸಂತತಂ ॥೮೫॥

ಯಃ ಪ್ರೀಣಯೇತ್ಸ ಗೌರೀಶಂ ಪ್ರೀಣಯತ್ಯೇವ ಸರ್ವಥಾ ।
ಯಾ ಕೃತಾ ಶಾಂಭವೇ ಪೂಜಾ ಸಾ ಶಂಭೋರೇವ ವಸ್ತುತಃ ॥೮೬॥

ಸಾಕ್ಷಾದಭ್ಯರ್ಚಿತಃ ಶಂಭುಃ ಶಾಂಭವಸ್ಯೈವ ಪೂಜಯಾ ।
ಯತಃ ಶಿವಪ್ರಿಯತಮಾಃ ಶಾಂಭವಾ ಭಸ್ಮಭೂಷಣಾಃ ॥೮೭॥

ತತಃ ಕರ್ತವ್ಯಮನಿಶಂ ಶಾಂಭವಾಭ್ಯರ್ಚನಂ ಮುದಾ ।
ಸದಾಶಿವಕಥಾಭಿನ್ನಕಥಾಶ್ರವಣವಾಚನೇ ॥೮೮॥

ಆ ದ್ವೇಷವು ಪಾಪವನ್ನುಂಟುಮಾಡುವುದು. ಮತ್ತು ಪಾಪಕರ್ಮಗಳನ್ನು ಅಭಿವೃದ್ಧಿಗೊಳಿಸುವುದು. ಆದುದರಿಂದ ಈಶ್ವರಭಕ್ತರನ್ನು ಅನವರತವೂ ಯಥಾಶಕ್ತಿ ಭಕ್ತಿಶ್ರದ್ಧೆಗಳಿಂದ ಪೂಜಿಸಬೇಕು. ॥೮೪॥

ಸುವರ್ಣ, ರತ್ನ, ಅನ್ನ, ವಸ್ತ್ರ ಇವುಗಳಿಂದ ಈಶ್ವರಭಕ್ತರನ್ನು ತೃಪ್ತಿಗೊಳಿಸಿ, ಮಧುರವಾದ ಮಾತುಗಳಿಂದಲೂ ಮತ್ತು ನಮಸ್ಕಾರಗಳಿಂದಲೂ ಅವರನ್ನು ಸೇವಿಸಬೇಕು. ॥೮೫॥

ಈ ರೀತಿಯಲ್ಲಿ ಯಾವನು ಭಕ್ತಾಗ್ರೇಸರರನ್ನು ಸಂತೋಷಪಡಿಸುವನೋ ಅವನು ಉಮಾರಮಣನಾದ ಪರಶಿವನನ್ನು ತೃಪ್ತಿಪಡಿಸಿದಂತೆಯೇ ಸರಿ. ಈಶ್ವರ ಭಕ್ತನಿಗೆ ಸಲ್ಲಿಸಿದ ಪೂಜೆಯು ನಿಜವಾಗಿಯೂ ಈಶ್ವರಪೂಜೆಯೇ ಆಗಿರುವುದು. ॥೮೬॥

ಈಶ್ವರ ಭಕ್ತರು, ಭಸ್ಮಭೂಷಿತರೂ ಶಿವನಿಗೆ ಪ್ರಿಯರೂ ಆಗಿರುವುದರಿಂದ ಅವರನ್ನು ಪೂಜಿಸಿದರೆ ಸಾಕ್ಷಾತ್ ಈಶ್ವರನನ್ನೇ ಪೂಜಿಸಿದಂತಾಗುವುದು. ॥೮೭॥

ಆದುದರಿಂದ ಸತತವೂ ಈಶ್ವರಭಕ್ತಾಗ್ರೇಸರರನ್ನು ಪ್ರೀತಿಯಿಂದ ಆರಾಧಿಸಬೇಕು. ಈಶ್ವರನ ಲೀಲೆಯನ್ನು ಪ್ರತಿಪಾದಿಸುವ ಕಥೆಗಳನ್ನು ಬಿಟ್ಟು ಇತರ ದೇವತೆಗಳ ಕಥೆಗಳನ್ನು ಕೇಳಿದರಾಗಲಿ ಅಥವಾ ಪಠಿಸಿದರಾಗಲಿ ಅದು ಶಿವದ್ವೇಷ

ಶಿವದ್ವೇಷೋಽಯಮಾಕಲ್ಪಮಘೋರನರಕಪ್ರದಃ ।
ಶ್ರೋತವ್ಯಾಃ ಸರ್ವದಾನೇನ ಸದಾಶಿವಕಥಾಃ ಶುಭಾಃ ॥೮೯॥

ತತಸ್ತಾ ಮೋಕ್ಷದಾಃ ಶ್ರೌತಾಃ ಸರ್ವಪಾತಕನಾಶಕಾಃ ।
ಕೀರ್ತನೀಯೋ ಮಹಾದೇವೋ ಜಿಹ್ವಯಾ ಪುಣ್ಯಪೂತಯಾ ॥೯೦॥

ಮಹೇಶಕೀರ್ತನಂ ಯಸ್ಮಾನ್ಮಹಾಪಾತಕನಾಶಕಂ ॥೯೧॥

ಭುಕ್ತಿಮುಕ್ತಿಪ್ರದಂ ಪುಣ್ಯಂ ಶಿವಶ್ರವಣ ಕೀರ್ತನಂ ।
ತತಸ್ತೈರ್ಯತ್ನತಃ ಕಾರ್ಯಂ ಬ್ರಾಹ್ಮಣಾದ್ಯೈರ್ಮುಮುಕ್ಷುಭಿಃ ॥೯೨॥

ಶಿವೇತರಸುರಧ್ಯಾನಂ ಶಿವದ್ವೇಷ ಇತಿ ಶ್ರುತಃ ।
ಸ ದ್ವೇಷಃ ಸರ್ವಪುಣ್ಯಾನಿ ವಿನಾಶಯತಿ ಸರ್ವಥಾ ॥೯೩॥

ವೆಂದೆನಿಸಿಕೊಳ್ಳುವುದು. ಆ ಶಿವದ್ವೇಷವು ಕಲ್ಪಪರ್ಯಂತವೂ ಭಯಂಕರವಾದ ನರಕವನ್ನುಂಟುಮಾಡುವುದು. ಆದುದರಿಂದ ಅನವರತವೂ ಕಲ್ಯಾಣಪ್ರದವಾದ ಶಿವಕಥೆಗಳನ್ನೇ ಕೇಳಬೇಕು. ॥೮೮-೮೯॥

ಶಿವಕಥೆಗಳನ್ನು ಕೇಳುವುದರಿಂದ ಸಕಲ ಪಾಪರಾಶಿಗಳೂ ಕ್ಷಯಿಸಿ ಮೋಕ್ಷವು ಸಿದ್ಧಿಸುವುದು. ಪುಣ್ಯದಿಂದ ಪವಿತ್ರವಾದ ನಾಲಿಗೆಯಿಂದ ಶಿವನಾಮವನ್ನು ನುಡಿಯ ಬೇಕು. ॥೯೦॥

ಏಕೆಂದರೆ, ಈಶ್ವರ ಕೀರ್ತನೆಯು ಮಹಾಪಾಪಗಳನ್ನು ನಾಶಪಡಿಸುವುದು. ನಾಲಿಗೆಯನ್ನು ಪವಿತ್ರಗೊಳಿಸುವುದು. ॥೯೧॥

ಪುಣ್ಯಕರವಾದ ಶಿವನ, ಕಥಾಶ್ರವಣವು ಮತ್ತು ಕೀರ್ತನವು ಅಶನವಸನಾದಿ ಗಳೇ ಮೊದಲಾದ ಐಹಿಕಫಲವನ್ನೂ, ಮೋಕ್ಷವೆಂಬ ಆಮುಷ್ಮಿಕ ಫಲವನ್ನೂ ದಯಪಾಲಿಸುವುದು. ಆದುದರಿಂದ ಮೋಕ್ಷಾರ್ಥಿಗಳಾದ ಬ್ರಾಹ್ಮಣಾದಿ ವರ್ಣದವರು ತಪ್ಪದೇ ಶಿವಕಥಾಶ್ರವಣಕೀರ್ತನಗಳನ್ನು ಕೈಗೊಳ್ಳಬೇಕು. ॥೯೨॥

ಈಶ್ವರನಿಗಿಂತ ಇತರರಾದ ದೇವತೆಗಳ ಧ್ಯಾನವೂ ಸಹ ಶಿವದ್ವೇಷವೆಂದೆನಿಸಿ ಕೊಂಡಿರುವುದು. ಆ ದ್ವೇಷವು ಸಕಲ ಪುಣ್ಯಗಳನ್ನೂ ಸಹ ನಾಶಗೊಳಿಸುವುದು. ಆದಕ್ಕಾಗಿ ಶಿವನನ್ನೇ ಸದಾ ಧ್ಯಾನಿಸಬೇಕು. ॥೯೩॥

ಏತತ್ಪ್ರಭೃತಯೋ ದ್ವೇಷಾ ಬಹವಃ ಪಾಪಹೇತವಃ ।
ತಸ್ಮಾದೇತಾದೃಶೈರ್ದೋಷೈಃ ಪಚ್ಯಂತೇ ನರಕೇ ಜನಾಃ ॥೯೪॥

ತಸ್ಮಾದೇತಾದೃಶೈರ್ದೋಷೈರ್ವಿಮುಕ್ತಾ ಯೇ ಭವಾದೃಶಾಃ ।
ತೇಷಾಂ ಕಾಶ್ಯಾಂ ಭವೇಚ್ಛ್ರದ್ಧಾ ನಾನ್ಯೇಷಾಂ ಸತ್ಯಮುಚ್ಯತೇ ॥೯೫॥

ಕಾಶೀ ಯತಃ ಶಿವಃ ಸಾಕ್ಷಾತ್ತತಸ್ತತ್ಪ್ರವಣಾ ಜನಾಃ ।
ನಿರ್ಮುಕ್ತಾಃ ಪಾಪಸಂಘೇಭ್ಯೋ ಘೋರೇಭ್ಯಃ ಸತ್ಯಮುಚ್ಯತೇ ॥೯೬॥

ಕಾಶೀಕಥಾಸುಧಾ ವಿಪ್ರಾಃ ದುರ್ಲಭಾ ದುರ್ಲಭಾಪಿ ಸಾ ।
ಸುಲಭಾ ಶಿವಭಕ್ತಾನಾಂ ಶಿವಾರ್ಥಕೃತಕರ್ಮಣಾಮ್ ॥೯೭॥

ಕಾಶೀಕಥಾಸುಧಾ ಪ್ರಾಪ್ಯಾ ತಪೋಧ್ಯಾನಸಮಾಧಿಭಿಃ ।
ತತ್ಪ್ರಾಪ್ತ್ಯರ್ಥಂ ಯತಸ್ತೇಷಾಮುಪಯೋಗಃ ಶ್ರುತಿಶ್ರುತಃ ॥೯೮॥

ಇವೇ ಮೊದಲಾದ ಹಲವಾರು ದ್ವೇಷಗಳು ಪಾಪಕ್ಕೆ ಕಾರಣಗಳಾಗಿರುವುವು. ಆದುದರಿಂದ ಶಿವದ್ವೇಷಿಗಳಾದ ಜನರು ಹಿಂದೆ ಹೇಳಿದ ಈ ದೋಷಗಳಿಂದ ನರಕಲೋಕದಲ್ಲಿ ವಿವಿಧವಾದ ಯಾತನೆಗಳನ್ನನುಭವಿಸುವರು. ॥೯೪॥

ಆದುದರಿಂದ ಈ ಹಿಂದೆ ಹೇಳಿದ ದೋಷಗಳಿಂದ ರಹಿತವಾದ ನಿಮ್ಮಂತಹ ಸತ್ಪುರುಷರಿಗೇ ಕಾಶೀಕ್ಷೇತ್ರದಲ್ಲಿ ಅಗಾಧವಾದ ಶ್ರದ್ಧೆಯು ಜನಿಸುವುದಲ್ಲದೇ ಇನ್ನಾರಿಗೂ ಅದು ಉಂಟಾಗಲಾರದು. ॥೯೫॥

ಕಾಶೀಕ್ಷೇತ್ರವೆಂಬುದು ಸಾಕ್ಷಾತ್ಪರಶಿವನ ಸ್ವರೂಪವೇ ಆಗಿರುವುದು. ಆದುದರಿಂದಲೇ ಜನರು ಕಾಶೀಕ್ಷೇತ್ರದಲ್ಲಿಯೇ ಸತತವಾಗಿಯೂ ನೆಲಸುವುದರಲ್ಲಾಸಕ್ತರಾಗಿ ಭಯಂಕರವಾದ ಪಾಪರಾಶಿಗಳಿಂದ ಮುಕ್ತರಾಗುವರು. ಇದು ನಿಜ. ॥೯೬॥

ಎಲೈ ಬ್ರಾಹ್ಮಣರೇ, ಕಾಶೀಕಥೆಯೆಂಬ ಆ ಸುಧೆಯು ದುರ್ಲಭವೇ ಆಗಿರುವುದು. ಆದರೂ ಈಶ್ವರಾರ್ಪಣಬುದ್ಧಿಯಿಂದ ಕರ್ಮಗಳನ್ನು ಆಚರಿಸಿದ ಭಕ್ತರಿಗೆ ಅದು ಸುಲಭ. ॥೯೭॥

ಕಾಶೀಕಥಾಮೃತವನ್ನು ಹೊಂದುವುದರಲ್ಲಿ ತಪಸ್ಸು, ಧ್ಯಾನ, ಸಮಾಧಿ, ಈ ಮೂರು ಸಾಧನಗಳಾಗಿರುವುವೆಂದು ವೇದಗಳು ಹೇಳುವುವು. ಆದುದರಿಂದ

ಕಾಶೀಕಥಾಸುಧಾಂ ಪ್ರೀತ್ಯಾ ಯೇ ಪಿಬಂತಿ ಮುಹುರ್ಮುಹುಃ ।
ತೇ ಶಿವಾನುಗ್ರಹೀತಾಸ್ತೇ ಪೂಜನೀಯಾ ಮನೀಷಿಭಿಃ ॥೯೯॥

ಕಾಶೀಕಥಾ ಶಿವಕಥಾ ಸಾ ಕಥಾ ಮೋಕ್ಷದಾಯಿನೀ ।
ತಸ್ಯಾಂ ಕಥಾಯಾಂ ಪ್ರೀತಿಸ್ತು ನ ಶಿವಾನುಗ್ರಹಂ ವಿನಾ ॥೧೦೦॥

ನಿಷ್ಕಲಂ ನಿರ್ಗುಣಂ ಬ್ರಹ್ಮ ಶಿವಃ ಕಾಶೀತಿ ಗೀಯತೇ ।
ತಸ್ಯಾಂ ಪ್ರೀತಿರನಂತಾನಾಂ ತಪಸಾಂ ಫಲಮುಚ್ಯತೇ ॥೧೦೧॥

ಸ್ವಾಭಿನ್ನಾಯಾಮಪೀಶಸ್ಯ ಕಾಶ್ಯಾಂ ಪ್ರೀತಿರನಾಮಯಾ ।
ತತಸ್ತತ್ಪ್ರೀತಿರುತ್ಕೃಷ್ಟಾ ತಪೋದಾನಫಲಂ ದ್ವಿಜಾಃ ॥೧೦೨॥

ತಪಸ್ಸು, ಧ್ಯಾನ, ಸಮಾಧಿ ಈ ಮೂರು ಸಾಧನಗಳಿಂದ ಕಾಶೀಕಥಾಮೃತವನ್ನು ಹೊಂದಬಹುದಾಗಿದೆ. ॥೯೮॥

ಯಾವ ಮನುಜರು, ಕಾಶೀಕಥೆಯೆಂಬ ಅಮೃತವನ್ನು ಪುನಃ ಪುನಃ ಪಾನಮಾಡುವರೋ ಅವರೇ ಈಶ್ವರಾನುಗ್ರಹಕ್ಕೆ ಪಾತ್ರರಾದವರೆಂದು ತಿಳಿಯಬೇಕು. ಮತ್ತು ಅವರೇ ಜ್ಞಾನಿಗಳಿಗೆ ಪೂಜ್ಯರಾಗಿರುವರು. ॥೯೯॥

ಕಾಶೀಕ್ಷೇತ್ರದ ಕಥೆಯೇ ಶಿವಕಥೆಯು. ಅದೇ ಮೋಕ್ಷವನ್ನು ದಯಪಾಲಿಸುವುದು. ಈಶ್ವರಾನುಗ್ರಹವೊಂದಿಲ್ಲದಿದ್ದರೆ ಆ ಕಥೆಯಲ್ಲಿ ಪ್ರೀತಿಯುಂಟಾಗಲಾರದು. ॥೧೦೦॥

ಪ್ರಾಣಾದಿ ಷೋಡಶಕಲಾವಿಹೀನವೂ, ರೂಪಾದಿಗುಣರಹಿತವೂ ಆದ ಬ್ರಹ್ಮವಸ್ತುವೇ ಕಾಶೀಕ್ಷೇತ್ರವೆಂದು ಹೇಳಲ್ಪಡುವುದು. ಆ ಕಾಶೀಕ್ಷೇತ್ರದಲ್ಲಿ ಉಂಟಾಗುವ ಪ್ರೀತಿಯೇ ಅನೇಕ ತಪಸ್ಸುಗಳ ಫಲವಾಗಿರುವುದು. ॥೧೦೧॥

ಎಲೈ ದ್ವಿಜರೇ! ಕಾಶೀಕ್ಷೇತ್ರವು ತನಗೆ ಸದಾ ಇದ್ದರೂ ಸಹ ಶಿವನು ಅದನ್ನು ನಿರಂತರವೂ ಪ್ರೀತಿಸುವನು. ಆದುದರಿಂದ ಕಾಶೀಕ್ಷೇತ್ರದಲ್ಲಿ ಉಂಟಾಗುವ ಪ್ರೀತಿಯು ವರ್ಣಿಸಲಸಾಧ್ಯವಾಗಿರುವುದು. ಅಂತಹ ವರ್ಣನಾತೀತವಾದ ಪ್ರೀತಿಯು ತಪಸ್ಸು, ದಾನ ಇವುಗಳ ಫಲವಾಗಿರುವುದು. ॥೧೦೨॥

ಕಾಶೀಮೂರ್ತಿಃ ಶಿವಸ್ಯೈವ ಮೂರ್ತಿಭೇದೇನ ತಿಷ್ಠತಿ ।
ಕಾಶೀಮೂರ್ತಿಃ ಶಿವಸ್ಯೇತಿ ವದಂತಿ ಶ್ರುತಯೋ ಯತಃ ॥೧೦೩॥

ಮೂರ್ತಯಃ ಸಂತಿ ವಿವಿಧಾಃ ಶಿವಸ್ಯ ಪರಮಾತ್ಮನಃ ।
ತಾಸು ಮೂರ್ತಿಷು ಕಾಶ್ಯೇವ ಶಿವಪ್ರಿಯತಮಾ ಶ್ರುತಾ ॥೧೦೪॥

ಕಾಶೀಮೂರ್ತಿಂ ಶಿವಾಕಾರಾಂ ಶಿವಾಂ ದೃಷ್ಟ್ವಾ ಮನೋರಮಾಂ ।
ಶಿವೋ ದೃಷ್ಟ್ವಾ ಭವಾನೀಂ ಚ ಪ್ರೀತೋ ಭವತಿ ಸರ್ವಥಾ ॥೧೦೫॥

ಯದಾ ಸಂಪ್ರಾಪ ಕೈಲಾಸಾತ್ಕಾಶೀಮೂರ್ತಿಂ ಮಹೇಶ್ವರಃ ।
ತದಾ ಪ್ರಾಹ ಮಹಾದೇವಂ ಭವಾನೀ ಭಕ್ತವತ್ಸಲಾ ॥೧೦೬॥

॥ ಶ್ರೀಗೌರ್ಯುವಾಚ ॥

ಶಿವಸರ್ವಜ್ಞ ಸರ್ವಾತ್ಮನ್ಕಿಂ ಕಾಶೀಪ್ರಾಪ್ತಿಸಾಧನಂ ।
ಏತತ್ಸರ್ವಂ ವಿಶೇಷೇಣ ನಿರೂಪಯ ಕೃಪಾನಿಧೇ ॥೧೦೭॥

ಕಾಶಿಯು ಶಿವನ ಆಕಾರವಾಗಿರುವುದೆಂದು ವೇದಗಳು ಹೇಳುವುದರಿಂದ ಕಾಶೀಕ್ಷೇತ್ರವು ಶಿವನ ವಿಗ್ರಹಗಳಲ್ಲೊಂದಾಗಿದೆ. ॥೧೦೩॥

ಪರಶಿವನಿಗೆ ನಾನಾಬಗೆಯ ಹಲವಾರು ವಿಗ್ರಹಗಳಿರುವುವು. ಅವುಗಳಲ್ಲಿ ಕಾಶೀಕ್ಷೇತ್ರವೆಂಬ ವಿಗ್ರಹವೇ ಅವನಿಗೆ ಅತ್ಯಂತಪ್ರಿಯವಾಗಿರುವುದೆಂದು ವೇದಗಳ ಮೂಲಕ ಕೇಳಿಬರುವುದು. ॥೧೦೪॥

ಈಶ್ವರಾಕಾರವೂ, ಮಂಗಳಮೂರ್ತಿಯೂ, ಸುಂದರವೂ ಆದ ಕಾಶೀಕ್ಷೇತ್ರವೆಂಬ ವಿಗ್ರಹವನ್ನು ನೋಡಿ ಪಾರ್ವತೀಪರಮೇಶ್ವರರು ಆನಂದಭರಿತರಾಗುವರು. ॥೧೦೫॥

ಒಮ್ಮೆ ಪರಮೇಶ್ವರನು ಕೈಲಾಸದಿಂದ ಕಾಶೀಕ್ಷೇತ್ರಕ್ಕೆ ಬರಲು ಆಗ, ಭಕ್ತವತ್ಸಲೆಯಾದ ಭವಾನಿಯು ವಲ್ಲಭನಾದ ಶಿವನನ್ನು ನೋಡಿ ಹೀಗೆಂದಳು. ॥೧೦೬॥

ಓ, ಸರ್ವಾಂತರ್ಯಾಮಿಯೂ, ಸರ್ವಜ್ಞನೂ, ದಯಾಸಾಗರನೂ ಆದ ಶಿವನೇ! ಕಾಶೀಕ್ಷೇತ್ರವನ್ನು ಹೊಂದಲು ಬೇಕಾಗಿರುವ ಸಾಧನವಾವುದು ? ಅದನ್ನು ನನಗೆ ಸ್ಪಷ್ಟವಾಗಿ ತಿಳಿಯಪಡಿಸು. ॥೧೦೭॥

॥ ಶ್ರೀಮಹೇಶ್ವರ ಉವಾಚ ॥

ಮಯಿ ಭಕ್ತಿರವಿಚ್ಛಿನ್ನಾ ಯಾ ಮದಭ್ಯರ್ಚನೋದ್ಭವಾ।
ಸಾ ಭಕ್ತಿರೇವ ಸುಭಗೇ ಕಾಶೀಸಂಪ್ರಾಪ್ತಿಸಾಧನಂ ॥೧೦೮॥

ಮಮಾರ್ಚನಂ ಚ ವಿವಿಧಂ ಶ್ರುತಿಷು ಪ್ರತಿಪಾದಿತಂ।
ತಾದೃಶೇನಾರ್ಚನೇನೈವ ಮಯಿ ಭಕ್ತಿಃ ಪ್ರಜಾಯತೇ ॥೧೦೯॥

ಮದ್ಭಕ್ತ ಇತಿ ವಿಜ್ಞೇಯಃ ಸ ಏವ ಕಮಲಾನನೇ।
ಯೋ ಭಸ್ಮನಿಷ್ಠಃ ಸತತಂ ಮಮೈವಾರಾಧನೇ ಪ್ರಿಯಃ ॥೧೧೦॥

ಕಾಶ್ಮೀರಾದಿಷು ಲಿಂಗೇಷು ಪ್ರವಿಷ್ಟಂ ದೇವತೋತ್ತಮಂ।
ಮಾಮೇವ ಯೋಽರ್ಚಯೇನ್ನಿತ್ಯಂ ಸ ಮದ್ಭಕ್ತ ಇತಿ ಶ್ರುತಃ ॥೧೧೧॥

ಹಿಮವತ್ಪರ್ವತಾದೀನಿ ಯಾನಿ ಸ್ಥಾನಾನಿ ಶೋಭನೇ।
ತೇಷು ಸ್ಥಾನೇಷು ಶೈವೇಂದ್ರೈರ್ಮದರ್ಥಂ ತಪ್ಯತೇ ತಪಃ ॥೧೧೨॥

ಆಗ ಶಿವನು ಹೀಗೆಂದನು— ದೇವಿ! ನನ್ನನ್ನು ಸದಾ ಪೂಜಿಸುವುದರಿಂದ ಉಂಟಾಗುವ ಅಗಾಧವಾದ ಭಕ್ತಿಯೇ ಕಾಶೀಪ್ರಾಪ್ತಿಗೆ ಸಾಧನವಾಗಿರುವುದು.॥೧೦೮॥

ನನ್ನ ಆರಾಧನೆಯು ನಾನಾಬಗೆಯಾಗಿರುವುದೆಂದು ವೇದಗಳಲ್ಲಿ ಹೇಳಿರುವುದು. ಅಂತಹ ಆರಾಧನೆಯಿಂದಲೇ ನನ್ನಲ್ಲಿ ಭಕ್ತಿಯುಂಟಾಗುವುದು. ॥೧೦೯॥

ಎಲೌ ಪದ್ಮಮುಖಿಯೇ, ಯಾವನು ನಿರಂತರವೂ ಭಸ್ಮವನ್ನು ಧರಿಸುವನೋ ಮತ್ತು ನನ್ನ ಆರಾಧನೆಯಲ್ಲಿಯೇ ಪ್ರೀತಿಯುಳ್ಳವನಾಗಿರುವನೋ ಅವನೇ ನನ್ನ ಭಕ್ತನಾಗಿರುವನೆಂದು ತಿಳಿಯಬೇಕು. ॥೧೧೦॥

ಕಾಶ್ಮೀರಾದಿ ಶಿಲೆಗಳಿಂದ ನಿರ್ಮಿತವಾದ ಲಿಂಗಗಳಲ್ಲಿ ನೆಲಸಿರುವ ದೇವತೆಗಳಲ್ಲಿ ಶ್ರೇಷ್ಠತಮನಾದ ನನ್ನನ್ನೇ ಪ್ರತಿದಿನವೂ ಯಾವನು ಆರಾಧಿಸುವನೋ ಅವನೇ ನನ್ನ ಭಕ್ತನೆಂದೆನಿಸಿಕೊಳ್ಳುವನು. ॥೧೧೧॥

ದೇವಿ, ಈಶ್ವರ ಭಕ್ತಾಗ್ರಣಿಗಳಾದ ಅನೇಕ ಜನರು ನನ್ನ ಅನುಗ್ರಹವನ್ನು ಸಂಪಾದಿಸುವುದಕ್ಕೋಸ್ಕರ ಹಿಮವತ್ಪರ್ವತವೇ ಮುಂತಾದ ಪುಣ್ಯಸ್ಥಳಗಳಲ್ಲಿ ತಪಸ್ಸನ್ನಾಚರಿಸುವರು. ॥೧೧೨॥

ತೇಷು ತೇಷು ತಪಸ್ತಪ್ತಂ ಯ್ಯೈರನೇಕಯುಗಾವಧಿ ।
ತ್ತೈರೇವ ಪ್ರಾಪ್ಯತೇ ಕಾಶೀ ಮತ್ಸ್ವರೂಪಾ ವರಾನನೇ ॥೧೧೩॥

ಗಿರಿಜೇ ಸುಲಭೋ ನಾಹಂ ಪರಂ ತ್ವತ್ಯಂತದುರ್ಲಭಃ ।
ತಥಾಪಿ ಸುಲಭೋಽತ್ಯಂತಂ ಶೈವಧರ್ಮರತಾತ್ಮನಾಂ ॥೧೧೪॥

ಪುರಾ ಹಿಮಾದ್ರಿಶಿಖರೇ ನಾನಾರತ್ನವಿರಾಜಿತೇ ।
ಬ್ರಹ್ಮವಿಷ್ಣ್ವಾದಯೋ ದೇವಾಃ ಸ್ಥಿತಾ ಮಲ್ಲಿಂಗಪೂಜಕಾಃ ॥೧೧೫॥

ಋಷಯಃ ಪಿತರಃ ಸಾಧ್ಯಾಃ ಗಂಧರ್ವಾಃ ಸಿದ್ಧಪುಂಗವಾಃ ।
ಮಲ್ಲಿಂಗಪೂಜನಾಸಕ್ತಾಃ ಸ್ಥಿತಾಃ ಪೂರ್ವಂ ಹಿಮಾಲಯೇ ॥೧೧೬॥

ಹಿಮವತ್ಪರ್ವತೇ ರಮ್ಯೇ ಸರ್ಪದಾ ಮಾಂ ಮುಮುಕ್ಷವಃ ।
ಪೂಜಯಂತ್ಯಹಿಕಂಠೇಶಂ ನಿರ್ವಾಣಪದಕಾಂಕ್ಷಯಾ ॥೧೧೭॥

ಹಿಂದೆ ಹೇಳಿದ ಹಿಮವತ್ಪರ್ವತವೇ ಮುಂತಾದ ಸ್ಥಳಗಳಲ್ಲಿ ಯಾರು ಅನೇಕ ಯುಗಗಳು ಕಳೆಯುವ ವರೆಗೆ ತಪಸ್ಸನ್ನಾಚರಿಸುವರೋ, ಅವರೇ ನನ್ನ ಸ್ವರೂಪವಾಗಿರುವ ಆ ಕಾಶೀಕ್ಷೇತ್ರವನ್ನು ಪಡೆಯುವರು. ||೧೧೩||

ಎಲೌ ಗಿರಿಜೆಯೇ, ನಾನು ಸಾಧಾರಣಜನರಿಗೆ ಸುಲಭನಾಗಿರದೆ ಅತ್ಯಂತ ದುರ್ಲಭನಾಗಿರುವೆನು. ಆದರೆ ಶೈವಧರ್ಮದಲ್ಲಿ ಆಸಕ್ತರಾದವರಿಗೆ ಮಾತ್ರ ನಾನು ಅತ್ಯಂತ ಸುಲಭನಾಗಿರುವೆನು. ||೧೧೪||

ಹಿಂದೆ ಒಂದಾನೊಂದು ಸಮಯದಲ್ಲಿ ಬ್ರಹ್ಮ, ವಿಷ್ಣು ಇವರೇ ಮುಂತಾದ ದೇವತೆಗಳು ಅಸಂಖ್ಯಾಕವಾದ ರತ್ನಗಳಿಂದ ಶೋಭಿಸುತ್ತಿರುವ ಹಿಮವತ್ಪರ್ವತದ ಶಿಖರದಲ್ಲಿ ಶಿವಲಿಂಗವನ್ನು ಪೂಜಿಸುತ್ತಾ ವಾಸವಾಗಿದ್ದರು. ||೧೧೫||

ಇದಲ್ಲದೇ ಈ ಹಿಂದೆ ಹಿಮವತ್ಪರ್ವತದಲ್ಲಿ ಅನೇಕ ಮಂದಿ ಋಷಿಗಳೂ, ಪಿತೃಗಳೂ, ಸಾಧ್ಯರೂ, ಗಂಧರ್ವರೂ ಮತ್ತು ಸಿದ್ಧಶ್ರೇಷ್ಠರೂ ನನ್ನ ಶಿವಲಿಂಗವನ್ನು ಆರಾಧಿಸುವುದರಲ್ಲಿ ಆಸಕ್ತರಾಗಿದ್ದರು. ||೧೧೬||

ರಮಣೀಯವಾದ ಆ ಹಿಮವತ್ಪರ್ವತದಲ್ಲಿ ಮುಮುಕ್ಷುಗಳಾದವರು, ಮೋಕ್ಷ ಪದವಿಯನ್ನು ಪಡೆಯಬೇಕೆಂಬ ಕುತೂಹಲದಿಂದ ಅನವರತವೂ ಸರ್ಪಭೂಷಣ ನಾದ ನನ್ನನ್ನು ಆರಾಧಿಸುತ್ತಿರುವರು. ||೧೧೭||

ತತ್ರೈಕದಾ ಕಶ್ಯಪಾದ್ಯಾ ಋಷಯೋ ಬ್ರಹ್ಮವಾದಿನಃ ।
ಮಾಮಾರಾಧ್ಯ ಸ್ಥಿತಾ ದೇವಿ ಹೇಮಪದ್ಮಾದಿಭಿರ್ಮುದಾ ॥೧೧೮॥

ತದಾ ಕಣ್ವಃ ಸಮಾಸಾದ್ಯ ಸ್ನಾತ್ವಾಚ್ಛೇ ಮಾನಸೇ ಜಲೇ ।
ಮಾನಸೇಶಂ ಸಮಭ್ಯರ್ಚ್ಯ ಕಶ್ಯಪಂ ಪ್ರಾಹ ಸಾದರಂ ॥೧೧೯॥

॥ ಕಣ್ವ ಉವಾಚ ॥

ಸಂಸಾರದಾವಖಿನ್ನಾನಾಂ ಮರ್ತ್ಯಾನಾಮಕೃತಾತ್ಮನಾಂ ।
ಘೋರಸಂಸಾರವಿಚ್ಛೇದಃ ಕಥಂ ಭವತಿ ಸತ್ತ್ವರಂ ॥೧೨೦॥

ಕಿಮರ್ಚನೀಯಂ ಕಿಂ ಧ್ಯೇಯಂ ಕಿಂ ವಾ ಸರ್ವಾರ್ಥದಂ ಮುಹುಃ ।
ಕಿಮಾಶಾಸ್ಯಂ ಕಿಮಾರಾಧ್ಯಂ ತದ್ವದಸ್ವ ಮಹಾಮುನೇ ॥೧೨೧॥

॥ ಕಶ್ಯಪ ಉವಾಚ ॥

ಶಿವಾಭಿಧಂ ಮಹಃ ಸೇವ್ಯಂ ಸರ್ವವೇದಾಂತಸಂಶ್ರುತಂ ।
ತತ್ಸೇವಯೈವ ಸರ್ವೇಷಾಂ ಮುಕ್ತಿರ್ಭವತಿ ವಸ್ತುತಃ ॥೧೨೨॥

ದೇವಿ? ಒಂದಾನೊಂದು ಸಲ ಅಲ್ಲಿ, ಬ್ರಹ್ಮಜ್ಞಾನಿಗಳಾದ ಕಶ್ಯಪಾದಿ ಋಷಿಗಳು ಸುವರ್ಣಕಮಲಗಳಿಂದ ನನ್ನನ್ನು ಪೂಜಿಸಿ ವಾಸವಾಗಿರುತ್ತಿದ್ದರು. ೧೧೮॥

ಆಗ ಕಣ್ವಮಹರ್ಷಿಯು ಅಲ್ಲಿಗೆ ಬಂದು ಶುಭ್ರವಾದ ಮಾನಸಸರೋವರದ ನೀರಿನಲ್ಲಿ ಸ್ನಾನಮಾಡಿ, ಮಾನಸೇಶ್ವರನನ್ನು ಪೂಜಿಸಿ, ಕಶ್ಯಪನನ್ನು ಕುರಿತು ಆದರದಿಂದ ಹೀಗೆಂದನು. ॥೧೧೯॥

" ಓ, ಕಶ್ಯಪಮುನಿಯೇ ! ಸಂಸಾರವೆಂಬ ಕಾಡುಕಿಚ್ಚಿನಿಂದ ದುಃಖಿಗಳೂ, ಅಜ್ಞಾನಿಗಳೂ ಆದ ಮನುಜರಿಗೆ ಭಯಂಕರವಾದ ಈ ಸಂಸಾರವನ್ನು ಕೊನೆಗಾಣಿಸುವ ಸಾಧನವಾವುದು ? ॥೧೨೦॥

ಯಾವ ವಸ್ತುವನ್ನು ಆರಾಧಿಸಿದರೆ ಈ ಸಂಸಾರವು ನಾಶವಾಗುವುದು ? ಧ್ಯಾನಮಾಡಲು ಯೋಗ್ಯವಾದ ವಸ್ತುವಾವುದು ? ಸಕಲ ಇಷ್ಟಾರ್ಥಗಳನ್ನೂ ದಯಪಾಲಿಸುವ ವಸ್ತುವಾದರೂ ಅದಾವುದಿರುವುದು ? ಯಾರನ್ನು ಭಜಿಸಲಿ ? ಯಾವುದನ್ನು ಆರಾಧಿಸಲಿ ? ಅದನ್ನು ನನಗೆ ಹೇಳು." ॥೧೨೧॥

ಆಗ ಕಶ್ಯಪಮುನಿಯು ಹೀಗೆಂದನು — ನಿಖಿಲವೇದಾಂತಗಳಲ್ಲಿಯೂ ಪ್ರಸಿದ್ಧ

ಸಚ್ಚಿದಾನಂದಮದ್ವೈತಂ ಯನ್ಮಹಃ ಶಿವಸಂಜ್ಞಿತಂ ।
ತನ್ಮಹಃ ಸತತಂ ಸೇವ್ಯಮನ್ಯತ್ತ್ಯಕ್ತ್ವಾಖಿಲಂ ಮುನೇ ॥೧೨೩॥

ತುರೀಯಮೇಕಂ ವಿಮಲಂ ಶಿವಂ ಮತ್ವಾ ಯಥಾರ್ಥತಃ ।
ಯೇ ಭಜಂತಿ ಶಿವಂ ನಿತ್ಯಂ ನ ತೇ ಸಂಸಾರಭಾಗಿನಃ ॥೧೨೪॥

ಯೇ ಮಾಯಾತೀತಮದ್ವೈತಂ ಶಿವಮೇವ ಭಜಂತಿ ತೇ ।
ಕದಾಪಿ ಜನನೀಗರ್ಭಂ ನ ವಿಶಂತ್ಯೇವ ಸರ್ವಥಾ ॥೧೨೫॥

ಸಂಸಾರದಂದಶೂಕೇನ ಸಂದಷ್ಟಾ ಯೇ ಮುಹುರ್ಮುಹುಃ ।
ತೇ ತದ್ವಿಷಾದ್ವಿಮುಚ್ಯಂತೇ ಶಿವಸೇವೌಷಧಾಶನಾಃ ॥೧೨೬॥

ಸಂಸಾರಸಾಗರೋತ್ತಾರಃ ಶಿವಸೇವಾರತಿರ್ನರಃ ।
ತತಃ ಸರ್ವಾತ್ಮನಾ ನಿತ್ಯಂ ಕರ್ತವ್ಯಂ ಶಿವಸೇವನಂ ॥೧೨೭॥

ವಾದ ಶಿವನೆಂಬ ಪೂಜ್ಯವಾದ ವಸ್ತುವೇ, ಆರಾಧಿಸಲು ಯೋಗ್ಯವು. ಅವನ ಸೇವೆಯಿಂದಲೇ ಸಮಸ್ತರಿಗೂ ಮೋಕ್ಷವು ಸಿದ್ಧಿಸುವುದು. ||೧೨೨||

ಎಲೈ ಮುನಿಯೇ, ಸಮಸ್ತಕಾರ್ಯಗಳನ್ನು ತೊರೆದು, ಸಚ್ಚಿದಾನಂದ ಸ್ವರೂಪವೂ, ಅದ್ವಿತೀಯವೂ ಆದ ಶಿವನೆಂಬ ವಸ್ತುವನ್ನೇ ಅನವರತವೂ ಸೇವಿಸಬೇಕು. ||೧೨೩||

ತುರೀಯನೂ, ಸ್ವಸಜಾತೀಯ ವಿಜಾತೀಯ ಸ್ವಗತಭೇದರಹಿತನೂ, ಶುದ್ಧನೂ ಆದ ಶಿವನ ಸ್ವರೂಪವನ್ನು ತಿಳಿದು ಅವನನ್ನೇ ನಿರಂತರವೂ ಯಾರು ಆರಾಧಿಸುವರೋ, ಅವರು ಈ ಸಂಸಾರವೆಂಬ ಪಾಶಕ್ಕೆ ಒಳಗಾಗುವುದಿಲ್ಲ. ||೧೨೪||

ಅಜ್ಞಾನರಹಿತನೂ, ಅದ್ವಿತೀಯನೂ ಆದ ಶಿವನನ್ನೇ ಯಾರು ಸದಾ ಭಜಿಸುವರೋ ಅವರು ಎಂದಿಗೂ ಪುನರ್ಜನ್ಮವನ್ನು ಪಡೆಯುವುದಕ್ಕೋಸ್ಕರ ಮಾತೃವಿನ ಗರ್ಭವನ್ನು ಪ್ರವೇಶಿಸುವುದಿಲ್ಲ. ||೧೨೫||

ಯಾರು, ಸಂಸಾರವೆಂಬ ಕಾಳಸರ್ಪದಿಂದ ಕಚ್ಚಲ್ಪಟ್ಟಿರುವರೋ ಅವರು, ಈಶ್ವರಸೇವೆಯೆಂಬ ದಿವ್ಯೌಷಧವನ್ನು ಸೇವಿಸಿ ಕ್ರೂರವಾದ ಆ ವಿಷದಿಂದ ಮುಕ್ತರಾಗುವರು. ||೧೨೬||

ಈಶ್ವರಸೇವಾಸಕ್ತನಾದ ಮನುಷ್ಯನೇ ಸಂಸಾರವೆಂಬ ಸಾಗರವನ್ನು ದಾಟಲು

ಸಂಸಾರಸಾಗರೇ ಘೋರೇ ತೇ ಮಜ್ಜಂತಿ ಮುಹುರ್ಮುಹುಃ ।
ಯೇ ಮುಹುರ್ನ ಭಜಂತೀಶಂ ಶಿವಂ ಸಂಸಾರತಾರಕಂ ॥೧೩೮॥

ಅನನ್ಯಶರಣಾ ನಿತ್ಯಂ ಶಿವಮವ್ಯಭಿಚಾರತಃ ।
ಯೇ ಭಜಂತ್ಯನ್ವಹಂ ಭಕ್ತ್ಯಾ ತೇ ಯಾಂತಿ ಶಿವಮವ್ಯಯಂ ॥೧೩೯॥

ಬಹುಪುಣ್ಯಫಲೈಃ ಕಣ್ವ ಶಿವೇ ಭಕ್ತಿಃ ಪ್ರಜಾಯತೇ ।
ಸಾಪ್ಯನಂತತಪೋಧರ್ಮೈರ್ಭವತ್ಯವ್ಯಭಿಚಾರಿಣೀ ॥೧೪೦॥

ಮಹಾಪಾತಕಪುಂಜಾನಾಂ ಮಹಾಪಾಪರತಾತ್ಮನಾಂ ।
ನ ಭವತ್ಯೇವ ಗೌರೀಶೇ ಭಕ್ತಿರವ್ಯಭಿಚಾರಿಣೀ ॥೧೪೧॥

ಶಕ್ತನು. ಆದುದರಿಂದ ಸರ್ವಪ್ರಕಾರಗಳಿಂದಲೂ ಈಶ್ವರಸೇವೆಯನ್ನು ಕೈಗೊಳ್ಳಬೇಕು. ॥೧೩೭॥

ಯಾರು ಸಂಸಾರತಾರಕನಾದ ಶಿವನನ್ನು ಸೇವಿಸುವುದಿಲ್ಲವೋ, ಅವರು ಬಾರಿಬಾರಿಗೂ ಈ ಭಯಂಕರವಾದ ಸಂಸಾರಸಾಗರದಲ್ಲಿ ಮುಳುಗುವರು. ॥೧೩೮॥

ಯಾರು ನಿರಂತರವೂ ಶಿವನನ್ನೇ ಮರೆಹೊಕ್ಕು ತಪ್ಪದೇ ಅವನನ್ನು ಭಜಿಸುವರೋ, ಅವರು ಅದ್ವಿತೀಯಸ್ವರೂಪನಾದ ಶಿವನ ಸಾನ್ನಿಧ್ಯವನ್ನು ಪಡೆಯುವರು. ॥೧೩೯॥

ಎಲೈ ಕಣ್ವಮುನಿಯೇ, ಜನ್ಮಾಂತರದಲ್ಲಿ ಸಂಪಾದಿಸಿದ ಅನೇಕ ಪುಣ್ಯಗಳಿಂದಲೇ ಶಿವನಲ್ಲಿ ಭಕ್ತಿಯುಂಟಾಗುವುದು. ಪುಣ್ಯಕರ್ಮಗಳ ಮಹಿಮೆಯಿಂದ ಸಂಭವಿಸಿದ ಆ ಭಕ್ತಿಯು ಹಲವಾರು ತಪಸ್ಸುಗಳಿಂದಲೂ ಮತ್ತು ಯಜ್ಞಯಾಗಾದಿ ಕರ್ಮಗಳಿಂದಲೂ ದೃಢವಾಗಿ ನೆಲಸುವುದು. ॥೧೪೦॥

ಅನೇಕ ಮಹಾಪಾಪಗಳನ್ನು ಆಚರಿಸುವವರೂ ಮತ್ತು ಮಹಾಪಾಪಗಳನ್ನು ಆಚರಿಸುವುದರಲ್ಲಿಯೇ ಆಸಕ್ತರೂ ಆದ ಜನರಿಗೆ ಶಿವನಲ್ಲಿ ನಿಶ್ಚಲವಾದ ಭಕ್ತಿಯು ಎಂದಿಗೂ ಜನಿಸುವುದಿಲ್ಲ. ॥೧೪೧॥

ಯೇಷಾಂ ಚೇತಸ್ತಪಃ ಪೂತಂ ತೇಷಾಮೇವ ಮಹಾತ್ಮನಾಂ ।
ಜಾಯತೇ ಗಿರಿಜಾನಾಥೇ ಭಕ್ತಿರವ್ಯಭಿಚಾರಿಣೀ ॥೧೩೨॥

ಯಾ ಭಕ್ತಿಃ ಶ್ರೀಮಹಾದೇವೇ ಭವತ್ಯವ್ಯಭಿಚಾರಿಣೀ ।
ಸೈವ ಮೋಕ್ಷಪ್ರದೇತ್ಯಾಹುಃ ವೇದಾಃ ಸರ್ವೇಽಪಿ ಸರ್ವದಾ ॥೧೩೩॥

ಬ್ರಹ್ಮವಿಷ್ಣ್ವಾದಿದೇವಾನಾಮಧಿಪಂ ಗಿರಿಜಾಧಿಪಂ ।
ಭಜಂತಿ ಧೀರಾಃ ಸತತಂ ನಿಷ್ಕಲಂ ನಿರ್ಗುಣಂ ಶಿವಂ ॥೧೩೪॥

ರಸನಾ ಯಸ್ಯ ಸತತಂ ಶಿವನಾಮರಸಾಯನಂ ।
ಸ ಧನ್ಯಃ ಸ ಕೃತಾರ್ಥಶ್ಚ ತೀರ್ಣಃ ಸಂಸಾರಸಾಗರಾತ್ ॥೧೩೫॥

ಸಂಸಾರಪಾಶಸಂಬದ್ಧಸ್ತಾವದ್ಭವತಿ ಮಾನವಃ ।
ನ ಯಾವದ್ಭಜತಿ ಪ್ರೀತ್ಯಾ ದೇವದೇವಂ ಮಹೇಶ್ವರಂ ॥೧೩೬॥

ಯಾರ ಅಂತಃಕರಣವು ತಪೋನುಷ್ಠಾನದಿಂದ ಶುದ್ಧವಾಗಿರುವುದೋ, ಆ ಮಹಾತ್ಮರಿಗೇನೆ ಉಮಾರಮಣನಾದ ಪರಶಿವನಲ್ಲಿ ನಿಶ್ಚಲವಾದ ಭಕ್ತಿಯು ಜನಿಸುವುದು. ॥೧೩೨॥

ಶಿವನಲ್ಲಿ ಜನಿಸಿದ ನಿಶ್ಚಲವಾದ ಭಕ್ತಿಯೇ ಮೋಕ್ಷದಾಯಕವೆಂದು ಸಕಲ ವೇದಗಳೂ ಹೇಳುತ್ತಿರುವುವು. ॥೧೩೩॥

ಜ್ಞಾನಿಗಳು ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳಿಗೆ ಪ್ರಭುವೂ, ಗಿರಿಜಾವಲ್ಲಭನೂ, ಷೋಡಶಕಲಾರಹಿತನೂ, ರೂಪಾದಿಗುಣಹೀನನೂ ಆದ ಶಿವನನ್ನೇ ನಿರಂತರವೂ ಆರಾಧಿಸುತ್ತಿರುವರು. ॥೧೩೪॥

ಯಾವನ ನಾಲಿಗೆಯು ಸತತವೂ ಶಿವನಾಮವೆಂಬ ರಸಾಯನವನ್ನು ಸೇವಿಸುವುದೋ ಅವನೇ ಭಾಗ್ಯಶಾಲಿಯೂ ಕೃತಕೃತ್ಯನೂ ಆಗಿರುವನಲ್ಲದೇ, ಅವನೇ ಸಂಸಾರಸಾಗರವನ್ನು ದಾಟಲು ಶಕ್ತನು. ॥೧೩೫॥

ಮನುಜನು ಎಲ್ಲಿನವರೆಗೆ ದೇವೇಶನಾದ ಪರಶಿವನನ್ನು ಪ್ರೀತಿಯಿಂದ ಸೇವಿಸುವುದಿಲ್ಲವೋ, ಆದುವರೆಗೆ ಅವನಿಗೆ ಸಂಸಾರವೆಂಬ ಪಾಶದ ಬಂಧನವು ತಪ್ಪಿದುದಲ್ಲ. ॥೧೩೬॥

ದೇವೋತ್ತಮಮನಾದ್ಯಂ ತಂ ನಿರವದ್ಯಂ ಮಹೇಶ್ವರಂ।
ಭಜಂತಿ ಯೇಽನ್ವಹಂ ಪ್ರೀತ್ಯಾ ತೇ ಧನ್ಯಾ ಇತಿ ಮನ್ಮಹೇ ॥೧೩೭॥

ಶಿವಂ ಪ್ರಯಾಂತ್ಯಯತ್ನೇನ ಸರ್ವೇಽಪಿ ಶಿವಪೂಜಯಾ ।
ಅತೋ ನಾನಾವಿಧೋಪಾಯೈಃ ಕರ್ತವ್ಯಂ ಶಿವಪೂಜನಂ ॥೧೩೮॥

ಸರ್ವಜ್ಞಃ ಶ್ರೀಮಹಾದೇವಃ ಸ ಸರ್ವವ್ಯಾಪಕೋಽಪಿ ಸನ್ ।
ಸ್ವಭಕ್ತಾನುಗ್ರಹಾಯಾತ್ರ ಲಿಂಗಾಕಾರೇಣ ತಿಷ್ಠತಿ ॥೧೩೯॥

ವಿಭೂತಿರಾಶಯೋ ಯತ್ರ ಯತ್ರ ಬಿಲ್ವವನಾದಿ ಚ ।
ಯತ್ರ ಶೈವಾಃ ಶಿವಪರಾಸ್ತತ್ರ ಸಂನಿಹಿತಃ ಶಿವಃ ॥೧೪೦॥

ಯತ್ರ ರುದ್ರಾಕ್ಷತರವೋ ಯತ್ರ ರುದ್ರಾಕ್ಷಭೂಷಣಾಃ ।
ಯತ್ರ ಶೈವಾನಿ ಲಿಂಗಾನಿ ತತ್ರ ಸಂನಿಹಿತಃ ಶಿವಃ ॥೧೪೧॥

ದೇವತೆಗಳಲ್ಲಿ ಶ್ರೇಷ್ಠತಮನೂ ಶುದ್ಧನೂ ಆದ ಆ ಪರಶಿವನನ್ನು ಯಾರು ಪ್ರತಿದಿನವೂ ಭಜಿಸುವರೋ ಅವರೇ ಕೃತಕೃತ್ಯರಾಗಿರುವರೆಂದು ತಿಳಿಯುವೆವು. ||೧೩೭||

ಸಮಸ್ತರೂ ಈಶ್ವರಾರಾಧನೆಯಿಂದ ಅನಾಯಾಸವಾಗಿ ಶಿವಸನ್ನಿಧಿಯನ್ನು ಪಡೆಯುವರು. ಆದುದರಿಂದ ಸರ್ವಪ್ರಯತ್ನಗಳಿಂದಲೂ ಶಿವನನ್ನೇ ಆರಾಧಿಸಬೇಕು. ||೧೩೮||

ಸರ್ವಜ್ಞನೂ, ಷಡ್ಗುಣೈಶ್ವರ್ಯಸಂಪನ್ನನೂ ಆದ ಆ ಪರಶಿವನು ಬ್ರಹ್ಮಾದಿಸ್ತಂಬಪರ್ಯಂತವಾದ ಸಕಲ ಪದಾರ್ಥಗಳನ್ನೂ ವ್ಯಾಪಿಸಿ ಇರುವವನಾದರೂ ಸಹ ಭಕ್ತರನ್ನು ಅನುಗ್ರಹಿಸುವುದಕ್ಕೋಸ್ಕರ ಲಿಂಗಾಕಾರದಿಂದ ಈ ಸ್ಥಳದಲ್ಲಿ ವಿಶೇಷವಾಗಿ ನೆಲಸಿರುವನು. ||೧೩೯||

ಯಾವ ಸ್ಥಳದಲ್ಲಿ ಭಸ್ಮರಾಶಿಗಳು ಕಾಣುವುವೋ ಯಾವ ಪ್ರದೇಶದಲ್ಲಿ ಬಿಲ್ವವೃಕ್ಷಗಳ ವನಗಳು ಶೋಭಿಸುತ್ತಿರುವುವೋ, ಮತ್ತು ಯಾವ ಸ್ಥಳದಲ್ಲಿ ಈಶ್ವರಧ್ಯಾನಾಸಕ್ತರಾದ ಈಶ್ವರಭಕ್ತರು ನೆಲಸಿರುವರೋ, ಆ ಸ್ಥಳಗಳಲ್ಲೆಲ್ಲಾ ನಿತ್ಯವೂ ಶಿವನು ಸನ್ನಿಹಿತನಾಗಿರುವನು. ||೧೪೦||

ಯಾವ ಪ್ರದೇಶದಲ್ಲಿ ರುದ್ರಾಕ್ಷಗಳಿಂದ ಶೋಭಿಸುತ್ತಿರುವ ರುದ್ರಾಕ್ಷವೃಕ್ಷಗಳಿರುವುವೋ ಮತ್ತು ಎಲ್ಲಿ ಈಶ್ವರಲಿಂಗಗಳಿರುವುವೋ, ಯಾವ ಸ್ಥಳದಲ್ಲಿ ಈಶ್ವರಭಕ್ತರು ಕಾಣಿಸುವರೋ ಅಲ್ಲಿ ಶಿವನು ಸನ್ನಿಹಿತನಾಗಿರುವನು. ||೧೪೧||

ಯತ್ರ ಪಂಚಾಕ್ಷರಾಸಕ್ತಾ ಯತ್ರ ಶ್ರೀರುದ್ರಜಾಪಕಾಃ ।
ಯತ್ರ ಪಾಶುಪತಾಚಾರಾಸ್ತತ್ರ ಸಂನಿಹಿತಃ ಶಿವಃ ॥೧೪೨॥

ವಿಭೂತಿರಾಶಯಃ ಸಂತಿ ಪಶ್ಯಾತ್ರ ಶತಶೋ ಮುನೇ ।
ಕೋಟಿಶಃ ಸಂತಿ ಪಶ್ಯಾತ್ರ ನವಬಿಲ್ವದಲಾನ್ಯಪಿ ॥೧೪೩॥

ರುದ್ರಾಕ್ಷವೃಕ್ಷಾನ್ಪಶ್ಯಾತ್ರ ಪಕ್ವೈರುದ್ರಾಕ್ಷಸಂಯುತಾನ್ ।
ಕೋಟಿಶಃ ಸಂತಿ ರುದ್ರಾಕ್ಷಾ ಮಹಾರುದ್ರಪ್ರಿಯಾ ಮುನೇ ॥೧೪೪॥

ರುದ್ರಾಕ್ಷದರ್ಶನೇನಾಪಿ ನಶ್ಯತ್ಯಘಕುಲಂ ಕ್ಷಣಾತ್ ।
ಪಶ್ಯ ಪಶ್ಯಾತ್ರ ರುದ್ರಾಕ್ಷಾನ್ರಾಶೀಭೂತಾನನೇಕಧಾ ॥೧೪೫॥

ಅತ್ರ ನಾನಾಮುಖಾಃ ಸಂತಿ ರುದ್ರಾಕ್ಷಾಃ ಶಿವಸಂಮತಾಃ ।
ರುದ್ರಾಕ್ಷಮಾಲಿಕಾಂ ಕೃತ್ವಾ ಕುರು ರುದ್ರಾಕ್ಷಧಾರಣಂ ॥೧೪೬॥

ಯಾವ ಸ್ಥಳದಲ್ಲಿ ಈಶ್ವರಭಕ್ತಾಗ್ರಣಿಗಳು ಶಿವಪಂಚಾಕ್ಷರಮಂತ್ರವನ್ನು ಜಪಿಸುವುದರಲ್ಲಿಯೇ ಮಗ್ನರಾಗಿರುವರೋ, ಯಾವ ಸ್ಥಳದಲ್ಲಿ ರುದ್ರಾಧ್ಯಾಯವನ್ನು ಜಪಿಸುವ ಈಶ್ವರಭಕ್ತರು ಕಾಣಿಸುವರೋ, ಮತ್ತು ಎಲ್ಲಿ ಪಶುಪತಿಗೆ ಪ್ರಿಯವಾದ ಆಚಾರಗಳು ಪ್ರಚಾರದಲ್ಲಿರುವುವೋ, ಅಲ್ಲಿ ಶಿವನು ನಿತ್ಯವೂ ನೆಲಸಿರುವನು. ॥೧೪೨॥

ಎಲೈ ಮುನಿಯೇ, ಇದೋ ಇತ್ತನೋಡು, ನೂರಾರು ಭಸ್ಮರಾಶಿಗಳು ಕಾಣಿಸುತ್ತಿರುವುವು. ಇತ್ತ ಇನ್ನೊಂದು ಕಡೆ ಕೋಟ್ಯಂತರ ನೂತನವಾದ ಬಿಲ್ವ ವನಗಳು ತೋರುತ್ತಿರುವುವು. ॥೧೪೩॥

ಎಲೈ ಕಶ್ಯಪನೇ, ಪಕ್ವವಾದ ರುದ್ರಾಕ್ಷಗಳಿಂದ ಶೋಭಿಸುತ್ತಿರುವ ಈ ರುದ್ರಾಕ್ಷವೃಕ್ಷಗಳನ್ನು ನೋಡು. ಇಲ್ಲಿ ರುದ್ರನಿಗೆ ಪ್ರಿಯವಾದ ರುದ್ರಾಕ್ಷಗಳು ಅಸಂಖ್ಯಾಕವಾಗಿವೆ. ॥೧೪೪॥

ರುದ್ರಾಕ್ಷಗಳ ದರ್ಶನದಿಂದಲೂ ಪಾಪರಾಶಿಯು ಕ್ಷಣಕಾಲದಲ್ಲಿಯೇ ಕ್ಷಯಿಸುವುದು. ಎಲೈ ಮುನಿಯೇ, ಇತ್ತ ಹಲವೆಡೆಗಳಲ್ಲಿ ರಾಶಿರಾಶಿಯಾಗಿ ಬಿದ್ದಿರುವ ಈ ರುದ್ರಾಕ್ಷಗಳನ್ನು ನೋಡು. ॥೧೪೫॥

ಇಲ್ಲಿ ಈಶ್ವರನಿಗೆ ಪ್ರಿಯವಾಗಿ ವಿವಿಧವಾದ ಮುಖಗಳಿಂದ ಕೂಡಿರುವ ರುದ್ರಾಕ್ಷಗಳಿರುವುವು. ಅವುಗಳಿಂದ ಮಾಲಿಕೆಯನ್ನು ರಚಿಸಿ ನೀನು ಅದನ್ನು ಧರಿಸು. ॥೧೪೬॥

ಮುಖಂ ಮುಖೇನ ಸಂಯೋಜ್ಯ ಕುರು ರುದ್ರಾಕ್ಷಮಾಲಿಕಾಂ ।
ಕಂಠಕರ್ಣಾದಿದೇಶೇಷು ಬಹುರುದ್ರಾಕ್ಷಮಾಲಿಕಾಃ ॥೧೪೭॥

ಸಹಸ್ರಮಾತ್ರಂ ರುದ್ರಾಕ್ಷಾ ಯಸ್ಯಾಂಗೇ ಸಂತಿ ಸರ್ವದಾ ।
ಸ ಸರ್ವದುಃಖನಿರ್ಮುಕ್ತಃ ಪ್ರಯಾತಿ ಶಿವಸನ್ನಿಧಿಂ ॥೧೪೮॥

ಏತಾನೇಕಾದಶಮುಖಾನ್ರುದ್ರಾಕ್ಷಾನ್ಪಶ್ಯ ಕೋಟಿಶಃ ।
ಅನರ್ಘ್ಯಾನಘಹಾನ್ಪುಣ್ಯಾನ್ಧಾರಯಸ್ವ ಯಥೇಚ್ಛಯಾ ॥೧೪೯॥

ರುದ್ರಾಕ್ಷಧಾರಣಂ ಕೃತ್ವಾ ಭಸ್ಮಧಾರಣಪೂರ್ವಕಂ ।
ಕೃತಾನಂತಮಹಾಪಾಪೋಽಪ್ಯನಾಯಸೇನ ಮುಚ್ಯತೇ ।೧೫೦॥

ಮುನೇ ಕೇವಲಭಸ್ಮಾಂಗೈಃ ಕಾರ್ಯಂ ರುದ್ರಾಕ್ಷಧಾರಣಂ ।
ತೇಷಾಮೇವಾಧಿಕಾರೋಽಸ್ತಿ ಯತೋ ರುದ್ರಾಕ್ಷಧಾರಣಂ ॥೧೫೧॥

ಒಂದು ರುದ್ರಾಕ್ಷಿಯ ಮುಖವನ್ನು ಮತ್ತೊಂದು ರುದ್ರಾಕ್ಷಿಯ ಮುಖದೊಂದಿಗೆ ಸೇರಿಸಿ, ಇದೇ ರೀತಿಯಲ್ಲಿ ಅನೇಕ ರುದ್ರಾಕ್ಷಮಾಲೆಗಳನ್ನು ರಚಿಸಿ, ಕಂಠ, ಕಿವಿ ಮುಂತಾದ ಪ್ರದೇಶಗಳಲ್ಲಿ ಆ ಮಾಲಿಕೆಗಳನ್ನು ಧರಿಸು. ॥೧೪೭॥

ಯಾವ ಮನುಜನ ಶರೀರದಲ್ಲಿ ಸಹಸ್ರರುದ್ರಾಕ್ಷಗಳಿರುವುವೋ, ಅವನು ಸಕಲ ದುಃಖಗಳಿಂದಲೂ ವಿನಿರ್ಮುಕ್ತನಾಗಿ ಅಂತ್ಯದಲ್ಲಿ ಶಿವಸಾನ್ನಿಧ್ಯವನ್ನು ಸೇರುವನು. ॥೧೪೮॥

ಹನ್ನೊಂದು ಮುಖಗಳಿಂದ ಕೂಡಿರುವ ಅಗಣಿತವಾದ ಈ ರುದ್ರಾಕ್ಷಿಗಳನ್ನು ನೋಡು! ಅವು ಅಮೂಲ್ಯವೂ, ಪಾಪನಾಶಕಗಳೂ, ಪುಣ್ಯಕರಗಳೂ ಆಗಿರುವುವು. ಅವುಗಳನ್ನು ನಿನ್ನ ಇಷ್ಟಾನುಸಾರ ಧರಿಸು. ॥೧೪೯॥

ಮೊದಲು ಭಸ್ಮಧಾರಣೆಯನ್ನು ಮಾಡಿ, ರುದ್ರಾಕ್ಷಿಗಳನ್ನು ಧರಿಸಿದರೆ ಅಗಣಿತವಾದ ಮಹಾಪಾಪಗಳನ್ನು ಹೊಂದಿದ್ದರೂ ಸಹ ಮನುಜನು ಸುಖವಾಗಿ ಆ ಪಾಪಗಳಿಂದ ಬಿಡುಗಡೆಯನ್ನು ಹೊಂದಿ ಮೋಕ್ಷವನ್ನು ಹೊಂದುವನು. ॥೧೫೦॥

ಎಲೈ ಮುನಿಯೇ, ಮೊದಲು ಭಸ್ಮವನ್ನು ಧರಿಸಿದವನೇ ರುದ್ರಾಕ್ಷಿಗಳನ್ನು ಧರಿಸಬೇಕು. ಭಸ್ಮಧಾರಣೆಯನ್ನು ಮಾಡದಿದ್ದವರು ಅದನ್ನೆಂದಿಗೂ ಧರಿಸಬಾರದು. ಭಸ್ಮವನ್ನು ಧರಿಸಿದ ಮನುಜನೇ ಈಶ್ವರಾರಾಧನೆಯಲ್ಲಿ ಅಧಿಕಾರಿಯೆನಿಸು

ವೇದಸ್ಯಾಧ್ಯಯನಂ ಕಾರ್ಯಮುಪನೀತೈರ್ಯಥಾ ತಥಾ ।
ರುದ್ರಾಕ್ಷಧಾರಣಂ ಕಾರ್ಯಂ ಶುದ್ಧಭಸ್ಮಾನುಲೇಪನೈಃ ॥೧೫೨॥

ವಿಭೂತಿಧಾರಣಂ ಕೃತ್ವಾ ಕೃತ್ವಾ ರುದ್ರಾಕ್ಷಧಾರಣಂ ।
ಯಃ ಶಿವಂ ಪೂಜಯೇದ್ಭಕ್ತ್ಯಾ ಸ ಮೋಕ್ಷಮಧಿಗಚ್ಛತಿ ॥೧೫೩॥

ಭೂತಿರುದ್ರಾಕ್ಷಪೂತಾಂಗೈಃ ಶಿವೈಕಪರದೈವತೈಃ ।
ಪೂಜಿತಃ ಶ್ರೀಮಹಾದೇವಸ್ತೇಭ್ಯೋ ಮೋಕ್ಷಂ ಪ್ರಯಚ್ಛತಿ ॥೧೫೪॥

ಭುಕ್ತಿಮುಕ್ತಿಪ್ರದಂ ಮತ್ವಾ ಶಿವಂ ಶೈವಾಃ ಸಮಾಹಿತಾಃ ।
ಪೂಜಯಂತ್ಯತಿಯತ್ನೇನ ನಿತ್ಯಮವ್ಯಭಿಚಾರತಃ ॥೧೫೫॥

ನ ಜಾನೀಮಃ ಶಿವಾದನ್ಯಂ ನ ಜಾನೀಮ ಇತೀಶ್ವರಂ ।
ಪೂಜಯಂತ್ಯನ್ವಹಂ ಭಕ್ತ್ಯಾ ಸಂಸಾರಚ್ಛೇದಕಾರಣಂ ॥೧೫೬॥

ವನು. ಏಕೆಂದರೆ, ಅವನು ಭಸ್ಮವನ್ನು ಧರಿಸಿದುದರಿಂದ ರುದ್ರಾಕ್ಷಿಗಳನ್ನು ಸಹ ಧರಿಸಲು ಅರ್ಹನಾಗುವನು. ॥೧೫೧॥

ಉಪನೀತರಾದವರೇ ವೇದಾಧ್ಯಯನವನ್ನು ಮಾಡಬೇಕೆಂದು ನಿಯಮವಿರುವುದು. ಪರಿಶುದ್ಧವಾದ ವಿಭೂತಿಯನ್ನು ಧರಿಸಿದವರೇ ಈಶ್ವರನನ್ನು ಪೂಜಿಸಲು ಅರ್ಹರು. ॥೧೫೨॥

ಯಾವನು ವಿಭೂತಿಯನ್ನೂ ರುದ್ರಾಕ್ಷಿಗಳನ್ನೂ ಧರಿಸಿ ಶಿವನನ್ನು ಭಕ್ತಿಯಿಂದ ಪೂಜಿಸುವನೋ ಅವನು ಮೋಕ್ಷವನ್ನು ಪಡೆಯುವನು. ॥೧೫೩॥

ವಿಭೂತಿ, ರುದ್ರಾಕ್ಷಿಗಳನ್ನು ಧರಿಸಿ ಶಿವನೊಬ್ಬನೇ ಪರಮಪೂಜ್ಯವಾದ ದೇವತೆಯೆಂದು ನಂಬಿ, ಅವನನ್ನು ಪೂಜಿಸಿದವರಿಗೆ ಆ ಮಹಾದೇವನು ಮೋಕ್ಷವನ್ನು ದಯಪಾಲಿಸುವನು. ॥೧೫೪॥

ಶೈವದೀಕ್ಷೆಯನ್ನು ವಹಿಸಿದ ಜನರು, ಶಿವನು, ಅಶನವಸನಗಳನ್ನೂ ಮೋಕ್ಷವನ್ನೂ ತಮಗೆ ದಯಪಾಲಿಸುವನೆಂದು ತಿಳಿದು, ಚಿತ್ತೈಕಾಗ್ರ್ಯದಿಂದ ಪ್ರತಿದಿನವೂ ತಪ್ಪದೇ ಅವನನ್ನು ಆರಾಧಿಸುತ್ತಿರುವರು. ॥೧೫೫॥

ಅವರು ಹಗಲಿರುಳೂ "ಶಿವನಿಗಿಂತಲೂ ಭಿನ್ನನಾದ ದೇವನನ್ನು ನಾವು ಅರಿತಿರುವುದಿಲ್ಲ. ಶಿವನನ್ನು ಬಿಟ್ಟು ಇನ್ನಾರನ್ನೂ ಧ್ಯಾನಿಸುವುದಿಲ್ಲ" ಎಂದು ಹೇಳುತ್ತಾ ಸಂಸಾರತಾರಕನಾದ ಶಿವನನ್ನು ಭಕ್ತಿಯಿಂದ ಪೂಜಿಸುವರು. ॥೧೫೬॥

ಸಂಸಾರತರುಮೂಲಾನಿ ಮಹೇಶಾರ್ಚನವಹ್ನಿನಾ ।
ಸದ್ಯೋ ಭವಂತಿ ದಗ್ಧಾನಿ ಪ್ರಬಲಾನ್ಯಪಿ ಸತ್ವರಂ ॥೧೫೭॥

ಪ್ರರೂಢಮೂಲಸಂಬದ್ಧಂ ಮಹಾಸಂಸಾರಪಾದಪಂ ।
ಶೈವಾಃ ಪದನಖಾಗ್ರೇಣ ಛಿತ್ವಾ ಯಾಂತಿ ಪದಂ ಶಿವಂ ॥೧೫೮॥

ಅತಃ ಶಿವಪರೋ ಭೂತ್ವಾ ಭಸ್ಮರುದ್ರಾಕ್ಷಧಾರಣಃ ।
ಪೂಜಯಸ್ವ ಮಹಾದೇವಂ ದೇವದೇವೋತ್ತಮಂ ಶಿವಂ ॥೧೫೯॥

ಇದಂ ಸಿದ್ಧಪದಂ ಕ್ಷೇತ್ರಂ ಸಿದ್ಧಲಿಂಗಮಿದಂ ಮುನೇ ।
ಅತ್ರ ಸಂಸಾರಶಾಂತ್ಯರ್ಥಂ ಪೂಜಯಸ್ವ ಮಹೇಶ್ವರಂ ॥೧೬೦॥

ಶಿವಾರಾಧನವೃಷ್ಟ್ಯೈವ ಚಿತ್ತಗಹ್ವರದಾಹಕಃ ।
ಶಾಂತೋ ಭವತ್ಯುಜ್ವಲೋಽಪಿ ಸಂಸಾರವನಪಾವಕಃ ॥೧೬೧॥

ಸಂಸಾರವೆಂಬ ವೃಕ್ಷದ ಬೇರುಗಳು ಅತ್ಯಂತ ಪ್ರಬಲವಾಗಿದ್ದರೂ ಸಹ ಈಶ್ವರಾರಾಧನೆಯೆಂಬ ಅಗ್ನಿಯಿಂದ ಜಾಗ್ರತೆಯಾಗಿ ದಹಿಸಿಹೋಗುವುವು. ॥೧೫೭॥

ಈಶ್ವರಭಕ್ತರು, ಚೆನ್ನಾಗಿ ಬೆಳೆದು ನೆಲದಲ್ಲಿ ಎಲ್ಲೆಡೆಯಲ್ಲಿಯೂ ವ್ಯಾಪಿಸಿರುವ ಬೇರಿನಿಂದ ಕೂಡಿದ ಸಂಸಾರವೆಂಬ ದೊಡ್ಡದಾದ ವೃಕ್ಷವನ್ನು ತಮ್ಮ ಕಾಲಿನ ಉಗುರಿನಿಂದ ಕತ್ತರಿಸಿ ಶಿವಸನ್ನಿಧಿಯನ್ನು ಪಡೆಯುವರು. ॥೧೫೮॥

ಆದುದರಿಂದ ವಿಭೂತಿ ರುದ್ರಾಕ್ಷಗಳನ್ನು ಧರಿಸಿ, ಈಶ್ವರಧ್ಯಾನಾಸಕ್ತನಾಗಿ, ದೇವೇಶನೂ, ದೇವತೆಗಳಲ್ಲಿ ಶ್ರೇಷ್ಠತಮನೂ ಆದ ಪರಶಿವನನ್ನು ಆರಾಧಿಸು. ॥೧೫೯॥

ಎಲೈ ಮುನಿಯೇ, ಈ ಕ್ಷೇತ್ರವು ಸಿದ್ಧಪದವೆಂಬ ಹೆಸರಿನಿಂದ ಪ್ರಸಿದ್ಧವಾಗಿರುವುದು. ಇದೇ ಸಿದ್ಧಪದವೆಂಬ ಲಿಂಗವು. ಇಲ್ಲಿ ಸಂಸಾರಶಮನಕ್ಕೋಸ್ಕರ ಪರಶಿವನನ್ನು ಪೂಜಿಸು. ॥೧೬೦॥

ಚಿತ್ತವೆಂಬ ಅರಣ್ಯವನ್ನು ದಹಿಸುವ ಸಂಸಾರವೆಂಬ ದಾವಾನಲವು ಧಗಧಗಿಸುತ್ತಿದ್ದರೂ ಸಹ ಈಶ್ವರಾರಾಧನೆಯೆಂಬ ವೃಷ್ಟಿಯಿಂದ ಅದು ಶೀಘ್ರವಾಗಿ ಶಾಂತವಾಗುವುದು. ॥೧೬೧॥

ಪುರಾ ಸಂಸಾರಶಾಂತ್ಯರ್ಥಂ ಬಹವೋಽತ್ರ ಮುನೀಶ್ವರಾಃ ।
ಮಹೇಶಾರಾಧನಂ ಕೃತ್ವಾ ಮುಕ್ತಾ ಸಂಸಾರಬಂಧನಾತ್ ॥೧೬೨॥

ವಿನಾ ಶಿವಾರ್ಚನಂ ಕಣ್ವ ಸಂಸಾರೋ ನ ವಿನಶ್ಯತಿ ।
ಅತಃ ಸಂಸಾರಶಾಂತ್ಯರ್ಥಂ ಕುರುಷ್ವ ಶಿವಪೂಜನಂ ॥೧೬೩॥

ಅತ್ರೈವ ಚ ಮಹಾಶೈವಾಃ ಕಾಶೀಪ್ರಾಪ್ತ್ಯರ್ಥಮಾದರಾತ್ ।
ತಪಃ ಕೃತ್ವಾ ಸ್ಥಿತಾ ಘೋರಂ ಸಂಸಾರವನಪಾವಕಂ ॥೧೬೪॥

ಇದಾನೀಮಪಿ ಕುರ್ವಂತಿ ಶೈವಾ ಲಿಂಗಾರ್ಚನಪ್ರಿಯಾಃ ।
ಕಾಶೀಪ್ರಾಪ್ತ್ಯರ್ಥಮತ್ಯರ್ಥಂ ತಪೋ ಯತ್ನಪುರಃಸರಂ ॥೧೬೫॥

ಕಾಶೀ ಪ್ರಾಪ್ತೈವ ಬಹುಭಿರತ್ರ ಪೂರ್ವಂ ತಪಸ್ಯಯಾ ।
ಅತ್ರ ತಪ್ತೇ ತಪಸ್ಯಾಶು ಕಾಶೀ ಸಂಪ್ರಾಪ್ಯತೇ ದ್ವಿಜೈಃ ॥೧೬೬॥

ಹಿಂದೆ ಈ ಸ್ಥಳದಲ್ಲಿ ಅನೇಕಮಂದಿ ಮುನಿಪುಂಗವರು ಭಯಂಕರವಾದ ಈ ಸಂಸಾರದ ಬೇಸೆಯಿಂದ ಶಾಂತರಾಗಬೇಕೆಂಬ ಕುತೂಹಲದಿಂದ ಈಶ್ವರನನ್ನು ಆರಾಧಿಸಿ ಸಂಸಾರಪಾಶದಿಂದ ಬಿಡುಗಡೆಯನ್ನು ಹೊಂದಿದರು. ॥೧೬೨॥

ಎಲೈ ಕಣ್ವನೇ, ಈಶ್ವರಾರಾಧನೆಯಿಲ್ಲದಿದ್ದರೆ ಸಂಸಾರವು ಎಂದಿಗೂ ಶಾಂತವಾಗಲಾರದು. ಆದುದರಿಂದ ಸಂಸಾರಶಾಂತಿಗೋಸ್ಕರ ಶಿವನನ್ನು ಆರಾಧಿಸು.॥೧೬೩॥

ಹಿಂದೆ ಇದೇ ಸ್ಥಳದಲ್ಲಿ ಅನೇಕ ಶೈವಮಹನೀಯರು ಕಾಶೀಕ್ಷೇತ್ರದ ಪ್ರಾಪ್ತಿಗೋಸ್ಕರ ಸಂಸಾರಕ್ಕೆ ದಾವಾನಲದಂತಿರುವ ಭಯಂಕರವಾದ ತಪಸ್ಸನ್ನು ಆಚರಿಸುತ್ತಾ ವಾಸವಾಗಿದ್ದರು. ॥೧೬೪॥

ಈಗಲೂ ಸಹ ಶಿವಲಿಂಗಾರಾಧನೆಯಲ್ಲಿ ಪ್ರೀತಿಯುಳ್ಳ ಈಶ್ವರಭಕ್ತರು ಕಾಶೀಕ್ಷೇತ್ರದ ಪ್ರಾಪ್ತಿಗಾಗಿ ಅತ್ಯಂತ ಭಕ್ತಿಶ್ರದ್ಧೆಗಳಿಂದ ತಪಸ್ಸನ್ನಾಚರಿಸುತ್ತಲಿರುವರು. ॥೧೬೫॥

ಹಿಂದೆ ಅನೇಕ ಜನರು ಇಲ್ಲಿ ತಪಸ್ಸನ್ನಾಚರಿಸಿದುದರಿಂದ ಅವರಿಗೆ ಕಾಶೀಕ್ಷೇತ್ರವಾಸವು ಪ್ರಾಪ್ತವಾಯಿತು. ಇಲ್ಲಿ ತಪಸ್ಸನ್ನಾಚರಿಸಿದರೆ ಶೀಘ್ರವಾಗಿ ಕಾಶೀಕ್ಷೇತ್ರವಾಸವು ಪ್ರಾಪ್ತವಾಗುವುದು. ॥೧೬೬॥

ಅಸ್ಯ ಸಿದ್ಧೇಶಲಿಂಗಸ್ಯ ಪ್ರಭಾವಸ್ತಾದೃಶೋ ಯತಃ ।
ಸಾರ್ಧಾರ್ಬುದಂ ದ್ವಿಜಾಃ ಪೂರ್ವಮತ್ರ ಕೃತ್ವಾ ತಪೋ ಮುದಾ॥೧೬೭॥

ಕಾಶೀಂ ಪ್ರಾಪುರನಾಯಾಸಾಚ್ಛ್ರೀಮಹೇಶಪ್ರಸಾದತಃ ।
ಅತೋಽತ್ರ ಯತ್ನತಃ ಕಾರ್ಯಂ ತಪಃ ಸಿದ್ಧಿಪ್ರದಂ ದ್ವಿಜೈಃ ॥೧೬೮॥

ಅತ್ರ ಪೂರ್ವಂ ಶಿವಾ ನಿತ್ಯಮಾವಿರ್ಭೂತಾ ಹಿಮಾಲಯೇ ।
ಚಕ್ರೇ ಪ್ರಾಪ್ತಶಿವಾಪ್ಯತ್ರ ಶಿವಂ ಪ್ರಾಪ್ತುಂ ತಪೋ ಮುದಾ ॥೧೬೯॥

ನಿಷ್ಕಲಾ ನಿರವದ್ಯಾ ಸಾ ಶಿವಾನೀ ಶಿವರೂಪಿಣೀ ।
ದೃಷ್ಟ್ವಾತ್ರ ವಿಷ್ಣುನಾ ಪೂರ್ವಮಾದಿವಿದ್ಯಾ ಯಶಸ್ವಿನೀ ॥೧೭೦॥

ತಾಂ ತಾದೃಶೀಂ ಮುದಾ ದೃಷ್ಟ್ವಾ ವಿಷ್ಣುಃ ಸಂತುಷ್ಟಮಾನಸಃ ।
ಪ್ರಣಮ್ಯ ದಂಡವದ್ಭೂಮೌ ಪೂಜಯಾಮಾಸ ಸಾದರಂ ॥೧೭೧॥

ಈ ಸಿದ್ಧೇಶಲಿಂಗದ ಮಹಿಮೆಯೇ ಆ ರೀತಿಯಲ್ಲಿರುವುದು. ಇಲ್ಲಿ ಹಿಂದೆ ಬಹುಮಂದಿ ದ್ವಿಜರು ಒಂದೂವರೆ ಅರ್ಬುದ ವರ್ಷಗಳಕಾಲ ಸಂತೋಷದಿಂದ ತಪಸ್ಸನ್ನಾಚರಿಸಿ ಈಶ್ವರಾನುಗ್ರಹಕ್ಕೆ ಪಾತ್ರರಾಗಿ ಸುಖದಿಂದ ಕಾಶೀಕ್ಷೇತ್ರವನ್ನು ಸೇರಿದರು. ಆದುದರಿಂದ ದ್ವಿಜರು ತಪ್ಪದೇ ಈ ಪ್ರದೇಶದಲ್ಲಿ ತಪಸ್ಸನ್ನಾಚರಿಸಿದರೆ ಅದು ಶೀಘ್ರವಾಗಿ ಇಷ್ಟಾರ್ಥವನ್ನು ದಯಪಾಲಿಸುವುದು. ||೧೬೭-೧೬೮||

ಪೂರ್ವಕಾಲದಲ್ಲಿ ಈ ಹಿಮಾಚಲದಲ್ಲಿ ಪಾರ್ವತಿಯು ನಿರಂತರವೂ ಆವಿರ್ಭವಿಸಿದ್ದು ತಾನು ಶಿವನನ್ನು ಹೊಂದಿದ್ದರೂ ಸಹ ಅವನನ್ನು ವಿಶೇಷವಾಗಿ ಸಾಕ್ಷಾತ್ಕರಿಸಬೇಕೆಂಬ ಇಚ್ಛೆಯಿಂದ ತಪಸ್ಸನ್ನಾಚರಿಸಿದಳು. ||೧೬೯||

ಹಿಂದೆ ವಿಷ್ಣುವು ನಿರ್ವಿಕಾರಳೂ, ಪರಿಶುದ್ಧಳೂ, ಪರಶಿವನ ಅರ್ಧಾಂಗಿಯೂ, ಶಿವಸ್ವರೂಪಳೂ, ಆದಿವಿದ್ಯೆಯೂ ಆದ ಪಾರ್ವತಿಯನ್ನು ಈ ಸ್ಥಳದಲ್ಲಿಯೇ ಸಂದರ್ಶಿಸಿದನು. ||೧೭೦||

ಆದಿಶಕ್ತಿಸ್ವರೂಪಳಾದ ಅವಳನ್ನು ನೋಡಿದೊಡನೆಯೇ, ವಿಷ್ಣುವು ಸಂತೋಷಭರಿತನಾಗಿ ದಂಡಾಕಾರವಾಗಿ ನಮಸ್ಕರಿಸಿ ಭಕ್ತಿಯಿಂದ ಪೂಜಿಸಿದನು. ||೧೭೧||

॥ ವಿಷ್ಣುರುವಾಚ ॥

ತತಸ್ತುಷ್ಟಾವ ತಾಂ ವಿಷ್ಣುರಾದಿವಿದ್ಯಾಂ ಮಹೇಶ್ವರೀಂ ।
ಕೃತಾಂಜಲಿಪುಟೋ ಭೂತ್ವಾ ಪ್ರಣಮ್ಯ ಚ ಮುಹುರ್ಮುಹುಃ ॥೧೭೨॥

ಓಂ ಜಯ ಮಾತರ್ಜಗದ್ವಂದ್ಯೇ ಜಯ ವಿಶ್ವೇಶ್ವರಪ್ರಿಯೇ ।
ಜಯ ಕಲ್ಯಾಣದೇ ಭವ್ಯೇ ಜಯ ಸೌಭಾಗ್ಯಸಂಶ್ರಯೇ ॥೧೭೩॥

ಜಯ ಕಲ್ಯಾಣನಿಲಯೇ ಜಯ ವೇದಾಂತಸಂಸ್ತುತೇ ।
ಜಯ ಪುಣ್ಯೈಕನಿಲಯೇ ಜಯ ಕಾರುಣ್ಯಸಂಶ್ರಯೇ ॥೧೭೪॥

ಜಯ ವೇದಾಂತಸಂವೇದ್ಯೇ ಜಯ ನಿತ್ಯೇ ನಿರಂಜನೇ ।
ಜಯ ವಿದ್ಯೈಕನಿಲಯೇ ಜಯಾಪರ್ಣೇ ಜಯಾಮಲೇ ॥೧೭೫॥

ಜಯ ಮಂಜುಲಮಂದಾರಪುಷ್ಪಮಾಲಾವಿರಾಜಿತೇ ।
ಜಯ ನೀಲೋತ್ಪಲಾನೀಲಲಸನ್ನಯನಪಂಕಜೇ ॥೧೭೬॥

ಬಳಿಕ ವಿಷ್ಣುವು ಅಂಜಲಿಬದ್ಧನಾಗಿ ದೇವಿಗೆ ಪುನಃ ಪುನಃ ನಮಸ್ಕರಿಸಿ ಆದಿವಿದ್ಯಾಸ್ವರೂಪಳಾದ ಅವಳನ್ನು ಸ್ತುತಿಸಿದನು. ॥೧೭೨॥

ಆಗ ವಿಷ್ಣುವು—ಓ ಜಗದ್ವಂದ್ಯಳಾದ ಮಾತೆಯೇ, ನಿನಗೆ ಮಂಗಳವಾಗಲಿ. ಓ ಪರಶಿವನ ಪ್ರೇಯಸಿಯೇ, ಕಲ್ಯಾಣಪ್ರದಳೇ, ದಿವ್ಯಮೂರ್ತಿಯೇ, ಸೌಭಾಗ್ಯ ನಿಧಿಯೇ, ನೀನು ಸರ್ವಶ್ರೇಷ್ಠಳಾಗಿರುವೆ. ॥೧೭೩॥

ಓ ಕಲ್ಯಾಣನಿಧಿಯೇ, ನಿನಗೆ ಮಂಗಳವಾಗಲಿ. ನಿನ್ನ ಅನಂತ ಕಲ್ಯಾಣ ಗುಣಗಳನ್ನು ವೇದಾಂತಗಳು ಬಾರಿಬಾರಿಗೂ ಸ್ತುತಿಸುತ್ತಿರುವುವು. ಎಲೌ ಪುಣ್ಯ ನಿಧಿಯೆ, ಕರುಣಾಳುವೇ, ನಿನಗೆ ಮಂಗಳವಾಗಲಿ. ॥೧೭೪॥

ವೇದಾಂತವೇದ್ಯಳೇ, ನಿತ್ಯೆಯೇ, ಪಾಪರಹಿತಳೇ, ವಿದ್ಯಾನಿಧಿಯೇ, ನಿತ್ಯ ಶುದ್ಧಳೇ, ನಿನಗೆ ಶುಭವಾಗಲಿ. ॥೧೭೫॥

ದೇವಿ, ನೀನು ಮನೋಹರವಾದ ಮಂದಾರಪುಷ್ಪಗಳ ಮಾಲಿಕೆಗಳಿಂದ ಶೋಭಿಸುತ್ತಿರುವೆ. ನಿನ್ನ ನೇತ್ರಕಮಲಗಳು ಕನ್ನೈದಿಲೆಯಂತೆ ಸುತ್ತಲೂ ಕಪ್ಪಾದ ಕಾಂತಿರಾಶಿಯನ್ನು ಹೊರಗೆಡಹುತ್ತಿರುವುವು. ಅಂತಹ ನಿನಗೆ ಕಲ್ಯಾಣ ವಾಗಲಿ. ॥೧೭೬॥

ಜಯ ಸರ್ವಕಳಾಪೂರ್ಣಚಂದ್ರಬಿಂಬನಿಭಾನನೇ ।
ಜಯ ವಿದ್ರುಮಬಿಂಬಾಭಭವ್ಯಾಧರವಿರಾಜಿತೇ ॥೧೭೬॥

ಜಯ ದಾಡಿಮಬಿಂಬಾಭದಂತರಾಜಿವಿರಾಜಿತೇ ।
ಜಯ ಶಾರ್ಙ್ಗನಿಭಾ ನೀಲಭ್ರೂವಲೀ ಸಮಲಂಕೃತೇ ॥೧೭೭॥

ಜಯ ಭೃಂಗಾವಲೀತುಲ್ಯ ಕೇಶಪಾಶವಿರಾಜಿತೇ ।
ಜಯ [1]ಸಿಂದೂರ ಸಂಬದ್ಧಸೀಮಂತಲಲಿತಾಲಕೇ ॥೧೭೮॥

ಜಯ ಪನ್ನೀರಸಂಬದ್ಧಘುಸೃಣಾರುಣಭಾಲಕೇ ।
ಜಯ ಕಂಬುನಿಭಾಪೂರ್ಣಕಂಠಮಂಡಲಶೋಭಿತೇ ॥೧೮೦॥

ಜಯ ಹೇಮಮೃಣಾಲಾಭಬಾಹುವಲ್ಲೀವಿರಾಜಿತೇ ।
ಜಯ ಕೋಕನದಾರಕ್ತಹಸ್ತಪದ್ಮವಿರಾಜಿತೇ ॥೧೮೧॥

ದೇವಿ, ನಿನ್ನ ಮುಖವು ಷೋಡಶಕಲೆಗಳಿಂದ ಪರಿಪೂರ್ಣನಾದ ಚಂದ್ರನ ಬಿಂಬದಂತೆ ಕಾಂತಿಯುತವಾಗಿರುವುದು. ನೀನು ಹವಳದಂತೆ ಕೆಂಪಾದ ಕೆಳತುಟಿಗಳಿಂದ ಶೋಭಿಸುತ್ತಿರುವೆ. ಅಂತಹ ನಿನಗೆ ಮಂಗಳವಾಗಲಿ. ||೧೭೬||

ನಿನ್ನ ದಂತಪಂಕ್ತಿಗಳು ದಾಳಿಂಬದ ಬೀಜಗಳಂತೆ ಸುಂದರವಾಗಿ ವಿರಾಜಿಸುತ್ತಿರುವುವು. ನೀನು ವಿಷ್ಣುವಿನ ಧನುಸ್ಸಿನಂತೆ ವಕ್ರವಾಗಿ ಅಚ್ಚುಕಪ್ಪಾದ ಬಣ್ಣದಿಂದ ಥಳಥಳಿಸುತ್ತಿರುವ ಭ್ರೂರೇಖೆಗಳಿಂದ ಭೂಷಿತಳಾಗಿರುವೆ. ||೧೭೭||

ಭ್ರಮರಪಂಕ್ತಿಯಂತಿರುವ ಕೇಶಪಾಶಗಳಿಂದ ಶೋಭಿಸುವ ನಿನಗೆ ಮಂಗಳವಾಗಲಿ. ಹಣೆಕಟ್ಟಿನಿಂದ ಕೂಡಿರುವ ಸೀಮಂತಪ್ರದೇಶದ ಮುಂಗುರುಳುಗಳಿಂದ ಶೋಭಿಸುತ್ತಿರುವ ನಿನಗೆ ಜಯವಾಗಲಿ. ||೧೭೮||

ದೇವಿ, ಬಳ್ಳಿಯಂತೆ ದೀರ್ಘವಾಗಿರುವ ನಿನ್ನ ಬಾಹುಗಳು ತಾವರೆಯ ದಂಟಿನಂತೆ ಅತ್ಯಂತ ಮೃದುವಾಗಿರುವುವು. ಹಸ್ತಕಮಲಗಳು ಕೆಂದಾವರೆಯಂತೆ ಇರುವುವು. ನಿನ್ನ ಸ್ತನಗಳು ತಾರುಣ್ಯವೆಂಬ ಅಮೃತದಿಂದ ತುಂಬಿ ತುಳುಕುತ್ತಿರು

---

1. ಟಿ. ಪೂರ್ವಕಾಲದ ಸ್ತ್ರೀಯರು, ತಮ್ಮ ಸೀಮಂತಪ್ರದೇಶದಲ್ಲಿ (ಬೈತಲೆ) ಧರಿಸುತ್ತಿದ್ದ ಒಂದಾನೊಂದು ಸುವರ್ಣದ ಆಭರಣವಿಶೇಷಕ್ಕೆ ಹಣೆಕಟ್ಟು ಎಂದು ಹೇಳುವರು (ಇದನ್ನೇ ಸಂಸ್ಕೃತದಲ್ಲಿ "ಸಿಂದೂರ" ಎಂದು ವ್ಯವಹರಿಸುವರು.)

ಜಯ ಕಾರುಣ್ಯಪೀಯೂಷಪೂರ್ಣವಕ್ಷೋಜಶೋಭಿತೇ ।
ಜಯ ಕಾಮಜಯೋತ್ಪನ್ನರೋಮರಾಜಿವಿರಾಜಿತೇ ॥೧೮೨॥

ಜಯ ತ್ರಿವಲಿಸಂಬದ್ಧವಿಲಸದ್ಭುವನೋದರೇ ।
ಜಯ ಸಿಂದೂರಕದಲೀಸಂನಿಭೋರುಮನೋಹರೇ ॥೦೮೩॥

ಜಯ ದೇವನತಾಪೂತವಿಲಸತ್ಪದಪಂಕಜೇ ।
ಜಯಾನವದ್ಯೇ ನಿರ್ದ್ವಂದ್ವೇ ನಿರ್ಮಲೇ ಲಯವರ್ಜಿತೇ ॥೧೮೪॥

ಜಯ ವಿದ್ಯೇ ಮಹಾವಿದ್ಯೇ ಜಯಾನಂದೇ ಜಯೋದ್ಭವೇ ।
ಜಯ ಲೀಲಾವಿಲಾಸಾರ್ಥಸ್ವೀಕೃತಾಮಲವಿಗ್ರಹೇ ॥೧೮೫॥

ಜಯ ಮೌನಿಮನೋರಮ್ಯಸಿಂಹಾಸನವರಾಶ್ರಯೇ ।
ಜಯ ರತ್ನೋಚ್ಚವಲಯರತ್ನಾವಳಿವಿರಾಜಿತೇ ॥೧೮೬॥

ಜಯ ದಿವ್ಯಮಣಿಭ್ರಾಜದ್ಧೇಮಾಭರಣಶೋಭಿತೇ ।
ಜಯ ಮಾತರ್ಮಹಾದೇವಿ ಜಯ ಮಾಹೇಶ್ವರಿ ॥೧೮೭॥

ವುವು. ನಿನ್ನ ರೋಮರಾಶಿಗಳು ಮನ್ಮಥನನ್ನು ಜಯಿಸುವುದಕ್ಕೋ ಎಂಬಂತೆ ಸುಂದರವಾಗಿ ತೋರುವುವು. ನಾಭಿಕುಹರವು ಸುಂದರವಾದ ತ್ರಿವಳಿಗಳಿಂದ ಶೋಭಿಸುತ್ತಿರುವುದು. ಕಂಠವು ಶಂಖದಂತೆ ಮುದ್ದಾಗಿರುವುದು.॥೧೮೦-೧೮೧-೧೮೨-೧೮೩॥

ನಿನ್ನ ಪವಿತ್ರವಾದ ಪಾದಕಮಲಗಳನ್ನು ದೇವತೆಗಳು ವಂದಿಸುವರು. ನೀನು, ನಿರ್ದುಷ್ಟಳೂ ಶೋಕಮೋಹಗಳಿಂದ ವರ್ಜಿತಳೂ, ಪರಿಶುದ್ಧಳೂ, ನಾಶರಹಿತಳೂ ಆಗಿರುವೆ. ಎಲೌ ವಿದ್ಯಾಸ್ವರೂಪಳೇ, ಮಹಾವಿದ್ಯಾರೂಪಿಣಿಯೇ, ಆನಂದನಿಧಿಯೇ, ವಿದ್ಯಾನಿಧಿಯೇ, ಜಯಶಾಲಿನಿಯೇ, ನಿನಗೆ ಮಂಗಳವಾಗಲಿ. ದೇವಿ, ನೀನು ನಿನ್ನ ಲೀಲೆಯನ್ನು ಜಗತ್ತಿಗೆ ತೋರ್ಪಡಿಸುವುದಕ್ಕೋಸ್ಕರ ಈ ಲೀಲಾಮಯವಾದ ವಿಗ್ರಹವನ್ನು ಧರಿಸಿ ಕ್ರೀಡಿಸುತ್ತಿರುವೆಯಲ್ಲವೇ ? ೧೮೪-೧೮೫॥

ನೀನು ನಿನ್ನನ್ನು ಧ್ಯಾನಿಸುವ ತಪಸ್ವಿಗಳ ಮನಸ್ಸೆಂಬ ಸಿಂಹಾಸನವನ್ನು ಅಲಂಕರಿಸಿರುವೆ; ಮತ್ತು ನೀನು ರತ್ನಖಚಿತವಾದ ವಲಯಗಳಿಂದಲೂ, ರತ್ನಮಾಲಿಕೆಗಳಿಂದಲೂ ಶೋಭಿಸುತ್ತಿರುವೆ. ಅಮೂಲ್ಯವಾದ ರತ್ನದಿಂದ ಕೂಡಿರುವ

ಜಯ ಮಾತಸ್ತ್ರಿನಯನೇ ಜಯ ಮಾತಸ್ಸುರೇಶ್ವರಿ ।
ಜಯ ಮಾತಃ ಪ್ರಸೀದ ತ್ವಂ ಜಯ ಮಾತಃ ಶಿವಪ್ರಿಯೇ ॥೧೮೮॥

ಜಯ ಮಾತಃ ಕೃಪಾಪೂರ್ಣೇ ಜಯ ಮಾತಃ ಪರಾತ್ಪರೇ ।
ಕಿಂ ಧ್ಯಾಯತೇ ತ್ವಯಾ ದೇವಿ ಧ್ಯಾತವ್ಯಂ ತವ ಕಿಂ ಶಿವೇ ॥೧೮೯॥

ಧ್ಯೇಯಾ ತ್ವಮೇವ ಸರ್ವೇಷಾಂ ಭುಕ್ತಿಮುಕ್ತಿ ಪ್ರದಾಯಿನೀ ।
ಧ್ಯೇಯಧ್ಯಾತವ್ಯಶೂನ್ಯಾ ತ್ವಂ ಧ್ಯಾನಗಮ್ಯಾ ಕಥಂ ಶಿವೇ ॥೧೯೦॥

ದಾಸಾಸ್ತವೈವ ಸರ್ವೇಽಪಿ ವಯಂ ಬ್ರಹ್ಮಾದಯಃ ಶಿವೇ ।
ದಾಸ್ಯಸ್ತವಾಸ್ಮದಾದೀನಾಂ ದೇವಾನಾಂ ವನಿತಾಃ ಶಿವೇ ॥೧೯೧॥

ದೇವತಾಸಾರ್ವಭೌಮಸ್ಯ ಶಿವಸ್ಯಾರ್ಧಾಂಗಭಾಗಿನಿ ।
ತ್ವಮಸ್ಯತಸ್ತ್ವಯಾ ದೇವಿ ಕಿಮತ್ರ ಧ್ಯಾಯತೇ ವದ ॥೧೯೨॥

ಸ್ವರ್ಣಾಭರಣದಿಂದ ನಿನ್ನ ದೇಹಕಾಂತಿಯು ಥಳಥಳಿಸುತ್ತಿರುವುದು. ಓ ಜಗನ್ಮಾತೆಯೇ, ಮಹಾದೇವಿಯೇ, ಮಹೇಶ್ವರಿಯೇ, ನಿನಗೆ ಶುಭವಾಗಲಿ. ||೧೮೬-೧೮೭||

ಓ, ತ್ರಿನೇತ್ರಧಾರಿಣೀ, ದೇವೇಶ್ವರಿಯೇ, ಜಗನ್ಮಾತೆಯೇ, ಪ್ರಸನ್ನಳಾಗು. ಓ ಶಿವಪತ್ನಿಯೇ, ನಿನಗೆ ಶುಭವಾಗಲಿ. ಜಗನ್ಮಾತೆಯಾದ ನೀನು ದಯಾನಿಧಿಯೂ, ಜಗತ್ತಿಗೆ ಕಾರಣವೆಂದೆನಿಸಿಕೊಂಡಿರುವ ಆದಿಶಕ್ತಿಯಾದ ಅನಾದಿಮಾಯೆಗಿಂತಲೂ ಸೂಕ್ಷ್ಮವೂ ವ್ಯಾಪಕವೂ ಆದ ಸ್ವರೂಪದಿಂದ ಶೋಭಿಸುತ್ತಿರುವೆ. ದೇವಿ, ನೀನು ಯಾರನ್ನು ಧ್ಯಾನಿಸುತ್ತಿರುವೆ? ನಿನಗೆ ಧ್ಯೇಯವಾದ ವಸ್ತುವಾದರೂ ಅದೊಂದಿರುವುದೇ? ||೧೮೮-೧೮೯||

ದೇವಿ, ಸಕಲ ಜನರಿಗೂ ಅಶನವಸನಗಳನ್ನು ದಯಪಾಲಿಸುವ ನೀನೇ ಸರ್ವರಿಗೂ ಧ್ಯೇಯಳಾಗಿರುವೆ. ನಿನ್ನಲ್ಲಿ ಧ್ಯೇಯ, ಧ್ಯಾತೃ ಎಂಬ ಭೇದವೇ ಇರುವುದಿಲ್ಲ. ಹೀಗಿರುವಾಗ ನೀನು ಧ್ಯಾನಗೋಚರಳಾಗುವ ಬಗೆ ಹೇಗೆ? ||೧೯೦||

ದೇವಿ, ಬ್ರಹ್ಮಾದಿದೇವತೆಗಳಲ್ಲಿ ಪರಿಗಣಿಸಲ್ಪಡುವ ನಾವೆಲ್ಲರೂ ನಿನ್ನ ದಾಸರಾಗಿರುವೆವು. ನಮ್ಮೆಲ್ಲರ ಸ್ತ್ರೀಯರೂ ನಿನ್ನ ದಾಸಿಯರಾಗಿರುವರು. ||೧೯೧||

ನೀನು ದೇವತೆಗಳೆಲ್ಲರಿಗೂ ಸಾರ್ವಭೌಮನೆಂದೆನಿಸಿಕೊಂಡಿರುವ ಶಿವನ ಅರ್ಧಾಂಗಿಯೇ ಆಗಿರುವೆ. ಹೀಗಿರುತ್ತಿರಲು ನೀನು ಈ ಪ್ರದೇಶದಲ್ಲಿದ್ದು ಧ್ಯಾನಿಸು

॥ ಶ್ರೀ ಪಾರ್ವತ್ಯುವಾಚ ॥

ಶರೀರಾರ್ಧಮಹಂ ಶಂಭೋರ್ಯೇನ ಪ್ರಾಪ್ಸ್ಯಾಮಿ ಕೇಶವ ।
ತದಿದಾನೀಂ ಮಮಾಚಕ್ಷ್ವ ಸ್ತೋತ್ರಂ ಶೀಘ್ರಫಲಪ್ರದಂ ॥೧೯೩॥

॥ ವಿಷ್ಣುರುವಾಚ ॥

ಶರೀರಾರ್ಧಂ ಮಹೇಶಸ್ಯ ಪ್ರಾಪ್ತಮೇವ ತ್ವಯಾ ಶಿವೇ ।
ತ್ವಮೇವ ಶಿವರೂಪಾಸಿ ತ್ವಯಾ ಪ್ರಾಪ್ಯಂ ನ ದೃಶ್ಯತೇ ॥೧೯೪॥

ತಥಾಪಿ ಪೃಚ್ಛ್ಯತೇ ದೇವಿ ಲೋಕಾನುಗ್ರಹವಾಂಛಯಾ ।
ತ್ವಯಾ ತತೋಽಹಂ ವಕ್ಷ್ಯಾಮಿ ಸ್ತೋತ್ರಮೇಕಂ ಶಿವಪ್ರದಂ॥೧೯೫॥

ಪುತ್ರೋಽಹಂ ತವ ಕಲ್ಯಾಣಿ ಶತೋ ವಾತ್ಸಲ್ಯಭಾವತಃ ।
ಮಯಾ ಸಹ ತ್ವಯಾ ದೇವಿ ಸರ್ವವೇದಾಂತಸಂಸ್ತುತಂ ॥೧೯೬॥

ವುದಾದರೂ ಏನು ? ಅದನ್ನು ನನಗೆ ಹೇಳು. ಎಂದು ವಿಷ್ಣುವು ವಿಧವಿಧವಾಗಿ ಸ್ತುತಿಸಲು, ॥೧೯೨॥

ಆಗ ಪಾರ್ವತಿಯು ವಿಷ್ಣುವನ್ನು ನೋಡಿ—ಎಲೈ ವಿಷ್ಣುವೇ, ನನಗೆ ಶಿವನ ಶರೀರದ ಅರ್ಧಭಾಗವು ಪ್ರಾಪ್ತವಾಗುವುದಕ್ಕೆ ಬೇಕಾಗಿರುವ ಸಾಧನವು ಅದಾವುದಿರುವುದು ? ಶಿವನ ಅರ್ಧ ಶರೀರವನ್ನು ಪಡೆಯುವುದರಲ್ಲಿ ಸಾಧಕವಾದ ಮತ್ತು ಶೀಘ್ರವಾಗಿ ಫಲವನ್ನು ದಯಪಾಲಿಸುವ ಅದಾವ ಸ್ತೋತ್ರವಿರುವುದು ? ಅದನ್ನು ನನಗೆ ಹೇಳು ಎಂದು ನುಡಿದಳು. ಆಗ ಮತ್ತೆ ವಿಷ್ಣುವು, ॥೧೯೩॥

ನೀನು ಈಗಾಗಲೇ ಪರಶಿವನ ಅರ್ಧಶರೀರವನ್ನು ಈ ಹಿಂದೆಯೇ ಹೊಂದಿರುವೆ. ನೀನೇ ಶಿವಸ್ವರೂಪಳಾಗಿರುವೆ. ಹೀಗಿರುತ್ತಿರಲು, ನೀನು ಹೊಂದಬೇಕಾದ ಅದಾವ ವಸ್ತುವಿರುವುದೋ ಅದನ್ನು ನಾನು ತಿಳಿಯಲಾರೆ. ॥೧೯೪॥

ದೇವಿ, ಹೀಗಿದ್ದರೂ, ನೀನು ಭಕ್ತವೃಂದವನ್ನು ಅನುಗ್ರಹಿಸಬೇಕೆಂಬ ಇಚ್ಛೆಯಿಂದ ಪರಶಿವನ ಸ್ತೋತ್ರವನ್ನು ಕೇಳಬಯಸುತ್ತಿರುವೆ. ಅದರಿಂದ, ನಾನು ಮಂಗಳಕರವಾದ ಒಂದಾನೊಂದು ಶಿವಸ್ತೋತ್ರವನ್ನು ನಿನಗೆ ಈಗ ಹೇಳುವೆನು. ॥೧೯೫॥

ಎಲೌ ಸರ್ವಮಂಗಳೆಯೇ, ನಾನು ನಿನ್ನ ಪುತ್ರನಾಗಿರುವೆನು. ಆದುದರಿಂದಲೇ ನಿನಗೆ ನನ್ನಲ್ಲಿರುವ ಪುತ್ರವಾತ್ಸಲ್ಯದ ದೆಸೆಯಿಂದ, ನಾನು ಸಕಲ

ದೃಷ್ಟಂ ಮಯಾ ಕೃತಾರ್ಥೋऽಸ್ಮಿ ತ್ವತ್ಪಾದಾಂಬುಜವೀಕ್ಷಣಾತ್ ।
ಯಂ ಪಶ್ಯಸಿ ಜಗದ್ವಂದ್ಯೇ ಕೃಪಯಾ ತಮನೇಕಧಾ ॥೧೯೭॥

ಪೂಜಯಂತಿ ಸುರಾಃ ಸಿದ್ಧಾ ಮುನಯಶ್ಚ ನ ಸಂಶಯಃ ।
ಲಕ್ಷ್ಮ್ಯಾದ್ಯಾಃ ಸುಭಗಾ ಜಾತಾಸ್ತ್ವತ್ಪಾದಾಂಬುರುಹಾರ್ಚನಾತ್ ॥೧೯೮॥

ತ್ವತ್ಪಾದಪದ್ಮಂ ಸತತಂ ಧ್ಯಾಯಂತೇ ಕಮಲಾದಿಭಿಃ ।
ತ್ವಮಾದಿಶಕ್ತಿಃ ಪರಮಾ ಸರ್ವವೇದಾಂತಸಂಸ್ತುತಾ ॥೧೯೯॥

ತ್ವಮೋಂಕಾರಸ್ವರೂಪಾ ತ್ವಂ ಸರ್ವವೇದಸ್ವರೂಪಿಣೀ ।
ತ್ವಮಾದ್ಯಂತವಿಹೀನಾ ತ್ವಂ ಸಚ್ಚಿದಾನಂದರೂಪಿಣೀ ॥೨೦೦॥

ವಿಜ್ಞಾನಸಾರಿಣೀ ಸಾಕ್ಷಾತ್ ಜ್ಞಾನಧಾರಾವಿನೋದಿನೀ ।
ಕಲಾಕಾಷ್ಠಾಮುಹೂರ್ತಾದಿಕಾಲೋನ್ನಯನಕಾರಿಣೀ ॥೨೦೧॥

ವೇದಾಂತಗಳಿಂದಲೂ ತಿಳಿದು ಬರುವ ನಿನ್ನ ಪಾದಪದ್ಮವನ್ನು ನೋಡಿದೆನು. ಆದರ ದರ್ಶನದಿಂದ ನಾನು ಕೃತಾರ್ಥನಾದೆನು. ಎಲೌ ಜಗದ್ವಂದ್ಯಳೇ! ನೀನು ಯಾವ ವಸ್ತುವನ್ನು ನೋಡುತ್ತಿರುವೆಯೋ ಆ ವಸ್ತುವನ್ನು, ॥೧೯೬-೧೯೭॥

ದೇವತೆಗಳು, ಸಿದ್ಧರು, ಮತ್ತು ಮುನಿಗಳು, ನಾನಾ ಬಗೆಯಿಂದ ಪೂಜಿಸುವರು. ಇದರಲ್ಲಿ ಸಂಶಯವಿರುವುದಿಲ್ಲ. ಲಕ್ಷ್ಮಿಯೇ ಮೊದಲಾದ ದೇವತಾ ಸ್ತ್ರೀಯರು ನಿನ್ನ ಅಡಿದಾವರೆಗಳ ಆರಾಧನೆಯಿಂದಲೇ ಶಾಶ್ವತವಾದ ಸೌಭಾಗ್ಯವನ್ನು ಹೊಂದಿರುವರು. ॥೧೯೮॥

ಲಕ್ಷ್ಮ್ಯಾದಿ ಸ್ತ್ರೀಯರು ಸತತವೂ ನಿನ್ನ ಅಡಿದಾವರೆಯನ್ನೇ ಧ್ಯಾನಿಸುತ್ತಿರುವರು. ನೀನೇ ಸಂಸಾರವೆಂಬ ವೃಕ್ಷಕ್ಕೆ ಬೀಜಶಕ್ತಿಯಾಗಿರುವೆ. ನಿನ್ನ ನಿತ್ಯವಾದ ಚಿಚ್ಛಕ್ತಿಸ್ವರೂಪವನ್ನೇ ವೇದಾಂತಗಳು ಗಾನಮಾಡುತ್ತಿರುವುವು. ॥೧೯೯॥

ನೀನು ಓಂಕಾರರೂಪಿಣಿಯಾಗಿರುವೆ. ಸಕಲ ವೇದಗಳ ಸ್ವರೂಪವೂ ನೀನೇ ಆಗಿರುವೆ. ನಿನಗೆ ಆದಿಯೂ ಇಲ್ಲ, ಅಂತ್ಯವೂ ಇರುವುದಿಲ್ಲ. ನೀನೇ ಸಚ್ಚಿದಾನಂದ ಸ್ವರೂಪವಾದ ಶುದ್ಧಚೈತನ್ಯವಾಗಿ ವ್ಯವಸ್ಥಿತಳಾಗಿರುವೆ. ॥೨೦೦॥

ನೀನು ನಿನ್ನಿಂದ ಅಭಿನ್ನವಾಗಿರುವ ಅಖಂಡಚೈತನ್ಯಸ್ವರೂಪದಿಂದ ಸಕಲ ಚರಾಚರಾತ್ಮಕವಾದ ಈ ಬ್ರಹ್ಮಾಂಡವನ್ನು ವ್ಯಾಪಿಸಿ, ನಿತ್ಯಜ್ಞಾನಾಭಿನ್ನವಾದ

ತ್ವತ್ತ ಏವ ಸಮುತ್ಪನ್ನಾ ವಯಂ ಬ್ರಹ್ಮಾದಯಃ ಸುರಾಃ ।
ತ್ವತ್ತ ಏವ ಸಮುತ್ಪನ್ನಾ ಲೋಕಾಃ ಸರ್ವೇಽಪಿ ಶಾಂಭವಿ ॥೨೦೨॥

ತವ ನೇತ್ರತ್ರಯಂ ಚಂದ್ರಃ ಸೂರ್ಯೋಽಗ್ನಿಶ್ಚ ಮಹೇಶ್ವರಿ ।
ತವೈವ ಮೂರ್ತಯಃ ಸರ್ವೇ ಪವನಾದ್ಯಾಃ ಶಿವಪ್ರಿಯೇ ॥೨೦೩॥

ತ್ವದನ್ಯೋ ದೃಶ್ಯತೇ ನಾತ್ರ ತ್ವಮೇವ ಸಕಲಂ ಶಿವೇ ।
ನಿಷ್ಕಲಾಪಿ ತ್ವಮೇವಾಂಬ ಸಕಲಾಪಿ ತ್ವಮೀಶ್ವರಿ ॥೨೦೪॥

ತ್ವಮೇವ ಸಕಲಾ ದೇವಿ ಸೃಷ್ಟಿಸ್ಥಿತ್ಯಂತಕಾರಿಣೀ ।
ತ್ವಮೇವ ನಿಷ್ಕಲಾ ದೇವಿ ಸರ್ವೋಪಾಧಿವಿವರ್ಜಿತಾ ॥೨೦೫॥

ಆನಂದಾನುಭವದಲ್ಲಿ ತಲ್ಲೀನಳಾಗಿರುವೆ. ಕಲಾ, ಕಾಷ್ಠ, ಮುಹೂರ್ತಗಳೆಂಬ ಖಂಡಕಾಲಗಳ ವ್ಯವಹಾರಕ್ಕೂ ನೀನೇ ಅಧಿಷ್ಠಾತ್ರಿಯಾಗಿರುವೆ. ||೨೦೧||

ಬ್ರಹ್ಮನೇ ಮೊದಲಾದ ದೇವತೆಗಳ ವೃಂದದಲ್ಲಿ ಸೇರಿರುವ ನಾವೆಲ್ಲರೂ ನಿನ್ನಿಂದಲೇ ಜನಿಸಿದೆವು. ಲೋಕಗಳೆಲ್ಲವೂ ನಿನ್ನಿಂದಲೇ ಜನಿಸಿದುವು. ದೇವಿ, ಸೂರ್ಯ ಚಂದ್ರ ಮತ್ತು ಅಗ್ನಿ ಇವರೇ ನಿನ್ನ ನೇತ್ರಗಳು. ವಾಯುವೇ ಮೊದಲಾದ ಈ ಭೂತಪಂಚಕಗಳೂ ಸಹ ನಿನ್ನ ಮೂರ್ತಿಭೇದಗಳೇ ಆಗಿರುವುವು. ||೨೦೨-೨೦೩||

ದೇವಿ, ನಿನಗಿಂತಲೂ ಭಿನ್ನವಾದ ವಸ್ತುವೇ ಇರುವುದಿಲ್ಲ. ಬ್ರಹ್ಮಾದಿಸ್ತಂಬ ಪರ್ಯಂತವಾದ ಈ ಸಕಲ ವಸ್ತುಜಾತವೂ ನೀನೇ ಆಗಿರುವೆ. ನೀನು ನಿನ್ನ ಪಾರಮಾರ್ಥಿಕವಾದ ಸ್ವರೂಪದಿಂದ ನಿರಾಕಾರಳಾಗಿದ್ದರೂ ಸಹ ಭಕ್ತರನ್ನು ಅನುಗ್ರಹಿಸುವ ಸಲುವಾಗಿ ನಾನಾಬಗೆಯ ಆಕಾರಗಳನ್ನು ಧರಿಸುವೆ. ||೨೦೪||

ನೀನೇ ಮಾಯಾಮಯವಾದ ಆಕಾರವನ್ನು ಧರಿಸಿ ಸಾಕಾರಳಾಗಿ ಸೃಷ್ಟಿ, ಸ್ಥಿತಿ ಪ್ರಲಯಗಳಿಗೆ ಕಾರಣಳಾಗುವೆ. ಮಾಯಾಮಯವಾದ ಶರೀರೇಂದ್ರಿಯವೇ ಮೊದಲಾದ ಉಪಾಧಿಗಳಿಂದ ವಿನಿರ್ಮುಕ್ತಳಾಗಿ ಪರಮಾರ್ಥವಾದ ನಿರಾಕಾರಸ್ವರೂಪದಿಂದ ವ್ಯವಸ್ಥಿತಳಾಗಿ ಅಖಂಡಾನಂದರಸವನ್ನು ಅನುಭವಿಸುವವಳೂ ನೀನೇ ಆಗಿರುವೆ. ||೨೦೫||

ಪ್ರಾಪ್ಯಾ ತ್ವಮೇವ ಸರ್ವೇಷಾಂ ಮುಕ್ತಿರೂಪಾ ಸ್ವಭಾವತಃ ।
ತ್ವಾಮೀದೃಶೀಂ ವಿದಿತ್ವೈವ ಸಚ್ಚಿದಾನಂದಲಕ್ಷಣಾಂ ॥೨೦೬॥

ಭಜಂತಿ ಮುನಯಃ ಸರ್ವೇ ನಿತ್ಯಂ ವೇದಾಃ ಸ್ತುವಂತಿ ಚ ।
ಈದೃಶೀ ತ್ವಂ ನಿರಾಕಾರಾ ಸಾಕಾರೇವಾದ್ಯ ದೃಶ್ಯಸೇ ॥೨೦೭॥

ಯತಸ್ತ್ವಮಸಿ ವಿಜ್ಞಾನಮತೋ ರೂಪಂ ನ ತೇ ಧ್ರುವಂ ।
ತ್ವಂ ತಪೋ ಯಾಗದಾನಾನಾಂ ಫಲದಾನಿ ಶಿವಪ್ರಿಯೇ ॥೨೦೮॥

ತ್ವಾಮುದ್ದಿಶ್ಯೈವ ಮುನಿಭಿಃ ಸತತಂ ತಪ್ಯತೇ ತಪಃ ।
ಸಂತುಷ್ಟಾ ತಪಸಾ ದೇವಿ ದದಾಸಿ ಪರಮಂ ಪದಂ ॥೨೦೯॥

ಸುಪ್ರೀತಾಯಾಸ್ತವೋ ಮೇಽತ್ರ ನ ದೇಯಂ ವಸ್ತು ದೃಶ್ಯತೇ ।
ಶಿವೇ ತ್ವಯ್ಯೈವ ಸೃಷ್ಟಾನಿ ವೈಕುಂಠಾನಿ ಪದಾನ್ಯಪಿ ॥೨೧೦॥

ಸ್ವಾಭಾವಿಕವಾಗಿ ಮೋಕ್ಷಸ್ವರೂಪದಿಂದ ವ್ಯವಸ್ಥಿತಳಾಗಿರುವ ನೀನೇ ಸಕಲರಿಗೂ ಪ್ರಾಪ್ಯಸ್ಥಾನಳಾಗಿರುವೆ. ಅಂತಹ ಮುಕ್ತಿಸ್ವರೂಪಳಾದ ನೀನೇ ಸಚ್ಚಿದಾನಂದಸ್ವರೂಪಳೂ ಆಗಿರುವೆಯೆಂದು ತಿಳಿದು ಸಕಲ ಜ್ಞಾನಿಗಳು ನಿನ್ನನ್ನು ಅನವರತವೂ ತಮ್ಮ ಹೃತ್ಕಮಲದಲ್ಲಿರಿಸಿ ಧ್ಯಾನಿಸುವರು. ವೇದಗಳು ನಿನ್ನ ಕಲ್ಯಾಣಕರವಾದ ರೂಪವನ್ನು ಸ್ತುತಿಸುತ್ತಿರುವುವು. ಈ ರೀತಿಯಲ್ಲಿ ನಿರಾಕಾರಸ್ವರೂಪಿಣಿಯೆಂದೆನಿಸಿಕೊಂಡಿರುವ ನೀನು ಇದೀಗ ನನ್ನೆದುರಿನಲ್ಲಿ ನಿನ್ನ ಮಾಯಾಮಯವಾದ ಶರೀರವೆಂಬ ಉಪಾಧಿಯ ದೆಸೆಯಿಂದ ಸಾಕಾರಳಾಗಿ ಕಾಣಿಸುತ್ತಿರುವೆ.॥೨೦೬-೨೦೭॥

ನೀನು ನಿರಾಕಾರವಾದ ಚೈತನ್ಯಸ್ವರೂಪದಿಂದಿರುವುದರಿಂದಲೇ ನಿನಗೆ ಪಾರಮಾರ್ಥಿಕವಾಗಿ ಸ್ವಭಾವಸಿದ್ಧವಾದ ರೂಪವು ಎಂದಿಗೂ ಇರುವುದಿಲ್ಲ. ಇದು ನಿಜ. ಓ ಭವಾನಿಯೇ, ಯಾಗ, ದಾನ ಮುಂತಾದ ಶ್ರೌತಸ್ಮಾರ್ತಕರ್ಮಗಳ ಫಲಗಳನ್ನು ದಯಪಾಲಿಸುವವಳೂ ನೀನೇ. ॥೨೦೮॥

ದೇವಿ, ಮುನಿಗಳು ನಿನ್ನನ್ನು ಉದ್ದೇಶಿಸಿಯೇ ಹಗಲಿರುಳೂ ತಪಸ್ಸನ್ನಾಚರಿಸುತ್ತಿರುವರು. ಅವರ ತಪಸ್ಸಿನಿಂದ ಸುಪ್ರೀತಳಾದ ನೀನು ಅವರಿಗೆ ಶಾಶ್ವತವಾದ ನಿನ್ನ ಪದವಿಯನ್ನು ದಯಪಾಲಿಸುವೆ. ॥೨೦೯॥

ಓ ಉಮಾದೇವಿಯೇ, ನಿತ್ಯತೃಪ್ತಳಾದ ನಿನಗೆ ಪರಶಿವನು ದಯಪಾಲಿಸುವ

ತಾನಿ ದತ್ತಾನಿ ಚಾಸ್ಮಭ್ಯಂ ತ್ವಯ್ಯೈವಾರ್ಚಿತಯಾ ಧ್ರುವಂ ।
ಯತಃ ಶಿವಸ್ತ್ವಮೇವಾಸಿ ತ್ವತ್ತೋ ದತ್ತಂ ಶಿವೇನ ಯತ್ ॥೨೧೧॥

ತತ್ತ್ವಯ್ಯೈವ ಧ್ರುವಂ ದತ್ತಂ ಸರ್ವಕಲ್ಯಾಣಸಂಶ್ರಯೇ ।
ರತ್ನರಾಶೇರ್ಮನೋಜ್ಞಾನಿ ರತ್ನಾನೀವ ಮಯಾ ಪುರಾ ॥೨೧೨॥

ವೇದರಾಶೇರ್ಗೃಹೀತಾನಿ ಶಿವನಾಮಾನಿ ಶೋಭನೇ ।
ಸಂತ್ಯನಂತಾನಿ ನಾಮಾನಿ ಮಹಾದೇವಸ್ಯ ಶೋಭನೇ ॥೨೧೩॥

ತಾನಿ ಸರ್ವಾಣಿ ನಾಮಾನಿ ಪಾವನಾನಿ ನ ಸಂಶಯಃ ॥೨೧೪॥

ತಾನಿ ದಿವ್ಯಾನಿ ನಾಮಾನಿ ಪ್ರಸಿದ್ಧಾನಿ ವರಾನನೇ ।
ಬಹೂನ್ಯಪಿ ತತಸ್ತೇಷಾಂ ಆವೃತ್ತಿರತಿದುರ್ಲಭಾ ॥೨೧೫॥

ಅಸ್ತಿ ಗುಹ್ಯತಮಂ ದೇವಿ ನಾಮ್ನಾಮಷ್ಟೋತ್ತರಂ ಶತಂ ।
ಶಂಭೋರಹಂ ಪ್ರವಕ್ಷ್ಯಾಮಿ ಸತತಾಂ ಶೀಘ್ರಕಾಮದಂ ॥೨೧೬॥

ವಸ್ತುವೇ ಅದೊಂದಿರುವುದಿಲ್ಲ. ವೈಕುಂಠವೇ ಮೊದಲಾದ ಶ್ರೇಷ್ಠವಾದ ದೇವಪದವಿಗಳನ್ನು ಸೃಷ್ಟಿಸಿರುವವಳೇ ನೀನು. ॥೨೧೦॥

ದೇವತೆಗಳಾದ ನಾವೆಲ್ಲರೂ ನಿನ್ನನ್ನು ಪರಿಪರಿಯಿಂದ ಆರಾಧಿಸಲು, ಆಗ ನಮ್ಮ ಆರಾಧನೆಯಿಂದ ಸುಪ್ರೀತಳಾದ ನೀನು ನಮಗೆ ಈ ವೈಕುಂಠಾದಿಪದವಿಗಳನ್ನು ದಯಪಾಲಿಸಿದೆ. ಪರಶಿವನೇ ನೀನಾಗಿರುವೆ. ॥೨೧೧॥

ಪರಶಿವನು ನಮಗೆ ದಯಪಾಲಿಸಿದ ಸ್ಥಾನಗಳನ್ನು ನೀನೇ ದಯಪಾಲಿಸಿದಂತಾಯಿತು. ಈ ಹಿಂದೆ ನಾನು ನಿನ್ನಿಂದ ಮನೋಹರವಾದ ರತ್ನರಾಶಿಗಳನ್ನು ಪಡೆದಂತೆ ಈಗ ನಿನ್ನಿಂದ ವೈಕುಂಠಪದವಿಯನ್ನು ಹೊಂದಿದೆನು. ॥೨೧೨॥

ಎಲೌ ಸರ್ವಮಂಗಳೆಯೇ, ನಾನು ವೇದರಾಶಿಗಳ ಮೂಲಕ, ಶಿವನ ಅನಂತ ದಿವ್ಯನಾಮಗಳನ್ನು ತಿಳಿದಿರುವೆನು. ಅವೆಲ್ಲವೂ ಅತ್ಯಂತ ಪವಿತ್ರವಾಗಿರುವುವು. ಇದರಲ್ಲಿ ಸಂಶಯಪಡಬೇಕಾದುದಿಲ್ಲ. ॥೨೧೩-೨೧೪॥

ಆ ದಿವ್ಯನಾಮಗಳು ಸುಪ್ರಸಿದ್ಧಗಳೂ ಮತ್ತು ಅಸಂಖ್ಯಾಕಗಳೂ ಆಗಿರುವುವು. ಅವುಗಳನ್ನು ಒಂದೇ ಒಂದು ಬಾರಿ ಪಠಿಸುವುದೂ ಅಸಾಧ್ಯವಾಗಿರುವುದು. ॥೨೧೫॥

ದೇವಿ, ಶಿವನ ಆ ಅನಂತ ದಿವ್ಯನಾಮಗಳ ನಡುವೆ ಅತ್ಯಂತ ರಹಸ್ಯವಾದ ನೂರೆಂಟು ನಾಮಗಳು ಅತ್ಯಂತ ಗೋಪ್ಯವಾಗಿರುವುವು. ಅವುಗಳನ್ನು ನಿನಗೆ

॥ ಶ್ರೀವಿಷ್ಣುರುವಾಚ ॥

ಶಿವೋ ಮಹೇಶ್ವರಃ ಶಂಭುಃ ಪಿನಾಕೀ ಶಶಿಶೇಖರಃ ।
ವಾಮದೇವೋ ವಿರೂಪಾಕ್ಷಃ ಕಪರ್ದೀ ನೀಲಲೋಹಿತಃ ॥೨೧೭॥

ಶಂಕರಃ ಶೂಲಪಾಣಿಶ್ಚ ಖಟ್ವಾಂಗೀ ವಿಷ್ಣುವಲ್ಲಭಃ ।
ಶಿಪಿವಿಷ್ಟೋಽಂಬಿಕಾನಾಥಃ ಶ್ರೀಕಂಠೋ ಭಕ್ತವತ್ಸಲಃ ॥೨೧೮॥

ಭವಃ ಶರ್ವಸ್ತ್ರಿಲೋಕೇಶಃ ಶಿತಿಕಂಠಃ ಶಿವಪ್ರಿಯಃ ।
ಉಗ್ರಃ ಕಪಾಲೀ ಕಾಮಾರಿರಂಧಕಾಸುರಸೂದನಃ ॥೨೧೯॥

ಗಂಗಾಧರೋ ಲಲಾಟಾಕ್ಷಃ ಕಾಲಕಾಲಃ ಕೃಪಾನಿಧಿಃ ।
ಭೀಮಃ ಪರಶುಹಸ್ತಶ್ಚ ಮೃಗಪಾಣಿರ್ಜಟಾಧರಃ ॥೨೨೦॥

ಕೈಲಾಸವಾಸೀ ಕವಚೀ ಕಠೋರಸ್ತ್ರಿಪುರಾಂತಕಃ ।
ವೃಷಾಂಕೋ ವೃಷಭಾರೂಢೋ ಭಸ್ಮೋದ್ಧೂಲಿತವಿಗ್ರಹಃ ॥೨೨೧॥

ಸಾಮಪ್ರಿಯಃ ಸ್ವರಮಯಸ್ತ್ರಯೀಮೂರ್ತಿರನೀಶ್ವರಃ ।
ಸರ್ವಜ್ಞಃ ಪರಮಾತ್ಮಾ ಚ ಸೋಮಸೂರ್ಯಾಗ್ನಿಲೋಚನಃ ॥೨೨೨॥

ಹೇಳುವೆನು. ಅವುಗಳನ್ನು ಪಠಿಸುವವರಿಗೆ ಶೀಘ್ರವಾಗಿ ಇಷ್ಟಾರ್ಥವು ದೊರಕುವುದು. ॥೨೧೬॥

ಬಳಿಕ ವಿಷ್ಣುವು ಮುಂದೆ ಹೇಳುವ ರೀತಿಯಲ್ಲಿ ಶಿವನಾಮಗಳನ್ನು ಹೇಳತೊಡಗಿದನು—ಶಿವ, ಮಹೇಶ್ವರ, ಶಂಭು, ಪಿನಾಕೀ, ಶಶಿಶೇಖರ, ವಾಮದೇವ, ವಿರೂಪಾಕ್ಷ, ಕಪರ್ದೀ, ನೀಲಲೋಹಿತ, ॥೨೧೭॥

ಶಂಕರ, ಶೂಲಪಾಣಿ, ಖಟ್ವಾಂಗೀ, ವಿಷ್ಣುವಲ್ಲಭ, ಶಿಪಿವಿಷ್ಟ, ಅಂಬಿಕಾನಾಥ, ಶ್ರೀಕಂಠ, ಭಕ್ತವತ್ಸಲ, ಭವ, ಶರ್ವ, ತ್ರಿಲೋಕೇಶ, ಶಿತಿಕಂಠ, ಶಿವಾಪ್ರಿಯ, ಉಗ್ರ, ಕಪಾಲೀ, ಕಾಮಾರಿ, ಅಂಧಕಾಸುರಸೂದನ, ಗಂಗಾಧರ, ಲಲಾಟಾಕ್ಷ, ಕಾಲಕಾಲ, ಕೃಪಾನಿಧಿ, ಭೀಮ, ಪರಶುಹಸ್ತ, ಮೃಗಪಾಣಿ, ಜಟಾಧರ, ॥೨೧೮-೨೧೯-೨೨೦॥

ಕೈಲಾಸವಾಸೀ, ಕವಚೀ, ಕಠೋರ, ತ್ರಿಪುರಾಂತಕ, ವೃಷಾಂಕ, ವೃಷಭಾರೂಢ, ಭಸ್ಮೋದ್ಧೂಲಿತವಿಗ್ರಹ, ಸಾಮಪ್ರಿಯ, ಸ್ವರಮಯ, ತ್ರಯೀಮೂರ್ತಿ,

ಹವಿರ್ಯಜ್ಞಮಯಃ ಸೋಮಃ ಪಂಚವಕ್ತ್ರಃ ಸದಾಶಿವಃ ।
ವಿಶ್ವೇಶ್ವರೋ ವೀರಭದ್ರೋ ಗಣನಾಥಃ ಪ್ರಜಾಪತಿಃ ॥೨೨೩॥

ಹಿರಣ್ಯರೇತಾ ದುರ್ಧರ್ಷೋ ಗಿರೀಶೋ ಗಿರಿಶೋಽನಘಃ ।
ಭುಜಂಗಭೂಷಣೋ ಭರ್ಗೋ ಗಿರಿಧನ್ವಾ ಗಿರಿಪ್ರಿಯಃ ॥೨೨೪॥

ಕೃತ್ತಿವಾಸಾಃ ಪುರಾರಾತಿರ್ಭಗವಾನ್ಪ್ರಮಥಾಧಿಪಃ ।
ಮೃತ್ಯುಂಜಯಃ ಸೂಕ್ಷ್ಮತನುರ್ಜಗದ್ವ್ಯಾಪೀ ಜಗದ್ಗುರುಃ ॥೨೨೫॥

ವ್ಯೋಮಕೇಶೋ ಮಹಾಸೇನಜನಕಶ್ಚಾರುವಿಕ್ರಮಃ ।
ರುದ್ರೋ ಭೂತಪತಿಃ ಸ್ಥಾಣುರಹಿರ್ಬುಧ್ನ್ಯೋ ದಿಗಂಬರಃ ॥೨೨೬॥

ಅಷ್ಟಮೂರ್ತಿರನೇಕಾತ್ಮಾ ಸಾತ್ವಿಕಃ ಶುದ್ಧವಿಗ್ರಹಃ ।
ಶಾಶ್ವತಃ ಖಂಡಪರಶುರಜಃ ಪಾಶವಿಮೋಚಕಃ ॥೨೨೭॥

ಮೃಡಃ ಪಶುಪತಿರ್ದೇವೋ ಮಹಾದೇವೋಽವ್ಯಯಃ ಪ್ರಭುಃ ।
ಪೂಷದಂತಭಿದವ್ಯಗ್ರೋ ದಕ್ಷಾಧ್ವರಹರೋ ಹರಃ ॥೨೨೮॥

ಅನೀಶ್ವರ, ಸರ್ವಜ್ಞ, ಪರಮಾತ್ಮ, ಸೋಮಸೂರ್ಯಾಗ್ನಿಲೋಚನ, ಹವಿರ್ಯಜ್ಞಮಯ, ಸೋಮ, ಪಂಚವಕ್ತ್ರ, ಸದಾಶಿವ, ವಿಶ್ವೇಶ್ವರ, ವೀರಭದ್ರ, ಗಣನಾಥ, ಪ್ರಜಾಪತಿ, ॥೨೨೧-೨೨೨-೨೨೩॥

ಹಿರಣ್ಯರೇತಸ್ಸು, ದುರ್ಧರ್ಷ, ಗಿರೀಶ, ಗಿರಿಶ, ಅನಘ, ಭುಜಂಗಭೂಷಣ, ಭರ್ಗ, ಗಿರಿಧನ್ವ, ಗಿರಿಪ್ರಿಯಃ, ಕೃತ್ತಿವಾಸ, ಪುರಾರಾತಿ, ಭಗವಾನ್, ಪ್ರಮಥಾಧಿಪ, ಮೃತ್ಯುಂಜಯ, ಸೂಕ್ಷ್ಮತನು, ಜಗದ್ವ್ಯಾಪಿ, ಜಗದ್ಗುರು, ವ್ಯೋಮಕೇಶ, ಮಹಾಸೇನಜನಕ, ಚಾರುವಿಕ್ರಮ, ರುದ್ರ, ಭೂತಪತಿ, ಸ್ಥಾಣು, ಅಹಿರ್ಬುಧ್ನ್ಯ, ದಿಗಂಬರಃ ॥೨೨೪-೨೨೫-೨೨೬॥

ಅಷ್ಟಮೂರ್ತಿ, ಅನೇಕಾತ್ಮ, ಸಾತ್ವಿಕ, ಶುದ್ಧವಿಗ್ರಹ, ಶಾಶ್ವತ, ಖಂಡಪರಶು, ಅಜ, ಪಾಶವಿಮೋಚಕ, ಮೃಡ, ಪಶುಪತಿ, ದೇವ, ಮಹಾದೇವ, ಅವ್ಯಯ, ಪ್ರಭು, ಪೂಷದಂತಭಿತ್, ಅವ್ಯಗ್ರ, ದಕ್ಷಾಧ್ವರಹರ, ಹರ, ಭಗನೇತ್ರ

ಭಗನೇತ್ರಭಿದವ್ಯಕ್ತಃ ಸಹಸ್ರಾಕ್ಷಃ ಸಹಸ್ರಪಾತ್ ।
ಅಪವರ್ಗಪ್ರದೋಽನಂತಸ್ತಾರಕಃ ಪರಮೇಶ್ವರಃ ॥೨೨೯॥

॥ ವಿಷ್ಣುರುವಾಚ ॥

ಇಮಾನಿ ದಿವ್ಯನಾಮಾನಿ ಜಪ್ಯಂತೇ ಸರ್ವದಾ ಮಯಾ ।
ನಾಮಕಲ್ಪಲತೇಯಂ ಮೇ ಸರ್ವಾಭೀಷ್ಟಪ್ರದಾಯಿನೀ ॥೨೩೦॥

ವೇದೇಷು ಶಿವನಾಮಾನಿ ಶ್ರೇಷ್ಠಾನ್ಯಘಹರಾಣಿ ಚ ।
ಸಂತ್ಯನಂತಾನಿ ಸುಭಗೇ ವೇದೇಷು ವಿವಿಧೇಷು ಚ ॥೨೩೧॥

ನಾಮಾನ್ಯೇತಾನಿ ಸುಭಗೇ ಶಿವದಾನಿ ನ ಸಂಶಯಃ ।
ವೇದಸರ್ವಸ್ವಭೂತಾನಿ ನಾಮಾನ್ಯೇತಾನಿ ವಸ್ತುತಃ ॥೨೩೨॥

ಏತಾನಿ ಯಾನಿ ನಾಮಾನಿ ತಾನಿ ಸರ್ವಾರ್ಥದಾನಿ ಹಿ ।
ಜಪ್ಯಂತೇ ಸಾದರಂ ನಿತ್ಯಂ ಮಯಾ ನಿಯಮಪೂರ್ವಕಂ ॥೨೩೩॥

ಭಿದ್, ಅವ್ಯಕ್ತ, ಸಹಸ್ರಾಕ್ಷ, ಸಹಸ್ರಪಾತ್, ಅಪವರ್ಗಪ್ರದ, ಅನಂತ, ತಾರಕ, ಪರಮೇಶ್ವರ,. ||೨೨೭-೨೨೮-೨೨೯||

(ಇವು ಪರಮೇಶ್ವರನ ನೂರೆಂಟು ನಾಮಧೇಯಗಳು)

ಈ ನಾಮಗಳನ್ನು ಹೇಳಿ ಬಳಿಕ ವಿಷ್ಣುವು ಗಿರಿಜೆಯನ್ನು ನೋಡಿ ಹೀಗೆಂದನು -- ದೇವಿ, ನಾನು ಅನವರತವೂ ಈ ದಿವ್ಯನಾಮಗಳನ್ನೇ ಜಪಿಸುತ್ತಿರುವೆನು. ಈ ನಾಮಾವಳಿಯು ನನಗೆ ಸಕಲ ಇಷ್ಟಾರ್ಥಗಳನ್ನೂ ಪೂರೈಸಿಕೊಡುವಂತಹ ಕಲ್ಪವೃಕ್ಷದಂತಿರುವುದು. ||೨೩೦||

ದೇವಿ, ಶಾಖೋಪಶಾಖೆಗಳಿಂದ ವಿಭಾಗವನ್ನು ಹೊಂದಿದ ಅನಂತವಾದ ವೇದಗಳಲ್ಲಿ ಶ್ರೇಷ್ಠವೂ ಪಾಪಹರವೂ ಆದ ಅನೇಕ ದಿವ್ಯವಾದ ಶಿವನಾಮಧೇಯಗಳಿರುವುವು. ||೨೩೧||

ವೇದಪ್ರೋಕ್ತಗಳಾದ ಈ ಶಿವನಾಮಗಳು ನಿಜವಾಗಿಯೂ ಮಂಗಳಪ್ರದವಾದವುಗಳು. ಸರ್ವೇಷ್ಟಪ್ರದಗಳಾದ ಈ ನಾಮಾವಳಿಗಳನ್ನು ನಾನು ತಪ್ಪದೆ ನಿತ್ಯವೂ ಜಪಿಸುತ್ತಿರುವೆನು. ||೨೩೨-೨೩೩||

ತೇಭ್ಯೋ ನಾಮಾನಿ ಸಂಗೃಹ್ಯ ಕುಮಾರಾಯ ಮಹೇಶ್ವರಃ ।
ಅಷ್ಟೋತ್ತರಶತಂ ಚೈವ ನಾಮ್ನಾಮುಪದಿಶತ್ಪುರಾ ॥೨೩೪॥

ತಾನಿ ನಾಮಾನಿ ದಿವ್ಯಾನಿ ಜಪ್ಯಂತೇ ಸಾದರಂ ಮಯಾ ।
ಇತ್ಯುಕ್ತ್ವಾ ಪ್ರಣಿಪತ್ಯಾಂಬಾಂ ಸಂಪೂಜ್ಯ ಚ ಜನಾರ್ದನಃ ॥೨೩೫॥

ತತೋ ಜಗಾಮ ವೈಕುಂಠಂ ಪ್ರೇಷಿತೋ ಜಗದಂಬಯಾ ।
ಶಿವಮಾರಾಧಯಂತೀ ಸಾ ಗಿರಿಜಾಪಿ ತತಃ ಶಿವಂ ॥೨೩೬॥

ಸಂಪ್ರಾಪ ಶಿವರೂಪಾ ಸಾ ಭೂಯಃ ಪ್ರಾಪ್ತಶಿವಾಪಿ ಸಾ ।
ಗೌರೀಲಿಂಗಮಿದಂ ವಿಪ್ರ ಶಿವಾನೀನಿರ್ಮಿತಂ ಪುರಾ ॥೨೩೭॥

ಏತಲ್ಲಿಂಗಾರ್ಚನಾನ್ಮರ್ತ್ಯೈರ್ಮೃತ್ಯುಬಾಧಾ ನ ಲಭ್ಯತೇ ।
ಅಸ್ಮಿನ್ಲಿಂಗೇ ಮಹಾದೇವಃ ಪ್ರಾದುರಾಸೀದ್ಯದಾ ತದಾ ॥೨೩೮॥

ಪೂರ್ವದಲ್ಲಿ ಪರಮೇಶ್ವರನು ವೇದಗಳಲ್ಲಿ ಹೇಳಿರುವ ಆ ನಾಮಧೇಯುಗಳನ್ನು ಸಂಗ್ರಹಿಸಿ ಅವುಗಳಲ್ಲಿ ನೂರೆಂಟು ನಾಮಾವಳಿಗಳನ್ನು ಮಾತ್ರ ತನ್ನ ಪ್ರಿಯ ಪುತ್ರನಾದ ಕುಮಾರಸ್ವಾಮಿಗೆ ಉಪದೇಶಿಸಿದನು. ॥೨೩೪॥

ನಾನು ಆ ದಿವ್ಯವಾದ ನಾಮಗಳನ್ನು ಆದರದಿಂದ ಜಪಿಸುತ್ತಿರುವೆನು. ಹೀಗೆಂದು ಹೇಳಿ ವಿಷ್ಣುವು ಜಗನ್ಮಾತೆಯಾದ ಗಿರಿಜೆಗೆ ನಮಸ್ಕರಿಸಿ ಆ ಬಳಿಕ ದೇವಿಯನ್ನು ಪೂಜಿಸಿ, ದೇವಿಯ ಅನುಮತಿಯನ್ನು ಪಡೆದು ವೈಕುಂಠಕ್ಕೆ ತೆರಳಿದನು. ॥೨೩೫॥

ಬಳಿಕ ಗಿರಿಜೆಯೂ ಸಹ ಶಿವನನ್ನು ಆರಾಧಿಸುತ್ತಾ, ಸಾಕ್ಷಾತ್ ಶಿವಸ್ವರೂಪಿಣಿಯಾದ ಶಿವನನ್ನು ಪಡೆದಿದ್ದರೂ ಸಹ ಪುನಃ ತನ್ನ ಪೂಜಾಮಹಿಮೆಯಿಂದ ಶಿವಸಾನ್ನಿಧ್ಯವನ್ನು ಪಡೆದಳು. ॥೨೩೬॥

ಎಲೈ ಬ್ರಾಹ್ಮಣನೇ, ಈ ಲಿಂಗವನ್ನು ಹಿಂದೆ ಗಿರಿಜೆಯು ಸ್ಥಾಪಿಸಿದಳು. ಈ ಲಿಂಗವನ್ನು ಆರಾಧಿಸುವುದರಿಂದ ಮನುಜರು ಮೃತ್ಯುವಿನ ಬಾಯಿಗೆ ತುತ್ತಾಗುವುದಿಲ್ಲ. ಈ ಲಿಂಗದಲ್ಲಿ ಪರಮೇಶ್ವರನು ಪ್ರಾದುರ್ಭವಿಸಿದಮೇಲೆ ಆಗ ಶಿವನೂ ಸಹ ಮನೋಹರವಾದ ಈ ಲಿಂಗವನ್ನು ಪೂಜಿಸಿದನು. ॥೨೩೭-೨೩೮॥

ಶಿವೋಽಪಿ ಪೂಜಯಾಮಾಸ ಲಿಂಗಮೇತನ್ಮನೋಹರಂ ।
ತ್ರಿಕಾಲಮೇತಲ್ಲಿಂಗಸ್ಯ ಯಃ ಕರಿಷ್ಯತಿ ಪೂಜನಂ ॥೨೩೯॥

ಸ ಸರ್ವಾನ್ಲಭತೇ ಕಾಮಾನ್ಮೋಕ್ಷಮಂತೇ ನ ಸಂಶಯಃ ।
ಪುರಾತ್ರ ಪುಷ್ಪದಂತೇನ ತಪಸ್ತಪ್ತಂ ದುರಾಸದಂ ॥೨೪೦॥

ತತ್ಕೃತೇನೈವ ತಪಸಾ ಕ್ಷುಬ್ಧಮಾಸೀಜ್ಜಗತ್ತ್ರಯಂ ।
ಇಂದ್ರಾದಯೋ ಲೋಕಪಾಲಾಃ ಕ್ಷುಬ್ಧಾಶ್ಚೈವ ತದಾ ಮುನೇ॥೨೪೧॥

ವಿಷ್ಣುಲೋಕಂ ಯಯುಃ ಶೀಘ್ರಂ ಬ್ರಹ್ಮಣಾಪಿ ಸಮನ್ವಿತಾಃ ।
ತತಸ್ತಾನಾಗತಾನ್ದೃಷ್ಟ್ವಾ ಜ್ಞಾತ್ವಾ ತತ್ಕ್ಷೋಭಕಾರಣಂ ॥೨೪೨॥

ಬ್ರಹ್ಮಾದೀನಾಹ ತಾನ್ವಿಷ್ಣುರುಪವೇಶ್ಯ ಯಥಾತಥಂ ॥೨೪೩॥

ಯಾವ ಮನುಜನು ತ್ರಿಕಾಲಗಳಲ್ಲಿಯೂ ಈ ಶಿವಲಿಂಗವನ್ನು ಅರ್ಚಿಸುವನೋ ಅವನು ಸಕಲ ಇಷ್ಟಾರ್ಥಗಳನ್ನೂ ಪಡೆಯುವನಲ್ಲದೇ ಅಂತ್ಯದಲ್ಲಿ ಮುಕ್ತಿಯನ್ನೈದುವನು. ಇದರಲ್ಲಿ ಸಂಶಯವಿರುವುದಿಲ್ಲ. ಹಿಂದೆ ಈ ಪ್ರದೇಶದಲ್ಲಿ ಪುಷ್ಪದಂತನೆಂಬ ಗಂಧರ್ವನು ಭಯಂಕರವಾದ ತಪಸ್ಸನ್ನಾಚರಿಸಿದನು. ||೨೩೯-೨೪೦||

ಎಲೈ ಮುನಿಯೇ, ಆಗ ಅವನು ಕೈಗೊಂಡ ತಪಸ್ಸಿನಿಂದ ತ್ರಿಲೋಕಗಳಲ್ಲಿಯೂ ಕ್ಷೋಭೆಯುಂಟಾಯಿತು. ಇಂದ್ರಾದಿ ಲೋಕಪಾಲಕರು ಭಯಭ್ರಾಂತರಾದರು. ||೨೪೧||

ತಪೋಜ್ವಾಲೆಯಿಂದ ಚಿಂತಾಕ್ರಾಂತರಾದ ಆ ದೇವತೆಗಳು ಬ್ರಹ್ಮನಿಂದೊಡಗೂಡಿ ಶೀಘ್ರವಾಗಿ ವಿಷ್ಣುಲೋಕಕ್ಕೆ ತೆರಳಿದರು. ವಿಷ್ಣುವು ದೇವತೆಗಳು ತನ್ನ ಬಳಿಗೆ ಬಂದುದನ್ನು ನೋಡಿ, ಅವರ ಭೀತಿಗೆ ಕಾರಣವನ್ನು ತಿಳಿದು, ಪುಷ್ಪದಂತನ ತಪಸ್ಸಿನ ಮಹಿಮೆಯಿಂದ ನಿಸ್ತೇಜಸ್ಕರಾದ ಆ ಬ್ರಹ್ಮಾದಿದೇವತೆಗಳನ್ನು ಯಥಾಯೋಗ್ಯವಾಗಿ ಆಸನದಲ್ಲಿ ಕುಳ್ಳಿರಿಸಿ ಅವರನ್ನು ಕುರಿತು ಹೀಗೆಂದನು. ||೨೪೨-೨೪೩||

|| ವಿಷ್ಣುರುವಾಚ ||

ಪುಷ್ಪದಂತೋಗ್ರತಪಸಾ ಭೀತಾ ಯೂಯಂ ತತೋ ಭಯಂ ।
ತಥಾಪಿ ವಸ್ತುತೋ ದೇವಾಃ ಭವತಾಂ ನ ಭವಿಷ್ಯತಿ ||೨೪೪||

ಯಾನಿ ಸಂತ್ಯಧುನಾ ದೇವಾಃ ಪದಾನ್ಯಸ್ಮಾಕಮುಕ್ಷತಂ ।
ತಾನಿ ತೇನ ನ ಗಣ್ಯಂತೇ ಪುಷ್ಪದಂತೇನ ಧೀಮತಾ ||೨೪೫||

ಸ ಗಾಣಪತ್ಯಮಧುನಾ ಲಬ್ಧುಮಿಚ್ಛತಿ ಶಂಕರಾತ್ ।
ಸ ಬಲಾದಪಿ ದತ್ತಾನಿ ಪದಾನ್ಯೇತಾನಿ ನೇಚ್ಛತಿ ||೨೪೬||

ವೈಕುಂಠಾದೀನಿ ಸರ್ವಾಣಿ ಪದಾನಿ ಬಹುಧಾ ಪುರಾ।
ತೇನ ಲಬ್ಧಾನ್ಯತಸ್ತಸ್ಯ ನೈತೇಷ್ವಿಚ್ಛಾ ಭವಿಷ್ಯತಿ ||೨೪೭||

ಯಶ್ಚೇದೃಶೋಗ್ರತಪಸಾ ಪ್ರೀಣಯಿಷ್ಯತಿ ಶಂಕರಂ ।
ಸ ಕಿಮಸ್ಮತ್ಪದೇ ವಾಂಛಾಂ ಕರಿಷ್ಯತಿ ವದಂತು ನಃ ||೨೪೮||

ಎಲೈ ದೇವತೆಗಳಿರಾ, ನೀವು ಪುಷ್ಪದಂತನ ಭಯಂಕರವಾದ ತಪಸ್ಸಿನಿಂದ ಹೆದರಿರುತ್ತೀರಿ. ಆದರಿಂದ ನಿಮಗೆ ಈ ಭಯವು ಸಂಭವಿಸಿರುವುದು. ಆದರೆ ವಸ್ತುತಃ ನೀವು ಭೀತರಾಗುವುದಕ್ಕೆ ಕಾರಣವಿಲ್ಲ. ||೨೪೪||

ಈಗ ನಮಗಿರುವ ವೈಕುಂಠಾದಿ ಪದವಿಗಳಿಗೆ ಎಂದಿಗೂ ಚ್ಯುತಿಯಿರುವುದಿಲ್ಲ. ಏಕೆಂದರೆ, ಆ ಪುಷ್ಪದಂತನು ವೈಕುಂಠಾದಿ ಪದವಿಯನ್ನು ಪರಿಗಣಿಸುವುದೇ ಇಲ್ಲ. ||೨೪೫||

ಅವನು ಶಿವನಿಂದ ಪ್ರಮಥಗಣಗಳ ಆಧಿಪತ್ಯವನ್ನು ಪಡೆಯಲು ಬಯಸುತ್ತಿರುವನು. ಅವನಿಗೆ ಈ ವೈಕುಂಠಾದಿ ಪದವಿಗಳನ್ನು ಬಲಾತ್ಕಾರದಿಂದ ಕೊಟ್ಟರೂ ಸಹ ಅವನು ಇವುಗಳನ್ನು ಅಪೇಕ್ಷಿಸುವುದಿಲ್ಲ. ||೨೪೬||

ಈ ಹಿಂದೆ ಅವನು ವೈಕುಂಠಲೋಕವೇ ಮೊದಲಾದ ಈ ಸಕಲ ದೇವಪದವಿಗಳನ್ನೂ ಪಡೆದಿದ್ದನು. ಆದುದರಿಂದ ಅವನಿಗೆ ಈ ಪದವಿಗಳಲ್ಲಿ ಇಚ್ಛೆಯೇ ಉಂಟಾಗುವುದಿಲ್ಲ. ||೨೪೭||

ಯಾವನು ಇಂತಹ ಕಠಿಣವಾದ ತಪಸ್ಸಿನಿಂದ ಶಂಕರನನ್ನು ತೃಪ್ತಿಗೊಳಿಸುವನೋ ಅವನು ನಮ್ಮ ಈ ಪದವಿಗಳನ್ನು ಪಡೆಯ ಬಯಸುವನೇ? ಹೇಳಿರಿ. ||೨೪೮||

ಯಃ ಕರಿಷ್ಯತಿ ಯತ್ನೇನ ತಪೋ ಘೋರಂ ದುರಾಸದಂ ।
ಸ ಸರ್ವದಾ ಶಿವಂ ಪ್ರಾಪ್ತುಂ ಸಮುದ್ಯುಕ್ತೋ ಭವಿಷ್ಯತಿ ॥೨೪೯॥

ಅತಸ್ತಸ್ಮಾದ್ಭಯಂ ತ್ಯಕ್ತ್ವಾ ಯೂಯಂ ಸ್ವಸ್ವಪದೇ ಸದಾ ।
ತಿಷ್ಠಂತು ಸಾವಧಾನೇನ ಸ್ವಸ್ವಕರ್ಮಸು ಸಂಯುತಾಃ ॥೨೫೦॥

ಭ್ರಮಃ ಸ್ಥಿತೋ ಮಮಾಪ್ಯೇವಂ ಸೋ ನಿವೃತ್ತಃ ಶನೈಃ ಶನೈಃ ।
ಸುಖೇನ ಸ್ಥೀಯತೇ ದೇವಾಸ್ತದಾಪ್ರಭೃತಿ ಸರ್ವದಾ ॥೨೫೧॥

ಇತ್ಯುಕ್ತಾ ವಿಷ್ಣುನಾ ದೇವಾಃ ಸರ್ವೇ ಸ್ವಸ್ವಪದಂ ಯಯುಃ ।
ತತಸ್ತಸ್ಮಾದ್ಭಯಂ ತ್ಯಕ್ತಂ ಸರ್ವೈರಪಿ ಸುರೈರ್ಮುನೇ ॥೨೫೨॥

ಏತಾದೃಶಂ ತಪೋ ಘೋರಂ ಪುಷ್ಪದಂತಶ್ಚಕಾರ ಸಃ ।
ತೇನೈವ ತಪಸಾ ತುಷ್ಟಃ ಪ್ರತ್ಯಕ್ಷೋಽಭೂನ್ಮಹೇಶ್ವರಃ ॥೨೫೩॥

ಯಾವನು ಅತ್ಯಂತ ಆಯಾಸದಿಂದ ಕಠಿಣವಾದ ಮತ್ತು ದುಃಸಹವಾದ ತಪಸ್ಸನ್ನಾಚರಿಸುವನೋ, ಅವನು ನಿರಂತರವೂ ಶಿವನನ್ನು ಹೊಂದುವುದರಲ್ಲೇ ಉದ್ಯುಕ್ತನಾಗುವನು. ॥೨೪೯॥

ಆದುದರಿಂದ ನೀವು ಭಯವನ್ನು ತೊರೆದು, ಜಾಗರೂಕತೆಯಿಂದ ನಿಮ್ಮ ನಿಮ್ಮ ಕಾರ್ಯಗಳಲ್ಲಿ ನಿರತರಾಗಿ ನಿಮ್ಮ ನಿಮ್ಮ ಪದವಿಯಲ್ಲಿಯೇ ಸುಖವಾಗಿರಿ. ॥೨೫೦॥

ಎಲೈ ದೇವತೆಗಳಿರಾ, ಈ ಹಿಂದೆ ನಾನೂ ಸಹ ನಿಮ್ಮಂತೆಯೇ ಭ್ರಾಂತನಾಗಿದ್ದೆನು. ಆದರೆ ಇದೀಗ ಆ ಭ್ರಾಂತಿಯು ಮೆಲ್ಲಮೆಲ್ಲನೆ ದೂರವಾಯಿತು. ಅಂದಿನಿಂದ ಮೊದಲುಗೊಂಡು ನಾನು ಸುಖವಾಗಿರುವೆನು." ॥೨೫೧॥

ಎಲೈ ಮುನಿಯೇ, ವಿಷ್ಣುವು ಹೀಗೆನ್ನಲು ಬಳಿಕ ಆ ದೇವತೆಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು. ಈ ರೀತಿಯಲ್ಲಿ ವಿಷ್ಣುವಿನ ವಚನದ ಮೇರೆಗೆ ಅವರೆಲ್ಲರೂ ಪುಷ್ಪದಂತನಿಂದುಂಟಾದ ಭಯವನ್ನು ತೊರೆದರು. ॥೨೫೨॥

ಪುಷ್ಪದಂತನು ಈರೀತಿಯಾಗಿ ಉಗ್ರವಾದ ತಪಸ್ಸನ್ನು ಆಚರಿಸಿದನು. ಆ ತಪಸ್ಸಿನಿಂದಲೇ ಪರಶಿವನು ತೃಪ್ತನಾಗಿ ಪುಷ್ಪದಂತನಿಗೆ ಪ್ರತ್ಯಕ್ಷನಾದನು. ॥೨೫೩॥

ಪ್ರಾದುರ್ಭೂತಂ ಮಹಾದೇವಂ ಗೌರೀಲಿಂಗಾನ್ಮನೋಹರಾತ್ ।
ಪುಷ್ಪದಂತೋ ವಿಲೋಕ್ಯಾಶು ಪೂಜಯಾಮಾಸ ಸಾದರಂ ॥೨೫೪॥

ತತಃ ಪ್ರಣಮ್ಯ ತುಷ್ಟಾವ ವಿನಯಾನತಕಂಧರಃ ।
ಕೃತಾಂಜಲಿಪುಟೋ ಭೂತ್ವಾ ಪುಷ್ಪೈಃ ಸಂಪೂಜ್ಯ ಚಾಂಜಲಿಃ॥೨೫೫॥

॥ ಪುಷ್ಪದಂತ ಉವಾಚ ॥

[1] ಓಂ ಮಹಿಮ್ನಃ ಪಾರಂ ತೇ ಪರಮವಿದುಷೋ ಯದ್ಯಸದೃಶೀ
ಸ್ತುತಿರ್ಬ್ರಹ್ಮಾದೀನಾಮಪಿ ತದವಸನ್ನಾಸ್ತ್ವಯಿ ಗಿರಃ ।
ಅಥಾವಾಚ್ಯಃ ಸರ್ವಃ ಸ್ವಮತಿಪರಿಣಾಮಾವಧಿಗೃಣ
ನ್ಮಮಾಪ್ಯೇಷ ಸ್ತೋತ್ರೇ ಹರ ನಿರಪವಾದಃ ಪರಿಕರಃ ॥೨೫೬॥

ಆಗ ಗೌರೀಲಿಂಗದಿಂದ ಪ್ರಾದುರ್ಭವಿಸಿದ ಪರಶಿವನನ್ನು ನೋಡಿ, ಪುಷ್ಪದಂತನು ಶೀಘ್ರವಾಗಿ ಅವನನ್ನು ಆದರದಿಂದ ಪೂಜಿಸಿದನು. ॥೨೫೪॥

ಅನಂತರ ಅಂಜಲಿಬದ್ಧನಾಗಿ ನಿಂತು, ಪುಷ್ಪಾಂಜಲಿಯನ್ನು ಪರಶಿವನಿಗೆ ಅರ್ಪಿಸುತ್ತಾ ಈ ರೀತಿ ಸ್ತುತಿಸತೊಡಗಿದನು. ॥೨೫೫॥

" ಸರ್ವರ ದುಃಖವನ್ನೂ ನಾಶಗೊಳಿಸುವ ಪರಶಿವನೇ, ಏನೂ ತಿಳಿಯದ ಸಾಮಾನ್ಯ ಜನರು ನಿನ್ನ ಮಹಿಮಾತಿಶಯವನ್ನು ವರ್ಣಿಸತೊಡಗುವುದು ಅನುಚಿತ. ಏಕೆಂದರೆ ಸರ್ವಜ್ಞರೆನಿಸಿದ ಬ್ರಹ್ಮಾದಿಗಳಿಗೂ ನಿನ್ನ ಮಹಿಮೆಯನ್ನು ವಿವರಿಸುವುದು ಸಾಧ್ಯವಾಗಿಲ್ಲ. ಹಾಗಿರುವಾಗ ನಮ್ಮಂತಹವರು ನಿನ್ನನ್ನು ಸ್ತುತಿಸುವುದು ಹೇಗೆ? ಆದರೆ, ಸ್ತುತಿಸುವವರ ತಿಳಿವಳಿಕೆಯು ಎಷ್ಟು ದೂರ ವ್ಯಾಪಿಸುವುದೋ, ಅಷ್ಟು ಮಾತ್ರ ವರ್ಣನೆಮಾಡಿ, ನಿನ್ನನ್ನು ಹೊಗಳಿದರೆ ಪ್ರಾಯಶಃ ಅದು ಅನುಚಿತವಾಗದು. ಅದನ್ನು ತಿಳಿದೇ ಈಗ ನಾನು ತಿಳಿದಷ್ಟುಮಟ್ಟಿಗೆ ನಿನ್ನ ಗುಣಗಳನ್ನು ವರ್ಣಿಸಲು ಹೊರಟಿರುವೆನು. ॥೨೫೬॥

---

1 ಈ ಪುಷ್ಪದಂತ ವಿರಚಿತವಾದ ಮಹಿಮ್ನಸ್ತೋತ್ರಕ್ಕೆ ಮಧುಸೂದನ ಸರಸ್ವತಿಗಳೆಂಬ ಉದ್ದಾಮ ಅದ್ವೈತಪಂಡಿತರು, ಶಿವವಿಷ್ಣ್ವರ್ಥಕವಾಗಿ ವ್ಯಾಖ್ಯಾನವನ್ನು ಮಾಡಿರುವರು. ಶಬ್ದಚಮತ್ಕಾರವನ್ನು ತೋರಿಸಿ ಈ ಶಿವಸ್ತೋತ್ರಗಳನ್ನೂ ವಿಷ್ಣುಪರವಾಗಿಯೂ ರಚಿಸಿರುವರು.

ಅತೀತಃ ಪಂಥಾನಂ ತವ ಚ ಮಹಿಮಾ ವಾಙ್ಮನಸಯೋ
ರತದ್ವ್ಯಾವೃತ್ತ್ಯಾಯಂ ಚಕಿತಮಭಿಧತ್ತೇ ಶ್ರುತಿರಪಿ ।
ಸ ಕಸ್ಯ ಸ್ತೋತವ್ಯಃ ಕತಿವಿಧಗುಣಃ ಕಸ್ಯ ವಿಷಯಃ ।
ಪದೇ ತ್ವರ್ವಾಚೀನೇ ಪತತಿ ನ ಮನಃ ಕಸ್ಯ ನ ವಚಃ ॥೨೫೭॥

ಮಧುಸ್ಫೀತಾ ವಾಚಃ ಪರಮಮಮೃತಂ ನಿರ್ಮಿತವತ
ಸ್ತವ ಬ್ರಹ್ಮನ್ಕಿಂ ವಾಗಪಿ ಸುರಗುರೋರ್ವಿಸ್ಮಯಪದಂ ।
ಮಮ ತ್ವೇತಾಂ ವಾಣೀಂ ಗುಣಕಥನಪುಣ್ಯೇನ ಭವತಃ
ಪುನಾಮೀತ್ಯರ್ಥೇಽಸ್ಮಿನ್ಪುರಮಥನಬುದ್ಧಿರ್ವ್ಯವಸಿತಾ ॥೨೫೮॥

ದೇವ, ನಿನ್ನ ಮಹಿಮೆಯು ವಾಗಿಂದ್ರಿಯಕ್ಕೂ ಮತ್ತು ಮನಇಂದ್ರಿಯಕ್ಕೂ ಅಗೋಚರವಾಗಿರುವುದು ನಿಜ. ವೇದವೂ ಸಹ ನಿನ್ನ ಸ್ವರೂಪವನ್ನು ತಿಳಿಸಲು ಹಿಂಜರಿದು ಅಧ್ಯಾರೋಪವಾದ ನ್ಯಾಯವನ್ನನುಸರಿಸಿ ನಿನ್ನಲ್ಲಿ ಕಲ್ಪಿತವಾದ ಸತ್ಯಸಂಕಲ್ಪತ್ವಾದಿ ಗುಣಗಳನ್ನು ಹೇಳಿ, ಬಳಿಕ ನಿಷೇಧಮುಖದಿಂದ ಆ ಗುಣಗಳನ್ನು ಹೋಗಲಾಡಿಸಿ, ವಾಙ್ಮನಸ್ಸುಗಳಿಗೆ ಅತೀತವಾದ ಮತ್ತು ಶುದ್ಧವಾದ ನಿನ್ನ ಸ್ವರೂಪವನ್ನು ತಿಳಿಯಪಡಿಸುತ್ತದೆ. ನಿನ್ನ ಅನಂತ ಕಲ್ಯಾಣಗುಣಗಳನ್ನು ಸ್ತುತಿಸಲು ಅದಾವನು ಸಮರ್ಥನಿರುವನು? ಅಥವಾ ನಿರ್ಗುಣನಾದ ನಿನ್ನ ಆ ಗುಣಗಳು ಯಾವ ಇಂದ್ರಿಯಕ್ಕೆ ತಾನೇ ಗೋಚರವಾಗುವುವು? ಯಾವ ಮನುಜನ ಮನಸ್ಸಾಗಲಿ ಅಥವಾ ವಚನಗಳಾಗಲಿ ಪುರಾತನವಾದ ಶುದ್ಧ ಬ್ರಹ್ಮವನ್ನು ವಿಷಯೀಕರಿಸಲಾರವು? ಅಥವಾ ಭಕ್ತಾನುಗ್ರಹಾರ್ಥವಾಗಿ ವೃಷಭ, ಪಿನಾಕ, ಪಾರ್ವತಿ ಈ ವಸ್ತುಸಂಸರ್ಗದಿಂದ ಕೂಡಿರುವ ಪರಶಿವಸ್ವರೂಪದಲ್ಲಿ ಯಾರ ಮನಸ್ಸು ತಾನೆ ನೆಲಸಲಾರದು? ॥೨೫೭॥

ಶುದ್ಧ ಬ್ರಹ್ಮಸ್ವರೂಪನಾದ ಪರಶಿವನೇ, ಅಮೃತವನ್ನು ಸುರಿಸುವಂತಿರುವ ಅತ್ಯಂತ ಮಧುರವಾಗಿರುವ ವೇದವಚನಗಳನ್ನು ಸಾಕ್ಷಾದಮೃತವನ್ನಾಗಿಯೇ ಮಾರ್ಪಡಿಸಿ ಲೋಕೋಪಕಾರಮಾಡುತ್ತಿರುವ ನಿನ್ನ ಆ ಮಹಿಮೆಯನ್ನು ವರ್ಣಿಸಲು ಸಾಧ್ಯವೇ? ನಿನ್ನ ಮಹಿಮಾತಿಶಯವನ್ನು ವರ್ಣಿಸಲು, ಸುರಗುರುವಾದ ಬೃಹಸ್ಪತಿಯೂ ಅಸಮರ್ಥನೆನಿಸುವನು. ನಿನ್ನ ಲೀಲಾಮಹಿಮೆಯನ್ನು ವರ್ಣಿಸ ತೊಡಗುವ ಬೃಹಸ್ಪತಿಯ ವಚನವೂ ಸಹ ವಿಫಲವಾಗುವುದರಿಂದ ನಾನು

ತನ್ನೈಶ್ವರ್ಯಂ ಯತ್ತ್ರಜ್ಜಗದುದಯರಕ್ಷಾಪ್ರಲಯಕೃ
ತ್ತ್ರಯೀ ವಸ್ತು ವ್ಯಸ್ತಂ ತಿಸೃಷು ಗುಣಭಿನ್ನಾಸು ತನುಷು ।
ಅಭವ್ಯಾನಾಮಸ್ಮಿನ್ವರದ ರಮಣೀಯಾಮರಮಣೀಂ
ವಿಹಂತುಂ ವ್ಯಾಕ್ರೋಶೀಂ ವಿದಧತ ಇಹೈಕೇ ಜಡಧಿಯಃ ॥೨೫೯॥

ಕಿಮೀಹಃ ಕಿಂಕಾಯಃ ಸ ಖಲು ಕಿಮುಪಾಯಸ್ತ್ರಿಭುವನಂ
ಕಿಮಾಧಾರೋ ಧಾತಾ ಸೃಜತಿ ಕಿಮುಪಾದಾನಮಿತಿ ಚ ।

ಆ ಕೆಲಸಕ್ಕೆ ಎಲ್ಲಿಯಾದರೂ ಸಮರ್ಥನೆನಿಸಬಲ್ಲೆನೆ ? ಆದರೆ ನಾನು ನಿನ್ನ ಅನಂತ ಕಲ್ಯಾಣಗುಣಗಳನ್ನು ನುಡಿಯುವುದು ನನ್ನ ವಾಣಿಯನ್ನು ಪವಿತ್ರೀಕರಿಸುವುದಕ್ಕೆ ಮಾತ್ರ. ನಿನ್ನ ಗುಣಗಣಗಳನ್ನು ಪ್ರಕಾಶಪಡಿಸುವುದಕ್ಕಲ್ಲ. ನನ್ನ ಈ ಸ್ತುತಿಯು ತ್ರಿಪುರಾರಿಯಾದ ನಿನ್ನನ್ನು ಸ್ಮರಿಸುವುದರಲ್ಲಿಯೇ ಪರ್ಯವಸಿತವಾಗಲಿ. ಇದೇ ನನ್ನ ಕೋರಿಕೆ. ವೇದವೇದಾಂತಗಳಿಗೂ ದೊರಕದ ನಿನ್ನ ಮಹಿಮೆಯು ಅಲ್ಪ ಬುದ್ಧಿಯುಳ್ಳ ನನಗೆ ಹೇಗೆ ಲಭಿಸೀತು ? ॥೨೫೮॥

ಪರಶಿವನೇ, ನಿಯತಕಾಲಗಳಲ್ಲಿ ಸೃಷ್ಟಿ, ಸ್ಥಿತಿ, ಲಯಗಳನ್ನುಂಟುಮಾಡುವ ನಿನ್ನ ಅಪಾರವಾದ ಮಹಿಮೆಯು, ಯಥಾಕ್ರಮವಾಗಿ ಸತ್ತ್ವಗುಣಪ್ರಧಾನವಾದ ವಿಷ್ಣುವೆಂಬ ಸಂಜ್ಞೆಯುಳ್ಳ ಔಪಾಧಿಕವಾದ ಶರೀರದಲ್ಲಿಯೂ, ರಜೋಗುಣಪ್ರಧಾನವಾದ ಬ್ರಹ್ಮನೆಂಬ ಸಂಜ್ಞೆಯುಳ್ಳ ಮಾಯಾಮಯವಾದ ಶರೀರದಲ್ಲಿಯೂ, ಮತ್ತು ತಮೋಗುಣಪ್ರಧಾನವಾದ ರುದ್ರಶರೀರದಲ್ಲಿಯೂ ಹಂಚಿಹೋಗಿರುವುದು. ಈ ರೀತಿಯಲ್ಲಿ ನೀನು ನಿನ್ನ ಮಾಯೆಯಿಂದ ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ಮೂರ್ತಿತ್ರಯಗಳನ್ನು ಧರಿಸಿ ನಿಯತಕಾಲದಲ್ಲಿ ಪ್ರಪಂಚದ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾಗಿರುವೆ. ಸಂಸಾರದಿಂದ ವಿರಕ್ತರಾಗಿ ಸತತವೂ ನಿನ್ನನ್ನೇ ಧ್ಯಾನಿಸುವುದರಲ್ಲಿ ಆಸಕ್ತರಾದ ಜ್ಞಾನಿಗಳಿಗೆ ನೀನು ಶಾಶ್ವತವಾದ ಮೋಕ್ಷಪದವಿಯೆಂಬ ವರವನ್ನು ನೀಡುವೆ. ಹೀಗಿರುತ್ತಿದ್ದರೂ ಅಜ್ಞಾನಿಗಳಾದ ಕೆಲವರು ನಿನ್ನನ್ನು ಕ್ರೂರನೆಂದು ಭಾವಿಸಿ ನಿನ್ನಲ್ಲಿ ಆಕ್ಷೇಪಕರವಾದ ಮಾತುಗಳನ್ನಾಡುತ್ತಿರುವರು. ಇದು ಯಾವ ನ್ಯಾಯ ? ॥೨೫೯॥

ಅಜ್ಞಾನಿಗಳಾದ ಕೆಲವರು ಸೃಷ್ಟಿಕರ್ತನಾದ ಆ ಬ್ರಹ್ಮನ ಸೃಷ್ಟಿವೈಚಿತ್ರ್ಯವನ್ನು ನೋಡಿ ಅಚ್ಚರಿಗೊಂಡು, ಈ ಜಗತ್ತಿನ ಸೃಷ್ಟಿಗೆ ಕಾರಣನಾದ ಬ್ರಹ್ಮನೇ

ಅತರ್ಕ್ಯೈರ್ಶ್ವರ್ಯೇ ತ್ವಯ್ಯನವಸರದುಃಸ್ಥೋ ಹತಧಿಯಃ
ಕುತರ್ಕೋಽಯಂ ಕಾಂಶ್ಚಿನ್ಮುಖರಯತಿ ಮೋಹಾಯ ಜಗತಃ ॥೨೬೦॥

ಅಜನ್ಮಾನೋ ಲೋಕಾಃ ಕಿಮವಯವವಂತೋಽಪಿ ಜಗತಾ
ಮಧಿಷ್ಠಾತಾರಂ ಕಿಂ ಭವವಿಧಿರನಾದೃತ್ಯ ಭವತಿ ।
ಅನೀಶೋ ವಾ ಕುರ್ಯಾದ್ಭುವನಜನನೇ ಕಃ ಪರಿಕರೋ
ಯತೋ ಮಂದಾಸ್ತ್ವಾಂ ಪ್ರತ್ಯಮರವರ ಸಂಶೇರತ ಇಮೇ ॥೨೬೧॥

ಇರುವುದಿಲ್ಲವೆಂದು ತಿಳಿಯುವರು. ಅವರು ಆಪ್ತಕಾಮನಾದ ಪರಬ್ರಹ್ಮನಿಗೆ ಪ್ರಪಂಚಸೃಷ್ಟಿಯಲ್ಲಿ ಇಚ್ಛೆಯು ಉದಯಿಸುವುದೇ? ಬ್ರಹ್ಮನಿಗೆ ಶರೀರವಿರುವುದೇ? ಪ್ರಪಂಚವನ್ನು ಸೃಷ್ಟಿಸಲು ಬ್ರಹ್ಮನಿಗೆ ತಕ್ಕ ಸಲಕರಣೆಗಳಾವುವು? ಸೃಷ್ಟಿಗೆ ಪೂರ್ವದಲ್ಲಿ ಈ ತ್ರಿಭುವನಗಳಿಗೆ ಆಶ್ರಯವಾದ ವಸ್ತುವು ಆದಾವುದಿರುವುದು? ಸೃಷ್ಟಿಕರ್ತನಾದ ಬ್ರಹ್ಮನಿಗಾದರೂ ಆಶ್ರಯವಾದ ವಸ್ತುವಾವುದು? ಪ್ರಪಂಚದ ಉಪಾದಾನಕಾರಣವಾದರೂ ಅದಾವುದಿರುವುದು? ಎಂಬಿವೇ ಮುಂತಾದ ಕುತರ್ಕಗಳನ್ನು ಹೂಡಿ ಜನರನ್ನು ಅಜ್ಞಾನಾಂಧಕಾರದಲ್ಲಿ ಕೆಡಹುವರು. ಕುಂಬಾರನು ಮೃತ್ತಿಕೆಯೇ ಮೊದಲಾದ ಸಾಮಗ್ರಿಗಳಿಂದ ಸ್ವತಂತ್ರವಾಗಿ ಘಟಾದಿಗಳನ್ನು ನಿರ್ಮಿಸುವಂತೆ ಜಗನ್ನಿಯಾಮಕನಾದ ಪರಶಿವನು ಲೋಕಸೃಷ್ಟಿಕಾರಕನಾಗುತ್ತಾನೆ ಎಂಬುದನ್ನು ಅವರು ತಿಳಿಯರು. ಸ್ವಾಮಿಯೇ, ನಿನ್ನ ಲೀಲಾಮಹಿಮೆಯನ್ನು ವರ್ಣಿಸಲು ಅಶಕ್ಯವಾಗಿರುವುದು. ನಿನಗೆ ಅಸಾಧ್ಯವಾದ ಕಾರ್ಯವೊಂದಿರುವುದೇ? ಆದರೂ ಇದನ್ನರಿಯದ ಅಜ್ಞಾನಿಗಳಾದ ಮನುಜರು ಮೋಹಪಾಶಕ್ಕೆ ಗುರಿಯಾಗಿ ನಾಸ್ತಿಕವಾದವನ್ನು ಹರಡುವರು. ॥೨೬೦॥

ದೇವೇಶನೇ, ಈ ಲೋಕಸೃಷ್ಟಿಯನ್ನಧಿಕರಿಸಿ ನಾನಾ ಜನರು ನಾನಾ ಬಗೆಯಿಂದ ತರ್ಕಿಸುವರು. ಕೆಲವರು " ಸಾವಯವಗಳಾದ ಈ ಲೋಕಗಳಿಗೆ ಸೃಷ್ಟಿಯು ಇರಲೇ ಬೇಕು. ವಿಚಿತ್ರವಾದ ಈ ಜಗದ್ರಚನೆಯು ಜಗನ್ನಿಯಾಮಕನಾದ ಓರ್ವ ಈಶ್ವರನೆಂಬ ಚೇತನವಿಲ್ಲದಿದ್ದರೆ ಅದು ಹೇಗೆ ಸಂಘಟಿಸುವುದು? ಆದುದರಿಂದ ಜಗತ್ತಿನ ರಚನೆಗೆ ಕಾರಣನಾದ ಈಶ್ವರನು ಇರಲೇಬೇಕು " ಎಂದು ಊಹಿಸುವರು. ಇನ್ನು ಕೆಲವರು ಜಗತ್ತಿನ ರಚನೆಗೆ ಯಾವ ಸಲಕರಣೆಗಳು ತಾನೇ ಬೇಕಾಗುವುವು? ಅಥವಾ ಜಗತ್ಸೃಷ್ಟಿಯೆಂಬ ಕಾರ್ಯವು ಪ್ರಯಾಸಸಾಧ್ಯವಾದುದಲ್ಲ.

ತ್ರಯೀ ಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ
ಪ್ರಭಿನ್ನೇ ಪ್ರಸ್ಥಾನೇ ಪರಮಿದಮತಃ ಪಥ್ಯಮಿತಿ ಚ ।
ರುಚೀನಾಂ ವೈಚಿತ್ರ್ಯಾದೃಜುಕುಟಿಲನಾನಾಪಥಜುಷಾಂ
ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ ॥೨೬೨॥

ಅದು ಸ್ವಾಭಾವಿಕವಾಗಿಯೇ ಜರುಗುವುದು. ಆದುದರಿಂದ ಇದನ್ನು ಸೃಷ್ಟಿಸಲು ಈಶ್ವರನೇ ಆಗಬೇಕೆ? ಜೀವನಾದರೂ ಇದನ್ನು ಸೃಷ್ಟಿಸಬಲ್ಲನು ಎಂದೆನ್ನುವರು. ಅನೀಶನಾಗಿ ಅಸಮರ್ಥನಾದ ಜೀವನು ಈ ಚತುರ್ದಶಲೋಕಾತ್ಮಕವಾದ ಪ್ರಪಂಚ ರಚನೆಗೆ ಹೇಗೆ ಸಮರ್ಥನೆನಿಸಿಯಾನು ಎಂದು ಕೆಲವರೆನ್ನುವರು. ದೇವ ನಿನ್ನ ಈ ಮಹಿಮಾತಿಶಯವನ್ನು ಅರಿಯದ ಅಜ್ಞಾನಿಗಳು ನಿನ್ನ ವಿಷಯದಲ್ಲಿ ಈ ಪ್ರಕಾರ ವಾಗಿ ನಾನಾರೀತಿ ಸಂಶಯಪಡುವರು. ॥೨೬೧॥

ಲೋಕದಲ್ಲಿ ವೇದವೇದಾಂತಗಳು, ಸಾಂಖ್ಯ, ಯೋಗ, ಪಾಶುಪತ, ವೈಷ್ಣವ ಎಂಬಿವೇ ಮೊದಲಾದ ಅನೇಕ ಮತಗಳಿರುವುವು. ಸಂಕ್ಷೇಪವಾಗಿ ಪ್ರಸ್ಥಾನಭೇದಗಳು ಮೂರು ವಿಧ. (1) ಆರಂಭವಾದದಲ್ಲಿ ತಾರ್ಕಿಕರು ಮತ್ತು ಮೀಮಾಂಸಕರೂ ದ್ವ್ಯಣುಕಾದಿಗಳಿಂದ ಜಗತ್ತು ಆರಂಭವಾಗುವುದೆಂದು ಹೇಳು ವರು. (2) ಪರಿಣಾಮವಾದದಲ್ಲಿ ಸತ್ವರಜೋಗುಣಾತ್ಮಕವಾದ ಪ್ರಧಾನವೇ ಮಹ ದಹಂಕಾರಾದಿ ಕ್ರಮೇಣ ಜಗದಾಕಾರದಲ್ಲಿ ಪರಿಣಾಮವಾಗುವುದು. ಇದು ಸಾಂಖ್ಯ, ಯೋಗ ಪಾಶುಪತರ ತತ್ತ್ವಗಳು. (3) ವಿವರ್ತವಾದದಲ್ಲಿ ಪರಬ್ರಹ್ಮವಸ್ತುವೇ ಮಾಯಾಸಂಬಂಧದಿಂದ ಜಗದಾತ್ಮನಾಭಾಸಮಾನವಾಗುತ್ತದೆ. ಇದು ವೇದಾಂತಿಗಳ ಮತ. ಇವೆಲ್ಲವೂ ಈಶ್ವರತತ್ತ್ವವನ್ನು ತಿಳಿಯಪಡಿಸಿ, ಆದರಿಂದ ಮೋಕ್ಷಪದವಿಯ ಮಾರ್ಗವು ಜನರಿಗೆ ಗೋಚರಿಸುವಂತೆ ಮಾಡುವುವು. ಆ ಮತಗಳು ಪರಸ್ಪರ ಭಿನ್ನ ವಾಗಿರುವುವು. ಆಯಾ ಮತಸ್ಥರಿಗೆ ಮಾತ್ರ ಆಯಾ ಮತಗಳು ರುಚಿಸುವುವು. ಮತ ಪ್ರಕ್ರಿಯೆಗಳು ಸ್ವಲ್ಪಹೆಚ್ಚುಕಮ್ಮಿಯಿದ್ದರೂ ಆಯಾಮತಸ್ಥರು ತಮ್ಮ ತಮ್ಮ ಮತವೇ ಶ್ರೇಷ್ಠವೂ ಹಿತಕರವೂ ಆಗಿರುವುದೆಂದು ನಂಬಿ, ಆಯಾ ಮತಧರ್ಮವನ್ನನುಸರಿಸಿ, ಶಾಶ್ವತವಾದ ಮೋಕ್ಷಪದವಿಯನ್ನು ಹೊಂದುವರು. ಆದರೆ, ಜಲರಾಶಿಗಳಿಗೆ ಸಮುದ್ರವೇ ಪ್ರಾಪ್ಯಸ್ಥಾನವಾಗಿರುವಂತೆ ಅವರೆಲ್ಲರಿಗೂ ನೀನೇ ಪ್ರಾಪ್ಯಸ್ಥಾನನಾ ಗಿರುವೆಯಲ್ಲದೇ ನಿನ್ನನ್ನು ಬಿಟ್ಟು ಇನ್ನಾವ ಮುಕ್ತಿಸ್ಥಾನವೂ ಅವರಿಗಿರುವುದಿಲ್ಲ. ಈ ವಿಷಯದಲ್ಲಿ ಯಾವ ಆಸ್ತಿಕಮತಗಳಿಗೂ ಪರಸ್ಪರ ಭೇದವಿರುವುದಿಲ್ಲ. ॥೨೬೨॥

ಮಹೋಕ್ಷಃ ಖಟ್ವಾಂಗಂ ಪರಶುರಜಿನಂ ಭಸ್ಮ ಫಣಿನಃ
ಕಪಾಲಂ ಚೇತೀಯತ್ತವ ವರದ ತಂತ್ರೋಪಕರಣಂ।
ಸುರಾಸ್ತಾಂ ತಾಮೃದ್ಧಿಂ ವಿದಧತಿ ಭವದ್ಭ್ರೂಪ್ರಣಿಹಿತಾಂ
ನ ಹಿ ಸ್ವಾತ್ಮಾರಾಮಂ ವಿಷಯಮೃಗತೃಷ್ಣಾ ಭ್ರಮಯತಿ ॥೨೬೩॥

ಧ್ರುವಂ ಕಶ್ಚಿತ್ಸರ್ವಂ ಸಕಲಮಪರಸ್ತ್ವಧ್ರುವಮಿದಂ
ಪರೋ ಧ್ರೌವ್ಯಾಧ್ರೌವ್ಯೇ ಜಗತಿ ಗದತಿ ವ್ಯಸ್ತವಿಷಯೇ।
ಸಮಸ್ತೇಪ್ಯೇತಸ್ಮಿನ್ ಪುರಮಥನ ತೈರ್ವಿಸ್ಮಿತ ಇವ
ಸ್ತುವನ್ ಜಿಹ್ರೇಮಿ ತ್ವಾಂ ನ ಖಲು ನನು ಧೃಷ್ಟಾ ಮುಖರತಾ॥೨೬೪॥

ಓ, ವರಪ್ರದನಾದ ದೇವನೇ! ನಿನ್ನ ಕಾರ್ಯಗಳನ್ನು ಸಾಧಿಸಲು ನಿನಗೆ ವೃಷಭ, ಖಟ್ವಾಂಗವೆಂಬ ಆಯುಧ (ಕಾಪಾಲಿಕರು ಉಪಯೋಗಿಸುವುದು) ಕೊಡಲಿ, ಕೃಷ್ಣಾಜಿನ, ಭಸ್ಮ, ಸರ್ಪ, ಕಪಾಲ ಈ ಏಳು ವಸ್ತುಗಳೇ ನಿನ್ನ ಸಲಕರಣೆಗಳಾಗಿವೆ. ಇವೇ ನಿನ್ನ ಐಶ್ವರ್ಯ. ಇವು ಯಾರಿಗೂ ಬೇಡದವುಗಳು. ಆದರೂ ದೇವತೆಗಳು ತಪಸ್ಸಿನಿಂದ ನಿನ್ನನ್ನು ಮೆಚ್ಚಿಸಿ ಕ್ಷಣಕಾಲದಲ್ಲಿ ಸಮಸ್ತ ಐಶ್ವರ್ಯವನ್ನೂ ಪಡೆಯುತ್ತಿರುವರು. ಭಕ್ತರಿಗೆ ಸಿಧಿಯನ್ನು ಕರುಣಿಸುವ ನೀನು ಮಾತ್ರ ಕೇವಲ ದರಿದ್ರನಂತೆ ತೋರಿಬರುತ್ತಿರುವೆ. ಇದು ನ್ಯಾಯವೇ? ಸುಖಸಾಧಕವಾದ ವಸ್ತುಗಳೆಲ್ಲವೂ ಕ್ಷಣಿಕವಾದವುಗಳೇ. ಬಿಸಿಲ್ಗುದುರೆಯಂತೆ ಕಂಡುಬರುವ ಸಂಪತ್ತಿನಲ್ಲಿ ಸುಖಭ್ರಾಂತಿ ಮಾತ್ರ ಒದಗುವುದು. ಆತ್ಮಜ್ಞಾನಿಗೆ ವಿಷಯಸುಖಗಳಲ್ಲಿ ಎಂದಿಗೂ ಆಸೆ ಜನಿಸಲಾರದು. ಮಹೇಶ್ವರನೇ, ನಿನ್ನಂತಹ ಚಿದಾನಂದರೂಪನಿಗೆ ವೃಷಭವೇ ಮೊದಲಾದ ಏಳು ವಸ್ತುಗಳೂ, ಪುರುಷ, ಪ್ರಧಾನ, ಮಹದಹಂಕಾರ, ತನ್ಮಾತ್ರೇಂದ್ರಿಯಭೂತಗಳಾಗಿ ಪರಿಣಾಮಗೊಳ್ಳುವವಲ್ಲವೆ? ಜಗತ್ಕುಟುಂಬಿಯಾದ ನಿನಗೆ ಆ ತತ್ತ್ವಗಳೇ ಉಪಕರಣಗಳಾಗುತ್ತವೆ. ಇಂತಹ ಮಹಾಮಹಿಮನ ಸ್ವರೂಪವನ್ನು ತಿಳಿಯುವುದೇ ಮಾನವರ ಆದ್ಯಧರ್ಮ. ॥೨೬೩॥

ವ್ಯವಹಾರಗೋಚರವಾಗುವ ಈ ಜಗತ್ತನ್ನು ಕೆಲವರು (ಸಾಂಖ್ಯರು ಪಾತಂಜಲರು) ಸ್ಥಿರವಸ್ತುವೆನ್ನುವರು. ಕೆಲವರು (ಬೌದ್ಧಾದಿಗಳು) ನಶ್ವರವಾದದ್ದು ಎನ್ನುವರು. ಕೆಲವರು ಅಂದರೆ ತಾರ್ಕಿಕರು, ಈ ಜಗತ್ತಿನಲ್ಲಿರುವ ಆಕಾಶ, ಕಾಲ,

ತವಾತ್ಮಾನಂ ಯತ್ನಾದ್ಯದುಪರಿ ವಿರಿಂಚಿರ್ಹರಿರಧಃ
ಪರಿಚ್ಛೇತ್ತುಂ ಯಾತಾವನಲಮನಲಸ್ತಂಭ (ಸ್ಕಂಧ) ವಪುಷಃ ।
ತತೋ ಭಕ್ತಿಃ ಶ್ರದ್ಧಾಭರಗುರುಗೃಣದ್ಭ್ಯಾಂ ಗಿರಿಶ ಯ
ತ್ಸ್ವಯಂ ತಸ್ಥೇ ತಾಭ್ಯಾಂ ತ್ವಯಿ ಕಿಮನುವೃತ್ತಿರ್ನ ಫಲತಿ ॥೨೬೫॥

ದಿಕ್, ಆತ್ಮ, ಮನಸ್ಸು, ಪೃಥಿವ್ಯಾದಿ ಪರಮಾಣು ಇವುಗಳು ನಿತ್ಯವೆಂದೂ, ಕಾರ್ಯ ದ್ರವ್ಯಗಳೆಲ್ಲಾ ಅನಿತ್ಯಗಳೆಂದೂ ಹೇಳುವರು. ಇದರಿಂದ ಅವರು ಜಗತ್ತನ್ನು ಸ್ಥಿರವಾದುದೆಂದೂ ಅಸ್ಥಿರವಾದುದೆಂದೂ ಹೇಳಿದಂತಾಯಿತು. ಈ ಚರ್ಚೆಯು ಕೇವಲ ವ್ಯಸ್ತವಿಷಯದಲ್ಲಿ ಮಾತ್ರ. ಆದರೆ ಈ ಅಖಂಡಾತ್ಮಕವಾದ ಜಗತ್ತನ್ನು ನೋಡಿದರೆ, ನನಗೇನೋ ಆಶ್ಚರ್ಯವಾಗುವುದು. ಇಂತಹ ಜಗದಧಿದೇವತೆಯಾಗಿ ಜಗತ್ಸಂಬಂಧವನ್ನೇ ತ್ಯಜಿಸಿರುವ ನಿನ್ನನ್ನು ಯಾವರೀತಿ ಸ್ತುತಿಸಲಿ ಎಂಬ ನಾಚಿಕೆಯು ನನಗೆ ಉಂಟಾಗುತ್ತಿದೆ. ಆದರೂ ನಾನು ನನ್ನ ವಾಚಾಲತ್ವದಿಂದ ನಾಚಿಕೆಯನ್ನು ಬಿಟ್ಟು ತಿಳಿದ ಕೆಲವು ಮಾತುಗಳಿಂದ ನಿನ್ನನ್ನು ಸ್ತುತಿಸುವೆನು. ಅಲ್ಲದೆ ನಿನ್ನ ಕಾರ್ಯ ಚಾತುರ್ಯದಲ್ಲಿ ಮಗ್ನನಾದ ನನಗೆ ಲೋಕೋಪಹಾಸಾತ್ಮಕವಾದ ನಾಚಿಕೆ ಏಕೆ ಬರಬೇಕು ? ನಿನ್ನಲ್ಲಿಟ್ಟಿರುವ ದೃಢನಂಬಿಕೆಯೇ ನನ್ನ ನಾಚಿಕೆಯನ್ನು ಕಳೆಯುವುದು. ॥೨೬೪॥

ತೇಜೋರೂಪನೂ, ಆತ್ಮಸ್ವರೂಪನೂ ಆದ ನಿನ್ನ ಶಿವಲಿಂಗದ ಆದ್ಯಂತಗಳನ್ನು ನೋಡಬೇಕೆಂಬ ಕುತೂಹಲದಿಂದ ಬ್ರಹ್ಮನು ಮೇಲ್ಭಾಗಕ್ಕೂ, ವಿಷ್ಣುವು ಅಧೋಭಾಗಕ್ಕೂ ಪ್ರಯಾಣಮಾಡಿದರು. ಅಷ್ಟಾದರೂ ನಿನ್ನ ಲಿಂಗದ ಆದಿ ಮತ್ತು ಅಂತ್ಯವು ಅವರಿಗೆ ಗೋಚರಿಸಲಿಲ್ಲ. ಅದರಿಂದ ಆಶ್ಚರ್ಯಪಟ್ಟು, ಶ್ರದ್ಧೆ, ಭಕ್ತಿ ಇವುಗಳ ಅತಿಶಯದಿಂದ ವಿನೀತರಾಗಿ ಸ್ತುತಿಸುತ್ತಾ ನಿಂತಿದ್ದ ಬ್ರಹ್ಮ ಮತ್ತು ವಿಷ್ಣು ಇವರು ನಿನ್ನ ಮಿತಿಮೀರಿದ ಮಹಿಮೆಯನ್ನು ಜಗತ್ತಿಗೆ ತೋರ್ಪಡಿಸಿರುವರು. ನಿನ್ನ ಅಪಾರವಾದ ಮಹಿಮೆಯೂ ಕೂಡ ಅವರಿಂದಲೇ ಪ್ರಕಾಶವಾಯಿತಲ್ಲವೆ ? ಹಾಗೆ ಅಸಮರ್ಥರಾಗಿ ನಿಂತ ಬ್ರಹ್ಮ ವಿಷ್ಣು ಇವರು ನಿನ್ನ ಮಹಿಮೆಯನ್ನು ನಿನ್ನಿಂದಲೇ ತಿಳಿದು ಮಹಾತ್ಮರೆನಿಸಿದರು. ಭಗವಂತನೇ ನಿನ್ನನ್ನನುಸರಿಸಿ ನಿಂತವರಿಗೆ ಯಾವ ಫಲವು ತಾನೆ ದೊರೆಯಲಾರದು ? ॥೨೬೫॥

ಅಯತ್ನಾದಾಪಾದ್ಯ ತ್ರಿಭುವನಮವೈರವ್ಯತಿಕರಂ
ದಶಾಸ್ಯೋ ಯದ್ಬಾಹೂನಭೃತ ರಣಕಂಡೂಪರವಶಾನ್ ।
ಶಿರಃಪದ್ಮಶ್ರೇಣೀರಚಿತಚರಣಾಂಭೋರುಹಬಲೇಃ
ಸ್ಥಿರಾಯಾಸ್ತ್ವದ್ಭಕ್ತೇಸ್ತ್ರಿಪುರಹರ ವಿಸ್ಫೂರ್ಜಿತಮಿದಂ ॥೨೬೬॥

ಅಮುಷ್ಯ ತ್ವತ್ಸೇವಾಸಮಧಿಗತಸಾರಂ [1] ಭುಜವನಂ
ಬಲಾತ್ಕೈಲಾಸೇಽಪಿ ತ್ವದಧಿವಸತೌ ವಿಕ್ರಮಯತಃ ।
ಅಲಭ್ಯಾ ಪಾತಾಲೇಽಪ್ಯಲಸಚಲಿತಾಂಗುಷ್ಠಶಿರಸಿ
ಪ್ರತಿಷ್ಠಾ ತ್ವಯ್ಯಾಸೀದ್ಧ್ರುವಮುಪಚಿತೋ ಮುಹ್ಯತಿ ಖಲಃ ॥೨೬೭॥

ಪರಶಿವನೇ, ರಾವಣನು ತನ್ನ ಪದ್ಮಾಕಾರಗಳಾದ ದಶಶಿರಸ್ಸುಗಳನ್ನೂ ಬಲಿರೂಪದಿಂದ ನಿನ್ನ ಪಾದಕಮಲಗಳ ಮೇಲಿಟ್ಟು, ಸ್ಥಿರವಾದ ತನ್ನ ಶಿವಭಕ್ತಿಯನ್ನು ತೋರ್ಪಡಿಸಿ ಯಾವಾಗಲೂ ಅಪಜಯವಿಲ್ಲದ ಮತ್ತು ಯುದ್ಧದಲ್ಲಿ ಅಸದೃಶಸಾಹಸವನ್ನು ಪ್ರಕಾಶಪಡಿಸುವ ಇಪ್ಪತ್ತು ಭುಜಗಳನ್ನೂ ಪಡೆದನಲ್ಲವೆ! ಅಂತಹ ನಿನ್ನ ಭಕ್ತಿಪರವಶತೆಯಿಂದಲೇ ರಾವಣನು ತ್ರಿಭುವನಗಳನ್ನೂ ಜಯಿಸಿ, ಅಸದೃಶವೀರನೆನಿಸಿಕೊಂಡನು. ನಿನ್ನ ಭಕ್ತನಿಗೆ ಎಲ್ಲವೂ ಸಾಧ್ಯವೆಂಬುದಕ್ಕೆ ಈ ರಾವಣನೇ ದೃಷ್ಟಾಂತನಾಗಿರುವನಲ್ಲವೆ ![1] ॥೨೬೬॥

ಹಾಗೆ ನಿನ್ನ ಸೇವಾಫಲದಿಂದ ಹೊಂದಿದ ಬಾಹುಬಲವನ್ನು ರಾವಣನು ನಿನ್ನ ಆಶ್ರಯಸ್ಥಾನವಾದ ಕೈಲಾಸಪರ್ವತವನ್ನು ಚಲಿಸುವ ಕಾರ್ಯದಲ್ಲಿ ವಿನಿಯೋಗಿಸಿದನು. ಆಗ ಅವನ ದರ್ಪನಿವಾರಣೆಗಾಗಿ, ನಿನ್ನ ಪಾದಾಂಗುಷ್ಠದ ಸ್ಪರ್ಶದಿಂದಲೇ ಕೈಲಾಸಪರ್ವತವು ಅವನ ಬಾಹುಗಳ ಮೇಲೆ ಬಿದ್ದು ಅವನನ್ನು ಸಿಕ್ಕಿಸಿಕೊಂಡು ನರಳಿಸಿತು. ಲೋಕದಲ್ಲಿ ದುಷ್ಟನಾದವನು ಸ್ವಲ್ಪ ಏಳಿಗೆಯಿಂದಲೇ ಅತಿಶಯವಾದ ಅಹಂಕಾರವನ್ನು ಪಡೆಯುವನಲ್ಲವೆ? ಆದರೆ ಅಹಂಕಾರಕ್ಕೆ ತಕ್ಕ ಶಾಸ್ತಿಯೂ ನಿನ್ನ ಭಕ್ತರಿಗೆ ನಿನ್ನಿಂದಲೇ ಆಗುವುದಲ್ಲವೆ? ॥೨೬೭॥

---

1 ವಿಷ್ಣುಪರವಾಗಿ ಅರ್ಥಮಾಡುವಾಗ ಮಧುಸೂದನ ಸರಸ್ವತಿಗಳು, ರಾವಣನ ಪರವಾದ ವಾಕ್ಯಗಳನ್ನೆಲ್ಲಾ ಬಲಿಚಕ್ರವರ್ತಿಗೆ ಅನ್ವಯಿಸುವಂತೆ ಕಲ್ಪಿಸಿರುವರು.

ಯದೃದ್ಧಿಂ ಸುತ್ರಾಮ್ಣೋ ವರದ ಪರಮೋಚ್ಚೈರಪಿ ಸತೀ
ಮಧಶ್ಚಕ್ರೇ ಬಾಣಃ ಪರಿಜನವಿಧೇಯಸ್ತ್ರಿಭುವನಃ ।
ನ ತಚ್ಚಿತ್ರಂ ತಸ್ಮಿನ್ ವರಿವಸಿತರಿ ತ್ವಚ್ಚರಣಯೋ
ರ್ನ ಕಸ್ಯಾ ಉನ್ನತ್ಯೈ ಭವತಿ ಶಿರಸಸ್ತ್ವಯ್ಯವನತಿಃ ॥೨೬೮॥

ಅಕಾಂಡಬ್ರಹ್ಮಾಂಡಕ್ಷಯಚಕಿತದೇವಾಸುರಕೃಪಾ
ವಿಧೇಯಸ್ಯಾಸೀದ್ಯಸ್ತ್ರಿನಯನ ವಿಷಂ ಸಂಹೃತವತಃ ।
ಸಕಲ್ಮಾಷಃ ಕಂಠೇ ನ ತವ ಕುರುತೇ ನ ಶ್ರಿಯಮಹೋ
ವಿಕಾರೋಽಪಿ ಶ್ಲಾಘ್ಯೋ ಭುವನಭಯಭಂಗವ್ಯಸನಿನಃ ॥೨೬೯॥

ಭಕ್ತರ ಇಷ್ಟಾರ್ಥವನ್ನು ಪೂರ್ತಿಗೊಳಿಸುವ ಮಹಾದೇವನೇ, ನಿನ್ನ ಪರಮ ಭಕ್ತನೂ, ತ್ರಿಲೋಕವೀರನೂ ಆದ ಬಾಣಾಸುರನು ಇಂದ್ರನ ಅತಿಶಯವಾದ ಐಶ್ವರ್ಯವನ್ನೂ, ಅವನ ಪತ್ನಿಯಾದ ಶಚೀದೇವಿಯನ್ನೂ ಸಹ ಆಕ್ರಮಿಸಿ ನಿಲ್ಲಲು ಯತ್ನಿಸಿದನು. ನಿನ್ನ ಪಾದಸೇವಕರಿಗೆ ಅಷ್ಟು ಶಕ್ತಿಯು ಬರುವುದು ಆಚ್ಚರಿಯೇನೂ ಅಲ್ಲ. ಆದರೆ ಯಾರು ನಿನ್ನ ಪಾದಗಳ ಸಮೀಪದಲ್ಲಿ ತಮ್ಮ ತಲೆಯನ್ನು ಬಗ್ಗಿಸಿ ನಿಲ್ಲುವರೋ ಅಂತಹವರು ಎಲ್ಲಿಯೂ ತಲೆಬಗ್ಗಿಸರು. ಸರ್ವರನ್ನೂ ಜಯಿಸಿ ತಮ್ಮ ಅಧೀನರನ್ನಾಗಿ ಮಾಡಿಕೊಳ್ಳುವ ಸಾಮರ್ಥ್ಯವು ಅವರಿಗೆ ಲಭಿಸುವುದು. ॥೨೬೮॥

ತ್ರಿನಯನನೇ, ದೇವಾಸುರರು ಅಮೃತಪ್ರಾಪ್ತಿಗಾಗಿ ಸಮುದ್ರಮಥನ ಮಾಡಿದಾಗ ಹುಟ್ಟಿದ ವಿಷವು ಲೋಕಕ್ಕೆ ಅಕಾಲಪ್ರಳಯವನ್ನುಂಟುಮಾಡುವುದೋ ಎಂಬ ಭಯವನ್ನು ದೇವರಾಕ್ಷಸರಿಗೆ ತಂದೊಡ್ಡಿತು. ಆಗ ನೀನು ಆ ವಿಷವನ್ನು ಪಾನಮಾಡಿದ್ದರಿಂದ ನಿನ್ನ ಕಂಠದಲ್ಲಿ ಅದು ಕಪ್ಪಾಗಿ ಕಾಣುತ್ತಿರುವುದು. ಅದು ನಿಜವಾಗಿಯೂ ಕಪ್ಪಲ್ಲ. ಅದೇ ಒಂದು ಭಕ್ತರ ಸಂಪತ್ತು. ಅದೇ ಒಂದು ಐಶ್ವರ್ಯದಂತೆ ನಮಗೆ ತೋರುತ್ತಿದೆ. ಲೋಕಕ್ಕೆ ಉಂಟಾದ ಭಯವನ್ನು ಹೋಗಲಾಡಿಸುವಂತಹ ಮಹಾನುಭಾವನಿಗೆ ತತ್ಪ್ರಯುಕ್ತವಾಗಿ ದೇಹದಲ್ಲಿ ಒಂದು ವಿಕಾರ ವುಂಟಾದರೂ ಅದು ಶ್ಲಾಘ್ಯವಾದುದಲ್ಲವೆ? ಭಕ್ತಪರಾಧೀನತೆಯೆಂಬುದು ಅದರಿಂದಲೇ ತೋರಿಬರುತ್ತದೆಯಲ್ಲವೆ? ॥೨೬೯॥

ಅಸಿದ್ಧಾರ್ಥಾ ನೈವ ಕ್ವಚಿದಪಿ ಸ ದೇವಾಸುರನರೇ
ನಿವರ್ತಂತೇ ನಿತ್ಯಂ ಜಗತಿ ಜಯಿನೋ ಯಸ್ಯ ವಿಶಿಖಾಃ ।
ಸ ಪಶ್ಯನ್ನೀಶ ತ್ವಾಮಿತರಸುರಸಾಧಾರಣಮಭೂ
ತ್ಸ್ಮರಃ ಸ್ಮರ್ತವ್ಯಾತ್ಮಾ ನ ಹಿ ವಶಿಷು ಪಥ್ಯಃ ಪರಿಭವಃ ॥೨೦॥

ಮಹೀ ಪಾದಾಘಾತಾದ್ವ್ರಜತಿ ಸಹಸಾ ಸಂಶಯಪದಂ
ಪದಂ ವಿಷ್ಣೋರ್ಭ್ರಾಮ್ಯದ್ಭುಜಪರಿಘರುಗ್ಣಗ್ರಹಗಣಂ ।
ಮುಹುರ್ದ್ಯೌರ್ದೌಃಸ್ಥ್ಯಂ ಯಾತ್ಯನಿಭೃತಜಟಾತಾಡಿತತಟಾ
ಜಗದ್ರಕ್ಷಾಯೈ ತ್ವಂ ನಟಸಿ ನನು ವಾಮೈವ ವಿಭುತಾ ॥೨೧॥

ಮಹಾದೇವನೇ, ದೇವತೆಗಳು, ರಾಕ್ಷಸರು, ಮನುಜರು ಇವರಿಂದ ವ್ಯಾಪ್ತವಾದ ಜಗತ್ತಿನಲ್ಲಿ ಮನ್ಮಥನು ಯಾರಲ್ಲಿ ತನ್ನ ಬಾಣವನ್ನು ಪ್ರಯೋಗಿಸಿದರೂ, ಅದು ನಿರರ್ಥಕವಾಗಿ ಹಿಂದಿರುಗುತ್ತಿರಲಿಲ್ಲ. ಅದರಿಂದ ಕೊಬ್ಬಿದ ಮದನನು ನಿನ್ನನ್ನೂ ಸಾಮಾನ್ಯದೇವತೆಯೆಂದು ತಿಳಿದು, ತನ್ನ ಬಾಣಪರಂಪರೆಯನ್ನು ನಿನ್ನ ಮೇಲೆ ಪ್ರಯೋಗಿಸಿದನು. ಅದರ ಪರಿಣಾಮವಾಗಿ ಆತನು ಎಂತಹ ಪರಾಭವವನ್ನು ಪಡದನೆಂಬುದು ಜಗತ್ತಿಗೇ ತಿಳಿದಿದೆ. ಈಗಲೂ ಮನ್ಮಥನು ನಾಮಾವಶೇಷನಾಗಿರುವನು. ಇದರಿಂದ ಜಿತೇಂದ್ರಿಯರೂ ಮಹಾಮಹಿಮರೂ ಆದವರಲ್ಲಿ ನಾವು ಮಾಡುವ ಪ್ರತೀಕಾರವು ನಮ್ಮ ನಾಶಕ್ಕಾಗಿಯೇ ಎಂಬುದನ್ನು ನಾವು ತಿಳಿಯಬೇಕಾಗಿದೆ. ॥೨೦॥

ಪರಶಿವನೇ, ನೀನು ಸಂಭ್ರಮೋತ್ಸಾಹದಿಂದ ನಾಟ್ಯವಾಡಲಾರಂಭಿಸಿದರೆ, ನಿನ್ನ ಕಾಲಿನ ಆಘಾತಕ್ಕೆ ಭೂಮಿಯು ಅದುರಿ ಏನಾಗುತ್ತದೆಯೋ ಎಂಬ ಸಂಶಯಕ್ಕೆ ಪಾತ್ರವಾಗುವುದು. ವಿಷ್ಣುಪದವೆನಿಸಿದ ಅಂತರಿಕ್ಷದಲ್ಲಾದರೋ ನಿನ್ನ ನರ್ತನಕಾಲದ ಭುಜಗಳ ಓಡಾಟದಿಂದ ಗ್ರಹನಕ್ಷತ್ರಮಂಡಲವೆಲ್ಲವೂ ದಿಕ್ಕುದಿಕ್ಕಿಗೆ ಚದುರಿ ಅಸ್ತವ್ಯಸ್ತವಾಗುವುವು. ಭೂಮ್ಯಂತರಿಕ್ಷಮಧ್ಯಗತವಾದ ಆಕಾಶದಲ್ಲೆಲ್ಲಾ ನಿನ್ನ ಜಟಾಮಂಡಲವು ವ್ಯಾಪಿಸಿ ಸರ್ವವನ್ನೂ ಹೊಡೆದಟ್ಟುವುದು. ಇಂತಹ ಅದ್ಭುತವಾದ ನಿನ್ನ ನಾಟ್ಯವು ಜಗದ್ರಕ್ಷಣೆಗಾಗಿ ನಡೆಯುವುದಲ್ಲವೆ? ವಿಭುವೆನಿಸಿ ಸರ್ವವ್ಯಾಪಿಯಾದ ನಿನಗೆ ಈ ನಾಟ್ಯವು ಸಹಜವಾದುದೆಂದೇ ನನ್ನ ಅಭಿಪ್ರಾಯ. ಲೋಕಪ್ರಭುವಾದವನು ಲೋಕೋಪಕಾರದೃಷ್ಟಿಯಿಂದ ಆಚರಿಸುವ ಕಾರ್ಯವೂ

ವಿಯದ್ವ್ಯಾಪೀ ತಾರಾಗಣಗುಣಿತಫೇನೋದ್ಗಮರುಚಿಃ
ಪ್ರವಾಹೋ ವಾರಾಂ ಯಃ ಪೃಷತಲಘುದೃಷ್ಟಃ ಶಿರಸಿ ತೇ ।
ಜಗದ್ದ್ವೀಪಾಕಾರಂ ಜಲಧಿವಲಯಂ ತೇನ ಕೃತಮಿ
ತ್ಯನೇನೈವೋನ್ನೇಯಂ ಧೃತಮಹಿಮದಿವ್ಯಂ ತವ ವಪುಃ ॥೨೭॥

ರಥಃ ಕ್ಷೋಣೀ ಯಂತಾ ಶತಧೃತಿರಗೇಂದ್ರೋ ಧನುರಥೋ
ರಥಾಂಗೇ ಚಂದ್ರಾರ್ಕೌ ರಥಚರಣಪಾಣಿಃ ಶರ ಇತಿ ।
ದಿಧಕ್ಷೋಸ್ತೇ ಕೋಽಯಂ ತ್ರಿಪುರತೃಣಮಾಡಂಬರವಿಧಿ
ರ್ವಿಧೇಯೈಃ ಕ್ರೀಡಂತ್ಯೋ ನ ಖಲು ಫಲತಂತ್ರಾಃ ಪ್ರಭುಧಿಯಃ ॥೨೮॥

ಒಂದೊಂದುವೇಳೆ ಕೆಲವರಿಗೆ ತೊಂದರೆಯುಂಟುಮಾಡುವುದು ಸಹಜವೇ ಸರಿ. ಹೀಗೆ ನಿನ್ನ ನಾಟ್ಯದಿಂದ ಮೇಲೆ ಹೇಳಿದ ಕೆಲವು ಅನರ್ಥಗಳಾದರೂ ಜಗದ್ರಕ್ಷಣೆಯೂ ಅದರಿಂದಲೇ ನಡೆಯುವುದು ಎಂಬುದನ್ನು ಎಲ್ಲರೂ ಗಮನಿಸಬೇಕು. ||೨೬||

ಮಹಾದೇವನೇ, ನಿನ್ನ ಶರೀರವಾದರೋ ಅಂತರಿಕ್ಷಪರ್ಯಂತ ವ್ಯಾಪಿಸಿರುವುದು. ದೇಹಕಾಂತಿಯಾದರೋ, ನಕ್ಷತ್ರಸಮೂಹ ಮತ್ತು ಗಂಗಾನದಿಯ ನೊರೆ ಇವುಗಳ ಸಹಸ್ರಪಾಲು ಅಧಿಕವಾಗಿ ಶುಭ್ರವಾದ ಹೊಳಪನ್ನು ಬೀರುತ್ತಿರುವುದು. ದೊಡ್ಡ ನೀರಿನ ಪ್ರವಾಹವೆನಿಸಿದ ಗಂಗಾನದಿಯು ನಿನ್ನ ಶಿರಸ್ಸಿನಲ್ಲಿ ಒಂದು ತೊಟ್ಟು ನೀರಿನಂತೆ ಅಲೆದಾಡುತ್ತಿರುವುದು. ಅದರ ಏಕದೇಶವಾದ ಜಲರಾಶಿಯು ಭೂಮಿಗೆ ಬಂದು ಅಖಂಡ ಭೂಮಂಡಲವನ್ನೇ ಒಂದು ದ್ವೀಪವನ್ನಾಗಿಸಿ, ತಾನು ಸುತ್ತಲೂ ಸಮುದ್ರರೂಪದಿಂದ ನಿಂತಿರುವುದು. ಇಷ್ಟು ನಿದರ್ಶನಗಳಿಂದಲೇ ನಿನ್ನ ದೇಹವು ಎಷ್ಟುದೊಡ್ಡದಾದದ್ದು? ಎಂತಹ ಮಹಿಮಾಪೂರ್ಣವಾದುದು? ಎಂಬುದನ್ನು ನಾವು ಊಹಿಸಬಹುದಾಗಿದೆ. ಹೀಗಿರುವಾಗ ಮಹಾಮಹಿಮನೆ, ನಿನ್ನನ್ನು ನಾವು ಸ್ತುತಿಸುವುದು ಹೇಗೆ? ನಿನ್ನ ಸ್ವರೂಪವು ನಮಗೆ ತಿಳಿಯುವುದೆಂತು? ||೨೭||

ತ್ರಿಪುರಾಸುರನಾಶಕನಾದ ಮಹಾದೇವನೇ, ತ್ರಿಪುರಾಸುರನನ್ನು ನಾಶಮಾಡುವ ಕಾಲದಲ್ಲಿ ನಿನಗೆ ಭೂಮಿಯೇ ರಥವಾಯಿತು. ಬ್ರಹ್ಮನೇ ಸಾರಥಿಯಾದನು. ಮೇರುವೇ ಧನುಸ್ಸಾಯಿತು. ಸೂರ್ಯಚಂದ್ರರು ಎರಡು ಚಕ್ರಗಳಂತಾದರು. ಚಕ್ರಪಾಣಿಯಾದ ವಿಷ್ಣುವೇ ಬಾಣವಾದನು. ಪ್ರಪಂಚವನ್ನೇ ನಾಶಮಾಡುವ ನಿನಗೆ

ಹರಿಸ್ತೇ ಸಾಹಸ್ರಂ ಕಮಲಬಲಿಮಾಧಾಯ ಪದಯೋ
ರ್ಯದೇಕೋನೇ ತಸ್ಮಿನ್ ನಿಜಮುದಹರನ್ನೇತ್ರಕಮಲಂ।
ಗತೋ ಭಕ್ತ್ಯುದ್ರೇಕಾತ್ಪರಿಣತಿಮಸೌ ಚಕ್ರವಪುಷಾ
ತ್ರಯಾಣಾಂ ರಕ್ಷಾಯೈ ತ್ರಿಪುರಹರ ಜಾಗರ್ತಿ ಜಗತಾಂ ॥೨೭॥

ಕ್ರತೌ ಸುಪ್ತೇ ಜಾಗ್ರತ್ವಮಸಿ ಫಲಯೋಗೇ ಕ್ರತುಮತಾಂ
ಕ್ವ ಕರ್ಮ ಪ್ರಧ್ವಸ್ತಂ ಫಲತಿ ಪುರುಷಾರಾಧನಮೃತೇ।
ಅತಸ್ತ್ವಾಂ ಸಂಪ್ರೇಕ್ಷ್ಯ ಕ್ರತುಷು ಫಲದಾನಪ್ರತಿಭುವಂ
ಶ್ರುತೌ ಶ್ರದ್ಧಾಂ ಬಧ್ವಾ ದೃಢಪರಿಕರಃ ಕರ್ಮಸು ಜನಃ ॥೨೮॥

ತ್ರಿಪುರಗಳನ್ನೂ ತ್ರಿಪುರಾಸುರರನ್ನು ಧ್ವಂಸಮಾಡಲು ಇಷ್ಟು ಆಡಂಬರಗಳು ಬೇಕೆ? ತೃಣದಂತೆ ಕ್ಷಣಕಾಲದಲ್ಲಿ ಮುರಿಯಬಹುದಾದ ಒಂದು ಕಾರ್ಯದಲ್ಲಿ ಇಷ್ಟು ಸಿದ್ಧತೆಯಿಂದ ಹೊರಡುವುದು ಕೇವಲ ಲೋಕದ ಮೆಚ್ಚಿಗೆಗಾಗಿಯೇ ಅಲ್ಲವೆ? ಪ್ರಭುಗಳಾದವರ ಬುದ್ಧಿಯು ಕೇವಲ ಫಲಸಾಧನೆಗೆ ಮಾತ್ರವಲ್ಲದೆ ಜನ ಮೆಚ್ಚುಗೆಗಾಗಿಯೂ ಪ್ರಯತ್ನಿಸುವುದು ಎಂಬುದು ನಿನ್ನ ಈ ಆಟದಿಂದ ನಮಗೆ ತಿಳಿದು ಬರುತ್ತಿದೆ. ॥೨೬॥

ಹಿಂದೆ ವಿಷ್ಣುವು ನಿನ್ನ ಪಾದಗಳಿಗೆ ಸಹಸ್ರ ಕಮಲಗಳ ಅರ್ಚನೆಯನ್ನು ಮಾಡಲು ಪ್ರಯತ್ನಿಸಿದಾಗ, ಒಂದು ಕಮಲವು ಸಾಲದೆ ಬರಲು[1] ಆ ಕಮಲದಂತಿರುವ ತನ್ನ ಒಂದು ಕಣ್ಣನ್ನೇ ಕಿತ್ತು ನಿನ್ನ ಪಾದಗಳ ಮೇಲಿಟ್ಟನು. ಅಂತಹ ದೃಢಭಕ್ತಿಯ ಪರಿಣಾಮವಾಗಿ ಈಗ ವಿಷ್ಣುವು ಬಲಿಷ್ಠವಾದ ಚಕ್ರವನ್ನು ಪಡೆದು, ಮೂರು ಲೋಕಗಳ ರಕ್ಷಕನಾಗಿ ದೇವಶ್ರೇಷ್ಠನೆನಿಸಿಕೊಂಡಿರುವನು. ॥೨೭॥

ಎಲೈ ಮಹಾಮಹಿಮನೇ, ಸ್ವರ್ಗಾದಿಫಲಕಾಮನೆಯಿಂದ ನಡೆಸಿದ ಯಾಗಾದಿಕರ್ಮಗಳು ಸ್ವಕಾರಣಗಳಲ್ಲಿ ಸೂಕ್ಷ್ಮರೂಪವಾಗಿ ಅಡಗಿಹೋಗುವುವು. ತನ್ಮೂಲಕ ಯಾಜಕರಿಗೆ ಫಲಪ್ರದಾನಮಾಡುವವನು ನೀನೇ ಆಗಿರುವೆ. ಉತ್ತರಕ್ಷಣದಲ್ಲಿಯೇ ನಾಶವಾಗುವ ಯಾಗಾದಿಕರ್ಮಗಳು ಫಲವನ್ನು ಅವರಿಗೆ ಹೇಗೆ ಕೊಟ್ಟಾವು? ಫಲಪ್ರದಾತನಾದ ಪುರುಷರೂಪಿಯಾದ ನಿನ್ನನ್ನು ಆರಾಧಿಸದಿದ್ದರೆ ಕರ್ಮಠರಿಗೆ ಸ್ವರ್ಗಾದಿ

---

1 ವಿಷ್ಣುವಿನ ಭಕ್ತಿಪರೀಕ್ಷೆಗಾಗಿ ಶಿವನೇ ಒಂದು ಕಮಲವನ್ನು ಮುಚ್ಚಿಟ್ಟಿದ್ದನೆಂಬುದು ಪೌರಾಣಿಕವಾದ ಕಥೆ.

ಕ್ರಿಯಾದಕ್ಷೋ ದಕ್ಷಃ ಕ್ರತುಪತಿರಧೀಶಸ್ತನುಭೃತಾಂ
ಋಷೀಣಾಮಾರ್ತ್ವಿಜ್ಯಂ ಶರಣದ ಸದಸ್ಯಾಃ ಸುರಗಣಾಃ ।
ಕ್ರತುಭ್ರಂಶಸ್ತ್ವತ್ತಃ ಕ್ರತುಫಲವಿಧಾನವ್ಯಸನಿನೋ
ಧ್ರುವಂ ಕರ್ತುಂ ಶ್ರದ್ಧಾವಿಧುರಮಭಿಚಾರಾಯ ಹಿ ಮಖಾಃ ॥೨೭॥

ಸತಾಂ ವರ್ತ್ಮ ತ್ಯಕ್ತ್ವಾ ಶ್ರುತಿಸಮಭಿಗಮ್ಯಂ ಸಹಭುವಂ
ಘೃಣಾಮುಪ್ಯುನ್ಮೂಲ್ಯ ಸ್ವಜನವಿಷಯಸ್ನೇಹಗುಣಿತಾಂ ।
ದ್ವಿಜಃಕೃಂತನ್ ಪಾದೇ ಪಿತರಮುಪರಾದ್ಧಂ ತ್ವಯಿ ವಿಭೋ
ಮನುಷ್ಯತ್ವಂ ಸದ್ಯಸ್ತ್ರಿದಶಪರಿಣಾಮೇನ ವಿಜಹೌ ॥೨೮॥

ಫಲಗಳು ನಿಜವಾಗಿಯೂ ಲಭಿಸಲಾರವು. ಇದನ್ನು ತಿಳಿದೇ ಆಸ್ತಿಕರಾದವರು ಫಲಪ್ರದಾತನಾದ ನಿನ್ನನ್ನೇ ನೋಡುತ್ತಾ, ಆ ವಿಷಯವನ್ನು ವೇದದಿಂದರಿತು ನಿನ್ನ ಆರಾಧನೆಯಲ್ಲಿಯೇ ಮನಗೊಟ್ಟಿರುವರು. ಯಾವ ಶ್ರೌತಸ್ಮಾರ್ತಾದಿಕರ್ಮಗಳನ್ನಾಚರಿಸಿದರೂ ಪುರುಷಾರಾಧನೆ ನಡೆಸದಿದ್ದರೆ (ಸಗುಣೋಪಾಸನಾದಿಗಳಿಂದ ಚಿತ್ತಶುದ್ಧಿಯನ್ನು ಸಂಪಾದಿಸದಿದ್ದರೆ) ಮೋಕ್ಷವು ದುರ್ಲಭವೆಂದೇ ತಿಳಿಯಬೇಕು. ॥೨೬॥

ಸಕಲ (ಯಾಗಾದಿ) ಕ್ರಿಯೆಗಳಲ್ಲಿಯೂ ಸಮರ್ಥನಾದ ದಕ್ಷಬ್ರಹ್ಮನೇ ಅಧ್ವರ್ಯುವಾದನು. ಮಹರ್ಷಿಗಳೇ ಋತ್ವಿಕ್ಕುಗಳಾದರು. ಸಕಲ ದೇವತೆಗಳೇ ಸದಸ್ಯರಾದರು. ಇಷ್ಟಾದರೂ ಯಾಗಗಳಿಗೆ ಫಲವನ್ನು ಕೊಡುವ ನಿನ್ನಲ್ಲಿ ಆ ದಕ್ಷನು ದೃಢಭಕ್ತಿಯಿಡದಿದ್ದುದರಿಂದ ಅವನ ಯಾಗಕ್ರಿಯೆಯೆಲ್ಲಾ ನಾಶವಾಯಿತು. ಆದ್ದರಿಂದ ಸಕಲ ಕ್ರತುಫಲಪ್ರದನಾದ ನಿನ್ನಲ್ಲಿ ದೃಢಭಕ್ತಿಯನ್ನಿಡದೆ ಮಾಡಿದ ಸಕಲ ಯಜ್ಞಗಳೂ ವಿರುದ್ಧಫಲಪ್ರದಗಳಾಗುತ್ತವೆಯೇ ಹೊರತು, ಎಂದಿಗೂ ಆಯಾ ಯಾಗಗಳ ಫಲವನ್ನು ಒದಗಿಸಲಾರವು. ॥೨೭॥

ಶ್ರುತಿಪ್ರತಿಪಾದ್ಯಮಾನವಾದ ಸನ್ಮಾರ್ಗವನ್ನು ಅವಲಂಬಿಸದೆ, ಸ್ವಜನರ ವಿಷಯದಲ್ಲಿ ಇಡಬೇಕಾದ ಕರುಣೆಯನ್ನೂ ದೂರಮಾಡಿ ಜೀವನ ನಡೆಸುವ ಬ್ರಾಹ್ಮಣನೊಬ್ಬನು, ತನ್ನ ತಂದೆಯು ಶಂಕರನಿಗೆ ದ್ರೋಹಮಾಡಿದನೆಂಬ ಕೋಪದಿಂದ ಅವನ ಕಾಲನ್ನು ಕತ್ತರಿಸಿ ಶಿಕ್ಷಿಸಿದನು. ಅಂತಹ ದುಷ್ಟನೂ, ಪಿತೃಘಾತುಕನೂ ಆಗಿದ್ದರೂ, ಶಿವದ್ರೋಹಿಗಳನ್ನು ಶಿಕ್ಷಿಸಿದುದರ ಫಲವಾಗಿ

ಪ್ರಜಾನಾಥಂ ನಾಥ ಪ್ರಸಭಮಭಿಕಂ ಸ್ವಾಂ ದುಹಿತರಂ
ಗತಂ ರೋಹಿದ್ಭೂತಾಂ ರಿರಮಯಿಷುಮೃಷ್ಯಸ್ಯ ವಪುಷಾ ।
ಧನುಃ ಪಾಣೇರ್ಯಾತಂ ದಿವಮಪಿ ಸಪತ್ರಾಕೃತಮಮುಂ
ತ್ರಸಂತಂ ತೇಽದ್ಯಾಪಿ ತ್ಯಜತಿ ನ ಮೃಗವ್ಯಾಧರಭಸಃ ॥೨೭೮॥

ಸ್ವಲಾವಣ್ಯಾಶಂಸಾ ಧೃತಧನುಷಮಹ್ನಾಯ ತೃಣವ
ತ್ಪುರಃ ಪ್ಲುಷ್ಟಂ ದೃಷ್ಟ್ವಾ ಪುರಮಥನ ಪುಷ್ಪಾಯುಧಮಪಿ ।
ಯದಿ ಸ್ತ್ರೈಣಂ ದೇವೇ ಯಮನಿರತ ದೇಹಾರ್ಧಘಟನಾ
ದವೈತಿ ತ್ವಾಮದ್ಧಾ ಬತ ವರದ ಮುಗ್ಧಾ ಯುವತಯಃ ॥೨೭೯॥

ಆತನಿಗೆ ದೇವತ್ವವು ದೊರೆಯಿತು. ಮಹಾದೇವನೇ, ನಿನ್ನ ದ್ರೋಹಿಗಳೆನಿಸಿದವರು, ಎಂತಹ ಗೌರವಾಸ್ಪದರಾದರೂ ಅವರು ಶಿಕ್ಷಾಯೋಗ್ಯರೇ ಸರಿ. ಶಿವದ್ರೋಹಿಗಳನ್ನು ಶಿಕ್ಷಿಸುವುದರಿಂದ ಎಂದಿಗೂ ಪಾಪಸಂಘಟನೆಯಾಗುವುದಿಲ್ಲ. ॥೨೭೭॥

ಜಗನ್ನಿಯಾಮಕನೆ, ಹಿಂದೆ ಪರಬ್ರಹ್ಮನು ತಾನೇ ಸೃಷ್ಟಿಮಾಡಿದ ಸರಸ್ವತಿಯಲ್ಲಿ ಒಂದು ಸಾಯಂಕಾಲ ಮೋಹವನ್ನು ತೋರ್ಪಡಿಸಿದನು. ಒಡನೆಯೇ ಶಾರದೆಯು ಪರಬ್ರಹ್ಮನ ಅಕೃತ್ಯವನ್ನು ಊಹಿಸಿ, ಆ ಕ್ಷಣವೇ ಹೆಣ್ಣು ಜಿಂಕೆಯ ವೇಷವನ್ನು ತಾಳಿದಳು. ಆಗ¦ಬ್ರಹ್ಮನೂ ಸಹ ಮೃಗವೇಷವನ್ನೇ ಪಡೆದು ಆ ಹೆಣ್ಣು ಮೃಗದೊಡನೆ ಭೋಗಿಸಲೆತ್ನಿಸಿದನು. ಇದರ ಅನೌಚಿತ್ಯವನ್ನರಿತ ನೀನು ವ್ಯಾಧನು ರಭಸದಿಂದ ಬಾಣಬಿಡುವಂತೆ ಬ್ರಹ್ಮನಿಗೆ ವೇಗವಾದ ಬಾಣಪ್ರಯೋಗಮಾಡಿ, ಆಗ ಅವನಿಗೆ ಬುದ್ಧಿಗಲಿಸಿರುವೆ. ನಿನ್ನ ಶಿಕ್ಷೆಯಿಂದಲೇ ಬ್ರಹ್ಮನು ಕೇವಲ ಮೃಗಶಿರೋರೂಪದಲ್ಲಿ ಅಂತರಿಕ್ಷದಲ್ಲಿ ನಕ್ಷತ್ರರೂಪದಿಂದ ಹೆದರಿ ನಡುಗುತ್ತಿರುವನು. ನಿನ್ನ ಬಾಣವಾದರೋ ಆರಿದ್ರಾನಕ್ಷತ್ರರೂಪದಿಂದ ಮೃಗಶಿರಾನಕ್ಷತ್ರದ ಸಮೀಪದಲ್ಲಿಯೇ ತೋರಿಬರುತ್ತಿರುವುದು. (ಪುರಾಣಾಂತರದ ಈ ಕಥೆಯನ್ನು ಇಲ್ಲಿ ಅನುಸಂಧಾನ ಮಾಡಬೇಕು) ಪರಶಿವನೇ, ಆದ್ದರಿಂದ ಅನುಚಿತ ಕಾರ್ಯಕಾರಿಯಾದ ಬ್ರಹ್ಮನೂ ನಿನ್ನಿಂದ ಶಿಕ್ಷಿತನಾಗಿ ಹೆದರಿರುವನು. ॥೨೭೮॥

ಯಮನಿಯಮಾದಿ ಅಷ್ಟಾಂಗಯೋಗಗಳಲ್ಲಿ ನಿರತನಾದ ಮಹಾದೇವನೇ, ಭಕ್ತರ ಇಷ್ಟದಂತೆ ವರಕೊಡುವ ಮಹಾತ್ಮನೇ, ಪಾರ್ವತಿಯ ಅಸದೃಶ ಸೌಂದರ್ಯವನ್ನು ನೋಡಿ, ಮನ್ಮಥನು ‘ ಈ ದಿವ್ಯಸೌಂದರ್ಯದಿಂದ ಈಗ ನಾನು ಶಿವನನ್ನು

ಶ್ಮಶಾನೇಷ್ವಾಕ್ರೀಡಾ ಸ್ಮರಹರ ಪಿಶಾಚಾಸ್ಸಹಚರಾ
ಶ್ಚಿತಾಭಸ್ಮಾಲೇಪಃ ಸ್ರಗಪಿ ನೃಕರೋಟೀಪರಿಕರಃ ।
ಅಮಾಂಗಲ್ಯಂ ಶೀಲಂ ತವ ಭವತು ನಾಮೈವಮಖಿಲಂ
ತಥಾಪಿ ಸ್ಮರ್ತೄಣಾಂ ವರದ ಪರಮಂ ಮಂಗಳಮಸಿ ॥೨೪॥

ಮನಃ ಪ್ರತ್ಯಕ್ಚಿತ್ತೇ ಸವಿಧಮಭಿಧಾಯಾತ್ತಮರುತಃ
ಪ್ರಹೃಷ್ಯದ್ರೋಮಾಣಃ ಪ್ರಮದಸಲಿಲೋತ್ಸಂಗಿತದೃಶಃ ।

ಗೆಲ್ಲುತ್ತೇನೆ' ಎಂದು ತನ್ನ ಬಾಣಗಳನ್ನು ನಿನ್ನ ಮೇಲೆ ಪ್ರಯೋಗಿಸಿದನು. ಆದರೆ ನೀನು ಆ ಪಾರ್ವತಿಯ ಸೌಂದರ್ಯವನ್ನು ಲಕ್ಷಿಸದೆ ಮನ್ಮಥನನ್ನು ತೃಣದಂತೆ ಧ್ವಂಸಮಾಡಿದೆ. ಅಷ್ಟಾದರೂ ಪಾರ್ವತಿಯು ಮತ್ತೆ ಮತ್ತೆ ಪ್ರಾರ್ಥಿಸುವುದನ್ನು ನೋಡಿ ದಯೆಯಿಂದ ದೇವಿಗೆ ಅರ್ಧ ದೇಹವನ್ನೇ ಸಮರ್ಪಿಸಿದೆ. ಇದರಿಂದ ಕೃತಾರ್ಥಳಾದ ದೇವಿಯು, ನನಗೆ ಮೆಚ್ಚಿ ಸುಲಭನಾಗಿ ಶಂಕರನು ದೊರೆತನೆಂದು ಹೇಳುವುದಾದರೆ, ಅದು ನಿಜವಾಗಿಯೂ ಸ್ತ್ರೀಯರ ಮೌಢ್ಯವೇ ಹೊರತು, ವಾಸ್ತವವಲ್ಲ. ದಯಾರಸಪಾತ್ರನಾಗಿ ದೇವಿಗೆ ಅರ್ಧ ದೇಹ ಕೊಟ್ಟ ಮಾತ್ರಕ್ಕೆ, ಪರಶಿವನು ದೇವಿಗೆ ಅಧೀನನೆಂಬ ಭಾವವು ಮಾತ್ರ ಸುಳ್ಳು. ||೨೩||

ಮಹಾದೇವನೇ, ನೀನು ಶ್ಮಶಾನದಲ್ಲಿ ವಿಹರಿಸುವೆ. ನಿನ್ನ ವಿಹಾರಸ್ಥಾನವೇ ಸ್ಮಶಾನವಾಗಿರುವುದು. ಪಿಶಾಚಿಗಳು ನಿನ್ನ ಅನುಚರರು. ಶವಭಸ್ಮವೇ ನಿನ್ನ ವಿಭೂತಿ. ಮನುಷ್ಯರ ತಲೆಬುರುಡೆಯ ಸರವೇ ನಿನಗೆ ಮಾಲೆಯಾಗಿದೆ. ಒಟ್ಟಿನಲ್ಲಿ ಅಮಂಗಳಕರವಾದ ವಸ್ತುಗಳೇ ಆಭರಣಗಳಾಗಿವೆ, ಇರಲಿ. ಆದರಿಂದ ನಮಗೆ ಯಾವ ಕೊರತೆಯೂ ಇಲ್ಲ. ಏಕೆಂದರೆ ನಿನ್ನನ್ನು ಸ್ಮರಿಸುತ್ತಾ, ನಿನ್ನಲ್ಲಿಯೇ ಸ್ಥಿರ ಮನಸ್ಸುಳ್ಳವರಿಗೆ ಮಾತ್ರ ನೀನು ಮಂಗಳಕರಗಳಾದ ವರಗಳನ್ನೇ ಅನುಗ್ರಹಿಸುವೆಯಲ್ಲವೆ? ಅದೇ ನಿನ್ನ ಅತಿಶಯವಾದ ಮಹಿಮಾವಿಶೇಷ! ||೨೪||

ಶಮದಮಾದಿಸಾಧನಸಂಪನ್ನರೂ, ಪರಮಹಂಸರೂ ಆದ ಜ್ಞಾನಿಗಳು, ತಮ್ಮ ಸಂಕಲ್ಪವಿಕಲ್ಪಾತ್ಮಕವಾದ ಮನಸ್ಸನ್ನು ಹೃದಯಕಮಲದಲ್ಲಿ, ವೃತ್ತಿಶೂನ್ಯವನ್ನಾಗಿ ಮಾಡಿ ತಡೆದು, ಶಾಸ್ತ್ರೋಪದಿಷ್ಟಮಾರ್ಗದಿಂದ ಪ್ರಾಣಾಯಾಮ (ವಾಯು ನಿರೋಧ) ಮಾಡಿ, ವಿಷಯಗಳಿಂದ ಇಂದ್ರಿಯಗಳನ್ನು ಹಿಂದಿರುಗಿಸಿ, ಆನಂದದಿಂದ

ಯದಾಲೋಕ್ಯಾಹ್ಲಾದಂ ಹ್ರದ ಇವ ನಿಮಜ್ಜ್ಯಾಮೃತಮಯೇ
ದಧತ್ಯಂತಸ್ತತ್ತ್ವಂ ಕಿಮಪಿ ಯಮಿನಸ್ತತ್ಕಿಲ ಭವಾನ್ ॥೨೮೧॥

ತ್ವಮರ್ಕಸ್ತ್ವಂ ಸೋಮಸ್ತ್ವಮಸಿ ಪವನಸ್ತ್ವಂ ಹುತವಹ
ಸ್ತ್ವಮಾಪಸ್ತ್ವಂ ವ್ಯೋಮ ತ್ವಮು ಧರಣಿರಾತ್ಮಾ ತ್ವಮಿತಿ ಚ ।
ಪರಿಚ್ಛಿನ್ನಾಮೇವಂ ತ್ವಯಿ ಪರಿಣತಾ ಬಿಭ್ರತು ಗಿರಂ
ನ ವಿದ್ಮಸ್ತತ್ತತ್ತ್ವಂ ವಯಮಿಹ ತು ಯತ್ತ್ವಂ ನ ಭವಸಿ ॥೨೮೨॥

ತ್ರಯೀಂ ತಿಸ್ರೋ ವೃತ್ತೀಸ್ತ್ರಿಭುವನಮಥೋ ತ್ರೀನಪಿಸುರಾನ್
ಅಕಾರಾದ್ಯೈರ್ವರ್ಣೈಸ್ತ್ರಿಭಿರಭಿದಧತ್ತೀರ್ಣವಿಕೃತಿ ।

ರೋಮಾಂಚವನ್ನೂ, ಆನಂದಬಾಷ್ಪವನ್ನೂ ಪಡೆಯುತ್ತಾ ಯಾವ ಒಂದು ನೈಜವಾದ ತತ್ತ್ವವನ್ನು ತಿಳಿಯುತ್ತಾರೋ, ಆ ತತ್ತ್ವವೇ ನೀನು. ಅಂತಹ ತತ್ತ್ವಸ್ವರೂಪನಾದ ನಿನ್ನ ಅರಿವಿನಿಂದ ಅವರು ಸತ್ಯಜ್ಞಾನಾನಂದಾತ್ಮಕವಾದ ನಿನ್ನ ಸ್ವರೂಪವನ್ನು ಪದೇ ಪದೇ ಅನುಸಂಧಾನಮಾಡುತ್ತಾ, ಅಮೃತಪೂರ್ಣವಾದ ಕೊಳದಲ್ಲಿ ಮುಳುಗಿದವರಂತೆ ಆನಂದತುಂದಿಲರಾಗುವರು. (ಇಲ್ಲಿ ಅಮೃತಸರೋವರದ ನಿದರ್ಶನಕೊಟ್ಟಿರುವುದು ಕೇವಲ ಆನಂದಮಯತೆಯನ್ನು ಲೌಕಿಕ ದೃಷ್ಟಾಂತದಿಂದ ತಿಳಿಸುವುದಕ್ಕಾಗಿ. ವಸ್ತುತಃ ಬ್ರಹ್ಮಾನಂದರೂಪವಾದ ತಾತ್ತ್ವಿಕ ಜ್ಞಾನಕ್ಕೆ ಅಮೃತಮಜ್ಜನವು ಹೋಲಿಕೆಯಾಗುವುದಿಲ್ಲ.) ॥೨೮೧॥

ವಿದ್ಯಾಪರಿಣತರಾದ ಜ್ಞಾನಿಗಳು ನಿನ್ನನ್ನು ಅಷ್ಟಮೂರ್ತಿಯೆಂದು ವರ್ಣಿಸುತ್ತಾ, ಸೂರ್ಯ, ಚಂದ್ರ, ವಾಯು, ಅಗ್ನಿ, ನೀರು, ಆಕಾಶ, ಭೂಮಿ, ಆತ್ಮ (ಯಜಮಾನಸ್ವರೂಪ) ಈ ವಸ್ತುಗಳೆಲ್ಲಾ ನಿನ್ನ ಸ್ವರೂಪಗಳೆಂದು ಹೇಳುವರು. ಅಂದರೆ ನಿನ್ನ ಸ್ವರೂಪಕ್ಕೆ ಒಂದು ಪರಿಚ್ಛಿನ್ನತ್ವ ಅಂದರೆ ಒಂದು ನಿರ್ದಿಷ್ಟರೂಪವನ್ನು ವಿವರಿಸುತ್ತಿರುವರು. ಅವರು ಹಾಗೆಯೇ ಹೇಳುತ್ತಿರಲಿ, ಅದನ್ನು ನಾವು ಆಕ್ಷೇಪಿಸುವುದಿಲ್ಲ. ಆದರೆ, ಪರಮೇಶ್ವರನೇ, ನಾವು ಮಾತ್ರ ತ್ವದ್ಭಿನ್ನವಾದ ಅಂದರೆ ನಿನ್ನನ್ನು ಬಿಟ್ಟು ಬೇರೆ ವಸ್ತುವನ್ನು ಎಂದಿಗೂ ನಾವು ನಂಬುವುದಿಲ್ಲ. ಸಕಲ ವಸ್ತುಗಳೂ, ಸಕಲತತ್ತ್ವಗಳೂ ನೀನೇ ಎಂಬುದೇ ನಮ್ಮ ದೃಢನಿಶ್ಚಯ. ॥೨೮೨॥

ದುಃಖಿತರಿಗೆ ರಕ್ಷಕನಾಗಿರುವ ಮಹಾದೇವನೇ, ಓಂಕಾರರೂಪವೆನಿಸಿದ ಪ್ರಣವವು, ಅಕಾರ, ಉಕಾರ, ಮಕಾರಗಳೆಂಬ ಪದತ್ರಯಗಳಿಂದ, ವ್ಯಸ್ತ

ತುರೀಯಂ ತೇ ಧಾಮ ಧ್ವನಿಭಿರವರುಂಧಾನಮಣುಭಿಃ ।
ಸಮಸ್ತವ್ಯಸ್ತಂ ತ್ವಾಂ ಶರಣದ ಗೃಣಾತ್ಯೋಮಿತಿ ಪದಂ ॥೨೮೩॥

ಭವಶ್ಶರ್ವೋ ರುದ್ರಃ ಪಶುಪತಿರಥೋಗ್ರಃ ಸಹ ಮಹಾಂ
ಸ್ತಥಾ ಭೀಮೇಶಾನಾವಿತಿ ಯದಭಿಧಾನಾಷ್ಟಕಮಿದಂ ।
ಅಮುಷ್ಮಿನ್ ಪ್ರತ್ಯೇಕಂ ಪ್ರವಿಚರತಿ ದೇವ ಶ್ರುತಿರಪಿ
ಪ್ರಿಯಾಯಾಸ್ಮೈ ಧಾಮ್ನೇ ಪ್ರವಿಹಿತ ನಮಸ್ಯೋಽಸ್ಮಿ ಭವತೇ॥೨೮೪॥

ವಾಗಿಯೂ, ಓಂಕಾರರೂಪದಿಂದ ಸಮಾನಪದ(ಸಮಸ್ತ)ವಾಗಿಯೂ ಕಂಡುಬರುತ್ತಿದೆ. ವ್ಯಸ್ತವಾಗಿರುವ, ಅ. ಉ. ಮ. ಈ ಮೂರು ಪದಗಳು, ವೇದತ್ರಯವನ್ನೂ, ಜಾಗ್ರತ್ಸ್ವಪ್ನ ಸುಷುಪ್ತಿ ಎಂಬ ಮೂರು ಅಂತಃಕರಣಾವಸ್ಥೆಗಳನ್ನೂ, ಭೂರ್ಭುವಸ್ಸ್ವರೂಪವಾದ ಮೂರು ಲೋಕಗಳನ್ನೂ, ಬ್ರಹ್ಮವಿಷ್ಣುರುದ್ರರೆಂಬ ಮೂರು ದೇವತೆಗಳನ್ನೂ ಅಭಿಧಾವೃತ್ತಿಯಿಂದ ಹೇಳುವುವು. ಅಂದರೆ ಅಕಾರಕ್ಕೆ, ಋಗ್ವೇದ, ಜಾಗ್ರದವಸ್ಥೆ, ಭೂಲೋಕ, ಬ್ರಹ್ಮದೇವತೆ, ಎಂಬ ಅರ್ಥವಿರುವುದು. ಎರಡನೆಯದಾದ ಉಕಾರಕ್ಕೆ, ಯಜುರ್ವೇದ, ಸ್ವಪ್ನಾವಸ್ಥಾ, ಭುವರ್ಲೋಕ, ವಿಷ್ಣುದೇವತೆಯೆಂಬ ಅರ್ಥವಿರುವುದು. ಹಾಗೆಯೇ ಮೂರನೆಯದಾದ ಮಕಾರಕ್ಕೆ ಸಾಮವೇದ, ಸುಷುಪ್ತ್ಯವಸ್ಥೆ, ಸ್ವರ್ಲೋಕ, ಮಹೇಶ್ವರದೇವತೆ ಎಂಬ ಅರ್ಥವೂ ತೋರಿಬರುವುದು. ಹೀಗೆ ಪ್ರಣವವು ವ್ಯಸ್ತರೂಪದಿಂದ ಮೇಲಿನ ವಸ್ತುಜಾಲವನ್ನೆಲ್ಲಾ ನಿರೂಪಿಸುವುದು. ಸಮುದಾಯಾತ್ಮಕವಾದ ಓಂಕಾರರೂಪದಿಂದಲೂ, ಗುರೂಪದಿಷ್ಟವಾದ ಉಚ್ಚಾರಣೆಯ ಅರ್ಧಮಾತ್ರಾಕಾಲಿಕವಾದ ಸ್ವರವಿಶೇಷದಿಂದಲೂ, ನಿರ್ವಿಕಾರಸ್ವರೂಪವೂ, ಅವಸ್ಥಾತ್ರಯವಿಲಕ್ಷಣವೂ ಆದ ನಿನ್ನ ಸ್ವರೂಪವನ್ನು ತಿಳಿಸುವುದಾಗಿದೆ. ಒಟ್ಟಿನಲ್ಲಿ ಪ್ರಣವಾರ್ಥವು, ದ್ವಿತೀಯವಸ್ತುಶೂನ್ಯವೂ, ಪ್ರತ್ಯಗಭಿನ್ನಸ್ವರೂಪವೂ ಆದ ಪರಬ್ರಹ್ಮವಸ್ತುವನ್ನು ವಿವರಿಸುವುದಾಗಿದೆ. ಆದ್ದರಿಂದ ಮಹಾದೇವನೇ, ನಿನ್ನ ಅಖಂಡ ಚೈತನ್ಯಾತ್ಮಕವಾದ ಸ್ವಸ್ವರೂಪವನ್ನು ಪ್ರಣವಮಂತ್ರವೆನಿಸಿದ ಓಂಕಾರದ ಅರ್ಥ ವಿವರಣೆಯಿಂದ ನಾವು ಸುಲಭವಾಗಿ ಅರಿಯಬಹುದಲ್ಲವೆ? ॥೨೮೩॥

ಮಹಾದೇವನೇ, ನಿನ್ನನ್ನು, ಭವ, ಶರ್ವ, ರುದ್ರ, ಪಶುಪತಿ, ಉಗ್ರ, ಮಹಾದೇವ, ಭೀಮ, ಈಶಾನ, ಎಂಬ ಎಂಟು ನಾಮಗಳಿಂದ ಸ್ತುತಿಸುವರು. ಅಲ್ಲದೆ ಈ ನಾಮಾಷ್ಟಕಗಳಲ್ಲಿ ಅಡಗಿರುವ ಒಂದೊಂದು ಹೆಸರಿನ ಅರ್ಥವನ್ನೂ ವೇದಗಳು ವಿವರಿಸುತ್ತಿರುವುವು. ಸಕಲ ದೇವತೆಗಳೂ ಇದೇ ನಾಮಗಳನ್ನೇ ಕಿವಿ

ನಮೋ ನೇದಿಷ್ಠಾಯ ಪ್ರಿಯದವ ದವಿಷ್ಠಾಯ ಚ ನಮೋ
ನಮಃ ಕ್ಷೋದಿಷ್ಠಾಯ ಸ್ಮರಹರ ಮಹಿಷ್ಠಾಯ ಚ ನಮಃ ।
ನಮೋ ವರ್ಷಿಷ್ಠಾಯ ತ್ರಿನಯನ ಯವಿಷ್ಠಾಯ ಚ ನಮೋ
ನಮಃ ಸರ್ವಸ್ಮೈ ತೇ ತದಿದಮಿತಿ ಶರ್ವಾಯ ಚ ನಮಃ ॥೨೮೫॥

ಬಹುಳರಜಸೇ ವಿಶ್ವೋತ್ಪತ್ತೌ ಭವಾಯ ನಮೋ ನಮಃ
ಪ್ರಬಲತಮಸೇ ತತ್ಸಂಹಾರೇ ಹರಾಯ ನಮೋ ನಮಃ ।
ಜನಸುಖಕೃತೇ ಸತ್ತ್ವೋದ್ರಿಕ್ತೌ ಮೃಡಾಯ ನಮೋ ನಮಃ
ಪ್ರಮಹಸಿಪದೇ ನಿಸ್ತ್ರೈಗುಣ್ಯೇ ಶಿವಾಯ ನಮೋ ನಮಃ ॥೨೮೬॥

ಗೊಟ್ಟು ಕೇಳುತ್ತಿರುವರು. ಹೀಗೆ ಅಷ್ಟನಾಮಗಳಿಂದ ಪ್ರತಿಪಾದ್ಯನೂ, ಸ್ವಪ್ರಕಾಶ ಚೈತನ್ಯರೂಪನೂ, ಆದ ನಿನಗೆ ಸರ್ವದಾ ವಂದಿಸುವೆನು. ನಿನಗಲ್ಲದೆ ಮತ್ತಾರಿಗೂ ವಂದಿಸಲಾರೆನು. ॥೨೮೪॥

ಭಕ್ತರ ಅಭೀಷ್ಟವನ್ನು ದಯಪಾಲಿಸುವ ವನದಂತಿರುವವನೇ, ನೀನು ಎಲ್ಲರ ಸಮೀಪದಲ್ಲಿಯೂ ಇರುವೆ. ಅತ್ಯಂತ ದೂರಸ್ಥನಾಗಿಯೂ ತೋರುವೆ. ಅಲ್ಪ ವಸ್ತುವೂ ನೀನೇ ಆಗಿರುವೆ. ಅತಿಶಯವಾದ ಮಹದ್ವಸ್ತುವೂ ನೀನೇ. ಸ್ಮರಹರನೇ, ತ್ರಿನಯನನೇ, ನೀನು ಅತಿಯಾದ ವೃದ್ಧನಂತೆಯೂ ಕಾಣುವೆ. ಅತ್ಯಂತ ಯುವಕನಾಗಿಯೂ ಆಗುವೆ. ಒಟ್ಟಿನಲ್ಲಿ ನಿನ್ನ ಸ್ವರೂಪವನ್ನು ಅರಿಯಲು ಸಾಧ್ಯವೇ ಇಲ್ಲ. ಎಲ್ಲವೂ ನೀನೇ. ನೀನೇ ಎಲ್ಲಾ ವಸ್ತುರೂಪದಿಂದ ಅಥವಾ ಜಗದ್ರೂಪದಿಂದ ತೋರುತ್ತಿರುವೆ. ಇಂತಹ ಅಖಂಡ ಚೈತನ್ಯಾತ್ಮಕನಾದ ನಿನಗೆ ಸರ್ವದಾ ನಮಸ್ಕಾರಮಾಡುತ್ತಿರುವೆನು. ॥೨೮೫॥

ಪ್ರಪಂಚದ ಸೃಷ್ಟಿಗಾಗಿ ಅತಿಶಯವಾದ ರಜೋದ್ರೇಕಮೂರ್ತಿಯಾದ ಬ್ರಹ್ಮನೆನಿಸಿದ ನಿನಗೆ ನಮಸ್ಕಾರ. ಉತ್ಪನ್ನವಾದ ಜಗತ್ತನ್ನು ತಮೋಗುಣಾತಿಶಯದಿಂದ ನಾಶಮಾಡುವ ಹರಸ್ವರೂಪನಾದ ನಿನಗೆ ವಂದನೆ. ಹಾಗೆಯೇ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸಿ ಅವರಿಗೆ ಸುಖವನ್ನುಂಟುಮಾಡಲು, ಸತ್ವಗುಣಾತಿಶಯದಿಂದ ಮೃಡ (ವಿಷ್ಣು–ಮೃಡಯತಿ, ಸುಖಯತಿ ಇತಿ ಮೃಡಃ) ರೂಪನೆನಿಸಿದ ನಿನಗೆ ನಮಸ್ಕಾರ. ಮತ್ತೂ ಮಾಯಾವಿರಹಿತವಾದ ಜ್ಯೋತೀರೂಪದಿಂದಲೂ ತ್ರಿಗುಣರಹಿತವಾಗಿಯೂ ಇದ್ದು ಮೋಕ್ಷಪದದಲ್ಲಿ ಮಂಗಳಸ್ವರೂಪನೆನಿಸಿದ ನಿನಗೆ ಸರ್ವದಾ ವಂದನೆ. ॥೨೮೬॥

ಕೃಶಪರಿಣತಿ ಚೇತಃ ಕ್ಲೇಶವಶ್ಯಂ ಕ್ವ ಚೇದಂ
ಕ್ವ ಚ ತವ ಗುಣಸೀಮೋಲ್ಲಂಘಿನೀ ಶಶ್ವದೃದ್ಧಿಃ ।
ಇತಿ ಚಕಿತಮಮಂದೀಕೃತ್ಯ ಮಾಂ ಭಕ್ತಿ ರಾಧಾ
ದ್ವರದ ಚರಣಯೋಸ್ತೇ ವಾಕ್ಯಪುಷ್ಪೋಪಹಾರಂ ॥೨೮೭॥

ವಪುಃ ಪ್ರಾದುರ್ಭಾವಾದನುಮಿತಮಿದಂ ಜನ್ಮನಿ ಪುರಾ
ಪುರಾರೇ ನ ಕ್ವಾಪಿ ಕ್ಷಣಮಿತಿ ಭವಂತಂ ಪ್ರಣತವಾನ್ ।
ನಮನ್ಮುಕ್ತಃ ಸಂಪ್ರತ್ಯಹಮತನುರಗ್ರೇಽಪ್ಯನತಿಮಾ
ನಿತೀಶ ಕ್ಷಂತವ್ಯಂ ತದಿದಮಪರಾಧದ್ವಯಮಪಿ ॥೨೮೮॥

ಅಸಿತಗಿರಿಸಮಂ ಸ್ಯಾತ್ಕಜ್ಜಲಂ ಸಿಂಧುಪಾತ್ರೇ
ಸುರತರುವರಶಾಖಾ ಲೇಖನೀ ಪತ್ರಮುರ್ವೀ ।

ಭಕ್ತರಿಗೆ ವರಗಳನ್ನು ಕೊಡುವವನೇ, ಅಲ್ಪವಿಷಯಕವಾದ ಮತ್ತು ಅನೇಕ ಕ್ಲೇಶಗಳಿಗೆ ಅಧೀನವಾಗಿರುವ ನನ್ನ ಮನಸ್ಸು, ನಿನ್ನ ಸಂಪದ್ಭರಿತವಾದ ಗುಣಗಣಗಳ ಪಾರವನ್ನು ಕಾಣುವುದು ಹೇಗೆ? ಇದು ಅಸಾಧ್ಯವೇ. ಆದರೂ ಈ ಭಯದಿಂದ ಕೂಡಿರುವ ನನ್ನನ್ನು ಸ್ವಲ್ಪಮಟ್ಟಿಗೆ ಪ್ರೋತ್ಸಾಹಿಸಿ, ಭಕ್ತಿಪರವಶತೆಯಿಂದ ನಿನ್ನ ಪಾದದ್ವಂದ್ವಗಳಲ್ಲಿ ಅರ್ಪಿಸುವ ಈ ಸ್ತುತಿವಾಕ್ಯವೆಂಬ ಪುಷ್ಪಗಳ ಕಾಣಿಕೆಯನ್ನು ಸಮರ್ಪಿಸುವೆನು. ದಯೆಯಿಂದ ಅದನ್ನು ಸ್ವೀಕರಿಸಿ ನನ್ನನ್ನುದ್ಧರಿಸು. ॥೨೮೭॥

ತ್ರಿಪುರಾಸುರನಾಶಕನಾದ ಮಹಾದೇವನೇ, ನನಗೆ ಈಗ ಈ ಮಾನವ ಜನ್ಮವು ಬಂದಿರುವುದರಿಂದ, ಹಿಂದಿನ ಜನ್ಮದಲ್ಲಿ ಕ್ಷಣಕಾಲವೂ ನಿನ್ನನ್ನು ಧ್ಯಾನಿಸಿ, ನಿನಗೆ ನಮಸ್ಕರಿಸಲಿಲ್ಲವೆಂಬುದು ನನಗೆ ಈಗ ಗೊತ್ತಾಗುತ್ತಿದೆ. ಇದೂ ನನ್ನ ಒಂದು ಅಪರಾಧ. ಈಗ ನಿನ್ನನ್ನು ನಾನು ಬಹುವಾಗಿ ಸ್ತುತಿಸಿರುವುದರಿಂದ ನಿನ್ನ ಅನುಗ್ರಹವೊದಗಿ ಮುಂದೆ ನನಗೆ ಜನ್ಮವೇ ದೊರಕದ ಸ್ಥಿರಮುಕ್ತಿಯು ಲಭಿಸುವುದು. ಹೀಗೆ ನನಗೆ ಮುಂದಿನ ಜನ್ಮವೇ ಇಲ್ಲದಿರುವುದರಿಂದ, ಇನ್ನು ಮುಂದೆ ನಿನಗೆ ನಾನು ನಮಸ್ಕಾರ ಮಾಡುವಂತಿಲ್ಲ. ಇದೂ ನನ್ನ ಎರಡನೆಯ ಅಪರಾಧ. ಈ ಅಪರಾಧದ್ವಯಗಳನ್ನೂ ಮನ್ನಿಸಿ ನನ್ನನ್ನು ಸಲಹು. ॥೨೮೮॥

ಮಹಾದೇವನೇ, ನಿನ್ನ ಗುಣಗಣಗಳನ್ನು ವರ್ಣಿಸಬೇಕೆಂದು ಸಾಕ್ಷಾತ್ಸರಸ್ವತಿಯೇ, ಸಮುದ್ರವೆಂಬ ಶಾಯಿಕುಡಿಕೆಯಲ್ಲಿ ಪರ್ವತದೋಪಾದಿಯಲ್ಲಿರುವ

ಯದಿ ಲಿಖತಿ ಗೃಹೀತ್ವಾ ಶಾರದಾ ಸಾರ್ವಕಾಲಂ
ತದಪಿ ತವ ಗುಣಾನಾಮೀಶ ಪಾರಂ ನ ಯಾತಿ ॥೨೮೯॥

ಅಸುರಸುರಮುನೀಂದ್ರೈರರ್ಚಿತಸ್ಯೇಂದುಮೌಲೇ
ಗ್ರಥಿತಗುಣಮಹಿಮ್ನೋ ನಿರ್ಗುಣಸ್ಯೇಶ್ವರಸ್ಯ ।
ಸಕಲಗುಣವರಿಷ್ಠಃ ಪುಷ್ಪದಂತಾಭಿಧಾನೋ
ರುಚಿರಮಲಘುವೃತ್ತಂ ಸ್ತೋತ್ರಮೇತಚ್ಚಕಾರ ॥೨೯೦॥

ಅಹರಹರನವದ್ಯಂ ಧೂರ್ಜಟೇಃ ಸ್ತೋತ್ರಮೇತ
ತ್ಪಠತಿ ಪರಮಭಕ್ತ್ಯಾ ಶುದ್ಧಚಿತ್ತಃ ಪುಮಾನ್ಯಃ ।
ಸ ಭವತಿ ಶಿವಲೋಕೇ ರುದ್ರತುಲ್ಯಸ್ತಥಾತ್ರ
ಪ್ರಚುರತರಧನಾಯುಃ ಪುತ್ರವಾನ್ಕೀರ್ತಿಮಾಂಶ್ಚ ॥೨೯೧॥

ಶಾಯಿಪುಡಿಯಿಂದ ಮಸಿಯನ್ನು ಮಾಡಿಕೊಂಡು, ಕಲ್ಪವೃಕ್ಷದ ಕೊಂಬೆಯೆಂಬ ಲೇಖನಿಯನ್ನು ಹಿಡಿದು, ಭೂಮಿಯನ್ನೇ ಕಾಗದವನ್ನಾಗಿ ಏರ್ಪಡಿಸಿ, ಅವಿಚ್ಛಿನ್ನವಾಗಿ ಬರೆದರೂ ಅದು ಕೊನೆಯಾಗುವುದಿಲ್ಲ. ಅಷ್ಟು ಅಗಾಧವಾದ ಮತ್ತು ಅಂತವಿಲ್ಲದ ಗುಣರಾಶಿಯನ್ನು ನನ್ನಿಂದ ವರ್ಣಿಸಲು ಸಾಧ್ಯವೇ ? ॥೨೮೯॥

ದೇವರಾಕ್ಷಸರಿಂದಲೂ, ಮುನಿಗಣಗಳಿಂದಲೂ ಪೂಜಿತನಾಗಿ ಚಂದ್ರಶೇಖರನೆನಿಸಿದ ಮತ್ತು ತಾತ್ತ್ವಿಕವಾಗಿ ನಿರ್ಗುಣಸ್ವರೂಪನಾದ ಪರಶಿವನ ಗುಣರಾಶಿಯನ್ನು ವಿವರಿಸುವ, ವಿಚಿತ್ರವಾದ ವೃತ್ತಗಳಿಂದ ಮನೋಹರವಾಗಿರುವಂತೆ ಪುಷ್ಪದಂತನೆಂಬುವನು ಈ ಸ್ತೋತ್ರವನ್ನು ರಚಿಸಿರುವನು. ॥೨೯೦॥

ಶಿವನ ಪರಿಶುದ್ಧವಾದ ಈ ಸ್ತೋತ್ರವನ್ನು ಯಾವ ಮನುಜನು ಭಕ್ತಿಯಿಂದ ಕೂಡಿ, ನಿರ್ಮಲವಾದ ಮನಸ್ಸಿನಿಂದ ಪ್ರತಿದಿನವೂ ಪಠಿಸುವನೋ, ಅವನು ಅಂತ್ಯದಲ್ಲಿ ಶಿವಲೋಕವನ್ನು ಪಡೆದು ಅಲ್ಲಿ ಶಿವನಿಗೆ ಸಮಾನವಾದ ಭೋಗಗಳನ್ನು ಅನುಭವಿಸುವನಲ್ಲದೇ, ಈ ಲೋಕದಲ್ಲಿ, ಪುತ್ರವಂತನೂ, ಕೀರ್ತಿಶಾಲಿಯೂ ಹೇರಳವಾದ, ದ್ರವ್ಯ ಮತ್ತು ದೀರ್ಘವಾದ ಆಯುಸ್ಸಿಗೆ ಪಾತ್ರನೂ ಆಗುವನು.॥೨೯೧॥

ಮಹೇಶಾನ್ನಾಪರೋ ದೇವೋ ಮಹಿಮ್ನೋ ನಾಪರಸ್ತವಃ ।
ಅಘೋರಾನ್ನಾಪರೋ ಮಂತ್ರೋ ನಾಸ್ತಿ ತತ್ವಂ ಗುರೋಃ ಪರಂ ॥೨೯೨॥

॥ ಕಶ್ಯಪ ಉವಾಚ ॥

ಏವಂ ಸ್ತುತೋ ಮಹಾದೇವಃ ಕರುಣಾಸಾಗರಃ ಪ್ರಭುಃ ।
ಗಾಣಪತ್ಯಂ ದದೌ ತಸ್ಮೈ ತದೈವಾಶ್ರಿತವತ್ಸಲಃ ॥೨೯೩॥

ದೀಕ್ಷಾ ದಾನಂ ತಪಸ್ತೀರ್ಥಂ ಯೋಗಂ ದಾನಾದಿಕಾಃ ಕ್ರಿಯಾಃ ।
ಮಹಿಮ್ನಸ್ತವಪಾಠಸ್ಯ ಕಲಾಂ ನಾರ್ಹಂತಿ ಷೋಡಶೀಂ ॥೨೯೪॥

ಏತಾದೃಶೈಸ್ತಪಸ್ತಪ್ತಮತ್ರೈವ ಬಹುಭಿಃ ಪುರಾ ।
ತೇ ಮಹೇಶಪ್ರಸಾದೇನ ಮುಕ್ತಾಶ್ಚ ಮುನಿಸತ್ತಮಾಃ ॥೨೯೫॥

ಪುರಾ ವಿಷ್ಣುಪ್ರಭೃತಯಃ ಸುರಾ ಮೋಹಸಮನ್ವಿತಾಃ ।
ಸಾಯಂ ಸೋಮತ್ರಯೋದಶ್ಯಾಂ ನಾರ್ಚಯಾಮಾಸುರೀಶ್ವರಂ ॥೨೯೬॥

ಮಹೇಶನನ್ನು ಬಿಟ್ಟು ಶ್ರೇಷ್ಠನಾದ ಇನ್ನೊಬ್ಬ ದೇವತೆಯಿರುವುದಿಲ್ಲ. ಶಿವ ಮಹಿಮೆಯ ಸ್ತೋತ್ರವನ್ನು ಬಿಟ್ಟು, ಇನ್ನೊಂದು ಸ್ತೋತ್ರವಿರುವುದಿಲ್ಲ. ಅಘೋರ ಮಂತ್ರವನ್ನು ಬಿಟ್ಟು, ಮತ್ತೊಂದು ಮಂತ್ರವಿರುವುದಿಲ್ಲ. ಮಂತ್ರೋಪದೇಶಕನಾದ ಗುರುವನ್ನು ಬಿಟ್ಟು, ಮತ್ತೊಂದು ತತ್ತ್ವವಿರುವುದಿಲ್ಲ. ॥೨೯೨॥

ಈರೀತಿಯಲ್ಲಿ ಸ್ತುತಿಸಲ್ಪಟ್ಟ ದಯಾಮಯನೂ, ಜಗನ್ನಾಥನೂ ಆದ ಶಿವನು ಪುಷ್ಪದಂತನಿಗೆ ಪ್ರಮಥಗಣಗಳ ಆಧಿಪತ್ಯವನ್ನು ಅನುಗ್ರಹಿಸಿದನು. ॥೨೯೩॥

ಶೈವದೀಕ್ಷೆಯಾಗಲಿ, ದಾನವಾಗಲಿ, ತಪಸ್ಸಾಗಲಿ, ತೀರ್ಥಕ್ಷೇತ್ರಗಳಾಗಲಿ, ದಾನವೇ ಮೊದಲಾದ ಧಾರ್ಮಿಕ ಕರ್ಮಗಳಾಗಲಿ, ಇವುಗಳಲ್ಲಿ, ಯಾವುದೂ ಸಹ, ಶಿವಸ್ತೋತ್ರದ ಹದಿನಾರನೆಯ ಒಂದು ಅಂಶವನ್ನೂ ಹೊಂದಲಾರವು. ॥೨೯೪॥

ಇದೇರೀತಿಯಲ್ಲಿ, ಆ ಪುಷ್ಪದಂತನೇ ಮೊದಲಾದ ಅನೇಕ ಮಹನೀಯರು ಈ ಪ್ರದೇಶದಲ್ಲಿ ತಪಸ್ಸನ್ನಾಚರಿಸಿ, ಈಶ್ವರಾನುಗ್ರಹದಿಂದ ಮುಕ್ತಿಯನ್ನು ಹೊಂದಿದರು. ಎಂದು ಕಶ್ಯಪನು ಆ ಕ್ಷೇತ್ರಮಹಿಮೆಯನ್ನು ವಿವರಿಸಿ ಮತ್ತೂ ಹೀಗೆಂದನು. ॥೨೯೫॥

ಹಿಂದೆ, ವಿಷ್ಣುವೇ ಮುಂತಾದ ದೇವತೆಗಳು, ಅಜ್ಞಾನದಿಂದ ಕೂಡಿದವರಾಗಿ

ತದಾ ಸಮುದ್ರೇ ಪತಿತಾ ಲಕ್ಷ್ಮೀರ್ವಿಷ್ಣೋರ್ಮನೋಹರಾ ।
ಐರಾವತೋಽಪಿ ಪತಿತೋ ದೇವಾಶ್ವೇನ ಸಹಾಂಬುಧೌ ॥೨೯೭॥

ಅಮೃತಂ ಚಾಪತತ್ತತ್ರ ರತ್ನೈಶ್ಚ ವಿವಿಧೈಃ ಸಹ ।
ತತೋ ಬಭೂವುಸ್ತೇ ದೇವಾ ನಿಸ್ತೇಜಸ್ಕಾ ಭಯಾಕುಲಾಃ ॥೨೯೮॥

ತತಃ ಸ್ವಸ್ವಪದಾತ್ಸರ್ವೇ ಪ್ರಚ್ಯುತಾಃ ಪೃಥಿವೀಂ ಗತಾಃ ।
ಭೂಮಾವಗಸ್ತ್ಯಂ ಶೈವೇಂದ್ರಂ ದದೃಶುಸ್ತೇ ಸುರಾ ಮುನೇ ॥೨೯೯॥

ಪ್ರಣೇಮುಸ್ತೇ ತತೋಽಗಸ್ತ್ಯಂ ನಿಸ್ತೇಜಸ್ಕಾಃ ಸುರಾಃ ಸ್ಥಿರಾಃ ।
ವಿಚಾರ್ಯ ಸ ತತಸ್ತತ್ತ್ವಂ ವಿಷ್ಣ್ವಾದೀನಾಂ ಕೃತಾಗಸಾಂ ॥೩೦೦॥

ತಾನುವಾಚ ತತೋ ಧೀಮಾನ್ಕುಂಭಯೋನಿಃ ಶಿವಾರ್ಚಕಃ ॥೩೦೧॥

ಸೋಮವಾರದಿಂದ ಯುಕ್ತವಾದ ತ್ರಯೋದಶೀ ತಿಥಿಯ ದಿನ ಸಾಯಂಕಾಲದಲ್ಲಿ, ಈಶ್ವರನನ್ನು ಅರ್ಚಿಸಲಿಲ್ಲ. ಇದರ ಪರಿಣಾಮವಾಗಿ, ॥೨೯೬॥

ಆಗ, ವಿಷ್ಣುವಿನ ಪ್ರೇಯಸಿಯಾದ ಲಕ್ಷ್ಮಿಯು, ಸಮುದ್ರದೊಳಕ್ಕೆ ಬಿದ್ದಳು. ಇದೇ ರೀತಿಯಲ್ಲಿ, ಐರಾವತವೂ ಮತ್ತು ದೇವತೆಗಳ ಅಶ್ವವಾದ ಉಚ್ಚೈಃಶ್ರವಸ್ಸೂ, ಇವೆರಡೂ ಸಮುದ್ರದಲ್ಲಿ ಮುಳುಗಿಹೋದುವು. ॥೨೯೭॥

ದೇವತೆಗಳ ಆಹಾರವಾದ ಅಮೃತವೂ ಮತ್ತು ಅವರಿಗೆ ಪ್ರಿಯವಾದ ನಾನಾ ಬಗೆಯ ರತ್ನಗಳೂ ಸಹ ಸಮುದ್ರದ ಪಾಲಾದುವು. ಹೀಗಾಗಲು ದೇವತೆಗಳೆಲ್ಲರೂ ತೇಜೋಹೀನರಾಗಿ ಭಯಚಕಿತರಾದರು. ॥೨೯೮॥

ಎಲೈ ಮುನಿಯೇ, ಬಳಿಕ ಆ ದೇವತೆಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳಿಂದ ಚ್ಯುತರಾಗಿ ಭೂಲೋಕಕ್ಕೆ ತೆರಳಿದರು. ಆಗ ಅಲ್ಲಿ ಈಶ್ವರಭಕ್ತಾಗ್ರಣಿಯಾದ ಅಗಸ್ತ್ಯಮುನಿಯನ್ನು ನೋಡಿದರು. ॥೨೯೯॥

ಬಳಿಕ ತೇಜೋಹೀನರಾದ ಆ ದೇವತೆಗಳು ಅಗಸ್ತ್ಯನಿಗೆ ನಮಸ್ಕರಿಸಿದರು. ತರುವಾಯ ಅಗಸ್ತ್ಯಮುನಿಯು ಅಪರಾಧಿಗಳಾದ ವಿಷ್ಣುವೇ ಮುಂತಾದ ದೇವತೆಗಳ ಮನೋಭಿಪ್ರಾಯವನ್ನು ತಿಳಿದು ಅವರನ್ನು ಕುರಿತು ಹೀಗೆಂದನು. ॥೩೦೦-೩೦೧॥

॥ ಅಗಸ್ತ್ಯ ಉವಾಚ ॥

ಪ್ರಾಪ್ಯಾಧಿಕಾರಾ ವಿಶ್ವೇಶಾನ್ಮತ್ತಾ ಯೂಯಂ ಬಭೂವಿಥ ।
ಭವದ್ಭಿಸ್ತನ್ಮದಾವಿಷ್ಟೈಸ್ತ್ಯಕ್ತಂ ಶಂಕರಪೂಜನಂ ॥೩೦೨॥

ಅತ ಏವಾಧಿಕಾರಾಸ್ತೇ ಭವತಾಂ ಪ್ರಚ್ಯುತಾಃ ಸುರಾಃ ।
ಸಮುದ್ರೇ ಪತಿತಾ ಲಕ್ಷ್ಮೀ ರಮೃತೈರಾವತಾನ್ವಿತಾ ॥೩೦೩॥

ಭವದ್ಭಿರಸ್ಯ ಮೋಹೇನ ನ ಶಿವಾಭ್ಯರ್ಚನಂ ಕೃತಂ ।
ತೇನ ಪಾಪೇನ ಭವತಾಮಭವತ್ಸ್ವಪದಚ್ಯುತಿಃ ॥೩೦೪॥

ರತ್ನೈರಶ್ವೇನ ದೇವೇನ ಸಂಯುತಾನರ್ಚನಾತ್ಪ್ರಭೋಃ ।
ಯೇ ನಾರ್ಚಯಂತಿ ಗೌರೀಶಂ ಸಾವಧಾನೇನ ಸರ್ವದಾ ॥೩೦೫॥

ತೇಷಾಮೇತಾದೃಶಾಃ ಕ್ಲೇಶಾಃ ಭವಿಷ್ಯಂತಿ ಪದೇ ಪದೇ ॥೩೦೬॥

ಯೇ ಪೂಜಯಂತಿ ಗೌರೀಶಂ ಪತ್ರೇಣ ಪಯಸಾಪಿ ವಾ ।
ತೇ ಸರ್ವೇ ಭಯನಿರ್ಮುಕ್ತಾಸ್ತಿಷ್ಠಂತಿ ಸುಖಿನಃ ಸದಾ ॥೩೦೭॥

ಎಲೈ ದೇವತೆಗಳಿರಾ, ನೀವು ಶಿವನಿಂದ ನಿಮ್ಮ ನಿಮ್ಮ ಅಧಿಕಾರಪದವಿಯನ್ನು ಹೊಂದಿ ಮದೋನ್ಮತ್ತರಾಗಿದ್ದಿರಿ. ಮದೋದ್ಧತರಾದ ನೀವು ಶಿವಪೂಜೆಯನ್ನು ತ್ಯಜಿಸಿದಿರಿ. ॥೩೦೨॥

ಆದುದರಿಂದಲೇ ನೀವು ನಿಮ್ಮ ಅಧಿಕಾರದಿಂದ ಚ್ಯುತರಾದಿರಿ. ಲಕ್ಷ್ಮಿಯು ಅಮೃತ ಮತ್ತು ಐರಾವತಗಳೊಂದಿಗೆ ಸಮುದ್ರದಲ್ಲಿ ಬಿದ್ದಳು. ॥೩೦೩॥

ಅಜ್ಞಾನಪರವಶರಾಗಿ ನೀವು ಶಿವಾರ್ಚನೆಮಾಡದೆ, ಪಾಪಸಂಘಟಿತರಾಗಿ ನಿಮ್ಮ ನಿಮ್ಮ ಅಧಿಕಾರಗಳನ್ನು ನೀವೇ ಕಳೆದುಕೊಂಡಿರಿ. ಆ ಪಾಪಫಲವನ್ನು ಈಗ ಅನುಭವಿಸಿರಿ. ॥೩೦೪॥

ಪ್ರಭುವಾದ ಶಿವನನ್ನು ಆರಾಧಿಸದೇ ಇದ್ದುದರಿಂದಲೇ ಲಕ್ಷ್ಮಿಯು ಅನೇಕ ರತ್ನಗಳಿಂದಲೂ ಮತ್ತು ದೇವಾಶ್ವದಿಂದಲೂ ಕೂಡಿ ಸಮುದ್ರದಲ್ಲಿ ಬಿದ್ದಳು. ಯಾರು ಜಾಗರೂಕತೆಯಿಂದ ತಪ್ಪದೇ ಶಿವನನ್ನು ಅರ್ಚಿಸುವುದಿಲ್ಲವೋ ಅವರಿಗೇನೆ ಬಾರಿಬಾರಿಗೂ ಈರೀತಿಯಾದ ತೊಂದರೆಗಳು ಸಂಭವಿಸುವುವು. ॥೩೦೫-೩೦೬॥

ಗೌರೀಶಪೂಜನಂ ತ್ಯಕ್ತ್ವಾಲಸ್ಯೇನ ಭ್ರಮೇಣ ವಾ ।
ತೇಷಾಂ ಕ್ವ ಸುಖಲೇಶಸ್ಯಾಪ್ಯನ್ವಯಃ ಸಂಭವಿಷ್ಯತಿ ॥೩೦೮॥

ಯೇ ಸಂತತಂ ಶಿವರತಾಃ ಶಿವಪೂಜಾರತಾಃ ಸದಾ ।
ತೇಷಾಮೇವ ಶುಭಂ ನೂನಮನ್ಯೇಷಾಮಶುಭಂ ಧ್ರುವಂ ॥೩೦೯॥

ಮೂರ್ಖಾಃ ಸಂಪ್ರಾಪ್ಯ ದುಃಖಾನಿ ಪ್ರಲಪಂತಿ ಪುನಃ ಪುನಃ ।
ಪರಂ ತು ದುಃಖನಾಶಾರ್ಥಂ ನಾರ್ಚಯಂತಿ ಸದಾಶಿವಂ ॥೩೧೦॥

ಶ್ರುತಃ ಸ್ಮೃತೋ ವಾ ದೃಷ್ಟೋವಾ ಮಹಾದೇವಃ ಕೃಪಾನಿಧಿಃ ।
ದದಾತಿ ಮಹದೈಶ್ವರ್ಯಂ ಪೂಜಿತಶ್ಚೇತ್ಪರಂ ಪದಂ ॥೩೧೧॥

ಯಾರು ಗಿರಿಜಾವಲ್ಲಭನಾದ ಶಿವನನ್ನು ಪತ್ರೆಗಳಿಂದಾಗಲಿ, ಜಲದಿಂದಲೇ ಆಗಲಿ ಪೂಜಿಸುವರೋ ಅವರು ನಿರ್ಭಯರಾಗಿ ನಿರಂತರವೂ ಸುಖಿಗಳಾಗಿ ಜೀವಿಸುವರು. ॥೩೦೭॥

ಯಾರು ಆಲಸ್ಯದಿಂದಲಾಗಲಿ ಪ್ರಮಾದದಿಂದಲಾಗಲಿ ಶಿವಪೂಜೆಯನ್ನು ತೊರೆಯುವರೋ ಅವರಿಗೆ ಸುಖ ಲೇಶವಾದರೂ ಸಂಭವಿಸುವುದೇ ? ॥೩೦೮॥

ಯಾರು ಹಗಲಿರುಳು ಈಶ್ವರಧ್ಯಾನಾಸಕ್ತರಾಗಿಯೂ ಮತ್ತು ಈಶ್ವರಾರಾಧನೆ ಯಲ್ಲಿಯೇ ಆಸಕ್ತರಾಗಿಯೂ ಇರುವರೋ, ಅವರಿಗೇನೆ ಕಲ್ಯಾಣವುಂಟಾಗು ವುದು. ಇತರರಿಗೆ ಯಾವಾಗಲೂ ಅಮಂಗಳವೇ ಲಭಿಸುವುದು. ॥೩೦೯॥

ಅಜ್ಞಾನಿಗಳು ದುಃಖಪರಂಪರೆಗಳಿಗೆ ಗುರಿಯಾಗಿ ಬಾರಿಬಾರಿಗೂ ಶೋಕ ದಿಂದ ನರಳುವರು. ಆದರೆ ಅವರು ತಮಗೆ ಸಂಭವಿಸಿದ ದುಃಖಗಳನ್ನು ಹೋಗ ಲಾಡಿಸಬೇಕೆಂಬ ಇಚ್ಛೆಯಿಂದ ಶಿವನನ್ನು ಎಂದಿಗೂ ಆರಾಧಿಸುವುದಿಲ್ಲ. ॥೩೧೦॥

ಕರುಣಾಸಾಗರನಾದ ಶಿವನು ತನ್ನನ್ನು ಸ್ಮರಿಸಿದರಾಗಲಿ ಅಥವಾ ಶಿವಕಥೆ ಗಳನ್ನು ಕೇಳಿದುದರಿಂದಾದರೂ ಆಗಲಿ, ಅತುಲವಾದ ಐಶ್ವರ್ಯವನ್ನು ಕರುಣಿಸುವನು. ಅವನನ್ನು ಪೂಜಿಸಿದರೆ ಅವನು ಶಾಶ್ವತವಾದ ಮೋಕ್ಷಪದವಿಯನ್ನೇ ನೀಡುವನು. ॥೩೧೧॥

ಏತಾದೃಶಂ ಮಹಾದೇವಂ ಸರ್ವದೇವಶಿಖಾಮಣಿಂ ।
ನಾರ್ಚಯಂತಿ ನರಾ ಮೂಢಾ ಭವಂತ ಇವ ಮೋಹಿತಾಃ ॥೩೧೨॥

ಶಿವಾರ್ಚನಾರ್ಥಂ ಯತ್ನೇನ ಸಂಪಾದ್ಯ ಕುಸುಮಾದಿಕಂ ।
ಯಃ ಪೂಜಯೇನ್ಮಹಾದೇವಂ ಸ ಮುಕ್ತೋ ಭವತಿ ಧ್ರುವಂ . ॥೩೧೩॥

ಯಃ ಪೂಜಯೇನ್ಮಹಾದೇವಂ ಕುಸುಮೈರಸುಮೈರಪಿ ।
ಸ ಪುಲ್ಕಸೋ ವಾ ಭೂಪೋ ವಾ ನೃಸಮೋಽಪ್ಯಸಮೋ ಭವೇತ್ ॥೩೧೪॥

ಕಲ್ಯಾಣೀಪತಿರೀಶಾನಃ ಸ್ಮೃತೋಽಪಿ ಸಕೃದಾದರಾತ್ ।
ಪದೇ ಪದೇಽಪಿ ಕಲ್ಯಾಣಂ ತನುತೇ ನಾತ್ರ ಸಂಶಯಃ ॥೩೧೫॥

ಯಃ ಕಾಲಾಂತಕಮಶ್ರಾಂತಂ ನಿತಾಂತಂ ನಾರ್ಚಯಿಷ್ಯತಿ ।
ಸ ಕಾಲಕಬಲಸ್ಸದ್ಯೋ ವಿನಾ ಕಾಲಂ ಭವಿಷ್ಯತಿ ॥೩೧೬॥

ಸಕಲ ದೇವತೆಗಳಲ್ಲಿ ಅಗ್ರೇಸರನೂ, ಜಗತ್ಪ್ರಭುವೂ ಆದ ಇಂಥಹ ಶಿವನನ್ನು ಮೂಢರಾದ ಜನರು ನಿಮ್ಮಂತೆ ಅಜ್ಞಾನಪರವಶರಾಗಿ ಆರಾಧಿಸುವುದಿಲ್ಲ. ॥೩೧೨॥

ಯಾವನು ಆತ್ಮಸಾಧ್ಯವಾದ ಪ್ರಯತ್ನದಿಂದ ಈಶ್ವರಾರಾಧನೆಗೋಸ್ಕರ ಪುಷ್ಪಾದಿಗಳನ್ನು ಸಂಗ್ರಹಿಸಿ ಶಿವನನ್ನು ಪೂಜಿಸುವನೋ ಅವನು ನಿಜವಾಗಿಯೂ ಮುಕ್ತನಾಗುವನು. ॥೩೧೩॥

ಯಾವನು ಶಿವನನ್ನು ಪುಷ್ಪಗಳಿಂದಲಾಗಲಿ ಅಥವಾ ಇನ್ನಿತರ ಪೂಜಾಸಾಮಗ್ರಿಗಳಿಂದಲೇ ಆಗಲಿ ಆರಾಧಿಸುವನೋ, ಅವನು ಚಂಡಾಲನಾಗಿರಲಿ, ರಾಜನಾಗಿರಲಿ ಅಥವಾ ಸಾಧಾರಣವರ್ಗದ ಮನುಷ್ಯನೇ ಆಗಿರಲಿ, ಅವನು ಚಕ್ರವರ್ತಿಸದೃಶನಾಗುವನು. ಅವನಿಗೆ ಸದೃಶವಾದ ಶ್ರೇಷ್ಠವಾಗಿರುವ ಇನ್ನೊಂದು ವಸ್ತುವೇ ಇರುವುದಿಲ್ಲ. ॥೩೧೪॥

ಉಮಾರಮಣನಾದ ಆ ಪರಶಿವನನ್ನು ಒಂದೇ ಒಂದುಬಾರಿ ಸ್ಮರಿಸಿದರೂ ಸಹ ಅವನು ಅದರಿಂದಲೇ ಸಂತುಷ್ಟನಾಗಿ ಬಾರಿ ಬಾರಿಗೂ ಮಂಗಳವನ್ನುಂಟು ಮಾಡುವನು. ಇದರಲ್ಲಿ ಸಂಶಯುವಿರುವುದಿಲ್ಲ. ॥೩೧೬॥

ಮೃತ್ಯುಂಜಯನೂ ಕೈವಲ್ಯಸ್ವರೂಪನೂ ಆದ ಆ ಪರಶಿವನನ್ನು ಯಾವನು ಭಕ್ತಿಪೂರ್ವಕವಾಗಿ ಆರಾಧಿಸುವುದಿಲ್ಲವೋ, ಅವನು ಅಕಾಲದಲ್ಲಿ ಮೃತ್ಯುವಿನ ಬಾಯಿಗೆ ತುತ್ತಾಗುವನು. ॥೩೧೬॥

ಲಕ್ಷ್ಮ್ಯಾದಯಃ ಶಂಕರೇಣ ಕ್ಷೀರಾಬ್ಧೌ ರಕ್ಷಿತಾಃ ಶಿವಂ ।
ಪೂಜಯಿತ್ವಾದ್ಯ ಕುರ್ವಂತು ಕ್ಷೀರಾಬ್ಧಿಮಥನಂ ಸುರಾಃ ॥೩೧೭॥

ಯೇ ಭಜಂತ್ಯನಿಶಂ ಭಕ್ತ್ಯಾ ದೇವದೇವಂ ಮಹೇಶ್ವರಂ ।
ತೈರ್ಲಭ್ಯತೇ ವಿನಾ ಯತ್ನಂ ಸ್ವಾಭೀಪ್ಸಿತಮಸಂಶಯಂ ॥೩೧೮॥

ಭವದ್ಭಿರ್ಮೋಹಸಂಕ್ರಾಂತೈಃ ಕದಾಚಿನ್ನಾರ್ಚಿತಃ ಶಿವಃ ।
ಅತೋಽತ್ರ ಯೂಯಮನಿಶಂ ಶಿವಪೂಜಾಪರಾಯಣಾಃ ॥೩೧೯॥

ಅತಃ ಕೃತಮಹಾದೇವಪೂಜನೈರಪಿ ಯತ್ನತಃ ।
ಭವದ್ಭಿರಬ್ಧಿಮಥನಾತ್ಪ್ರಾಪ್ತವ್ಯಂ ಸ್ವೇಷ್ಟಮಾಶು ಚ ॥೩೨೦॥

ವಿಘ್ನಾ ಯದಿ ಭವಿಷ್ಯಂತಿ ಕ್ಷೀರಾಬ್ಧಿಮಥನೇ ತದಾ ।
ಬಿಲ್ವಪತ್ರಾದಿಭಿಃ ಸಮ್ಯಕ್ಕುರ್ವಂತು ಶಿವಪೂಜನಂ ॥೩೨೧॥

ಎಲೈ ದೇವತೆಗಳೇ, ಕ್ಷೀರಾಬ್ಧಿಯಲ್ಲಿ ಮುಳುಗಿ,ಅದೃಶ್ಯರಾಗಿರುವ ಲಕ್ಷ್ಮಿಯೇ ಮೊದಲಾದವರನ್ನು ಕ್ಷೀರಾಬ್ಧಿಯಲ್ಲಿ ಶಿವನು ರಕ್ಷಿಸಿರುವನು. ಆದುದರಿಂದ ಈಗ ನೀವು ಮೊಟ್ಟಮೊದಲು ಶಿವನನ್ನು ಪೂಜಿಸಿ ಬಳಿಕ ಕ್ಷೀರಸಾಗರದ ಮಥನವನ್ನು ಮಾಡಿರಿ. ॥೩೧೭॥

ಯಾರು ಹಗಲಿರುಳು ಭಕ್ತಿಯಿಂದ ದೇವೇಶನಾದ ಪರಶಿವನನ್ನು ಆರಾಧಿಸುವರೋ, ಅವರು ಅನಾಯಾಸವಾಗಿ ತಮ್ಮ ಅಭೀಷ್ಟವನ್ನು ಪಡೆಯುವರು. ಇದರಲ್ಲಿ ಸಂಶಯಪಡಬೇಕಾದುದಿಲ್ಲ. ॥೩೧೮॥

ಅಜ್ಞಾನಕ್ಕೆ ಒಳಗಾದ ನೀವು ಒಂದಾನೊಂದು ಸಮಯದಲ್ಲಿ, ಶಿವನನ್ನು ಪೂಜಿಸಲು ಮರೆತಿರುವಿರಿ. ಹೋಗಲಿ, ಇನ್ನಾದರೂ ನೀವು ಈಶ್ವರಾರಾಧನೆಯಲ್ಲಿ ತೊಡಗಿರಿ. ॥೩೧೯॥

ಆದುದರಿಂದ ಈಶ್ವರನನ್ನು ಆರಾಧಿಸಿ, ಅದರಿಂದ ಕ್ಷೀರಾಬ್ಧಿಯನ್ನು ಮಥಿಸಿ ನಿಮ್ಮ ಇಷ್ಟಾರ್ಥವು ಕೈಗೂಡುವಂತೆ ಪ್ರಯತ್ನಿಸಿರಿ. ॥೩೨೦॥

ಕ್ಷೀರಾಬ್ಧಿಯನ್ನು ಮಥಿಸುವಾಗ ಮಧ್ಯದಲ್ಲಿ ನಿಮಗೆ ವಿಘ್ನಗಳು ಸಂಭವಿಸಿದರೆ ಆಗ, ಬಿಲ್ವಪತ್ರೆಯೇ ಮೊದಲಾದುವುಗಳಿಂದ ಶಿವನನ್ನು ಭಕ್ತಿಪೂರ್ವಕವಾಗಿ ಪೂಜಿಸಿರಿ. ॥೩೨೧॥

ನಶ್ಯಂತಿ ವಿಘ್ನಾಃ ಸರ್ವೇಽಪಿ ಶ್ರೀಮಹಾದೇವಪೂಜಯಾ ।
ಯತೋ ವಿಘ್ನಹರಸ್ಯಾಪಿ ಜನಕೋ ವಿಘ್ನಹಾ ಶಿವಃ ॥೩೨॥

ವಿಘ್ನಘ್ನಪುತ್ರೋ ವಿಘ್ನೇಶೋ ಯತಸ್ತಸ್ಮಾದ್ಗಣಾಧಿಪಃ ।
ವಿಘ್ನಘ್ನ ಇತಿ ವಿಖ್ಯಾತೋ ವೇದೇಷ್ವನ್ಯೇಷ್ವಪಿ ಧ್ರುವಂ ॥೩೩॥

ಅಸಕೃದ್ವಾ ಸಕೃದ್ವಾಪಿ ಯಃ ಸ್ಮರೇತ್ಸಾಂಬಮವ್ಯಯಂ ।
ಕೃತ್ವಾಪಿ ಸ ಮಹಾರಂಭಂ ಸ ತತ್ಫಲಮವಾಪ್ನುಯಾತ್ ॥೩೪॥

ಯಃ ಕಾರ್ಯಾರಂಭಸಮಯೇ ನಾರಾಧಯತಿ ಶಂಕರಂ ।
ಸ ವಿಘ್ನೌಘಸಮಾಕ್ರಾಂತೋ ಭವಿಷ್ಯತಿ ಪದೇ ಪದೇ ॥೩೫॥

ವಿಧಿವತ್ಪಾರ್ವತೀನಾಥಃ ಕಾರ್ಯಾರಂಭೇಷು ಪೂಜಿತಃ ।
ಸಂಹೃತ್ಯ ವಿಘ್ನನಿವಹಾನ್ದದಾತಿ ಚ ಫಲಂ ಧ್ರುವಂ ॥೩೬॥

ಮಹಾದೇವನ ಪೂಜೆಯಿಂದ ಸಕಲ ವಿಘ್ನಗಳೂ ನಶಿಸುವುವು. ಏಕೆಂದರೆ, ವಿಘ್ನನಾಶಕನಾದ ಆ ಪರಶಿವನು, ವಿಘ್ನಹರನೆಂದೆನಿಸಿಕೊಂಡಿರುವ, ವಿಘ್ನೇಶ್ವರನಿಗೂ ಜನಕನಾಗಿರುವನು. ॥೩೨॥

ಪ್ರಮಥ ಗಣಗಳಿಗೆ ಅಧಿಪತಿಯಾದ ವಿಘ್ನೇಶ್ವರನು, ವಿಘ್ನಹರನಾದ ಪರಮೇಶ್ವರನ ಪುತ್ರನಾದುದರಿಂದ, ವಿಘ್ನಘ್ನನೆಂಬ ಹೆಸರಿನಿಂದ, ವೇದಗಳಲ್ಲಿಯೂ ಮತ್ತು, ಪುರಾಣಗಳಲ್ಲಿಯೂ ಪ್ರಸಿದ್ಧನಾಗಿರುವನು. ॥೩೩॥

ಗೌರೀಸಹಿತನಾದ ಶಿವನನ್ನು ಯಾವನು, ಅನೇಕ ಬಾರಿಯಾಗಲಿ ಅಥವಾ ಒಂದೇ ಬಾರಿಯಾಗಲಿ ಸ್ಮರಿಸುವನೋ ಅವನು, ಎಂತಹ ಮಹತ್ತರವಾದ ಕಾರ್ಯವನ್ನು ಪ್ರಾರಂಭಿಸಿದ್ದರೂ ಸಹ ಅದರಿಂದುಂಟಾಗಬಹುದಾದ ಫಲವನ್ನು ಹೊಂದಿಯೇ ಹೊಂದುವನು. ॥೩೪॥

ಯಾವನು ಕರ್ಮಾಚರಣೆಯ ಪ್ರಾರಂಭದ ಸಮಯದಲ್ಲಿ, ಶಿವನನ್ನು ಆರಾಧಿಸುವುದಿಲ್ಲವೋ, ಅವನು ಹೆಜ್ಜೆಹೆಜ್ಜೆಗೂ ವಿಘ್ನಪರಂಪರೆಯನ್ನು ಹೊಂದುವನು. ॥೩೫॥

ಪಾರ್ವತೀವಲ್ಲಭನಾದ ಶಿವನನ್ನು ಕಾರ್ಯಗಳ ಪ್ರಾರಂಭದಲ್ಲಿ ಪೂಜಿಸಿದರೆ, ಅವನು ವಿಘ್ನರಾಶಿಗಳನ್ನು ಹೋಗಲಾಡಿಸಿ, ಸುಫಲವನ್ನು ದಯಪಾಲಿಸುವನು. ॥೩೬॥

ವಿಘ್ನದೋ ವಿಘ್ನಹರ್ತಾ ಚ ಫಲಹಾ ಫಲದೋಽಪಿ ಚ ।
ಶಿವ ಏವೇತಿ ನಿರ್ಣೀತೋ ವೇದವೇದಾಂತಪಾರಗೈಃ ॥೩೨೭॥

ನಾರ್ಚಯಿಷ್ಯತಿ ಯೋ ಭಕ್ತ್ಯಾ ಪಾರ್ವತೀಪ್ರಾಣವಲ್ಲಭಂ ।
ಸ ವಿಘ್ನವಜ್ರನಿಹತೋ ನಿಷ್ಫಲೋ ನಿಹತೋ ಭವೇತ್ ॥೩೨೮॥

ಅತೋ ಭವಂತೋ ಯತ್ನೇನ ಪೂಜಯಿತ್ವಾ ಸದಾಶಿವಂ ।
ಸಮುದ್ರಮಥನೋದ್ಯೋಗಂ ಕುರ್ವಂತ್ವಿಷ್ಟಫಲಾಪ್ತಯೇ ॥೩೨೯॥

ಮಂಥಾನಂ ಮಂದರಂ ಕೃತ್ವಾ ಶೇಷರೂಪೇಣ ರಜ್ಜುನಾ ।
ಕುರ್ವಂತ್ವತ್ಯಂತಯತ್ನೇನ ಸಮುದ್ರಮಥನಂ ಬುಧಾಃ ॥೩೩೦॥

ಇತಿ ತದ್ವಚನಂ ಶ್ರುತ್ವಾ ವಿಷ್ಣುಬ್ರಹ್ಮಾದಯಃ ಸುರಾಃ ।
ಚಕ್ರುಃ ಕ್ಷೀರಾಬ್ಧಿಮಥನಂ ಶಿವಾರಾಧನಪೂರ್ವಕಂ ॥೩೩೧॥

ವಿಘ್ನಗಳನ್ನುಂಟುಮಾಡುವವನೂ ಶಿವನೇ, ಅವುಗಳನ್ನು ಹೋಗಲಾಡಿಸುವವನೂ ಶಿವನೇ, ಫಲವು ಲಭಿಸದಂತೆ ಮಾಡುವವನೂ ಶಿವನೇ, ಫಲವನ್ನು ಕರುಣಿಸುವವನೂ ಶಿವನೇ ಆಗಿರುವನೆಂದು ವೇದವೇದಾಂತ ಪಾರಂಗತರಾದ ಮಹನೀಯರು ನಿರ್ಣಯಿಸಿರುವರು. ॥೩೨೭॥

ಯಾವನು ಗೌರೀವಲ್ಲಭನಾದ ಪರಶಿವನನ್ನು ಭಕ್ತಿಯಿಂದ ಅರ್ಚಿಸುವುದಿಲ್ಲವೋ, ಅವನು ವಿಘ್ನಗಳೆಂಬ ವಜ್ರಾಯುಧದ ಹೊಡೆತಕ್ಕೆ ಗುರಿಯಾಗುವನು. ಅವನ ಜೀವಿತವೇ ನಿರರ್ಥಕವು. ವಿಘ್ನಗಳೇ ಅವನನ್ನು ಸಂಹರಿಸುವುವು. ॥೩೨೮॥

ಆದುದರಿಂದ ನೀವು ತಪ್ಪದೇ ಶಿವನನ್ನು ಪೂಜಿಸಿ ನಿಮ್ಮ ಇಷ್ಟಾರ್ಥವನ್ನು ಪಡೆಯುವುದಕ್ಕೋಸ್ಕರ ಸಮುದ್ರಮಥನದಲ್ಲಿ ತೊಡಗಿರಿ. ॥೩೨೯॥

ಎಲ್ಲೈ ದೇವತೆಗಳೇ, ಮಂದರಪರ್ವತವನ್ನು ಕಡೆಗೋಲನ್ನಾಗಿ ಮಾಡಿ ಆದಿಶೇಷನನ್ನೇ ರಜ್ಜುವಿನ ಸ್ಥಾನದಲ್ಲಿರಿಸಿ ಸಮುದ್ರವನ್ನು ಮಥಿಸಿರಿ." ॥೩೩೦॥

ಹೀಗೆಂದ ಅಗಸ್ತ್ಯಮಹರ್ಷಿಯ ಮಾತನ್ನು ಕೇಳಿ ವಿಷ್ಣು ಬ್ರಹ್ಮ ಮುಂತಾದ ದೇವತೆಗಳು ಶಿವನನ್ನು ಆರಾಧಿಸಿ ಕ್ಷೀರಸಾಗರವನ್ನು ಕಡೆದರು. ॥೩೩೧॥

ಕ್ಷೀರಾಬ್ಧಿಮಥನೋದ್ಯುಕ್ತಾನ್ಸುರಾನೀಶಃ ಸುರಾರ್ಚಿತಃ ।
ಆಪ್ಯಾಯಯದದೃಷ್ಟೋಽಪಿ ಸರ್ವಾಂತರಗತಃ ಸದಾ ॥೩೩೨॥

ಶಿವೇನಾಪ್ಯಾಯಿತಾ ದೇವಾ ವಿಷ್ಣ್ವಾದ್ಯಾಸ್ತೇ ಮುಹುರ್ಮುಹುಃ ।
ಶಿವಂ ಸಂಪೂಜ್ಯ ಯತ್ನೇನ ಚಕ್ರುರಬ್ಧೇ ಮಥನಂ ಮುದಾ ॥೩೩೩॥

ಸತ್ವರಂ ಮಥ್ಯಮಾನಸ್ತೈಃ ಕ್ಷೀರಾಬ್ಧಿರ್ವ್ಯಾಕುಲಸ್ತದಾ ।
ತರಂಗಹಸ್ತೈರಸುರಾನ್ವಾರಯನ್ನಿವ ಸಂಸ್ಥಿತಃ ॥೩೩೪॥

ತತಸ್ತೇ ಮಥನೋದ್ಯುಕ್ತಾಃ ಶಿವಂ ವಿಸ್ಮೃತ್ಯ ಸತ್ವರಂ ।
ಅಹಂ ಬಲೀ ಬಲೀತ್ಯುಕ್ತ್ವಾ ಚಕ್ರುರ್ಮಥನಮುದ್ಯತಾಃ ॥೩೩೫॥

ತತಃ ಪರಂ ಮಥ್ಯಮಾನಾದಾಲೋಲಾತ್ಕ್ಷೀರಸಾಗರಾತ್ ।
ಕಾಲಕೂಟಃ ಸಮುತ್ಪನ್ನೋ ಜ್ವಾಲಮಾಲಾಸಮಾಕುಲಃ ॥೩೩೬॥

ಈರೀತಿಯಲ್ಲಿ ಕ್ಷೀರಸಾಗರವನ್ನು ಕಡೆಯತೊಡಗಿದ ಆ ದೇವತೆಗಳನ್ನು ಸರ್ವಾಂತರ್ಯಾಮಿಯಾದ ಶಿವನು ಅದೃಶ್ಯನಾಗಿದ್ದರೂ ತೃಪ್ತಿಪಟ್ಟು ಸಂತೋಷಗೊಳಿಸಿದನು. ॥೩೩೨॥

ಶಿವನಿಂದ ಸುಖವನ್ನು ಹೊಂದಿದ ಆ ವಿಷ್ಣ್ವಾದಿ ದೇವತೆಗಳು ಪುನಃ ಪುನಃ ಶಿವನನ್ನು ಪೂಜಿಸಿ ಸಂತೋಷದಿಂದ ಕ್ಷೀರಾಬ್ಧಿಯನ್ನು ಕಡೆದರು. ॥೩೩೩॥

ಅವರು ಕ್ಷೀರಸಮುದ್ರವನ್ನು ಅತ್ಯಂತ ರಭಸದಿಂದ ಕಡೆಯಲು ಆಗ ಕ್ಷೀರಾಬ್ಧಿಯು ಅಲ್ಲೋಲಕಲ್ಲೋಲವಾಗಿ ತೆರೆಗಳೆಂಬ ಕೈಗಳಿಂದ ಸಮುದ್ರಮಥನದಲ್ಲಿ ತೊಡಗಿದ್ದ ದೇವತೆಗಳನ್ನು ತಡೆಗಟ್ಟುವಂತೆ ತೋರಿತು. ॥೩೩೪॥

ಬಳಿಕ ಸಮುದ್ರಮಥನದಲ್ಲಿ ಉದ್ಯುಕ್ತರಾದ ಅವರು ಶೀಘ್ರದಲ್ಲಿಯೇ ಶಿವನನ್ನು ಮರೆತು ನಾನೇ ಬಲಶಾಲಿಯು, ನಾನೇ ಬಲಶಾಲಿಯು ಎಂದು ಹೇಳುತ್ತಾ ಕ್ಷೀರಾಬ್ಧಿಯನ್ನು ಕಡೆದರು. ॥೩೩೫॥

ಈರೀತಿಯಲ್ಲಿ ಅವರು ಸಮುದ್ರವನ್ನು ಕಡೆಯಲು ಚಂಚಲವಾದ ಕ್ಷೀರಾಬ್ಧಿಯಿಂದ ಕಾಲಕೂಟವೆಂಬ ಘೋರವಾದ ವಿಷವು ಉಂಟಾಯಿತು. ಅದು ಅಗ್ನಿಜ್ವಾಲೆಗಳನ್ನೇ ಕಾರುತ್ತಾ ಮೇಲಕ್ಕೆ ಬಂದಿತು. ॥೩೩೬॥

ತತಸ್ತಮಬ್ಧಿಸಂಭೂತಂ ಹಾಲಾಹಲಮಸದ್ಭುತಂ ।
ದೃಷ್ಟ್ವಾ ವಿಹಾಯ ಮಥನಂ ಜಗ್ಮುಃ ಪ್ರತಿ ದಿಶಂ ಸುರಾಃ ॥೩೩೭॥

ಹಾ ಹಾ ಕಿಮಾಸೀದಿದಮಿತ್ಯತಿತ್ರಸ್ತಾ ದಿವೌಕಸಃ ।
ಪುನಃ ಪ್ರಾಪ್ತಾಃ ಕುಂಭಯೋನಿಂ ಕಾಲಕೂಟಹತಪ್ರಭಾಃ ॥೩೩೮॥

ತಾನಾಗತಾನ್ಸುರಾನ್ದೃಷ್ಟ್ವಾ ಕುಂಭಯೋನಿಃ ಶಿವಾರ್ಚಕಃ ।
ಕಾಲಕೂಟಭಯಭ್ರಷ್ಟಾನುವಾಚ ಪ್ರೀತಿಪೂರ್ವಕಂ ॥೩೩೯॥

ಅಹಂ ಬಲೀ ಬಲಿತ್ಯೇವಂ ಭವದ್ಭಿರ್ಮೋಹಸಂವೃತೈಃ ।
ವಿಸ್ಮೃತಃ ಶಂಕರಸ್ತಸ್ಮಾದ್ಭಯಂ ಪ್ರಾಪ್ತಂ ನ ಸಂಶಯಃ ॥೩೪೦॥

ಕ್ವ ಶಕ್ತಿರ್ಭವತಾಮಸ್ತಿ ಸಮುದ್ರಮಥನೇ ಸುರಾಃ ।
ಶ್ರೀಮಹೇಶಬಲೇನೈವ ಕೃತಂ ತನ್ಮಥನಂ ತದಾ ॥೩೪೧॥

ಬಳಿಕ ಕ್ಷೀರಾಬ್ಧಿಯಿಂದ ಉತ್ಪನ್ನವಾದ ಅತ್ಯದ್ಭುತವಾದ ಆ ಕಾಲಕೂಟ ವಿಷವನ್ನು ನೋಡಿ ದೇವತೆಗಳು ಸಮುದ್ರಮಥನವನ್ನು ತ್ಯಜಿಸಿ ದಿಕ್ಕಾಪಾಲಾಗಿ ಓಡಿದರು. ॥೩೩೭॥

ಅಯ್ಯೋ, ಇದೇನಾಯಿತು ಎಂದು ಕೂಗುತ್ತಾ ಅತ್ಯಂತ ಭಯಚಕಿತರಾಗಿ ಕಾಲಕೂಟವಿಷದಿಂದ ನಿಸ್ತೇಜಸ್ಕರಾದ ಅವರು, ಮತ್ತೆ ಅಗಸ್ತ್ಯಮುನಿಯ ಬಳಿಗೆ ಬಂದರು. ॥೩೩೮॥

ಈರೀತಿಯಲ್ಲಿ ತನ್ನ ಬಳಿಗೆ ಬಂದ ಆ ದೇವತೆಗಳನ್ನು ನೋಡಿ, ಈಶ್ವರಾರಾಧಕನಾದ ಅಗಸ್ತ್ಯಮುನಿಯು, ಕಾಲಕೂಟ ವಿಷವನ್ನು ನೋಡಿ, ಹೆದರಿ ದಿಕ್ಕಾಪಾಲಾಗಿ ಓಡಿಬಂದ ಅವರನ್ನು ಕುರಿತು ಪ್ರೀತಿಯಿಂದ ಹೀಗೆಂದನು. ॥೩೩೯॥

"ಎಲೈ, ದೇವತೆಗಳೇ! ನೀವು ಅಜ್ಞಾನದಿಂದ ಆವೃತರಾಗಿ, ನಾನೇ ಬಲಶಾಲಿಯು, ನಾನೇ ಬಲಶಾಲಿಯು, ಎಂದು ಅನ್ಯೋನ್ಯವಾಗಿ ಕೂಗಾಡುತ್ತಾ, ಶಿವನನ್ನು ಮರೆತಿರಿ. ಅದರಿಂದಲೇ ನಿಮಗೆ ಭಯವು ಸಂಭವಿಸಿತು. ಇದರಲ್ಲಿ ಸಂಶಯವಿರುವುದಿಲ್ಲ. ॥೩೪೦॥

ಸುರರೇ! ನಿಮಗೆ ಸಮುದ್ರಮಥನದಲ್ಲಿ ತಕ್ಕ ಶಕ್ತಿಯಿರುವುದೇ? ಇದುವರೆಗೆ ನೀವು ಮಾಡಿದ ಸಮುದ್ರಮಥನವಾದರೂ, ಪರಮೇಶ್ವರನ ಶಕ್ತಿಯನ್ನೇ ಅವಲಂಬಿಸಿರುವುದು. ॥೩೪೧॥

ಮಹೇಶಃ ಸರ್ವಜಂತೂನಾಂ ಬಲದಃ ಪುಷ್ಟಿದಃ ಪ್ರಭುಃ ।
ಕರ್ತಾ ಕಾರಯಿತಾ ಚೈವ ಶಿವ ಏವ ನ ಸಂಶಯಃ ॥೩೪೨॥

ಕರ್ತಾಹಮಿತಿ ಮನ್ವಾನಾ ನಿತ್ಯಭ್ರಾಂತಾ ಭವಾದೃಶಾಃ ।
ಬಹವಃ ಸಂತಿ ಭೂಲೋಕೇ ಶಿವಮಾಯಾವಿಮೋಹಿತಾಃ ॥೩೪೩॥

ಜಗತ್ಸೃಷ್ಟ್ವಾ ಮಹಾದೇವಃ ಪಾತಿ ಹಂತಿ ಚ ಲೀಲಯಾ ।
ಪುನಃ ಸೃಜತಿ ಪಾತೀಶಃ ಸಂಹರತ್ಯಪಿ ಲೀಲಯಾ ॥೩೪೪॥

ಕರೋತಿ ಸರ್ವಕರ್ಮಾಣಿ ಭಗವಾನ್ಪಾರ್ವತೀಪತಿಃ ।
ನ ತಸ್ಮಾದಪರಃ ಕ್ವಾಪಿ ಕಾರ್ಯಕರ್ತಾ ಶ್ರುತಿಶ್ರುತಃ ॥೩೪೫॥

ಆ ಮಹೇಶ್ವರನೇ ಸಕಲ ಜಂತುಗಳಿಗೂ, ಬಲವನ್ನೂ ಮತ್ತು ಪುಷ್ಟಿಯನ್ನೂ ಕೊಡುವವನಾಗಿರುವನು. ಸಕಲ ಜಂತುಗಳ ಶರೀರದಲ್ಲಿ ಸಾಕ್ಷಿರೂಪನಾಗಿ ನೆಲಸಿ, ಅಲ್ಲಿಯೂ ಕಾರ್ಯಗಳನ್ನು ನೆರವೇರಿಸುವವನೂ ಅವನೇ, ನೆರವೇರುವಂತೆ ಮಾಡುವವನೂ ಅವನೇ ಆಗಿರುವನು. ॥೩೪೨॥

ಈ ಭೂಲೋಕದಲ್ಲಿ, ನಿಮ್ಮಂತೆಯೇ ಅನೇಕ ಜನರು, ಈಶ್ವರನ ಅನಿರ್ವಚನೀಯವಾದ ಅನಾದಿಶಕ್ತಿಯೆಂದೆನಿಸಿಕೊಂಡಿರುವ ಮಾಯೆಯಿಂದ ಆವೃತರಾಗಿ ತಾವೇ ಕರ್ತೃಗಳಾಗಿರುವೆವೆಂದು ತಿಳಿಯುವರು. ॥೩೪೩॥

ಸೃಷ್ಟಿಕರ್ತನಾದ ಆ ಪರಶಿವನು ತನ್ನ ಲೀಲೆಯಿಂದ ಸಕಲ ಜಗತ್ತನ್ನೂ ಸೃಷ್ಟಿಸಿ, ಸ್ಥಿತಿಕಾಲದಲ್ಲಿ ರಕ್ಷಿಸಿ, ಬಳಿಕ ಪ್ರಲಯಕಾಲದಲ್ಲಿ ಸಂಹರಿಸುವನು. ಪುನಃ ಸೃಷ್ಟಿಕಾಲವು ಸನ್ನಿಹಿತವಾಗಲು, ಸೃಷ್ಟಿ ಸ್ಥಿತಿ ಲಯಗಳನ್ನು ನೆರವೇರಿಸುವನು. ॥೩೪೪॥

ಗಿರಿಜಾಪತಿಯಾದ ಪರಮೇಶ್ವರನೇ ಸಕಲ ಕಾರ್ಯಗಳನ್ನೂ ಮಾಡುವವನಾಗಿರುವನು. ಅವನನ್ನು ಬಿಟ್ಟು, ಕಾರ್ಯಕರ್ತೃವಾದ ಇನ್ನಾವನೂ ಇರುವುದಿಲ್ಲ. ವೇದಗಳೂ ಸಹ ಪರಮೇಶ್ವರನೇ, ಪರಮೇಶ್ವರನೊಬ್ಬನೇ ಸಕಲ ಕಾರ್ಯಗಳನ್ನೂ ನೆರವೇರಿಸುವನೆಂದು ಹೇಳುವುವು. ॥೩೪೫॥

ಸಮುದ್ರಮಥನಾದೀನಿ ಮಹಾಕಾರ್ಯಾಣಿ ವಸ್ತುತಃ ।
ಕರ್ತುಂ ವಿಶ್ವೇಶ್ವರಾದನ್ಯೋ ನ ಸಮರ್ಥೋ ನ ಸಂಶಯಃ ॥೩೪೬॥

ಆಪ್ಯಾಯಿತೈರ್ಮಹೇಶೇನ ಭವದ್ಭಿರ್ಮಥನಂ ಕೃತಂ ।
ಅನ್ಯಥಾ ಮಥನೇ ಶಕ್ತಿರ್ಭವತಾಂ ಕ್ವ ಭವಿಷ್ಯತಿ ॥೩೪೭॥

ಮಹೇಶಾನುಗೃಹೀತೋಽಲ್ಪೋಪ್ಯನಲ್ಪೋಽಣ್ವಪಿ ಭೂರಿಶಃ ।
ಸದಾ ಕರೋತಿ ಕಾರ್ಯಾಣಿ ನಾನ್ಯಃ ಕೋ ವಾ ಭವಾದೃಶಃ ॥೩೪೮॥

ಮಹೇಶಪ್ರೇರಿತೈರೇವ ಸರ್ವೈರಪ್ಯಮರೈರಪಿ ।
ಕ್ರಿಯಂತೇ ಖಲು ಕಾರ್ಯಾಣಿ ನಾನಾರೂಪಾಣಿ ಸಾದರಂ ॥೩೪೯॥

ಭವಾದೃಶಾ ಮಹೇಶೇನ ಯದಿ ನ ಪ್ರೇರಿತಾಸ್ತದಾ ।
ಶಕ್ತಾಸ್ತೃಣಾಗ್ರಮಪ್ಯಲ್ಪಂ ನ ವೈ ಚಾಲಯಿತುಂ ಸುರಾಃ ॥೩೫೦॥

ನಿಜವಾಗಿಯೂ ಸಮುದ್ರಮಥನವೇ ಮುಂತಾದ ಮಹತ್ತರವಾದ ಕಾರ್ಯಗಳನ್ನು ಮಾಡಲು ಪರಮೇಶ್ವರನನ್ನು ಬಿಟ್ಟು ಇನ್ನಾವನೂ ಸಮರ್ಥನಾಗಿರುವುದಿಲ್ಲ. ಇದರಲ್ಲಿ ಸಂಶಯಪಡಬೇಕಾದುದಿಲ್ಲ. ॥೩೪೬॥

ನೀವು ಪರಮೇಶ್ವರನಿಂದಲೇ ಉತ್ಸಾಹ, ಧೈರ್ಯ, ಶಕ್ತಿ, ಸಾಹಸ ಮುಂತಾದುವುಗಳನ್ನು ಪಡೆದು, ಅನಾಯಾಸದಿಂದ ಸಮುದ್ರವನ್ನು ಕಡೆದಿರುವಿರಿ. ಅದಿಲ್ಲದಿದ್ದರೆ, ನಿಮಗೆ ಸಮುದ್ರವನ್ನು ಮಥಿಸಲು, ಶಕ್ತಿಯು ಅದೆಲ್ಲಿಂದ ಬರುತ್ತಿತ್ತು? ॥೩೪೭॥

ಈಶ್ವರಾನುಗ್ರಹಕ್ಕೆ ಪಾತ್ರನಾದವನು, ಅವನು, ಅಲ್ಪನೇ ಆಗಿರಲಿ, ಮಹಾತ್ಮನೇ ಆಗಿರಲಿ, ಚಿಕ್ಕವನೇ ಆಗಿರಲಿ, ದೊಡ್ಡವನೇ ಆಗಿರಲಿ, ಅವನು ನಿರಂತರವೂ ತನ್ನ ಕಾರ್ಯಗಳನ್ನು ಜಯಪ್ರದವಾಗಿ ಮಾಡುವನು. ನಿಮ್ಮಂತಹ ಇನ್ನಾವನೂ, ಹಾಗೆ ಕಾರ್ಯಗಳನ್ನು ಜಯಿಸಲಾರನು. ॥೩೪೮॥

ಮನುಷ್ಯರಾಗಲಿ, ದೇವತೆಗಳೇ ಆಗಲಿ, ಸರ್ವರೂ, ಈಶ್ವರನ ಪ್ರೇರಣೆಯಿಂದಲೇ, ನಾನಾಬಗೆಯ ಕಾರ್ಯಗಳನ್ನು ಉತ್ಸಾಹದಿಂದ ಮಾಡುವರು. ॥೩೪೯॥

ಎಲೈ, ಸುರರೇ! ನಿಮ್ಮಂತಹ ಜನರು, ಈಶ್ವರಪ್ರೇರಣೆಯೊಂದಿಲ್ಲದಿದ್ದರೆ, ಅತ್ಯಂತ ಹಗುರವಾದ ಒಣಹುಲ್ಲಿನ ಅಗ್ರಭಾಗವನ್ನೂ ಸಹ ಅಲ್ಲಾಡಿಸಲು ಶಕ್ತರಾಗಲಾರಿರಿ. ॥೩೫೦॥

ಪರತಂತ್ರೈರ್ಭವದ್ಭಿಸ್ತು ಮಹೇಶಪ್ರೇರಣಂ ವಿನಾ ।
ಕ್ರಿಯಂತೇ ಯದಿ ಕರ್ಮಾಣಿ ತದಾನೀಶಂ ಜಗದ್ಭವೇತ್ ॥೩೫೧॥

ಜಗದ್ಯದಿ ಭವೇದ್ದೇವಾಃ ಸರ್ವಮೇತದನೀಶ್ವರಂ ।
ತದಾ ಕ್ಷಿತ್ಯಾದಿಕೇ ಕಾರ್ಯೇ ಕೋ ವಾ ಕರ್ತಾ ಭವಿಷ್ಯತಿ ॥೩೫೨॥

ಕಾರ್ಯಂ ಯದ್ಯದ್ಭವೇತ್ತತ್ತು ವಸ್ತುತಃ ಕರ್ತ್ರಪೇಕ್ಷಿತಂ ।
ಕರ್ತಾರಮನವೇಕ್ಷ್ಯೈವ ಕಾರ್ಯಂ ಕ್ವಾಪಿ ನ ಜಾಯತೇ ॥೩೫೩॥

ಭವಾದೃಶಾನಾಮಜ್ಞಾನಾಂ ಜಗತ್ಕರ್ತೃತ್ವಕಲ್ಪನೇ ।
ಬಾಧೋಽಪಿ ಸ್ಫುಟ ಏವಾತೋ ಜಗತ್ಕರ್ತಾ ಮಹೇಶ್ವರಃ ॥೩೫೪॥

ಶಿವಃ ಕ್ಷಿತ್ಯಾದ್ಯುಪಾದಾನಜ್ಞಾನವಾನತ ಏವ ಸಃ ।
ಜಗದೀಶ ಇತಿ ಖ್ಯಾತಃ ಸ ವಿಶ್ವೇಶ ಇತಿ ಶ್ರುತಃ ॥೩೫೫॥

ಪರತಂತ್ರರಾದ ನೀವು, ಈಶ್ವರಪ್ರೇರಣೆಯಿಲ್ಲದೇ, ಕಾರ್ಯಗಳನ್ನು ಮಾಡುವಿರಾದರೆ ಆಗ, ಜಗತ್ತಿನಲ್ಲಿ ಈಶ್ವರನೇ ಇಲ್ಲದಂತಾದೀತು. ॥೩೫೧॥

ಎಲೈ, ದೇವತೆಗಳೇ! ಈ ಜಗತ್ತಿಗೆ ನಿಯಾಮಕನಾದ ಪರಮೇಶ್ವರನೊಬ್ಬ ನಿಲ್ಲದಿದ್ದರೆ, ಆಗ, ಪೃಥಿವಿಯೇ ಮೊದಲಾದ ಪಂಚಭೂತಗಳನ್ನೂ, ಮತ್ತು ಗುಡ್ಡ ಗಾಡುಗಳಲ್ಲಿ ಹುಟ್ಟುವ ತೃಣಕಾಷ್ಠಾದಿಗಳನ್ನೂ ಸೃಷ್ಟಿಸುವವನು ಅದಾವನಿರು ವನು? ॥೩೫೨॥

ಯುಕ್ತಿಗಳಿಂದ ವಿಮರ್ಶಿಸಿದರೆ, ಈ ಲೋಕಗಳಲ್ಲಿ, ಯಾವ ಯಾವ ಜನ್ಯ ವಾದ ವಸ್ತುವಿರುವುದೋ ಆ ಸಕಲ ವಸ್ತು ಜಾತಕ್ಕೂ, ಕರ್ತೃವು ಬೇಕೇಬೇಕು. ಕರ್ತೃವಿಲ್ಲದಿದ್ದರೆ, ಯಾವ ಸ್ಥಳದಲ್ಲಿಯೂ ಕಾರ್ಯವು ಉಂಟಾಗುವುದಿಲ್ಲ. ॥೩೫೩॥

ಅಜ್ಞಾನಿಗಳಾದ ನಿಮ್ಮಂತಹವರೇ, ಜಗತ್ಕರ್ತೃಗಳೆಂದು ಹೇಳುವುದಾದರೆ ಅದು ಪ್ರತ್ಯಕ್ಷ ಪ್ರಮಾಣಕ್ಕೆ ವಿರುದ್ಧವಾಗಿರುವುದೆಂಬುದು ಸ್ಪಷ್ಟವಾಗಿಯೇ ತೋರಿ ಬರುವುದು. ಆದುದರಿಂದ, ಪರಮೇಶ್ವರನೇ ಜಗತ್ತಿಗೆ ಜನಕನೆಂದು ಒಪ್ಪ ಬೇಕಾಗಿದೆ. ॥೩೫೪॥

ಶಿವನು ಕ್ಷಿತ್ಯಾದಿಗಳ ಉಪಾದಾನಕಾರಣವನ್ನು ತಿಳಿದುಕೊಂಡಿರುವನು. ಆದುದರಿಂದಲೇ ಅವನು ಜಗದೀಶನೆಂಬ ಅನ್ವರ್ಥಸಂಜ್ಞೆಯಿಂದ ಪ್ರಸಿದ್ಧನಾಗಿರು ವನು. ಅವನೇ ಜಗದೊಡೆಯನೆಂದು ವೇದಗಳು ಹೇಳುವುವು. ॥೩೫೫॥

ವಸ್ತುತೋ ಜಗದೀಶತ್ವಂ ವಿಶ್ವೇಶಸ್ಯೈವ ಸಂಮತಂ ।
ವಿಶ್ವೇಶೇ ಜಗದೀಶತ್ವಂ ನ್ಯಾಯಪ್ರಾಪ್ತಮಖಂಡಿತಂ ॥೩೫೬॥

ವಿಶ್ವೇಶ್ವರಸ್ತು ವಿಷ್ಣುರ್ವಾ ಬ್ರಹ್ಮಾ ವಾ ನ ಭವಿಷ್ಯತಿ ।
ಯತೋಽನಯೋರ್ದ್ವಯೋರೇಕಃ ಪ್ರಭುರ್ವಿಶ್ವೇಶ್ವರಃ ಪಿತಾ॥೩೫೭॥

ನಮಸ್ತೇಽಸ್ತ್ವಸ್ತು ಭಗವನ್ನಿತ್ಯಾದಿಶ್ರುತಿಭಿಃ ಸದಾ ।
ವಿಶ್ವೇಶ್ವರೋ ಮಹೇಶಾನ್ಯೋ ನೇತಿ ನಿಶ್ಚೀಯತೇ ಮಯಾ ॥೩೫೮॥

ಸೋಮಃ ಪವತ ಇತ್ಯಾದಿ ಶ್ರುತ್ಯಾ ಸೋಮಃ ಸದಾಶಿವಃ ।
ಜನಿತಾ ಪವನಾದೀನಾಂ ವಿಷ್ಣ್ವಂತಾನಾಮಿತಿ ಶ್ರುತಃ ॥೩೫೯॥

ಯುಕ್ತಿಗಳಿಂದ, ಪರಿಶೀಲಿಸಿದರೆ ಶಿವನೇ ಜಗತ್ತಿಗೆ ಒಡೆಯನೆಂಬುದು ಸರ್ವಸಂಮತವಾಗಿರುವುದು. ವಿಶ್ವೇಶನೇ ಜಗದೀಶನಾಗಿರುವನೆಂಬ ಅಂಶವು ಯುಕ್ತಿಗಳಿಂದ ಸಿದ್ಧವಾಗಿರುವುದರಿಂದ ಯುಕ್ತಿಸಿದ್ಧವಾದ ಆ ಸಿದ್ಧಾಂತವನ್ನು ಖಂಡಿಸಲು ಸಾಧ್ಯವಿಲ್ಲ. ॥೩೫೬॥

ಬ್ರಹ್ಮನಾಗಲಿ, ವಿಷ್ಣುವಾಗಲಿ, ಇವರಿಬ್ಬರಲ್ಲಿ ಒಬ್ಬನೂ ಜಗತ್ತಿಗೆ ಸ್ವಾಮಿಯಾಗಲಾರನು. ಏಕೆಂದರೆ ಇವರಿಬ್ಬರಿಗೂ ಜನಕನಾದ ಇನ್ನೊಬ್ಬನಿರುವನು. ಅವನೇ ವಿಶ್ವೇಶ್ವರನಾಗಬಲ್ಲನು. ॥೩೫೭॥

"ನಮಸ್ತೇಽಸ್ತು ಭಗವನ್ವಿಶ್ವೇಶ್ವರಾಯ ಮಹಾದೇವಾಯ" ಎಂಬಿವೇ ಮುಂತಾದ ಶ್ರುತಿಗಳು, ಶಿವನೇ ವಿಶ್ವೇಶನೆಂದು ಹೇಳುವುವು. ಅಂತಹ ವೇದಗಳ ಆಧಾರದಿಂದ, ನಾನು ವಿಶ್ವೇಶ್ವರನೆಂದರೆ ಪರಮೇಶ್ವರನನ್ನು ಬಿಟ್ಟು ಇನ್ನಾವನೂ ಆಗಿರುವುದಿಲ್ಲವೆಂದು ನಿಶ್ಚಯಿಸುವೆನು. ॥೩೫೮॥

"ಸೋಮಃ ಪವತೇ" ಎಂಬ ಶ್ರುತಿಯಲ್ಲಿ, ಶಿವನೇ ವಾಯುರೂಪದಿಂದ ಬೀಸುತ್ತಿರುವನೆಂದು ಹೇಳಿರುವುದರಿಂದ, ಆವನೇ, ವಾಯುವಿನಿಂದ ಮೊದಲುಗೊಂಡು ವಿಷ್ಣುವಿನವರೆಗೂ ಇರುವ ಸಕಲ ದೇವತೆಗಳನ್ನೂ ಸೃಷ್ಟಿಸಿರುವವನೆಂಬುದು ಸ್ಪಷ್ಟವಾಗಿ ತಿಳಿದುಬರುವುದು. ॥೩೫೯॥

ಬ್ರಹ್ಮಾಪ್ಯಯಂ ಸಮುತ್ಪನ್ನೋ ವಿಶ್ವೇಶಾಚ್ಚತುರಾನನಃ ।
ಸರ್ವೇಽಪ್ಯೇತೇ ಸುರಾ ಜಾತಾ ಶ್ರೀಮಹೇಶಾನ್ಮಹೌಜಸಃ ॥೩೬೦॥

ಅತಃ ಸರ್ವಸುರಾಧೀಶಃ ಸರ್ವಲೋಕೇಶ್ವರಃ ಶಿವಃ ।
ವೇದೈರೇವಾಯಮರ್ಥಸ್ತು ನಿರ್ಣೀತೋಽಸ್ತಿ ಮುಹುರ್ಮುಹುಃ ॥೩೬೧॥

ಈಶಾನಃ ಸರ್ವವಿದ್ಯಾನಾಮಿತ್ಯಾದಿ ಶ್ರುತಿಭಿರ್ಮುಹುಃ ।
ಮಹೇಶಸ್ಯೈವ ಕರ್ತೃತ್ವಂ ನಿಶ್ಚಿತಂ ನಾತ್ರ ಸಂಶಯಃ ॥೩೬೨॥

ತಸ್ಮಾತ್ತಮೀಶ್ವರಂ ಶಕ್ತಮವಿಜ್ಞಾಯ ಬಲಂ ಸ್ವಕಂ ।
ಸ್ತುತಂ ಭವದ್ಭಿಸ್ತೇನೈವ ಕಾಲಕೂಟೋ ವಿನಿರ್ಮಿತಃ ॥೩೬೩॥

ಯತಃ ಸ್ತುತಂ ಬಲಂ ಸ್ವೀಯಮತಃ ಕ್ರುದ್ಧೋ ಮಹೇಶ್ವರಃ ।
ಕಾಲಕೂಟಾಭಿಧಂ ಕ್ರೋಧಂ ಸಸರ್ಜಾತ್ರ ನ ಸಂಶಯಃ ॥೩೬೪॥

ಈ ಚತುರ್ಮುಖಬ್ರಹ್ಮನೂ ಸಹ, ಶಿವನಿಂದಲೇ ಜನಿಸಿರುವನು. ಇಷ್ಟೇಕೆ. ಈ ದೇವತೆಗಳೆಲ್ಲರೂ, ಪರಮೇಶ್ವರನಿಂದಲೇ ಜನಿಸಿದವರಾಗಿರುವರು. ॥೩೬೦॥

ಆದುದರಿಂದ ಶಿವನೇ, ಸಕಲ ದೇವತೆಗಳಿಗೂ ಮತ್ತು ಸಕಲ ಲೋಕಗಳಿಗೂ ಸ್ವಾಮಿಯಾಗಿರುವನು. ಈ ಅಂಶವು, ವೇದಗಳಿಂದಲೇ ಪುನಃಪುನಃ ನಿರ್ಣಯಿಸಲ್ಪಟ್ಟಿರುವುದು. ॥೩೬೧॥

"ಈಶಾನಃ ಸರ್ವವಿದ್ಯಾನಾಂ" ಎಂಬಿವೇ ಮೊದಲಾದ ವೇದವಾಕ್ಯಗಳು, ಈಶ್ವರನಿಗೇನೆ ಕರ್ತೃತ್ವವನ್ನು ಬೋಧಿಸುವುದರಿಂದ ಈಶ್ವರನೇ ಕರ್ತೃವಾಗಿರುವನೆಂದು ನಿಶ್ಚಯಿಸಲ್ಪಟ್ಟಿರುವುದು. ಇದರಲ್ಲಿ ಸಂಶಯವಿರುವುದಿಲ್ಲ. ॥೩೬೨॥

ನೀವು, ನಿಗ್ರಹಾನುಗ್ರಹಶಕ್ತನಾದ ಆ ಈಶ್ವರನನ್ನು ಮರೆತು ನಿಮ್ಮ ಬಲವನ್ನು ಸ್ತುತಿಸಿಕೊಂಡಿರಿ. ಆದುದರಿಂದ ಅವನೇ ಈ ಕಾಲಕೂಟವೆಂಬ ಘೋರವಾದ ವಿಷವನ್ನು ನಿರ್ಮಿಸಿರುವನು. ॥೩೬೩॥

ನಿಮ್ಮ ಪರಾಕ್ರಮವನ್ನು ನೀವು ಸ್ತುತಿಸಿದುದರಿಂದ ಶಿವನು ಕೋಪಗೊಂಡವನಾಗಿ, ಕಾಲಕೂಟವೆಂಬ ತನ್ನ ಕ್ರೋಧವನ್ನು ಸೃಷ್ಟಿಸಿರುವನು. ಇದರಲ್ಲಿ ಸಂಶಯವಿರುವುದಿಲ್ಲ. ॥೩೬೪॥

ಶರಣ್ಯಃ ಶರಣಂ ಪ್ರಾಪ್ಯೋ ಭವದ್ಭಿರಧುನಾ ಶಿವಃ ।
ಅನ್ಯಥಾ ಕಾಲಕೂಟೋಽಯಂ ಭವತಾಂ ನಾಶಕೋ ಭವೇತ್ ॥೩೬೫॥

ಗತ್ವಾ ಹಿಮಗಿರಿಂ ತತ್ರ ಗೌರೀಲಿಂಗಮನಾಮಯಂ ।
ಪೂಜಯಧ್ವಂ ಯಥಾಶಾಸ್ತ್ರಂ ಸರ್ವಶೋಕನಿವೃತ್ತಯೇ ॥೩೬೬॥

ಪುರಾ ಭವಂತಂ ಗಂಧರ್ವಾಃ ಸೋಮಕಾಸುರನಾಶಕಂ ।
ಸದೇವಾಸ್ತುಷ್ಟುವುರ್ಹೃಷ್ಟಾಃ ಕೇಶವಂ ಜಗತಾಂ ಹಿತಂ ॥೩೬೭॥

ತದಾ ತವಾಭವದ್ಗರ್ವಃ ಸೋಮಕಾಸುರನಾಶಕಃ ।
ತೇನ ಗರ್ವೇಣ ಸರ್ವೇಷಾಂ ಸುರಾಣಾಂ ಮೋಹನಂ ಕೃತಂ ॥೩೬೮॥

ಮೋಹಿತಾಸ್ತೇ ಸುರಾ ಭೂಯೋ ಭವಂತಂ ತುಷ್ಟುವುರ್ಹರೇ ।
ತದಾ ಸಮಭವದ್ಘೋರಾ ಲಕ್ಷ್ಮೀನಾಥಾಶರೀರವಾಕ್ ॥೩೬೯॥

ಆದುದರಿಂದ ಈಗ ನೀವು, ದೀನರಕ್ಷಕನಾದ ಶಿವನನ್ನೇ ಮರೆಹೋಗಿರಿ. ಹಾಗಿಲ್ಲದಿದ್ದರೆ, ಈ ಕಾಲಕೂಟವು. ನಿಮ್ಮನ್ನು ಸಂಹರಿಸದೇ ಇರದು. ॥೩೬೫॥

ಹಿಮವತ್ಪರ್ವತಕ್ಕೆ ಹೋಗಿ ಪವಿತ್ರವಾದ ಗೌರೀಲಿಂಗವನ್ನು ಶಾಸ್ತ್ರೋಕ್ತವಾದ ರೀತಿಯಿಂದ ಅರ್ಚಿಸು. ಆದರಿಂದ ನಿಮ್ಮ ದುಃಖವು ದೂರವಾಗುವುದು. ॥೩೬೬॥

ಹಿಂದೆ ಒಂದಾನೊಂದು ಕಾಲದಲ್ಲಿ, ಗಂಧರ್ವರು ದೇವತೆಗಳಿಂದೊಡಗೂಡಿ, ಸೋಮಕಾಸುರನೆಂಬ ಅಸುರನನ್ನು ಸಂಹರಿಸುವುದರಲ್ಲಿ ಶಕ್ತನಾದ, ಮತ್ತು ಲೋಕಹಿತೈಷಿಯಾದ ನಿನ್ನನ್ನು (ವಿಷ್ಣುವನ್ನು) ಸಂತೋಷದಿಂದ ಸ್ತುತಿಸಿದರು. ॥೩೬೭॥

ಆಗ, ನಿನಗೆ ಸೋಮಕಾಸುರನನ್ನು ನಾಶಮಾಡಿದಂತಹ ಒಂದಾನೊಂದು ಅಹಂಕಾರವೃತ್ತಿಯು ಉಂಟಾಯಿತು. ಆ ಅಹಂಕಾರವು ದೇವತೆಗಳೆಲ್ಲರನ್ನೂ ಮೋಹಗೊಳಿಸಿತು. ॥೩೬೮॥

ಈರೀತಿಯಲ್ಲಿ ನಿನ್ನ ಗರ್ವದಿಂದ ಮೋಹಗೊಂಡ ಆ ದೇವತೆಗಳು ನಿನ್ನನ್ನು ಸ್ತುತಿಸಲು ಆಗ, ಕರ್ಣಕಠೋರವಾದ ಒಂದಾನೊಂದು ಅಶರೀರವಾಣಿಯು ಕೇಳಿಬಂತು. ॥೩೬೯॥

ಶ್ರುತ್ವಾ ತಾಂ ವಾಚಮನಘಾಂ ಸರ್ವೇಷಾಂ ಚ ಭಯಪ್ರದಾಂ ।
ಸರ್ವೇಽಪಿ ಕಂಪಮಾಪನ್ನಾಸ್ತ್ವಯಾ ಚ ಸಹ ಕೇಶವ ॥೩೭೦॥

ತ್ವಯಾ ನ ಸ್ಮರ್ಯತೇ ಕಿಂ ಸಾ ತದೋತ್ಪನ್ನಾಶರೀರವಾಕ್ ।
ಸಾ ಮಯಾ ವಕ್ಷ್ಯತೇ ವಿಷ್ಣೋ ಶೃಣು ತಾಂ ಯತ್ನತೋಽಧುನಾ ॥೩೭೧॥

ಸ್ತೂಯಮಾನಂ ತದಾ ವಿಷ್ಣುಂ ಭವಂತಂ ಸಾ ಶರೀರವಾಕ್ ।
ಸ್ತೋತವ್ಯೋ ನಾಯಮಿತ್ಯಾಹ ಸ್ತುತ್ಯೋಽಸ್ತ್ಯನ್ಯ ಇತಿ ಧ್ರುವಂ ॥೩೭೨॥

ಪಶ್ಯತೇಹಾತಿದೂರಸ್ಥಂ ಮಹಾಬಲಸಮಪ್ರಭಂ ।
ತಂ ಜಿತ್ವಾ ಕೇಶವಂ ದೇವಾಃ ಸ್ತುವೇಥಾತ್ರಾನ್ಯಥಾ ತು ನ ॥೩೭೩॥

ಇತಿ ಶ್ರುತ್ವಾ ವಚೋ ದೇವಾಃ ಸರ್ವೇ ವಿಸ್ಮಯಮಾಗತಾಃ ।
ತದಾ ತತ್ಪುರುಷಾಭ್ಯಾಶಂ ಪ್ರೇಷಯುಃ ಪಾವಕಂ ಭ್ರಮಾತ್ ॥೩೭೪॥

ಓ, ಕೇಶವನೇ! ಭಯಂಕರವಾದ ಆ ಅಶರೀರವಾಣಿಯನ್ನು ಕೇಳಿ, ಸರ್ವರೂ ಗಡಗಡನೆ ನಡುಗಿದರು. ನೀನೂ ಸಹ ನಡುಗಿದೆ. ॥೩೭೦॥

ಎಲೈ, ವಿಷ್ಣುವೇ! ನೀನು, ಆಗ ಉಂಟಾದ ಆ ಅಶರೀರವಾಣಿಯನ್ನು ಈಗ ಸ್ಮರಿಸಲಾರೆಯಾ! ಹಾಗಾದರೆ ನಾನು ಅದನ್ನು ನಿನಗೆ ಹೇಳುವೆನು, ಸಾವಧಾನದಿಂದ ಕೇಳು. ॥೩೭೧॥

ಅಶರೀರವಾಣಿಯು, ದೇವತೆಗಳಿಂದ ಸ್ತುತಿಸಲ್ಪಡುವ ನಿನ್ನನ್ನು ಲಕ್ಷೀಕರಿಸಿ ದೇವತೆಗಳನ್ನು ಕುರಿತು, ಹೀಗೆಂದಿತು! “ಈತನು ಸ್ತುತಿಗೆ ಯೋಗ್ಯನಲ್ಲ. ಸ್ತುತಿಗೆ ಯೋಗ್ಯನಾದ ಇನ್ನೊಬ್ಬ ದೇವನಿರುವನು. ॥೩೭೨॥

ಎಲೈ, ದೇವತೆಗಳಿರಾ, ಇದೋ ಇತ್ತ ನೋಡಿರಿ! ಇಲ್ಲಿಗೆ ಸ್ವಲ್ಪದೂರದಲ್ಲಿ, ಅತ್ಯಂತ ಬಲಶಾಲಿಯಾದ ಇನ್ನೊಬ್ಬ ದೇವತೆಯಿರುವನು. ಅವನನ್ನು ಜಯಿಸಿ ಬಳಿಕ ನೀವು ಈ ವಿಷ್ಣುವನ್ನು ಸ್ತುತಿಸಿರಿ. ಹಾಗಿಲ್ಲದಿದ್ದರೆ. ನೀವು ಇವನನ್ನು ಸ್ತುತಿಸಲಾರಿರಿ.” ॥೩೭೩॥

ಈರೀತಿಯಾದ ಅಶರೀರವಾಣಿಯನ್ನು ಕೇಳಿ, ಸಕಲ ದೇವತೆಗಳೂ ಆಶ್ಚರ್ಯಚಕಿತರಾದರು. ಆಗ ಅವರು ಭ್ರಾಂತರಾಗಿ, ಅಗ್ನಿಯನ್ನು ಬಲಶಾಲಿಯಾದ ಆ ಪುರುಷನ ಬಳಿಗೆ ಕಳುಹಿಸಿದರು. ॥೩೭೪॥

ತದಾ ತಮಾಹ ಕೋಽಸೀತಿ ಪುರುಷಂ ವಹ್ನಿಸನ್ನಿಭಂ ।
ಸ ತ್ವಂ ಕ ಇತಿ ಸಂಪ್ರಾಹ ಕಾ ಶಕ್ತಿರಿತಿ ಕೇಶವ ॥೩೭॥

ಪ್ರಾಹ ತಂ ವಹ್ನಿರುದ್ವೃತ್ತೋ ದಾಹಕೋಽಹಮಿತಿ ಧ್ರುವಂ ।
ತದಾ ತಮಾಹ ಪುರುಷಃ ತೃಣಂ ದಹ ದಹೇತಿ ಸಃ ॥೩೬॥

ತದಾ ದಗ್ಧುಂ ಸಮರ್ಥೋಽಪಿ ವಹ್ನಿರತ್ಯಂತಮುಜ್ವಲಃ ।
ತೃಣದಾಹೇಽಪ್ಯಶಕ್ತಃ ಸನ್ಲಜ್ಜಿತೋಽಭೂತ್ತದಾ ಹರೇ ॥೩೭॥

ತತೋ ನಿವೃತ್ತೋ ದೇವಾನಾಂ ಪ್ರವಿಷ್ಟೋ ಮಧ್ಯಮಾಶು ಸಃ ।
ಸ್ವವೃತ್ತಾಂತಮಶೇಷೇಣ ಜಗಾದ ನತಕಂಧರಃ ॥೩೮॥

ತತೋ ವಾಯುರ್ಗತಸ್ತತ್ರ ಸೋಽಪಿ ಲಜ್ಜಾವಶಂ ಗತಃ ।
ತತೋ ಯಮೋ ಗತಸ್ತತ್ರ ಸೋಽಪಿ ಲಜ್ಜಾವಶಂ ಗತಃ ॥೩೯॥

ಎಲೈ ವಿಷ್ಣುವೇ, ಕೇಳು! ಆಗ ಅಗ್ನಿಯು ಆ ಪುರುಷನ ಬಳಿಗೆ ಹೋಗಿ, ಅಗ್ನಿಯಂತೆ, ತೇಜಸ್ವಿಯಾದ ಅವನನ್ನು ಕುರಿತು ನೀನು ಯಾರಾಗಿರುವೆ? ಎಂದು ಪ್ರಶ್ನಿಸಿದನು. ಅದಕ್ಕೆ ಆ ಪುರುಷನು ಅಗ್ನಿಯನ್ನು ಕುರಿತು, ನೀನಾರು? ನಿನಗೆ ಎಷ್ಟು ಶಕ್ತಿಯಿರುವುದು? ಎಂದು ಕೇಳಿದನು. ॥೩೭॥

ಆಗ ಅಗ್ನಿಯು, ಅಹಂಕಾರದಿಂದ, ನಾನು ಯಾವ ವಸ್ತುವನ್ನಾದರೂ ದಹಿಸಲು ಶಕ್ತನು ಎಂದು ಹೇಳಿದನು. ಆಗ ಆ ಪುರುಷನು ಅಗ್ನಿಯನ್ನು ಕುರಿತು, ಹಾಗಾದರೆ ನೀನು, ಇಲ್ಲಿ ಕಾಣಿಸುತ್ತಿರುವ ಈ ಒಣಹುಲ್ಲನ್ನು ದಹಿಸು! ಎಂದನು. ॥೩೬॥

ಅಗ್ನಿಯು, ತೃಣರಾಶಿಯನ್ನು ದಹಿಸಲು ಶಕ್ತನಾಗಿದ್ದರೂ ಸಹ, ಆ ಕಾಲದಲ್ಲಿ ಆ ಹುಲ್ಲಿನ ಕಡ್ಡಿಯನ್ನು ದಹಿಸಲೂ ಸಹ ಅಶಕ್ತನಾಗಿ ನಾಚಿಕೆಗೊಂಡನು. ॥೩೭॥

ಬಳಿಕ, ಅವನು ಅಲ್ಲಿಂದ ಹಿಂದಿರುಗಿ, ದೇವತೆಗಳ ನಡುವೆ ಹೋಗಿ, ಕತ್ತನ್ನು ತಗ್ಗಿಸಿ, ಅಲ್ಲಿ ನಡೆದ ಸಕಲ ವೃತ್ತಾಂತವನ್ನೂ ಹೇಳಿದನು. ॥೩೮॥

ಬಳಿಕ, ವಾಯುವು ಆ ಪುರುಷನ ಬಳಿಗೆ ಹೋಗಿ, ಅಲ್ಲಿ ತನ್ನ ಶಕ್ತಿಯನ್ನು ಹೊರಗೆಡವಲಾರದೇ ಲಜ್ಜಿತನಾಗಿ ಹಿಂತಿರುಗಿದನು. ಆದಾದ ಮೇಲೆ ಯಮನು

ತತಸ್ತ್ವಯಾ ಗತಂ ತತ್ರ ತ್ವಯಾ ಲಜ್ಜಾ ಸಮಾಶ್ರಿತಾ ।
ತತಃ ಸರ್ವೇ ಗತಾ ದೇವಾಸ್ತೇಽಪಿ ಲಜ್ಜಾಸಮಾಶ್ರಿತಾಃ ॥೩೮೦॥

ತತಃ ಪರಂ ಪರಾವೃತ್ತಂ ಭವದ್ಭಿಃ ಶಂಭುಧಿಕ್ಕೃತೈಃ ।
ಸ ವೃತ್ತಾಂತಃ ಕಥಂ ವಿಷ್ಣೋ ವಿಸ್ಮೃತೋಽದ್ಯ ತ್ವಯಾ ವದ ॥೩೮೧॥

ಅತಃ ಸದಾಶಿವಃ ಶಕ್ತಃ ಸರ್ವಶಕ್ತಿಪ್ರಪೂರಕಃ ।
ತಚ್ಛಕ್ತಿಕೋಟಿಕೋಟ್ಯಂಶಾಚ್ಛಕ್ತಿರ್ಯುಷ್ಮಾಸ್ವವಸ್ಥಿತಾ ॥೩೮೨॥

॥ ಕಶ್ಯಪ ಉವಾಚ ॥

ಇತಿ ತದ್ವಚನಂ ಶ್ರುತ್ವಾ ವಿಷ್ಣುಬ್ರಹ್ಮಾದಯಃ ಸುರಾಃ ।
ಅತ್ರಾಗತ್ಯ ಮಹಾದೇವಂ ಪೂಜಯಾಮಾಸುರಾದರಾತ್ ॥೩೮೩॥

ಅಲ್ಲಿಗೆ ನಡೆತಂದನು. ಅವನೂ ಸಹ, ನಾಚಿಕೆಯಿಂದ ಹಿಂತಿರುಗಬೇಕಾಯಿತು. ||೩೭೯||

ಬಳಿಕ, ನೀನು ಆ ಪುರುಷನ ಬಳಿಗೆ ಹೋಗಿ, ಲಜ್ಜೆಯಿಂದ ಹಿಂತಿರುಗಿದೆ. ತರುವಾಯ ದೇವತೆಗಳೆಲ್ಲರೂ ಒಟ್ಟುಗೂಡಿ, ಆ ಪುರುಷಶ್ರೇಷ್ಠನ ಬಳಿಗೆ ಹೋಗಿ, ತಮ್ಮ ಶಕ್ತಿಯನ್ನು ಪ್ರದರ್ಶಿಸಲಾರದೇ ನಾಚಿಕೆಗೊಂಡರು. ||೩೮೦||

ಬಳಿಕ, ಶಿವನಿಂದ ತಿರಸ್ಕರಿಸಲ್ಪಟ್ಟ ನೀವೆಲ್ಲರು ಅಲ್ಲಿಂದ ಹಿಂದಿರುಗಿದಿರಿ. ವಿಷ್ಣುವೇ! ಈಗ ನೀನು ಆ ವೃತ್ತಾಂತವನ್ನು ಅದೇಕೆ ಮರೆತಿರುವೆ ಹೇಳು! ||೩೮೧||

ಆದುದರಿಂದ ಶಿವನೇ ಸಕಲ ಕಾರ್ಯಗಳಲ್ಲಿಯೂ ಶಕ್ತನು, ಅವನೇ ಸರ್ವ ಪ್ರಾಣಿಗಳಿಗೂ ಶಕ್ತಿಯನ್ನು ದಯಪಾಲಿಸುವವನಾಗಿರುವನು. ಅವನ ಶಕ್ತಿಯನ್ನು ಕೋಟಿ ಭಾಗಗಳಾಗಿ ವಿಂಗಡಿಸಿ, ಆ ಭಾಗಗಳಲ್ಲಿ ಪ್ರತಿಯೊಂದು ಭಾಗವನ್ನೂ ಮತ್ತೆ ಕೋಟಿ ಭಾಗಗಳಾಗಿ ವಿಂಗಡಿಸಿದರೆ, ಅದರಲ್ಲಿ, ಒಂದೇ ಒಂದು ಅಂಶದಷ್ಟು ಶಕ್ತಿಯು ನಿಮ್ಮಲ್ಲಿರುವುದು. ||೩೮೨||

ಅಗಸ್ತ್ಯನ ಆ ಮಾತನ್ನು ಕೇಳಿ, ವಿಷ್ಣು, ಬ್ರಹ್ಮ, ಮುಂತಾದ ದೇವತೆಗಳು, ಈ ಗೌರೀಲಿಂಗವಿರುವ ಸ್ಥಳಕ್ಕೆ ಬಂದು ಇಲ್ಲಿ ಪರಶಿವನನ್ನು ಭಕ್ತಿಯಿಂದ ಪೂಜಿಸಿದರು. ||೩೮೩||

ತತಸ್ತತ್ಪೂಜಯಾ ಪ್ರೀತಃ ಕರುಣಾನಿಧಿರೀಶ್ವರಃ ।
ಪ್ರತ್ಯಕ್ಷೋಽಭೂದುಮಾಕಾಂತೋ ನಾನಾಗಣಸಮನ್ವಿತಃ ॥೩೮೪॥

ತಂ ದೃಷ್ಟ್ವಾ ಶ್ರೀಮಹಾದೇವಮನಂತೇಂದುರವಿಪ್ರಭಂ ।
ಸ್ತೋತುಮಾರೇಭಿರೇ ಶಂಭುಂ ಬ್ರಹ್ಮವಿಷ್ಣ್ವಾದಯಃ ಸುರಾಃ ॥೩೮೫॥

॥ ದೇವಾ ಊಚುಃ ॥

ನಮೋ ನಮಸ್ತೇ ಭಗವನ್ಮಹೇಶ
ನಮೋ ನಮಸ್ತೇ ಭಗವನ್ದಯಾಬ್ಧೇ ।
ನಮೋ ನಮಸ್ತೇ ವೃಷಭೇಂದ್ರಕೇತೋ
ನಮೋ ನಮಸ್ತೇ ನಿಗಮೈಕಹೇತೋ ॥೩೮೬॥

ನಮೋ ನಮಸ್ತೇ ಭಗವನ್ನಿರೀಹ
ನಮೋ ನಮಸ್ತೇ ಭಗವಂಛರಣ್ಯ ।
ನಮೋ ನಮಸ್ತೇ ಭಗವನ್ವರೇಣ್ಯ
ನಮೋ ನಮಸ್ತೇ ಭಗವಂತ್ಸುರೇಶ ॥೩೮೭॥

ಬಳಿಕ, ದಯಾಮಯನಾದ ಪರಶಿವನು ಅವರ ಪೂಜೆಯಿಂದ ಸಂತುಷ್ಟನಾಗಿ ಅನೇಕ ಪ್ರಮಥಗಣಗಳಿಂದ ಕೂಡಿ, ಅವರೆದುರಿಗೆ ಕಾಣಿಸಿಕೊಂಡನು. ॥೩೮೪॥

ಅನೇಕ ಸೂರ್ಯಚಂದ್ರರಿಗೆ ಸಮಾನವಾದ ತೇಜಸ್ಸಿನಿಂದ ಸಮೇತನಾದ ಆ ಪರಮೇಶ್ವರನನ್ನು ನೋಡಿ, ಬ್ರಹ್ಮ, ವಿಷ್ಣು, ಮುಂತಾದ ದೇವತೆಗಳು ಅವನನ್ನು ಹೀಗೆಂದು ಸ್ತುತಿಸಲಾರಂಭಿಸಿದರು. ॥೩೮೫॥

ಓ ಮಹೇಶನೇ, ನಿನಗೆ ನಮಸ್ಕಾರವು. ಓ ದಯಾನಿಧೇ, ನಿನ್ನನ್ನು ವಂದಿಸುವೆನು. ವೃಷಭಧ್ವಜನೂ ವೇದಗಳಿಗೆ ಜನಕನೂ ಆದ ನಿನಗೆ ನಮಸ್ಕಾರವು. ॥೩೮೬॥

ಓ, ನಿಸ್ಪೃಹನೇ, ಅನಾಥರಕ್ಷಕನೇ, ದೇವತೆಗಳಿಗೆ ಶ್ರೇಷ್ಠನೇ! ದೇವೇಶನೇ! ನಿನಗೆ ನಮಸ್ಕಾರವು. ॥೩೮೭॥

ನಮೋ ನಮಸ್ತೇ ಸಕಲಾಂತರಂಗ
ನಮೋ ನಮಸ್ತೇ ಧೃತಸುಂದರಾಂಗ ।
ನಮೋ ನಮಸ್ತೇ ಹತಮನ್ಮಥಾಂಗ
ನಮೋ ನಮಸ್ತೇ ನಿಗಮಾನುಷಂಗ ॥೩೮೮॥

ನಮೋ ನಮಸ್ತೇ ಗಿರಿಜಾಸಮೇತ
ನಮೋ ನಮಸ್ತೇ ಗಣನಾಥವೀರ ।
ನಮೋ ನಮಸ್ತೇ ಜಿತಕಾಲಸೂತ
ನಮೋ ನಮಸ್ತೇ ಹತಸೃಷ್ಟಿಭೂತ ॥೩೮೯॥

ನಮೋ ನಮಸ್ತೇ ಸಗುಣಾಭಿರಾಮ
ನಮೋ ನಮಸ್ತೇ ಧೃತದಿವ್ಯಧಾಮ ।
ನಮೋ ನಮಸ್ತೇ ಧೃತಚಾರುಸೋಮ
ನಮೋ ನಮಸ್ತೇ ಪರಿಪೂರ್ಣಕಾಮ ॥೩೯೦॥

ನಮೋ ನಮಸ್ತೇ ಸುರರೂಪಮೂರ್ತಯೇ
ನಮೋ ನಮಸ್ತೇಽಮಿತಪುಣ್ಯಕೀರ್ತಯೇ ।

ದೇವ, ನೀನು ಸಕಲ ಪ್ರಾಣಿಗಳ ಅಂತಃಕರಣದ ರೂಪದಿಂದ ನೆಲಸಿರುವೆ. ಓ, ಸುಂದರಾಂಗನೇ! ಮನ್ಮಥಾರಿಯೇ! ವೇದಾಂತವೇದ್ಯನೇ ನಿನಗೆ ನಮಿಸುವೆನು. ॥೩೮೮॥

ಗಿರಿಜಾವಲ್ಲಭನೇ! ನಿನಗೆ ನಮಸ್ಕಾರವು, ಗಣನಾಥನೇ! ವೀರಾಗ್ರೇಸರನೇ! ಮೃತ್ಯುಂಜಯನೇ! ಪ್ರಲಯಕಾರಿಯೇ! ನಿನ್ನನ್ನು ವಂದಿಸುವೆನು. ॥೩೮೯॥

ನೀನು ಅನಂತ ಕಲ್ಯಾಣಗುಣಗಳಿಂದ ಕೂಡಿದ ಅನೇಕ ಶರೀರಗಳಿಂದ ಶೋಭಿಸುವೆ. ನಿನ್ನ ವಾಸಸ್ಥಳವು ದಿವ್ಯವಾಗಿರುವುದು. ಓ, ಚಂದ್ರಶೇಖರನೇ! ಆಪ್ತಕಾಮನೇ! ನಿನಗೆ ನಮಸ್ಕಾರವು. ॥೩೯೦॥

ದೇವ, ಶರೀರವನ್ನು ಧರಿಸಿರುವವನೇ! ಪುಣ್ಯಕೀರ್ತಿಗಳನ್ನು ಗಳಿಸಿರುವವನೇ, ಭಕ್ತಾನುಗ್ರಹಕ್ಕೋಸ್ಕರ, ಸಗುಣ ಶರೀರಗಳನ್ನು ಧರಿಸಿರುವವನೇ!

ನಮೋ ನಮಸ್ತೇ ಸಮವಾಪ್ತಮೂರ್ತಯೇ
ನಮೋ ನಮಸ್ತೇ ನಿಹಿತಾಖಿಲಾರ್ತಯೇ ॥೩೯೧॥

ನಮೋ ನಮಸ್ತೇ ನಿಹಿತಾರಿವೃತ್ತಯೇ
ನಮೋ ನಮಸ್ತೇ ಧೃತದಂತಿಕೃತ್ತಿನೇ ।
ನಮೋ ನಮಸ್ತೇ ಮುನಿಹೃದ್ಯವೃತ್ತಯೇ
ನಮೋ ನಮಸ್ತೇ ಸುರವಂದ್ಯರೂಪಿಣೇ ॥೩೯೨॥

ನಮೋ ನಮಸ್ತೇ ಸುಕೃತಪ್ರಿಯಾಯ
ನಮೋ ನಮಸ್ತೇ ಗಿರಿಜಾಧವಾಯ ।
ನಮೋ ನಮಸ್ತೇ ವೃಷಭಧ್ವಜಾಯ
ನಮೋ ನಮಸ್ತೇ ವೃಷವಾಹನಾಯ ॥೩೯೩॥

ನಮೋ ನಮಸ್ತೇ ಕಲುಷಾಪಹಾಯ
ನಮೋ ನಮಸ್ತೇಽಮಿತಕಾಮದಾಯ ।
ನಮೋ ನಮಸ್ತೇ ಪುರಸೂದನಾಯ
ನಮೋ ನಮಸ್ತೇ ವಿಬುಧೋತ್ತಮಾಯ ॥೩೯೪॥

ಭಕ್ತರ ಅಶೇಷ ಮನೋವ್ಯಾಧಿಗಳನ್ನು ಹೋಗಲಾಡಿಸಿದವನೇ, ನಿನಗೆ ನಮಸ್ಕಾರವು ॥೩೯೧॥

ದೇವ! ನೀನು ಶತ್ರುಗಳ ಕೆಟ್ಟ ಮನೋಭಾವನೆಗಳನ್ನು ನಿರ್ಮೂಲಗೊಳಿಸುವೆ. ಓ, ಗಜಚರ್ಮಧಾರಿಯೇ! ನಿನಗೆ ನಮಸ್ಕಾರವು. ಪರಮ ಕಾರುಣಿಕನಾದ ನೀನು ಸದಾ ಮುನಿಗಳ, ಅಂತಃಕರಣದಲ್ಲಿ ನೆಲಸಿರುವೆ. ನಿನ್ನ ಮಂಗಳರೂಪವನ್ನು ದೇವತೆಗಳು ನೋಡಿ ನಮಸ್ಕರಿಸುವರು. ಅಂತಹ ನಿನ್ನನ್ನು ವಂದಿಸುವೆನು.॥೩೯೨॥

ಓ, ಪುಣ್ಯಕರ್ಮಪ್ರಿಯನೇ! ಉಮಾರಮಣನೇ! ವೃಷಭಧ್ವಜನೇ! ವೃಷಭವಾಹನನೇ, ನಿನ್ನನ್ನು ವಂದಿಸುವೆನು. ॥೩೯೩॥

ಅಂತಃಕರಣದ ಕಾಲುಷ್ಯವನ್ನು, ಹೋಗಲಾಡಿಸುವವನೇ! ಅಮಿತವಾದ ಇಷ್ಟಾರ್ಥಗಳನ್ನು ದಯಪಾಲಿಸುವವನೇ! ಪುರನೆಂಬ ಅಸುರನನ್ನು ಸಂಹರಿಸಿದವನೇ! ದೇವತೆಗಳಲ್ಲಿ ಶ್ರೇಷ್ಠನೇ, ನಿನಗೆ ನಮಸ್ಕಾರವು. ॥೩೯೪॥

ನಮೋ ನಮಸ್ತೇಽಮಿತಭೂಷಣಾಯ
ನಮೋ ನಮಸ್ತೇಽಖಿಲಕಾರಣಾಯ ।
ನಮೋ ನಮಸ್ತೇಽಸಮವೀಕ್ಷಣಾಯ
ನಮೋ ನಮಸ್ತೇ ವಿಷಮೇಕ್ಷಣಾಯ ॥೩೯೫॥

ನಮೋ ನಮಸ್ತೇ ಕರುಣಾಕರಾಯ
ನಮೋ ನಮಸ್ತೇ ಕಲಿನಾಶನಾಯ ।
ನಮೋ ನಮಸ್ತೇ ಸಕಲೌಷಧಾಯ
ನಮೋ ನಮಸ್ತೇ ಸಕಲಾಮೃತಾಯ ॥೩೯೬॥

ನಮೋ ನಮಸ್ತೇಽಖಿಲಮುಕ್ತಿದಾಯ
ನಮೋ ನಮಸ್ತೇಽಖಿಲಸಂಸ್ತುತಾಯ ।
ನಮೋ ನಮಸ್ತೇಽಖಿಲಪೂಜಿತಾಯ
ನಮೋ ನಮಸ್ತೇಽಖಿಲರಕ್ಷಕಾಯ ॥೩೯೭॥

॥ ಸೂತ ಉವಾಚ ॥

ಏವಂ ಸ್ತುತೋ ಮಹಾದೇವೋ ವಿಷ್ಣುಬ್ರಹ್ಮಾದಿಭಿಃ ಸುರೈಃ ।
ಕಾಲಕೂಟಭಯತ್ರಸ್ತಾನ್ಸುರಾನಾಹ ಸುರಾರ್ಚಿತಃ ॥೩೯೮॥

ಅನೇಕ ಆಭರಣಗಳನ್ನು ಧರಿಸಿರುವವನೇ, ನಿಖಿಲವಸ್ತುಗಳಿಗೂ ಜನಕನೇ, ಮುಕ್ಕಣ್ಣನೇ, ವಿಷಮಸಂಖ್ಯೆಯ ನೇತ್ರಗಳನ್ನು ಧರಿಸಿದವನೇ, ನಿನ್ನನ್ನು ವಂದಿಸುವೆನು. ॥೩೯೫॥

ಕರುಣಾಕರನೇ, ಕಲಿನಾಶಕನೇ, ಸಕಲ ರೋಗಗಳಿಗೂ ದಿವ್ಯೌಷಧದಂತಿರುವವನೇ, ಸಮಸ್ತ ಪ್ರಾಣಿಗಳನ್ನೂ ಅಮೃತದಂತೆ ಆನಂದಗೊಳಿಸುವವನೇ, ನಿನ್ನನ್ನು ವಂದಿಸುವೆನು. ॥೩೯೬॥

ನಿಖಿಲ ಜನರಿಗೂ ಮೋಕ್ಷವನ್ನು ದಯಪಾಲಿಸುವವನೇ, ನಿಖಿಲರಿಗೂ ಸ್ತುತ್ಯನೇ, ಸಮಸ್ತ ಪ್ರಾಣಿಗಳಿಂದಲೂ ಪೂಜಿಸಲ್ಪಡುವವನೇ, ಸಕಲ ರಕ್ಷಕನೇ, ನಿನಗೆ ನಮಸ್ಕಾರವು.'' ॥೩೯೭॥

ಬ್ರಹ್ಮಾದಿದೇವತೆಗಳು ಹೀಗೆಂದು ಸ್ತುತಿಸಲು ಆಗ ಶಿವನು ಕಾಲಕೂಟದ ಭಯದಿಂದ ನಡುಗುತ್ತಿದ್ದ ಆ ದೇವತೆಗಳನ್ನು ಕುರಿತು ಹೀಗೆಂದನು. ॥೩೯೮॥

|| ಮಹೇಶ್ವರ ಉವಾಚ ||

ಭವತಾಂ ಭಯಮೇತಸ್ಮಾತ್ಕಾಲಕೂಟಾತ್ಸಮುದ್ಭೃತಂ ।
ಅತಃ ಪರಂ ಭಯಂ ನಾಸ್ಮಾತ್ಕಾಲಕೂಟಾದ್ಭವಿಷ್ಯತಿ ||೩೯೯||

ತಾವದ್ಭಯಂ ಪ್ರಾಪ್ನುವಂತಿ ಸರ್ವೇಽಪಿ ಭವದಾದಯಃ ।
ಯಾವನ್ನ ಮಾಮರ್ಚಯಂತಿ ಮೋಹಗರ್ತೇ ನಿಪಾತಿತಾಃ ||೪೦೦||

ಸರ್ವೇ ಮದವಮಾನೇನ ಭವಾಬ್ಧೌ ನಿಪತಂತ್ಯಧಃ ।
ಮತ್ಸನ್ಮಾನೇನ ಸರ್ವೇಽಪಿ ನಿವರ್ತಂತೇ ಭವಾಂಬುಧೇಃ ||೪೦೧||

ಯೋ ಮಾಮನ್ಯಭಿಚಾರೇಣ ಸದಾ ಸಂಪೂಜಯಿಷ್ಯತಿ ।
ಸ ದುಸ್ತರಾಣಿ ದುಃಖಾನಿ ತೀರ್ತ್ವಾ ಸುಖಮವಾಪ್ನುಯಾತ್ ||೪೦೨||

ಮದ್ಭಕ್ತಾ ನ ವಿನಶ್ಯಂತಿ ಪ್ರಲಯೇಽಪಿ ತತಸ್ತದಾ ।
ಮೋದಮಾನಾಃ ಸಂವಸಂತಿ ಮದ್ಭಕ್ತಾ ಮತ್ಪರಾಯಣಾಃ ||೪೦೩||

"ಎಲೈ ದೇವತೆಗಳೇ, ಇದುವರೆಗೆ ನಿಮಗೆ ಈ ಕಾಲಕೂಟದ ದೆಸೆಯಿಂದ ಭಯವು ಉಂಟಾಗಿದ್ದಿತು. ಇನ್ನು ಮುಂದೆ ನಿಮಗೆ ಈ ಕಾಲಕೂಟದ ದೆಸೆಯಿಂದ ಭಯವು ಸಂಭವಿಸುವುದಿಲ್ಲ. ||೩೯೯||

ನಿಮ್ಮಿಂದ ಮೊದಲುಗೊಂಡು ಸರ್ವಪ್ರಾಣಿಗಳೂ ಸಹ ಎದುವರೆಗೆ ಮೋಹವೆಂಬ ಹೊಂಡದಲ್ಲಿ ಬಿದ್ದು ನನ್ನನ್ನು ಅರ್ಚಿಸುವುದಿಲ್ಲವೋ, ಆದುವರೆಗೆ ಅವರಿಗೆ ಭಯವು ತಪ್ಪಿದುದಲ್ಲ. ||೪೦೦||

ಸಕಲ ಜನರೂ ನನ್ನನ್ನು ತಿರಸ್ಕರಿಸುವುದರಿಂದ ಸಂಸಾರಸಾಗರದಲ್ಲಿ ಮುಳುಗುವರು. ನನ್ನನ್ನು ಗೌರವಿಸುವುದರಿಂದ ಸಂಸಾರಸಾಗರದಿಂದ ಪಾರಾಗುವರು. ||೪೦೧||

ಯಾವನು, ಅನನ್ಯಮನಸ್ಸಿನಿಂದ ಅನವರತವೂ ನನ್ನನ್ನೇ ಪೂಜಿಸುವನೋ, ಅವನು ಅನಿವಾರ್ಯವಾದ ದುಃಖಗಳನ್ನೂ ಸಹ ತೊರೆದು, ಸುಖಿಯಾಗುವನು. ||೪೦೨||

ನನ್ನ ಭಕ್ತರಿಗೆ ಪ್ರಲಯಕಾಲದಲ್ಲಿಯೂ ಸಹ ನಾಶವಿರುವುದಿಲ್ಲ. ಪ್ರಲಯಕಾಲದಲ್ಲಿ ಆ ನನ್ನ ಭಕ್ತರು ನನ್ನನ್ನೇ ಧ್ಯಾನಿಸುವುದರಲ್ಲಿ ಮಗ್ನರಾಗಿ ಸಂತೋಷದಿಂದ ಇರುವರು. ||೪೦೩||

ನಶ್ಯಂತಿ ಪರ್ವತಾಃ ಸರ್ವೇ ಸಮುದ್ರಾಶ್ಚ ಸಪನ್ನಗಾಃ ।
ನಶ್ಯಂತಿ ಮಹದಾದ್ಯಾಶ್ಚ ಮದ್ಭಕ್ತೋ ನ ವಿನಶ್ಯತಿ ॥೪೦೪॥

ಸದಾ ವಸಂತಿ ಮದ್ಭಕ್ತಾ ನಿತ್ಯಾನಂದಾ ನಿರಾಮಯಾಃ ।
ಅತಸ್ತೇ ನ ವಿನಶ್ಯಂತಿ ಪ್ರಲಯೇಽಪಿ ಶಿವಪ್ರಿಯಾಃ ॥೪೦೫॥

ಏವಮುಕ್ತ್ವಾ ಸ್ಥಿತೇ ಶಂಭೌ ಕಾಲಕೂಟೋಽತಿಭೀಷಣಃ ।
ದಿಗಂತರಾಣಿ ಸಂದಗ್ಧ್ವಾ ಸುರಾಭ್ಯಾಶಮುಪಾಯಯುಃ ॥೪೦೬॥

ವಿಷ್ಣುಬ್ರಹ್ಮಾದಯೋ ದೃಷ್ಟ್ವಾ ಕಾಲಕೂಟಮುಪಾಗತಂ ।
ತತ್ಪ್ರಭಾತಪ್ತಸರ್ವಾಂಗಾಃ ಕ್ರೋಶಂತಃ ಪತಿತಾ ಭುವಿ ॥೪೦೭॥

ಪ್ರಲಯಕಾಲದಲ್ಲಿ, ಪರ್ವತಗಳು, ಸಮುದ್ರಗಳು, ಮತ್ತು ಸರ್ಪಗಳು, ಇವೆಲ್ಲವೂ ನಾಶವನ್ನೈದುವುವು. ಇಷ್ಟೇಕೆ, ಆದಿಜೀವನೆಂದೆನಿಸಿಕೊಂಡಿರುವ ಹಿರಣ್ಯಗರ್ಭನಿಂದ ಮೊದಲುಗೊಂಡು, ಸಕಲ ಜೀವಕೋಟಿಗಳೂ ಪ್ರಲಯಕಾಲದಲ್ಲಿ ನಾಶಹೊಂದುವುವು. ಆದರೆ ನನ್ನ ಭಕ್ತರಾದರೋ, ಎಂದಿಗೂ ನಾಶವನ್ನೈದಲಾರರು. ॥೪೦೪॥

ನನ್ನ ಭಕ್ತರು ಅನವರತವೂ, ಅಖಂಡಾನುಭವದಲ್ಲಿ ಮಗ್ನರೂ, ತಾಪತ್ರಯರಹಿತರೂ ಆಗಿ ಸುಖದಿಂದ ವಾಸಿಸುವರು. ಆದುದರಿಂದ ಈಶ್ವರನ ಪ್ರೀತಿಗೆ ಪಾತ್ರರಾದ ಅವರು ಪ್ರಲಯಕಾಲದಲ್ಲಿಯೂ, ಸಹ ನಾಶವನ್ನು ಹೊಂದುವುದಿಲ್ಲ.'' ॥೪೦೫॥

ಶಿವನು ಹೀಗೆಂದು ಹೇಳಿ ಸುಮ್ಮನಾಗಲು, ಆಗ ಭಯಂಕರವಾದ ಆ ಕಾಲಕೂಟವಿಷವು ದಿಗಂತರಗಳನ್ನು ದಹಿಸಿ, ಬಳಿಕ ದೇವತೆಗಳ ಸಮೀಪಕ್ಕೆ ಬಂದಿತು. ॥೪೦೬॥

ಆ ಕಾಲಕೂಟವು ತಮ್ಮ ಸಮೀಪಕ್ಕೆ ಬಂದುದನ್ನು ನೋಡಿ, ವಿಷ್ಣು, ಬ್ರಹ್ಮ ಮೊದಲಾದ ದೇವತೆಗಳು, ಆ ವಿಷದ ಜ್ವಾಲೆಯಿಂದ ಸಕಲ ಅವಯವಗಳೂ ದಹಿಸಲ್ಪಟ್ಟವರಾಗಿ, ಕೂಗಾಡುತ್ತಾ ಕೆಳಕ್ಕೆ ಬಿದ್ದರು. ॥೪೦೭॥

ಕಾಲಕೂಟಪ್ರಭಾತಪ್ತಾನ್ವಿಷ್ಣುಬ್ರಹ್ಮಾದಿಕಾನ್ಸುರಾನ್ ।
ದದರ್ಶ ಗಿರಿಜಾಕಾಂತಃ ಸಗಣೋ ಗಿರಿಜಾಪಿ ತಾನ್ ॥೪೦೮॥

ತತಃ ಪರಮುಮಾ ಪ್ರಾಹ ಮಹಾದೇವಂ ಕೃಪಾನಿಧಿಂ ।
ವಿನಯಾವನತಾ ಭೂತ್ವಾ ಕೃತಾಂಜಲಿಪುಟಾ ಮುನೇ ॥೪೦೯॥

॥ ಶ್ರೀ ಪಾರ್ವತ್ಯುವಾಚ ॥

ದೇವ ದೇವ ಮಹಾದೇವ ಕೃಪಾಸಾಗರ ಶಂಕರ ।
ಸಂಹರೈನಂ ಕಾಲಕೂಟಂ ಪ್ರಲಯಾನಲಸನ್ನಿಭಂ ॥೪೧೦॥

ಅತಿದೂರೇ ಸ್ಥಿತಂ ಚೈವಂ ಕಾಲಕೂಟಂ ಮಹೌಜಸಂ ।
ದೃಷ್ಟ್ವೈವ ಪತಿತಾ ಭೂಮೌ ವಿಷ್ಣುಬ್ರಹ್ಮಾದಯಃ ಸುರಾಃ ॥೪೧೧॥

ಅಯಂ ಯದಿ ಸಮಾಯಾತಿ ವಿಷ್ಣ್ವಾದಿಸುರಸಂನಿಧಿಂ ।
ತದಾ ದಗ್ಧಾ ಭವಿಷ್ಯಂತಿ ವಿಷ್ಣುಬ್ರಹ್ಮಾದಯಃ ಸುರಾಃ ॥೪೧೨॥

ನಾಯಂ ಪ್ರಲಯಕಾಲೋಽಪಿ ವಿಷ್ಣುಬ್ರಹ್ಮಾದಿನಾಶಕಃ ।
ಅತಃ ಪಾಲಯ ದೇವೇಶ ವಿಷ್ಣ್ವಾದೀನ್ಭುವಿ ಮೂರ್ಛಿತಾನ್ ॥೪೧೩॥

ಈರೀತಿಯಲ್ಲಿ, ಕಾಲಕೂಟದ ವಿಷದ ಪ್ರಭೆಯಿಂದ ದಹಿಸಲ್ಪಟ್ಟ, ಆ ಬ್ರಹ್ಮಾದಿ ದೇವತೆಗಳನ್ನು ಪ್ರಮಥಗಣಗಳಿಂದೊಡಗೂಡಿದ ಶಿವನು ನೋಡಿದನು. ಗಿರಿಜೆಯು ಸಹ ಇದನ್ನು ನೋಡಿದಳು. ॥೪೦೮॥

ಬಳಿಕ, ಗಿರಿಜೆಯು, ವಿನಯದಿಂದ ಕತ್ತನ್ನು ತಗ್ಗಿಸಿ, ಅಂಜಲಿಬದ್ಧಳಾಗಿ, ದಯಾನಿಧಿಯಾದ ಶಿವನನ್ನು ಕುರಿತು ಹೀಗೆಂದಳು. ॥೪೦೯॥

"ಓ ದೇವೇಶನೇ, ಮಹಾದೇವನೇ, ದಯಾಸಾಗರನೇ, ಶಂಕರನೇ, ಪ್ರಲಯಾಗ್ನಿಗೆ ಸದೃಶವಾಗಿರುವ ಈ ಕಾಲಕೂಟ ವಿಷವನ್ನು ಸಂಹರಿಸು. ॥೪೧೦॥

ಬ್ರಹ್ಮಾದಿ ದೇವತೆಗಳು ತಮಗೆ ಅತ್ಯಂತ ದೂರದಲ್ಲಿರುವ, ಮಹಾತೇಜಸ್ವಿಯಾದ ಈ ಕಾಲಕೂಟವನ್ನು ದೂರದಿಂದ ನೋಡಿಯೇ, ಭೂಮಿಯಲ್ಲಿ ಬಿದ್ದಿರುವರು. ॥೪೧೧॥

ಈ ಕಾಲಕೂಟವು ಬ್ರಹ್ಮಾದಿದೇವತೆಗಳ ಬಳಿಗೆ ಬಂದುದೇ ಆದರೆ ಆಗ

ಮಹೇಶ ಕಾಲಕೂಟೋಽಯಂ ಭೂಭೂಧರವಿನಾಶಕಃ ।
ಯವಸಾದೀನಿ ವಿಷ್ಣ್ವಾದೀನ್ಸಂದಹಿಷ್ಯತಿ ಸತ್ವರಂ ॥೪೧೪॥

ಅಭಕ್ಷ್ಯಂ ತಸ್ಯ ನಾಸ್ತ್ಯೇವ ಕಾಲಕೂಟಸ್ಯ ಶಂಕರ ।
ದೃಶ್ಯತೇ ಕಾಲಕೂಟೋಽಯಂ ಜಗದ್ಭಕ್ಷಕ ಇತ್ಯಪಿ ॥೪೧೫॥

ವಿನಿವಾರಣಮೇತಸ್ಯ ತ್ವದನ್ಯೇನ ಮಹೇಶ್ವರ ।
ಕರ್ತುಂ ನ ಶಕ್ಯತೇ ನೂನಂ ಅತ ಏನಂ ನಿವಾರಯ ॥೪೧೬॥

ಶೂಲಂ ಪ್ರಯೋಜಯಾಶ್ವೇವ ಕಾಲಕೂಟೇ ಮಹೇಶ್ವರ ।
ಅನ್ಯಥಾ ಶೀಘ್ರಮೇತಸ್ಯ ಶಕ್ಯಂ ನೈವ ನಿವಾರಣಂ ॥೪೧೭॥

॥ ಕಶ್ಯಪ ಉವಾಚ ॥

ಇತ್ಯುಕ್ತಃ ಪಾರ್ವತೀನಾಥಃ ಪಾರ್ವತ್ಯಾ ಕರುಣಾನಿಧಿಃ ।
ಶಿವಾಮುವಾಚ ಸರ್ವಜ್ಞಃ ಸ್ಮಿತಪೂರ್ವಂ ತದಾ ವಚಃ ॥೪೧೮॥

ದೇವತೆಗಳು ದಹಿಸಿಹೋಗುವರು. ಇದಾದರೋ ವಿಷ್ಣು, ಬ್ರಹ್ಮಾದಿಗಳನ್ನು ಸಂಹರಿಸುವ ಪ್ರಲಯಕಾಲ ಆಗಿರುವುದಿಲ್ಲ. ||೪೧೨-೪೧೩||

ಓ, ಮಹೇಶನೇ! ಭೂಮಿಯನ್ನೂ ಮತ್ತು ಪರ್ವತಗಳನ್ನೂ ನಾಶಮಾಡುವ ಈ ಕಾಲಕೂಟವು, ಒಣ ಹುಲ್ಲಿನ ಕಡ್ಡಿಯೋಪಾದಿಯಲ್ಲಿರುವ, ವಿಷ್ಣ್ವಾದಿದೇವತೆಗಳನ್ನು ಕ್ಷಣಕಾಲದಲ್ಲಿ ದಹಿಸುವುದು. ||೪೧೪||

ಓ, ಶಿವನೇ! ಆ ಕಾಲಕೂಟನಿಗೆ ಅಭಕ್ಷ್ಯವಾದ ಒಂದು ವಸ್ತುವೂ ಇರುವುದಿಲ್ಲ. ಈ ಕಾಲಕೂಟವು, ಜಗತ್ತನ್ನೂ ಸಹ ಭಕ್ಷಿಸುವಂತೆ ತೋರುವುದು. ||೪೧೫||

ಮಹೇಶ್ವರ, ಉಗ್ರವಾದ ಈ ಕಾಲಕೂಟವನ್ನು, ತಡೆಗಟ್ಟಲು, ನಿನ್ನನ್ನು ಬಿಟ್ಟು, ಇನ್ನಾರೂ ಸಮರ್ಥರಾಗಿರುವುದಿಲ್ಲ. ಆದುದರಿಂದ ಇದನ್ನು ಹೋಗಲಾಡಿಸು. ||೪೧೬||

ಈ ಕಾಲಕೂಟದ ಮೇಲೆ ಶೀಘ್ರವಾಗಿ ।ನಿನ್ನ ಶೂಲವನ್ನು ಪ್ರಯೋಗಿಸು. ಹಾಗಿಲ್ಲದಿದ್ದರೆ, ಇದನ್ನು ಶೀಘ್ರವಾಗಿ ತಡೆಗಟ್ಟಲು ಸಾಧ್ಯವೇ ಇಲ್ಲ.'' ||೪೧೭||

ಪಾರ್ವತಿಯು ತನ್ನ ವಲ್ಲಭನೊಡನೆ ಹೀಗೆನ್ನಲು ಆಗ, ಸರ್ವಜ್ಞನೂ, ದಯಾನಿಧಿಯೂ ಆದ ಶಿವನು, ಅವಳನ್ನು ನೋಡಿ, ಮಂದಹಾಸದಿಂದ ಹೀಗೆ ನುಡಿದನು. ||೪೧೮||

ಶಿವೇ ಶೂಲೇನ ಸಹಸಾ ಕಾಲಕೂಟನಿವಾರಣಂ ।
ಕರ್ತವ್ಯಮಥವಾ ತಸ್ಯ ವಿನಾಶಂ ಕರವಾಣ್ಯಹಂ ॥೪೧೯॥

ಉತ ಕಸ್ತೂರಿಕಾವತ್ತಂ ಕಂಠೇ ವಾ ಧಾರಯಾಮ್ಯಹಂ ।
ಅಥವೋಲ್ಕಾವದಧುನಾ ಕರವಾಣಿ ವದ ಪ್ರಿಯೇ ॥೪೨೦॥

ಬ್ರಹ್ಮಾಂಡಮಂಡಲಂ ಪ್ರಾಪ್ಯ ಕಾಲಕೂಟೋಽಯಮಾಗತಃ ।
ಏತನ್ನಿವಾರಣಂ ಶಂಭೋ ಕಥಂ ವಾದ್ಯ ಭವಿಷ್ಯತಿ ॥೪೨೧॥

ಏತಾನ್ದಗ್ಧ್ವಾ ಸುರಾನ್ಸರ್ವಾನ್ಬ್ರಹ್ಮಾಂಡಮಪಿ ಸತ್ವರಂ ।
ದಹಿಷ್ಯತ್ಯಧುನೈವೇಶ ಕಾಲಕೂಟೋಽಯಮುದ್ಭೃತಃ ॥೪೨೨॥

ಯೇನ ಕೇನಾಪಿ ರೂಪೇಣ ಕೃತಂ ಚೇದಸ್ಯ ವಾರಣಂ ।
ತದಾ ಲೋಕಾ ಭವಿಷ್ಯಂತಿ ಸರ್ವೇಽಪಿ ಸುಖಿನಃ ಶಿವ ॥೪೨೩॥

" ಗಿರಿಜೆ! ಈ ಕಾಲಕೂಟವನ್ನು ಆದಷ್ಟು ಶೀಘ್ರವಾಗಿ ಶೂಲದಿಂದ ತಡೆಗಟ್ಟಲೆ? ಅಥವಾ. ನಾನು ಅದನ್ನು ಸಂಹರಿಸಲೇ? ॥೪೧೯॥

ಪ್ರಿಯೇ! ಇದನ್ನು, ಕಸ್ತೂರೀ ಲೇಪನದೋಪಾದಿಯಲ್ಲಿ ನನ್ನ ಕಂಠದಲ್ಲಿ ಧರಿಸಲೇ? ಅಥವಾ ಇದನ್ನು ಕಾಡುಕಿಚ್ಚಾಗಿ ಪರಿಣಮಿಸುವಂತೆ ಮಾಡಲೇ? ಅದನ್ನು ಹೇಳು." ॥೪೨೦॥

ಆಗ ಪಾರ್ವತಿಯು ಹೀಗೆಂದಳು.—ಓ ಶಂಭುವೇ! ಈ ಕಾಲಕೂಟವಾದರೋ ಬ್ರಹ್ಮಾಂಡವನ್ನೆಲ್ಲಾ ವ್ಯಾಪಿಸಿ, ಇಲ್ಲಿಗೆ ಬಂದಿರುವುದು. ಹೀಗಿರುತ್ತಿರಲು. ಇದನ್ನು ತಡೆಗಟ್ಟುವ ಬಗೆ ಹೇಗೆ? ॥೪೨೧॥

ಜಗನ್ನಾಥನೇ! ಈ ಮಹಾಕಾಲಕೂಟವು, ಇದೀಗಲೇ, ಈ ದೇವತೆಗಳೆಲ್ಲರನ್ನೂ ಕ್ಷಣಕಾಲದಲ್ಲಿ ದಹಿಸಿ, ಬಳಿಕ ಈ ಬ್ರಹ್ಮಾಂಡ ಮಂಡಲವನ್ನೇ ದಹಿಸುವುದೋ ಏನೋ! ॥೪೨೨॥

ಇದನ್ನು ಯಾವ ವಿಧದಿಂದಲಾದರೂ ತಡೆಗಟ್ಟಿದುದೇ ಆದರೆ ಆಗ, ಸಕಲ ಲೋಕಗಳಲ್ಲಿಯೂ ಸುಖವು ನೆಲಸುವುದು. ॥೪೨೩॥

ಇತ್ಯುಕ್ತಃ ಶ್ರೀಮಹಾದೇವಃ ಕಾಲಕೂಟಂ ದುರಾಸದಂ ।
ದಧಾರ ಲೀಲಯಾ ಕಂಠೇ ಕಸ್ತೂರೀಕಣವನ್ಮುನೇ ॥೪೨೪॥

ತತಃ ಸಮುತ್ಥಿತಾಃ ಸರ್ವೇ ವಿಷ್ಣುಬ್ರಹ್ಮಾದಯಃ ಸುರಾಃ ।
ಪುಷ್ಪವೃಷ್ಟಿರಭೂದ್ದಿವ್ಯಾ ದುಂದುಭಿಧ್ವನಿಪೂರ್ವಕಂ ॥೪೨೫॥

ನಿವೃತ್ತಮೂರ್ಛಾ ವಿಷ್ಣ್ವಾದ್ಯಾಃ ಸುರಾಸ್ತೇ ಶಿವಪಾದುಕೇ ।
ಪ್ರಣಮ್ಯ ತುಷ್ಟುವುರ್ಭೂಯಃ ಕೃತಾಂಜಲಿಪುಟಾ ಮುನೇ ॥೪೨೬॥

ನಮಃ ಶಿವಸ್ವರೂಪಾಯ ಶಿವಾಯಾಮಿತತೇಜಸೇ ।
ಸಚ್ಚಿದಾನಂದರೂಪಾಯ ನಮಸ್ತೇ ಗಿರಿಜಾಪತೇ ॥೪೨೭॥

ನಮಸ್ತೇ ದೇವದೇವಾಯ ಸೋಮಸೂರ್ಯಾಗ್ನಿಚಕ್ಷುಷೇ ।
ಸರ್ವಾಧಿಕಾಯ ಶರ್ವಾಯ ನಮಸ್ತೇ ಸುಖರೂಪಿಣೇ ॥೪೨೮॥

ಎಲೈ, ಮುನಿಯೇ ! ದೇವಿಯು ಹೀಗೆನ್ನಲು, ಆಗ ಶಿವನು, ಅದ್ಭುತವಾದ ಆ ಕಾಲಕೂಟವನ್ನು, ಕಸ್ತೂರಿಯ ಕಣದಂತೆ ಲೀಲಾಜಾಲವಾಗಿ ತನ್ನ ಕಂಠದಲ್ಲಿ ಧರಿಸಿದನು. ॥೪೨೪॥

ಬಳಿಕ, ಮೂರ್ಛೆಗೊಂಡು ಕೆಳಕ್ಕೆ ಬಿದ್ದಿದ್ದ ವಿಷ್ಣು ಬ್ರಹ್ಮಾದಿ ದೇವತೆಗಳೆಲ್ಲರೂ, ಎಚ್ಚೆತ್ತರು. ದೇವಲೋಕದಿಂದ ಪುಷ್ಪವೃಷ್ಟಿಯುಂಟಾಯಿತು. ದೇವದುಂದುಭಿಗಳು ಮೊಳಗಿದವು. ॥೪೨೫॥

ಮೂರ್ಛೆಯಿಂದ ಎಚ್ಚೆತ್ತ ವಿಷ್ಣ್ವಾದಿದೇವತೆಗಳು, ಈಶ್ವರನ ಪಾದಕ್ಕೆ ನಮಸ್ಕರಿಸಿ, ಅಂಜಲಿಬದ್ಧರಾಗಿ ಶಿವನನ್ನು ಹೀಗೆಂದು ಸ್ತುತಿಸಿದರು. ॥೪೨೬॥

" ಶಿವನೇ, ಮಂಗಳಮೂರ್ತಿಯೂ, ಅತ್ಯಂತ ತೇಜಸ್ವಿಯೂ, ಸಚ್ಚಿದಾನಂದ ಸ್ವರೂಪನೂ ಉಮಾಕಾಂತನೂ ಆದ ನಿನಗೆ ನಮಸ್ಕರಿಸುವೆವು. ॥೪೨೭॥

ನೀನು ಇಂದ್ರಾದಿದೇವತೆಗಳಿಗೂ ದೇವನಾಗಿರುವೆ. ಚಂದ್ರ, ಸೂರ್ಯ, ಮತ್ತು ಅಗ್ನಿ, ಇವೇ ನಿನ್ನ ಕಣ್ಣುಗಳಾಗಿರುವುವು. ಸರ್ವಶ್ರೇಷ್ಠನೂ, ಸುಖದಾಯಕನೂ ಸುಖಸ್ವರೂಪನೂ ಆದ ನಿನಗೆ ನಮಸ್ಕಾರವು. ॥೪೨೮॥

ನಮಸ್ತೇ ಸರ್ವವೇದ್ಯಾಯ ವೇದವೇದ್ಯಾಯ ಶಂಭವೇ ।
ನಮಸ್ತೇ ಶೂಲರೂಪಾಯ ಮಹಾದೇವಾಯ ತೇ ನಮಃ ॥೪೨೯॥

ನಿಷ್ಕಲಾಯ ನಿರೀಹಾಯ ಸರ್ವಪ್ರತ್ಯಯಸಾಕ್ಷಿಣೇ ।
ನಮಸ್ತೇ ನಿರವದ್ಯಾಯ ನಮಸ್ತೇ ಪ್ರತ್ಯಗಾತ್ಮನೇ ॥೪೩೦॥

ನಮಸ್ತೇ ಗುಣಕೂಟಾಯ ನಮಸ್ತೇ ಗುಣಮೂರ್ತಯೇ ।
ನಮಸ್ತೇ ಗುಣಸಂಗಾಯ ಸಂಗಹೀನಾಯ ತೇ ನಮಃ ॥೪೩೧॥

ಓ, ಶಂಭುವೇ! ನೀನು ಸಕಲ ಪ್ರಾಣಿಗಳಿಗೂ ವಂದ್ಯನಾಗಿರುವೆ. ನಿನ್ನ ನಿಜಸ್ವರೂಪವನ್ನು ವೇದಗಳಿಂದಲೇ ತಿಳಿಯಬೇಕಾಗಿದೆ. ಶೂಲಧಾರಿಯೂ, ಮಹಾದೇವನೂ ಆದ ನಿನಗೆ ವಂದಿಸುವೆವು. ॥೪೨೯॥

ಪ್ರಾಣಾದಿ ಷೋಡಶಕಲಾವಿಹೀನನೂ, ನಿಸ್ಪೃಹವೃತ್ತಿಯುಳ್ಳವನೂ, ಅಂತಃಕರಣ ಸಕಲ ವೃತ್ತಿಗಳಲ್ಲಿಯೂ, ಚೈತನ್ಯಸ್ವರೂಪದಿಂದ ಪ್ರತಿಬಿಂಬಿಸಿ, ಸಾಕ್ಷಿಚೈತನ್ಯಸ್ವರೂಪದಿಂದ ತೋರುವವನೂ, ಶುದ್ಧನೂ, ಶುದ್ಧಚೈತನ್ಯಸ್ವರೂಪನೂ ಆದ ನಿನ್ನನ್ನು ನಮಿಸುವೆನು. ॥೪೩೦॥

ದೇವ! ನೀನು, ಸತ್ತ್ವರಜಸ್ತಮೋಗುಣಗಳೆಂಬ ಗುಣತ್ರಯಗಳ ಸಾಮ್ಯಾವಸ್ಥೆಯಿಂದ ಕೂಡಿರುವ ಅನಾದ್ಯವಿದ್ಯೆಯಲ್ಲಿ ಪ್ರತಿಬಿಂಬಿಸಿ, ಸಕಲ ಪ್ರಾಣಿಗಳ ಅಂತಃಕರಣದಲ್ಲಿ ಸಾಕ್ಷಿರೂಪದಿಂದ ಅಭಿವ್ಯಕ್ತನಾಗಿ, ಅವುಗಳ ಪ್ರವೃತ್ತಿನಿವೃತ್ತಿಗಳಿಗೆ ಕಾರಣನಾಗಿರುವೆ. ನೀನು ಅಶರೀರಿಯಾಗಿದ್ದರೂ, ಭಕ್ತಾನುಗ್ರಹಕ್ಕೋಸ್ಕರವೂ ಮತ್ತು ನಿನ್ನ ಲೀಲೆಯನ್ನು ಜನರಿಗೆ ತಿಳಿಯಪಡಿಸುವುದಕ್ಕೂ, ಸತ್ಯಸಂಕಲ್ಪತ್ವಾದಿ ಅನೇಕ ಕಲ್ಯಾಣಗುಣಗಳಿಂದ ಶೋಭಿಸುವ ಅನಂತ ಸಗುಣವಾದ ಶರೀರಗಳನ್ನು ಧರಿಸಿ ಭಕ್ತರನ್ನು ಅನುಗ್ರಹಿಸುವೆ. ಪ್ರಾಣಿಗಳ, ಶರೀರವೆಂಬ ಉಪಾಧಿಯನ್ನಾಶ್ರಯಿಸಿ, ಜೀವರೂಪದಿಂದ ಅಭಿವ್ಯಕ್ತನಾಗಿ, ಶರೀರಸಂಬಂಧದಿಂದುಂಟಾಗುವ, ಶರೀರಾತ್ಮತಾದಾತ್ಮ್ಯಾಧ್ಯಾಸದಿಂದ ಶರೀರಕ್ಕೆ ಉಂಟಾಗುವ ಸುಖದುಃಖಗಳಿಗೂ, ಶೋಕಮೋಹಗಳಿಗೂ ಭಾಗಿಯಾಗುವೆ. ಹೀಗಿದ್ದರೂ, ನೀನು, ಅಸಂಗನಾಗಿರುವೆ. ಇಂತಹ ನಿನ್ನನ್ನು ವಂದಿಸುವೆವು. ॥೪೩೧॥

ನಮಸ್ತೇ ನಿರ್ಮಲಾಯೇಶ ನಮಸ್ತೇ ಶಶಿಶೇಖರ ।
ನಮಸ್ತೇ ಜಗತಾನ್ನಾಥ ನಿರೀಶ ಪರಮೇಶ್ವರ ॥೪೩೨॥

ಸರ್ವಾಂತರಾತ್ಮನ್ಸರ್ವಾತ್ಮನ್ಸರ್ವರೂಪ ಮಹೇಶ್ವರ ।
ಸರ್ವಾಧಾರ ನಿರಾಧಾರ ನಮಸ್ತೇ ವಿಶ್ವರೂಪಿಣೇ ॥೪೩೩॥

ಭವಾಂಛರಣಮಸ್ಮಾಕಂ ಸರ್ವೇಷಾಮಪಿ ಶಂಕರ ।
ನ ಭವಂತಂ ವಿನಾಸ್ಮಾಕಮನ್ಯಚ್ಛರಣಮೀಶ್ವರ ॥೪೩೪॥

ತವೈವ ಪಾದಕಮಲಮಸ್ಮಚ್ಚಿತ್ತಮಧುವ್ರತೈಃ ।
ಸರ್ವದಾ ಸಂಶ್ರಿತಂ ಭೂಯಾನ್ಮಹಾದೇವ ಕೃಪಾನಿಧೇ ॥೪೩೫॥

ಮಹೇಶ ತವ ಸಾಮರ್ಥ್ಯಂ ನಾಸ್ಮಾಭಿರ್ಜ್ಞಾಯತೇ ಪ್ರಭೋ ।
ವೇದೈರಪಿ ನ ವಿಜ್ಞಾತಂ ಸತ್ಯಂ ಸತ್ಯಂ ನ ಸಂಶಯಃ ॥೪೩೬॥

ಪರಿಶುದ್ಧನೂ, ನಿಗ್ರಹಾನುಗ್ರಹಸಮರ್ಥನೂ, ಚಂದ್ರಶೇಖರನೂ, ಆದ ನಿನ್ನನ್ನು ವಂದಿಸುವೆವು. ಓ, ಜಗನ್ನಾಥನೇ! ಪರಮೇಶ್ವರನೇ! ನೀನು ಸರ್ವರಿಗೂ ಪ್ರಭುವಾಗಿರುವೆ. ನಿನಗೆ ಇನ್ನೊಬ್ಬ ಪ್ರಭುವಿರುವುದಿಲ್ಲ. ಅಂತಹ ನಿನಗೆ ನಮಿಸುವೆವು. ||೪೩೨||

ಸರ್ವಾಂತರ್ಯಾಮಿಯೂ, ಸಕಲ ಪ್ರಾಣಿಗಳ ಶರೀರದಲ್ಲಿ, ಏಕರೂಪದಿಂದ ನೆಲಸಿರುವವನೂ, ಸಕಲ ವಸ್ತುಗಳ ಸ್ವರೂಪನೂ, ಸಕಲ ವಸ್ತುಗಳಿಗೆ ಅಧಿಷ್ಠಾನನೂ, ನಿರಾಧಾರನೂ, ಪ್ರಪಂಚಸ್ವರೂಪನೂ ಆದ ನಿನ್ನನ್ನು ವಂದಿಸುವೆವು. ||೪೩೩||

ಓ, ಶಂಕರನೇ! ನೀನೇ ನಮ್ಮ ರಕ್ಷಕನು. ನಿನ್ನನ್ನು ಬಿಟ್ಟು, ಇನ್ನಾರೂ, ನಮ್ಮನ್ನು ರಕ್ಷಿಸಲಾರರು. ||೪೩೪||

ಓ, ಮಹಾದೇವನೇ! ಕರುಣಾಸಾಗರನೇ! ನಮ್ಮ, ಅಂತಃಕರಣಗಳೆಂಬ, ಭ್ರಮರಗಳು, ನಿನ್ನ ಪಾದಕಮಲವನ್ನೇ, ಅನವರತವೂ ಆಶ್ರಯಿಸುವಂತೆ, ನಮ್ಮನ್ನು ಅನುಗ್ರಹಿಸು. ||೪೩೫||

ಓ ಪ್ರಭುವೇ! ನಿನ್ನ ಸಾಮರ್ಥ್ಯವನ್ನು ತಿಳಿಯಲು, ನಾವು ಅಸಮರ್ಥರಾಗಿರುವೆವು. ಹೆಚ್ಚೇಕೆ! ವೇದಗಳೂ ಸಹ ನಿನ್ನ ಅತುಲವಾದ ಸಾಮರ್ಥ್ಯವನ್ನು ಅರಿತಿರುವುದಿಲ್ಲ. ಇದು ನಿಜ. ||೪೩೬||

ಪ್ರಲಯಾನಲಸಂಕಾಶಃ ಕಾಲಕೂಟೋಽಯಮುದ್ಭೃತಃ ।
ತ್ವಯಾಸ್ಮತ್ಪ್ರಾಣರಕ್ಷಾರ್ಥಂ ಸಂಹೃತಃ ಪರಮೇಶ್ವರ ॥೪೩೭॥

ಕಾಲಕೂಟಾದ್ಭಯಂ ಘೋರಂ ಯತ್ತ್ವಯಾದ್ಯ ನಿವಾರಿತಂ ।
ಏತದ್ಭಯಂ ತ್ವದನ್ಯಸ್ತು ಕೋ ವಾ ರಕ್ಷಯಿತುಂ ಕ್ಷಮಃ ॥೪೩೮॥

ಅಸ್ಮತ್ತುಲ್ಯೋ ನಾಽಪರಾಧೀ ಸಹಿಷ್ಣುರ್ನ ತ್ವಯಾ ಸಮಃ ।
ನಾಸ್ಮತ್ಕೃತಾಪರಾಧಾನಾಂ ಗಣನಾ ಪಾರ್ವತೀಪತೇ ॥೪೩೯॥

ಅಗಣಯ್ಯಾಧುನಾಸ್ಮಾಕಮಪರಾಧಾನ್ಬಹೂನಪಿ ।
ಮಹೇಶ ಕೃತಮಸ್ಮಾಕಂ ರಕ್ಷಣಂ ಕಾಲಕೂಟತಃ ॥೪೪೦॥

ಭವಾನ್ಯಾ ಕೃತಮಸ್ಮಾಕಮತ ಏವ ಭವ ತ್ವಯಾ ।
ರಕ್ಷಣಂ ಕೃತಮಸ್ಮಾಕಂ ಕಾಲಕೂಟಭಯಾದ್ಧ್ರುವಂ ॥೪೪೧॥

ಓ ಪರಮೇಶ್ವರನೇ, ಪ್ರಲಯಾಗ್ನಿಗೆ ಸಮಾನವೂ, ಅತ್ಯಂತ ಭಯಂಕರವೂ ಆದ ಈ ಕಾಲಕೂಟವನ್ನು ನೀನು ನಮ್ಮನ್ನು ರಕ್ಷಿಸುವುದಕ್ಕೋಸ್ಕರವೇ ಸಂಹರಿಸಿರುವೆ. ॥೪೩೭॥

ಕಾಲಕೂಟದಿಂದ ನಮಗುಂಟಾದ ಆ ಭಯವನ್ನು, ನೀನು ಹೋಗಲಾಡಿಸಿರುವೆ. ನಿನ್ನನ್ನು ಬಿಟ್ಟು ನಮ್ಮನ್ನು ರಕ್ಷಿಸುವವನು ಇನ್ನೊಬ್ಬನಾರಿರುವನು ?॥೪೩೮॥

ಓ ಗಿರಿಜಾರಮಣನೇ, ನಮಗೆ ಸಮಾನನಾದ ಅಪರಾಧಿಗಳು ಇನ್ನೊಬ್ಬರಿರುವುದಿಲ್ಲ. ನಿನಗೆ ಸಮಾನನಾದ ಸಹನಶೀಲನು ಮತ್ತೊಬ್ಬನಿರುವುದಿಲ್ಲ. ನಾವು ಆಚರಿಸಿದ ಅಪರಾಧಗಳನ್ನು ಲೆಕ್ಕಿಸಲೂ ಸಾಧ್ಯವಿರುವುದಿಲ್ಲ. ॥೪೩೯॥

ಓ ಮಹೇಶನೇ, ಸಹನಶೀಲನಾದ ನೀನು ಈಗ ನಮ್ಮ ಅಪರಾಧಗಳು ಅಸಂಖ್ಯಾಕವಾಗಿದ್ದರೂ, ಅವುಗಳನ್ನು ಪರಿಗಣಿಸದೆ ಈ ಕಾಲಕೂಟದ ದೆಸೆಯಿಂದ ನಮ್ಮನ್ನು ರಕ್ಷಿಸಿದೆಯಲ್ಲವೇ ? ॥೪೪೦॥

ದೇವಿಯಾದ ಭವಾನಿಯು ನಮ್ಮ ಮೇಲೆ ತನ್ನ ಕರುಣಾಕಟಾಕ್ಷವನ್ನು ಬೀರಿದಳು. ಆದುದರಿಂದಲೇ ನೀನು ಭಯಂಕರವಾದ ಆ ಕಾಲಕೂಟದ ದೆಸೆಯಿಂದ ಇದೀಗ ನಮ್ಮನ್ನು ರಕ್ಷಿಸಿದೆ. ॥೪೪೧॥

॥ ಕಶ್ಯಪ ಉವಾಚ ॥

ಇತಿ ಸ್ತುತ್ವಾ ಸುರಾಃ ಸರ್ವೇ ಶಿವಪಾದಾಂಬುಜೇ ತತಃ ।
ಪ್ರಣತಾ ದಂಡವದ್ಭಕ್ತ್ಯಾ ಪುಷ್ಪೈಃ ಸಂಪೂಜ್ಯ ಶಂಕರಂ ॥೪೪೨॥

ಮಹೇಶಃ ಪ್ರಣತೋ ದೇವೈಃ ಸ್ತುತಃ ಸಂಪೂಜಿತಶ್ಚ ತೈಃ ।
ಕ್ಷೀರಾಬ್ಧಿಮಥನಂ ಕರ್ತುಂ ಪ್ರೇಷಯಾಮಾಸ ತಾನ್ಪುನಃ ॥೪೪೩॥

ತತಃ ಪುನರ್ಮಹಾದೇವಂ ತತ್ರ ಸಂಪೂಜ್ಯ ತೇ ಸುರಾಃ ।
ಮಮಂಥುರಬ್ಧಿಂ ಮುದಿತಾಃ ಸ್ಮರಂತಃ ಪಾರ್ವತೀಪತಿಂ ॥೪೪೪॥

ತತಸ್ತಸ್ಮಾತ್ಸಮುತ್ಪನ್ನಾ ಕಮಲಾ ಕಮಲಾನನಾ ।
ಅಮೃತಂ ಚ ಸಮುತ್ಪನ್ನಮೈರಾವತಸಮನ್ವಿತಂ ॥೪೪೫॥

ದೇವಾಶ್ವೋಽಪಿ ಸಮುತ್ಪನ್ನೋ ನಾನಾರತ್ನಸಮನ್ವಿತಃ ।
ಪಾರಿಜಾತಾಶ್ಚ ಸಂಭೂತಾ ಮಥ್ಯಮಾನೇ ಮಹೋದಧೌ ॥೪೪೬॥

ದೇವತೆಗಳೆಲ್ಲರೂ ಶಿವನನ್ನು ಹೀಗೆಂದು ಸ್ತುತಿಸಿ ಶಿವನನ್ನು ಭಕ್ತಿಪೂರ್ವಕವಾಗಿ ಪುಷ್ಪಗಳಿಂದ ಪೂಜಿಸಿ ಅವನ ಅಡಿದಾವರೆಗಳಿಗೆ ದಂಡಪ್ರಣಾಮಗೈದರು. ॥೪೪೨॥

ಈ ರೀತಿಯಲ್ಲಿ ದೇವತೆಗಳು ಶಿವನನ್ನು ಸ್ತುತಿಸಿ, ನಮಸ್ಕರಿಸಿ, ಪೂಜಿಸಲು, ಆಗ ಶಿವನು ಅವರಿಗೆ ಕ್ಷೀರಸಾಗರವನ್ನು ಕಡೆಯಲು ಅನುಜ್ಞೆಯನ್ನಿತ್ತು ಮತ್ತೆ ಕಳುಹಿಸಿದನು. ॥೪೪೩॥

ಬಳಿಕ ಆ ದೇವತೆಗಳು ಮತ್ತೊಮ್ಮೆ ಶಿವನನ್ನು ಆರಾಧಿಸಿ, ಉಮಾರಮಣನಾದ ಶಿವನನ್ನು ಎಡಬಿಡದೇ ಸ್ಮರಿಸುತ್ತಾ, ಸಂತೋಷದಿಂದ ಕ್ಷೀರಾಬ್ಧಿಯನ್ನು ಕಡೆದರು. ॥೪೪೪॥

ಅನಂತರ ಕ್ಷೀರಾಬ್ಧಿಯಿಂದ ಪದ್ಮಮುಖಿಯಾದ ಲಕ್ಷ್ಮಿಯೇ ಮೊದಲು ಮೇಲಕ್ಕೆ ಬಂದಳು. ಅಮೃತವೂ ಮತ್ತು ಐರಾವತವೂ ಅನಂತರ ಬಂದುವು.॥೪೪೫॥

ಸಮುದ್ರಮಥನದಿಂದ, ಬರುಬರುತ್ತಾ ದೇವಾಶ್ವವು ನಾನಾಬಗೆಯ ರತ್ನಗಳಿಂದೊಡಗೂಡಿ ಮೇಲಕ್ಕೆ ಬಂದಿತು. ಪಾರಿಜಾತಗಳೂ ಸಹ ಉತ್ಪನ್ನವಾದುವು. ॥೪೪೬॥

ತತಃ ಶಿವಪ್ರಸಾದೇನ ಲಕ್ಷ್ಮೀಂ ಪ್ರಾಪ ಹರಿರ್ಮುನೇ ।
ಐರಾವತಾದೀನ್ಪ್ರಾಪೇಂದ್ರಃ ಶಿವಸ್ಯೈವ ಪ್ರಸಾದತಃ ॥೪೪೭॥

ಅಮೃತಂ ಪ್ರಾಪುರಮರಾಃ ಸರ್ವೇ ಭಾಗಾನುರೂಪತಃ ।
ಮಹಾದೇವಪ್ರಸಾದೇನ ವಿವಾದೇನ ವಿನಾ ಮುನೇ ॥೪೪೮॥

ಏವಂ ಶಿವಪ್ರಸಾದೇನ ದೇವಾ ಲಬ್ಧಮನೋರಥಾಃ ।
ಸ್ವಸ್ವಸ್ಥಾನಾನಿ ಸಂಪ್ರಾಪುಃ ಕೀರ್ತಯಂತೋ ಮಹೇಶ್ವರಂ ॥೪೪೯॥

ಅತ ಏವ ಮಹಾದೇವೋ ಭಗವಾನ್ಭಕ್ತವತ್ಸಲಃ ।
ಸಾವಧಾನಂ ಪೂಜನೀಯೋ ಭುಕ್ತಿಮುಕ್ತಿಫಲಾರ್ಥಿಭಿಃ ॥೪೫೦॥

ಮಹೇಶಾರಾಧನಾದನ್ಯನ್ನಾಸ್ತಿ ಸರ್ವಾರ್ಥಸಾಧಕಂ ।
ಅತಃ ಸದಾ ಸಾವಧಾನಂ ಪೂಜನೀಯೋ ಮಹೇಶ್ವರಃ ॥೪೫೧॥

ಎಲೈ ಮುನಿಯೇ, ಬಳಿಕ ವಿಷ್ಣುವು ಈಶ್ವರಾನುಗ್ರಹದಿಂದ ತನ್ನ ಪ್ರೇಯಸಿಯಾದ ಲಕ್ಷ್ಮಿಯನ್ನು ಪಡೆದನು. ದೇವೇಂದ್ರನೂ ಸಹ ಈಶ್ವರಾನುಗ್ರಹದಿಂದಲೇ ಐರಾವತವೇ ಮುಂತಾದ ಅಮೂಲ್ಯವಾದ ವಸ್ತುಗಳನ್ನು ಹೊಂದಿದನು. ॥೪೪೭॥

ದೇವತೆಗಳೆಲ್ಲರೂ, ಪರಸ್ಪರ ಕಲಹವಿಲ್ಲದೇ, ತಮ್ಮ ತಮ್ಮ ಭಾಗಧೇಯಕ್ಕನುಗುಣವಾಗಿ ಅಮೃತವನ್ನು ಹಂಚಿಕೊಂಡರು. ॥೪೪೮॥

ಈರೀತಿಯಲ್ಲಿ ದೇವತೆಗಳು, ಈಶ್ವರಾನುಗ್ರಹದಿಂದ ತಮ್ಮ ತಮ್ಮ, ಇಷ್ಟಾರ್ಥಗಳನ್ನು ಪಡೆದು, ಶಿವನನ್ನು ಸ್ಮರಿಸುತ್ತಾ ತಮ್ಮ ತಮ್ಮ ಇಷ್ಟಾರ್ಥಗಳನ್ನು ಪಡೆದು, ಶಿವನನ್ನು ಧ್ಯಾನಿಸುತ್ತಾ ತಮ್ಮ ತಮ್ಮ ವಾಸಸ್ಥಳಗಳನ್ನು ಕುರಿತು ತೆರಳಿದರು. ॥೪೪೯॥

ಆದುದರಿಂದಲೇ, ಅಶನವಸನಗಳನ್ನೂ, ಮತ್ತು ಮುಕ್ತಿಯನ್ನೂ ಅಪೇಕ್ಷಿಸುವ ಮನುಜರು, ಭಕ್ತವತ್ಸಲನಾದ ಶಿವನನ್ನು ಸಾವಧಾನದಿಂದ ಪೂಜಿಸಬೇಕು. ॥೪೫೦॥

ಲೋಕದಲ್ಲಿ, ಸಕಲ ಇಷ್ಟಾರ್ಥಗಳನ್ನೂ ಸಾಧಿಸುವುದರಲ್ಲಿ ಈಶ್ವರಾರಾಧನೆಗಿಂತಲೂ, ಶ್ರೇಷ್ಠವಾದ ಇನ್ನೊಂದು ಸಾಧನವಿರುವುದಿಲ್ಲ. ಆದುದರಿಂದ, ಸಾವಧಾನರಾಗಿ ಅನವರತವೂ ಶಿವನನ್ನು ಪೂಜಿಸಬೇಕು. ॥೪೫೧॥

ಪುರಾತ್ರ ನಾರದಂ ವೀಕ್ಷ್ಯ ಹಿಮವಾನ್ಮುನಿಪುಂಗವಂ ।
ಆಸನಾದ್ಯೈಃ ಸಮಭ್ಯರ್ಚ್ಯ ತದ್ವೃತ್ತಂ ವೇತ್ತುಮಬ್ರವೀತ್ ॥೪೫೨॥

ತತ್ತ್ವಜ್ಞಸ್ತ್ವಂ ಮುನಿಶ್ರೇಷ್ಠ ಶಿವತತ್ತ್ವಂ ವದಸ್ವ ಮೇ ।
ಶಿವಸ್ಯ ಕಿಂ ಪರಂ ರೂಪಂ ಯದ್ರೂಪಧ್ಯಾನಮಿಷ್ಟದಂ ॥೪೫೩॥

ಕಿಂ ಚ ಸರ್ವೇಷು ಲೋಕೇಷು ಸಂಚಾರಃ ಕ್ರಿಯತೇ ತ್ವಯಾ ।
ಕಿಂ ದೃಷ್ಟಂ ಕ್ಷೇತ್ರಮುತ್ಕೃಷ್ಟಂ ಯತಃ ಶ್ರೇಷ್ಠಂ ನ ಕಿಂಚನ ॥೪೫೪॥

ಯತ್ರ ದೈವಾತ್ಪ್ರವಿಷ್ಟೋಽಪಿ ನ ಯಾತ್ಯನ್ಯತ್ರ ನಾಸ್ತಿಕಃ ।
ಯತೋ ವಿನಿರ್ಗತೋ ಮೋಹಾನ್ನರಕೇ ವಿಪತಿಷ್ಯತಿ ॥೪೫೫॥

ಹಿಂದೆ ಒಂದಾನೊಂದು ಕಾಲದಲ್ಲಿ, ಹಿಮವಂತನು ಈ ಸ್ಥಳದಲ್ಲಿ, ಮುನಿಶ್ರೇಷ್ಠನಾದ ನಾರದನನ್ನು ನೋಡಿ, ಆಸನ, ಅರ್ಘ್ಯದಾನಾದಿಗಳಿಂದ ಅವನನ್ನು ಪೂಜಿಸಿ, ನಾರದನು ಸಂಗ್ರಹಿಸಿದ ವೃತ್ತಾಂತಗಳನ್ನು ತಿಳಿಯಲಿಚ್ಛಿಸಿ, ಅವನನ್ನು ಕುರಿತು ಹೀಗೆಂದನು. ॥೪೫೨॥

ಓ ಮುನಿಯೇ, ನೀನು ತತ್ತ್ವಜ್ಞಾನಿಯಾಗಿರುವೆ. ಆದುದರಿಂದ ನನಗೀಗ ಶಿವನ ಸ್ವರೂಪವನ್ನು ತಿಳಿಸು. ಶಿವನ ನಿಜವಾದ ಸ್ವರೂಪವಾವುದು? ಅವನ, ಯಾವ ರೂಪವನ್ನು ಧ್ಯಾನಿಸಿದರೆ, ಆ ಧ್ಯಾನವು, ನಮ್ಮ ಇಷ್ಟಾರ್ಥಗಳನ್ನು ಕರುಣಿಸುವುದು ? ॥೪೫೩॥

ಇದಲ್ಲದೇ, ತ್ರಿಲೋಕ ಸಂಚಾರಿಯೆಂದೆನಿಸಿಕೊಂಡಿರುವ ನೀನು, ಸಕಲ ಲೋಕಗಳಲ್ಲಿಯೂ ಸಂಚರಿಸುವೆ. ಆ ಲೋಕಗಳಲ್ಲಿ, ನೀನು ನೋಡಿದ ಶ್ರೇಷ್ಠತಮವಾದ ಕ್ಷೇತ್ರವು ಅದಾವುದಿರುವುದು ? ॥೪೫೪॥

ಆಸ್ತಿಕನಾದವನು, ಯಾವ ಕ್ಷೇತ್ರವನ್ನು ದೈವಯೋಗದಿಂದ ಪ್ರವೇಶಿಸಿದರೆ ಅವನು ಅಲ್ಲಿಂದ ಹೊರಹೊರಡಲಾರನೋ, ಮತ್ತು ಯಾವ ಕ್ಷೇತ್ರವನ್ನು ಬಿಟ್ಟು, ಹೊರಕ್ಕೆ ಬಂದವನು, ಮತ್ತೆ ನರಕಲೋಕಕ್ಕೆ ಹೋಗುವನೋ, ಅಂತಹ ಶ್ರೇಷ್ಠತಮವಾದ ಕ್ಷೇತ್ರವು ಯಾವುದಿರುವುದೆಂಬುದನ್ನು ನನಗೆ ತಿಳಿಯಪಡಿಸು. ॥೪೫೫॥

ಇತಿ ತದ್ವಚನಂ ಶ್ರುತ್ವಾ ಕ್ಷಣಂ ಧ್ಯಾತ್ವಾ ಮುನೀಶ್ವರಃ ।
ಪ್ರಹೃಷ್ಟವದನೋ ಭೂತ್ವಾ ತತೋ ವಕ್ತುಂ ಸಮಾರಭೇ ॥೪೫೬॥

॥ ನಾರದ ಉವಾಚ ॥

ಹಿಮವನ್ಸ್ಪೃಷ್ಟಮಿಷ್ಟಂ ಮೇ ವಿದ್ವದಿಷ್ಟಮಭೀಷ್ಟದಂ ।
ದೃಷ್ಟಂ ತಚ್ಛಿಪಿವಿಷ್ಟಸ್ಯಾಷ್ಟಮೂರ್ತೇರ್ವಿಶೇಷತಃ ॥೪೫೭॥

ಓಂಕಾರರೂಪಮದ್ವೈತಂ ಶಿವಜ್ಞಾನಾತ್ಮಕಂ ಪ್ರಭುಂ ।
ಮೋಕ್ಷದಂ ಪ್ರಾಹುರಮಲಂ ವೇದವೇದಾಂತಪಾರಗಾಃ ॥೪೫೮॥

ಯತ್ಪ್ರಸಾದಸಮೋ ನಾಸ್ತಿ ಪ್ರಸಾದೋಽನ್ಯಸ್ಯ ವಸ್ತುತಃ ।
ಸ ಶ್ರೋತವ್ಯ ಇತಿ ಶ್ರುತ್ಯಾ ಕೀರ್ತ್ಯತೇ ಭಗವಾಂಛಿವಃ ॥೪೫೯॥

ಯತ್ತತ್ತ್ವಂ ನ ವಿದುರ್ದೇವಾಃ ವೇದಾಶ್ಚ ಸ ಶಿವಃ ಪರಃ ।
ಕೇನ ವಾ ಜ್ಞಾಯತೇ ಸಮ್ಯಗವಾಙ್ಮನಸಗೋಚರಃ ॥೪೬೦॥

ಬಳಿಕ ಕಶ್ಯಪನು ಹೀಗೆಂದನು.---ಹಿಮವಂತನ ಆ ಮಾತನ್ನು ಕೇಳಿ, ನಾರದನು ಕ್ಷಣಕಾಲ ಧ್ಯಾನಮಗ್ನನಾಗಿ ಬಳಿಕ, ಸಂತೋಷವಾದ ಮುಖಮುದ್ರೆಯಿಂದ ಶಿವತತ್ತ್ವವನ್ನು ಹೇಳಲುಪಕ್ರಮಿಸಿದನು. ॥೪೫೬॥

" ನೀನು ಕೇಳಿದ ಆ ಕ್ಷೇತ್ರವು ನನಗೆ ಅತ್ಯಂತ ಪ್ರಿಯವೂ ವಿದ್ವಾಂಸರಿಂದ ಪ್ರೀತಿಸಲ್ಪಡುವುದೂ ಇಷ್ಟಾರ್ಥದಾಯಕವೂ ಆಗಿರುವುದು. ಅದೇ ಅಷ್ಟಮೂರ್ತಿಯಾದ ಆ ಪರಶಿವನ ಕ್ಷೇತ್ರವಾಗಿರುವುದು. ಅದನ್ನು ನಾನು ನೋಡಿರುವೆನು. ॥೪೫೭॥

ವೇದವೇದಾರ್ಥಗಳಲ್ಲಿ ನಿಷ್ಣಾತರಾದ ಮಹಾತ್ಮರು ಓಂಕಾರಸ್ವರೂಪನೂ, ಅದ್ವಿತೀಯನೂ, ಬ್ರಹ್ಮಜ್ಞಾನಸ್ವರೂಪನೂ, ನಿತ್ಯಶುದ್ಧನೂ ಆದ ಆ ಪರಶಿವನೇ ಮೋಕ್ಷವನ್ನು ಕರುಣಿಸುವವನಾಗಿರುವನೆಂದು ನಂಬಿಕೆಯಿಂದ ಹೇಳುವರು. ॥೪೫೮॥

ಯಾವದೇವನ ಅನುಗ್ರಹಕ್ಕೆ ಸಮಾನವಾದ ಇನ್ನೊಂದು ಅನುಗ್ರಹವಿರುವುದಿಲ್ಲವೋ, ಅಂತಹ ಪರಶಿವನ ಮಹಿಮೆಯನ್ನೇ ಶ್ರವಣಮಾಡಬೇಕೆಂದು ವೇದವು ಹೇಳುತ್ತಿರುವುದು. ॥೪೫೯॥

ಯಾವನ ರಹಸ್ಯವನ್ನು ದೇವತೆಗಳಾಗಲಿ, ವೇದಗಳೇ ಆಗಲಿ ಅರಿತಿರುವು

ಶಿವೇನಾನುಗೃಹೀತಾ ಯೇ ಸಚ್ಚಿದಾನಂದಮೂರ್ತಿನಾ ।
ತೈಃ ಶಿವೋ ಜ್ಞಾಯತೇ ಸಮ್ಯಗನ್ಯೈರ್ನ ಜ್ಞಾಯತೇ ಧ್ರುವಂ॥೪೬೧॥

ಕ್ಷೇತ್ರಾಣಿ ಚ ಮಯಾ ದೃಷ್ಟಾನ್ಯನೇಕಾನಿ ಸಹಸ್ರಧಾ ।
ಕಾಶೀಕ್ಷೇತ್ರಸಮಂ ಕ್ಷೇತ್ರಂ ನ ದೃಷ್ಟಂ ಕ್ವಾಪಿ ಸರ್ವಥಾ ॥೪೬೨॥

ಚತುರ್ದಶಾನಿ ಭುವನಾನ್ಯೇಕಸ್ಮಿನ್ದಿವಸೇ ಮಯಾ ।
ದೃಶ್ಯಂತೇ ತೇಷು ಭುವನೇಷ್ವೇಕಾ ಕಾಶ್ಯೇವ ಮುಕ್ತಿದಾ ॥೪೬೩॥

ಕಾಶೀ ಪರತರಂ ಕ್ಷೇತ್ರಂ ಕ್ಷೇತ್ರಾಣಾಮಧಿದೈವತಂ ।
ಭುಕ್ತಿಮುಕ್ತಿಪ್ರದಂ ಪುಣ್ಯಂ ಪಾವನಾನಾಂ ಚ ಪಾವನಂ ॥೪೬೪॥

ದಿಲ್ಲವೋ, ವಾಗಿಂದ್ರಿಯಕ್ಕೂ ಮತ್ತು ಮನಸ್ಸಿಗೂ ಅಗೋಚರನಾದ ಆ ಪರಶಿವನನ್ನು ಯಾರುತಾನೇ ಪೂರ್ಣವಾಗಿ ಅರಿತಿರುವರು ? ॥೪೬೦॥

ಯಾರು ಸಚ್ಚಿದಾನಂದಸ್ವರೂಪಿಯಾದ ಪರಶಿವನ ಅನುಗ್ರಹಕ್ಕೆ ಪಾತ್ರರಾಗಿರುವರೋ, ಅವರೇ ಶಿವನ ತತ್ತ್ವವನ್ನು ಅರಿಯುವರು. ಇನ್ನಾರೂ ಅದನ್ನು ತಿಳಿಯಲಾರರು. ॥೪೬೧॥

ನಾನು ಇದುವರೆಗೆ ಸಾವಿರಾರು ಬಾರಿ ಅಸಂಖ್ಯಾಕವಾದ ಕ್ಷೇತ್ರಗಳನ್ನು ನೋಡಿರುವೆನು. ಆದರೆ ಕಾಶೀಕ್ಷೇತ್ರಕ್ಕೆ ಸದೃಶವಾದ ಕ್ಷೇತ್ರವನ್ನು ಇನ್ನೆಲ್ಲಿಯೂ ನೋಡಲಿಲ್ಲ. ॥೪೬೨॥

ನಾನು ಚತುರ್ದಶಲೋಕಗಳನ್ನೂ ಒಂದೇ ಒಂದು ದಿನದಲ್ಲಿ ನೋಡಬಲ್ಲೆನು. ಆದರೆ ಅಂತಹ ಲೋಕಗಳಲ್ಲಿ ಕಾಶೀಕ್ಷೇತ್ರವೊಂದೇ ಮುಕ್ತಿಯನ್ನು ಕೊಡುವುದಾಗಿರುತ್ತದೆ. ॥೪೬೩॥

ಕಾಶೀಕ್ಷೇತ್ರವು ಕ್ಷೇತ್ರಗಳಿಗೆಲ್ಲಾ ಶ್ರೇಷ್ಠತಮವೂ, ದೇವತಾಸ್ವರೂಪವೂ ಈ ಲೋಕದಲ್ಲಿ ಅಶನವಸನಗಳನ್ನು ಕೊಡುವುದೂ, ಪರಲೋಕದಲ್ಲಿ ಮುಕ್ತಿಯನ್ನು ಅನುಗ್ರಹಿಸುವುದೂ, ಪುಣ್ಯಕರವೂ ಪವಿತ್ರವಾದ ವಸ್ತುಗಳಿಗೆಲ್ಲಾ ಅತ್ಯಂತ ಪವಿತ್ರವೂ ಆಗಿರುವುದು. ॥೪೬೪॥

ತಪೋಧನಾದಿಧರ್ಮಾಣಾಮನಂತಾನಾಂ ಪರಂ ಫಲಂ ।
ಯತ್ಪ್ರಾಪ್ತಿಮಾಹುಃ ಸಾ ಕಾಶೀ ಕಾಶತೇ ಸರ್ವದಾ ಯತಃ ॥೪೬೫॥

ಪರಾತ್ಪರತರಂ ಯತ್ತು ಯತ್ಪರಾತ್ಪರತಃ ಶಿವಃ ।
ಸ ಏವ ಕಾಶೀ ಕಾಶೀಶಿ ತತಃ ಕಿಮಧಿಕಂ ವದ ॥೪೬೬॥

ಕಾಶೀ ಸ್ಮೃತಾಪಿ ಸಂಸಾರಮೂಲನಿರ್ಮೂಲನಕ್ಷಮಾ ।
ಸಾ ಸಾಕ್ಷಾತ್ಸೇವಿತಾ ಶೈವೈರ್ಮೋಕ್ಷದೇತ್ಯತ್ರ ನಾದ್ಭುತಂ ॥೪೬೭॥

ಹಂತ್ಯಘಂ ಸ್ಮೃತಿಮಾತ್ರೇಣ ದೃಷ್ಟ್ವಾ ಪುಣ್ಯಂ ತನೋತಿ ಯಾ ।
ಸಾ ನಿರ್ವಾಣೈಕನಿಲಯಾ ಕಾಶೀ ವಿಶ್ವೇಶ್ವರಾಲಯಾ ॥೪೬೮॥

ಕಾಶೀಕ್ಷೇತ್ರಪ್ರಾಪ್ತಿಯು ಅನಂತವಾದ, ತಪಸ್ಸು, ದಾನ, ಯಜ್ಞಯಾಗಾದಿ ಕರ್ಮಗಳು ಇವುಗಳ ಫಲವೆಂದು ಜ್ಞಾನಿಗಳು ಹೇಳುವರು. ಆ ಕ್ಷೇತ್ರವು ನಿರಂತರವೂ ಪ್ರಕಾಶಿಸುತ್ತಿರುವುದರಿಂದಲೇ ಅದನ್ನು ಕಾಶೀ ಎಂಬ ಅನ್ವರ್ಥಸಂಜ್ಞೆಯಿಂದ ಕರೆಯುವರು. ॥೪೬೫॥

ಬಾಹ್ಯವಾದ ಆಕಾಶಾದಿ ವಸ್ತುಗಳಿಗಿಂತಲೂ ಆಂತರತಮವಾಗಿ, ವ್ಯಾಪಕವಾದ ಅನಾದ್ಯವಿದ್ಯೆಗಿಂತಲೂ ಪರಶಿವನು ಆಂತರತಮನೂ, ವ್ಯಾಪಕನೂ, ಸೂಕ್ಷ್ಮನೂ ಆಗಿರುವನು. ಆ ಪರಶಿವನೇ ಕಾಶೀಕ್ಷೇತ್ರದ ರೂಪದಿಂದ ವ್ಯವಸ್ಥಿತನಾಗಿರುವನು. ಇದಕ್ಕಿಂತಲೂ ಹೆಚ್ಚೇನಿರುವುದು ಹೇಳು. ॥೪೬೬॥

ಆ ಕಾಶೀಕ್ಷೇತ್ರವು ಸ್ಮರಣಮಾತ್ರದಿಂದಲೇ ಸಂಸಾರವನ್ನು ನಿರ್ಮೂಲಗೊಳಿಸುವುದು. ಸತತವೂ ಈಶ್ವರಭಕ್ತರಿಂದ ಸೇವಿಸಲ್ಪಡುವ ಆ ಕ್ಷೇತ್ರವು ಮುಕ್ತಿಯನ್ನು ಕೊಡುವುದೆಂಬುದರಲ್ಲಿ ಆಶ್ಚರ್ಯವಿರುವುದಿಲ್ಲ. ॥೪೬೭॥

ಯಾವ ಕಾಶೀಕ್ಷೇತ್ರವು ಸ್ಮರಣಮಾತ್ರದಿಂದಲೇ ಪಾಪವನ್ನು ಹೋಗಲಾಡಿಸುವುದೋ, ಮತ್ತು ದರ್ಶನಮಾತ್ರದಿಂದಲೇ ಪುಣ್ಯವನ್ನು ವೃದ್ಧಿಗೊಳಿಸುವುದೋ, ಆ ಕಾಶೀಕ್ಷೇತ್ರವು ಮುಕ್ತಿಗೆ ಸಾಧಕವೂ ವಿಶ್ವೇಶ್ವರನ ಆಲಯವೂ ಆಗಿರುವುದು. ॥೪೬೮॥

ಯಸ್ಯಾಂ ಶಿವೋ ನಿರ್ಗುಣೋಽಪಿ ಶ್ರೀಮದ್ವಿಶ್ವೇಶ್ವರಾಭಿಧೇ ।
ಲಿಂಗೇ ತಿಷ್ಠತಿ ಸಾ ಕಾಶೀ ಕಲಿಕಲ್ಮಷನಾಶಿನೀ ॥೪೬೯॥

ಚತುರ್ದಶಾಪಿ ಭುವನಾನ್ಯೇಕದಾ ತುಲಿತಾನ್ಯಪಿ ।
ಕಾಶೀಕೋಟ್ಯಂಶಕೋಟ್ಯಂಶತುಲ್ಯಾನಿ ನ ಖುತಂ ಖುತಂ ॥೪೭೦॥

ಕೇ ತು ವರ್ಣಯಿತುಂ ಶಕ್ತಾಃ ಕಾಶೀಂ ಮುಕ್ತಿಪ್ರದಾಂ ಶಿವಾಂ ।
ಯತಃ ಕಾಶೀ ವೇದಸಂಘೈರಪಿ ಸ್ತೋತುಂ ನ ಶಕ್ಯತೇ ॥೪೭೧॥

ತಿರಸ್ಕ್ರಿಯಂತೇ ಬ್ರಹ್ಮಾದ್ಯಾಃ ಕಾಶೀಸ್ಥೈರ್ಮಶಕೈರಪಿ ।
ಅತಸ್ತಾಂ ತಾದೃಶೀಂ ಕಾಶೀಂ ಕೇ ತು ವರ್ಣಯಿತುಂ ಕ್ಷಮಾಃ ॥೪೭೨॥

ಚ್ಯವಂತೇ ಬ್ರಹ್ಮಸದನಾದ್ವೈಕುಂಠಾದಪಿ ವಸ್ತುತಃ ।
ಮಹಾಪ್ರಲಯಕಾಲೇಽಪಿ ನ ಕಾಶೀವಾಸಿನಾಂ ಚ್ಯುತಿಃ ॥೪೭೩॥

ಪರಶಿವನು ಸ್ವಾಭಾವಿಕವಾಗಿ ಗುಣಾತೀತನಾಗಿದ್ದರೂ, ಯಾವ ಕಾಶೀ ಕ್ಷೇತ್ರದಲ್ಲಿರುವ ವಿಶ್ವೇಶ್ವರನೆಂಬ ಸಂಜ್ಞೆಯುಳ್ಳ ಲಿಂಗದಲ್ಲಿ ವಿಶೇಷವಾಗಿ ನೆಲಸಿರುವನೋ, ಆ ಕಾಶೀಕ್ಷೇತ್ರವು ಜನರ ರಾಗದ್ವೇಷಗಳನ್ನು ನಿರ್ಮೂಲಗೊಳಿಸುವುದಾಗಿರುತ್ತದೆ. ॥೪೬೯॥

ಚತುರ್ದಶಲೋಕಗಳನ್ನೂ ಸಹ ಒಟ್ಟುಗೂಡಿಸಿ, ಕಾಶೀಕ್ಷೇತ್ರದೊಂದಿಗೆ ಹೋಲಿಸಿದರೆ, ಆ ಭುವನಗಳು, ಕಾಶೀಕ್ಷೇತ್ರವನ್ನು ಕೋಟಿ ಭಾಗಗಳಾಗಿ ವಿಭಾಗಿಸಿ, ಅವುಗಳಲ್ಲಿ ಪ್ರತಿಯೊಂದು ಅಂಶವನ್ನೂ ಕೋಟಿ ವಿಭಾಗಗಳಾಗಿ ವಿಂಗಡಿಸಿದರೆ ಅದರಲ್ಲಿ ಒಂದೇ ಒಂದು ಅಂಶಕ್ಕೂ ಸರಿಹೋಲಲಾರವು. ॥೪೭೦॥

ಕಾಶೀಕ್ಷೇತ್ರವನ್ನು ವರ್ಣಿಸಲು ವೇದರಾಶಿಗಳೂ ಸಹ ಅಸಮರ್ಥಗಳಾಗಿರುವುವು. ಹೀಗಿರುತ್ತಿರಲು ಮೋಕ್ಷದಾಯಕವೂ ಕಲ್ಯಾಣಪ್ರದವೂ ಆದ ಆ ಕ್ಷೇತ್ರವನ್ನು ವರ್ಣಿಸಲು ಯಾರುತಾನೇ ಶಕ್ತರಾಗಿರುವರು ? ॥೪೭೧॥

ಕಾಶೀಕ್ಷೇತ್ರದಲ್ಲಿರುವ ಸೊಳ್ಳೆಗಳೂ ಸಹ ಬ್ರಹ್ಮಾದಿ ದೇವತೆಗಳನ್ನು ತೃಣೀಕರಿಸುವುವು. ಹೀಗಿರುತ್ತಿರಲು ಆ ಕ್ಷೇತ್ರವನ್ನು ವರ್ಣಿಸಲು ಅದಾರು ಸಮರ್ಥರು ? ॥೪೭೨॥

ಬ್ರಹ್ಮಲೋಕದಲ್ಲಿ ವಾಸವಾಗಿರುವ ಜನರೂ ಕಾಲಾಂತರದಲ್ಲಿಅಲ್ಲಿಂದ ಚ್ಯುತರಾಗುವರು. ವೈಕುಂಠಲೋಕದ ನಿವಾಸಿಗಳು ಸಹ ತಮ್ಮ ಸುಕೃತವಿಶೇಷವು

ಏಕಾರ್ಣವೇಽಪಿ ಸಂಜಾತೇ ತ್ರಿಶೂಲಾಗ್ರೇಣ ಕಾಶಿಕಾಂ ।
ಊರ್ಧ್ವಂ ನಯತಿ ವಿಶ್ವೇಶಃ ಸಾ ಕಾಶೀ ಕ್ವೋಪಮೀಯತೇ॥೪೭೪॥

ತೃಣೀಕರೋತಿ ದೇವೇಂದ್ರಂ ಕಾಶೀಸ್ಥಃ ಪುಲ್ಕಸೋಽಪ್ಯತಃ ।
ಕಾಶೀಪುರೀಸಮಂ ವಸ್ತು ಕುತ್ರ ಕೇನೋಪಲಭ್ಯತೇ ॥೪೭೫॥

ಯಸ್ಯಾಂ ಭವಾನೀ ಸತತಂ ಭವಭೀಮಭಯಾಪಹಾ ।
ದದಾತಿ ಪರಮಾಮೃದ್ಧಿಂ ಸಾ ಕಾಶೀ ಭುಕ್ತಿಮುಕ್ತಿದಾ ॥೪೭೬॥

ಯಸ್ಯಾಂ ತನುವ್ಯಯೇ ಜಂತೋರ್ಮುಕ್ತಿಃ ಕರತಲೇ ಸ್ಥಿತಾ ।
ಸದ್ಯೋ ಭವತಿ ಶುದ್ಧಸ್ಯ ಸಾ ಕಾಶೀ ಸೇವ್ಯತೇ ಬುಧೈಃ ॥೪೭೭॥

ಕ್ಷಯಿಸುವವರೆಗೂ ವೈಕುಂಠದಲ್ಲಿದ್ದು ಬಳಿಕ ಅಲ್ಲಿಂದ ಚ್ಯುತರಾಗುವರು. ಆದರೆ ಕಾಶೀಕ್ಷೇತ್ರದಲ್ಲಿ ವಾಸವಾಗಿರುವವರಿಗೆ ಪ್ರಲಯ ಕಾಲದಲ್ಲಿಯೂ ಚ್ಯುತಿಯಿರುವುದಿಲ್ಲ. ॥೪೭೩॥

ಈ ಭೂಲೋಕದಲ್ಲಿ ಜಲಪ್ರಲಯವಾದರೂ ಸಹ, ಆಗ ವಿಶ್ವೇಶ್ವರನು, ಕಾಶೀಕ್ಷೇತ್ರವನ್ನು ತನ್ನ ತ್ರಿಶೂಲದ ಅಗ್ರದಿಂದ ಮೇಲಕ್ಕೆತ್ತಿಕೊಂಡು ಹೋಗುವನು. ಹೀಗಿರುತ್ತಿರಲು, ಆ ಕ್ಷೇತ್ರಕ್ಕೆ ಸರಿಹೋಗುವ ವಸ್ತುವಿರುವುದೇ ? ॥೪೭೪॥

ಕಾಶೀಕ್ಷೇತ್ರದಲ್ಲಿರುವ ಚಂಡಾಲನೂ, ದೇವೇಂದ್ರನನ್ನು ತಿರಸ್ಕರಿಸುವನು. ಕಾಶೀಪಟ್ಟಣಕ್ಕೆ ಹೋಲುವ ವಸ್ತುವು ಅದೆಲ್ಲಿರುವುದು. ? ಅಥವಾ ಅದನ್ನು ನೋಡಿದವರಾರು ? ॥೪೭೫॥

ಯಾವ ಕ್ಷೇತ್ರದಲ್ಲಿ, ದೇವಿಯಾದ ಭವಾನಿಯು, ನಿರಂತರವೂ, ಸಂಸಾರದಿಂದುಂಟಾಗುವ ಭಯವನ್ನು ಹೋಗಲಾಡಿಸುವುದರಲ್ಲಿ ಬದ್ಧಕಂಕಣಳಾಗಿ ಅತುಲವಾದ ಅಭ್ಯುದಯವನ್ನು ದಯಪಾಲಿಸುವಳೋ, ಆ ಕಾಶೀಕ್ಷೇತ್ರವೂ, ಇಹದಲ್ಲಿ ಅಶನವಸನಗಳನ್ನೂ, ಪರದಲ್ಲಿ ಸ್ಥಿರಮೋಕ್ಷವನ್ನೂ ದಯಪಾಲಿಸುವುದಾಗಿರುತ್ತದೆ. ॥೪೭೬॥

ಯಾವ ಕ್ಷೇತ್ರದಲ್ಲಿ, ಶರೀರವನ್ನು ತ್ಯಜಿಸುವುದರಿಂದ ಪ್ರಾಣಿಗಳಿಗೆ ಮೋಕ್ಷವು ಸುಲಭತರವೋ, ಆ ಕಾಶೀಕ್ಷೇತ್ರವನ್ನು ದೇವತೆಗಳು ನಿರಂತರವೂ ಸೇವಿಸುತ್ತಿರುವರು. ॥೪೭೭॥

ಕಾಶೀನಾರಪ್ರದಾನೇನ ಪಿತರಃ ಪೂರ್ವಮಾದರಾತ್ ।
ನಾರದಸ್ತ್ವಂ ನಾರದೋಽಸೀತ್ಯುಕ್ತ್ವಾ ಮುಕ್ತಾಸ್ತತಃ ಪರಂ ॥೪೭೮॥

ಕಿಂ ಕರ್ತವ್ಯಂ ಮಯಾ ತತ್ತ್ವಂ ಕಾಶ್ಯಾಃ ಸುರಸಮಾಶ್ರಯೇ ।
ವೇದೈರಪಿ ನ ವಿಜ್ಞಾತಂ ತತ್ತತ್ತ್ವಂ ವಸ್ತುತೋ ಧ್ರುವಂ ॥೪೭೯॥

ಏತಾವದಪಿ ಯತ್ಕಾಶ್ಯಾಃ ತತ್ತ್ವಂ ಜ್ಞಾತಂ ಮಯಾಧುನಾ ।
ಇದಂ ಶಿವಪ್ರಸಾದಸ್ಯ ಲೇಶೇನೇತ್ಯವಗಮ್ಯತಾಂ ॥೪೮೦॥

ಪುರಾ ದೃಷ್ಟಾನಿ ಸರ್ವಾಣಿ ಭುವನಾನಿ ಮಯೇಚ್ಛಯಾ ।
ತತೋ ಗತಂ ಬ್ರಹ್ಮಲೋಕೇ ತದಾ ಮಾಮಾಹ ವಿಶ್ವಸೃಟ್ ॥೪೮೧॥

॥ ಬ್ರಹ್ಮೋವಾಚ ॥

ಕಸ್ಮಿನ್ಪ್ರದೇಶೇ ಕಿಂ ದೃಷ್ಟಂ ಕಾಶ್ಯಾಮಪಿ ವಿಶೇಷತಃ ।
ತದ್ವದಸ್ವೇತಿ ಮಾಂ ಪೃಷ್ಟ್ವಾ ಕಾಶೀಧ್ಯಾನಪರೋಽಭವತ್ ॥೪೮೨॥

ಎಲೈ ಕಶ್ಯಪಮುನಿಯೇ! ಈ ಹಿಂದೆ ನಾನು ಕಾಶೀಕ್ಷೇತ್ರಕ್ಕೆ ಹೋಗಿ ಅಲ್ಲಿ ಪಿತೃಗಳನ್ನು (ನಾರ)ತೀರ್ಥಜಲದಿಂದ ತೃಪ್ತಿಗೊಳಿಸಲು ಆಗ ಪಿತೃಗಳು, ನೀನು ಈ ಕಾಶೀಕ್ಷೇತ್ರದಲ್ಲಿ ನಮಗೆ ನೀರನ್ನು ಕೊಟ್ಟಿದ್ದರಿಂದ ಇನ್ನು ಮುಂದೆ "ನಾರದ"ಎಂಬ ಹೆಸರಿನಿಂದ ಪ್ರಸಿದ್ಧನಾಗುವೆ ಎಂದು ಆಶೀರ್ವದಿಸಿ ಬಳಿಕ ಮುಕ್ತರಾದರು. ॥೪೭೮॥ ದೇವತೆಗಳಿಗೂ ಆಶ್ರಯಸ್ಥಾನವಾದ ಆ ಕಾಶೀಕ್ಷೇತ್ರದ ರಹಸ್ಯವನ್ನು ನಾನೇನೆಂದು ವರ್ಣಿಸಲಿ? ವೇದಗಳೂ ಸಹ, ಅದನ್ನು ವರ್ಣಿಸಲಾರವು. ॥೪೭೯॥

ಈಗ ನಾನು ತಿಳಿದುಕೊಂಡ, ಈ ಕಾಶೀತತ್ತ್ವವಾದರೂ, ಈಶ್ವರಾನುಗ್ರಹದ ಲೇಶದಿಂದಲೇ ನನಗೆ ತಿಳಿದು ಬಂದಿತು. ॥೪೮೦॥

ಈ ಹಿಂದೆ ನಾನು, ಸ್ವೇಚ್ಛೆಯಿಂದ ಚತುರ್ದಶ ಭುವನಗಳನ್ನೂ ನೋಡಿದೆನು. ಬಳಿಕ, ಬ್ರಹ್ಮಲೋಕಕ್ಕೆ ತೆರಳಲು ಆಗ ಸೃಷ್ಟಿಕರ್ತನಾದ ಬ್ರಹ್ಮನು ನನ್ನನ್ನು ಕುರಿತು ಹೀಗೆಂದನು. ॥೪೮೧॥

ಎಲೈ, ನಾರದಮುನಿಯೇ! ನೀನು ಯಾವ ಯಾವ ಪ್ರದೇಶದಲ್ಲಿ, ಆಶ್ಚರ್ಯಕರವಾದ ಯಾವ ಯಾವ ವಸ್ತುವನ್ನು ನೋಡಿರುವೆ? ಅದರಲ್ಲಿಯೂ

ತತಃ ಕಾಶ್ಯನ್ಯದೇಶಾನಾಂ ವಾರ್ತಾ ಸರ್ವಾ ಮಯೋದಿತಾ ।
ಕಾಶೀವಾರ್ತಾಂ ವದಸ್ವೇತಿ ಪುನರ್ಮಾಮಾಹ ವಿಶ್ವಸೃಟ್ ॥೪೮೩॥

ಕಾಶೀ ನ ದೃಷ್ಟೈವ ವಿಧೇ ಕದಾಚಿದಪಿ ವಸ್ತುತಃ ।
ತದ್ವಾರ್ತಾತಃ ಕಥಂ ಜ್ಞೇಯಾ ಯದ್ವಾರ್ತಾಪ್ಯಘಹಾರಿಣೀ ॥೪೮೪॥

ಇತಿ ಮದ್ವಚನಂ ಶ್ರುತ್ವಾ ವಿಧಿಃ ಕರುಣಯಾಬ್ರವೀತ್ ।
ತ್ವಯಾ ಕಾಶೀ ನಾವಲೋಕಿ ತವ ಜನ್ಮ ವೃಥೇತಿ ಮಾಂ ॥೪೮೫॥

ತದುಕ್ತಂ ವಚನಂ ಶ್ರುತ್ವಾ ದುಃಖಿತೋಽಹಂ ತಮಬ್ರುವಂ ।
ಕಾಶೀಪ್ರಾಪ್ತಿಕರಂ ಪುಣ್ಯಂ ಮಹ್ಯಂ ಬ್ರೂಹೀತಿ ಸಾದರಂ ॥೪೮೬॥

ಇತಿ ಮದ್ವಚನಂ ಶ್ರುತ್ವಾ ಕಾಶೀಪ್ರಾಪಕಪುಣ್ಯವಿತ್ ।
ಮಾಮಾಹ ಶ್ರುತಿತತ್ವಜ್ಞೋ ವಿಶ್ವಸೃಡ್ಭಾವಯಂಛಿವಂ ॥೪೮೭॥

ವಿಶೇಷವಾಗಿ, ಕಾಶೀಕ್ಷೇತ್ರದಲ್ಲಿ ನಿನಗೆ ತಿಳಿದುಬಂದಿರುವ ವಿಷಯವೇನು? ಅದನ್ನು ನನಗೆ ಹೇಳು ಎಂದು ಕೇಳಿ ಬ್ರಹ್ಮನು, ಕಾಶೀಧ್ಯಾನದಲ್ಲಿ ನಿರತನಾದನು. ॥೪೮೨॥

ಬಳಿಕ ನಾನು ಕಾಶೀಕ್ಷೇತ್ರವನ್ನು ಬಿಟ್ಟು, ಇನ್ನುಳಿದ ಸಕಲ ಪ್ರದೇಶಗಳ ವೃತ್ತಾಂತವನ್ನೂ ಹೇಳಿದೆನು. ಆಗ ಬ್ರಹ್ಮನು, ನನ್ನನ್ನು ಕುರಿತು ಕಾಶೀವೃತ್ತಾಂತವನ್ನು ಹೇಳೆಂದು ಮತ್ತೊಮ್ಮೆ ಕೇಳಿದನು. ಆಗ ನಾನು ಅವನನ್ನು ಕುರಿತು ಹೀಗೆಂದೆನು. ॥೪೮೩॥

ಓ, ವಿಧಿಯೇ! ನಾನು ನಿಜವಾಗಿಯೂ ಇದುವರೆಗೂ, ಒಂದು ಬಾರಿಯೂ, ಕಾಶೀಕ್ಷೇತ್ರವನ್ನು ನೋಡಿರುವುದೇ ಇಲ್ಲ. ಹೀಗಿರುತ್ತಿರಲು, ಪಾಪನಾಶಕವಾದ ಆ ಕಾಶೀಕ್ಷೇತ್ರದ ವೃತ್ತಾಂತವನ್ನು ನಾನು ತಿಳಿಯುವ ಬಗೆ ಹೇಗೆ? ॥೪೮೪॥

ನನ್ನ ಆ ಮಾತನ್ನು ಕೇಳಿ, ಬ್ರಹ್ಮನು ಕರುಣೆಯಿಂದ ನನ್ನನ್ನು ನೋಡಿ, ಎಲೈ, ನಾರದಮುನಿಯೇ! ನೀನು ಕಾಶೀಕ್ಷೇತ್ರವನ್ನು ನೋಡದಿರುವುದರಿಂದ ನಿನ್ನ ಜನ್ಮವೇ ವ್ಯರ್ಥವು ಎಂದನು. ॥೪೮೫॥

ಬ್ರಹ್ಮನ ಆ ಮಾತನ್ನು ಕೇಳಿ ನಾನು ಅತ್ಯಂತ ದುಃಖಗೊಂಡು ಅವನನ್ನು ಕುರಿತು ಚತುರ್ಮುಖಬ್ರಹ್ಮನೇ! ಕಾಶೀಪ್ರಾಪ್ತಿಗೆ ಸಾಧನವಾದ ಪುಣ್ಯಕರ್ಮವು ಅದಾವುದಿರುವುದೆಂದು, ಕೇಳಲು, ಆಗ ನನ್ನ ಆ ಮಾತನ್ನು ಕೇಳಿ,

॥ ಬ್ರಹ್ಮೋವಾಚ ॥

ಕಾಶೀಪ್ರಾಪ್ತಿರ್ಮಹಾದೇವಪ್ರಸಾದೇನ ಭವಿಷ್ಯತಿ ।
ಮಹಾದೇವಪ್ರಸಾದಾರ್ಥಂ ಪೂಜಯಸ್ವ ಮಹೇಶ್ವರಂ ॥೪೮೮॥

ಪುಣ್ಯೇಽಸ್ಮಿನ್ಕಾರ್ತಿಕೇ ಮಾಸಿ ಸೋಮವಾರೇಷು ಶಂಕರಂ ।
ಉಪೋಷ್ಯಾಭ್ಯರ್ಚಯೇ ಪ್ರೀತ್ಯಾ ನಿಶಿ ಯಾಮಚತುಷ್ಟಯೇ॥೪೮೯॥

ಅಸ್ಯ ಕಾರ್ತಿಕಮಾಸಸ್ಯ ಚತ್ವಾರಃ ಸೋಮವಾಸರಾಃ ।
ಪುಣ್ಯೇಷ್ವೇತೇಷು ಸರ್ವೇಷು ನಿಶಿ ಪೂಜಯ ಶಂಕರಂ ॥೪೯೦॥

ಶಿವಸ್ಯೋಮಾಸಮೇತಸ್ಯ ವಾಸರಃ ಸೋಮವಾಸರಃ ।
ತಸ್ಮಿನ್ನಿಶ್ಯರ್ಚ್ಯತೇ ಶಂಭೌ ಪ್ರಸೀದತಿ ಮಹೇಶ್ವರಃ ॥೪೯೧॥

ವೇದಗಳ ತತ್ತ್ವವನ್ನು ತಿಳಿದಿರುವವನೂ, ಮತ್ತು ಕಾಶೀಪ್ರಾಪ್ತಿಗೆ ಸಾಧನವಾದ ಪುಣ್ಯಕರ್ಮವು ಯಾವುದಿರುವುದೆಂಬುದನ್ನೂ ಅರಿತಿರುವ ಬ್ರಹ್ಮನು ಮನಸ್ಸಿನಲ್ಲಿ ಶಿವನನ್ನು ಧ್ಯಾನಿಸುತ್ತಾ, ನನ್ನನ್ನು ಕುರಿತು ಹೀಗೆಂದನು. ॥೪೮೬-೪೮೭॥

" ಕಾಶೀಪ್ರಾಪ್ತಿಯು, ಈಶ್ವರಾನುಗ್ರಹದಿಂದಲೇ ಲಭಿಸುವುದು. ಆದುದರಿಂದ ಈಶ್ವರಾನುಗ್ರಹವನ್ನು ಪಡೆಯುವುದಕ್ಕೋಸ್ಕರ, ಮೊದಲೇ ಶಿವನನ್ನು ಆರಾಧಿಸು. ॥೪೮೮॥

ಪುಣ್ಯಕರವಾದ ಈ ಕಾರ್ತಿಕಮಾಸದ, ಪ್ರತಿಯೊಂದು ಸೋಮವಾರದಲ್ಲಿಯೂ ಉಪವಾಸದಿಂದಿದ್ದು, ರಾತ್ರಿ ನಾಲ್ಕು ಯಾಮಗಳಲ್ಲಿಯೂ, ಶಿವನನ್ನು ಪ್ರೀತಿಯಿಂದ ಆರಾಧಿಸು. ॥೪೮೯॥

ಈಗ ನಡೆಯುತ್ತಿರುವ ಈ ಕಾರ್ತಿಕಮಾಸದಲ್ಲಿ ನಾಲ್ಕು ಸೋಮವಾರಗಳಿರುವುವು. ಪುಣ್ಯಕರವಾದ ಆ ಸೋಮವಾರಗಳಲ್ಲಿ, ರಾತ್ರಿವೇಳೆ ಶಿವನನ್ನು ಪೂಜಿಸು. ॥೪೯೦॥

ಸೋಮವಾರವು ಉಮಾರಮಣನಾದ ಪರಮೇಶ್ವರನಿಗೆ ಪ್ರಿಯವಾಗಿರುವುದು. ಆ ದಿನ ರಾತ್ರಿ ಶಿವನನ್ನು ಆರಾಧಿಸಿದರೆ ಅವನು ಪ್ರಸನ್ನನಾಗುವನು. ॥೪೯೧॥

ಅದ್ಯೈವ ಯಾಹಿ ಕೇದಾರಂ ತತ್ರೋರ್ಜೇ ಮಾಸಿ ಸಾದರಂ ।
ಪೂಜಯಿತ್ವಾ ಮಹಾದೇವಂ ಕಾಶೀಂ ಪ್ರಾಪ್ಸ್ಯಸಿ ಸರ್ವಥಾ ॥೪೯೨॥

ಕೇದಾರಾನ್ಯಶಿವಸ್ಥಾನೇಷ್ವರ್ಚಿತೋಽಸ್ತಿ ತ್ವಯಾ ಶಿವಃ ।
ಕೇದಾರೇಽಸ್ಮಿನ್ಪುಣ್ಯಮಾಸಿ ಪೂಜಯಸ್ವ ಮಹೇಶ್ವರಂ ॥೪೯೩॥

ಬಿಲ್ವಪಲ್ಲವಧತ್ತೂರದ್ರೋಣನೀಲೋತ್ಪಲಾದಿಭಿಃ ।
ಪೂಜಯಿತ್ವಾ ಶಿವಂ ಧೂಪೈರ್ದೀಪಾದ್ಯೈಶ್ಚ ಪ್ರಸಾದಯ ॥೪೯೪॥

ಮಯೋಪೇಂದ್ರೇಂದ್ರಚಂದ್ರೇಣ ಸೂರ್ಯಾದ್ಯೈರಮರೈರಪಿ ।
ವಿಶೇಷೇಣಾರ್ಚಿತಃ ಸಾಂಬಃ ಕಾರ್ತಿಕೇ ಮಾಸಿ ಸಾದರಂ ॥೪೯೫॥

ಅಂಬಾಪ್ಯುಪೋಷ್ಯ ವಿಶ್ವೇಶಂ ಕಾರ್ತಿಕೇ ಮಾಸಿ ಭಕ್ತಿತಃ ।
ಅರ್ಚಯಿಷ್ಯತಿ ಹೇರಂಬಸ್ಕಂದಾದ್ಯಾಶ್ಚಾರ್ಚಯಂತಿ ತಂ ॥೪೯೬॥

ಎಲೈ ನಾರದಮುನಿಯೇ, ಈಗಲೇ ಕೇದಾರೇಶ್ವರ ಕ್ಷೇತ್ರಕ್ಕೆ ತೆರಳು. ಅಲ್ಲಿ ಈ ಕಾರ್ತಿಕಮಾಸದಲ್ಲಿ ಶಿವನನ್ನು ಪೂಜಿಸು. ಅದರಿಂದ ನಿನಗೆ ಕಾಶೀಕ್ಷೇತ್ರ ಪ್ರಾಪ್ತಿಯುಂಟಾಗುವುದು. ॥೪೯೨॥

ಇದುವರೆಗೆ ಕೇದಾರೇಶ್ವರಕ್ಷೇತ್ರವನ್ನೊಂದನ್ನು ಬಿಟ್ಟು, ಇನ್ನಿತರ ಶಿವಕ್ಷೇತ್ರಗಳಲ್ಲಿ ನೀನು ಶಿವನನ್ನು ಆರಾಧಿಸಿರುವೆ. ಇನ್ನು ಪುಣ್ಯಕರವಾದ ಈ ಮಾಸದಲ್ಲಿ ಕೇದಾರೇಶ್ವರ ಕ್ಷೇತ್ರದಲ್ಲಿ ಕೇದಾರೇಶ್ವರನನ್ನು ಭಕ್ತಿಯಿಂದ ಆರಾಧಿಸು. ॥೪೯೩॥

ಕೇದಾರೇಶ್ವರನ ಬಳಿಗೆ ಹೋಗಿ, ಅಲ್ಲಿ ಕೋಮಲವಾದ ಬಿಲ್ವಪತ್ರೆಗಳು, ದತ್ತೂರಪುಷ್ಪ, ತುಂಬೆಹೂವು, ಕನ್ನೈದಿಲೆ ಇವುಗಳಿಂದ ಶಿವನನ್ನು ಸಂತೋಷಗೊಳಿಸು. ॥೪೯೪॥

ನಾನೂ, ವಿಷ್ಣು, ಇಂದ್ರ, ಚಂದ್ರ, ಸೂರ್ಯಾದಿದೇವತೆಗಳು, ಇವರೆಲ್ಲರೂ ಕಾರ್ತಿಕಮಾಸದಲ್ಲಿ ಕೇದಾರೇಶ್ವರನನ್ನು ವಿಶೇಷವಾಗಿ ಆರಾಧಿಸಿರುವೆವು. ॥೪೯೫॥

ಜಗನ್ಮಾತೆಯಾದ ಭವಾನಿಯೂ ಸಹ ಪ್ರತಿಯೊಂದು ಕಾರ್ತಿಕಮಾಸದಲ್ಲಿಯೂ ಉಪವಾಸದಿಂದಿದ್ದು, ವಿಶ್ವೇಶ್ವರನನ್ನು ಭಕ್ತಿಯಿಂದ ಅರ್ಚಿಸುವಳು. ಇದಲ್ಲದೇ ಗಣೇಶ, ಷಣ್ಮುಖ ಮುಂತಾದವರೂ ಸಹ ಕಾರ್ತಿಕಮಾಸದಲ್ಲಿ ಶಿವನನ್ನು ಭಕ್ತಿಪೂರ್ವಕವಾಗಿ ಆರಾಧಿಸುವರು. ॥೪೯೬॥

ಊರ್ಜೇ ಶುಕ್ಲಚತುರ್ದಶ್ಯಾಂ ಕಾಶ್ಯಾಂ ವಿಶ್ವೇಶ್ವರಂ ಪ್ರಭುಂ ।
ಸಮರ್ಚಯಿತುಮಿಂದ್ರಾದ್ಯೈರ್ಗಮ್ಯತೇಽಸ್ಮಾಭಿರಾದರಾತ್ ॥೪೯೭॥

ತ್ವಯಾಪಿ ತದ್ದಿನೇ ಕಾಶೀ ಸಂಪ್ರಾಪ್ಯಾ ಪುಣ್ಯಯೋಗತಃ ।
ಅತಸ್ತದರ್ಥಂ ಶೀಘ್ರೇಣ ಪ್ರಸನ್ನಂ ಕುರು ಶಂಕರಂ ॥೪೯೮॥

ಇತ್ಯೇತದ್ವಚನಂ ಶ್ರುತ್ವಾ ತನ್ನತ್ವಾಹಮಿಹಾಗತಃ ।
ಅತ್ರೋರ್ಜೇ ಮಾಸಿ ಗೌರೀಶಃ ಪೂಜಿತಶ್ಚ ಮಯಾ ತದಾ ॥೪೯೯॥

ತತಃ ಶಿವಪ್ರಸಾದೇನ ಕಾಶೀ ಪಾಪಾಪನೋದಿನೀ ।
ಭುಕ್ತಿಮುಕ್ತಿಪ್ರದಾ ಪುಣ್ಯಾ ಮಯಾ ಪ್ರಾಪ್ತಾ ಶಿವಾತ್ಮಿಕಾ ॥೫೦೦॥

ತತೋ ವಿಶ್ವೇಶ್ವರೋ ದೃಷ್ಟಃ ಸಂಸಾರಭಯನಾಶಕಃ ।
ಪೂಜಿತಶ್ಚ ಮಯಾ ಭಕ್ತ್ಯಾ ವಿಶ್ವೇಶೋ ಭಕ್ತವತ್ಸಲಃ ॥೫೦೧॥

ಇಂದ್ರಾದಿದೇವತೆಗಳೂ ಮತ್ತು ನಾವೆಲ್ಲರೂ ಕಾರ್ತಿಕಮಾಸದ ಶುಕ್ಲ ಚತುರ್ದಶಿಯ ದಿನ ಶಿವನನ್ನು ಆರಾಧಿಸಲು ಕಾಶೀಕ್ಷೇತ್ರಕ್ಕೆ ತೆರಳುವೆವು. ॥೪೯೭॥

ನೀನೂ ಸಹ ಅದೇ ದಿವಸ ನಿನ್ನ ಸುಕೃತವಿಶೇಷದ ಮಹಿಮೆಯಿಂದ ಕಾಶೀ ಕ್ಷೇತ್ರವನ್ನು ಸೇರುವೆ. ಆದುದರಿಂದ ನೀನು ಕಾಶೀಪ್ರಾಪ್ತಿಗೋಸ್ಕರ ಶೀಘ್ರವಾಗಿ ಶಂಕರನನ್ನು ತೃಪ್ತಿಗೊಳಿಸು.” ॥೪೯೮॥

ಬ್ರಹ್ಮನ ಈ ಮಾತನ್ನು ಕೇಳಿ ಬಳಿಕ ನಾನು ಅವನಿಗೆ ನಮಸ್ಕರಿಸಿ, ಇಲ್ಲಿಗೆ ಬಂದು ಇಲ್ಲಿ ಕಾರ್ತಿಕಮಾಸದಲ್ಲಿ ಶಿವನನ್ನು ಪೂಜಿಸಿದೆನು. ॥೪೯೯॥

ಅನಂತರ ನಾನು ಈಶ್ವರಾನುಗ್ರಹದಿಂದ ಶಿವಾಕಾರವೂ, ಪಾಪನಾಶಕವೂ ಇಹಪರಗಳಲ್ಲಿ ಭುಕ್ತಿಮುಕ್ತಿಗಳನ್ನು ದಯಪಾಲಿಸುವುದೂ ಆದ ಕಾಶೀಕ್ಷೇತ್ರವನ್ನು ಪಡೆದೆನು. ॥೫೦೦॥

ಬಳಿಕ, ನನಗೆ ಸಂಸಾರ ಭಯವನ್ನು ಹೋಗಲಾಡಿಸುವ, ವಿಶ್ವೇಶ್ವರನು ಪ್ರತ್ಯಕ್ಷನಾದನು. ತರುವಾಯ ನಾನು ಭಕ್ತವತ್ಸಲನಾದ, ಶಿವನನ್ನು ಭಕ್ತಿಯಿಂದ ಪೂಜಿಸಿದೆನು. ॥೫೦೧॥

ಬಹುಕಾಲಂ ಸ್ಥಿತಂ ಕಾಶ್ಯಾಂ ತತೋಽತ್ರ ತು ಕದಾಚನ ।
ಸಮಾಗತಂ ತಥಾಽನ್ಯತ್ರ ಕದಾಚಿದ್ಗಮ್ಯತೇ ಮಯಾ ॥೫೦೨॥

॥ ಕಶ್ಯಪ ಉವಾಚ ॥

ಇತಿ ತದ್ವಚನಂ ಶ್ರುತ್ವಾ ಹಿಮವಾನ್ತುಷ್ಟಮಾನಸಃ ।
ತಂ ಪ್ರೀಣಯಿತ್ವಾ ಸಂಪ್ರಾಪ ಕಾಶೀಂ ವಿಶ್ವೇಶ್ವರಾಲಯಾಂ ॥೫೦೩॥

ಪುರಾ ಶತರ್ಚನೋಽತ್ರೈವ ಚಕಾರೋಗ್ರಂ ತಪೋ ಮುನೇ ।
ಶೈವದೀಕ್ಷಾಪರೋ ನಿತ್ಯಂ ಮೋಕ್ಷಾರ್ಥೀ ವಿಗತಸ್ಪೃಹಃ ॥೫೦೪॥

ಪ್ರಾದುರ್ಭೂತೋ ಮಹಾದೇವಃ ಪ್ರೀತಸ್ತತ್ತಪಸಾ ಮುನೇ ।
ಏತಸ್ಮಾದೇವ ವಿಮಲಾಚ್ಛಿವಲಿಂಗಾಚ್ಛಿವಪ್ರಿಯಾತ್ ॥೫೦೫॥

ಪ್ರಾದುರ್ಭೂತಂ ಮಹಾದೇವಂ ದೃಷ್ಟ್ವಾ ಸಾಂಬಂ ಶತರ್ಚನಃ ।
ಸಂಪೂಜ್ಯ ಪರಯಾ ಭಕ್ತ್ಯಾ ತುಷ್ಟಾವ ಮುನಿಸತ್ತಮಃ ॥೫೦೬॥

ತರುವಾಯ ಈಶ್ವರಾನುಗ್ರಹದಿಂದ ಕಾಶೀಕ್ಷೇತ್ರವನ್ನು ಪಡೆದು ಅಲ್ಲಿ ಬಹುಕಾಲದವರೆಗೆ ವಾಸವಾಗಿದ್ದು ಇದೀಗ ಇಲ್ಲಿಗೆ ಬಂದಿರುವೆನು. ಕಾಲಾಂತರದಲ್ಲಿ, ನಾನು ಬೇರೆಯ ಸ್ಥಳಕ್ಕೂ ಹೋಗುವೆನು. ॥೫೦೨॥

ಹೀಗೆಂದು ಕಶ್ಯಪನು ಶಿವರಹಸ್ಯವನ್ನು ಮುಂದುವರಿಸುತ್ತಾ ಹೀಗೆ ನುಡಿದನು.— ನಾರದ ಮುನಿಯು ಆ ಮಾತನ್ನು ಕೇಳಿ ಹಿಮವಂತನು, ಸಂತೋಷಭರಿತನಾಗಿ ನಾರದಮುನಿಯನ್ನು ಸಂತೋಷಗೊಳಿಸಿ, ವಿಶ್ವೇಶ್ವರನ ಆಲಯವಾದ ಕಾಶೀಕ್ಷೇತ್ರಕ್ಕೆ ನಡೆತಂದನು. ॥೫೦೩॥

ಎಲೈ, ಮುನಿಯೇ! ಹಿಂದೆ, ಒಂದಾನೊಂದು ಕಾಲದಲ್ಲಿ, ಶತರ್ಚನನೆಂಬುವನು, ಇದೇ ಸ್ಥಳದಲ್ಲಿ, ಮೋಕ್ಷಾರ್ಥಿಯಾಗಿಯೂ, ಶೈವದೀಕ್ಷೆಯಲ್ಲಿ ಆಸಕ್ತನಾಗಿಯೂ ಇದ್ದು ನಿಸ್ಪೃಹವೃತ್ತಿಯಿಂದ ಕಠಿಣವಾದ ತಪಸ್ಸನ್ನಾಚರಿಸಿದನು. ॥೫೦೪॥

ಆಗ ಪರಶಿವನು ಶತರ್ಚನನ ತಪಸ್ಸಿಗೆ ಮೆಚ್ಚಿ, ತನಗೆ ಪ್ರಿಯವೂ ಪರಿಶುದ್ಧವೂ ಆದ ಇದೇ ಗೌರೀಲಿಂಗದಿಂದ ಅಭಿವ್ಯಕ್ತನಾದನು. ॥೫೦೫॥

ಈರೀತಿಯಲ್ಲಿ ಗೌರೀಲಿಂಗದಿಂದ ಅಭಿವ್ಯಕ್ತನಾದ ಪರಶಿವನನ್ನು ನೋಡಿ ಆ ಶತರ್ಚನಮುನಿಯು, ಅಚಲವಾದ ಭಕ್ತಿಯಿಂದ ಪರಶಿವನನ್ನು ಈರೀತಿ ಸ್ತುತಿಸಿದನು. ॥೫೦೬॥

|| ಶತರ್ಜನ ಉವಾಚ ||

ಶ್ರೀಮನ್ಮಹೇಶವಿಭವೇ ವೃಷಭಧ್ವಜಾಯ
ಧ್ವಸ್ತಾಂಧಕಾಯ ಮಕರಧ್ವಜನಾಶಕಾಯ ।
ದಂಭಾಪಹಾಯ ಗರುಡಧ್ವಜಪೂಜಿತಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ||೫೦೭||

ಪಾಶಾಪಹಾಯ ಪಶುಪಾಶವಿಮೋಚಕಾಯ
ಪಂಚಾನನಾಯ ಪರಮಾದ್ಭುತವಿಕ್ರಮಾಯ ।
ಪಾರಾಯ ಪಾಲಿತಸುರಾಸುರಮಾನವಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ||೫೦೮||

ಮಾಯಾಪಹಾಯ ಮಕರಂದರಸಾಕರಾಯ
ಮಾನಪ್ರದಾಯ ಮಧುರಾಯ ಮಹೇಶ್ವರಾಯ ।

" ಭಗವಂತನೇ ! ಜಗತ್ಪ್ರಭುವೂ, ವೃಷಭಧ್ವಜನೂ, ಅಂಧಕಾರಿಯೂ, ಮನ್ಮಥರಿಪುವೂ, ಶತ್ರುಗಳ ಅಹಂಕಾರವನ್ನು ಮುರಿಯುವವನೂ, ವಿಷ್ಣುವಿನಿಂದ ಪೂಜಿಸಲ್ಪಟ್ಟವನೂ, ಮುಕ್ಕಣ್ಣನೂ, ಆದ ನಿನಗೆ ನಮಸ್ಕರಿಸುವೆನು. ||೫೦೭||

ದೇವ ! ಅಸುರರ ಬಂಧನದಲ್ಲಿ ಸಿಲುಕಿದ, ದೇವತೆಗಳನ್ನು ಬಂಧವಿಮುಕ್ತರನ್ನಾಗಿ ಮಾಡುವವನು ನೀನೇ. ಅಜ್ಞಾನವೆಂಬ ಪಾಶಕ್ಕೆ ಗುರಿಯಾಗಿ, ಪಶುಗಳಂತೆ ವಿವೇಕಶೂನ್ಯರಾಗಿ, ಸಂಸಾರಸಾಗರದಲ್ಲಿ ಮುಳುಗಿರುವ ಅಜ್ಞಾನಿಗಳಾದ ಜನರ ಮೋಹಪಾಶವನ್ನು ಕಿತ್ತೊಗೆಯುವವನೂ ನೀನೇ. ಸದ್ಯೋಜಾತಾದಿ ಐದು ಮುಖ್ಯ ಮುಖಗಳಿಂದ ನೀನು ಶೋಭಿಸುವೆ. ನಿನ್ನ ಪರಾಕ್ರಮವು ಅತುಲವಾಗಿರುವುದು. ಸಂಸಾರಸಾಗರಕ್ಕೆ ನೀನೇ ಪಾರವು. ದೇವತೆಗಳು, ಅಸುರರು, ಮನುಷ್ಯರು, ಇವರನ್ನು ಪಾಲಿಸುವವನೂ ನೀನೇ ಆಗಿರುವೆ. ಪ್ರಲಯಕಾರಿಯಾದ ತೃತೀಯ ನೇತ್ರವನ್ನು ಧರಿಸಿದ ನಿನಗೆ ನಮಸ್ಕಾರವು. ||೫೦೮||

ಓ, ಭಗವಂತನೇ, ನೀನು ಅಜ್ಞಾನಿಗಳ ಅಜ್ಞಾನವನ್ನು ಹೋಗಲಾಡಿಸುವೆ. ಅಖಂಡಾನಂದರೂಪವಾದ ನಿನ್ನ ಅದ್ವಿತೀಯಸ್ವರೂಪವು, ಬ್ರಹ್ಮಜ್ಞಾನಿಗಳಿಗೆ

ಮಾನಾತಿಗಾಯ ಮದಮೋಹವಿವರ್ಜಿತಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ||೫೦೯||

ಮುಕ್ತಿಪ್ರದಾಯ ಮುನಿಮಾನಸಮಂದಿರಾಯ
ಮುಕ್ತಾಕಲಾಪಕಲಿತಾಮಲಕುಂತಲಾಯ ।
ಮುಗ್ಧಾಸನಾಯ ಮುದಿತಾಯ ಮುಕುಂದಗಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ||೫೧೦||

ಸರ್ವೋತ್ತಮಾಯ ಸಕಲಾಯ ಸಮಾಶ್ರಯಾಯ
ಸರ್ಗಸ್ಥಿತಿಪ್ರಲಯಕಾರಣಕಾರಣಾಯ ।
ಸತ್ಯಪ್ರಿಯಾಯ ಸರಸಾಯ ಸುಮಂಗಲಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ||೫೧೧||

ಮಕರಂದದಂತೆ ಆಪ್ಯಾಯಮಾನವಾಗಿರುವುದು. ನೀನು, ಆರ್ತಜನರ ಗೌರವವನ್ನು ಕಾಪಾಡುವೆ. ಅಖಂಡೈಕರಸವಾದ ಆನಂದಸ್ವರೂಪನೂ ನೀನೇ ಆಗಿರುವೆ. ಕಾಮ, ಕ್ರೋಧ, ಲೋಭ, ಮದ, ಮಾತ್ಸರ್ಯಗಳೆಂಬ ಅರಿಷಡ್ವರ್ಗಗಳು ನಿನ್ನನ್ನು ಬಾಧಿಸಲಾರವು. ಇಂತಹ ಮುಕ್ಕಣ್ಣನಾದ ನಿನಗೆ ನಮಸ್ಕಾರವು. ||೫೦೯||

ಓ ಜಗತ್ಪ್ರಭುವೇ, ಮುಕ್ತಿಪ್ರದನೂ, ಮುನಿಗಳ ಮನಸ್ಸಿನಲ್ಲಿ ನೆಲಸಿರುವವನೂ, ಆದ ನಿನಗೆ ವಂದನೆಗಳು. ನಿನ್ನ ಮುಂಗುರುಳುಗಳು, ಮುಕ್ತಾಹಾರದಿಂದ ಶೋಭಿಸುತ್ತಿರುವುವು. ಮುಖವು ಸೌಂದರ್ಯದಿಂದ ಕಂಗೊಳಿಸುತ್ತಿರುವುದು. ದೇವ! ನಿನ್ನ ಮುಖಮುದ್ರೆಯು, ಹರ್ಷವನ್ನು ಸೂಚಿಸುತ್ತಿರುವುದು. ಮುಕುಂದಪೂಜಿತನಾದ ನಿನಗೆ ನಮಸ್ಕಾರವು. ||೫೧೦||

ಸರ್ವಶ್ರೇಷ್ಠನೂ, ಸಕಲ ವಸ್ತುಸ್ವರೂಪನೂ, ಸಕಲ ವಸ್ತುಗಳಿಗೆ ಅಧಿಷ್ಠಾನನೂ, ಸೃಷ್ಟಿಸ್ಥಿತಿಪ್ರಲಯಗಳಿಗೆ ಕಾರಣವಾದ ಕಾಲವಿಶೇಷಕ್ಕೆ ಕಾರಣನೂ, ಸತ್ಯವೇ ಪ್ರಿಯವಾಗಿ ಉಳ್ಳವನೂ, ಅಖಂಡಾನಂದಸ್ವರೂಪನೂ, ಕಲ್ಯಾಣಮೂರ್ತಿಯೂ ಮುಕ್ಕಣ್ಣನೂ ಆದ ನಿನಗೆ ನಮಸ್ಕಾರವು. ||೫೧೧||

ಭದ್ರಾಯ ಭವ್ಯವಿಭವಾಯ ಭವೌಷಧಾಯ
ಭಸ್ಮಪ್ರಭಾಸಮಭಿಭಾವಿತಭೂಷಣಾಯ ।
ಭರ್ಗಾಯ ಭಾನುಶಶಿವಹ್ನಿಗಣಪ್ರಭಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ॥೫೧೨॥

ಭವ್ಯಾಯ ಭವ್ಯಭಗನೇತ್ರವಿದಾರಕಾಯ
ಭಾಗ್ಯಾಸ್ಪದಾಯ ಭವತಾಪವಿನಾಶಕಾಯ ।
ಭಕ್ತಾಭಿವಾಂಛಿತವಿಚಿತ್ರ ಫಲಪ್ರದಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ॥೫೧೩॥

ಭೋಗೀಂದ್ರಭೋಗಮಣಿರಂಜಿತಕಂಧರಾಯ
ಭೋಗಸ್ಫುರನ್ಮರಕತೋಜ್ವಲಕುಂಡಲಾಯ ।
ಭೋಗೀಂದುಯೋಗನಿಗಲನ್ಮಕುಟಪ್ರಭಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ॥೫೧೪॥

ಮಂಗಳಮೂರ್ತಿಯೂ, ಅದ್ಭುತವಾದ ಮಹಿಮೆಯುಳ್ಳವನೂ, ಸಂಸಾರವೆಂಬ ರೋಗಕ್ಕೆ ದಿವ್ಯೌಷಧದಂತಿರುವವನೂ, ಭಸ್ಮಕಾಂತಿಯಿಂದ ವಿಧವಿಧವಾದ ಒಡವೆಗಳ ಕಾಂತಿಯನ್ನು ಧಿಕ್ಕರಿಸುವವನೂ, ತೇಜಃಸ್ವರೂಪನೂ, ಸೂರ್ಯ, ಚಂದ್ರ, ಅಗ್ನಿ, ಎಂಬ ತೇಜಃಸಮಷ್ಟಿಯ ಕಾಂತಿಯಿಂದ ಕಂಗೊಳಿಸುವವನೂ, ತ್ರಿನೇತ್ರನೂ ಆದ ನಿನ್ನನ್ನು ವಂದಿಸುವೆನು. ॥೫೧೨॥

ಆಶ್ಚರ್ಯಕರನೂ, ಭಗದೇವತೆಯ ಕಣ್ಣುಗಳನ್ನು ಸೀಳಿದವನೂ, ಭಾಗ್ಯನಿಧಿಯೂ ಸಂಸಾರ ತಾಪವನ್ನು ಹೋಗಲಾಡಿಸುವವನೂ, ಭಕ್ತರ ಇಷ್ಟಾನುಸಾರವಾಗಿ, ಅವರಿಗೆ ವಿಚಿತ್ರವಾದ ಫಲಗಳನ್ನು ವಿಂಗಡಿಸಿ ಕೊಡುವವನೂ, ನಿಟಿಲೇಕ್ಷಣನೂ ಆದ ನಿನಗೆ ನಮಸ್ಕಾರವು. ॥೫೧೩॥

ದೇವ! ಸರ್ಪಭೂಷಣನಾದ ನಿನ್ನ ಕಂಠವು, ಸರ್ಪದ ಶಿರಸ್ಸಿನಲ್ಲಿರುವ ರತ್ನದ ಕಾಂತಿಯಿಂದ ಥಳಥಳನೆ ಹೊಳೆಯುತ್ತಿರುವುದು. ಮರಕತ ಮಣಿಗಳಿಂದ ಕೂಡಿರುವ ನಿನ್ನ ಕರ್ಣಾಭರಣವು ಕುಂಡಲಾಕಾರವಾಗಿರುವ ಸರ್ಪದಂತೆ ಕಾಣಿಸುತ್ತಿರುವುದು. ನಿನ್ನ ಕಿರೀಟವು, ಸರ್ಪ, ಮತ್ತು ಅರ್ಧಚಂದ್ರ, ಇವರಿಬ್ಬರ ಪರಸ್ಪರ

ಭೂತಾಧಿಪಾಯ ಭುಜಗಾಮಲಕಂಕಣಾಯ
ಭೂತಿಪ್ರಿಯಾಯ ಭವನೋದ್ಭವಕಾರಣಾಯ ।
ಭೂಭೂಧರಪ್ರಭೃತಿಭೂತಗಣೋದಯಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ॥೫೧೫॥

ದಿವ್ಯಾಯ ದಿವ್ಯಚರಿತಾಯ ದಿಗಂಬರಾಯ
ದಿವ್ಯಾಂಬರಾಯ ದಿತಿಜಾನಲಶಾಮಕಾಯ ।
ದೀನಾರ್ತಿಹಾಯ ದಿನನಾಥನಿಷೇವಿತಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ॥೫೧೬॥

ಸೋಮಾಯ ಸೋಮರುಚಿರಂಜಿತಶೇಖರಾಯ
ಸೋಮಾಗ್ನಿಭಾನುವಿತತಾಮಲಲೋಚನಾಯ ।
ಸೋಮೇಂದ್ರಚಂದ್ರವಿಧಿವಂದಿತಪಾದುಕಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ॥೫೧೭॥

ಸಂಬಂಧದಿಂದ ಕಾಂತಿಯುತವಾಗಿ ಕಾಣಿಸುವುದು. ಅಂತಹ ನಿನಗೆ ನಮಸ್ಕಾರವು. ॥೫೧೪॥

ಭೂತನಾಥನೂ, ಸರ್ಪವನ್ನೇ ಕಂಕಣವನ್ನಾಗಿ ಧರಿಸಿರುವವನೂ, ಭಸ್ಮಪ್ರಿಯನೂ, ಜಗತ್ಸೃಷ್ಟಿಗೆ ಕಾರಣನೂ, ಭೂಮಿ, ಪರ್ವತ ಮುಂತಾದ ಜನ್ಯವಸ್ತುಗಳಿಗೆ ಮೂಲಕಾರಣನೂ, ಆದ ನಿನ್ನನ್ನು ವಂದಿಸುವೆನು. ॥೫೧೫॥

ಅದ್ಭುತನೂ, ಅದ್ಭುತವಾದ ಮಹಿಮಾತಿಶಯವುಳ್ಳವನೂ, ದಿಗಂಬರನೂ, ದಿವ್ಯವಾದ ವಸ್ತ್ರಗಳಿಂದ ಶೋಭಿಸುವವನೂ, ದೈತ್ಯರೆಂಬ ಅಗ್ನಿಯನ್ನು ನಾಮಾವಶೇಷಗೊಳಿಸುವವನೂ, ದೀನರ ಕಷ್ಟಗಳನ್ನು ನಿವಾರಿಸುವವನೂ, ಸೂರ್ಯನಿಂದ ಸೇವಿಸಲ್ಪಡುವವನೂ ಫಾಲನೇತ್ರನೂ ಆದ ನಿನಗೆ ನಮಸ್ಕಾರವು. ॥೫೧೬॥

ಓ, ದೇವನೇ, ಉಮಾಸಹಿತನೂ, ಚಂದ್ರಪ್ರಭೆಯ ಸಂಬಂಧದಿಂದ ಕಾಂತಿಮಯವಾದ ಕಿರೀಟವನ್ನು ಧರಿಸಿರುವವನೂ, ಚಂದ್ರ, ಸೂರ್ಯ, ಅಗ್ನಿ ಎಂಬಿವೇ ಮೂವರನ್ನು ಕಣ್ಣುಗಳ ರೂಪದಿಂದ ಧರಿಸುವವನೂ, ವಿಷ್ಣು, ಇಂದ್ರ, ಚಂದ್ರ ಮುಂತಾದ ದೇವತೆಗಳಿಂದ ನಮಸ್ಕರಿಸಲ್ಪಟ್ಟ ಪಾದುಕೆಗಳುಳ್ಳವನೂ ಫಾಲೇಕ್ಷಣನೂ ಆದ ನಿನಗೆ ನಮಸ್ಕಾರಗಳು. ॥೫೧೭॥

ಕಾಲಾಂತಕಾಯ ಕಮನೀಯಜಟಾಧರಾಯ
ಕಾಲಾಯ ಕಾಲವಿಜಯಾಯ ಕಲಾಧರಾಯ ।
ಕಲ್ಯಾಣದಾಯ ಕನಕಾಚಲಕಾರ್ಮುಕಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ॥೫೧೮॥

ಪುಣ್ಯಾಯ ಪುಣ್ಯಹೃದಯಾಯ ಪುರಾತನಾಯ
ಪೂತಾಯ ಪೂತಜನಚಿಂತಿತ ಸತ್ಕ್ರಿಯಾಯ ।
ಪುಣ್ಯಪ್ರಿಯಾಯ ಪುರಕಾನನಪಾವಕಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ॥೫೧೯॥

ವಿಶ್ವಾಧಿಕಾಯ ವಿಧಿವಿಷ್ಣುವಿದಾರಕಾಯ
ವಿತ್ತಾಧಿಪಾಯ ವಿಬುಧಾಬುಧಸರ್ಜಕಾಯ ।
ವಿಸ್ತಾರದಾಯ ವಿಜಯಾಯ ವಿಶೋಧಕಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ॥೫೨೦॥

ಓ, ಭಗವಂತನೇ! ನೀನು ಸರ್ವ ಪ್ರಾಣಿಗಳಿಗೂ ಮೃತ್ಯುವೆಂದೆನಿಸಿಕೊಂಡಿರುವೆ ಯಮನಿಗೂ ಸಹ ಮೃತ್ಯುವಾಗಿರುವೆ. ಸುಂದರವಾದ ಜಟೆಗಳನ್ನು ಧರಿಸುವವನೂ, ಕಾಲಸ್ವರೂಪನೂ, ಮೃತ್ಯುಂಜಯನೂ, ಚಂದ್ರಕಲಾಧಾರಿಯೂ, ಕಲ್ಯಾಣಪ್ರದನೂ ಆದ ನಿನಗೆ ವಂದನೆಗಳು. ದೇವ, ಶರಣಾಗತರಕ್ಷಕನಾದ ನೀನು ತ್ರಿಪುರರ ಸಂಹಾರಕಾಲದಲ್ಲಿ ಮೇರುಪರ್ವತವನ್ನೇ ಧನುಸ್ಸನ್ನಾಗಿ ಧರಿಸಿದೆ. ಅಂತಹ ನಿನಗೆ ವಂದಿಸುವೆನು. ॥೫೧೮॥

ಸುಕೃತಸ್ವರೂಪನೂ, ನಿರ್ಮಲಾಂತಃಕರಣನೂ, ತ್ರಿಪುರಾಸುರನೆಂಬ ಅರಣ್ಯಕ್ಕೆ ಅಗ್ನಿಯೋಪಾದಿಯಲ್ಲಿರುವವನೂ ಆದ ನಿನಗೆ ವಂದನೆಗಳು. ದೇವ, ಜ್ಞಾನಿಗಳು ಸತತವೂ ನಿನ್ನನ್ನೇ ತಮ್ಮ ಮನಸ್ಸಿನಲ್ಲಿ ನೆನೆಸುತ್ತಾ ನಿನ್ನ ಸತ್ಕಾರ್ಯಗಳನ್ನು ಧ್ಯಾನಿಸುವರು. ನೀನು ಪರಮಪವಿತ್ರನು. ನಿನಗೆ ಆದ್ಯಂತಗಳಿಲ್ಲ. ಅಂತಹ ನಿನ್ನನ್ನು ನಮಿಸುವೆನು. ॥೫೧೯॥

ಈ ಪ್ರಪಂಚಕ್ಕಿಂತಲೂ ಅಧಿಕವಾದ ಪಾರಮಾರ್ಥಿಕವಾದ ಸತ್ತೆಯಿಂದ ಶೋಭಿಸುವವನೂ, ಪ್ರಲಯಕಾಲದಲ್ಲಿ ಬ್ರಹ್ಮ, ವಿಷ್ಣ್ವಾದಿದೇವತೆಗಳನ್ನೂ ಸಹ ಸಂಹರಿಸುವವನೂ, ಧನಪತಿಯೂ, ದೇವಾಸುರರ ಸೃಷ್ಟಿಗೆ ಜನಕನೂ, ಸರ್ವ

ನಿತ್ಯಾಯ ನಿತ್ಯವಿವಿಧಾಮಿತವಿಗ್ರಹಾಯ
ನೀತಿಪ್ರದಾಯ ನಿಯತಾಯ ನಿವೃತ್ತಿದಾಯ ।
ನೀಹಾರಶೈಲನಿಲಯಾಯ ನಿಯಾಮಕಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ॥೫೨೧॥

ನಿರ್ಧರ್ಮಕಾಯ ನಿಗಮಾಗಮನಿಶ್ಚಿತಾಯ
ನಿರ್ಣೀತವಸ್ತುನಿಚಯಾಯ ನಿರಾಮಯಾಯ ।
ನಿರ್ಧೂತಪಾತಕಹಿತಾಯ ನಿರಂಜನಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ॥೫೨೨॥

ಮೃತ್ಯುಂಜಯಾಯ ಮೃತಿಕಾಲವಿವರ್ಜಿತಾಯ
ಮೃದ್ಧೇಮರತ್ನರಜತಾಕರವೃದ್ಧಿದಾಯ ।

ವ್ಯಾಪಿಯೂ, ಜಯಸ್ವರೂಪನೂ, ಸದಸತ್ಪದಾರ್ಥಗಳನ್ನು ಅಸಂಕೀರ್ಣವಾಗಿ ವಿವೇಚಿಸುವವನೂ, ತ್ರಿನೇತ್ರನೂ ಆದ ನಿನಗೆ ವಂದನೆಯು. ॥೫೨೦॥

ಓ ಭಗವಂತನೇ, ನೀನು ನಾಶರಹಿತನಾಗಿರುವೆ. ದೇವ! ನೀನು, ಈ ಲೋಕದಲ್ಲಿ ದುಷ್ಟರ ಹಾವಳಿಯು ಹೆಚ್ಚಾಗಲು, ಮತ್ತು ಧರ್ಮಕ್ಕೆ ಧಕ್ಕೆಯು ತಗಲಲು, ಆಗ ಧರ್ಮಸಂಸ್ಥಾಪನೆಗೂ, ಮತ್ತು ಭಕ್ತಾನುಗ್ರಹವನ್ನು ಮಾಡಿ, ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸುವ ಸಲುವಾಗಿಯೂ, ಅನಂತ ಕಲ್ಯಾಣಗುಣಗಳಿಂದ ಶೋಭಿಸುವ ನಾನಾ ಬಗೆಯ ಶರೀರಗಳನ್ನು ಧರಿಸಿ, ನಿನ್ನ ಭಕ್ತರನ್ನು ರಕ್ಷಿಸುವೆ. ನೀನು ಜನರಲ್ಲಿ ಸದ್ವರ್ತನೆಯು ನೆಲಸುವಂತೆ ಮಾಡುವೆ. ನಿಯತ ಕಾಲಗಳಲ್ಲಿ ಸೃಷ್ಟಿ-ಸ್ಥಿತಿ-ಲಯಗಳನ್ನು ಕೈಗೊಳ್ಳುವೆ. ಹಿಮವತ್ಪರ್ವತವೇ ನಿನ್ನ ವಾಸಸ್ಥಳವು. ಮುಕ್ಕಣ್ಣನಾದ ನಿನಗೆ ನಮಸ್ಕಾರವು. ॥೫೨೧॥

ಧರ್ಮರಹಿತನೂ, ವೇದಾಂತವೇದ್ಯನೂ, ಸರ್ವಜ್ಞನೂ, ನೀರೋಗಿಯೂ, ಪಾಪರಹಿತನೂ, ದುಃಖದಿಂದ ಬಿಡುಗಡೆಯನ್ನು ಹೊಂದಿದವನೂ, ತ್ರಿನೇತ್ರನೂ ಆದ ನಿನಗೆ ವಂದನೆಗಳು. ॥೫೨೨॥

ಮೃತ್ಯುಂಜಯನೂ, ಮರಣರಹಿತನೂ, ಮಣ್ಣು, ಚಿನ್ನ, ರತ್ನ, ಬೆಳ್ಳಿ ಮುಂತಾದ ವಸ್ತುಗಳ ಖನಿಗಳನ್ನು ಅಭಿವೃದ್ಧಿಗೊಳಿಸುವವನೂ, ಮೃಣ್ಮಯವಾದ

ಮೃಲ್ಲಿಂಗಪೂಜಕಮನೋರಥಪೂರಕಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ॥೫೨೩॥

ಗಾನಪ್ರಿಯಾಯ ಗತಿವೃತ್ತವಿಶಾರದಾಯ
ಗಾಥಾಮಯಾಯ ಗಜಕೃತ್ತಿಪರಚ್ಛದಾಯ ।
ಗಮ್ಯಾಗಮಾಯ ಗಮನಾದಿವಿವರ್ಜಿತಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ॥೫೨೪॥

ದಾಂತಾಯ ದಾನನಿಪುಣಾಯ ದಯಾಮಯಾಯ
ದಾರಿದ್ರ್ಯದುಃಖದುರಿತಾದ್ರಿದವಾನಲಾಯ ।
ದಾನಾಯ ದಾನರಹಿತಾಯ ದವಪ್ರಿಯಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ॥೫೨೫॥

ಯಜ್ಞಾಯ ಯಜ್ಞಪುರುಷಾಯ ಯಶೋಮಯಾಯ
ಯಜ್ಞಾದಿಕರ್ಮಫಲದಾಯ ಯತಿಪ್ರಿಯಾಯ ।

ಶಿವಲಿಂಗವನ್ನು ಪೂಜಿಸುವವರ ಇಷ್ಟಾರ್ಥಗಳನ್ನು ನೆರವೇರಿಸುವವನೂ ಆದ ನಿನಗೆ ನಮಸ್ಕಾರವು. ॥೫೨೩॥

ಗಾನಪ್ರಿಯನೂ, ಗಮನದಲ್ಲಿಯೂ ಮತ್ತು ಸದ್ವರ್ತನೆಯಲ್ಲಿಯೂ ಚತುರನೂ, ಗಾಥಾಮಯನೂ, ಗಜಚರ್ಮಧಾರಿಯೂ, ವೇದಾಂತವೇದ್ಯನೂ ಸಂಚಾರರಹಿತನೂ ಆದ ನಿನ್ನನ್ನು ವಂದಿಸುವೆನು. ॥೫೨೪॥

ದೇವ! ನೀನು, ಇಂದ್ರಿಯನಿಗ್ರಹವುಳ್ಳವನೂ, ದಾನಶೂರನೂ, ದಯಾನಿಧಿಯೂ, ದಾರಿದ್ರ್ಯದಿಂದುಂಟಾಗುವ ದುಃಖವೆಂಬ ಪರ್ವತಕ್ಕೆ ಕಾಡುಕಿಚ್ಚಿನಂತಿರುವವನೂ, ದಾನಸ್ವರೂಪನೂ, ದಾನಶೂನ್ಯನೂ, ಕಾಡುಕಿಚ್ಚಿನ ನಡುವೆ ಇರುವವನೂ, ಆಗಿರುವೆ. ಅಂತಹ ನಿನ್ನನ್ನು ನಮಿಸುವೆನು. ॥೫೨೫॥

ಯಜ್ಞಾದಿ ಶ್ರೌತಕರ್ಮಸ್ವರೂಪನೂ, ಯಜ್ಞಪುರುಷನೂ, ಕೀರ್ತಿಶಾಲಿಯಾಗಿ ಯಜ್ಞಯಾಗಾದಿ ವೈದಿಕ ಕರ್ಮಗಳ ಫಲಗಳನ್ನು ಕೊಡುವವನೂ, ಯತಿವರ್ಯರನ್ನು ಪ್ರೀತಿಸುವವನೂ, ಸೋಮಯಾಜಿಗಳಲ್ಲಿ ವಿಶ್ವಾಸವುಳ್ಳವನೂ, ಯಾಗದಲ್ಲಿ

ಯಜ್ಞಪ್ರಿಯಾಯ ಯಜನಾದಿರತಾಶ್ರಯಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ॥೫೨೬॥

ಶ್ರೀವಿಷ್ಣುನೇತ್ರಕಮಲಾರ್ಚಿತಪಾದುಕಾಯ
ಶ್ರೀಸೇವಿತಾದ್ರಿತನಯಾತನುಸಂಯುತಾಯ ।
ಶ್ರೀಭೂರುಹಾರುಣನವಚ್ಛದಪೂಜಿತಾಯ
ಫಾಲೇಕ್ಷಣಾಯ ಭಗವಂತ್ಸತತಂ ನಮಸ್ತೇ ॥೫೨೭॥

॥ ಕಶ್ಯಪ ಉವಾಚ ॥

ಇತಿ ಸ್ತುತ್ವಾ ಮಹಾದೇವಂ ತಂ ಪ್ರಣಮ್ಯ ಶತಾರ್ಚನಃ ।
ಭೂಯೋ ರುದ್ರೇಣ ತುಷ್ಟಾವ ಸೂಕ್ತೈರನ್ಯೈಶ್ಚ ಶಾಂಭವೈಃ॥೫೨೮॥

ತತಃ ಶಿವಪ್ರಸಾದೇನ ಜೀವನ್ಮುಕ್ತಃ ಶತಾರ್ಚನಃ ।
ಪುನಃ ಕರ್ತುಂ ಸಮಾರೇಭೇ ತಪೋ ಘೋರತರಂ ಮುನೇ ॥೫೨೯॥

ಆಸಕ್ತರಾಗಿ ದೀಕ್ಷಾಬದ್ಧರಾದ ಯಜಮಾನರ ಶರೀರದಲ್ಲಿ, ಅಷ್ಟಮೂರ್ತಿಯೆಂಬ ಸಂಜ್ಞೆಯಿಂದ ನೆಲಸಿದವನೂ ಆಗಿರುವೆ. ಅಂತಹ ನಿನಗೆ ನಮಿಸುವೆನು. ॥೫೨೬॥

ಓ, ಜಗನ್ನಾಥನೇ! ಹಿಂದೆ ಒಂದಾನೊಂದು ಕಾಲದಲ್ಲಿ ವಿಷ್ಣುವು ತನ್ನ ನೇತ್ರಕಮಲದಿಂದ ನಿನ್ನ ಪಾದವನ್ನು ಪೂಜಿಸಿರುವನು. ದಯಾಮಯನಾದ ನೀನು ನಿನ್ನ ವಲ್ಲಭೆಯಾದ ಗಿರಿಜೆಗೆ ನಿನ್ನ ಅರ್ಧಾಂಗವನ್ನೇ ಕರುಣಿಸಿರುವೆ. ಭಕ್ತರು ನಿನ್ನನ್ನು ಕೆಂಪಾದ ತಳಿರೆಲೆಗಳಿಂದ ಪೂಜಿಸುವರು. ಫಾಲನೇತ್ರನಾದ ನಿನ್ನನ್ನು ಸದಾ ವಂದಿಸುವೆನು.'' ॥೫೨೭॥

ಶತರ್ಚನನು ಈ ರೀತಿಯಲ್ಲಿ ಶಿವನನ್ನು ಸ್ತುತಿಸಿ ಅವನಿಗೆ ನಮಸ್ಕರಿಸಿ, ಪುನಃ ಪುನಃ ರುದ್ರಸೂಕ್ತದಿಂದಲೂ, ಮತ್ತು ಇನ್ನಿತರ ಶೈವಮಂತ್ರಗಳಿಂದಲೂ ಸ್ತುತಿಸಿದನು. ॥೫೨೮॥

ಎಲೈ ಮುನಿಯೇ! ಬಳಿಕ ಆ ಶತರ್ಚನಮುನಿಯು, ಈಶ್ವರಾನುಗ್ರಹ ದಿಂದ ಜೀವನ್ಮುಕ್ತನಾಗಿ ಮತ್ತೊಮ್ಮೆ ಕಠಿಣವಾದ ತಪಸ್ಸನ್ನಾಚರಿಸತೊಡಗಿದನು. ॥೫೨೯॥

ಏತಾದೃಶೈಸ್ತಪಸ್ತಪ್ತಮತ್ರಾನೇಕೈರ್ಮುನೀಶ್ವರೈಃ ।
ಮುಕ್ತಿಶ್ಚ ಬಹುಭಿಃ ಪ್ರಾಪ್ತಾ ಶಂಕರಾನುಗ್ರಹಾನ್ಮುನೇ ॥೫೩೦॥

ಯಾವಂತೋ ನಿವಸಂತ್ಯತ್ರ ಸತತಂ ಶಿವಪೂಜಕಾಃ ।
ತಾವಂತೋ ಮುಕ್ತಿಮಿಚ್ಛಂತಿ ಶಿವವ್ರತಪರಾಯಣಾಃ ॥೫೩೧॥

ಶಿವವ್ರತಪರಾ ಧನ್ಯಾಃ ಶಿವಕ್ಷೇತ್ರನಿವಾಸಿನಃ ।
ಮುಕ್ತ್ಯರ್ಥಿನಸ್ತದನ್ಯತ್ತು ನ ತೇಷಾಮಭಿಲಾಷಿತಂ ॥೫೩೨॥

ಪುರೋಂಕಾರಂ ಮೂರ್ತಿಮಂತಂ ಶಿವಧ್ಯಾನಪರಾಯಣಂ ।
ಬ್ರಹ್ಮವಿಷ್ಣ್ವಾದಯೋ ದೇವಾ ದೃಷ್ಟ್ವಾ ಪ್ರೋಚುರ್ಮುಮುಕ್ಷವಃ ॥೫೩೩॥

॥ ದೇವಾ ಊಚುಃ ॥

ತ್ವಮೋಂಕಾರೋಽಸ್ಯತಸ್ತತ್ತ್ವಂ ತ್ವಯೈವ ಜ್ಞಾಯತೇ ತತಃ ।
ಕಿಂ ಧ್ಯೇಯಂ ಸತತಂ ಮುಕ್ತ್ಯೈ ತದ್ವಿಚಾರ್ಯ ವದಸ್ವ ನಃ ॥೫೩೪॥

ಇದೇ ರೀತಿಯಲ್ಲಿ, ಶತರ್ಚನಮುನಿಯಂತಹ, ತಪೋನಿಷ್ಠರಾದ ಅನೇಕ ಮುನಿಗಳು ಈ ಸ್ಥಳದಲ್ಲಿ ತಪಸ್ಸನ್ನಾಚರಿಸಿ ಬಳಿಕ, ಈಶ್ವರಾನುಗ್ರಹದಿಂದ ಮೋಕ್ಷವನ್ನು ಪಡೆದರು. ||೫೩೦||

ಅಲ್ಲದೆ ಈ ಸ್ಥಳದಲ್ಲಿ ಎಷ್ಟು ಮಂದಿ ಮುನಿಗಳು ವಾಸವಾಗಿರುವರೋ, ಅವರೆಲ್ಲರೂ ನಿರಂತರವೂ ಶಿವಪೂಜಕರಾಗಿ ಶಿವನಿಗೆ ಪ್ರಿಯವಾದ ಆಚಾರಗಳಲ್ಲಿಯೇ ಆಸಕ್ತರಾಗಿ ಮುಮುಕ್ಷುಗಳಾಗಿರುವರು. ||೫೩೧||

ಶಿವನಿಗೆ ಪ್ರಿಯವಾದ ಆಚಾರಗಳಲ್ಲಿ ಆಸಕ್ತರೂ, ಪುಣ್ಯಶಾಲಿಗಳೂ, ಶಿವಕ್ಷೇತ್ರದಲ್ಲಿ ವಾಸವಾಗಿರುವವರೂ ಆದ ಜನರು ನಿರಂತರವೂ ಮೋಕ್ಷವನ್ನೇ ಬಯಸುವರಲ್ಲದೆ, ಇನ್ನಾವುದನ್ನೂ ಆಶಿಸಲಾರರು. ||೫೩೨||

ಹಿಂದೆ ಒಂದಾನೊಂದು ಕಾಲದಲ್ಲಿ ಸಶರೀರಿಯಾಗಿ ಶಿವಧ್ಯಾನಾಸಕ್ತವಾದ ಓಂಕಾರವನ್ನು ನೋಡಿ, ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳು ಅದನ್ನು ಕುರಿತು ಹೀಗೆಂದರು. ||೫೩೩||

“ ಓಂಕಾರಮೂರ್ತಿಯೇ, ನೀನು ಓಂಕಾರನಾಗಿರುವುದರಿಂದ ಶಿವನ ತತ್ತ್ವವನ್ನು ಚೆನ್ನಾಗಿ ಅರಿತಿರುವೆ. ಶಾಶ್ವತವಾದ ಮೋಕ್ಷವು ಲಭಿಸಬೇಕಾದರೆ

|| ಓಂಕಾರ ಉವಾಚ ||

ಮೋಕ್ಷಾರ್ಥಂ ಶಿವ ಏವೈಕೋ ಧ್ಯೇಯಃ ಸರ್ವೈರಹರ್ನಿಶಂ ।
ಸರ್ವಮನ್ಯತ್ಪರಿತ್ಯಜ್ಯ ಸಾದರಂ ಭಕ್ತಿಪೂರ್ವಕಂ ॥೫೩॥

ಯಃ ಪಿತಾ ಭವತಾಂ ದೇವಾಃ ಸ ಏವ ಶಿವ ಉಚ್ಯತೇ ।
ಸ ಏವ ಪಾರ್ವತೀನಾಥಃ ಸ ಏವ ಸುರಸತ್ತಮಃ ॥೫೬॥

ಸ ಏವ ಶ್ರೀಮಹಾದೇವಃ ಸ ಏವ ವೃಷಭಧ್ವಜಃ ।
ಸ ಏವ ಸರ್ವದೇವೇಶಃ ಸ ಏವ ಪರಮೇಶ್ವರಃ ॥೫೭॥

ಸ ಏವ ಚಂದ್ರನಯನಃ ಸ ಏವಾರ್ಕವಿಲೋಚನಃ ।
ಸ ಏವ ವಹ್ನಿನಯನಃ ಸ ಏವ ತ್ರಿಪುರಾಂತಕಃ ॥೫೮॥

ಸ ಏವ ವೇದಜನಕಃ ಸ ಏವಾಂಧಕಸೂದನಃ ।
ಸ ಏವ ವಿಷ್ಣುಸಂಹರ್ತಾ ಸ ಏವ ಮದನಾಂತಕಃ ॥೫೯॥

ನಿರಂತರವೂ, ಯಾವ ವಸ್ತುವನ್ನು ಧ್ಯಾನಿಸಬೇಕೆಂಬುದನ್ನು ಪರಿಶೀಲಿಸಿ ನಮಗೆ ಹೇಳು.'' ||೫೪||

ದೇವತೆಗಳು ಹೀಗೆಂದು ಕೇಳಲು ಆಗ ಓಂಕಾರವು ಅವರನ್ನು ಕುರಿತು ಹೀಗೆಂದಿತು. “ಎಲೈ ದೇವತೆಗಳೇ, ಮೋಕ್ಷವು ಲಭಿಸಬೇಕಾದರೆ ಸರ್ವರೂ ಇತರ ಬಾಹ್ಯವ್ಯಾಪಾರಗಳೆಲ್ಲವನ್ನೂ ಬದಿಗಿರಿಸಿ ನಿರಂತರವೂ ಶಿವನನ್ನೊಬ್ಬನ್ನೇ ಧ್ಯಾನಿಸಬೇಕು. ||೫೫||

ನಿಮ್ಮೆಲ್ಲರಿಗೂ ಯಾವ ದೇವನು ಜನಕನೋ ಅವನೇ ಶಿವನೆಂಬ ಸಂಜ್ಞೆಯಿಂದ ವ್ಯವಹರಿಸಲ್ಪಡುವನು. ಅವನೇ ಗಿರಿಜಾಪತಿಯು. ಅವನೇ ಶ್ರೇಷ್ಠ ದೇವತೆಯೂ ಆಗಿರುವನು. ||೫೬||

ಆ ಶಿವನೇ ಮಹಾದೇವನು. ಅವನೇ ವೃಷಭಧ್ವಜನು. ಅವನೇ ಸಕಲ ದೇವತೆಗಳಿಗೆ ಒಡೆಯನೂ, ಪರಮೇಶ್ವರನೂ ಆಗಿರುವನು. ||೫೭||

ಆ ಶಿವನೇ ಚಂದ್ರ, ಸೂರ್ಯ, ಅಗ್ನಿ ಎಂಬೀ ಮೂವರನ್ನೂ ಕಣ್ಣುಗಳನ್ನಾಗಿ ಧರಿಸಿರುವನು. ತ್ರಿಪುರರಿಪುವೂ, ವೇದಜನಕನೂ, ಅಂಧಕಾರಿಯೂ. ಬ್ರಹ್ಮ

ಸ ಏವ ಬ್ರಹ್ಮಸಂಹರ್ತಾ ಸ ಏವೇಂದ್ರವಿನಾಶಕಃ ।
ಸ ಏವ ಯಮಸಂಹರ್ತಾ ಸ ಏವಾಖಿಲಶಾಸಕಃ ॥೫೪೦॥

ಏತಾದೃಶಂ ಶಿವಂ ಮತ್ವಾ ಸಚ್ಚಿದಾನಂದಲಕ್ಷಣಂ ।
ಪೂಜಯಧ್ವಂ ಪ್ರಯತ್ನೇನ ಮುಕ್ತ್ಯರ್ಥಂ ಸರ್ವಸಾಧನೈಃ ॥೫೪೧॥

ಶಿವಾರ್ಚನಂ ಶಿವಧ್ಯಾನಂ ಶಿವನಾಮಾನುಕೀರ್ತನಂ ।
ಶಿವಕ್ಷೇತ್ರನಿವಾಸಶ್ಚ ಮುಕ್ತಿಸಾಧನಮುಚ್ಯತೇ ॥೫೪೨॥

ಶಿವಾರ್ಚನಂ ಚ ವಿವಿಧಂ ನಾನಾವೇದಾಂತಸಂಶ್ರುತಂ ।
ತನ್ಮೋಕ್ಷದಮಿತಿ ಪ್ರೋಕ್ತಂ ಮಹೇಶೇನಾಪಿ ತತ್ತ್ವತಃ ॥೫೪೩॥

ಪುರಾ ಪೃಷ್ಟೋ ಮಹಾದೇವಃ ಶಿವಯಾ ಜ್ಞಾನರೂಪಯಾ ।
ಕಿಂ ಮೋಕ್ಷದಮಿತಿ ಪ್ರೀತ್ಯಾ ತದಾಹ ಭಗವಾಂಛಿವಃ ॥೫೪೪॥

ವಿಷ್ಣು ಇವರನ್ನು ಸಂಹರಿಸುವವನೂ, ಮನ್ಮಥಾರಿಯೂ, ಇಂದ್ರನ ಸಂಹಾರಕನೂ, ಮತ್ತು ಮೃತ್ಯುಂಜಯನೂ ಅವನೇ ಆಗಿರುವನು. ಇಷ್ಟೇಕೆ! ಶಿವನೇ ಸಕಲ ಪ್ರಾಣಿಗಳಿಗೂ ಶಾಸಕನಾಗಿರುವನು. ॥೫೩೮-೫೩೯-೫೪೦॥

ಎಲ್ಲೈ ದೇವತೆಗಳೇ, ಸಚ್ಚಿದಾನಂದಸ್ವರೂಪನಾದ ಆ ಶಿವನು ಈ ರೀತಿಯುಳ್ಳಿರುವನೆಂದು ಭಾವಿಸಿ ಮುಕ್ತಿಗೋಸ್ಕರ ಸಕಲ ಸಾಧನಗಳಿಂದಲೂ ಅವನನ್ನೇ ಆರಾಧಿಸಿರಿ. ॥೫೪೧॥

ಈಶ್ವರಾರಾಧನೆ, ಧ್ಯಾನ, ಶಿವನಾಮೋಚ್ಚಾರಣೆ ಮತ್ತು ಶಿವಕ್ಷೇತ್ರದಲ್ಲಿ ವಾಸವಾಗಿರುವಿಕೆ. ಈ ನಾಲ್ಕು ಮುಕ್ತಿಗೆ ಸಾಧನವಾಗಿರುವುವು. ॥೫೪೨॥

ಅನೇಕ ವೇದಾಂತಗಳಲ್ಲಿ ಅಲ್ಲಲ್ಲಿ ಶಿವಾರಾಧನೆಯು ನಾನಾ ಬಗೆಯಾಗಿರುವುದೆಂದು ಹೇಳಲ್ಪಟ್ಟಿರುವುದು. ಈಶ್ವರಾರಾಧನೆಯೇ ಮುಕ್ತಿಪ್ರದವಾಗಿರುವುದೆಂದು ಈಶ್ವರನೂ ಸಹ ಹೇಳಿರುವನು. ॥೫೪೩॥

ಹಿಂದೆ ಒಂದಾನೊಂದು ಸಮಯದಲ್ಲಿ ಜ್ಞಾನರೂಪಿಣಿಯಾದ ಪಾರ್ವತಿಯು ಶಿವನನ್ನು ಕುರಿತು ಪ್ರೀತಿಯಿಂದ ಮೋಕ್ಷಪ್ರದವಾದ ವಸ್ತುವಾವುದಿರುವುದು ಎಂದು ಪ್ರಶ್ನಿಸಲು ಆಗ ಪರಶಿವನು ಆವಳನ್ನು ಕುರಿತು ಹೀಗೆಂದನು. ॥೫೪೪॥

॥ ಶ್ರೀಸದಾಶಿವ ಉವಾಚ ॥

ಶಿವೇ ಮದರ್ಚನಂ ಧ್ಯಾನಂ ಮನ್ನಾಮ್ನಾಮನುಕೀರ್ತನಂ ।
ಮದಿಷ್ಟಕ್ಷೇತ್ರವಾಸಶ್ಚ ಮುಕ್ತಿಸಾಧನಮುತ್ತಮಂ ॥೫೪೫॥

ಮದರ್ಚನಂ ಚ ವಿವಿಧಂ ಸದ್ಯಃ ಸರ್ವಾಘನಾಶಕಂ ।
ಮದರ್ಚನಾಧಿಕಾರೋಽಪಿ ಮದ್ಭಕ್ತಸ್ಯೈವ ವಸ್ತುತಃ ॥೫೪೬॥

ಮದ್ಭಕ್ತಾಶ್ಚ ತ ಏವೇತಿ ವಿಜ್ಞೇಯಾಃ ಸತತಂ ಬುಧೈಃ ।
ಯೇ ವೇದಮಾರ್ಗನಿರತಾಃ ಸ್ವಪ್ನೇಽಪ್ಯನ್ಯಪರಾಙ್ಮುಖಾಃ ॥೫೪೭॥

ವೇದೈಃ ಸರ್ವೈರಹಂ ವೇದ್ಯೋ ವೇದಾಂತೈರಪಿ ಶೈಲಜೇ ।
ಮದನ್ಯೋ ವೇದವೇದಾಂತವೇದ್ಯೋ ನಾಸ್ತ್ಯೇವ ಸರ್ವಥಾ ॥೫೪೮॥

ಎಲೌ ಗಿರಿಜೆಯೇ ! ನನ್ನ ಆರಾಧನೆ, ಧ್ಯಾನ, ನನ್ನ ನಾಮಗಳ ಉಚ್ಚಾರಣೆ, ಮತ್ತು ನನಗೆ ಪ್ರಿಯವಾದ ಕ್ಷೇತ್ರದಲ್ಲಿ ವಾಸವಾಗಿರುವಿಕೆ, ಇವು ನಾಲ್ಕು ಮುಕ್ತಿಗೆ ಉತ್ಕೃಷ್ಟ ಸಾಧನೆಗಳಾಗಿರುವುವು. ಇವುಗಳಿಂದ ತಪ್ಪದೇ ಮುಕ್ತಿಯು ಸಿದ್ಧಿಸುವುದು. ॥೫೪೫॥

ನನ್ನ ಆರಾಧನೆಯು ನಾನಾ ಬಗೆಯಾಗಿರುವುದು. ಅದು ಶೀಘ್ರದಲ್ಲಿಯೇ ಸಕಲ ಪಾಪಗಳನ್ನೂ ನಾಶಪಡಿಸುವುದು. ನನ್ನನ್ನು ಆರಾಧಿಸುವ ಅಧಿಕಾರವಾದರೋ ನನ್ನ ಭಕ್ತನಿಗೇ ಇರುವುದಿಲ್ಲದೇ ಮತ್ತಾರಿಗೂ ಸಂಭವಿಸಲಾರದು. ॥೫೪೬॥

ಯಾರು ವೇದಪ್ರಾಮಾಣ್ಯವನ್ನು ಅನುಸರಿಸಿ ವೇದ ಚೋದಿತವಾದ ಧರ್ಮಗಳ ಆಚರಣೆಯಲ್ಲಿಯೇ ಆಸಕ್ತರಾಗಿ, ಇತರ ಲೌಕಿಕ ವ್ಯಾಪಾರಗಳನ್ನು ತೊರೆದಿರುವರೋ ಅವರೇ ನನ್ನ ಭಕ್ತರೆಂದು ತಿಳಿಯಬೇಕು. ಇದೇ ನನ್ನ ಭಕ್ತರ ಸಾಧಾರಣವಾದ ಲಕ್ಷಣವಾಗಿರುವುದು. ॥೫೪೭॥

ಎಲೌ ಗಿರಿಜೆಯೇ ! ನನ್ನ ನಿಜಸ್ವರೂಪವು ವೇದಗಳಿಂದಲೂ ಮತ್ತು ವೇದಾಂತಗಳಿಂದಲೂ ತಿಳಿದುಬರುವುದು. ವೇದವೇದಾಂತಗಳು ನನ್ನನ್ನೇ ತಿಳಿಯಪಡಿಸುವುವಲ್ಲದೇ ಇನ್ನಾರು ಅವುಗಳಿಂದ ವೇದ್ಯರಾಗಿರುವುದಿಲ್ಲ. ॥೫೪೮॥

ಮಮ ತತ್ತ್ವಮವಿಜ್ಞಾಯ ವೇದಬಾಹ್ಯಾ ಭವಂತ್ಯತಃ ।
ಭಜಂತಿ ವೇದಬಾಹ್ಯಾಸ್ತೇ ಮದನ್ಯಮಮರಂ ಭ್ರಮಾತ್ ॥೫೪೯॥

ಮದನ್ಯಪೂಜಾಸಂಸಕ್ತಾ ಲಬ್ಧ್ವಾ ಜನ್ಮಾನಿ ಕೋಟಿಶಃ ।
ಪ್ರಾಪ್ನುವಂತ್ಯತಿಘೋರಾಣಿ ನರಕಾಣಿ ಪುನಃ ಪುನಃ ॥೫೫೦॥

ವೈದಿಕಾಸ್ತು ಸದಾಚಾರಾ ವೇದೋಕ್ತಾಚಾರತತ್ಪರಾಃ ।
ಭಜಂತಿ ಮಾಂ ಪ್ರಯತ್ನೇನ ವೇದಾನ್ವಿಶ್ವಸ್ಯ ಸಂತತಂ ॥೫೫೧॥

ಯೇ ಮಾಂ ವಿಶ್ವಾಧಿಕಂ ರುದ್ರಂ ಭಜಂತ್ಯನ್ಯಪರಾಙ್ಮುಖಾಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೫೨॥

ಭಸ್ಮೋದ್ಧೂಲಿತಸರ್ವಾಂಗಾಸ್ತ್ರಿಪುಂಡ್ರಾಂಕಿತಮಸ್ತಕಾಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೫೩॥

ಜ್ಞಾನಿಗಳಾದ ಕೆಲವರು ನನ್ನ ಸ್ವರೂಪವನ್ನು ಅರಿಯದೇ, ವೇದ ಪ್ರಾಮಾಣ್ಯವನ್ನು ನಂಬದಿರುವರು. ಈ ರೀತಿಯಲ್ಲಿ ವೇದಬಾಹ್ಯರಾದ ಅವರು ಅಜ್ಞಾನ ಪರವಶರಾಗಿ ನನ್ನನ್ನು ಬಿಟ್ಟು, ಇತರ ಕ್ಷುದ್ರ ದೇವತೆಯನ್ನು ಸೇವಿಸುವರು. ॥೫೪೯॥

ಅವರು ನನ್ನನ್ನು ತೊರೆದು ಇನ್ನಿತರ ದೇವತೆಗಳ ಆರಾಧನೆಯಲ್ಲಿಯೇ ಆಸಕ್ತರಾಗಿ ಕೋಟ್ಯಂತರ ಜನ್ಮಗಳನ್ನು ಪಡೆದು, ಪ್ರತಿಯೊಂದು ಜನ್ಮದ ಅಂತ್ಯದಲ್ಲಿಯೂ ಭಯಂಕರವಾದ ನರಕಗಳನ್ನು ಸೇರುವರು. ॥೫೫೦॥

ವೇದಗಳಲ್ಲಿ ಶ್ರದ್ಧೆಯುಳ್ಳ ಜನರು ನಿರಂತರವೂ ವೇದಗಳಲ್ಲಿ ನಂಬುಗೆಯನ್ನಿಟ್ಟು ಸದ್ವರ್ತನೆಯುಳ್ಳವರಾಗಿ ವೇದೋಕ್ತ ಕರ್ಮಗಳಲ್ಲಿಯೇ ನಿರತರಾಗಿ ತಪ್ಪದೇ ನನ್ನನ್ನು ಸೇವಿಸುವರು. ॥೫೫೧॥

ಯಾರು ಇತರ ಬಾಹ್ಯ ವ್ಯಾಪಾರಗಳಿಂದ ನಿವೃತ್ತರಾಗಿ, ಪ್ರಲಯಕಾರಿಯೂ, ಸರ್ವಶ್ರೇಷ್ಠನೂ ಆದ ನನ್ನನ್ನೇ ಭಜಿಸುವರೋ ಅವರೇ ವೈದಿಕರೆಂದೂ, ಮತ್ತು ನನ್ನ ಭಕ್ತರೆಂದೂ ಹೇಳಲ್ಪಡುವರು. ॥೫೫೨-೫೫೩॥

ಯೇ ರುದ್ರಾಕ್ಷಲಸತ್ಕಂಠಾ ರುದ್ರಾಕ್ಷಕರಕಂಕಣಾಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೫೪॥

ಯೇ ಮಲ್ಲಿಂಗಾರ್ಚನಾಸಕ್ತಾ ಬಿಲ್ವಪತ್ರಾದಿಭಿಃ ಸದಾ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೫೫॥

ಯೇ ಮದ್ಧ್ಯಾನರತಾ ನಿತ್ಯಮನ್ಯಧ್ಯಾನವಿವರ್ಜಿತಾಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೫೬॥

ಯೇ ಮನ್ನಾಮರತಾ ನಿತ್ಯಮನ್ಯನಾಮಪರಾಙ್ಮುಖಾಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೫೭॥

ಯೇ ಮತ್ಕಥಾಸು ಸಂಸಕ್ತಾಃ ಸಂಸಕ್ತಾನ್ಯಕಥಾಃ ಸದಾ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೫೮॥

ಯೇ ಮನ್ನಿರೀಕ್ಷಣಾಸಕ್ತಾಃ ಸಂತ್ಯಕ್ತಾನ್ಯನಿರೀಕ್ಷಣಾಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೫೯॥

ಯಾರು ಸತತವೂ, ಸರ್ವಾಂಗಗಳಲ್ಲಿ ಭಸ್ಮವನ್ನು ಲೇಪಿಸಿ, ತ್ರಿಪುಂಡ್ರಗಳನ್ನು ಧರಿಸಿ, ಕಂಠದಲ್ಲಿಯೂ ಮತ್ತು ಕೈಗಳಲ್ಲಿಯೂ ರುದ್ರಾಕ್ಷಗಳನ್ನು ಧರಿಸುವರೋ ಅವರೇ ವೈದಿಕರೆಂದೆನಿಸಿಕೊಳ್ಳುವರಲ್ಲದೇ, ನನ್ನ ಭಕ್ತರೂ ಅವರೇ ಆಗಿರುವರು. ||೫೫೪||

ಯಾವ ಜನರು, ನಿರಂತರವೂ, ಬಿಲ್ವಪತ್ರೆಗಳಿಂದ ನನ್ನ ಲಿಂಗವನ್ನೇ ಆರಾಧಿಸುವುದರಲ್ಲಿ ಆಸಕ್ತರಾಗಿರುವರೋ, ಯಾರು ಇತರ ದೇವತೆಗಳನ್ನು ಧ್ಯಾನಿಸದೇ ನನ್ನನ್ನೇ ಧ್ಯಾನಿಸುವರೋ, ಮತ್ತು ಯಾರು ಇತರ ದೇವತೆಗಳ ನಾಮೋಚ್ಚಾರಣೆಯನ್ನು ಬಿಟ್ಟು, ನನ್ನ ನಾಮಗಳನ್ನೇ ಅನವರತವೂ ಉಚ್ಚರಿಸುವರೋ ಅವರೇ ವೈದಿಕರೆಂದು ಹೇಳಲ್ಪಟ್ಟಿರುವರಲ್ಲದೇ ಅವರೇ ನನ್ನ ಭಕ್ತರೂ ಆಗಿರುವರು. ||೫೫೫-೫೫೬-೫೫೭||

ಯಾರು, ಇತರ ಕಥೆಗಳನ್ನು ಬದಿಗೊತ್ತಿ ನನ್ನ ಕಥಾಶ್ರವಣದಲ್ಲಿಯೇ ಆಸಕ್ತರಾಗಿರುವರೋ, ಯಾರು, ಇತರರನ್ನು ನಿರೀಕ್ಷಿಸುವುದನ್ನು ತೊರೆದು ನನ್ನನ್ನೇ ಸದಾ ನಿರೀಕ್ಷಿಸುವುದರಲ್ಲಿ ಕಾತುರರಾಗಿರುವರೋ, ಮತ್ತು ಯಾರು, ಇತರ ತೀರ್ಥೋದಕಗಳ ಸ್ನಾನಪಾನಾದಿಗಳನ್ನು ತೊರೆದು ನನ್ನ ತೀರ್ಥೋದಕದಲ್ಲಿಯೇ

ಯೇ ಮತ್ತೀರ್ಥೋದಕಾ ನಿತ್ಯಮನ್ಯತ್ತೀರ್ಥಪರಾಙ್ಮುಖಾಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೬೦॥

ಯೇ ಮನ್ನೈವೇದ್ಯಪುಷ್ಟಾಂಗಾ ಮದಾಘ್ರಾತಾಘ್ರಾಣನಪ್ರಿಯಾಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೬೧॥

ಯೇ ಮದ್ಭಕ್ತಾರ್ಚನಸಂಸಕ್ತಾ ಮದ್ಭಕ್ತಾನ್ಯಪರಾಙ್ಮುಖಾಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೬೨॥

ಯೇ ಮತ್ಕ್ಷೇತ್ರಕೃತಾವಾಸಾಸ್ತ್ಯಕ್ತಾನ್ಯಕ್ಷೇತ್ರಸಂಶ್ರಯಾಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೬೩॥

ಯೇ ನಕ್ತಭೋಜಿನೋ ನಿತ್ಯಂ ಸರ್ವದಾ ಸೋಮವಾಸರೇ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೬೪॥

ಯೇ ನಿತ್ಯಕೃಷ್ಣಭೂತಾಯಾಮುಪೋಷಣರತಾಃ ಸದಾ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೬೫॥

ಯೇ ಮಹೇಶ ಮಹಾದೇವ ನೀಲಕಂಠೇತಿ ವಾದಿನಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೬೬॥

ತಮ್ಮ ಸ್ನಾನಪಾನಾದಿಗಳನ್ನು ನೆರವೇರಿಸುವರೋ ಅವರೇ ವೈದಿಕರೂ ನನ್ನ ಭಕ್ತರೂ ಆಗಿರುವರು. ॥೫೫೮-೫೫೯-೫೬೦॥

ಯಾರು ನನ್ನ ನೈವೇದ್ಯವನ್ನೇ ಸೇವಿಸಿ ತಮ್ಮ ಶರೀರವನ್ನು ಪೋಷಿಸುವರೋ, ಮತ್ತು ನಾನು ಆಘ್ರಾಣಿಸಿಬಿಟ್ಟ ಪದಾರ್ಥವನ್ನೇ ಆಘ್ರಾಣಿಸಲು ಇಷ್ಟಪಡುವರೋ, ಯಾರು, ನನ್ನ ಭಕ್ತರಲ್ಲದವರನ್ನು ದೂರೀಕರಿಸಿ, ನನ್ನ ಭಕ್ತರನ್ನೇ ಆರಾಧಿಸುವುದರಲ್ಲಿ ಆಸಕ್ತರಾಗಿರುವರೋ ಮತ್ತು ಯಾರು, ಇತರ ಕ್ಷೇತ್ರಗಳಲ್ಲಿ ವಾಸವಾಗಿರದೆ ನನ್ನ ಕ್ಷೇತ್ರದಲ್ಲಿ ವಾಸವಾಗಿರುವರೋ ಅವರೇ ವೈದಿಕರೂ, ಮತ್ತು ನನ್ನ ಭಕ್ತರೂ ಆಗಿರುವರು. ॥೫೬೧-೫೬೨-೫೬೩॥

ಯಾರು ಪ್ರತಿ ಸೋಮವಾರದಲ್ಲಿಯೂ ರಾತ್ರಿಯಲ್ಲಿ ಮಾತ್ರ ಭೋಜನವನ್ನು ಕೈಗೊಳ್ಳುವರೋ, ಯಾರು, ಪ್ರತಿಯೊಂದು ಕೃಷ್ಣಪಕ್ಷದ ತಿಥಿಗಳಲ್ಲಿ ಉಪವಾಸ

ಯೇ ಶಿವೇಶಾನ ಸರ್ವೇಶ ವಿಶ್ವನಾಥೇತಿ ವಾದಿನಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೬೭॥

ಯೇ ಚಂದ್ರಚೂಡ ಗೌರೀಶ ವಿರೂಪಾಕ್ಷೇತಿ ವಾದಿನಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೬೮॥

ಯೇ ವೈ ಕೃತಾಂತಕೋಮೇಶ ಭರ್ಗ ಭೀಮೇತಿ ವಾದಿನಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೬೯॥

ಯೇ ದೇವೋತ್ತಮ ದೇವೇಶ ವೇದವೇದ್ಯೇತಿ ವಾದಿನಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೭೦॥

ಯೇ ಶೂಲಪಾಣೇ ಖಟ್ವಾಂಗಿನ್ಕೃತ್ತಿವಾಸೇತಿವಾದಿನಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೭೧॥

ಯೇ ವಿಷ್ಣುಪೂಜ್ಯ ವಿಶ್ವಾತ್ಮನ್ವಿಧಿಪೂಜ್ಯೇತಿ ವಾದಿನಃ
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೫೭೨॥

ದಿಂದಿರುವರೋ ಮತ್ತು ಯಾರು ಅನವರತವೂ ಮಹೇಶ, ಮಹಾದೇವ, ನೀಲಕಂಠ, ಎಂದು ಹೇಳುತ್ತಾ ನನ್ನ ನಾಮಗಳನ್ನೇ ಉಚ್ಚರಿಸುವುದರಲ್ಲಿ ತತ್ಪರರಾಗಿರುವರೋ ಅವರೇ ವೈದಿಕರೂ ನನ್ನ ಭಕ್ತರೂ ಆಗಿರುವರು. ||೫೬೪-೫೬೫-೫೬೬||

ಯಾರು ನಿರಂತರವೂ, ಶಿವ, ಈಶಾನ! ಸರ್ವೇಶ! ವಿಶ್ವನಾಥ! ಚಂದ್ರ ಚೂಡ! ಗೌರೀಶ! ವಿರೂಪಾಕ್ಷ! ಕೃತಾಂತಕ! ಉಮೇಶ! ಭರ್ಗ! ಭೀಮ! ಎಂಬ ನಾಮಗಳನ್ನು ಉಚ್ಚರಿಸುವುದರಲ್ಲಿಯೇ ಆಸಕ್ತರೋ ಅವರೇ ವೈದಿಕರೆಂದೆನಿಸಿ ಕೊಳ್ಳುವರು, ಮತ್ತು ಅವರೇ ನನ್ನ ಭಕ್ತರೂ ಆಗಿರುವರು. ||೫೬೭-೫೬೮-೫೬೯||

ಯಾವ ಭಕ್ತರು ದೇವೋತ್ತಮ! ದೇವೇಶ! ವೇದವೇದ್ಯ! ಶೂಲಪಾಣೇ! ಖಟ್ವಾಂಗಿನ್! ಕೃತ್ತಿವಾಸ! ವಿಷ್ಣುಪೂಜ್ಯ! ವಿಶ್ವಾತ್ಮ! ವಿಧಿಪೂಜ್ಯ! ಎಂದು ಹೇಳುತ್ತ ನನ್ನ ನಾಮೋಚ್ಚಾರಣೆಯಲ್ಲಿಯೇ ಆಸಕ್ತರಾಗಿರುವರಲ್ಲದೇ ಅವರೇ ನನ್ನ ಭಕ್ತರೆ ನಿಸಿಕೊಳ್ಳುವರು. ||೫೭೦-೫೭೧-೫೭೨||

ಯೇ ಮೃತ್ಯುಂಜಯ ಕಾಮಾರೇ ತ್ರಿಪುರಘ್ನೇತಿ ವಾದಿನಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೪೭೩॥

ಯೇ ವಿಷ್ಣುವಿಧಿಚಂದ್ರೇಂದ್ರವಿದ್ಯಾದಾತೇತಿವಾದಿನಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೪೭೪॥

ಯೇ ಸರ್ವಜ್ಞಾಖಿಲಾಧಾರ ಹರ ಧೀರೇತಿ ವಾದಿನಃ ।
ತೇ ವೈದಿಕಾ ಇತಿ ಪ್ರೋಕ್ತಾ ಮದ್ಭಕ್ತಾಶ್ಚ ತ ಏವ ಹಿ ॥೪೭೫॥

ಏತಾದೃಶಾ ಮಹಾಶೈವಾ ರುದ್ರೈಕಪರದೇವತಾಃ ।
ಮದ್ಭಕ್ತಾ ಇತಿ ವಿಜ್ಞೇಯಾ ವೇದಮಾರ್ಗರತಾಃ ಸದಾ ॥೪೭೬॥

ಶಿವೇ ಸುರಾಣಾಂ ಮರ್ತ್ಯಾನಾಂ ಮದ್ಭಕ್ತಿರ್ಮದನುಗ್ರಹಾತ್ ।
ಭವತ್ಯತಸ್ತಯಾ ಭಕ್ತ್ಯಾ ಮಯ್ಯೇವ ಪ್ರವಿಶಂತಿ ತೇ ॥೪೭೭॥

ಯಾರು, ಮೃತ್ಯುಂಜಯ! ಕಾಮಾರೇ! ತ್ರಿಪುರಘ್ನ! ಎಂದು ನನ್ನನ್ನು ಸ್ಮರಿಸುವರೋ, ಯಾರು ನನ್ನನ್ನು, ವಿಷ್ಣು, ಬ್ರಹ್ಮ, ಇಂದ್ರ, ಚಂದ್ರ, ಇವರ ವಿದ್ಯಾಗುರುವೆಂದು ಹೇಳುವರೋ, ಮತ್ತು ಯಾರು ಸರ್ವಜ್ಞ, ಅಖಿಲಾಧಾರ, ಹರ, ಧೀರ, ಎಂದು ಎಡಬಿಡದೇ ನನ್ನ ನಾಮಗಳನ್ನೇ ಉಚ್ಚರಿಸುವರೋ ಅವರೇ ವೈದಿಕರೂ ಮತ್ತು ನನ್ನ ಭಕ್ತರೂ ಆಗಿರುವರು. ||೪೭೩-೪೭೪-೪೭೫||

ರುದ್ರನನ್ನೇ ಶ್ರೇಷ್ಠದೇವತೆಯನ್ನಾಗಿ ನಂಬಿ, ಶಿವನ ಪರಮ ಭಕ್ತರಾದ ಇಂತಹ ಜನರೇ, ನನ್ನ ಭಕ್ತರಾಗಿರುವರೆಂದು ತಿಳಿಯಬೇಕು. ಅವರು ನಿರಂತರವೂ ವೇದಬೋಧಿತವಾದ ಮಾರ್ಗವನ್ನೇ ಅನುಸರಿಸುವುದರಲ್ಲಿ ಆಸಕ್ತರಾಗಿರುವರು. ||೪೭೬||

ಎಲೌ, ಗಿರಿಜೆಯೇ! ಮನುಷ್ಯರಿಗಾಗಲಿ, ದೇವತೆಗಳಿಗೇ ಆಗಲಿ, ನನ್ನ ಅನುಗ್ರಹವೊಂದರಿಂದಲೇ ನನ್ನಲ್ಲಿ ಭಕ್ತಿಯುಂಟಾಗುವುದು. ಅವರು ದಿವ್ಯವಾದ ಆ ಭಕ್ತಿಯೆಂಬ ಸಾಧನದಿಂದ ನನ್ನಲ್ಲೇ ಐಕ್ಯವನ್ನು ಹೊಂದುವರು. ||೪೭೭||

ಯೋ ಮಾಂ ಜಾನಾತಿ ತತ್ತ್ವೇನ ಜ್ಞಾತ್ವಾ ಮಾಮರ್ಚಯಿಷ್ಯತಿ ।
ತಮಹಂ ಸರ್ವದುಃಖೇಭ್ಯೋ ಮೋಚಯಾಮಿ ಶಿವೇ ಧ್ರುವಂ ॥೫೭೮॥

ಮದ್ಭಕ್ತಿತರಿರೇವೈಕಾ ಸಂಸಾರಾರ್ಣವತಾರಿಣೀ ।
ನಾಸ್ತಿ ಮದ್ಭಕ್ತಿಸದೃಶಂ ಸಂಸಾರಾರ್ಣವತಾರಕಂ ॥೫೭೯॥

ಮದ್ಭಕ್ತಿಯುಕ್ತೋ ಮಾಮೀಶಂ ಸರ್ವದೇವಗಣಾಧಿಪಂ ।
ಯಃ ಪೂಜಯತಿ ಯತ್ನೇನ ಸ ಮೋಕ್ಷಮಧಿಗಚ್ಛತಿ ॥೫೮೦॥

ತಿಷ್ಠನ್ಗಚ್ಛನ್ವದನ್ಭುಂಜನ್ಯಃ ಸದಾ ಮಾಂ ಸ್ಮರಿಷ್ಯತಿ ।
ಸ ನಿರ್ದಗ್ಧಮಹಾಪಾಪೋ ಮಾಮುಪೇಷ್ಯತ್ಯಸಂಶಯಂ ॥೫೮೧॥

ಪುಣ್ಯಕಾಲೇಷು ಸರ್ವೇಷು ಪುಣ್ಯರ್ಕ್ಷೇಷ್ವಪಿ ಸಾದರಂ ।
ಕ್ಷೀರಾದ್ಯೈಃ ಸ್ನಾಪಯೇದ್ಯೋ ಮಾಂ ಸ ಮೋಕ್ಷಮಧಿಗಚ್ಛತಿ ॥೫೮೨॥

ಯಾವನು ನನ್ನ ನಿಜಸ್ವರೂಪವನ್ನು ತಿಳಿದು ನನ್ನನ್ನು ಆರಾಧಿಸುವನೋ, ಅವನನ್ನು ನಾನು ಸಕಲ ದುಃಖಗಳಿಂದಲೂ ಮುಕ್ತನನ್ನಾಗಿ ಮಾಡುವೆ. ॥೫೭೮॥

ಜನರಿಗೆ ನನ್ನಲ್ಲಿರುವ ಭಕ್ತಿಯೆಂಬ ನೌಕೆಯೊಂದೇ ಸಂಸಾರವೆಂಬ ಸಮುದ್ರವನ್ನು ಪಾರಗಾಣಿಸುವುದಾಗಿರುತ್ತದೆ. ಸಂಸಾರಸಾಗರವನ್ನು ದಾಟಿಸುವುದರಲ್ಲಿ ನನ್ನ ಭಕ್ತಿಗೆ ಸದೃಶವಾದ ಇನ್ನೊಂದು ಸಾಧನವಿರುವುದಿಲ್ಲ. ॥೫೭೯॥

ಯಾವನು ನನ್ನಲ್ಲಿ ಭಕ್ತಿಯುಳ್ಳವನಾಗಿ, ಸಕಲ ದೇವತೆಗಳ ಅಧಿಪನೂ, ಜಗತ್ಪ್ರಭುವೂ ಆದ ನನ್ನನ್ನು ತಪ್ಪದೇ ಆರಾಧಿಸುವನೋ ಅವನು ಮುಕ್ತನಾಗುವನು. ॥೫೮೦॥

ಕುಳಿತಿರುವಾಗಲೂ, ನಡೆಯುತ್ತಿರುವಾಗಲೂ, ಮಾತನಾಡುತ್ತಿರುವಾಗಲೂ, ಮತ್ತು ಊಟಮಾಡುವಾಗಲೂ ಯಾವನು ಎಡಬಿಡದೇ ನನ್ನನ್ನೇ ಸ್ಮರಿಸುವನೋ ಅವನು, ತನ್ನ ಸಕಲ ಪಾಪಗಳನ್ನೂ ಕಳೆದುಕೊಂಡು, ಅಂತ್ಯದಲ್ಲಿ ನನ್ನ ಸಾನ್ನಿಧ್ಯವನ್ನು ಸೇರುವನು. ॥೫೮೧॥

ಯಾವನು, ಸಕಲ ಪುಣ್ಯಕಾಲಗಳಲ್ಲಿಯೂ ಮತ್ತು ಪುಣ್ಯನಕ್ಷತ್ರಗಳಲ್ಲಿಯೂ ಆದರಪೂರ್ವಕವಾಗಿ, ಕ್ಷೀರಾದಿಗಳಿಂದ ನನ್ನನ್ನು ಸ್ನಾನಮಾಡಿಸುವನೋ ಅವನು ಮೋಕ್ಷವನ್ನು ಪಡೆಯುವನು. ॥೫೮೨॥

ಭಸ್ಮನಾ ಸ್ನಾಪಯೇದ್ಯೋ ಮಾಂ ಶೋಧಿತೇನ ಸಿತೇನ ಚ ।
ಸ ಮಾಂ ಪ್ರವಿಶ್ಯ ಸುಭಗೇ ಮತ್ಸ್ವರೂಪೋ ಭವಿಷ್ಯತಿ ॥೫೮೩॥

ಸ್ವಾರ್ಜಿತೈರ್ಬಿಲ್ವಪತ್ರೈರ್ಮಾಂ ಯಃ ಪೂಜಯತಿ ಯತ್ನತಃ ।
ಸ ಮಾಂ ಪ್ರವಿಶ್ಯ ಸುಭಗೇ ಮತ್ಸ್ವರೂಪೋ ಭವಿಷ್ಯತಿ ॥೫೮೪॥

ರುದ್ರಾವಾಸರತೋ ಭೂತ್ವಾ ಯೋ ಮಾಮನ್ನೈಃ ಪ್ರತರ್ಪಯೇತ್ ।
ಸ ಮಾಂ ಪ್ರವಿಶ್ಯ ಸುಭಗೇ ಮತ್ಸ್ವರೂಪೋ ಭವಿಷ್ಯತಿ ॥೫೮೫॥

ಯೋ ಮಾಂ ಗೋಘೃತಸಂಯುಕ್ತೈರ್ಧೂಪೈಃ ಸಂಧೂಪಯೇನ್ಮುದಾ ।
ಸ ಮಾಂ ಪ್ರವಿಶ್ಯ ಸುಭಗೇ ಮತ್ಸ್ವರೂಪೋ ಭವಿಷ್ಯತಿ ॥೫೮೬॥

ಯೋ ಮಾಂ ಗೋಘೃತಸಂಯುಕ್ತೈರ್ದೀಪೈಃ ಸಂದೀಪಯೇನ್ಮುದಾ ।
ಸ ಮಾಂ ಪ್ರವಿಶ್ಯ ಸುಭಗೇ ಮತ್ಸ್ವರೂಪೋ ಭವಿಷ್ಯತಿ ॥೫೮೭॥

ಯೋ ಮಾಂ ಪ್ರದಕ್ಷಿಣೈರ್ನಿತ್ಯಂ ಪ್ರಣಾಮೈಶ್ಚಾನುಮೋದಯೇತ್ ।
ಸ ಮಾಂ ಪ್ರವಿಶ್ಯ ಸುಭಗೇ ಮತ್ಸ್ವರೂಪೋ ಭವಿಷ್ಯತಿ ॥೫೮೮॥

ಎಲೌ, ಸರ್ವಮಂಗಳೆಯೇ! ಯಾವ ಮನುಜನು, ಬಿಳುಪಾಗಿಯೂ ನಿರ್ಮಲವಾಗಿಯೂ ಇರುವ ಭಸ್ಮದಿಂದ ನನ್ನನ್ನು ಸ್ನಾನಮಾಡಿಸುವನೋ, ಅವನೇ ನನ್ನ ಸಾರೂಪ್ಯವನ್ನು ಹೊಂದುವನು. ॥೫೮೩॥

ದೇವಿ! ನಾನು ವಾಸವಾಗಿರುವಲ್ಲಿಯೇ ವಾಸವಾಗಿದ್ದು ಯಾವನು ನನ್ನನ್ನು ಅನ್ನಾದಿಗಳಿಂದ ತೃಪ್ತಿಪಡಿಸುವನೋ ಅವನು, ನನ್ನನ್ನು ಪ್ರವೇಶಿಸಿ ನನ್ನ ಸಾರೂಪ್ಯವನ್ನು ಹೊಂದುವನು. ॥೫೮೪॥

ದೇವಿ! ಯಾವ ಭಕ್ತನು, ನನ್ನನ್ನು ಭಕ್ತಿಪೂರ್ವಕವಾಗಿ, ಗೋಘೃತದಿಂದ ಸಿದ್ಧಪಡಿಸಿದ ಧೂಪಗಳಿಂದ ತೃಪ್ತಿಪಡಿಸುವನೋ, ಯಾವನು ಗೋಘೃತದಿಂದ ಸಿದ್ಧಗೊಳಿಸಿದ ದೀಪಗಳಿಂದ ತೃಪ್ತಿಗೊಳಿಸುವನೋ ಮತ್ತು ಯಾವನು, ನಿತ್ಯವೂ ಪ್ರದಕ್ಷಿಣ ನಮಸ್ಕಾರಗಳಿಂದ ಸಂತೋಷಪಡಿಸುವನೋ, ಅವನು ನನ್ನಲ್ಲಿ ಐಕ್ಯನಾಗಿ ನನ್ನ ಸಾರೂಪ್ಯವನ್ನು ಹೊಂದುವನು. ॥೫೮೫-೫೮೬-೫೮೭-೫೮೮॥

ಯೋ ಭಸ್ಮೋದ್ಧೂಲಿತೋ ನಿತ್ಯಂ ರುದ್ರಾಧ್ಯಾಯಂ ಜಪೇನ್ಮುದಾ ।
ಸ ಮಾಂ ಪ್ರವಿಶ್ಯ ಸುಭಗೇ ಮತ್ಸ್ವರೂಪೋ ಭವಿಷ್ಯತಿ ॥೫೮೯॥

ಯೋ ಭಸ್ಮೋದ್ಧೂಲಿತೋ ನಿತ್ಯಂ ಶೈವಂ ಪಂಚಾಕ್ಷರಂ ಜಪೇತ್ ।
ಸ ಮಾಂ ಪ್ರವಿಶ್ಯ ಸುಭಗೇ ಮತ್ಸ್ವರೂಪೋ ಭವಿಷ್ಯತಿ ॥೫೯೦॥

ಯಃ ಪ್ರೀಣಯೇತ್ಸ್ತೋತ್ರಪಾಠೈರ್ನೃತ್ಯೈಶ್ಚ ಕರತಾಡನೈಃ ।
ಸ ಮಾಂ ಪ್ರವಿಶ್ಯ ಸುಭಗೇ ಮತ್ಸ್ವರೂಪೋ ಭವಿಷ್ಯತಿ ॥೫೯೧॥

ಯೋ ವಾಚಯೇನ್ಮತ್ಪ್ರಶಂಸಾಂ ಸಾನುಮೋದಂ ಮದಾಲಯೇ ।
ಸ ಮಾಂ ಪ್ರವಿಶ್ಯ ಸುಭಗೇ ಮತ್ಸ್ವರೂಪೋ ಭವಿಷ್ಯತಿ ॥೫೯೨॥

ಯೋ ಮದ್ಭಕ್ತಾನತಿಪ್ರೀತ್ಯಾ ಭೋಜಯೇತ್ಪಾಯಸಾದಿಭಿಃ ।
ಸ ಮಾಂ ಪ್ರವಿಶ್ಯ ಸುಭಗೇ ಮತ್ಸ್ವರೂಪೋ ಭವಿಷ್ಯತಿ ॥೫೯೩॥

ಯೋ ಮದ್ಭಕ್ತಾಯ ವಸ್ತ್ರಾಣಿ ದತ್ವಾ ಸಂಪ್ರೀಣಯೇನ್ಮುದಾ ।
ಸ ಮಾಂ ಪ್ರವಿಶ್ಯ ಸುಭಗೇ ಮತ್ಸ್ವರೂಪೋ ಭವಿಷ್ಯತಿ ॥೫೯೪॥

ಯೋ ಮದ್ಭಕ್ತಾಯ ರತ್ನಾನಿ ದದ್ಯಾತ್ಸ್ವರ್ಣಂ ಚ ಸಾದರಂ ।
ಸ ಮಾಂ ಪ್ರವಿಶ್ಯ ಸುಭಗೇ ಮತ್ಸ್ವರೂಪೋ ಭವಿಷ್ಯತಿ ॥೫೯೫॥

ಯಾವ ಮನುಜನು, ಅನವರತವೂ, ಭಸ್ಮವನ್ನು ಲೇಪಿಸಿಕೊಂಡು ರುದ್ರಾಧ್ಯಾಯವನ್ನು ನಿತ್ಯವೂ ಜಪಿಸುವನೋ, ಯಾವನು ಭಸ್ಮವನ್ನು ಲೇಪಿಸಿ, ಶಿವಪಂಚಾಕ್ಷರಿಯನ್ನು ಜಪಿಸುವನೋ, ಮತ್ತು ಯಾವನು ಸ್ತೋತ್ರಪಾಠಗಳಿಂದಲೂ, ನೃತ್ಯಗಳಿಂದಲೂ ಮತ್ತು ಕರತಾಡನಗಳಿಂದಲೂ, ನನ್ನನ್ನು ಪ್ರೀತಿಪಡಿಸುವನೋ ಅವನು ನನ್ನನ್ನು ಪ್ರವೇಶಿಸಿ ನನ್ನ ಸಾರೂಪ್ಯವನ್ನು ಪಡೆಯುವನು. ॥೫೮೯-೫೯೦-೫೯೧॥

ಯಾವ ಭಕ್ತನು, ನನ್ನ ಆಲಯದಲ್ಲಿ, ನನ್ನ ಗುಣಗಳನ್ನು ಗಾನಮಾಡುವನೋ ಯಾವನು, ನನ್ನ ಭಕ್ತರಿಗೆ ಪ್ರೀತಿಪೂರ್ವಕವಾಗಿ ಪಾಯಸಾದಿಗಳನ್ನು ಉಣಬಡಿಸುವನೋ ಮತ್ತು ಯಾವನು, ನನ್ನ ಭಕ್ತರನ್ನು ವಸ್ತ್ರದಾನಗಳಿಂದ ಸಂತೋಷಪಡಿಸುವನೋ ಅವನು, ನನ್ನನ್ನು ಪ್ರವೇಶಿಸಿ ನನ್ನೊಂದಿಗೆ ಐಕ್ಯವನ್ನು ಹೊಂದುವನು. ॥೫೯೨-೫೯೩-೫೯೪॥

ದೇವಿ! ಯಾವನು ನನ್ನ ಭಕ್ತನಿಗೆ ವಸ್ತ್ರಗಳನ್ನೂ ರತ್ನಗಳನ್ನೂ ಮತ್ತು

ಯೋ ಮದ್ಭಕ್ತಾಯ ರುದ್ರಾಕ್ಷಾನ್ದದ್ಯಾತ್ಪ್ರೀತಿಪುರಃಸರಂ ।
ಸ ಮಾಂ ಪ್ರವಿಶ್ಯ ಸುಭಗೇ ಮತ್ಸ್ವರೂಪೋ ಭವಿಷ್ಯತಿ ॥೯೬॥

ಯೋ ದದ್ಯಾದ್ರತ್ನಲಿಂಗಾನಿ ಮದ್ಭಕ್ತಾಯ ವಿಶೇಷತಃ ।
ಸ ಮಾಂ ಪ್ರವಿಶ್ಯ ಸುಭಗೇ ಮತ್ಸ್ವರೂಪೋ ಭವಿಷ್ಯತಿ ॥೯೭॥

ಏವಂ ಮದ್ಭಕ್ತನಿರತಾ ಮನ್ಯೈವಾನುಗ್ರಹಾಚ್ಛಿವೇ ।
ಮಾಂ ಪ್ರಾಪ್ನುವಂತಿ ಸುಭಗೇ ಹವೀಂಷೀವ ನ ಸಂಶಯಃ ॥೯೮॥

ಯಸ್ಯಾಗ್ರೇ ನ ಭವಿಷ್ಯಂತಿ ದುಃಖಾನಿ ವಿವಿಧಾನ್ಯಪಿ ।
ಸ ಮದ್ಭಕ್ತಿಂ ಪರಾಂ ಪ್ರಾಪ್ಯ ತತಃ ಪ್ರಾಪ್ನೋತಿ ಮಾಂ ಶಿವೇ॥೯೯॥

ಮಯಿ ಯಸ್ಯ ಸಮುದ್ಭೂತಾ ಭಕ್ತಿರವ್ಯಭಿಚಾರಿಣೀ ।
ಸ ದುಃಖಸಾಗರಂ ತೀರ್ತ್ವಾ ಮಯಿ ಸಂವಿಶತಿ ಪ್ರಿಯೇ ॥೬೦೦॥

ಸುವರ್ಣವನ್ನೂ ಭಕ್ತಿಪೂರ್ವಕನಾಗಿ ಕೊಡುವನೋ, ಯಾವನು ನನ್ನ ಭಕ್ತನಿಗೆ ಪ್ರೀತಿಯಿಂದ ರುದ್ರಾಕ್ಷಗಳನ್ನು ದಾನಮಾಡುವನೋ ಮತ್ತು ಯಾವನು, ನನ್ನ ಭಕ್ತನಿಗೆ, ಮುಖ್ಯವಾಗಿ, ರತ್ನಖಚಿತವಾದ ಲಿಂಗಗಳನ್ನು ದಾನಮಾಡುವನೋ ಅವನು ನನ್ನನ್ನು ಪ್ರವೇಶಿಸಿ ನನ್ನ ಸಾರೂಪ್ಯವನ್ನು ಹೊಂದುವನು. ॥೯೫-೯೬-೯೭॥

ದೇವಿ! ಈ ರೀತಿಯಲ್ಲಿ, ನನ್ನ ಭಕ್ತರ ಸೇವೆಯಲ್ಲಿಯೇ ನಿರತರಾದ ಜನರು, ನನ್ನ ಅನುಗ್ರಹಕ್ಕೆ ಪಾತ್ರರಾಗಿ, ಹವಿಸ್ಸುಗಳು ಯಜ್ಞೇಶ್ವರನಲ್ಲಿ ಲೀನವಾಗುವಂತೆ, ನನ್ನಲ್ಲಿ ಲೀನರಾಗುವರು. ಇದರಲ್ಲಿ ಸಂಶಯಪಡಬೇಕಾದುದಿಲ್ಲ. ॥೯೮॥

ನನ್ನ ಭಕ್ತಾಗ್ರೇಸರನಾದ ಅವನು, ಅಂತ್ಯಕಾಲದಲ್ಲಿ ವಿವಿಧವಾದ ದುಃಖಗಳಿಗೊಳಪಡದೇ, ನನ್ನಲ್ಲಿ, ಅತುಲವಾದ ಭಕ್ತಿಯನ್ನಿಟ್ಟು, ಕೊನೆಗೆ ನನ್ನನ್ನು ಹೊಂದುವನು. ॥೯೯॥

ಎಲೌ, ಪ್ರೇಯಸಿಯೇ! ಯಾವನಿಗೆ, ನನ್ನಲ್ಲಿ ಏಕಾಂತವಾದ ಭಕ್ತಿಯು ಜನಿಸಿರುವುದೋ ಅವನು, ದುಃಖವೆಂಬ ಸಮುದ್ರವನ್ನು ದಾಟಿ ನನ್ನಲ್ಲಿ ಐಕ್ಯವನ್ನು ಹೊಂದುವನು. ॥೬೦೦॥

ಯಸ್ಯ ಭಕ್ತಿರವಿಚ್ಛಿನ್ನಾ ಮಯಿ ಜಾತಾನಪಾಯಿನೀ ।
ತಸ್ಯಾಹಂ ಸುಲಭೋ ದೇವಿ ದುರ್ಲಭೋಽಪಿ ನ ಸಂಶಯಃ ॥೬೦೧॥

ಯೇ ಮಾಂ ಯತ್ನೈರ್ಮಹಾದೇವಂ ಭಜಂತಿ ಶ್ರದ್ಧಯಾನ್ವಿತಾಃ ।
ಭಾವಯೇ ತಾನಹಂ ದೇವಿ ಹೃದಯೇ ಮಣಿವತ್ಸದಾ ॥೬೦೨॥

ಸ್ವತಂತ್ರೋಽಪಿ ಮಹಾದೇವಃ ಸೋಽಹಂ ಭಕ್ತೈರ್ವಶೀಕೃತಃ ।
ಅವಶ್ಯೋಽಪ್ಯಹಮೀಶಾನೋ ಮದ್ಭಕ್ತವಶತಾಂ ಗತಃ ॥೬೦೩॥

ಮಾಂ ನ ಜಾನಂತಿ ಶಿವೇ ಶೈವಮಾರ್ಗಬಹಿಷ್ಕೃತಾಃ ।
ಶೈವಮಾರ್ಗೇ ರತಾ ಏವ ಜಾನಂತಿ ಭುವಿ ಮಾಂ ಶಿವೇ ॥೬೦೪॥

ವೇದೈರಪಿ ನ ವಿಜ್ಞಾತಂ ಯತ್ತತ್ತ್ವಂ ಮಮ ಶಾಶ್ವತಂ ।
ತದ್ವಿಜ್ಞಾತಮಮೇ ಶೈವೈರ್ಮದನುಗ್ರಹಭಾಜನೈಃ ॥೬೦೫॥

ದೇವಿ! ನಾನು ಶಿವದ್ವೇಷಿಗಳಾದ ಜನರಿಗೆ ದುರ್ಲಭನಾದರೂ ಸಹ, ಯಾವನಿಗೆ ನನ್ನಲ್ಲಿ ಅವಿಚ್ಛಿನ್ನವಾದ ಭಕ್ತಿಯು ನೆಲಸುವುದೋ ಅವನಿಗೆ ನಾನು ಸುಲಭನೇ ಆಗಿರುವೆನು. ॥೬೦೧॥

ಪ್ರಿಯೇ! ಯಾರು, ಜಗನ್ನಾಥನಾದ ನನ್ನನ್ನು ಶ್ರದ್ಧೆಯಿಂದ ಭಜಿಸುವರೋ ಅವರನ್ನು ನಾನು ನಿರಂತರವೂ, ರತ್ನದೋಪಾದಿಯಲ್ಲಿ ನನ್ನ ಹೃದಯದಲ್ಲಿರಿಸಿ ರಕ್ಷಿಸುವೆನು. ॥೬೦೨॥

ನಾನು ಸ್ವತಂತ್ರನಾಗಿರುವವನಾದರೂ ನನ್ನ ಭಕ್ತರು ನನ್ನನ್ನು ತಮ್ಮ ಅಧೀನದಲ್ಲಿರಿಸಿಕೊಳ್ಳುವರು. ನಾನು ಇತರರ ಅಧೀನದಲ್ಲಿ, ಇರುವವನಲ್ಲವಾದರೂ, ಭಕ್ತರಿಗೆ ಅಧೀನನಾಗುವೆನು. ॥೬೦೩॥

ಎಲೌ, ಗಿರಿಜೆಯೇ! ಶಿವಪ್ರಿಯವಾದ ಆಚಾರಗಳಿಂದ ಬಹಿಷ್ಕೃತರಾದ ಜನರು ನನ್ನನ್ನು ತಿಳಿಯಲಾರರು. ಈ ಲೋಕದಲ್ಲಿ, ಶೈವ ಶಾಸ್ತ್ರದಲ್ಲಿ ಆಸಕ್ತರಾದ ಜನರೇ ನನ್ನನ್ನು ತಿಳಿಯಲು ಸಮರ್ಥರು. ॥೬೦೪॥

ನನ್ನ ತ್ರಿಕಾಲಾಬಾಧ್ಯವಾದ ಆ ಸ್ವರೂಪವನ್ನು ವೇದಗಳೂ ಸಹ ಅರಿಯಲಾರವು. ಅಂತಹ ನನ್ನ ತತ್ತ್ವವನ್ನು, ನನ್ನ ಅನುಗ್ರಹಕ್ಕೆ ಪಾತ್ರರಾದ ನನ್ನ ಭಕ್ತರು ತಿಳಿದಿರುವರು. ॥೬೦೫॥

ಮಾಮನನ್ಯಸಮಂ ನಿತ್ಯಂ ದೇವದೇವಂ ಪಿನಾಕಿನಂ ।
ವಿಜ್ಞಾಯ ಶೈವಾಃ ಸತತಂ ಪೂಜಯಂತಿ ಮುಮುಕ್ಷವಃ ॥೬೦೬॥

ತ್ಯಕ್ತಾಹಾರಾಃ ಪೂಜಯಂತಿ ಕೇಚಿಚ್ಛೈವಾಃ ಸದಾಪಿ ಮಾಂ ।
ಕೇಚಿದ್ಭುಕ್ತ್ವಾ ದಿವಾ ಶೈವಾಃ ಪೂಜಯಂತಿ ಚ ಯತ್ನತಃ ॥೬೦೭॥

ಕೇಚಿನ್ನಕ್ತಾಶಿನಃ ಶೈವಾಃ ಪೂಜಯಂತ್ಯನಿಶಂ ಚ ಮಾಂ ।
ಉಪೋಷ್ಯಾನ್ವಹಮಾಸಾಯಮತಃ ಸಂಪೂಜ್ಯ ಮಾಂ ಪ್ರಭುಂ॥೬೦೮॥

ಭೋಜಯಿತ್ವಾ ಚ ಮದ್ಭಕ್ತಾನ್ಯೋಽಶ್ನಾತಿ ಸ ಮಮ ಪ್ರಿಯಃ ।
ನಿತ್ಯನಕ್ತವ್ರತಂ ದೇವಿ ಯಃ ಕರಿಷ್ಯತಿ ಯತ್ನತಃ ॥೬೦೯॥

ಸ ಭೂಯೋ ಗರ್ಭದುಃಖಾನಿ ನ ಪ್ರಾಪ್ನೋತ್ಯೇವ ಸರ್ವಥಾ ।
ನಿತ್ಯನಕ್ತವ್ರತಂ ದೇವಿ ಸುಲಭಂ ಭುಕ್ತಿಮುಕ್ತಿದಂ ॥೬೧೦॥

ನನ್ನ ಭಕ್ತಾಗ್ರೇಸರರು ಮೋಕ್ಷವನ್ನು ಬಯಸುವವರಾಗಿ, ಧನುರ್ಧಾರಿಯೂ ದೇವೇಶನೂ ನಿರುಪಮನೂ ಆದ ನನ್ನ ಸ್ವರೂಪವನ್ನು ಚೆನ್ನಾಗಿ ಅರಿತು, ಅನವರತವೂ ಪೂಜಿಸುವರು. ||೬೦೬||

ಕೆಲವು ಭಕ್ತರು, ಆಹಾರವನ್ನೇ ತ್ಯಜಿಸಿ, ಅನವರತವೂ ನನ್ನನ್ನು ಪೂಜಿಸುವರು; ಇನ್ನು ಕೆಲವರು, ಹಗಲು ಒಂದೇ ಒಂದು ಬಾರಿ ಭುಂಜಿಸಿ, ತಪ್ಪದೇ ನನ್ನನ್ನು ಪೂಜಿಸುವರು. ||೬೦೭||

ಮತ್ತೆ ಕೆಲವು ಭಕ್ತರು, ರಾತ್ರಿ ಒಂದು ವೇಳೆ ಮಾತ್ರ ಊಟಮಾಡುವರು. ಅವರು ಪ್ರತಿದಿನವೂ, ಹಗಲು ನನ್ನನ್ನು ಪೂಜಿಸಿ ಬಳಿಕ ರಾತ್ರಿಯಾಗಲು ಊಟ ಮಾಡುವರು. ದೇವಿ! ಯಾವನು, ಸಾಯಂಕಾಲದವರೆಗೂ ಉಪವಾಸದಿಂದಿದ್ದು, ನನ್ನನ್ನು ಪೂಜಿಸಿ ಬಳಿಕ ನನ್ನ ಭಕ್ತರನ್ನು ಭೋಜನದಿಂದ ತೃಪ್ತಿಪಡಿಸುವನೋ, ಅವನು ನನಗೆ ಪ್ರಿಯನಾಗುವನು. ದೇವಿ! ಯಾವನು, ನಿತ್ಯವೂ ನಕ್ತವ್ರತವನ್ನಾಚರಿಸುವನೋ, ಅವನು ಪುನಃ ಗರ್ಭವಾಸದ ದುಃಖಗಳನ್ನು ಎಂದಿಗೂ ಹೊಂದಲಾರನು. ||೬೦೮-೬೦೯||

ದೇವಿ, ನಿತ್ಯವೂ ನಕ್ತವ್ರತವನ್ನು ಕೈಗೊಳ್ಳುವುದು ಸುಲಭವೂ ಭುಕ್ತಿಮುಕ್ತಿಪ್ರದವೂ ಆಗಿರುವುದು. ಅದನ್ನು ಆಚರಿಸುವ ಕ್ರಮವನ್ನು ಹೇಳುವೆನು, ಸಾವಧಾನಳಾಗಿ ಕೇಳು. ||೬೧೦||

ತದ್ವಿಧಾನಂ ಚ ವಕ್ಷ್ಯಾಮಿ ಶೃಣು ಯತ್ನಪುರಃಸರಂ ।
ಪ್ರಾತರಾದಿಷ್ಟಕಾಲೇಷು ಸ್ನಾತ್ವೋದ್ಧೂಲ್ಯ ಯಥಾವಿಧಿ ॥೬೧೧॥

ತ್ರಿಪುಂಡ್ರಧಾರಣಂ ಕಾರ್ಯಂ ತಥಾ ರುದ್ರಾಕ್ಷಧಾರಣಂ ।
ತತೋ ಮೃಣ್ಮಯಲಿಂಗಾನಾಮಷ್ಟೋತ್ತರಶತಂ ಕ್ರಮಾತ್ ॥೬೧೨॥

ಪ್ರಾತರಾದಿಷು ಕಾಲೇಷು ಪೂಜನೀಯಃ ಪ್ರಯತ್ನತಃ ।
ಪೂಜಾ ತಿಲಾಕ್ಷತೈಃ ಕಾರ್ಯಾ ಬಿಲ್ವಪತ್ರೈಶ್ಚ ಕೋಮಲೈಃ ॥೬೧೩॥

ಕರವೀರಾದಿಪುಷ್ಪೈಶ್ಚ ತತ್ತತ್ಕಾಲಸಮುದ್ಭವೈಃ ।
ದೀಪಮಾಲಾ ಕಲ್ಪನೀಯಾ ಕೃಷ್ಣಗೋಘೃತನಿರ್ಮಿತಾ ॥೬೧೪॥

ಪ್ರತಿಕಾಲೇಽಪಿ ಸಾ ಮಾಲಾ ಶತದೀಪಸಮನ್ವಿತಾ ।
ಪ್ರತಿಕಾಲೇ ಪಲಶತಂ ಕೃಷ್ಣಗೋಘೃತಸಂಯುತಂ ॥೬೧೫॥

ಧೂಪಶ್ಚಾಗುರುಸಾರೇಣ ಕಲ್ಪನೀಯೋ ವಿಶೇಷತಃ ।
ಗೋಕ್ಷೀರಪಾಚಿತೈರನ್ನೈರಪೂಪೈರ್ಲಡ್ಡುಕೈರಪಿ ॥೬೧೬॥

ಪ್ರಾತಃಕಾಲ ನಾಲ್ಕನೆಯ ಯಾಮದಲ್ಲಿ ಮೇಲಕ್ಕೆದ್ದು, ಸ್ನಾನವನ್ನಾಚರಿಸಿ, ಭಸ್ಮವನ್ನು ಲೇಪಿಸಿ, ತ್ರಿಪುಂಡ್ರಗಳನ್ನು ಧರಿಸಿ, ರುದ್ರಾಕ್ಷಗಳನ್ನು ಧರಿಸಬೇಕು. ||೬೧೧||

ಬಳಿಕ ಮೃಣ್ಮಯವಾದ ನೂರೆಂಟು ಲಿಂಗಗಳನ್ನು ತಪ್ಪದೇ ಕ್ರಮವರಿತು ಪೂಜಿಸಬೇಕು. ||೬೧೨||

ಮೃಣ್ಮಯವಾದ ಆ ಲಿಂಗಗಳನ್ನು, ತಿಲ, ಅಕ್ಷತ, ಬಿಲ್ವಪತ್ರೆ, ಕರವೀರ, ಮತ್ತು ಇನ್ನಿತರ ಆಯಾ ಕಾಲಗಳಲ್ಲಿ ಬೆಳೆಯುವ ಹೂವುಗಳಿಂದ ಪೂಜಿಸಬೇಕು. ಕೃಷ್ಣಗೋವಿನ ಘೃತದಿಂದ ದೀಪಮಾಲಿಕೆಯನ್ನು ಮಾಡಿ ಅದನ್ನು ಅರ್ಪಿಸಬೇಕು. ಪ್ರತಿಯೊಂದು ಪೂಜಾಕಾಲದಲ್ಲಿಯೂ ಇದರಂತೆಯೇ ದೀಪಶತಾರತಿಗಳನ್ನು ಸಮರ್ಪಿಸಬೇಕು. ಕೃಷ್ಣಗೋವಿನ ಘೃತದಿಂದ ನಿರ್ಮಿತವಾದ ದೀಪಗಳೇ ಶ್ರೇಷ್ಠವಾದವುಗಳು. ಅಗುರಿನಿಂದಲೂ ಧೂಪವನ್ನರ್ಪಿಸಬೇಕು. ||೬೧೩-೬೧೪-೬೧೫||

ಗೋಕ್ಷೀರ, ಜೇನುತುಪ್ಪ, ತುಪ್ಪ, ಇವುಗಳಿಂದ ಸಿದ್ಧಪಡಿಸಲ್ಪಟ್ಟ, ರುಚಿಕರ

ಮಧುಕ್ಷೀರಾಜ್ಯಸಂಯುಕ್ತೈರ್ನೈವೇದ್ಯಮಪಿ ಕಲ್ಪಯೇತ್ ।
ತಾಂಬೂಲಂ ಕಲ್ಪಯಿತ್ವಾಥ ಪುನರ್ಧೂಪಂ ಪ್ರಕಲ್ಪಯೇತ್ ॥೬೧೭॥

ತತೋ ನೀರಾಜನಂ ದೇಯಂ ಶತದೀಪವಿರಾಜಿತಂ ।
ಷಟ್ಸಹಸ್ರಂ ಪ್ರಜಪ್ತವ್ಯಃ ಶೈವಃ ಪಂಚಾಕ್ಷರಸ್ತತಃ ॥೬೧೮॥

ರುದ್ರಾಧ್ಯಾಯಜಪಃ ಕಾರ್ಯೋ ಮೌನೇನ ವಿಧಿಪೂರ್ವಕಂ ।
ತತಃ ಪ್ರದಕ್ಷಿಣಾ ಕಾರ್ಯಾ ಮೌನಾದಷ್ಟೋತ್ತರಂ ಶತಂ ॥೬೧೯॥

ತತಃ ಪ್ರಣಾಮಾಃ ಕರ್ತವ್ಯಾ ಯತ್ನಾದಷ್ಟೋತ್ತರಂ ಶತಂ ।
ಆಸಾಯಮೇವ ಸಂಪೂಜ್ಯ ಮಾಮನಾದ್ಯಂತಮವ್ಯಯಂ ॥೬೨೦॥

ಸಾಯಂಕಾಲೇ ತತಃ ಕಾರ್ಯಂ ತಥೈವ ಮಮ ಪೂಜನಂ ।
ತತಃ ಪರಂ ಪ್ರಯತ್ನೇನ ತಿಲೈರ್ಗೋಘೃತಸಂಯುತೈಃ ॥೬೨೧॥

ವಾದ ನಾನಾ ಬಗೆಯ ಪಕ್ವಾನ್ನಗಳನ್ನೂ, ಹೋಳಿಗೆ, ಲಾಡು, ಇವುಗಳನ್ನೂ ನಿವೇದಿಸಬೇಕು. ॥೬೧೬॥

ಆದಾದ ಬಳಿಕ ತಾಂಬೂಲವನ್ನು ಸಮರ್ಪಿಸಿ ಮತ್ತೊಮ್ಮೆ ಧೂಪವನ್ನು ಅರ್ಪಿಸಬೇಕು. ತರುವಾಯ ನೂರು ದೀಪಗಳಿಂದ ಯುಕ್ತವಾದ ನೀರಾಜನವನ್ನು ಬೆಳಗಬೇಕು. ಬಳಿಕ, ಆರುಸಾವಿರ ಬಾರಿ ಶಿವಪಂಚಾಕ್ಷರ ಜಪವನ್ನು ಜಪಿಸಬೇಕು. ॥೬೧೭-೬೧೮॥

ಆದಾದ ಬಳಿಕ ಮೌನದಿಂದಿದ್ದು, ವಿಧಿಪೂರ್ವಕವಾಗಿ ರುದ್ರಾಧ್ಯಾಯವನ್ನು ಜಪಿಸಬೇಕು. ಬಳಿಕ, ಮೌನಿಯಾಗಿಯೇ ಇದ್ದು, ನೂರೆಂಟುಬಾರಿ ಪ್ರದಕ್ಷಿಣೆಯನ್ನಾಚರಿಸಬೇಕು. ॥೬೧೯॥

ನೂರೆಂಟು ಬಾರಿ ನಮಸ್ಕರಿಸಬೇಕು. ಈ ರೀತಿಯಲ್ಲಿ ಸಾಯಂಕಾಲವಾಗುವವರೆಗೂ ಆದ್ಯಂತರಹಿತನೂ, ನಾಶರಹಿತನೂ ಆದ ನನ್ನನ್ನು ಪೂಜಿಸಿ, ಸಾಯಂಕಾಲವಾದೊಡನೆ ಇದೇ ರೀತಿಯಲ್ಲಿ ಮತ್ತೊಮ್ಮೆ ನನ್ನನ್ನು ಆರಾಧಿಸಬೇಕು. ॥೬೨೦॥

ತರುವಾಯ ಗೋಘೃತದಿಂದ ಯುಕ್ತವಾದ ತಿಲಗಳಿಂದಲೂ ಮತ್ತು ಬಿಲ್ವಪತ್ರೆಗಳಿಂದಲೂ ಮೂರು ಸಾವಿರ ಬಾರಿ ಹೋಮವನ್ನಾಚರಿಸಬೇಕು. ॥೬೨೧॥

ಹೋಮಃ ಕಾರ್ಯೋ ಬಿಲ್ವಪತ್ರೈಃ ಸಹಸ್ರತ್ರಯಮಾದರಾತ್ ।
ಭೋಜನೀಯಾಸ್ತತೋ ಯತ್ನಾನ್ಮದ್ಭಕ್ತಾಃ ಪಾಯಸಾದಿಭಿಃ ॥೬೨೨॥

ಸುವರ್ಣಂ ದಕ್ಷಿಣಾ ದೇಯಾ ಮದ್ಭಕ್ತೇಭ್ಯಸ್ತತಃ ಪರಂ ।
ಏವಂ ಕೃತ್ವಾ ವಿಧಾನೇನ ಸ್ವಕೃತಂ ಕರ್ಮ ಸಾದರಂ ॥೬೨೩॥

ನಿವೇದನೀಯಂ ಯತ್ನೇನ ಮಹ್ಯಂ ಪೂಜಾಪುರಃಸರಂ ।
ಪೀತ್ವಾ ಮತ್ತೀರ್ಥಮಮಲಂ ಮನ್ನೈವೇದ್ಯಂ ತತಃ ಪರಂ ॥೬೨೪॥

ಭೋಕ್ತವ್ಯಂ ಮೌನಮಾಸಾದ್ಯ ಮನ್ನಾಮಸ್ಮೃತಿಪೂರ್ವಕಂ ।
ಏವಂ ನಕ್ತವ್ರತಂ ಕೃತ್ವಾ ಯಸ್ತಿಷ್ಠತಿ ಸದಾ ಶಿವೇ ॥೬೨೫॥

ಸ ಮಹಾಪಾಪರಾಶಿಭ್ಯೋ ಮುಕ್ತೋ ಭವತಿ ಸರ್ವಥಾ ॥೬೨೬॥

ಏವಂ ನಕ್ತವ್ರತಂ ದೇವಿ ಯಃ ಕರಿಷ್ಯತಿ ಯತ್ನತಃ ।
ಸ ವಂಶಕೋಟಿಸಂಯುಕ್ತೋ ಮತ್ಸ್ವರೂಪಂ ಪ್ರಯಾಸ್ಯತಿ ॥೬೨೭॥

ಅನಂತರದಲ್ಲಿ ನನ್ನ ಭಕ್ತರನ್ನು ಪಾಯಸಾದಿಗಳಿಂದ ತೃಪ್ತಿಪಡಿಸಿ ಅವರಿಗೆ ಸುವರ್ಣವನ್ನು ದಕ್ಷಿಣೆಯನ್ನಾಗಿ ಕೊಡಬೇಕು. ॥೬೨೨॥

ಈ ರೀತಿ ತನ್ನ ಪೂಜಾಕಾರ್ಯವನ್ನು ವಿಧಿಪೂರ್ವಕವಾಗಿ ಸಾಂಗಗೊಳಿಸಿ ಅದು ನನ್ನಲ್ಲಿ ಅರ್ಪಿತವಾದಂತೆ ಭಾವಿಸಬೇಕು. ॥೬೨೩॥

ಪೂಜೆಯು ಸಾಂಗವಾಗಿ ನೆರವೇರಿದ ಬಳಿಕ ನನ್ನ ಪರಿಶುದ್ಧವಾದ ತೀರ್ಥೋದಕವನ್ನು ಪಾನಮಾಡಿ ನನ್ನ ನಾಮವನ್ನು ಸ್ಮರಿಸುತ್ತಾ, ನನ್ನ ನೈವೇದ್ಯಶೇಷವನ್ನು ಮೌನದಿಂದ ಸ್ವೀಕರಿಸಬೇಕು. ॥೬೨೪॥

ಎಲೌ ಗಿರಿಜೆಯೇ, ಯಾವನು ಹಿಂದೆ ಹೇಳಿದ ಪ್ರಕಾರವನ್ನನುಸರಿಸಿ ನಕ್ತವ್ರತವನ್ನಾಚರಿಸುವನೋ, ಅವನು ಮಹತ್ತರವಾದ ಪಾಪರಾಶಿಗಳಿಂದಲೂ ಸಹ ಬಿಡುಗಡೆಯನ್ನೈದುವನು. ॥೬೨೫-೬೨೬॥

ದೇವಿ, ಯಾವ ಮನುಜನು ಈ ರೀತಿಯಲ್ಲಿ ತಪ್ಪದೇ ಈ ನಕ್ತವನ್ನು ನೆರವೇರಿಸುವನೋ ಅವನು ನನ್ನ ಸ್ವರೂಪವನ್ನು ಪಡೆಯುವನು. ಅದಲ್ಲದೇ, ಅವನ ವಂಶದಲ್ಲಿ ಹುಟ್ಟಿದ ಕೋಟ್ಯಂತರ ಜನರು ನನ್ನ ಸಾರೂಪ್ಯವನ್ನು ಹೊಂದುವರು. ॥೬೨೭॥

ನಕ್ತವ್ರತಂ ಪ್ರಯತ್ನೇನ ಕ್ರಿಯತೇ ಯೇನ ಸರ್ವದಾ ।
ತೇನ ವ್ರತಾನಿ ಸರ್ವಾಣಿ ಚೀರ್ಣಾನ್ಯೇವ ವರಾನನೇ ॥೬೨೮॥

ಸ ನಿರಾಶೀತಿ ವಿಜ್ಞೇಯೋ ಯೋ ನಕ್ತಾಶೀ ಸದಾ ಭವೇತ್ ।
ಸರ್ವೇಷಾಂ ತಪಸಾಂ ಶ್ರೇಷ್ಠಂ ಯತೋ ನಕ್ತಾಶನಂ ಶಿವೇ ॥೬೨೯॥

ನಕ್ತಾಶನರತಾ ಧೀರಾ ಭಸ್ಮನಿಷ್ಠಾ ಜಿತೇಂದ್ರಿಯಾಃ ।
ಗರ್ಭವಾಸಾದಿದುಃಖೇಭ್ಯೋ ನಿವರ್ತಂತೇ ನ ಸಂಶಯಃ ॥೬೩೦॥

ಗರ್ಭವಾಸಾದಿದುರ್ಲಂಘ್ಯಮಹಾನರಕಭೀರವಃ ।
ಕುರ್ವಂತಿ ಸಾವಧಾನೇನ ನಕ್ತವ್ರತಮಿದಂ ಶಿವೇ ॥೬೩೧॥

ಪೂಜಾ ಮಮ ಪ್ರಿಯತರಾ ನಕ್ತವ್ರತರತೈಃ ಕೃತಾ ।
ನಕ್ತವ್ರತರತಾ ಯಸ್ಮಾನ್ಮಮ ಪ್ರಿಯತಮಾಃ ಶಿವೇ ॥೬೩೨॥

ಯಾವನು ಪ್ರತಿದಿನವೂ ನಕ್ತವ್ರತವನ್ನಾಚರಿಸುವನೋ ಅವನು ಸಕಲ ವ್ರತಗಳನ್ನೂ ಆಚರಿಸಿದಂತೆಯೇ ಸರಿ. ॥೬೨೮॥

ಎಲೌ ಗಿರಿಜೆಯೇ, ಯಾವನು ರಾತ್ರಿ ಒಂದು ವೇಳೆ ಮಾತ್ರ ಭೋಜನವನ್ನಾಚರಿಸುವನೋ ಅವನನ್ನು ನಿರಾಹಾರಿಯೆಂದೇ ಭಾವಿಸಬೇಕು. ಏಕೆಂದರೆ ರಾತ್ರಿಭೋಜನವೆಂಬುದು ಸಕಲ ತಪಸ್ಸುಗಳಲ್ಲಿಯೂ ಶ್ರೇಷ್ಠವೆಂದೆನಿಸಿಕೊಂಡಿರುವುದು. ॥೬೨೯॥

ನಕ್ತಾಶನವ್ರತದಲ್ಲಿ ಆಸಕ್ತರೂ, ಧೀರರೂ, ಭಸ್ಮಧಾರಣೆಯಲ್ಲಿಯೇ ತತ್ಪರರೂ ಆದ ಜನರು ಗರ್ಭವಾಸವೇ ಮುಂತಾದ ದುಃಖಕ್ಕೆ ಎಂದಿಗೂ ಗುರಿಯಾಗುವುದಿಲ್ಲ. ॥೬೩೦॥

ದೇವಿ, ಲೋಕದಲ್ಲಿ ಗರ್ಭವಾಸವೇ ಮುಂತಾದ ಅನಿವಾರ್ಯವಾದ ಮಹಾನರಕಕ್ಕೆ ಅಂಜುವ ಜನರು ಮೋಹದಿಂದ ಎಚ್ಚೆತ್ತು ಈ ನಕ್ತವ್ರತವನ್ನು ಆಚರಿಸುವರು. ॥೬೩೧॥

ದೇವಿ, ನಕ್ತವ್ರತಾಚರಣೆಯಲ್ಲಿ ಆಸಕ್ತರಾದ ಜನರೇ, ನನಗೆ ಅತ್ಯಂತ ಪ್ರಿಯರಾಗಿರುವರು. ಆದುದರಿಂದಲೇ ನಕ್ತವ್ರತಧಾರಿಗಳು ಆಚರಿಸಿದ ಪೂಜೆಯೇ ನನಗೆ ಪ್ರಿಯತಮವಾಗಿರುವುದು. ॥೬೩೨॥

ಯಸ್ಯ ನಕ್ತವ್ರತೇ ಶ್ರದ್ಧಾ ತಥಾ ಭಸ್ಮಾನುಲೇಪನೇ ।
ತಥಾ ಲಿಂಗಾರ್ಚನೇ ಶ್ರದ್ಧಾ ಸ ಜೀವನ್ಮುಕ್ತ ಉಚ್ಯತೇ ॥೬೩॥

ಯಸ್ಯ ಪ್ರೀತಿರ್ಮಯಿ ಶ್ರದ್ಧಾ ವಿಶ್ವಾಸೋಽಪಿ ಮದರ್ಚನೇ ।
ಸ ಮಮಾತಿಪ್ರಿಯತಮೋ ಮಮಾತ್ಮಾ ಸ ವರಾನನೇ ॥೬೪॥

ಮಯಿ ಪ್ರೀತಿರ್ನ ಸಹಸಾ ಜಾಯತೇ ವಸ್ತುತೋ ನೃಣಾಂ ।
ಯದಿ ಪ್ರೀತಿರ್ಮಮ ಭವೇತ್ತದಾ ಮುಕ್ತಿರದೂರತಃ ॥೬೫॥

ಮುಕ್ತಿದೋಽಹಂ ಮಹಾದೇವೋ ನ ಮತ್ತೋಽನ್ಯೋಽಸ್ತಿ ಮುಕ್ತಿದಃ ।
ಯತೋಽಹಂ ಸರ್ವದೇವಾನಾಮಧಿಪೋ ಮುಕ್ತಿದಾಯಕಃ ॥೬೬॥

ಮದ್ಭಕ್ತಾ ಏವ ಮುಚ್ಯಂತೇ ಘೋರಸಂಸಾರಸಾಗರಾತ್ ।
ನಾನ್ಯಭಕ್ತಾ ನ ಮುಚ್ಯಂತೇ ಸಂಸಾರಾತ್ಸತ್ಯಮುಚ್ಯತೇ ॥೬೭॥

ಯಾವ ಮನುಜನಿಗೆ ನಕ್ತವ್ರತದಲ್ಲಿಯೂ ಮತ್ತು ಶಿವಲಿಂಗಾರಾಧನೆಯಲ್ಲಿಯೂ ಗಾಢವಾದ ಶ್ರದ್ಧೆಯಿರುವುದೋ ಅವನೇ ಜೀವನ್ಮುಕ್ತನೆಂದೆನಿಸಿಕೊಳ್ಳುವನು. ॥೬೩॥

ಯಾವನಿಗೆ ನನ್ನ ಆರಾಧನೆಯಲ್ಲಿ ಪ್ರೀತಿಯೂ ಶ್ರದ್ಧೆಯೂ ಮತ್ತು ನಂಬಿಕೆಯೂ ಇರುವುದೋ ಅವನೇ ನನಗೆ ಪ್ರಿಯತಮನೂ ನನಗೆ ಅತ್ಯಂತ ಅಂತರಂಗವಿಷಯನೂ ಆಗಿರುವನು. ॥೬೪॥

ಸಾಮಾನ್ಯವಾಗಿ ಮಾನವರಿಗೆ ನನ್ನಲ್ಲಿ ಸ್ಥಿರಭಕ್ತಿಮೂಡುವುದು ಅಷ್ಟು ಸುಲಭಸಾಧ್ಯವಲ್ಲ. ಒಂದುವೇಳೆ ಅಂತಹ ಭಕ್ತಿಯು ಅವರಿಗೆ ಬರುವುದಾದರೆ ಶಾಶ್ವತವಾದ ಮೋಕ್ಷವು ಹಸ್ತಗತವಾದಂತೆಯೇ ಸರಿ. ॥೬೫॥

ನಾನು ಸಕಲ ದೇವತೆಗಳಿಗೂ ಮುಕ್ತಿಪ್ರದನೂ, ಪ್ರಭುವೂ ಆಗಿರುವುದರಿಂದ ನಾನೇ ಸಕಲ ಜನರಿಗೂ ಮುಕ್ತಿಯನ್ನು ಕರುಣಿಸುವವನಾಗಿರುವೆನಲ್ಲದೆ ನನ್ನನ್ನು ಬಿಟ್ಟು ಇನ್ನಾರೂ ಮುಕ್ತಿಯನ್ನು ಕೊಡಲಾರರು. ॥೬೬॥

ನನ್ನ ಭಕ್ತರೇ, ಈ ಭಯಂಕರವಾದ ಸಂಸಾರಸಾಗರದ ಪಾರವನ್ನು ಕಾಣುವರಲ್ಲದೇ, ಇನ್ನಿತರ ದೇವತೆಗಳಲ್ಲಿ ಭಕ್ತಿಭಾವನೆಯನ್ನಿಟ್ಟವರು ಸಂಸಾರದಿಂದ ಎಂದಿಗೂ ಮುಕ್ತರಾಗಲಾರರು. ಇದು ನಿಜ. ॥೬೭॥

ಶಿವೇ ಮದ್ಭಕ್ತಭಕ್ತಾನಾಂ ಯೋ ಭಕ್ತಃ ಸೋಽಪಿ ಮುಚ್ಯತೇ ।
ತಥಾ ಸತಿ ಹಿ ಮದ್ಭಕ್ತೋ ಮುಚ್ಯತೇಽತ್ಯತ್ರ ನಾದ್ಭುತಂ ॥೬೩೮॥

ಇತ್ಯುಕ್ತಂ ಶ್ರೀಮಹೇಶೇನ ಗೌರೀಂ ಪ್ರತಿ ಸುರಾಸ್ತತಃ ।
ಭಜಧ್ವಂ ಪಾರ್ವತೀನಾಥಂ ಮನೋವಾಕ್ಕಾಯಕರ್ಮಣಾ ॥೬೩೯॥

ಮನಸಾ ಕರ್ಮಣಾ ವಾಚಾ ಶಿವಂ ಯೋ ಯಜತೇ ಸದಾ ।
ತಂ ತಾರಯತಿ ಗೌರೀಶೋ ಘೋರಸಂಸಾರಸಾಗರಾತ್ ॥೬೪೦॥

ಮಹೇಶಾರ್ಚನಮೇವೈಕಂ ಭುಕ್ತಿಮುಕ್ತಿಪ್ರದಂ ಸ್ಮೃತಂ ।
ತದೇವ ಘೋರಸಂಸಾರಮಹಾಸಾಗರತಾರಕಂ ॥೬೪೧॥

ಎಲೌ ಗಿರಿಜೆಯೇ, ಭಕ್ತರು ಮೂರು ಬಗೆಯಿಂದಿರುವರು. ಅವರಲ್ಲಿ ಕೆಲವರು ನನ್ನನ್ನೇ ಭಜಿಸುವವರು. ಇನ್ನು ಕೆಲವರು ನನ್ನ ಪರಮ ಭಕ್ತರನ್ನು ಭಜಿಸುವರು. ಮತ್ತೆ ಕೆಲವರು ಅವರ ಭಕ್ತರನ್ನು ಭಜಿಸುವವರೂ ಇರುವರು. ಇವರಲ್ಲಿ ನನ್ನ ಪರಮ ಭಕ್ತರನ್ನು ಭಜಿಸುವ ಭಕ್ತರ ಭಕ್ತರೂ ಸಹ ಸಂಸಾರದಿಂದ ಮುಕ್ತರಾಗುವರು. ಹೀಗಿರುವಲ್ಲಿ ನನ್ನ ಪರಮಭಕ್ತನು ಮುಕ್ತನಾಗುವನೆಂಬುದರಲ್ಲಿ ಆಶ್ಚರ್ಯವಿರುವುದೇ ? ಎಂದಿಗೂ ಇಲ್ಲ." ||೬೩೮||

ಎಲೈ ದೇವತೆಗಳೇ, ಪರಶಿವನು ತನ್ನ ಪ್ರಿಯತಮೆಯಾದ ಪಾರ್ವತಿಯನ್ನು ಕುರಿತು ಹೀಗೆಂದು ಹೇಳಿರುವನು. ಆದುದರಿಂದ ನೀವೂ ಸಹ ಮನೋವಾಕ್ಕಾಯ ಕರ್ಮಗಳಿಂದ ಶಿವನನ್ನೇ ಭಜಿಸಿರಿ. ||೬೩೯||

ಯಾವನು ಮನೋವಾಕ್ಕಾಯಕರ್ಮಗಳಿಂದ ಎಡಬಿಡದೇ ಶಿವನನ್ನೇ ಆರಾಧಿಸುವನೋ ಅವನನ್ನು ಪರಶಿವನು ಭಯಂಕರವಾದ ಈ ಸಂಸಾರಸಾಗರದಿಂದ ಪಾರುಗಾಣಿಸುವನು. ||೬೪೦||

ಲೋಕದಲ್ಲಿ ಈಶ್ವರಾರಾಧನೆಯೊಂದೇ ಇಹದಲ್ಲಿ ಅಶನವಸನಗಳನ್ನೂ ಪರದಲ್ಲಿ ಮುಕ್ತಿಯನ್ನೂ ಕೊಡುವುದಾಗಿರುವುದು. ಈಶ್ವರಾರಾಧನೆಯೇ ಭಯಂಕರವಾದ ಸಂಸಾರವನ್ನು ಪಾರುಗಾಣಿಸುವುದರಲ್ಲಿ ಸಮರ್ಥವಾಗಿರುವುದು. ||೬೪೧||

ಶ್ರೀಮಹೇಶ ಮಹೇಶೇತಿ ಮಹೇಶೇತಿ ತ್ರಿರುಚ್ಚರನ್ ।
ಸದ್ಯೋ ಮಹಾಘಸಂಘೇಭ್ಯೋ ಮುಚ್ಯತೇ ನಾತ್ರ ಸಂಶಯಃ ॥೬೪೨॥

ಮಹೇಶೇತಿ ಪರಂ ನಾಮ ಭುಕ್ತಿಮುಕ್ತಿಪ್ರದಂ ಶುಭಂ ।
ತತಸ್ತದೇವ ಸತತಂ ಸ್ಮರ್ತವ್ಯಂ ಮುಕ್ತಿಕಾಂಕ್ಷಿಭಿಃ ॥೬೪೩॥

ಮುಕ್ತಿಕಾಂತಾಕರ್ಷಕೋಽಸೌ ಶಿವಮಂತ್ರಃ ಶ್ರುತಿಶ್ರುತಃ ।
ಗೋಪನೀಯೋಽಪಿ ಮೋಕ್ಷಾರ್ಥಂ ವೇದಾಂತೈಃ ಪ್ರಕಟೀಕೃತಃ ॥೬೪೪॥

ಅತೋ ಮಹೇಶ್ವರಂ ಸಾಂಬಂ ಸಾವಧಾನೇನ ಸಂತತಂ ।
ಭಜಧ್ವಂ ಭವಸಂತಾಪವಿಚ್ಛಿತ್ತ್ಯರ್ಥಂ ಮುದಾ ಸುರಾಃ ॥೬೪೫॥

ಯಾವ ಮನುಜನೇ ಆಗಲಿ, ಮಹೇಶ, ಮಹೇಶ! ಮಹೇಶ! ಎಂದು ಮೂರೇ ಮೂರು ಬಾರಿ ಪರಶಿವನಾದ ನನ್ನನ್ನು ಸ್ಮರಿಸಿದರೂ ಸಹ, ಅಷ್ಟರಿಂದಲೇ ಅವನು, ಮಹತ್ತರವಾದ ಪಾಪರಾಶಿಗಳಿಂದ ಶೀಘ್ರದಲ್ಲಿಯೇ ಮುಕ್ತನಾಗುವನು. ||೬೪೨||

ಮಹೇಶ! ಎಂಬ ಶ್ರೇಷ್ಠವಾದ ಆ ಈಶ್ವರನಾಮಧೇಯವು ಭುಕ್ತಿಮುಕ್ತಿಗಳನ್ನು ಕರುಣಿಸುವುದೂ, ಮತ್ತು ಮಂಗಳಕರವೂ ಆಗಿರುವುದು. ಆದುದರಿಂದಲೇ ಮೋಕ್ಷವನ್ನು ಬಯಸುವವರು ಮಹೇಶನಾಮವನ್ನೇ ಸತತವೂ ಸ್ಮರಿಸಬೇಕು. ||೬೪೩||

ಮಹೇಶನಾಮದಿಂದ ಯುಕ್ತವಾದ ಈ ಶಿವಮಂತ್ರವೂ ಮುಕ್ತಿಯೆಂಬ ವನಿತೆಯನ್ನು ಹಿಡಿದೆಳೆದು ಮುಮುಕ್ಷುವಿಗೆ ಅಧೀನಳನ್ನಾಗಿ ಮಾಡುವುದೆಂದು ವೇದದಲ್ಲಿ ಪ್ರಸಿದ್ಧವಾಗಿರುವುದು. ಮುಮುಕ್ಷುಗಳು, ಮುಕ್ತಿಯನ್ನು ಪಡೆಯಬೇಕಾದರೆ ವೇದಾಂತ ಪ್ರತಿಪಾದ್ಯವಾದ, ಈ ಮಂತ್ರವನ್ನು ಎಚ್ಚರಿಕೆಯಿಂದ ರಹಸ್ಯವಾಗಿ ಕಾಪಾಡಿಕೊಳ್ಳಬೇಕು. ||೬೪೪||

ಎಲೈ, ದೇವತೆಗಳೇ! ಆದುದರಿಂದ ನೀವು, ಸಂಸಾರದಿಂದುಂಟಾಗುವ ತಾಪತ್ರಯಗಳನ್ನು ಹೋಗಲಾಡಿಸುವುದಕ್ಕೋಸ್ಕರ, ಪರಮಪೂಜ್ಯನೂ, ಅರ್ಧನಾರೀಶ್ವರಸ್ವರೂಪನೂ ಆದ ಪರಶಿವನನ್ನು ಪ್ರೀತಿಯಿಂದ ಸೇವಿಸಿರಿ. ||೬೪೫||

ಶಿವಾನ್ಯಾ ನ ಗತಿರ್ಯಸ್ಮಾದ್ಭವತಾಂ ಮುಕ್ತಿಕಾಂಕ್ಷಿಣಾಂ।
ತತೋ ಭಜಧ್ವಂ ಮುಕ್ತ್ಯರ್ಥಂ ಶಿವಮೇವ ಸದಾ ಮುದಾ ॥೬೪೬॥

ಮೋಕ್ಷಾರ್ಥಂ ಚ ಶಿವಾದನ್ಯಂ ಯಃ ಪೂಜಯಿತುಮಿಚ್ಛತಿ।
ಸ ಉನ್ಮತ್ತ ಇತಿ ಜ್ಞೇಯೋ ವೇದಮಾರ್ಗಬಹಿಷ್ಕೃತಃ ॥೬೪೭॥

ತೃಪ್ತ್ಯರ್ಥಂ ಕಂಟಕಗ್ರಾಸೀ ಯಥಾ ತೃಪ್ತಿಂ ನ ವಿಂದತಿ।
ಶಿವೇತರರತಸ್ತದ್ವನ್ನ ಮುಕ್ತಿಮಭಿವಿಂದತಿ ॥೬೪೮॥

ಶಿವೇತರಾರ್ಚನೇ ಶ್ರದ್ಧಾ ಯಸ್ಯ ಸಂಜಾಯತೇ ಭ್ರಮಾತ್।
ತಜ್ಜನ್ಮ ಗತಮೇವಾಶು ವೃಥಾ ಕಂಟಕಜನ್ಮವತ್ ॥೬೪೯॥

ನ ವರಂ ತಾದೃಶಂ ಜನ್ಮ ಯಾದೃಶಂ ಪ್ರಾಪ್ಯ ಮಾನವಃ।
ಶಿವೇತರಾರ್ಚನೇ ಶ್ರದ್ಧಾಂ ಕುರುತೇ ಮೋಹಸಂಯುತಃ ॥೬೫೦॥

ಮುಮುಕ್ಷುಗಳಾದ ನಿಮಗೆ ಶಿವನನ್ನು ಬಿಟ್ಟು, ಇನ್ನಾವ ಆಲಂಬನವೂ ಇರುವುದಿಲ್ಲವಾದುದರಿಂದ ನೀವು, ಅನವರತವೂ ಶಿವನನ್ನೇ ಪ್ರೀತಿಯಿಂದ ಭಜಿಸಿರಿ. ಆದರಿಂದ ನಿಮಗೆ ಮುಕ್ತಿಯು ಲಭಿಸುವುದು. ॥೬೪೬॥

ಯಾವನು ಮುಕ್ತಿಗೋಸ್ಕರ ಶಿವನನ್ನು ಬಿಟ್ಟು, ಇನ್ನಿತರ ದೇವತೆಯನ್ನು ಆರಾಧಿಸಬಯಸುವನೋ, ಅವನು ಹುಚ್ಚನೂ ಮತ್ತು ವೇದಬಾಹಿರನೂ ಆಗಿರುವನು. ॥೬೪೭॥

ತೃಪ್ತಿಯುಂಟಾಗುವದಕ್ಕೋಸ್ಕರ, ಕಲ್ಲು ಮುಳ್ಳುಗಳನ್ನು ತಿನ್ನುವನು ಹೇಗೆ ತೃಪ್ತಿಯನ್ನು ಹೊಂದಲಾರನೋ, ಅದರಂತೆಯೇ ಮುಕ್ತಿಗೋಸ್ಕರ, ಶಿವನನ್ನು ತೊರೆದು ಇತರ ದೇವತೆಗಳನ್ನು ಆರಾಧಿಸುವವನೂ ಮುಕ್ತಿಯನ್ನು ಎಂದಿಗೂ ಹೊಂದಲಾರನು. ॥೬೪೮॥

ಯಾವನಿಗೆ ಅಜ್ಞಾನದಿಂದ ಶಿವನಿಗಿಂತ ಬೇರೆಯವರಾದ ದೇವತೆಗಳ ಆರಾಧನೆಯಲ್ಲಿ, ಶ್ರದ್ಧೆಯುಂಟಾಗುವುದೋ ಅವನ ಜನ್ಮವು ಮುಳ್ಳುಗಳ ಜನ್ಮದಂತೆ ವ್ಯರ್ಥವೇ ಸರಿ. ॥೬೪೯॥

ಮನುಷ್ಯನು, ಯಾವ ಜನ್ಮವನ್ನು ಪಡೆದು ಅಜ್ಞಾನಪರವಶನಾಗಿ ಶಿವನಿಗಿಂತ ಇತರರಾದ ದೇವತೆಗಳ ಆರಾಧನೆಯಲ್ಲಿ ಶ್ರದ್ಧೆಯನ್ನಿಡುವನೋ ಆ ಜನ್ಮವು ಶ್ರೇಷ್ಠವಾದ ಜನ್ಮವಾಗಿರುವುದಿಲ್ಲ. ॥೬೫೦॥

ಜನ್ಮ ತಾದೃಗ್ವರಂ ದೇವಾಃ ಯಾದೃಶಂ ಪ್ರಾಪ್ಯ ಮಾನವಃ ।
ಮಹೇಶಾರಾಧನೇ ಶ್ರದ್ಧಾಂ ಕುರುತೇ ಭುಕ್ತಿಮುಕ್ತಿದಾಂ ॥೬೫೧॥

ಗರ್ಭಧಾರಣಜಕ್ಲೇಶಃ ತನ್ಮಾತುಃ ಸಫಲಃ ಸ್ಮೃತಃ ।
ಯದ್ಗರ್ಭನಿರ್ಗತಃ ಪುತ್ರಃ ಶಿವಭಕ್ತಿರತೋ ಭವೇತ್ ॥೬೫೨॥

ತದೇವ ಕುಲಮುತ್ಕೃಷ್ಟಂ ಧನ್ಯಮಿತ್ಯಭಿಮನ್ಮಹೇ ।
ಯಸ್ಮಿನ್ಕುಲೇ ಸಮುತ್ಪನ್ನಃ ಶಿವಪೂಜಾಪರೋ ಭವೇತ್ ॥೬೫೩॥

ಕಿಮತ್ರ ಬಹುನೋಕ್ತೇನ ಶಿವಭಕ್ತಿರ್ಮುಮುಕ್ಷುಭಿಃ ।
ನಿತ್ಯಮವ್ಯಭಿಚಾರೇಣ ಕರ್ತವ್ಯಾ ಸತ್ಯಮುಚ್ಯತೇ ॥೬೫೪॥

ಇತ್ಯೋಂಕಾರವಚಃ ಶ್ರುತ್ವಾ ವಿಷ್ಣುಬ್ರಹ್ಮಾದಯಃ ಸುರಾಃ ।
ಶಿವಾರ್ಚನರತಾಃ ಸಂತಃ ತಪಸ್ತೇಪುರ್ದುರಾಸದಂ ॥೬೫೫॥

ಎಲೈ, ದೇವತೆಗಳಿರಾ! ಮನುಜನು, ಯಾವ ಜನ್ಮವನ್ನು ಪಡೆದು, ಈಶ್ವರಾರಾಧನೆಯಲ್ಲಿಯೇ ಶ್ರದ್ಧೆಯನ್ನಿಡುವನೋ ಆ ಜನ್ಮವೇ ಶ್ರೇಷ್ಠವಾಗಿರುವುದು. ||೬೫೧||

ಯಾವ ಮಾತೃವಿನ ಉದರದಿಂದ, ಈಶ್ವರಭಕ್ತನಾದ ಪುತ್ರನು ಜನಿಸುವನೋ, ಆ ಮಾತೃವಿನ ಗರ್ಭಧಾರಣೆಯಿಂದುಂಟಾದ ಕ್ಲೇಶವೇ ಸಫಲವಾಗುವುದೆಂದು ತಿಳಿದವರು ಹೇಳುವರು. ||೬೫೨||

ಯಾವ ವಂಶದಲ್ಲಿ ಜನಿಸಿದ ಪುತ್ರನು, ಈಶ್ವರಾರಾಧನೆಯಲ್ಲಿ ಆಸಕ್ತನಾಗುವನೋ, ಆ ವಂಶವೇ ಶ್ರೇಷ್ಠವೂ, ಸಫಲವೂ ಆಗಿರುವುದೆಂದು ಭಾವಿಸುವೆವು. ||೬೫೩||

ಹೆಚ್ಚಾಗಿ ವರ್ಣಿಸುವುದರಿಂದ ಯಾವ ಪ್ರಯೋಜನವು ತಾನೇ ಇರುವುದು? ಹೇಗಾದರೂ, ಮುಮುಕ್ಷುಗಳು, ನಿರಂತರವೂ ಶಿವನಲ್ಲಿಯೇ ಏಕಾಂತವಾದ ಭಕ್ತಿಯನ್ನಿಟ್ಟಿರಬೇಕು. ಇದು ನಿಜ." ||೬೫೪||

ಓಂಕಾರ ಮೂರ್ತಿಯ ಆ ವಚನವನ್ನು ಕೇಳಿ, ವಿಷ್ಣುಬ್ರಹ್ಮಾದಿ ದೇವತೆಗಳು, ಈಶ್ವರಾರಾಧನೆಯಲ್ಲಾಸಕ್ತರಾಗಿ, ಉಗ್ರವಾದ ತಪಸ್ಸನ್ನು ಆಚರಿಸಿದರು. ||೬೫೫||

ಪಶ್ಯೈತಾನ್ಶಾಂಕರಾನ್ಧನ್ಯಾನ್ಮಹೇಶಾರಾಧನೋತ್ಸುಕಾನ್ ।
ಏತೇಷಾಂ ಶಂಕರಾದನ್ಯಃ ಪೂಜ್ಯೋ ನಾಸ್ತ್ಯೇವ ಸರ್ವಥಾ ॥೬೫೬॥

ಶಿವಾದನ್ಯಂ ನಾರ್ಚಯಂತ್ಯೇತೇ ಸ್ವಪ್ನೇಽಪಿ ಶಿವತತ್ಪರಾಃ ।
ನ ನಮಂತಿ ಚ ಮೋಹೇನಾಪ್ಯಶಿವಂ ಸಂಶಿತವ್ರತಾಃ ॥೬೫೭॥

ನಮಂತಿ ಚಂದ್ರರೇಖಾಂಕಂ ತ್ರಿಶೂಲಾಂಕಂ ಮಹೇಶ್ವರಂ ।
ಬಿಲ್ವಪತ್ರಾದಿಭಿಃ ಸಮ್ಯಕ್ಪೂಜಯಂತಿ ಸ್ತುವಂತಿ ಚ ॥೬೫೮॥

ಶಿವಲಿಂಗಂ ಪೂಜಯಂತಿ ಪ್ರಣಮಂತಿ ಸ್ತುವಂತಿ ಚ ।
ಪಶ್ಯಂತಿ ಚ ಪ್ರಯತ್ನೇನ ಶಿವಲಿಂಗಂ ಸಮರ್ಚಿತಂ ॥೬೫೯॥

ಏತೇ ಸರ್ವೇಽಪ್ಯನೇನೈವ ಜನ್ಮನಾ ಶಿವಪೂಜಕಾಃ ।
ಶೀಘ್ರಂ ಮುಕ್ತಾ ಭವಿಷ್ಯಂತಿ ಮಹೇಶಾನುಗ್ರಹಾನ್ಮನೇ ॥೬೬೦॥

ಎಲೈ ಮುನಿಯೇ ! ಈಶ್ವರಭಕ್ತರೂ, ಈಶ್ವರಾರಾಧನೆಯಲ್ಲಿಯೇ ಉತ್ಸಾಹ ಭರಿತರೂ ಆದ ಈ ಮುನಿಗಳನ್ನು ನೋಡು ! ಇವರಿಗೆ ಶಿವನಿಗಿಂತಲೂ ಪೂಜ್ಯವಾದ ವಸ್ತುವೇ ಇನ್ನೊಂದಿರುವುದಿಲ್ಲ. ॥೬೫೬॥

ಈಶ್ವರನಿಷ್ಠರಾದ ಇವರು, ಸ್ವಪ್ನದಲ್ಲಿಯೂ ಸಹ ಶಿವನನ್ನು ಬಿಟ್ಟು ಇನ್ಯಾವ ದೇವತೆಯನ್ನೂ ಅರ್ಚಿಸಲಾರರು. ಆಕಸ್ಮಾತ್ತಾಗಿ, ಒಮ್ಮೆಯಾದರೂ ಅಜ್ಞಾನಕ್ಕೆ ಒಳಗಾಗಿ, ಶಿವನಿಗಿಂತ ಇತರರಾದ ದೇವತೆಗಳಿಗೆ ಅವರು ನಮಸ್ಕರಿಸುವುದಿಲ್ಲ. ॥೬೫೭॥

ಇವರು, ಚಂದ್ರಚೂಡನೂ, ತ್ರಿಶೂಲಧಾರಿಯೂ, ಆದ ಪರಶಿವನನ್ನೇ ನಮಸ್ಕರಿಸುವರು. ಅವನನ್ನೇ ಬಿಲ್ವಪತ್ರೆಗಳಿಂದ ಪೂಜಿಸಿ ಸ್ತುತಿಸುವರು. ॥೬೫೮॥

ಶಿವಲಿಂಗವನ್ನು ಪೂಜಿಸುವರು, ಶಿವಲಿಂಗಕ್ಕೆ ನಮಸ್ಕರಿಸುವರು. ಶಿವಲಿಂಗವನ್ನು ಸ್ತುತಿಸುವರು. ಬಿಲ್ವಪತ್ರಾದಿಗಳಿಂದ ಪೂಜಿಸಲ್ಪಟ್ಟ ಶಿವಲಿಂಗವನ್ನು ತಪ್ಪದೇ ಸಂದರ್ಶಿಸುವರು. ॥೬೫೯॥

ಎಲೈ, ಮುನಿಯೇ ! ಇಲ್ಲಿರುವ ಈ ಮುನಿಪುಂಗವರೆಲ್ಲರೂ, ಈ ಜನ್ಮದಲ್ಲಿ, ಹುಟ್ಟಿದ ಮೊದಲುಗೊಂಡು ಇರುವವರೆಗೂ, ನಿರಂತರವೂ ಈಶ್ವರಾರಾಧಕರಾಗಿರುವರು. ಇವರು, ಶೀಘ್ರದಲ್ಲಿಯೇ ಈಶ್ವರಾನುಗ್ರಹಕ್ಕೆ ಪಾತ್ರರಾಗಿ ಈ ಜನ್ಮದಲ್ಲಿಯೇ ಮುಕ್ತರಾಗುವರು. ॥೬೬೦॥

ಪೂಜಯಸ್ವ ಮಹಾದೇವಂ ಭವಾನಪ್ಯತ್ರ ಯತ್ನತಃ ।
ಮಹಾದೇವಪ್ರಸಾದೇನ ಶೀಘ್ರಂ ಮುಕ್ತೋ ಭವಿಷ್ಯಸಿ ॥೬೬೧॥

॥ ಶಿವ ಉವಾಚ ॥

ಇತಿ ತದ್ವಚನಂ ಶ್ರುತ್ವಾ ತಪಸ್ತೇಪೇ ಮಹಾಮುನಿಃ ।
ಅನ್ಯೈಶ್ಚ ಮುನಿಭಿಃ ಸಾಕಂ ಬಹುಭಿಶ್ಚ ಮುಮುಕ್ಷುಭಿಃ ॥೬೬೨॥

ತ್ಯಕ್ತ್ವಾನ್ಯಪೂಜಾಂ ಮದನುಗ್ರಹೇಣ
ಮಾಮೇವ ಯೇ ಸಂತತಮರ್ಚಯಂತಿ ।
ತೇಭ್ಯಃ ಶಿವೋಽಭೀಪ್ಸಿತಮರ್ಥಮಾಶೋ
ದಾಸ್ಯಾಮ್ಯಹಂ ಭಕ್ತಜನಾಭಿಸೇವ್ಯಃ ॥೬೬೩॥

ಇತಿ ಶ್ರೀಶಿವರಹಸ್ಯೇ ಸಪ್ತಮಾಂಶೇ ತ್ರಯೋದಶೋಽಧ್ಯಾಯಃ

ಎಲೈ ಮುನಿಯೇ, ಆದ್ದರಿಂದ ನೀನೂ ತಪ್ಪದೆ ಶಿವನನ್ನು ಪೂಜಿಸು, ನಿನಗೆ ಮೋಕ್ಷವು ಲಭಿಸುವುದು. ಎಂದು ಹೇಳಿದ ಕಶ್ಯಪನ ಆ ಮಾತನ್ನು ಕೇಳಿ ಪೂಜ್ಯನಾದ ಆ ಮುನಿಯು ಅಲ್ಲಿದ್ದ ಇನ್ನಿತರ ಮುಮುಕ್ಷುಗಳಾದ ಮುನಿಗಳೊಂದಿಗೆ ತಪಸ್ಸನ್ನಾಚರಿಸಿದನು. ॥೬೬೧-೬೬೨॥

ಯಾರು ಇನ್ನಿತರ ದೇವತೆಗಳ ಆರಾಧನೆಯನ್ನು ತೊರೆದು ನನ್ನ ಅನುಗ್ರಹಕ್ಕೆ ಪಾತ್ರರಾಗಿ ನನ್ನನ್ನೇ ನಿರಂತರವೂ ಪೂಜಿಸುವರೋ, ಅವರಿಗೆ ಪರಶಿವನಾದ ನಾನು ಅವರ ಸಕಲ ಇಷ್ಟಾರ್ಥಗಳನ್ನೂ ಸಫಲಗೊಳಿಸುವೆನು. ಎಂದು ಶಂಕರನು ಪಾರ್ವತಿಯೊಡನೆ ಹೇಳಿದನು. ॥೬೬೩॥

ಇಲ್ಲಿಗೆ ಶ್ರೀಶಿವರಹಸ್ಯದಲ್ಲಿ ಏಳನೆಯ ಅಂಶದ ಹದಿಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ಶಿವಾಯನಮಃ ॥

ಅಥ ಶ್ರೀ ಶಿವರಹಸ್ಯೇ

ಉಗ್ರಾಖ್ಯೇ

ಸಪ್ತಮಾಂಶೇ ಪೂರ್ವಾರ್ಧೇ

ಚತುರ್ದಶೋಽಧ್ಯಾಯಃ

॥ ಶ್ರೀಶಿವ ಉವಾಚ ॥

ಪುರಾ ನೈಮಿಷಮಾಶ್ರಿತ್ಯ ಶೌನಕಾದ್ಯಾ ಮುನೀಶ್ವರಾಃ ।
ಪ್ರಣಮ್ಯ ಭಾನುಂ ಪಪ್ರಚ್ಛುರ್ಮೋಕ್ಷಸಾಧನಮುತ್ತಮಂ ॥೧॥

ಭಾನೋ ಶಂಕರತತ್ವಜ್ಞ ಶಿವಪೂಜಾಪರಾಯಣ ।
ಕಥಂ ಸಂಸಾರದಾವಾಗ್ನಿ ತಾಪಶಾಂತಿರ್ಭವಿಷ್ಯತಿ ॥೨॥

ಅಸಾರತರಸಂಸಾರಮತಿವೃದ್ಧಿಃ ಪ್ರಜಾಯತೇ ।
ಸಂಸಾರೇ ಸಾರಬುದ್ಧಿಶ್ಚ ಜಾಯತೇ ಕರ್ಮಬಂಧನಾತ್ ॥೩॥

ಹದಿನಾಲ್ಕನೆಯ ಅಧ್ಯಾಯವು

ಪರಮೇಶ್ವರನು ಮತ್ತೆ ಪಾರ್ವತಿಯೊಡನೆ ಹೀಗೆಂದನು—ಹಿಂದೆ ಒಂದು ಸಾರಿ ಶೌನಕರೇ ಮೊದಲಾದ ಮಹರ್ಷಿಗಳು ನೈಮಿಷಾರಣ್ಯಕ್ಕೆ ಹೋಗಿ, ಅಲ್ಲಿ ಸೂರ್ಯದೇವನನ್ನು ಬಹುವಾಗಿ ಪ್ರಾರ್ಥಿಸಿ, ಮುಕ್ತಿಸಾಧನವಾದ ಉಪಾಯವನ್ನು ಉಪದೇಶಿಸಬೇಕೆಂದು ಹೀಗೆ ಕೇಳಿಕೊಂಡರು. ॥೧॥

" ಸೂರ್ಯಪರಮಾತ್ಮನೇ, ಶಿವಪೂಜಾಧುರಂಧರನೇ, ಸಂಸಾರದಲ್ಲಿ ನಿರತರಾದ ಮಾನವರಿಗೆ ಸಂಸಾರದ ಬೇಗೆಯು ತಪ್ಪಿ ಮುಕ್ತಿಯೊದಗುವ ಕ್ರಮವನ್ನು ವಿವರಿಸಿ ಹೇಳಬೇಕು. ॥೨॥

ನಿಜವಾಗಿಯೂ ಸಾರವಿಲ್ಲದ ಸಂಸಾರದಲ್ಲಿ ಮನುಷ್ಯನಿಗೆ ಅತಿಶಯವಾದ ಆಸೆಯು ನಿತ್ಯವೂ ಹೆಚ್ಚುವುದು. ಅವನ ಪಾಪಕರ್ಮದ ಫಲವಾಗಿ ಅಂತಹ ಸಂಸಾರವೇ ಸಾರವಾದುದು ಎಂಬ ಆಲೋಚನೆಯು ಮಾನವನಿಗೆ ಹುಟ್ಟುವುದು. ॥೩॥

ಅಸಾರಬುದ್ಧಿಃ ಸಂಸಾರೇ ಕಥಂ ಭವತಿ ಸರ್ವದಾ ।
ತತ್ವಜ್ಞಾನಸ್ಯ ಜೋ ಹೇತುಃ ಕಿಂ ವಾ ತತ್ವಂ ವದಸ್ವ ನಃ ॥೪॥

ಪುರಾ ಶ್ರೀಶೈಲಶಿಖರೇ ಸ್ಕಂದಂ ಯೋಗರತಂ ಶಿವಃ ।
ವಿಲೋಕ್ಯಾಯಾಹಿ ವೃತ್ತಾಂತಂ ಜ್ಞಾತ್ವಾ ಚೇತ್ಯಾಹ ನಂದಿನಂ ॥೫॥

ಶಿವಾಜ್ಞಾಂ ಶಿರಸಾ ಧೃತ್ವಾ ನಂದಿಕೇಶೋಪಿ ಹೃಷ್ಟಧೀಃ ।
ಕೈಲಾಸಾಚ್ಚಾಲಿತಃ ಕಾಶೀಂ ಮಧ್ಯೇ ಮಾರ್ಗೇ ದದರ್ಶ ಸಃ ॥೬॥

ದೃಷ್ಟ್ವಾ ಕಾಶೀಂ ನಂದಿಕೇಶೋ ಮಹೇಶಪ್ರಿಯಕೃತ್ತಮಃ ।
ಅವಾಪ ಪರಮಾನಂದಂ ಕೃತಾರ್ಥೋಽಸ್ಮೀತಿ ಸತ್ತಮಾಃ ॥೭॥

ಪ್ರವಿಶ್ಯ ಕಾಶೀಂ ನಂದೀಶಃ ಶಿವಗಂಗಾಜಲೇಮಲೇ ।
ಸ್ನಾತ್ವಾಗ್ನೀಧ್ರಂ ಪೂಜಯಿತ್ವಾ ಮಣಿಕರ್ಣೀಂ ಯಯೌ ತತಃ ॥೮॥

ಅಂತಹ ಸಂಸಾರದಲ್ಲಿ ಅಸಾರತ್ವ ಬುದ್ಧಿಯನ್ನು ಹುಟ್ಟಿಸುವ ಮಾರ್ಗವೊಂದನ್ನು ನಮಗೆ ಉಪದೇಶಿಸು. ಅಲ್ಲದೆ ಸಂಸಾರವು ದುಃಖಮಯವಾದದ್ದು ಎಂಬ ತಿಳಿವಳಿಕೆಯು ಜನರಿಗೆ ಬರದಿರಲು ಕಾರಣವೇನು? ಎಂಬುದನ್ನು ದಯೆಯಿಂದ ತಿಳಿಸುವವನಾಗು." ॥೪॥

ಆಗ ಸೂರ್ತದೇವನು ಅವರೊಡನೆ ಹೀಗೆಂದನು "ಎಲೈ ಋಷಿಗಳೇ, ಹಿಂದೆ ಒಂದುಸಾರಿ ಶಂಕರನು ನಂದಿಯನ್ನು ಕರೆದು, ಶ್ರೀಶೈಲದಲ್ಲಿ ಯೋಗದಲ್ಲಿ ಆಸಕ್ತನಾಗಿರುವ ಕುಮಾರಸ್ವಾಮಿಯ ವಿಷಯವನ್ನು ತಿಳಿದು ಹೇಳು ಎಂದು ಆಜ್ಞಾಪಿಸಿ ಕಳುಹಿದನು. ॥೫॥

ಆ ಅಪ್ಪಣೆಯನ್ನು ಶಿರಸಾ ವಹಿಸಿ ನಂದಿಯೂ ಕೈಲಾಸದಿಂದ ಹೊರಟು ಕಾನನ ಮಾರ್ಗವಾಗಿ ಬರುತ್ತಾ ಮಧ್ಯೆ ಕಾಶೀಕ್ಷೇತ್ರವನ್ನು ನೋಡಿದನು. ॥೬॥

ಅದು ಪರಶಿವನಿಗೆ ಪರಮ ಪ್ರೀತಿಕರವಾದುದೆಂದು ಭಾವಿಸಿ, ಅತ್ಯಂತ ಸಂತೋಷದಿಂದ, ತಾನು ಧನ್ಯನಾದೆನೆಂದು ಭಾವಿಸುತ್ತಾ ಆ ಕಾಶೀಕ್ಷೇತ್ರಕ್ಕೆ ತಾನೂ ಪ್ರಯಾಣಮಾಡಿದನು. ॥೭॥

ಮೊದಲು ಕಾಶಿಯಲ್ಲಿರುವ ಶಿವಗಂಗಾತೀರ್ಥವಾದ ನಿರ್ಮಲೋದಕದಲ್ಲಿ ಸ್ನಾನಮಾಡಿ, ಆಗ್ನೀಧ್ರೇಶ್ವರನನ್ನು ಭಕ್ತಿಯಿಂದ ಪೂಜಿಸಿ ಮಣಿಕರ್ಣಿಕಾ ಕ್ಷೇತ್ರಕ್ಕೆ ಪ್ರಯಾಣಮಾಡಿದನು. ॥೮॥

ಮಣಿಕರ್ಣ್ಯಾಂ ತತಃ ಸ್ನಾತ್ವಾ ಕೃತ್ವೋದ್ಧೂಲನಮಾದರಾತ್ ।
ಶ್ರೌತಂ ತ್ರಿಪುಂಡ್ರಂ ರುದ್ರಾಕ್ಷಾನ್ ಧೃತ್ವಾ ದೇವಂ ಮಹೇಶ್ವರಂ॥೯॥

ಪ್ರಹೃಷ್ಟವದನೋ ಭೂತ್ವಾ ಸ್ವಂ ಕೃತಾರ್ಥಮಮನ್ಯತ ।
ಪ್ರಾಪ್ತಾ ಕಾಶೀ ಪುಣ್ಯಪುಂಜಾ ಮಹೇಶಕೃಪಯೇತಿ ಸಃ ॥೧೦॥

ಮಣಿಕರ್ಣೀಜಲೇ ಸ್ನಾತ್ವಾ ತ್ರಿಃಪೀತ್ವಾ ತಜ್ಜಲಂ ಮುದಾ ।
ಧಿಕ್ಕೃತಾಮೃತಮೇತದ್ಧಿ ಜಲಮಿತ್ಯಪ್ಯಮನ್ಯತ ॥೧೧॥

ಮಣಿಕರ್ಣೀಸಮಂ ತೀರ್ಥಂ ಪಾಪಶೋಕವಿನಾಶಕಂ ।
ಚತುರ್ದಶೇಷು ಭುವನೇಷ್ವಪಿ ನಾಸ್ತೀತ್ಯಮನ್ಯತ ॥೧೨॥

ಹೇಮಕುಂಭೇನ ಸಂಗೃಹ್ಯ ಮಣಿಕರ್ಣೀಜಲಂ ಮುದಾ ।
ಶ್ರೀಮದ್ವಿಶ್ವೇಶ್ವರಂ ದ್ರಷ್ಟುಂ ನಂದಿಕೇಶೋ ಯಯೌ ತತಃ ॥೧೩॥

ಅಲ್ಲಿಯೂ ಸ್ನಾನಮಾಡಿ, ಭಸ್ಮತ್ರಿಪುಂಡ್ರವನ್ನಿಟ್ಟು, ರುದ್ರಾಕ್ಷಾದಿಗಳನ್ನು ಧರಿಸಿಕೊಂಡು, ಮಹಾದೇವನನ್ನು ಭಕ್ತಿಪೂರ್ವಕವಾಗಿ ಧ್ಯಾನಿಸಿದನು. ||೯||

ಆಗ ಆತನ ಮನಸ್ಸು ಹರ್ಷಯುತವಾಯಿತು. ಕಾಶಿಯು ಮಹೇಶ್ವರನಿಗೆ ಅತ್ಯಂತ ಪ್ರಿಯವಾದುದೆಂಬುದನ್ನು ಆಗ ಮನಸ್ಸಿನಲ್ಲಿ ತಿಳಿಯುತ್ತಾ, ಅಂತಹ ಪುಣ್ಯ ರಾಶಿಯಂತಿರುವ ಕ್ಷೇತ್ರವು ಶಿವಾನುಗ್ರಹದಿಂದ ತನಗೆ ಲಭಿಸಿದುದಕ್ಕಾಗಿ ತಾನೇ ಧನ್ಯನೆಂದು ಭಾವಿಸಿಕೊಂಡನು. ||೧೦||

ಮಣಿಕರ್ಣಿಕೆಯಲ್ಲಿ ಸ್ನಾನಮಾಡಿ, ಅದರ ಜಲವನ್ನು ಮೂರುಸಾರಿ ಕುಡಿದು, ನಂದಿಯು ಆಗ ಅಮೃತದ ಸವಿಯಲ್ಲಿ ಜುಗುಪ್ಸೆ ಪಡೆದನು. ಅಂದರೆ ಅಮೃತದ ಸವಿಯನ್ನೂ ಈ ಜಲವು ಕಮ್ಮಿಮಾಡಿರುವುದಲ್ಲಾ ಎಂದು ಆಶ್ಚರ್ಯ ಪಟ್ಟನು. ||೧೧||

ಪಾಪನಾಶಕವಾದ ವಸ್ತುಗಳಲ್ಲಿ ಮಣಿಕರ್ಣಿಕಾತೀರ್ಥಕ್ಕೆ ಸಮಾನವಾದ ವಸ್ತುವೇ ಹದಿನಾಲ್ಕು ಲೋಕಗಳಲ್ಲಿಯೂ ದೊರಕಲಾರದೆಂದು ಭಾವಿಸಿದನು. ||೧೨||

ಮತ್ತು ಚಿನ್ನದ ಗಡಿಗೆಯಲ್ಲಿ ಮಣಿಕರ್ಣಿಕಾತೀರ್ಥವನ್ನು ತುಂಬಿಕೊಂಡು ಸಂತೋಷದಿಂದ ನಂದೀಶ್ವರನು, ವಿಶ್ವೇಶ್ವರಲಿಂಗದರ್ಶನಾರ್ಥವಾಗಿ ಮುಂದಕ್ಕೆ ಸಾಗಿದನು. ||೧೩||

ಜ್ಞಾನವಾಪ್ಯಾಂ ತತಃ ಸ್ನಾತ್ವಾ ಕೃತ್ವಾ ಚೋದ್ಧೂಳನಾದಿಕಂ ।
ಜ್ಞಾನೇಶಾದೀನ್ಸಿಲೋಕ್ಯಾಥ ಪ್ರವಿಶನ್ಮುಕ್ತಿಮಂಟಪಂ ॥೧೪॥

ತತೋ ವಿಶ್ವೇಶ್ವರಂ ದೃಷ್ಟ್ವಾ ಪರಮಾನಂದಸಂಯುತಃ ।
ಶ್ರೀಮದ್ವಿಶ್ವೇಶ್ವರಂ ಲಿಂಗಂ ಜ್ಯೋತೀರೂಪಂ ಸಮಸ್ಪೃಶತ್ ॥೧೫॥

ದುಗ್ಧಾದ್ಯೈರಭಿಷಿಂಚಾದಾವಭಿಷಿಚ್ಯ ಜಲೈಸ್ತತಃ ।
ಪೂಜಯಾಮಾಸ ರತ್ನಾದ್ಯೈರ್ಬಿಲ್ವಪತ್ರಾದಿಭಿಸ್ತತಃ ॥೧೬॥

ನೈವೇದ್ಯಧೂಪದೀಪಾದೀನ್ಸಮರ್ಪ್ಯ ತದನಂತರಂ ।
ಕೃತ್ವಾ ಪ್ರದಕ್ಷಿಣಾದೀಂಶ್ಚ ಜಜಾಪ ಚ ಷಡಕ್ಷರಂ ॥೧೭॥

ಕೃತ್ವಾ ತತೋಽಖಿಲಾಂ ಯಾತ್ರಾಂ ದೃಷ್ಟ್ವಾ ವಿಶ್ವೇಶ್ವರಂ ಪುನಃ ।
ಸಂಪೂಜ್ಯ ನತ್ವಾ ಸ್ತುತ್ವಾ ಚ ಹೃಷ್ಟಚಿತ್ತೋ ಬಭೂವ ಸಃ ॥೧೮॥

ಹಾಗೆಯೇ ಮುಂದೆ ಹೋಗಿ ಜ್ಞಾನವಾಪಿಯಲ್ಲಿ ಸ್ನಾನಮಾಡಿ, ಭಸ್ಮಧಾರಣೆ ಮಾಡಿಕೊಂಡು, ಜ್ಞಾನೇಶ್ವರನನ್ನು ಅರ್ಚಿಸಿ ಮುಕ್ತಿಮಂಟಪವನ್ನು ಪ್ರವೇಶಿಸಿದನು. ॥೧೪॥

ಹಾಗೆ ಹೋಗುತ್ತಾ ಮುಂದೆ ವಿಶ್ವೇಶ್ವರಲಿಂಗವನ್ನು ದರ್ಶನಮಾಡಿ, ಜ್ಯೋತೀರೂಪವಾಗಿರುವ ಆ ಶಿವಲಿಂಗಕ್ಕೆ ವಂದಿಸಿ, ಆನಂದದಿಂದ ಅದನ್ನು ಸ್ಪರ್ಶ ಮಾಡುತ್ತಾ ಕಾಲಕಳೆದನು. ॥೧೫॥

ಹಾಲು, ಮೊಸರು, ತುಪ್ಪ, ಸಕ್ಕರೆ, ಜೇನು ಮೊದಲಾದ ಪಂಚಾಮೃತ ದ್ರವ್ಯಗಳಿಂದಲೂ, ನಿರ್ಮಲವಾದ ನೀರಿನಿಂದಲೂ ಆ ಶಿವಲಿಂಗಕ್ಕೆ ಅಭಿಷೇಕಮಾಡಿ ರತ್ನ, ವಜ್ರ ಮುಂತಾದ ಆಭರಣಗಳಿಂದಲೂ, ಕೋಮಲವಾದ ಬಿಲ್ವಪತ್ರೆಗಳಿಂದಲೂ ಪೂಜೆಮಾಡಿದನು. ॥೧೬॥

ಆಮೇಲೆ ನಾನಾವಿಧವಾದ ನೈವೇದ್ಯಗಳಿಂದಲೂ, ಮನೋಹರವಾದ ಧೂಪದೀಪಾದಿಗಳಿಂದಲೂ ಆ ಪರಮೇಶ್ವರನನ್ನು ಸಂತೋಷಪಡಿಸಿ, ಅನಂತರ ಭಕ್ತಿಯಿಂದ ಆ ಮಹಾದೇವನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಶ್ರೇಷ್ಠವಾದ 'ಷಡಕ್ಷರ' ಮಹಾಮಂತ್ರವನ್ನು ಜಪಮಾಡಿದನು. ॥೧೭॥

ಅದಾದಮೇಲೆ ಅವನು ಎಲ್ಲಾ ತೀರ್ಥಯಾತ್ರೆಗಳನ್ನೂ ಮಾಡಿ, ಕಾಶಿಯಲ್ಲಿ

ತತೋ ಮಹೇಶ್ವರಸ್ಯಾಜ್ಞಾಂ ಸಸ್ಮರನ್ನಂದಿಕೇಶ್ವರಃ ।
ಯಯೌ ಶ್ರೀಶೈಲಶಿಖರಂ ಯತ್ರ ತಿಷ್ಠತಿ ಷಣ್ಮುಖಃ ॥೧೯॥

ತತ್ರ ಸ್ಕಂದಂ ಸಮಾಲೋಕ್ಯ ನತ್ವಾ ನಂದೀ ತತಶ್ಚ ತಂ ।
ಪೂಜಯಾಮಾಸ ಬಿಲ್ವಾದ್ಯೈಃ ಶಿವಬುದ್ಧ್ಯಾ ಶಿವಾತ್ಮಜಾ ॥೨೦॥

ಭಕ್ತಿಭಾವಸಮಾಕ್ರಾಂತಃ ಸ್ಕಂದಂ ನತ್ವಾ ಪುನಶ್ಚ ತಂ ।
ನಂದಿಕೇಶೋ ಮುಹುಃ ಸಮ್ಯಕ್ಪೂಜಯಾಮಾಸ ಸಾದರಂ ॥೨೧॥

ನಂದಿಕೇಶಂ ಷಣ್ಮುಖೋಽಪಿ ಸ್ವಾಗತಂ ಪರ್ಯಪೃಚ್ಛತ ।
ಕುತಃ ಸಮಾಗತಂ ನಂದಿನ್ಕುಶಲಂ ಖಲು ಸರ್ವತಃ ॥೨೨॥

ಶಿವೈಕಶರಣಸ್ಯಾದ್ಯ ತವಾಭೂದ್ದರ್ಶನಂ ಮಮ ।
ಶಿವಭಕ್ತಸ್ವರೂಪೇಣ ಶಿವಃ ಸಂಚರತಿ ಸ್ವಯಂ ॥೨೩॥

ನೆಲಸಿರುವ ವಿಶ್ವೇಶ್ವರನನ್ನು ಕಂಡು, ಭಕ್ತಿಯಿಂದ ಆ ವಿಶ್ವೇಶ್ವರನಿಗೆ ಪೂಜೆಮಾಡಿ, ನಮಸ್ಕರಿಸಿದ ನಂತರ ಆನಂದಪರಿಪೂರ್ಣನಾದನು. ॥೧೮॥

ಅನಂತರ ನಂದಿಕೇಶ್ವರನು ಆ ಮಹಾದೇವನ ಅಪ್ಪಣೆಯನ್ನು ಸ್ಮರಿಸಿಕೊಂಡು, ಷಣ್ಮುಖಸ್ವಾಮಿಯು ಇದ್ದ ಶ್ರೀಶೈಲಪರ್ವತಕ್ಕೆ ಹೊರಟನು. ॥೧೯॥

ಅಲ್ಲಿ ಆ ಕುಮಾರಸ್ವಾಮಿಯನ್ನು ನೋಡಿ, ನಂದಿಕೇಶ್ವರನು, ಆ ಷಣ್ಮುಖನಿಗೆ ನಮಸ್ಕಾರಮಾಡಿದ ನಂತರ ಶಿವನ ಕುಮಾರನಾದ ಅವನನ್ನು ಶಿವನೆಂದೇ ಭಾವಿಸಿ, ಬಿಲ್ವಪತ್ರೆಯೇ ಮೊದಲಾದವುಗಳಿಂದ ಪೂಜೆಮಾಡಿದನು. ॥೨೦॥

ನಂದಿಕೇಶ್ವರನು ಭಕ್ತ್ಯಾವೇಶದಿಂದ ಯುಕ್ತನಾಗಿ, ಪುನಃ ಷಣ್ಮುಖಸ್ವಾಮಿಗೆ ನಮಸ್ಕಾರಮಾಡುತ್ತಾ, ಪದೇ ಪದೇ ಆದರದಿಂದ ಆ ಕುಮಾರಸ್ವಾಮಿಯನ್ನು ಪೂಜೆಮಾಡಿದನು. ॥೨೧॥

ಆಗ ಷಣ್ಮುಖನೂ, ಆ ನಂದಿಕೇಶನಿಗೆ ಸ್ವಾಗತವನ್ನು ಕೊಟ್ಟು, ಎಲೈ ನಂದಿಕೇಶ್ವರ, ನೀನು ಈಗ ಇಲ್ಲಿಗೆ ಬಂದ ಕಾರಣವೇನು ? ಎಲ್ಲ ಕಡೆಯಲ್ಲಿಯೂ ಕುಶಲವೇ ? ಎಂದು ಪ್ರಶ್ನೆಮಾಡಿದನು. ॥೨೨॥

ಆ ಪರಶಿವನೊಬ್ಬನನ್ನೇ ಮರೆಹೊಕ್ಕಿರುವ ನಿನ್ನ ದರ್ಶನವಾದುದು ನನಗೆ ಭಾಗ್ಯವೇ ಸರಿ. ಆ ಶಿವನು ತನ್ನ ಭಕ್ತರ ರೂಪಿನಿಂದ ಸ್ವತಃ ತಾನೇ ಸಂಚರಿಸುತ್ತಿರುವನು. ॥೨೩॥

ಶಿವಸ್ಯ ದರ್ಶನಂ ಸಾಕ್ಷಾನ್ಮಂಗಲಾವಹಮುತ್ತಮಂ ।
ಸರ್ವಸಂಪತ್ಕರಂ ಯಸ್ಮಾದ್ಭುಕ್ತಿಮುಕ್ತಿಫಲಪ್ರದಂ ॥೨೪॥

ಭೂಯಸಾ ತಪಸಾ ನಂದಿನ್ಸಂತುಷ್ಟಃ ಪಾರ್ವತೀಪತಿಃ ।
ಪ್ರಯಚ್ಛತಿ ದೃಢಾಂ ಭಕ್ತಿಂ ಸ್ವಸ್ಮಿನ್ಶಂಭೌ ಪರಾವರೇ ॥೨೫॥

ಶರೀರಂ ಯಸ್ಯ ಚರಮಂ ಯತ್ತ್ಯಾಗಾನಂತರಂ ಶಿವಃ ।
ಮೋಕ್ಷಂ ದದಾತಿ ತಸ್ಯೈವ ಶಿವೇ ಭಕ್ತಿಃ ಪ್ರಜಾಯತೇ ॥೨೬॥

ದುರ್ಲಭಾ ದುರ್ಲಭಾ ನಂದಿನ್ ಶಿವೇ ಭಕ್ತಿರ್ನ ಸಂಶಯಃ ।
ಸಾ ಮುಕ್ತಿದಾಯಿನೀ ಭಕ್ತಿಃ ಶೈವೀ ಯಾನನ್ಯಸಂಶ್ರಯಾ ॥೨೭॥

ಉತ್ತಮವಾದ ಆ ಶಿವದರ್ಶನವು ಸಾಕ್ಷಾತ್ತಾಗಿ ಸಕಲ ಮಂಗಳವನ್ನೂ ಉಂಟುಮಾಡುವುದು. ಸಕಲೈಶ್ವರ್ಯಗಳನ್ನೂ ಕೊಡುವುದು, ಅಲ್ಲದೇ ದಿವ್ಯವಾದ ಭೋಗವನ್ನೂ ಮತ್ತು ಶಾಶ್ವತವಾದ ಮೋಕ್ಷಫಲವನ್ನೂ ನೀಡುವುದು. ॥೨೪॥

ನಂದಿಕೇಶ್ವರನೇ, ಹೆಚ್ಚಾದ ತಪಸ್ಸಿನಿಂದ ಸಂತೋಷಹೊಂದಿದ ಪಾರ್ವತೀ ರಮಣನಾದ ಆ ಮಹಾದೇವನು, ಸರ್ವಶ್ರೇಷ್ಠನಾದ ತನ್ನ ಭಕ್ತನಲ್ಲಿ ದೃಢವಾದ ಭಕ್ತಿಯು ಹುಟ್ಟುವಂತೆ ಮಾಡುತ್ತಾನೆ. ॥೨೫॥

ಅದೇ ತನ್ನ ಭಕ್ತನು ಸಕಲ ವಸ್ತುಗಳನ್ನೂ ದಾನಮಾಡಿ ಕೊನೆಯಲ್ಲಿ ಪಾಂಚಭೌತಿಕವಾದ ಶರೀರವನ್ನೂ ತ್ಯಾಗಮಾಡಿದನಂತರ, ಮೃತನಾದ ಮೇಲೆ ಆತನಿಗೆ ಪರಮೇಶ್ವರನು ಮೋಕ್ಷವನ್ನು ಕರುಣಿಸುತ್ತಾನೆ. ಈರೀತಿಯಾದ ಮೋಕ್ಷವನ್ನು ಪಡೆಯುವ ಯೋಗವಿದ್ದವನಿಗೆ ಮಾತ್ರವೇ ಆ ಶಿವನಲ್ಲಿ ಭಕ್ತಿಯುಂಟಾಗುತ್ತದೆ. ॥೨೬॥

ಅಯ್ಯ ನಂದಿಯೇ! ಆ ಮಹಾಮಹಿಮನಾದ ಶಿವನಲ್ಲಿ ಭಕ್ತಿಯುಂಟಾಗುವುದು ಬಹಳ ದುರ್ಲಭವೆಂದು ತಿಳಿ. ಇದರಲ್ಲಿ ಏನೂ ಸಂದೇಹವಿಲ್ಲ. ಬೇರೆ ಯಾರಲ್ಲಿಯೂ ಸಂಬಂಧಿಸದ ಈ ಶಿವನ ಭಕ್ತಿಯು, ಮಾನವನಿಗೆ ಮೋಕ್ಷವನ್ನುಂಟುಮಾಡುತ್ತದೆ. ॥೨೭॥

ಶ್ರದ್ಧಯಾಽನನ್ಯಗಾಮಿನ್ಯಾ ಮುಕ್ತಿರ್ಭವತಿ ಸರ್ವಥಾ ।
ಶ್ರದ್ಧಾ ಶಿವೇ ಹಿ ಕರ್ತವ್ಯಾ ಸೈವ ಮುಕ್ತಿಪ್ರದಾಯಿನೀ ॥೨೮॥

ಶೈವೀ ಶ್ರದ್ಧಾ ಕಲ್ಪವೃಕ್ಷಃ ಶ್ರದ್ಧಾ ಸಾ ಕಾಮಧುಗ್ಧ್ರುವಮ್ ।
ಸಾ ಮೋಕ್ಷದಾಯಿನೀ ತಸ್ಮಾಚ್ಛೈವೀ ಶ್ರದ್ಧಾ ತು ದುರ್ಲಭಾ ॥೨೯॥

ಮಹೇಶ್ವರಶ್ರದ್ಧಯೈವ ಮುಕ್ತಿಃ ಪ್ರಾಪ್ಯಾ ಜನೈರ್ಯತಃ ।
ತಸ್ಮಾನ್ಮಹೇಶ ಏವೇಷ್ಟೇ ಶ್ರದ್ಧಾ ಕಾರ್ಯಾ ಪ್ರಯತ್ನತಃ ॥೩೦॥

ಮಹಾದಾನಾನಿ ಯಜ್ಞಾಶ್ಚ ಯೇ ಚ ಸರ್ವಸ್ವದಕ್ಷಿಣಾಃ ।
ತಪಾಂಸಿ ಯಾನಿ ಘೋರಾಣಿ ತೇಷಾಂ ತು ಫಲದಃ ಶಿವಃ ॥೩೧॥

ಯೇನಾನಂತಾಃ ಕೃತಾಃ ಸಮ್ಯಗಶ್ವಮೇಧಾಃ ಶಿವಪ್ರಿಯಾಃ ।
ತೇನೈವ ಶೈವೀ ಸಂಪ್ರಾಪ್ಯಾ ಶ್ರದ್ಧಾ ನಾನ್ಯೇನ ಸರ್ವಥಾ ॥೩೨॥

ಮತ್ತಾವದೇವರಲ್ಲಿಯೂ ಇಡದೆ ಶಿವನಲ್ಲಿ ಮಾತ್ರವೇ ಇಟ್ಟಿರುವ ಶ್ರದ್ಧೆಯಿಂದ ತಪ್ಪದೇ ಮುಕ್ತಿಯುಂಟಾಗುವುದು. ಆದುದರಿಂದ ಆ ಪರಶಿವನಲ್ಲಿ ಮಾತ್ರ ನಂಬಿಕೆಯನ್ನಿಡಬೇಕು. ಇದರಿಂದ ಮೋಕ್ಷರೂಪವಾದ ಫಲವುಂಟಾಗುವುದು. ॥೨೮॥

ಶಿವನಲ್ಲಿಟ್ಟಿರುವ ಶ್ರದ್ಧೆಯೇ ಕಲ್ಪವೃಕ್ಷವು, ಆ ನಂಬಿಕೆಯೇ ಸಕಲ ಮನೋರಥಗಳನ್ನೂ ತಪ್ಪದೇ ಕೊಡುವುದು. ಮೋಕ್ಷಪ್ರದವೂ ಇದೇ ಆಗಿದೆ. ಆದುದರಿಂದ ಈ ಪರಶಿವನಲ್ಲಿ ಉಂಟಾಗುವ ಶ್ರದ್ಧೆಯೆಂಬುದು ಅತ್ಯಂತ ದುರ್ಲಭವೇ ಸರಿ. ॥೨೯॥

ಮಹೇಶ್ವರನಲ್ಲಿ ಇಡುವ ನಂಬಿಕೆಯಿಂದಲೇ ಜನಗಳಿಗೆ ಮುಕ್ತಿಯುಂಟಾಗಬೇಕಾಗಿರುವುದರಿಂದ, ಪ್ರೀತಿಕರನಾದ ಆ ಮಹೇಶ್ವರನಲ್ಲಿಯೇ ಪ್ರಯತ್ನದಿಂದ ನಾವು ಶ್ರದ್ಧೆಯುಳ್ಳವರಾಗಬೇಕು. ॥೩೦॥

ದೊಡ್ಡದೊಡ್ಡ ದಾನಗಳೂ, ಸಕಲ ದಕ್ಷಿಣಾದ್ರವ್ಯಗಳಿಂದ ಯುಕ್ತವಾದ ಯಾಗಗಳೂ, ಭಯಂಕರವಾದ ತಪಸ್ಸುಗಳೂ, ಇವೆಲ್ಲಕ್ಕೂ ಫಲವನ್ನು ಕೊಡುವವನು ಆ ಪರಶಿವನೇ ಆಗಿರುವನು. ॥೩೧॥

ಆ ಶಿವನಿಗೆ ಪ್ರೀತಿಕರವಾದ ಅನೇಕ ಅಶ್ವಮೇಧ ಯಾಗಗಳನ್ನು ಚೆನ್ನಾಗಿ ಮಾಡಿದವನು, ಆ ಪರಶಿವನ ಶ್ರದ್ಧೆಯನ್ನು ಹೊಂದಲು ಯೋಗ್ಯನಾಗುವನು. ಉಳಿದವರು ಸರ್ವಥಾ ಇದಕ್ಕೆ ಅರ್ಹರಲ್ಲ. ॥೩೨॥

ತಪಾಂಸಿ ಯಾನಿ ಚೋಗ್ರಾಣಿ ಕೃತಾನಿ ಬಹುಧಾ ಮುದಾ ।
ತೇನೈವ ಶೈವೀ ಸಂಪ್ರಾಪ್ಯಾ ಶ್ರದ್ಧಾ ನಾನ್ಯೇನ ಸರ್ವಥಾ ॥೩೩॥

ಗೋಕೋಟಯೋ ಯೇನ ದತ್ತಾಃ ಶೈವೇಭ್ಯಃ ಸ್ವರ್ಣಭೂಷಿತಾಃ ।
ತೇನೈವ ಶೈವೀ ಸಂಪ್ರಾಪ್ಯಾ ಶ್ರಬ್ಧಾ ನಾನ್ಯೇನ ಸರ್ವಥಾ ॥೩೪॥

ಸಸುವರ್ಣಾ ಯೇನ ದತ್ತಾ ಮತ್ತಮಾತಂಗಕೋಟಯಃ ।
ತೇನೈವ ಶೈವೀ ಸಂಪ್ರಾಪ್ಯಾ ಶ್ರದ್ಧಾ ನಾನ್ಯೇನ ಸರ್ವಥಾ ॥೩೫॥

ಸಸುವರ್ಣಾ ಯೇನ ದತ್ತಾಸ್ತುರಂಗೋತ್ತಮಕೋಟಯಃ ।
ತೇನೈವ ಶೈವೀ ಸಂಪ್ರಾಪ್ಯಾ ಶ್ರದ್ಧಾ ನಾನ್ಯೇನ ಸರ್ವಥಾ ॥೩೬॥

ಸಸಸ್ಯಾ ಪೃಥಿವೀ ದತ್ತಾ ಶೈವೇಭ್ಯೋ ಯೇನ ಸಾದರಂ ।
ತೇನೈವ ಶೈವೀ ಸಂಪ್ರಾಪ್ಯಾ ಶ್ರದ್ಧಾ ನಾನ್ಯೇನ ಸರ್ವಥಾ ॥೩೭॥

ಪ್ರೀತಿಯಿಂದ ನಾನಾವಿಧವಾದ ತಪಸ್ಸುಗಳನ್ನು ಘೋರವಾಗಿ ಆಚರಿಸಿದವನೇ ಶಿವನಲ್ಲಿ ಶ್ರದ್ಧೆಯಿಡಲು ಯೋಗ್ಯನು, ಇತರರು ಇದನ್ನು ಹೊಂದಲು ಯೋಗ್ಯರಾಗಲಾರರು. ॥೩೩॥

ಸುವರ್ಣದಿಂದ ಅಲಂಕೃತವಾದ ಕೋಟ್ಯಂತರ ಹಸುಗಳನ್ನು ಶೈವಶ್ರೇಷ್ಠರಿಗೆ ದಾನಮಾಡಿದವನಿಗೆ ಮಾತ್ರ ಈ ಶಿವನಲ್ಲಿ ನಂಬಿಕೆಯುಂಟಾಗಲು ಅರ್ಹತೆಯಿದೆ. ಇತರರು ಖಂಡಿತವಾಗಿಯೂ ಅನರ್ಹರು. ॥೩೪॥

ಅನೇಕ ಮದಿಸಿದ ಆನೆಗಳನ್ನು ಸುವರ್ಣದೊಡನೆ ಸತ್ಪಾತ್ರರಿಗೆ ದಾನಮಾಡಿದವನಿಗೆ ಮಾತ್ರ ಈ ಶಿವನಲ್ಲಿ ಶ್ರದ್ಧೆಯುಂಟಾಗುವುದು. ಇತರರಿಗೆ ಅದು ದುರ್ಲಭವು. ॥೩೫॥

ಉತ್ತಮವಾದ ಕೋಟಿ ಕುದುರೆಗಳನ್ನು ಅನೇಕ ಚಿನ್ನದ ದ್ರವ್ಯದೊಡನೆ ದಾನಮಾಡಿದವಸಿಗೆ ಮಾತ್ರ ಇಲ್ಲಿ ಶ್ರದ್ಧೆಯುಂಟಾಗುವುದು. ಬೇರೆಯವನಿಗೆ ಖಂಡಿತವಾಗಿಯೂ ಅದು ದುರ್ಲಭವೇ ಸರಿ. ॥೩೬॥

ಚೆನ್ನಾಗಿ ಬೆಳೆದ ಪೈರಿನಿಂದ ಕೂಡಿದ ಭೂಮಿಯನ್ನು ಆದರದಿಂದ ಶಿವಭಕ್ತರಿಗೆ ದಾನಮಾಡಿದವನಿಗೆ ಮಾತ್ರ ಈ ಶಿವನಲ್ಲಿ ನಂಬಿಕೆಯುಂಟಾಗುವುದು. ಮತ್ತೊಬ್ಬನಿಗೆ ಸರ್ವಥಾ ಇದು ದುರ್ಲಭ. ॥೩೭॥

ಯೇನ ದತ್ತಾನಿ ಬಹುಧಾ ಶಿವಲಿಂಗಾನಿ ಸಾದರಂ ।
ತೇನೈವ ಶೈವೀ ಸಂಪ್ರಾಪ್ಯಾ ಶ್ರದ್ಧಾ ನಾನ್ಯೇನ ಸರ್ವಥಾ ॥೩೮॥

ಕನ್ಯಾದಾನಾನಿ ಬಹುಧಾ ಯೇನ ಸಮ್ಯಕ್ಕೃತಾನಿ ಹಿ ।
ತೇನೈವ ಶೈವೀ ಸಂಪ್ರಾಪ್ಯಾ ಶ್ರದ್ಧಾ ನಾನ್ಯೇನ ಸರ್ವಥಾ ॥೩೯॥

ಮುಕ್ತಾತುಲಾಃ ಕೃತಾ ಯೇನ ಬಹುಧಾ ಸಾಂಗದಕ್ಷಿಣಾಃ ।
ತೇನೈವ ಶೈವೀ ಸಂಪ್ರಾಪ್ಯಾ ಶ್ರದ್ಧಾ ನಾನ್ಯೇನ ಸರ್ವಥಾ ॥೪೦॥

ಪುಷ್ಪರಾಗಾದಿರತ್ನಾನಾಂ ತುಲಾ ಯೇನ ಕೃತಾ ಮುಹುಃ ।
ತೇನೈವ ಶೈವೀ ಸಂಪ್ರಾಪ್ಯಾ ಶ್ರದ್ಧಾ ನಾನ್ಯೇನ ಸರ್ವಥಾ ॥೪೧॥

ಶೈವಕ್ಷೇತ್ರೇಷು ಧರ್ಮೇಣ ಯೇನ ವಾಸಃ ಕೃತೋ ಮುಹುಃ ।
ತೇನೈವ ಶೈವೀ ಸಂಪ್ರಾಪ್ಯಾ ಶ್ರದ್ಧಾ ನಾನ್ಯೇನ ಸರ್ವಥಾ ॥೪೨॥

ಅನೇಕ ರೀತಿಯಲ್ಲಿ ಆದರದಿಂದ ಬಹಳ ಶಿವಲಿಂಗಗಳನ್ನು ದಾನಮಾಡಿದವನಿಗೆ ಮಾತ್ರ ಈ ಶಿವನಲ್ಲಿ ಶ್ರದ್ಧೆಯುಂಟಾಗುವುದೇ ವಿನಾ ಮತ್ತೊಬ್ಬನಿಗೆ ನಿಶ್ಚಯವಾಗಿಯೂ ದೊರೆಯಲಾರದು. ॥೩೮॥

ಅನೇಕ ಕನ್ಯಾದಾನಗಳನ್ನು ವಿಧಿಪೂರ್ವಕವಾಗಿ ಚೆನ್ನಾಗಿ ನಡೆಸಿದವನಿಗೆ ಮಾತ್ರ ಈ ಶಿವನಲ್ಲಿ ಶ್ರದ್ಧೆಯುಂಟಾಗುವುದೇ ಹೊರತು, ಬೇರೆಯವನು ಅದನ್ನು ಖಂಡಿತ ಹೊಂದಲಾರನು. ॥೩೯॥

ಸಾಂಗವಾಗಿಯೂ ದಕ್ಷಿಣಾಸಹಿತವಾಗಿಯೂ ಅನೇಕ ಮುತ್ತಿನ ತುಲಾಭಾರಗಳನ್ನು ಮಾಡಿಸಿಕೊಂಡಿದ್ದವನಿಗೆ ಮಾತ್ರ ಈ ಪರಶಿವನಲ್ಲಿ ನಂಬಿಕೆಯುಂಟಾಗುವುದೇ ವಿನಾ ಮತ್ತೊಬ್ಬನಿಗೆ ಇದು ಅಸಾಧ್ಯವೇ ಸರಿ. ॥೪೦॥

ಪುಷ್ಯರಾಗವೇ ಮೊದಲಾದ ರತ್ನಗಳಿಂದ ಅನೇಕ ಬಾರಿ ತುಲಾಭಾರ ಮಾಡಿಸಿರುವವನಿಗೆ ಮಾತ್ರ ಶಿವನಲ್ಲಿ ಶ್ರದ್ಧೆಯುಂಟಾಗುವುದೇ ಹೊರತು ಬೇರೆಯವನಿಗೆ ಇದು ಖಂಡಿತ ದುರ್ಲಭವು. ॥೪೧॥

ಧರ್ಮಶ್ರದ್ಧೆಯುಳ್ಳವನಾಗಿ ಶಿವನ ಕ್ಷೇತ್ರಗಳಲ್ಲಿ ಅನೇಕ ಬಾರಿ, ವಾಸಮಾಡಿರುವವನಿಗೆ ಮಾತ್ರ, ಪರಶಿವನಲ್ಲಿ ನಂಬಿಕೆ ಹುಟ್ಟುವುದೇ ಹೊರತು, ಮತ್ತೊಬ್ಬನಿಗೆ ಅದು ಖಂಡಿತ ಅಸಾಧ್ಯವು. ॥೪೨॥

ಕಿಮುಕ್ತೇನಾತ್ರ ಬಹುನಾ ಮಹದ್ಭಾಗ್ಯೇನ ಶಾಂಭವಿ ।
ಭಕ್ತಿರ್ಭವತಿ ನಾಲ್ಪೇನ ಭಾಗ್ಯೇನೈತದ್ಧ್ರುವಂ ಧ್ರುವಂ ॥೪೩॥

॥ ನಂದಿಕೇಶ ಉವಾಚ ॥

ಸ್ಕಂದ ಸತ್ಯಂ ಸತ್ಯಮೇತತ್ಸತ್ಯಂ ಸತ್ಯಂ ನ ಸಂಶಯಃ ।
ಯತ್ತ್ವಯೋಕ್ತಂ ವೇದತತ್ವಂ ತದಿತ್ಥೇವಂ ಮತಿರ್ಮಮ ॥೪೪॥

ಶಿವತತ್ವಂ ಶಿವೋ ವೇದ ಜ್ಞಾತಂ ತತ್ವಂ ತ್ವಯಾಽಪಿ ತತ್ ।
ನ ಶಿವಾನ್ಯಸ್ತ್ವದನ್ಯೋ ವಾ ವೇದ ತತ್ವಂ ಶಿವಸ್ಯ ಹಿ ॥೪೫॥

ತ್ವತ್ಕೃಪಾ ಮಯಿ ಸಂಜಾತಾ ಧನ್ಯೋಽಸ್ಮ್ಯಹಮತಃ ಪರಂ ।
ಕೃಪೇಯಂ ತವ ಕಲ್ಯಾಣಿ ಶಂಕರಸ್ಯ ಕೃಪಾ ಧ್ರುವಂ ॥೪೬॥

ಯಥಾ ಗಣೇಶ್ವರೇ ಪ್ರೀತಿರ್ಬ್ರಹ್ಮವಿಷ್ಣ್ವಾದಿವಂದಿತೇ ।
ತಥಾ ಪ್ರೀತಿರ್ಮಯಿ ಶ್ರೀಮನ್ಕ್ರಿಯತೇ ಷಣ್ಮುಖ ತ್ವಯಾ ॥೪೭॥

ಅಯ್ಯ ನಂದಿಕೇಶ್ವರ! ಈ ವಿಷಯದಲ್ಲಿ ಹೆಚ್ಚು ಹೇಳಿ ಪ್ರಯೋಜನವೇನು? ಪರಮಶಿವನಲ್ಲಿ ಭಕ್ತಿಯುಂಟಾಗಬೇಕಾದರೆ ಮಹಾಭಾಗ್ಯಶಾಲಿಯೇ ಆಗಿರಬೇಕೇ ಹೊರತು, ಕೇವಲ ಅಲ್ಪಭಾಗ್ಯಶಾಲಿಗೆ ಇದು ದೊರೆಯುವುದಿಲ್ಲವೆಂಬುದು ಮಾತ್ರ ನಿಶ್ಚಯವು, ಎಂದು ಷಣ್ಮುಖಸ್ವಾಮಿಯು ನಂದಿಕೇಶ್ವರನಿಗೆ ಹೇಳಿದನು. ॥೪೩॥

ಕುಮಾರಸ್ವಾಮಿಯೇ! ನೀನು ಹೇಳಿದುದು ಸತ್ಯವು; ಇದರಲ್ಲಿ ಸ್ವಲ್ಪವೂ ಸಂಶಯವೇ ಇಲ್ಲ. ನೀನು ಹೇಳಿದುದೇ ವೇದದ ರಹಸ್ಯವೆಂದು ನಾನು ತಿಳಿಯುವೆನು. ಎಂದು ನಂದೀಶ್ವರನು ಸ್ಕಂದನೊಡನೆ ಮಾತನಾಡತೊಡಗಿದನು. ॥೪೪॥

ಆ ಪರಶಿವನ ತತ್ವವನ್ನು ಶಿವನು ತಿಳಿದಿರುವನು, ಅವನ ಅನುಗ್ರಹದಿಂದ ನೀನೂ ಅದನ್ನು ತಿಳಿದಿರುವೆ. ನೀನು, ಮತ್ತು ಆ ಶಿವ ಇವರಿಬ್ಬರಲ್ಲದೆ ಆ ಪರಶಿವನ ತತ್ವವು ಮತ್ತಾರಿಗೂ ತಿಳಿಯದು. ॥೪೫॥

ಈಗ, ನಿನ್ನ ದಯೆಯು ನನ್ನ ಮೇಲೆ ಉಂಟಾಗಿರುವುದರಿಂದ ನಾನೂ ಇನ್ನು ಮುಂದೆ ಧನ್ಯನೇ ಸರಿ. ಮಂಗಳಕರವಾದ ನಿನ್ನ ದಯೆಯು ಆ ಶಂಕರನ ದಯೆಯೇ ಆಗಿರುವುದು; ಇದರಲ್ಲಿ ಸಂದೇಹವೇ ಇಲ್ಲ. ॥೪೬॥

ಷಣ್ಮುಖದೇವನೇ! ಬ್ರಹ್ಮ, ವಿಷ್ಣು, ಮುಂತಾದವರಿಂದ ನಮಸ್ಕರಿಸಲ್ಪಟ್ಟ

ಸರ್ವಜ್ಞ ತ್ವಂ ಸರ್ವಗಶ್ಚ ಷಣ್ಮುಖಸ್ತ್ವಂ ನ ಸಂಶಯಃ ।
ವದ ಕ್ಷೇತ್ರಸ್ಯ ಮಾಹಾತ್ಮ್ಯಂ ಶೈವಸ್ಯಾಸ್ಯಾಖಿಲಸ್ಯ ಚ ॥೪೮॥

ಶಿವಕ್ಷೇತ್ರಾಣಿ ಯಾನ್ಯತ್ರ ಸಂತಿ ತೇಷಾಂ ಚ ಷಣ್ಮುಖ ।
ಪ್ರಭಾವಂ ವೇತ್ತಿ ನ ತ್ವನ್ಯೋ ವೇತ್ಸಿ ತ್ವಂ ಚ ನ ಸಂಶಯಃ ॥೪೯॥

ಮಾಹಾತ್ಮ್ಯಂ ವದ ಸರ್ವಜ್ಞ ಪೃಚ್ಛತೋ ಮಮ ಸಾದರಂ ॥೫೦॥
ನಂದಿಕೇಶಾದ್ಯ ಸಂತೋಷೋ ಜಾತಸ್ತ್ವದ್ವಚನಾನ್ಮಮ ।

॥ ಶ್ರೀಸ್ಕಂದ ಉವಾಚ ॥

ಶ್ರೀಶೈಲಸ್ಯಾಸ್ಯ ಮಾಹಾತ್ಮ್ಯಂ ವಕ್ಷ್ಯೇ ಮೋಕ್ಷಪ್ರದಂ ಶೃಣು ॥೫೧॥

ಶಿವನ ಗಣಾಧಿಪತಿಗಳಲ್ಲಿರುವಂತೆಯೇ, ನನ್ನಲ್ಲಿಯೂ ನೀನು ಪ್ರೀತಿಯನ್ನು ತೋರಿಸುತ್ತಿರುವೆ. ॥೪೭॥

ಆರು ಮುಖವುಳ್ಳ ಸ್ವಾಮಿಯೇ! ಸರ್ವ ವ್ಯಾಪಿಯಾದ ನೀನು ಸರ್ವಜ್ಞನು. ದೇವ! ಸಮಸ್ತವಾದ ಶಿವಕ್ಷೇತ್ರಗಳ ಮಹಿಮೆಯನ್ನೂ ನನಗೆ ತಿಳಿಸು ಸ್ವಾಮಿ! ॥೪೮॥

ಪೂಜ್ಯ ಷಣ್ಮುಖಸ್ವಾಮಿಯೇ! ಇಲ್ಲಿರುವ ಶಿವಕ್ಷೇತ್ರಗಳ ಮಹಿಮೆಯೆಲ್ಲಾ ನಿನಗೊಬ್ಬನಿಗೆ ಗೊತ್ತೇ ಹೊರತು, ಮತ್ತಾರಿಗೂ ನಿಜವಾಗಿಯೂ ತಿಳಿಯದು. ॥೪೯॥

ಎಲೈ ಸರ್ವಜ್ಞನಾದ ಕುಮಾರಸ್ವಾಮಿಯೇ! ಆದರದಿಂದ ಪ್ರಶ್ನೆಮಾಡುತ್ತಿರುವ ನನಗೆ ಆ ಶಿವಕ್ಷೇತ್ರಗಳ ಮಹಿಮೆಯನ್ನೆಲ್ಲಾ ತಿಳಿಸುವವನಾಗು, ಎಂದು, ನಂದಿಕೇಶ್ವರನು, ಷಣ್ಮುಖನನ್ನು ಭಕ್ತಿಯಿಂದ ಪ್ರಾರ್ಥಿಸಿದನು. ॥೫೦॥

ನಂದಿಕೇಶ್ವರನ ಪ್ರಾರ್ಥನೆಯನ್ನಂಗೀಕರಿಸಿ, ಸ್ಕಂದದೇವನು ಶ್ರೀಶೈಲ ಕ್ಷೇತ್ರದ ಮಹಿಮೆಯನ್ನು ಹೀಗೆ ನಿರೂಪಿಸಿದನು—ಓ ನಂದಿಕೇಶ್ವರ, ನಿನ್ನ ಮಾತನ್ನು ಕೇಳಿ ನನಗೆ ಈಗ ಬಹಳ ಸಂತೋಷವಾಯಿತು. ಮೋಕ್ಷವನ್ನುಂಟು ಮಾಡುವ ಈ ಶ್ರೀಶೈಲಕ್ಷೇತ್ರದ ಮಹಿಮೆಯನ್ನು ತಿಳಿಸುವೆನು ಕೇಳು, ಎಂದು ಹೀಗೆ ನುಡಿದನು. ॥೫೧॥

ಅಶೀತಿಯೋಜನಾಯಾಮಃ ಸರ್ವತೋಽಯಂ ಶಿವಾತ್ಮಕಃ ।
ಪ್ರಭಾವೋಽಸ್ಯ ಮಯಾ ವಕ್ತುಂ ಶಕ್ಯಮೇವ ನ ಸರ್ವಥಾ ॥೫೨॥

ಯಾವಂತಃ ಸಂತಿ ಪಾಷಾಣಾಃ ಶೈಲೇಽಸ್ಮಿನ್ನಂದಿಕೇಶ್ವರ ।
ತಾವಂತಿ ಶಿವಲಿಂಗಾನಿ ಪಾಷಾಣಾ ನಾತ್ರ ಸಂಶಯಃ ॥೫೩॥

ತೃಣಾನಿ ವೃಕ್ಷಗುಲ್ಮಾಶ್ಚ ಲತಾಃ ಪರ್ಣಾನಿ ಜಂತವಃ ।
ಯಾವಂತಃ ಸಂತಿ ತಾವಂತೋ ಲಿಂಗಾನ್ಯೇವ ನ ಸಂಶಯಃ ॥೫೪॥

ಅಮಿತಾನ್ಯತ್ರ ತೀರ್ಥಾನಿ ಸರ್ವತೀರ್ಥೋತ್ತಮಾನಿ ಹಿ ।
ಸರ್ವಾರ್ಥದಾನಿ ಸರ್ವೇಷಾಂ ಸ್ಮರಣಾದಪಿ ಸರ್ವದಾ ॥೫೫॥

ಪದೇಪದೇಽತ್ರ ತೀರ್ಥಾನಿ ಲಿಂಗಾನ್ಯತ್ರ ಪದೇ ಪದೇ ।
ಪದೇಪದೇ ತಪಃಸಿದ್ಧಿಸ್ತಪಸಾಮತ್ರ ಜಾಯತೇ ॥೫೬॥

ಶಿವಸ್ವರೂಪವಾದ ಶ್ರೀಶೈಲಪರ್ವತವು ಎಂಬತ್ತು ಯೋಜನ ವಿಸ್ತಾರವುಳ್ಳದ್ದು. ಇದರ ಪ್ರಭಾವವನ್ನು ಸಂಪೂರ್ಣವಾಗಿ ಇಷ್ಟೇ ಎಂದು ಹೇಳಲು ನನಗೂ ಸಾಧ್ಯವಿಲ್ಲ. ॥೫೨॥

ಓ ನಂದಿಕೇಶ್ವರನೇ, ಈ ಬೆಟ್ಟದಲ್ಲಿ ಎಷ್ಟು ಕಲ್ಲುಗಳಿವೆಯೋ ಅಷ್ಟು ಶಿವಲಿಂಗಗಳಿವೆಯೆಂದೂ, ಅಲ್ಲದೆ ಆ ಕಲ್ಲುಗಳೆಲ್ಲವೂ ಶಿವಲಿಂಗಸ್ವರೂಪವೇ ಎಂದೂ ತಿಳಿ. ಇದರಲ್ಲಿ ಸಂಶಯವಿಲ್ಲ. ॥೫೩॥

ಹುಲ್ಲುಗಳು, ಮರದ ಪೊದರೆಗಳು, ಬಳ್ಳಿಗಳು, ಎಲೆಗಳು, ಪ್ರಾಣಿಗಳು ಇವು ಈ ಬೆಟ್ಟದಲ್ಲಿ ಎಷ್ಟಿವೆಯೋ ಅವೆಲ್ಲವೂ ಶಿವಲಿಂಗಗಳೆಂಬುದರಲ್ಲಿ ಸಂಶಯವೇ ಇಲ್ಲ. ॥೫೪॥

ಇಲ್ಲಿ ಸಕಲ ತೀರ್ಥಗಳಿಗಿಂತಲೂ ಅತ್ಯುತ್ತಮಗಳೆನಿಸಿರುವ ಅಪಾರಸಂಖ್ಯಾಕ ತೀರ್ಥಗಳಿರುವುವು. ಯಾವಾಗಲೂ ಈ ತೀರ್ಥಗಳ ಸ್ಮರಣೆಮಾತ್ರದಿಂದಲೇ ಎಲ್ಲರಿಗೂ ಸಕಲ ಮನೋರಥಗಳೂ ಸಿದ್ಧಿಸುವುವು. ॥೫೫॥

ಈ ಶ್ರೀಶೈಲದಲ್ಲಿ ಹೆಜ್ಜೆಹೆಜ್ಜೆಗೂ ತೀರ್ಥಗಳೂ, ಹೆಜ್ಜೆಹೆಜ್ಜೆಗೂ ಶಿವಲಿಂಗಗಳೂ ಇರುವುವು. ಹಾಗೆಯೇ ಹೆಜ್ಜೆಹೆಜ್ಜೆಗೂ ತಪಸ್ಸಿದ್ಧಿಯೂ ಉಂಟಾಗುವುದು. ॥೫೬॥

ಸರ್ವಸಿದ್ಧಿಕರಂ ತೀರ್ಥಮೀದೃಶಂ ನೈವ ದೃಶ್ಯತೇ।
ಪಶ್ಯ ಕ್ಷೇತ್ರಾಣಿ ತೀರ್ಥಾನಿ ಮುಕ್ತಿದಾನ್ಯತ್ರ ಪರ್ವತೇ ॥೫೭॥

ಅತ್ರ ಪೂರ್ವಂ ತಪಸ್ತಪ್ತಂ ಕಾಶೀಪ್ರಾಪ್ತ್ಯರ್ಥಮಾಸ್ತಿಕೈಃ।
ಕಾಶೀ ಪ್ರಾಪ್ತಾ ಚ ತೈಃ ಶುದ್ಧೈಃ ಶುದ್ಧಾ ಸಿದ್ಧತಪೋಧನೈಃ ॥೫೮॥

ಕಾಶೀಂ ಪ್ರಾಪ್ಯ ತತಃ ಸಿದ್ಧೈರವಿಮುಕ್ತೇ ಮುನೀಶ್ವರೈಃ।
ಮುಕ್ತೀಶ್ವರಪ್ರಸಾದೇನ ಮುಕ್ತಿರ್ಲಬ್ಧಾ ಚ ತೈಸ್ತದಾ ॥೫೯॥

ಇದಾನೀಮಪಿ ಕುರ್ವಂತಿ ಕಾಶೀಪ್ರಾಪ್ತ್ಯರ್ಥಮಾಸ್ತಿಕಾಃ।
ತಪೋಽಗ್ರೇಽಪಿ ಕರಿಷ್ಯಂತಿ ಸಿದ್ಧಿಕ್ಷೇತ್ರಮಿದಂ ಯತಃ ॥೬೦॥

ಸಕಲ ಇಷ್ಟಸಿದ್ಧಿಗಳನ್ನೂ ಉಂಟುಮಾಡಿಕೊಡುವ ಇಂತಹ ತೀರ್ಥವು ಮತ್ತೆಲ್ಲಿಯೂ ಕಾಣುವುದಿಲ್ಲ. ಅಯ್ಯ ನಂದಿಕೇಶ್ವರ, ಈ ಪರ್ವತದಲ್ಲಿರುವ ಈ ಕ್ಷೇತ್ರಗಳನ್ನೂ ಮತ್ತು ತೀರ್ಥಗಳನ್ನೂ ನೋಡು. ಇವು ತಮ್ಮಲ್ಲಿ ಸ್ನಾನಪಾನಾದಿಗಳನ್ನಾಚರಿಸುವವರಿಗೆ ಮೋಕ್ಷವನ್ನು ಕೊಡಬಲ್ಲವು. ||೫೭||

ಈ ಕ್ಷೇತ್ರದಲ್ಲಿ ಹಿಂದೆ ಕಾಶೀಕ್ಷೇತ್ರವನ್ನು ಹೊಂದುವುದಕ್ಕೋಸ್ಕರ ಕೆಲವು ಮಂದಿ ಆಸ್ತಿಕರು ತಪಸ್ಸುಮಾಡಿದರು. ಅನಂತರ ಪರಿಶುದ್ಧರಾದ ಆ ತಪಸ್ವಿಗಳು ಪರಿಪಕ್ವವಾದ ಸಿದ್ಧಿಯುಳ್ಳವರಾಗಿ ಕಾಶಿಯನ್ನು ಹೊಂದಿದರು. ||೫೮||

ಅನಂತರ ಆ ಸಿದ್ಧಪುರುಷರು ಕಾಶೀಕ್ಷೇತ್ರವನ್ನು ಪಡೆದು ಅಲ್ಲಿ ಮುಕ್ತೀಶ್ವರನ ಅನುಗ್ರಹದಿಂದ ಕೊನೆಗೆ ಆ ಮುನಿಶ್ರೇಷ್ಠರೆಲ್ಲರೂ ಮೋಕ್ಷವನ್ನು ಹೊಂದಿದರು. ||೫೯||

ಈಗಲೂ ಅನೇಕ ಮಂದಿ ಆಸ್ತಿಕರು ಇಲ್ಲಿ ಅದೇ ಕಾಶಿಯನ್ನು ಪಡೆಯುವುದಕ್ಕೋಸ್ಕರ ತಪಸ್ಸುಮಾಡುತ್ತಿರುವರು. ಇದು ಸಿದ್ಧಿಯನ್ನು ಸುಲಭವಾಗಿ ದೊರಕಿಸಿಕೊಡುವ ಸಿದ್ಧಿಕ್ಷೇತ್ರವೆಂದು ಪ್ರಸಿದ್ಧಿಪಡೆದಿರುವುದರಿಂದ ಇಲ್ಲಿ ಮುಂದೆಯೂ ಅನೇಕ ಮಂದಿ ತಪಸ್ಸುಮಾಡುವರು. ||೬೦||

ಪಂಚಾಗ್ನಿಮಧ್ಯಗೋಽತ್ರೈವ ಕಪಿಲಃ ಸಿದ್ಧಿಮುತ್ತಮಃ ।
ಅನಿವೃತ್ತಸ್ತಪೋ ನಿತ್ಯಂ ಕರೋತಿ ಪ್ರೀತಮಾನಸಃ ॥೬೧॥

ತಪಃ ಪೂರ್ವಮನೇನೈವ ಯುಗಾನಾಮಯುತಂ ಕೃತಂ ।
ಪ್ರಜ್ವಾಲ್ಯಾಗ್ನಿಮಯಂ ಭೂಯಸ್ತಪಃ ಕರ್ತುಂ ಸಮಾರಭೇ ॥೬೨॥

ವಸಿಷ್ಠಃ ಶ್ರಮಸಂಕ್ರಾಂತಸ್ತಪಸಾ ಭೂಯಸಾ ಮುಹುಃ ।
ಕರೋತ್ಯತ್ರ ತಪೋ ಘೋರಂ ಸತತಂ ನಿಯಮಾಶ್ರಯಃ ॥೬೩॥

ತಪಸೋಽಸ್ಯ ಪ್ರಭಾವೇನ ಪಾವಕಾಃ ಸ್ವಯಮೇವ ತೇ ।
ಪ್ರಜ್ವಲಂತ್ಯನಿಶಂ ಪಶ್ಯ ಕಥಂ ಭಾಂತ್ಯಗ್ನಯೋ ಮುದಾ ॥೬೪॥

ಹಿಂದೆ ಸಿದ್ಧಿಯನ್ನು ಪಡೆದವರಲ್ಲಿ ಶ್ರೇಷ್ಠನಾದ ಕಪಿಲಮುನಿಯು ಇಲ್ಲಿಯೇ ಪಂಚಾಗ್ನಿಗಳ ಮಧ್ಯದಲ್ಲಿ ತಪಸ್ಸುಮಾಡಿದನು. ಈಗಲೂ ಬಹಳ ಪ್ರೀತಿಯಿಂದ ಕೂಡಿದ ಮನಸ್ಸಿನಿಂದ ನಿತ್ಯವೂ ಎಡಬಿಡದೇ ತಪಸ್ಸುಮಾಡುತ್ತಿರುವನು. ॥೬೧॥

ಬಹಳ ಹಿಂದೆ ಈ ಕಪಿಲಮುನಿಯೇ ಹತ್ತುಸಾವಿರ ಯುಗಗಳ ಕಾಲ ತಪಸ್ಸುಮಾಡಿದನು. ಆಗ ಆ ಮುನಿಯು ತನ್ನ ಸುತ್ತಲೂ ಅಗ್ನಿಯನ್ನು ಪ್ರಜ್ವಲಿಸುತ್ತಾ ಉರಿಯುವಂತೆ ಮಾಡಿಕೊಂಡು, ಅದರ ಮಧ್ಯದಲ್ಲಿ ತಾನು ಕುಳಿತು ಅನೇಕ ಬಾರಿ ಘೋರವಾಗಿ ತಪಸ್ಸುಮಾಡಲು ಪ್ರಾರಂಭಿಸಿದನು. ॥೬೨॥

ಋಷಿಶ್ರೇಷ್ಠನಾದ ವಸಿಷ್ಠಮಹರ್ಷಿಯೂ ಅನೇಕ ತಪಸ್ಸುಗಳನ್ನು ಇಲ್ಲಿ ಮಾಡಿ, ಬಹಳವಾಗಿ ಬಳಲಿದವನಾಗಿದ್ದರೂ ಈ ಕ್ಷೇತ್ರದ ಮಹಿಮೆಯನ್ನು ತಿಳಿದು ಇಲ್ಲಿ ನಿತ್ಯವೂ ಘೋರವಾದ ತಪಸ್ಸನ್ನು ನಿಯಮದಿಂದ ಮಾಡುತ್ತಲೇ ಇರುವನು ॥೬೩॥

ಈ ವಸಿಷ್ಠಮಹರ್ಷಿಯ ತಪಸ್ಸಿನ ಪ್ರಭಾವದಿಂದ ಇಲ್ಲಿ ಅನವರತವೂ ಅಗ್ನಿಗಳು ಸಂತೋಷದಿಂದ ಪ್ರಜ್ವಲಿಸುತ್ತಿರುವುದನ್ನು ನೋಡು ; ಎಷ್ಟು ರಮಣೀಯವಾಗಿದೆ. ॥೬೪॥

ಕಣ್ವೋಽಪಿ ಘೋರತಪಸಾ ಶರೀರಂ ಪಾವನಂ ಸ್ವಕಂ ।
ಚಕಾರ ಪುನರಪ್ಯತ್ರ ಕರೋತ್ಯತ್ರ ತಪೋ ಮುದಾ ॥೬೫॥

ಗರ್ಗೋಽಪಿ ತಪಸಾಽಪ್ಯತ್ರ ಪ್ರೀಣಯತ್ಯಂಬಿಕಾಪತಿಂ ।
ಊರ್ಧ್ವಬಾಹುಃ ಕಥಂ ಪ್ರೀತ್ಯಾ ಪಶ್ಯತ್ಯರ್ಕಂ ವಿಲೋಕಯ ॥೬೬॥

ಅತ್ರಿಣಾತ್ರ ತಪಸ್ತಪ್ತಮಪುತ್ರೇಣ ಪುರಾ ಮುದಾ ।
ತತಃ ಶಿವಃ ಪ್ರಸನ್ನೋಽಭೂದಂಬಿಕಾರಮಣಸ್ತದಾ ॥೬೭॥

ತತೋ ದೃಷ್ಟ್ವಾ ಮಹಾದೇವಂ ಅತ್ರಿರ್ದೇವೋತ್ತಮಂ ಶಿವಂ ।
ಪ್ರಣಮ್ಯ ಪೂಜಯಿತ್ವಾಽಥ ತುಷ್ಟಾವ ಗಿರಿಜಾಪತಿಂ ॥೬೮॥

ನಮೋ ನಮೋ ನಿರ್ಗುಣ ನಿರ್ವಿಕಾರ
ನಮೋ ನಮೋ ನಿಷ್ಕಲ ನಿಷ್ಪ್ರಪಂಚ ।

ಕಣ್ವಮಹರ್ಷಿಯೂ ಘೋರವಾದ ತಪಸ್ಸನ್ನು ಮಾಡಿ ತನ್ನ ಶರೀರವನ್ನು ಪಾವನಗೊಳಿಸಿದರೂ ಪುನಃ ಈ ಕ್ಷೇತ್ರದಲ್ಲಿ ಸಂತೋಷದಿಂದ ತಪಸ್ಸುಮಾಡುತ್ತಿರುವನು. ॥೬೫॥

ಗರ್ಗಮುನಿಯೂ ಕೂಡ ಇಲ್ಲಿ ತಪಸ್ಸುಮಾಡುತ್ತಾ ಅಂಬಿಕಾರಮಣನಾದ ಆ ಪರಮೇಶ್ವರನನ್ನು ಸಂತೋಷಪಡಿಸುತ್ತಿರುವನು. ಅಯ್ಯಾ ನಂದಿಕೇಶ್ವರನೇ, ಈ ಗರ್ಗಮುನಿಯು ಕೈಗಳನ್ನು ಮೇಲೆ ಎತ್ತಿಕೊಂಡು, ಎಷ್ಟು ಪ್ರೀತಿಯಿಂದ ಹೇಗೆ ಸೂರ್ಯನನ್ನು ನೋಡುತ್ತಾ ತಪಸ್ಸುಮಾಡುತ್ತಿರುವನು ನೋಡು. ॥೬೬॥

ಹಿಂದೆ ಅತ್ರಿಮಹರ್ಷಿಯು ಪುತ್ರಸಂತಾನವಿಲ್ಲದೆ ಈ ಶ್ರೀಶೈಲದಲ್ಲಿ ಸಂತೋಷದಿಂದ ತಪಸ್ಸುಮಾಡಿದನು. ಆ ಮುನಿಯ ತಪಸ್ಸಿನಿಂದ ಅಂಬಿಕಾರಮಣನು ಪ್ರಸನ್ನನಾಗಿ ಅವನಿಗೆ ಅನುಗ್ರಹಮಾಡಿದನು. ॥೬೭॥

ಅನಂತರ ಅತ್ರಿಮಹರ್ಷಿಯು, ದೇವೋತ್ತಮನಾದ ಮಹಾದೇವನನ್ನು ನೋಡಿ, ಆ ಪರಶಿವನಿಗೆ ನಮಸ್ಕರಿಸಿ, ಪೂಜೆಮಾಡಿದನಂತರ, ಗಿರಿಜಾರಮಣನನ್ನು ಕುರಿತು ಈ ರೀತಿ ಸ್ತೋತ್ರಮಾಡಿದನು. ॥೬೮॥

“ನಿರ್ಗುಣನೂ, (ಗುಣರಹಿತನೂ) ವಿಕಾರಶೂನ್ಯನೂ, ಕಲಾ ರಹಿತನೂ, ಈ ಪ್ರಪಂಚಾತಿರಿಕ್ತನೂ, ಆದ ಸ್ವಾಮಿಯೇ! ನಿನಗೆ ನಮಸ್ಕಾರಮಾಡುವೆನು

ನವೋ ನಮಃ ಶಾಂತ ನವೋ ನಮಸ್ತೇ
ನವೋ ನಮಸ್ತೇ ಶಿವಸರ್ವರೂಪ ॥೬೯॥

ನವೋ ನಮಃ ಸಾಂಬ ನವೋ ನಮಸ್ತೇ
ನವೋ ನಮಃ ಶಂಕರ ಸರ್ವಹೇತೋ ।
ನವೋ ನವೋಽಮೇಯುಗುಣಸ್ವರೂಪ
ತುರೀಯುಶಂಭೋ ಸತತಂ ನಮಸ್ತೇ ॥೭೦॥

ನವೋ ನವೋಽನಂತಗುಣೈಕಸಿಂಧೋ
ಪ್ರಪನ್ನಬಂಧೋ ಭಗವನ್ನಮಸ್ತೇ ।
ನವೋ ನಮಃ ಶರ್ವ ನವೋನಮಸ್ತೇ
ನವೋ ನಮಃ ಪಣ್ಯ್ರ ನವೋ ನಮಸ್ತೇ ॥೭೧॥

ನವೋ ನಮಸ್ತೇಽಸ್ತು ನವೋಽಸ್ತು ಶಂಭೋ
ನವೋ ನಮಸ್ತೇಽಸ್ತು ನವೋಽಸ್ತು ರುದ್ರ ।
ನವೋ ನಮಸ್ತೇ ಗಿರಿಜಾಸಹಾಯು
ನವೋ ನಮಸ್ತೇಽಸ್ತು ನವೋ ಮಹೇಶ ॥೭೨॥

ಎಲೈ ಶಾಂತಸ್ವರೂಪನಾದ ದೇವನೇ ನಿನ್ನನ್ನು ಅಭಿನಂದಿಸುವೆನು. ಓ ಮಂಗಳಸ್ವರೂಪನಾದ ಪರಶಿವನೇ! ನಿನಗೆ ನಮಸ್ಕಾರವು. ॥೬೯॥

ಅಂಬಿಕಾರಮಣನಾದ ಸ್ವಾಮಿಯೇ! ನಿನಗೆ ನಮಸ್ಕಾರವು. ಎಲ್ಲಕ್ಕೂ ಕಾರಣಭೂತನಾದ ಶಂಕರನೇ! ನಿನ್ನನ್ನು ನಮಸ್ಕರಿಸುವೆನು. ಪ್ರಮಾಣಕ್ಕೆ ಗೋಚರವಾಗದ ಸ್ವರೂಪವುಳ್ಳ ಶಂಭುವೇ! ನಿನಗೆ ಪ್ರಣಾಮವು. ಕೊನೆಯಲ್ಲಿ ಸುಖವನ್ನು ಕರುಣಿಸುವ ಶಂಭುವೇ! ನಿನಗೆ ಯಾವಾಗಲೂ ನನ್ನ ನಮಸ್ಕಾರವು. ॥೭೦॥

ಅಪಾರವಾದ ಸದ್ಗುಣಗಳಿಗೆ ಸಮುದ್ರದಂತೆ ಆಶ್ರಯನಾಗಿರುವ ದೇವನೇ! ನಿನಗೆ ಪ್ರಣಾಮವು. ಶರಣಾಗತರಾಗಿ ಬಂದವರಿಗೆ ಬಂಧುವಿನಂತೆ ಆಶ್ರಯಕೊಟ್ಟು ಕಾಪಾಡುವ ಭಗವಂತನೇ! ಇದೋ ನಿನಗೆ ನಮಸ್ಕಾರವು. ಸ್ವಾಮಿಯೇ! ಸಕಲ ಪಾಪಗಳನ್ನೂ ನೀನು ನಾಶಮಾಡುವೆ. ಸುಖಪ್ರದನೇ, ದೇವ, ಎಲ್ಲಾ ಎಲೆಗಳಲ್ಲಿಯೂ ತೋರುತ್ತಿರುವೆ. ಲತಾರೂಪದಲ್ಲಿರುವ ಮಹೇಶ್ವರ! ನಿನಗೆ ನಮಸ್ಕಾರವು. ॥೭೧॥

ಸುಖಪ್ರದನಾದ ಸ್ವಾಮಿಯೇ! ನಿನಗೆ ನಮಸ್ಕಾರವು, ರುದ್ರದೇವನೇ!

ನಮೋ ನಮಸ್ತೇಽಸ್ತು ಹಿರಣ್ಯಬಾಹೋ
ನಮೋ ನಮಸ್ತೇಽಸ್ತು ಹಿರಣ್ಯರೂಪ ।
ನಮೋ ನಮಸ್ತೇಽಸ್ತು ಹಿರಣ್ಯವರ್ಣ
ನಮೋ ನಮಸ್ತೇಽಸ್ತು ಹಿರಣ್ಯಹೇತೋ ॥೭೩॥

ನಮೋ ನಮಸ್ತೇಽಸ್ತು ಶಶಾಂಕಮೌಳೇ
ನಮೋ ನಮಸ್ತೇಽಸ್ತು ಪಿನಾಕಪಾಣೇ ।
ನಮೋ ನಮಸ್ತೇಽಸ್ತು ವೃಷಾಂಕಕೇತೋ
ನಮೋ ನಮಸ್ತೇಽಸ್ತು ನಮೋ ಗಿರೀಶ ॥೭೪॥

ನಮೋ ನಮಸ್ತೇ ಪೃಥಿವೀಸ್ವರೂಪ
ನಮೋ ನಮಸ್ತೇಽಸ್ತು ಜಲಸ್ವರೂಪ ।
ತೇಜಸ್ಸ್ವರೂಪಾಯ ನಮೋ ನಮಸ್ತೇ
ವಾಯುಸ್ವರೂಪಾಯ ನಮೋ ನಮಸ್ತೇ ॥೭೫॥

ನಿನಗೆ ಪ್ರಣಾಮವು. ಎಲೈ ಗಿರಿಜಾರಮಣನಾದ ಮಹೇಶ್ವರನೇ ನಿನಗೆ ಬಾರಿಬಾರಿಗೂ ನಮಸ್ಕಾರಮಾಡುವೆನು. ॥೭೨॥

ಚಿನ್ನದ ಆಭರಣಗಳನ್ನು ತೋಳುಗಳಲ್ಲಿ ಧರಿಸಿರುವ ಸ್ವಾಮಿಯೇ! ನಿನಗೆ ನಮಸ್ಕಾರವು. ದೇವ, ನೀನು ಹಿರಣ್ಯಸ್ವರೂಪನು, ಸುವರ್ಣದಂತೆ ಮನೋಹರವಾದ ಮೈಬಣ್ಣವುಳ್ಳವನು. ಈ ಸುವರ್ಣಕ್ಕೆಲ್ಲಾ ಕಾರಣನೂ, ನೀನೇ ಆಗಿರುವೆ. ದೇವ! ನಿನಗೆ ನಮಸ್ಕರಿಸುವೆನು. ॥೭೩॥

ಓ ಚಂದ್ರಮೌಳಿಯಾದ ಸ್ವಾಮಿಯೇ, ಪಿನಾಕವೆಂಬ ಬಿಲ್ಲನ್ನು ಕೈಯ್ಯಲ್ಲಿ ಹಿಡಿದಿರುವ ನಿನಗೆ ನಮಸ್ಕಾರವು. ಎತ್ತಿನ ಗುರುತನ್ನೇ ನಿನ್ನ ಬಾವುಟವನ್ನಾಗಿ ಮಾಡಿಕೊಂಡಿರುವ ಶಂಕರನೇ, ಯಾವಾಗಲೂ ಕೈಲಾಸಪರ್ವತದಲ್ಲಿಯೇ ನೆಲಸಿರುವ ನಿನಗೆ ನನ್ನ ವಂದನೆಗಳು. ॥೭೪॥

ಭೂಮಿಯ ಸ್ವರೂಪನಾದ ದೇವನೇ, ನಿನಗೆ ನಮಸ್ಕಾರವು. ದೇವ, ಜಲಸ್ವರೂಪನೂ, ತೇಜಸ್ಸಿನ ಆಕಾರವೂ, ವಾಯುಸ್ವರೂಪವೂ ನೀನೇ ಆಗಿರುವೆ. ಮಹೇಶ್ವರ, ನಿನಗೆ ನಮಸ್ಕಾರಮಾಡುತ್ತೇನೆ. ॥೭೫॥

ಆಕಾಶರೂಪಾಯ ನಮೋ ನಮಸ್ತೇ
ಕಾಲಸ್ವರೂಪಾಯ ನಮೋ ನಮಸ್ತೇ ।
ನಮೋ ನಮಸ್ತೇಽಸ್ತು ದಿಗಾತ್ಮನೇ ಸದಾ
ನಮೋ ನಮಸ್ತೇ ಸಕಲಾತ್ಮಮೂರ್ತಯೇ ॥೭೬॥

ನಮೋ ನಮಸ್ತೇಽಸ್ತು ಕಪರ್ದಿನೇ ಸದಾ
ನಮೋ ನಮಸ್ತೇಽಸ್ತು ಕಪಾಲಮಾಲಿನೇ ।
ನಮೋ ನಮಸ್ತೇಽಸ್ತು ನಮಸ್ತ್ವಿಷೀಮತೇ
ನಮೋ ನಮಸ್ತೇಽಸ್ತು ನಿಷಂಗಿಣೇ ನಮಃ ॥೭೭॥

ನಮೋ ನಮಸ್ತೇಽಸ್ತು ನಮೋಸ್ತು ಶಂಗವೇ
ನಮೋ ನಮಸ್ತೇಽಸ್ತು ನಮೋಸ್ತು ಬಭ್ಲುಷೇ ।
ನಮೋ ನಮಸ್ತೇ ಶಿಪಿವಿಷ್ಟ ಶಂಭೋ
ನಮೋ ನಮಸ್ತೇಽಸ್ತು ಹರಾಮರೇಶ ॥೭೮॥

ಅಂತರಿಕ್ಷರೂಪಿಯಾದ ದೇವನೇ, ನಿನಗೆ ನಮಸ್ಕಾರ. ಕಾಲಸ್ವರೂಪನಾದ ನಿನಗೆ ನಮಸ್ಕರಿಸುವೆನು. ದಿಕ್ಸ್ವರೂಪನಾದ ಮಹೇಶ್ವರನೇ, ಯಾವಾಗಲೂ ನಿನಗೆ ನನ್ನ ಅನಂತವಾದ ನಮಸ್ಕಾರಗಳು. ಸಕಲ ಚರಾಚರವಸ್ತುಗಳ ಮೂರ್ತಿಸ್ವರೂಪನಾದ ಮಹಾದೇವನೇ, ನಿನ್ನನ್ನು ಭಕ್ತಿಯಿಂದ ನಮಸ್ಕರಿಸುತ್ತೇನೆ. ॥೭೬॥

ಜಡೆಗಳನ್ನು ಧರಿಸಿರುವ ದೇವನೇ, ಯಾವಾಗಲೂ ನಿನಗೆ ಪ್ರಣಾಮ ಮಾಡುವೆನು. ಕಪಾಲಗಳ ಮಾಲೆಯನ್ನು ಧರಿಸಿರುವ ನಿನಗೆ ನಮಸ್ಕಾರಮಾಡುವೆನು. ತೇಜಸ್ವಿಯಾದ ಮಹಾದೇವನೇ, ಖಡ್ಗವನ್ನು ಕೈಯ್ಯಲ್ಲಿ ಹಿಡಿದು ಶೋಭಿಸುತ್ತಿರುವ ನಿನಗೆ ಪ್ರಣಾಮಮಾಡುವೆನು. ॥೭೭॥

ಸುಖಪ್ರದನಾದ ಸ್ವಾಮಿಯೇ, ನಿನಗೆ ನಮಸ್ಕಾರವು. ನಿನ್ನ ವಾಹನವಾದ ವೃಷಭದ ಮೇಲೆ ಸುಖವಾಗಿ ಕುಳಿತು ಅಥವಾ ಮಲಗಿ ವಿಹರಿಸುವ ಮಹೇಶ್ವರನೇ, ನಿನ್ನನ್ನು ನಮಸ್ಕರಿಸುವೆನು. ಕಿರಣಗಳ ಆಕಾರವನ್ನು ಧರಿಸಿರುವ ಶಂಭುವೇ, ನಿನಗೆ ಪ್ರಣಾಮಮಾಡುವೆನು. ಸಕಲ ಪಾಪಗಳನ್ನೂ ನಾಶಮಾಡುವ ದೇವತಾ ಸಾರ್ವಭೌಮನೇ, ನಿನಗೆ ಅನಂತವಾದ ನಮಸ್ಕಾರಗಳು. ॥೭೮॥

ನಮೋ ನಮಸ್ತೇ ಹರಿಪೂಜಿತಾಂಘ್ರೇ
ನಮೋ ನಮಸ್ತೇ ಹರಿನೇತ್ರಸಾದ ।
ನಮೋ ನಮಸ್ತೇ ಹರಿಜನ್ಮಹೇತೋ
ನಮೋ ನಮಸ್ತೇ ಹರಿನಾಶಹೇತೋ ॥೨೯॥

ನಮೋ ನಮಸ್ತೇ ವಿಧಿಜನ್ಮಹೇತೋ
ನಮೋ ನಮಸ್ತೇ ವಿಧಿನಾಶಹೇತೋ ।
ನಮೋ ನಮಸ್ತೇ ಹರಜನ್ಮಹೇತೋ
ನಮೋ ನಮಸ್ತೇ ಹರನಾಶಹೇತೋ ॥೩೦॥

ನಮೋ ನಮಸ್ತೇಽಖಿಲಲೋಕಹೇತೋ
ನಮೋ ನಮಸ್ತೇಽಖಿಲನಾಶಹೇತೋ ।
ನಮೋ ನಮೋ ನಿರ್ಮಲನಿತ್ಯರೂಪ
ನಮೋ ನಮೋ ನಿತ್ಯವಿಚಾರಶುದ್ಧ ॥೩೧॥

ಮಹಾವಿಷ್ಣುವಿನಿಂದ ಪೂಜಿಸಲ್ಪಟ್ಟ ಪಾದಗಳುಳ್ಳ ದೇವನೇ, ಆ ವಿಷ್ಣುವಿನ ಕಣ್ಣನ್ನೇ ನಿನ್ನ ಪಾದದಲ್ಲಿ ಧರಿಸಿರುವೆಯಲ್ಲವೆ? ಅಂತಹ ನಿನಗೆ ನಮಸ್ಕಾರವು. ಆ ವಿಷ್ಣುವಿನ ಉತ್ಪತ್ತಿಗೂ, ನಾಶಕ್ಕೂ ಕಾರಣನಾದ ಶಂಕರನೇ, ನಿನಗೆ ನಮಸ್ಕಾರ ಮಾಡುವೆನು. ॥೨೯॥

ಚತುರ್ಮುಖಬ್ರಹ್ಮನ ಜನನ, ಮರಣಗಳಿಗೆ ಕಾರಣಭೂತನಾಗಿರುವ ಮಹೇಶ್ವರನೇ, ನಿನಗೆ ನಮಸ್ಕಾರಮಾಡುವೆನು. ದೇವಾ, ನೀನು ಆ ಹರನ ಸೃಷ್ಟಿ ಮತ್ತು ನಾಶಕ್ಕೂ ಕಾರಣನಾಗಿರುವೆ. ಸ್ವಾಮಿಯೇ, ನಿನ್ನ ಪಾದಗಳಿಗೆ ಪ್ರಣಾಮ ಮಾಡುವೆನು. ॥೩೦॥

ಸಕಲ ಲೋಕಗಳ ಸೃಷ್ಟಿ, ಸ್ಥಿತಿಗಳಿಗೂ ಮತ್ತು ನಾಶಕಾರ್ಯಕ್ಕೂ ಕಾರಣನಾಗಿರುವ ದೇವನೇ, ನೀನು ನಿಷ್ಕಲ್ಮಷವೂ, ನಾಶರಹಿತವೂ ಆದ ರೂಪಿನಿಂದ ಕೂಡಿರುವೆ. ದೇವಾ, ನಿತ್ಯವಸ್ತುಗಳ ವಿಚಾರದಲ್ಲಿ ಶುದ್ಧಸ್ವರೂಪನಾದ ನಿನಗೆ ಅನೇಕ ನಮಸ್ಕಾರಗಳು. ॥೩೧॥

ನಮೋ ನಮೋ ನಿತ್ಯವಿಶುದ್ಧಬುದ್ಧೇ
ನಮೋ ನಮೋ ನಿರ್ಭಯಭೀಮರೂಪ ।
ನಮೋ ನಮಃ ಸರ್ಗಸುಸರ್ಜಹೇತೋ
ನಮೋ ನಮಃ ಸರ್ಗವಿನಾಶಹೇತೋ ॥೮೨॥

ನಮೋ ನಮಸ್ತೇ ಹರ ಮೃತ್ಯುಮೃತ್ಯೋ
ನಮೋ ನಮಸ್ತೇ ಶಿವ ವಿಷ್ಣುಮೃತ್ಯೋ ।
ನಮೋ ನಮಸ್ತೇ ಜಗದೇಕಮೃತ್ಯೋ
ನಮೋ ನಮಃ ಶಂಕರ ಶಂಕರೇಶ ॥೮೩॥

॥ ಸ್ಕಂದ ಉವಾಚ ॥

ಏವಮುಕ್ತ್ವಾತ್ರಿಸ್ತ್ರಿನೇತ್ರಂ ತಂ ಸ್ತೋತ್ರೈಸ್ಸ್ತುತ್ವಾ ಮಹೇಶ್ವರಂ ।
ಮುಹುರ್ಮುಹುಃ ಪ್ರಣಮ್ಯಾಗ್ರೇ ಕೃತಾಂಜಲಿಪುಟಃ ಸ್ಥಿತಃ ॥೮೪॥

ಶಾಶ್ವತವೂ, ಪರಿಶುದ್ಧವೂ ಆದ ಬುದ್ಧಿಯುಳ್ಳ ಸ್ವಾಮಿಯೇ, ನಿನಗೆ ನಮಸ್ಕಾರ. ದೇವ, ನಿನ್ನ ರೂಪವು ಭಯಂಕರವಾಗಿದ್ದರೂ ನಿನ್ನ ಭಕ್ತರಿಗೆ ಭಯಕ್ಕೆ ಅವಕಾಶವೇ ಇಲ್ಲದಂತೆ ಸೌಮ್ಯವೇ ಆಗಿರುವುದು. ಮಹೇಶ್ವರನೇ, ಸೃಷ್ಟಿ ಪ್ರತಿಸೃಷ್ಟಿಕಾರ್ಯಗಳಿಗೆ ಕಾರಣಭೂತನಾಗಿರುವ ನೀನು ಸೃಷ್ಟಿ ಮತ್ತು ನಾಶಕ್ಕೂ ಕಾರಣನಾಗಿರುವೆಯಲ್ಲವೆ? ॥೮೨॥

ಪರಮೇಶ್ವರನೇ, ಮೃತ್ಯುಸ್ವರೂಪನಾದ ಆ ಯಮನಿಗೆ ಮೃತ್ಯುಸ್ವರೂಪನಾಗಿರುವ ನಿನಗೆ ನಮಸ್ಕಾರವು. ದೇವ, ಮಂಗಳಕರನೆನಿಸಿದ ನೀನು ಆ ಮಹಾವಿಷ್ಣುವಿಗೂ ಮೃತ್ಯುಸ್ವರೂಪನಾಗಿರುವೆ. ಸಕಲ ಜಗತ್ತಿಗೂ ನೀನೊಬ್ಬನೇ ಮೃತ್ಯುಸ್ವರೂಪನು. ಲೋಕಮಂಗಳಕರವಾದ ಶಂಕರನೇ, ಸರ್ವೇಶ್ವರನೇ, ನಿನಗೆ ನಮಸ್ಕಾರವು. ॥೮೩॥

ಹೀಗೆ ಆ ಅತ್ರಿಮಹರ್ಷಿಯು ಮುಕ್ಕಣ್ಣನಾದ ಮತ್ತು ದೇವದೇವನಾದ ಮಹೇಶ್ವರನನ್ನು ಸ್ತೋತ್ರಮಾಡಿ, ಪದೇ ಪದೇ ಆ ಪರಮೇಶ್ವರನಿಗೆ ನಮಸ್ಕಾರ ಮಾಡಿದ ನಂತರ ಆ ಪರಶಿವನ ಮುಂದೆ ಕೈಜೋಡಿಸಿ ನಿಂತುಕೊಂಡನು. ॥೮೪॥

ತಮುವಾಚ ಕೃಪಾಸಿಂಧುಃ ಸ್ತುತಸ್ತೇನ ಮಹೇಶ್ವರಃ ।
ಅದೇಯಮಪ್ಯಭೀಷ್ಟಂ ತೇ ದಾಸ್ಯಾಮೀತಿ ಕೃಪಾನಿಧಿಃ ॥೪೫॥

॥ ಅತ್ರಿರುವಾಚ ॥

ಪುನೀತೋಽಸ್ಮಿ ಮಹಾದೇವ ಪ್ರಸನ್ನೋಽಸಿ ಯತೋ ಮಮ ।
ಇತೋಽಪ್ಯಭೀಷ್ಟಮನ್ಯನ್ಮೇ ಕಿಮಸ್ತಿ ಕರುಣಾನಿಧೇ ॥೪೬॥

ಯದ್ವಿಷ್ಣುನೇತ್ರಭ್ರಮರನಿಲಯಂ ಪದಪಂಕಜಂ ।
ತತ್ತೇ ದೃಷ್ಟಂ ಮಹಾದೇವ ಕಿಮಭೀಷ್ಟಮತಃ ಪರಂ ॥೪೭॥

ಯತ್ಸಿದ್ಧಹೃತ್ಪಂಕಜಗಂ ಪಾದಪಂಕಜಮುತ್ತಮಂ ।
ತತ್ತೇ ದೃಷ್ಟಂ ಮಹಾದೇವ ಕಿಮಭೀಷ್ಟಮತಃ ಪರಂ ॥೪೮॥

ಯದ್ಧ್ಯಾತಂ ಯೋಗಿವರ್ಯೈಶ್ಚ ಪಾದಪದ್ಮಮಭೀಷ್ಟದಂ ।
ತತ್ತೇ ದೃಷ್ಟಂ ಮಹಾದೇವ ಕಿಮಭೀಷ್ಟಮತಃ ಪರಂ ॥೪೯॥

ಹೀಗೆ ತನ್ನನ್ನು ಸ್ತೋತ್ರಮಾಡಿದ ಅತ್ರಿಮುನಿಯನ್ನು ಕುರಿತು, ದಯಾಸಮುದ್ರನಾದ ಮಹೇಶ್ವರನು, ಓ ಮುನಿಯೇ, ನಿನಗೆ ಬೇಕಾದ ವರಗಳನ್ನು ಕೇಳು. ಅದು ಒಂದುವೇಳೆ ಕೊಡಲು ಅಸಾಧ್ಯವೆಂದು ತೋರಿದರೂ ಅದನ್ನು ನಾನು ನಿನಗೆ ಕೊಡಲು ಸಿದ್ಧನಾಗಿರುವೆನೆಂದು ಹೇಳಿದನು. ॥೪೫॥

ಆಗ ಅತ್ರಿಮುನಿಯು, ಮಹಾದೇವ, ನೀನು ನನ್ನಲ್ಲಿ ಪ್ರಸನ್ನನಾಗಿರುವುದರಿಂದ ನಾನು ಪವಿತ್ರನಾಗಿರುವೆನು. ದಯಾನಿಧೇ! ಇದಕ್ಕಿಂತಲೂ ಹೆಚ್ಚಾದುದು ನನಗೆ ಏನುತಾನೇ ಅಭೀಷ್ಟವಿರುವುದು. ॥೪೬॥

ಮಹಾದೇವಾ, ಮಹಾವಿಷ್ಣುವಿನ ಕಣ್ಣೆಂಬ ದುಂಬಿಗೆ ಆಶ್ರಯವಾಗಿರುವ ನಿನ್ನ ಪಾದಕಮಲವನ್ನು ನಾನು ದರ್ಶನಮಾಡಿರುವುದರಿಂದ ಇದಕ್ಕಿಂತಲೂ ಶ್ರೇಷ್ಠವಾದ ಅಭೀಷ್ಟವು ಏನಿರುವುದು! ॥೪೭॥

ಮಹಾದೇವನೇ, ಸಿದ್ಧಪುರುಷರು ತಮ್ಮ ಹೃದಯವೆಂಬ ಕಮಲದಿಂದ ಹೊಂದಲು ಸಾಧ್ಯವಾಗುವ ಈ ಶ್ರೇಷ್ಠವಾದ ನಿನ್ನ ಪಾದಕಮಲವು ಈಗ ನನಗೆ ಗೋಚರವಾದುದರಿಂದ ಇದಕ್ಕಿಂತ ಹೆಚ್ಚಿನ ಅಭೀಷ್ಟವೇನೂ ನನಗಿಲ್ಲವು. ॥೪೮॥

ಮಹಾದೇವಾ, ಯೋಗಿಶ್ರೇಷ್ಠರು ಯಾವಾಗಲೂ ಧ್ಯಾನಮಾಡುವ ಸಕಲ

ವಿಷ್ಣುನೇತ್ರಾರ್ಚಿತಂ ಯತ್ತು ಪದದ್ವಂದ್ವಮನುತ್ತಮಂ ।
ತತ್ತೇ ದೃಷ್ಟಂ ಮಹಾದೇವ ಕಿಮಭೀಷ್ಟಮತಃ ಪರಂ ॥೯೦॥

ಯತ್ತು ಶ್ರುತಿಶಿರೋರತ್ನ ಚರಣದ್ವಂದ್ವಮುತ್ತಮಂ ।
ತತ್ತೇ ದೃಷ್ಟಂ ಮಹಾದೇವ ಕಿಮಭೀಷ್ಟಮತಃ ಪರಂ ॥೯೧॥

ಯನ್ಮುನಿಮಾನಸಸರೋಹಂಸಭೂತಂ ಪದಾಂಬುಜಂ ।
ತತ್ತೇ ದೃಷ್ಟಂ ಮಹಾದೇವ ಕಿಮಭೀಷ್ಟಮತಃ ಪರಂ ॥೯೨॥

ಮೋಕ್ಷಹೇತುರನಾಯಾಸಾದ್ಯತ್ಪದದ್ವಂದ್ವದರ್ಶನಂ ।
ತತ್ತೇ ದೃಷ್ಟಂ ಮಹಾದೇವ ಕಿಮಭೀಷ್ಟಮತಃ ಪರಂ ॥೯೩॥

ಇಷ್ಟಾರ್ಥಗಳನ್ನೂ ಕೊಡಬಲ್ಲ ಈ ನಿನ್ನ ಪಾದಕಮಲವನ್ನು ದರ್ಶನಮಾಡಿದ ನನಗೆ ಇದಕ್ಕಿಂತ ಶ್ರೇಷ್ಠವಾದ ಅಭೀಷ್ಟವೇನೂ ಇಲ್ಲ. ॥೮೯॥

ವಿಷ್ಣುವಿನ ಕಣ್ಣಿನಿಂದಲೇ ಪೂಜೆಮಾಡಲ್ಪಟ್ಟಿರುವ ಈ ನಿನ್ನ ಶ್ರೇಷ್ಠವಾದ ಪಾದಗಳೆರಡನ್ನೂ ಈಗ ನಾನು ಕಂಡದ್ದರಿಂದ, ಮಹಾದೇವಾ, ನನಗೆ ಇದಕ್ಕಿಂತಲೂ ಉತ್ಕೃಷ್ಟವಾದ ಅಭೀಷ್ಟವು ಬೇರೆಯಾವುದೂ ಇಲ್ಲವೆಂದೇ ತೋರುವುದು. ॥೯೦॥

ಶಂಕರಾ, ವೇದಾಂತಗಳಿಗೆ ರತ್ನಪ್ರಾಯವಾಗಿರುವ ಈ ಸರ್ವೋತ್ತಮವಾದ ಪಾದಯುಗ್ಮಗಳನ್ನು ನಾನು ಈಗ ದರ್ಶನಮಾಡಿದುದರಿಂದ ಇದಕ್ಕಿಂತಲೂ ಹೆಚ್ಚಿನ ಅಭೀಷ್ಟವನ್ನು ನಾನು ಅಪೇಕ್ಷಿಸುವುದಿಲ್ಲ. ॥೯೧॥

ಮಹಾದೇವಾ, ಮುನಿಗಳ ಮನಸ್ಸೆಂಬ ಮಾನಸಸರೋವರಕ್ಕೆ ಹಂಸದಂತಿರುವ ನಿನ್ನ ಈ ಪಾದಕಮಲವನ್ನು ನಾನು ದರ್ಶನಮಾಡಿದೆನು. ದೇವಾ! ಇದಕ್ಕಿಂತ ಅಧಿಕವಾದುದೇನು ತಾನೇ ಮನೋರಥವಿರುವುದು ? ॥೯೨॥

ಸ್ವಲ್ಪವೂ ಆಯಾಸವಿಲ್ಲದೇ ಮೋಕ್ಷವನ್ನು ಕೊಡಲು ಕಾರಣಭೂತವಾಗಿರುವ ಈ ನಿನ್ನ ಪಾದಕಮಲಗಳನ್ನು ದರ್ಶನಮಾಡಿದ ನನಗೆ ಇದಕ್ಕಿಂತ ಅಧಿಕವಾದ ಅಭಿಷ್ಟವೇನು ತಾನೇ ಇರುವುದು ? ದೇವ ! ॥೯೩॥

ಪೂರ್ಣಾ ಮನೋರಥಾಃ ಸರ್ವೇ ತತ್ಪದದ್ವಂದ್ವದರ್ಶನಾತ್ ।
ಧನ್ಯಂ ಮಮ ಕುಲಂ ಜಾತಂ ತ್ವತ್ಪಾದದ್ವಂದ್ವದರ್ಶನಾತ್ ॥೯೪॥

ಧನ್ಯಮಕ್ಷಿಯುಗಂ ಜಾತಂ ತ್ವತ್ಪದದ್ವಂದ್ವದರ್ಶನಾತ್ ।
ಕೃತಾರ್ಥೋಽಸ್ಮಿ ಕೃತಾರ್ಥೋಽಸ್ಮಿ ಕೃತಾರ್ಥೋಽಸ್ಮಿ ಮಹೇಶ್ವರ ॥೯೫॥

ಮಚ್ಚಿತ್ತಭ್ರಮರೋ ನಿತ್ಯಂ ಅಸ್ಮಿನ್ ತ್ವತ್ಪದಪಂಕಜೇ ।
ಯಥಾ ತಿಷ್ಠತಿ ದೇವೇಶ ತಥಾ ಕುರು ಮಹೇಶ್ವರ ॥೯೬॥

ಅಸ್ಯ ದೇಹಸ್ಯಾವಸಾನೇ ಮೋಕ್ಷಪಾತ್ರಂ ಕುರುಷ್ವ ಮಾಂ ।
ನ ತ್ವದನ್ಯೋ ಮೋಕ್ಷಹೇತುರಿತಿ ವೇದಾ ವದಂತ್ಯತಃ ॥೯೭॥

॥ ಸ್ಕಂದ ಉವಾಚ ॥

ಇತ್ಯತ್ರಿವಚನಂ ಶ್ರುತ್ವಾ ಶಂಕರಃ ಕರುಣಾನಿಧಿಃ ।
ಪುತ್ರಂ ಸರ್ವಸುರಾರಾಧ್ಯಂ ಲಭಸ್ವೇತಿ ವರಂ ದದೌ ॥೯೮॥

ನಿನ್ನ ದಿವ್ಯಪಾದಗಳೆರಡನ್ನೂ ದರ್ಶನಮಾಡಿದುದರಿಂದ ನನ್ನ ಮನೋರಥಗಳೆಲ್ಲವೂ ಪೂರ್ಣವಾದವು. ನನ್ನ ವಂಶವೂ ಈ ನಿನ್ನ ಪಾದಯುಗ್ಮಗಳ ಸಂದರ್ಶನದಿಂದ ಪಾವನವಾಗಿ ಧನ್ಯವೆನಿಸಿತು. ॥೯೪॥

ಈ ನಿನ್ನ ಎರಡು ಪಾದಗಳ ದರ್ಶನದಿಂದ ನನ್ನ ಎರಡು ಕಣ್ಣುಗಳೂ ಧನ್ಯವಾದವು. ಮಹೇಶ್ವರ, ನಿನ್ನ ಅನುಗ್ರಹದಿಂದ ನಾನು ಈಗ ನಿಶ್ಚಯವಾಗಿಯೂ ಕೃತಕೃತ್ಯನಾಗಿರುವೆನು. ॥೯೫॥

ದೇವೋತ್ತಮನಾದ ಮಹೇಶ್ವರನೇ! ಈ ನನ್ನ ಮನಸ್ಸೆಂಬ ದುಂಬಿಯು, ನಿತ್ಯವೂ ನಿನ್ನ ಅಡಿದಾವರೆಗಳಲ್ಲಿ ಶಾಶ್ವತವಾಗಿ ನೆಲಸುವಂತೆ ನನ್ನನ್ನು ಅನುಗ್ರಹಿಸು, ದೇವ! ॥೯೬॥

ಈ ಶರೀರವು ನಾಶವಾದನಂತರ ನನಗೆ ಮೋಕ್ಷವನ್ನು ಕರುಣಿಸು. ಪ್ರಭೋ! ದೇವ! ನೀನಲ್ಲದೇ ಬೇರೆಯವರು ಎಂದಿಗೂ ಮೋಕ್ಷಕ್ಕೆ ಕಾರಣರಲ್ಲವೆಂದು ಹೇಳುತ್ತಿರುವುವು" ಎಂದು ಅತ್ರಿಮುನಿಯು ಶಂಕರನನ್ನು ಪ್ರಾರ್ಥಿಸಿದನು. ॥೯೭॥

ಹೀಗೆ ನುಡಿದ ಅತ್ರಿಮುನಿಯ ಮಾತುಗಳನ್ನು ಕೇಳಿ ದಯಾನಿಧಿಯಾದ ಶಂಕರನು, ಅಯ್ಯ ಮಹರ್ಷಿಯೇ! ನಿನಗೆ ಸಕಲ ದೇವತೆಗಳಿಗೂ ಪೂಜ್ಯನಾಗುವ ಮಗನು ಹುಟ್ಟಲಿ, ಎಂದು ವರವನ್ನು ಕೊಟ್ಟನು. ॥೯೮॥

ಧರ್ಮಮರ್ಥಂ ಚ ಕಾಮಂ ಚ ಲಭಸ್ವ ಮುನಿಸತ್ತಮ ।
ಮೋಕ್ಷೋಽಪ್ಯಂತೇ ಮಯೈವಾಗ್ರೇ ದೇಯಸ್ತುಭ್ಯಂ ನ ಸಂಶಯಃ ॥೯೯॥

ಯನ್ಮದಾಶ್ರಿತಚಿತ್ತಾನಾಂ ಮದರ್ಪಿತಸುಕರ್ಮಣಾಂ ।
ಮೋಕ್ಷದೋಽಹಂ ಮದನ್ಯಸ್ತು ಮೋಕ್ಷದೋ ನಾಸ್ತಿ ಸರ್ವಥಾ ॥೧೦೦॥

॥ ಸ್ಕಂದ ಉವಾಚ ॥

ಇತ್ಯುಕ್ತ್ವಾಂತರ್ದಧೇ ಶಂಭುರ್ವೇದವೇದಾಂತ ಸಂಸ್ತುತಃ ।
ಬ್ರಹ್ಮವಿಷ್ಣ್ವಾದಿವಂದ್ಯಾಂಘ್ರಿರಂಬಿಕಾಸಹಿತಃ ಪ್ರಭುಃ ॥೧೦೧॥

ತತಃ ಪುತ್ರೋ ಬಭೂವಾತ್ರೇರತ್ರಿನೇತ್ರಸಮುದ್ಭವಃ ।
ಸರ್ವಾನಂದಕರೋ ನಿತ್ಯಂ ಶೀತಾಂಶುಃ ಶುಭಲಕ್ಷಣಃ ॥೧೦೨॥

ಓ, ಮುನಿಶ್ರೇಷ್ಠನೇ! ಧರ್ಮವನ್ನೂ ಅರ್ಥವನ್ನೂ (ದ್ರವ್ಯವನ್ನೂ) ಮತ್ತು ಕಾಮವನ್ನೂ ಈಗ ನೀನು ಹೊಂದುವನಾಗು. ಚತುರ್ವಿಧ ಪುರುಷಾರ್ಥಗಳಲ್ಲಿ ಕೊನೆಯದಾದ ಮೋಕ್ಷವನ್ನೂ ನಿನಗೆ ಖಂಡಿತವಾಗಿಯೂ ಕೊನೆಯಲ್ಲಿ ಕರುಣಿಸುತ್ತೇನೆ. ॥೯೯॥

ನನ್ನನ್ನೇ ಆಶ್ರಯಿಸಿರುವ ಮನಸ್ಸುಳ್ಳವರಾಗಿ, ಎಲ್ಲಾ ಶ್ರೇಷ್ಠ ಕರ್ಮಗಳನ್ನೂ ನನಗೇ ಸಮರ್ಪಿಸಿರುವ ನನ್ನ ಭಕ್ತರಿಗೆ ನಾನು ಮೋಕ್ಷವನ್ನು ಕೊಡಲು ಸಿದ್ಧನಾಗಿರುವೆನು. ನನ್ನ ಹೊರತು ಬೇರೆಯವರಿಗೆ ಈ ಮೋಕ್ಷವನ್ನು ಕೊಡುವ ಅಧಿಕಾರವಿಲ್ಲವು. ಎಂದು ಪರಶಿವನು ಆ ಅತ್ರಿಮುನಿಗೆ ನುಡಿದನು. ॥೧೦೦॥

ವೇದ, ಮತ್ತು ವೇದಾಂತ ಇವುಗಳಿಂದ ಯಾವಾಗಲೂ ಸ್ತೋತ್ರಮಾಡಲ್ಪಡುವವನೂ, ಬ್ರಹ್ಮ, ವಿಷ್ಣು ಮುಂತಾದ ದೇವತೆಗಳಿಂದ ನಮಸ್ಕರಿಸಲ್ಪಟ್ಟ ಪಾದವುಳ್ಳವನೂ, ಅಂಬಿಕಾರಮಣನೂ, ಸರ್ವಸಮರ್ಥನೂ, ಆದ ಶಂಭುವು ಹೀಗೆ ಆ ಅತ್ರಿಮುನಿಗೆ ಹೇಳಿ ತಾನು ಮರೆಯಾದನು. ॥೧೦೧॥

ಅನಂತರ ಆ ಅತ್ರಿಮಹರ್ಷಿಗೆ ತನ್ನ ನೇತ್ರಾಂಶದಿಂದ ಒಬ್ಬ ಮಗನು ಹುಟ್ಟಿದನು. ಆ ಪುತ್ರನು, ಎಲ್ಲರಿಗೂ ಆನಂದವನ್ನುಂಟುಮಾಡುತ್ತಾ ಶುಭ ಲಕ್ಷಣಗಳಿಂದ ಕೂಡಿದವನಾಗಿ, ಚಂದ್ರನಂತೆ ನಿತ್ಯವೂ ಸಂತೋಷಪ್ರದನಾಗಿದ್ದನು. ॥೧೦೨॥

ಕಲಾಃ ಷೋಡಶ ತಸ್ಯಾಸನ್ನತ್ರಿಪುತ್ರಸ್ಯ ಧೀಮತಃ ।
ಅಷ್ಟಾಶೀತಿಸಹಸ್ರಾಣಿ ವಿಸ್ತೀರ್ಣಂ ಯೋಜನಾನಿ ತು ॥೧೦೩॥

ತದಾ ಮಹಾನುತ್ಸವೋಽಭೂತ್ಸರ್ವೇಷಾಂ ನಂದಿಕೇಶ್ವರಃ ।
ತಂ ದೃಷ್ಟ್ವಾ ಮುನಯಃ ಸರ್ವೇ ತುಷ್ಟುವುರ್ಮುದಿತಾನನಾಃ ॥೧೦೪॥

ತತೋಽತ್ರಿಂ ತುಷ್ಟುವುಃ ಪ್ರೀತ್ಯಾ ಮುನಯಃ ಶಂಕರಾರ್ಚಕಾಃ ।
ಶಂಭುರಾರಾಧಿತಃ ಸಮ್ಯಕ್ತ್ವಯಾತ್ರೈತ್ರೇ ಮುನೀಶ್ವರ ॥೧೦೫॥

ಶಿವಪ್ರಸಾದಲಬ್ಧೋಽಯಂ ಪುತ್ರಸ್ತವ ಸುರೇಷ್ಟದಃ ।
ವಿನಾ ಶಿವಪ್ರಸಾದೇನ ಪುತ್ರಃ ಕುತ್ರೇದೃಶಃ ಪ್ರಭೋ ॥೧೦೬॥

ಐಹಿಕಾಮುಷ್ಮಿಕಾನರ್ಥಾನ್ ಶಂಕರೋ ಭಕ್ತವತ್ಸಲಃ ।
ದದಾತ್ಯೇವ ಸ್ವಭಕ್ತೇಭ್ಯಃ ಸ್ವತಂತ್ರಃ ಸುರಸತ್ತಮಃ ॥೧೦೭॥

ಆ ಅತ್ರಿಕುಮಾರನು ಬಹಳ ಬುದ್ಧಿವಂತನಾಗಿ, ಹದಿನಾರು ಕಲೆಗಳಿಂದಲೂ ಪರಿಪೂರ್ಣನಾಗಿ ಶೋಭಿಸುತ್ತಿದ್ದನು. ಆಗ ಎಂಭತ್ತೆಂಟು ಸಾವಿರ ಯೋಜನದ ವಿಸ್ತಾರವುಳ್ಳ ಪ್ರದೇಶದಲ್ಲಿ; ॥೧೦೩॥

ದೊಡ್ಡದಾಗಿ ಎಲ್ಲರಿಗೂ ಆನಂದವುಂಟಾಗುವಂತೆ ಉತ್ಸವಗಳು ನಡೆದವು. ಅಯ್ಯ ನಂದಿಕೇಶ್ವರ, ಈ ರೀತಿಯಾದ ಉತ್ಸವವನ್ನು ನೋಡಿ, ಮುನಿಗಳೆಲ್ಲರೂ ಸಂತೋಷದಿಂದ ಹಸನ್ಮುಖಿಗಳಾಗಿ ಸ್ತೋತ್ರಮಾಡಿದರು. ॥೧೦೪॥

ಆಗ ಶಿವಪೂಜಾನಿರತರಾದ ಮುನಿಗಳೆಲ್ಲರೂ, ಪ್ರೀತಿಯಿಂದ ಆ ಅತ್ರಿಮುನಿಯನ್ನು ಹೀಗೆ ಸ್ತೋತ್ರಮಾಡಿದರು. "ಅಯ್ಯ ಮುನಿಶ್ರೇಷ್ಠನಾದ ಅತ್ರಿಯೇ, ನೀನು ಈ ಕ್ಷೇತ್ರದಲ್ಲಿ ಪರಶಿವನನ್ನು ಚೆನ್ನಾಗಿ ಪೂಜಿಸಿರುವೆ. ಆ ಶಿವನ ಅನುಗ್ರಹದಿಂದಲೇ ಜನಿಸಿರುವ ಈ ನಿನ್ನ ಮಗನು, ದೇವತೆಗಳ ಇಷ್ಟಾರ್ಥಗಳನ್ನೆಲ್ಲಾ ತಪ್ಪದೇ ನಡೆಸುತ್ತಾನೆ. ಪ್ರಭುವೇ! ಆ ಪರಶಿವನ ಅನುಗ್ರಹವಿಲ್ಲದೇ ಇಂತಹ ಕುಮಾರನು ಎಲ್ಲಿ ತಾನೆ ಹುಟ್ಟುವನು ? ॥೧೦೫-೧೦೬॥

ತನ್ನ ಭಕ್ತರಲ್ಲಿ ಪ್ರೀತಿಯುಳ್ಳ ಸ್ವತಂತ್ರನೂ, ದೇವಶ್ರೇಷ್ಠನೂ ಎನಿಸಿದ ಆ ಶಂಕರನು, ತನ್ನ ಭಕ್ತರಿಗೆ, ಐಹಿಕ (ಈ ಜನ್ಮದಲ್ಲಿ ಉಂಟಾಗುವ) ಮತ್ತು

ಶಿವಾನ್ಯದೇವಾಸ್ತ್ವತ್ಯಲ್ಪನ್ಯೈಹಿಕಾಮರ್ಥಕಾಮದಾಃ ।
ಅತಿಪ್ರೀತಾಃ ಪ್ರಯಚ್ಛಂತಿ ಸ್ವಸ್ವಶಕ್ತ್ಯನುರೋಧತಃ ॥೧೦೮॥

ತೇಽಪಿ ದೇವಾಃ ಪ್ರಯಚ್ಛಂತಿ ಪ್ರಸಾದಾಚ್ಛಂಕರಾನ್ಮುನೇ ।
ಅಸ್ವತಂತ್ರಾ ಯತಸ್ತೇಽಪಿ ಸ್ವಾತಂತ್ರ್ಯಾತ್ಫಲದಾಸ್ತು ನ ॥೧೦೯॥

ದೇವತಾಸಾರ್ವಭೌಮಸ್ತು ಶಂಕರಃ ಸರ್ವಕಾಮದಃ ।
ಧರ್ಮಾರ್ಥಕಾಮಮೋಕ್ಷಾಣಾಂ ದಾತಾ ಸಾಂಬಃ ಶಿವಃ ಸ್ವಯಂ ॥೧೧೦॥

ಸರ್ವದೇವೇಷ್ಟದಃ ಪುತ್ರೋ ಧೀಮಾನಮಿತವಿಕ್ರಮಃ ।
ಶಿವಾನ್ಯದೇವತಾಭಕ್ತ್ಯಾ ಪ್ರಾಪ್ಯಂ ಕಿಂ ದುರ್ಲಭಂ ಧ್ರುವಂ ॥೧೧೧॥

ಆಮುಷ್ಮಿಕ (ಮುಂದೆ ಪರಲೋಕದಲ್ಲಿ ದೊರೆಯಬಹುದಾದ) ಪ್ರಯೋಜನಗಳನ್ನೆಲ್ಲಾ ದೊರಕಿಸಿಕೊಡುತ್ತಾನೆ. ॥೧೦೭॥

ಶಿವನಿಗಿಂತ ಬೇರೆಯಾದ ದೇವತೆಗಳು ಕೇವಲ ಅತ್ಯಲ್ಪವಾದ ಐಹಿಕ ಪ್ರಯೋಜನಗಳನ್ನು ಮಾತ್ರ ಉಂಟುಮಾಡಿಕೊಡುತ್ತಾರೆ. ಅವರೆಲ್ಲರೂ, ಒಂದೊಂದು ವೇಳೆ ತುಂಬಾ ಸಂತುಷ್ಟರಾದರೆ ಮಾತ್ರ ಆಗ ತಮ್ಮ ಶಕ್ತ್ಯನುಸಾರವಾಗಿ ಈ ಫಲವನ್ನು ಕೊಡಬಲ್ಲರು. ॥೧೦೮॥

ದೇವತೆಗಳೆಲ್ಲರೂ ಆ ಶಂಕರನ ಅನುಗ್ರಹಬಲದಿಂದಲೇ ವರಗಳನ್ನು ಕೊಡಲು ಅವರು ಅಸ್ವತಂತ್ರರಾಗಿರುವರು. (ಅಂದರೆ ಅವರೆಲ್ಲರೂ ಪರಾಧೀನರಾಗಿರುವರೆಂದು ಭಾವವು.) ॥೧೦೯॥

ಸಕಲ ಇಷ್ಟಾರ್ಥಗಳನ್ನೂ ಕೊಡಬಲ್ಲ ಸ್ವಾಮಿಯು ದೇವತಾಸಾರ್ವಭೌಮನೆನಿಸಿದ ಆ ಶಂಕರನೇ ಆಗಿರುವನು. ಅಂಬಿಕಾಸಹಿತನಾದ ಆ ಶಿವನೊಬ್ಬನೇ ಸ್ವತಂತ್ರನಾಗಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನೂ ಕೊಡಬಲ್ಲನು. ॥೧೧೦॥

ಅಪರಿಮಿತವಾದ ಪರಾಕ್ರಮದಿಂದ ಕೂಡಿ, ಸಕಲದೇವತೆಗಳ ಇಷ್ಟಾರ್ಥಗಳನ್ನೂ ಸಲ್ಲಿಸಬಲ್ಲ ನಿನ್ನ ಮಗನು, ಬಹಳ ಮೇಧಾವಿಯು. ಆ ಶಿವನಲ್ಲಲ್ಲದೆ ಬೇರೆ ದೇವತೆಗಳಲ್ಲಿ ಭಕ್ತಿಯುಳ್ಳವರಿಗೆ ಏನುತಾನೇ ಫಲವು ದೊರಕೀತು? ನಿಶ್ಚಯವಾಗಿಯೂ ಎಲ್ಲವೂ ದುರ್ಲಭವೇ ಆಗಿರುವುದು. ॥೧೧೧॥

ಶಂಕರೋ ವಿಷ್ಣುತಪಸಾ ಸಂತುಷ್ಟೋ ವಿಷ್ಣವೇ ಮುದಾ ।
ದದೌ ವೈಕುಂಠಮತುಲಮತೋ ದೇವೋತ್ತಮಃ ಶಿವಃ ॥೧೧೨॥

ಬ್ರಹ್ಮಣೇ ಬ್ರಹ್ಮತಪಸಾ ಸಂತುಷ್ಟಃ ಶಂಕರೋ ಮುದಾ ।
ಬ್ರಹ್ಮಲೋಕಂ ದದೌ ಪೂರ್ವಮತೋ ದೇವೋತ್ತಮಃ ಶಿವಃ ॥೧೧೩॥

ಇಂದ್ರಾಯೇಂದ್ರಸ್ಯ ತಪಸಾ ಸಂತುಷ್ಟಃ ಶಂಕರೋ ಮುದಾ ।
ಸ್ವರ್ಗಲೋಕಂ ದದೌ ಪೂರ್ವಮತೋ ದೇವೋತ್ತಮಃ ಶಿವಃ ॥೧೧೪॥

ಪುರಾಽಗ್ನಿತಪಸಾ ಪ್ರೀತಃ ಶಂಕರಸ್ತ್ವಗ್ನಯೇ ಮುದಾ ।
ಅಗ್ನಿಲೋಕಂ ದದೌ ಪೂರ್ವಮತೋ ದೇವೋತ್ತಮಃ ಶಿವಃ ॥೧೧೫॥

ಅನ್ಯೇಭ್ಯೋಽಪಿ ಚ ದೇವೇಭ್ಯಃ ಪ್ರೀತಸ್ತತ್ತಪಸಾ ಶಿವಃ ।
ಲೋಕಾನಿಷ್ಟಾನ್ದದೌ ಪೂರ್ವಮತೋ ದೇವೋತ್ತಮಃ ಶಿವಃ ॥೧೧೬॥

ಮಹಾವಿಷ್ಣುವು ತನ್ನನ್ನು ಕುರಿತು ತಪಸ್ಸುಮಾಡಿದುದರಿಂದ ಸಂತುಷ್ಟನಾದ ಶಂಕರನು ಪ್ರೀತಿಯಿಂದ ಆ ವಿಷ್ಣುವಿಗೆ ಪರಿಶುದ್ಧವಾದ ವೈಕುಂಠಲೋಕವನ್ನು ಅನುಗ್ರಹಿಸಿ ಕೊಟ್ಟನು. ಆದುದರಿಂದಲೇ ಆ ಶಿವನು ದೇವೋತ್ತಮನೆನಿಸಿದನು. ||೧೧೨||

ಆ ಬ್ರಹ್ಮನ ತಪಸ್ಸಿನಿಂದ ಲೋಕಶಂಕರನು ಸಂತೋಷಗೊಂಡು, ಪ್ರೀತಿಯಿಂದ ಹಿಂದೆ ಅವನಿಗೆ ಬ್ರಹ್ಮಲೋಕವನ್ನು ಕರುಣಿಸಿದನು. ಆದುದರಿಂದಲೇ ಆ ಶಿವನು ದೇವೋತ್ತಮನೆನಿಸಿದನು. ||೧೧೩||

ಹಿಂದೆ, ಇಂದ್ರನೂ ಹೀಗೆಯೇ ತಪಸ್ಸುಮಾಡಿದುದರಿಂದ, ಆ ಶಂಕರನು, ಪ್ರೀತಿಯಿಂದ ಅವನಿಗೆ ಸ್ವರ್ಗಲೋಕವನ್ನು ಕೊಟ್ಟು, ದೇವೋತ್ತಮನೆನಿಸಿದನು. ||೧೧೪||

ಹಿಂದೆ ಅಗ್ನಿದೇವನು ತಪಸ್ಸುಮಾಡಿದುದರಿಂದ ಸಂತುಷ್ಟನಾದ ಶಂಕರನು ಅಗ್ನಿಪುರುಷನಿಗೆ ಸಂತೋಷದಿಂದ ಅಗ್ನಿಲೋಕವನ್ನು ಕೊಟ್ಟು ತಾನು ದೇವೋತ್ತಮನೆನಿಸಿದನು. ||೧೧೫||

ಹೀಗೆಯೇ ಬೇರೆಬೇರೆ ದೇವತೆಗಳಿಗೆ ಅವರವರು ಮಾಡಿದ ತಪಸ್ಸುಗಳಿಂದ ಸಂತುಷ್ಟನಾಗಿ, ಪರಶಿವನು ಹಿಂದೆ ಅವರಿಗೆ ಬೇಕಾದ ಲೋಕಗಳನ್ನು ಕೊಟ್ಟು, ತಾನು ದೇವೋತ್ತಮನೆನಿಸಿ ಪ್ರಖ್ಯಾತನಾದನು. ||೧೧೬||

ದೇವಾಃ ಸರ್ವೇ ಮಹಾದೇವಂ ಸ್ತುವಂತಿ ವಿವಿಧಾ ಮುದಾ ।
ತದನ್ಯಂ ನ ಸ್ತುವಂತ್ಯೇವ ಅತೋ ದೇವೋತ್ತಮಃ ಶಿವಃ ॥೧೧೭॥

ಮೋಕ್ಷಪ್ರದಾತಾ ಸರ್ವೇಭ್ಯಃ ಸ್ವಭಕ್ತೇಭ್ಯೋ ಮಹೇಶ್ವರಃ ।
ಮೋಕ್ಷಃ ಪ್ರಾಪ್ತೋ ಮಹಾಶೈವೈರತೋ ದೇವೋತ್ತಮಃ ಶಿವಃ ॥೧೧೮॥

ಯಥಾ ಶ್ರೇಷ್ಠೋ ಮನುಷ್ಯೇಷು ಬ್ರಾಹ್ಮಣೋ ಬ್ರಹ್ಮವಿತ್ತಮಃ ।
ತಥಾ ದೇವೇಷು ಸರ್ವೇಷು ಶ್ರೇಷ್ಠಃ ಸಾಂಬಃ ಶಿವಃ ಪ್ರಭುಃ ॥೧೧೯॥

ವಿದ್ಯಾಮಧ್ಯೇ ಯಥಾ ಶ್ರೇಷ್ಠಾ ವೇದವಿದ್ಯಾ ಪ್ರಕೀರ್ತಿತಾ ।
ತಥಾ ದೇವೇಷು ಸರ್ವೇಷು ಶ್ರೇಷ್ಠಃ ಸಾಂಬಃ ಶಿವಃ ಪ್ರಭುಃ ॥೧೨೦॥

ಗೌರುತ್ತಮಾ ಕಾಮದೋಗ್ಧ್ರೀ ಯಥಾ ಸರ್ವಚತುಷ್ಪದಾಂ ।
ತಥಾ ದೇವೇಷು ಸರ್ವೇಷು ಶ್ರೇಷ್ಠಃ ಸಾಂಬಃ ಶಿವಃ ಪ್ರಭುಃ ॥೧೨೧॥

ಅನೇಕ ದೇವತೆಗಳೆಲ್ಲರೂ ಬೇರೆ ಬೇರೆಯ ರೀತಿಯಿಂದ ಆ ಮಹಾದೇವನನ್ನು ಪ್ರೀತಿಯಿಂದ ಸ್ತೋತ್ರಮಾಡುತ್ತಾರೆ. ಅವರು, ಬೇರೆ ದೇವತೆಗಳನ್ನು ಸ್ತೋತ್ರಮಾಡುವುದಿಲ್ಲವಾದ್ದರಿಂದ ಆ ಶಿವನೇ ದೇವೋತ್ತಮನೆನಿಸಿದನು. ॥೧೧೭॥

ತನ್ನ ಭಕ್ತರಿಗೆಲ್ಲಾ ಮಹೇಶ್ವರನು, ಮೋಕ್ಷವನ್ನು ಕೊಡುವನು. ಆ ಶಿವನನ್ನು ಪೂಜಿಸಿದ ಮಹಾಶೈವರೆಲ್ಲರೂ, ತಪ್ಪದೇ ಮೋಕ್ಷವನ್ನು ಪಡೆದರು. ಆದುದರಿಂದ ಶಿವನು ದೇವೋತ್ತಮನೆನಿಸಿದನು. ॥೧೧೮॥

ಮನುಷ್ಯರಲ್ಲೆಲ್ಲಾ ಬ್ರಹ್ಮಜ್ಞಾನಿಯಾದ ಬ್ರಾಹ್ಮಣನು ಶ್ರೇಷ್ಠನೆನಿಸಿರುವಂತೆ, ದೇವತೆಗಳಲ್ಲೆಲ್ಲಾ ಅಂಬಿಕಾಸಮೇತನಾದ ಸರ್ವಸಮರ್ಥನೆನಿಸಿದ ಶಿವನೇ ಸರ್ವಶ್ರೇಷ್ಠನೆನಿಸಿರುವನು. ॥೧೧೯॥

ವಿದ್ಯೆಗಳಲ್ಲೆಲ್ಲಾ ವೇದವಿದ್ಯೆಯೇ ಶ್ರೇಷ್ಠವೆನಿಸಿರುವ ಹಾಗೆ, ದೇವತೆಗಳಲ್ಲೆಲ್ಲಾ ಅಂಬಾಸಮೇತನಾದ ಆ ಶಂಕರ ಪ್ರಭುವೇ ಸರ್ವಶ್ರೇಷ್ಠನೆನಿಸಿರುವನು. ॥೧೨೦॥

ನಾಲ್ಕು ಕಾಲುಳ್ಳ ಪ್ರಾಣಿಗಳಲ್ಲೆಲ್ಲಾ ಶ್ರೇಷ್ಠವಾದ ಕಾಮಧೇನುವಿನಂತೆ, ದೇವತೆಗಳಲ್ಲೆಲ್ಲಾ ಪ್ರಭುವಾದ ಆ ಸಾಂಬಸದಾಶಿವನೊಬ್ಬನೇ ಸರ್ವಶ್ರೇಷ್ಠನೆನಿಸಿರುವನು. ॥೧೨೧॥

ಲೋಹಮಧ್ಯೇ ಯಥಾಶ್ರೇಷ್ಠಂ ಕಾಂಚನಂ ಸರ್ವಸಿದ್ಧಿಮತ್ ।
ತಥಾ ದೇವೇಷು ಸರ್ವೇಷು ಶ್ರೇಷ್ಠಃ ಸಾಂಬಃ ಶಿವಃ ಪ್ರಭುಃ ॥೧೨॥

ಐರಾವತೋ ಯಥಾ ಶ್ರೇಷ್ಠೋ ಗಜೇಷ್ವಮಿತವಿಕ್ರಮಃ ।
ತಥಾ ದೇವೇಷು ಸರ್ವೇಷು ಶ್ರೇಷ್ಠಃ ಸಾಂಬಃ ಶಿವಃ ಪ್ರಭುಃ ॥೧೩॥

ಹಯೇಷೂಚ್ಚೈಃಶ್ರವಾಃ ಶ್ರೇಷ್ಠೋ ಯಥಾಽಮಿತಪರಾಕ್ರಮಃ ।
ತಥಾ ದೇವೇಷು ಸರ್ವೇಷು ಶ್ರೇಷ್ಠಃ ಸಾಂಬಃ ಶಿವಃ ಪ್ರಭುಃ ॥೧೪॥

ಯಥಾ ಸರ್ವಮೃಗಶ್ರೇಷ್ಠಃ ಸಿಂಹೋಽಲಂಘ್ಯಪರಾಕ್ರಮಃ ।
ತಥಾ ದೇವೇಷು ಸರ್ವೇಷು ಶ್ರೇಷ್ಠಃ ಸಾಂಬಃ ಶಿವಃ ಪ್ರಭುಃ ॥೧೫॥

ಕೈಲಾಸಃ ಸರ್ವಲೋಕೇಷು ಯಥಾ ಶ್ರೇಷ್ಠೋ ನಗೋತ್ತಮಃ ।
ತಥಾ ದೇವೇಷು ಸರ್ವೇಷು ಶ್ರೇಷ್ಠಃ ಸಾಂಬಃ ಶಿವಃ ಪ್ರಭುಃ ॥೧೬॥

ಲೋಹಗಳಲ್ಲೆಲ್ಲಾ ಚಿನ್ನವೊಂದೇ ಶ್ರೇಷ್ಠವೆನಿಸಿ, ಸಕಲ ಸಿದ್ಧಿಗಳನ್ನೂ ಕೊಡುವಂತೆ ದೇವತೆಗಳಲ್ಲೆಲ್ಲಾ ಆ ಸಾಂಬಸದಾಶಿವನೊಬ್ಬನೇ ಸರ್ವೋತ್ತಮವೆನಿಸಿ, ಎಲ್ಲರ ಮನೋರಥಗಳನ್ನೂ ಪೂರ್ಣಗೊಳಿಸುವನು. ॥೧೨॥

ಆನೆಗಳಲ್ಲೆಲ್ಲಾ ಅತಿಶಯವಾದ ಪರಾಕ್ರಮದಿಂದ ಶೋಭಿಸುವ ಆ ಐರಾವತವೇ ಶ್ರೇಷ್ಠವೆನಿಸಿರುವಂತೆ, ದೇವತೆಗಳಲ್ಲೆಲ್ಲಾ ಸರ್ವಸಮರ್ಥನಾದ ಆ ಸಾಂಬಸದಾಶಿವನೊಬ್ಬನೇ ಶ್ರೇಷ್ಠನಾಗಿರುವನು. ॥೧೩॥

ಕುದುರೆಗಳಲ್ಲೆಲ್ಲಾ ತುಂಬಾ ಪರಾಕ್ರಮವುಳ್ಳ ಉಚ್ಚೈಶ್ಶ್ರವಸ್ಸೆಂಬ ಕುದುರೆಯೇ ಶ್ರೇಷ್ಠವಾಗಿರುವಂತೆ ದೇವತೆಗಳಲ್ಲೆಲ್ಲಾ ಪ್ರಭುವಾದ ಆ ಸಾಂಬಸದಾಶಿವನೊಬ್ಬನೇ ಶ್ರೇಷ್ಠನೆನಿಸಿರುವನು. ॥೧೪॥

ಪ್ರಾಣಿಗಳಲ್ಲೆಲ್ಲಾ ಅಪರಿಮಿತ ಪರಾಕ್ರಮವುಳ್ಳ ಸಿಂಹವೇ ಶ್ರೇಷ್ಠವೆನಿಸಿರುವಂತೆ, ದೇವತೆಗಳಲ್ಲೆಲ್ಲಾ ಪ್ರಭುವಾದ ಆ ಸಾಂಬಸದಾಶಿವನೇ ಶ್ರೇಷ್ಠನಾಗಿರುವನು. ॥೧೫॥

ಲೋಕಗಳಲ್ಲೆಲ್ಲಾ ಕೈಲಾಸವೇ ಪರ್ವತರಾಜನೆನಿಸಿ ಶ್ರೇಷ್ಠವಾಗಿರುವಂತೆ, ದೇವತೆಗಳಲ್ಲೆಲ್ಲಾ ಪ್ರಭುವಾದ ಆ ಸಾಂಬಸದಾಶಿವನೇ ಶ್ರೇಷ್ಠನೆನಿಸಿರುವನು. ॥೧೬॥

ನಾನಾವಿಧವಾಗಿರುವ ರತ್ನಗಳಲ್ಲೆಲ್ಲಾ ಪುಷ್ಪರಾಗಮಣಿಯೊಂದೇ ಶ್ರೇಷ್ಠ

ಪುಷ್ಪರಾಗೋ ಯಥಾ ಶ್ರೇಷ್ಠೋ ರತ್ನೇಷು ವಿವಿಧೇಷ್ವಪಿ ।
ತಥಾ ದೇವೇಷು ಸರ್ವೇಷು ಶ್ರೇಷ್ಠಃ ಸಾಂಬಃ ಶಿವಃ ಪ್ರಭುಃ ॥೧೨೭॥

ಸಮುದ್ರೇಷು ಯಥಾ ಶ್ರೇಷ್ಠಃ ಕ್ಷೀರಾಬ್ಧಿರಮಿತಪ್ರಭಃ ।
ತಥಾ ದೇವೇಷು ಸರ್ವೇಷು ಶ್ರೇಷ್ಠಃ ಸಾಂಬಃ ಶಿವಃ ಪ್ರಭುಃ ॥೧೨೮॥

ಸಿದ್ಧಾನಾಂ ಕಪಿಲಃ ಶ್ರೇಷ್ಠೋ ಯಥಾ ಸಿದ್ಧಾಶ್ರಯಃ ಸದಾ ।
ತಥಾ ದೇವೇಷು ಸರ್ವೇಷು ಶ್ರೇಷ್ಠಃ ಸಾಂಬಃ ಶಿವಃ ಪ್ರಭುಃ ॥೧೨೯॥

ಯಥಾ ಚಿತ್ರರಥಃ ಶ್ರೇಷ್ಠೋ ಗಂಧರ್ವೇಷು ಬಲೋನ್ನತಃ ।
ತಥಾ ದೇವೇಷು ಸರ್ವೇಷು ಶ್ರೇಷ್ಠಃ ಸಾಂಬಃ ಶಿವಃ ಪ್ರಭುಃ ॥೧೩೦॥

ಯಥಾಽಗಸ್ತ್ಯೋ ಮುನಿಶ್ರೇಷ್ಠಃ ಸರ್ವದಾ ಶಿವಚಿಂತಕಃ ।
ತಥಾ ದೇವೇಷು ಸರ್ವೇಷು ಶ್ರೇಷ್ಠಃ ಸಾಂಬಃ ಶಿವಃ ಪ್ರಭುಃ ॥೧೩೧॥

ವಾಗಿರುವಂತೆ, ದೇವತೆಗಳಲ್ಲೆಲ್ಲಾ ಪ್ರಭುವಾದ ಆ ಸಾಂಬಸದಾಶಿವನೇ ಶ್ರೇಷ್ಠನಾಗಿರುವನು. ॥೧೨೭॥

ಸಮುದ್ರಗಳಲ್ಲೆಲ್ಲಾ ಅಪಾರವಾದ ಕಾಂತಿಯಿಂದ ಶೋಭಿಸುತ್ತಿರುವ ಕ್ಷೀರ ಸಮುದ್ರವು ಶ್ರೇಷ್ಠವೆನಿಸಿರುವಂತೆ, ದೇವತೆಗಳಲ್ಲೆಲ್ಲಾ ಪ್ರಭುವಾದ ಆ ಸಾಂಬಸದಾಶಿವದೇವನೇ ಸರ್ವಶ್ರೇಷ್ಠನೆನಿಸಿರುವನು. ॥೧೨೮॥

ಸಿದ್ಧಪುರುಷರೊಳಗೆಲ್ಲಾ ಕಪಿಲಮಹರ್ಷಿಯೇ ಶ್ರೇಷ್ಠನೆನಿಸಿ ಉಳಿದ ಸಿದ್ಧರಿಗೆಲ್ಲಾ ಆಶ್ರಯನಾಗಿರುವಂತೆ, ದೇವತೆಗಳಲ್ಲೆಲ್ಲಾ ಪ್ರಭುವಾದ ಆ ಸಾಂಬಸದಾಶಿವನೇ ಶ್ರೇಷ್ಠನೆನಿಸಿ ಮಿಕ್ಕ ದೇವತೆಗಳಿಗೆಲ್ಲಾ ತಾನು ಆಶ್ರಯನಾಗಿರುವನು.॥೧೨೯॥

ಗಂಧರ್ವರೊಳಗೆಲ್ಲಾ ಅತಿ ಬಲಶಾಲಿಯಾದ ಆ ಚಿತ್ರರಥನೇ ಶ್ರೇಷ್ಠನಾಗಿರುವಂತೆ, ದೇವತೆಗಳಲ್ಲೆಲ್ಲಾ ಆ ಪ್ರಭುವಾದ ಸಾಂಬಸದಾಶಿವದೇವನೇ ಪೂಜ್ಯನಾಗಿರುವನು. ॥೧೩೦॥

ಯಾವಾಗಲೂ ಆ ಪರಶಿವನನ್ನೇ ಧ್ಯಾನಮಾಡುತ್ತಾ ಮುನಿಗಳಲ್ಲೆಲ್ಲಾ ಆ ಅಗಸ್ತ್ಯನೇ ಶ್ರೇಷ್ಠನಾಗಿರುವ ಹಾಗೆ, ದೇವತೆಗಳಲ್ಲೆಲ್ಲಾ ಆ ಸಾಂಬಸದಾಶಿವಪ್ರಭುವೇ ಶ್ರೇಷ್ಠನೆನಿಸಿರುವನು. ॥೧೩೧॥

ಯಥಾ ಸುಗಂಧೋ ಗಂಧೇಷು ಶ್ರೇಷ್ಠಃ ಸರ್ವಜನಪ್ರಿಯಃ ।
ತಥಾ ದೇವೇಷು ಸರ್ವೇಷು ಶ್ರೇಷ್ಠಃ ಸಾಂಬಃ ಶಿವಃ ಪ್ರಭುಃ ॥೧೩೨॥

ಶಿವಾನ್ನಾಸ್ತ್ಯಧಿಕೋ ದೇವಃ ಸತ್ಯಂ ಸತ್ಯಂ ನ ಸಂಶಯಃ ।
ಸತ್ಯಂ ಸತ್ಯಂ ಪುನಃ ಸತ್ಯಮುದ್ಧೃತ್ಯ ಭುಜಮುಚ್ಯತೇ ॥೧೩೩॥

ನ ಶಿವೋ ನ ಸಮೋ ದೇವಃ ಸತ್ಯಂ ಸತ್ಯಂ ನ ಸಂಶಯಃ ।
ಸತ್ಯಂ ಸತ್ಯಂ ಪುನಃ ಸತ್ಯಮುದ್ಧೃತ್ಯ ಭುಜಮುಚ್ಯತೇ ॥೧೩೪॥

ಶಂಕರಸ್ಯ ಪ್ರಸಾದೇನ ಜ್ಞಾನಂ ಭವತಿ ಧೀಮತಾಂ ।
ಶಂಕರಸ್ಯ ಪ್ರಸಾದೇನ ಮೋಕ್ಷೋ ಭವತಿ ಧೀಮತಾಂ ॥೧೩೫॥

ಶಂಕರಂ ಸರ್ವಭಾವೇನ ಶರಣ್ಯಃ ಶರಣಾರ್ಥಿನಾಂ ।
ಸೇವ್ಯಃ ಪೂಜ್ಯಃ ಶಿವಃ ಸರ್ವೈರಪ್ರಮಾದೇನ ಸರ್ವದಾ ॥೧೩೬॥

ಗಂಧಗಳಲ್ಲೆಲ್ಲಾ ಸುಗಂಧವೇ ಸರ್ವಜನಗಳಿಗೂ ಪ್ರಿಯವೆನಿಸಿ, ಶ್ರೇಷ್ಠವಾಗಿರುವಂತೆ, ದೇವತೆಗಳಲ್ಲೆಲ್ಲಾ ಪ್ರಭುವಾದ ಆ ಸಾಂಬ ಸದಾಶಿವನೇ ಶ್ರೇಷ್ಠನೆನಿಸಿರುವನು. ॥೧೩೨॥

ಶಿವನಿಗಿಂತಲೂ ಶ್ರೇಷ್ಠನಾದ ದೇವತೆಯೇ ಸತ್ಯವಾಗಿಯೂ ಬೇರೆ ಇಲ್ಲವು. ಇದರಲ್ಲಿ ಸಂಶಯವೇ ಇಲ್ಲ. ಪುನಃ ಪುನಃ ಈ ವಿಷಯದಲ್ಲಿ ನಾನು, ತೋಳನ್ನು ಮೇಲಕ್ಕೆ ಎತ್ತಿ ಸತ್ಯವಾಗಿ ನುಡಿಯುತ್ತಿದ್ದೇನೆ. ॥೧೩೩॥

ಆ ಶಿವನಿಗೆ ಸಮಾನವಾದ ದೇವತೆಯು, ಸತ್ಯವಾಗಿಯೂ ಬೇರೆ ಇಲ್ಲ. ಇದರಲ್ಲಿ ಸಂದೇಹವೇ ಇಲ್ಲ. ಸತ್ಯವಾಗಿಯೂ ಈ ವಿಷಯವನ್ನು ಭುಜವನ್ನು ಮೇಲಕ್ಕೆತ್ತಿಕೊಂಡು ಸಾರುತ್ತೇನೆ. ॥೧೩೪॥

ಮೇಧಾವಿಗಳಿಗೆ ಆ ಶಂಕರನ ಅನುಗ್ರಹದಿಂದಲೇ ಜ್ಞಾನವುಂಟಾಗುತ್ತದೆ. ಬುದ್ಧಿವಂತರಾದವರು, ಶಂಕರನ ಅನುಗ್ರಹದಿಂದಲೇ ಮೋಕ್ಷವನ್ನೂ ಪಡೆಯುತ್ತಾರೆ. ॥೧೩೫॥

ಎಲ್ಲಾ ವಿಷಯಗಳಲ್ಲಿಯೂ, ಮರೆಹೊಕ್ಕವರಿಗೆ, ಆ ಶಂಕರನೇ ಶರಣಾಗತ ರಕ್ಷಕನಾಗಿರುವನು. ಪ್ರಮಾದವೇನೂ ಇಲ್ಲದೇ ಯಾವಾಗಲೂ, ಆ ಶಿವನನ್ನೇ ಪೂಜೆಮಾಡಬೇಕು. ॥೧೩೬॥

॥ ಸ್ಕಂದ ಉವಾಚ ॥

ಇತ್ಯತ್ರಿರ್ವಚಸಂ ಶ್ರುತ್ವಾ ಮುನೀನಾಂ ಭಾವಿತಾತ್ಮನಾಂ ।
ತುತೋಷ ಪೂಜಯಾಮಾಸ ತಾನ್ಸರ್ವಾನ್ಮುನಿಪುಂಗವಾನ್ ॥೧೩೭॥

ಚಕಾರ ನಾಮಕರಣಂ ಮುನೀನಾಮಾಜ್ಞಯಾ ಮುನಿಃ ।
ಸೋಮಪ್ರಸಾದಲಬ್ಧಸ್ಯ ಸೋಮ ಇತ್ಯೇವ ಧೀಮತಃ ॥೧೩೮॥

ಉಮಯಾ ಸಹಿತೋ ದೇವಃ ಸೋಮ ಇತ್ಯಭಿಧೀಯತೇ ।
ಉಮಾ ಜ್ಞಾನಮಯೀ ಶಕ್ತಿಃ ಸೈವ ವಿದ್ಯೇತಿ ಗೀಯತೇ ॥೧೩೯॥

ವಿದ್ಯಾ ಸರ್ವಾ ಹ್ಯುಮಾರೂಪಾ ವಿದ್ಯಾನಾಮೀಶ್ವರಃ ಶಿವಃ ।
ವಿದ್ಯಾಪತಿರ್ನ ದೇವೋಽನ್ಯೋ ವಿದ್ಯಾಽನ್ಯತ್ರ ನ ಹಿ ಧ್ರುವಂ ॥೧೪೦॥

ಈರೀತಿಯಾಗಿ ನುಡಿದ, ಪರಿಶುದ್ಧವಾದ ಅಂತಃಕರಣಗಳುಳ್ಳ ಮುನಿಗಳ ಮಾತುಗಳನ್ನು ಲಾಲಿಸಿ, ಆ ಅತ್ರಿಮಹರ್ಷಿಯು ಮುನಿಶ್ರೇಷ್ಠರನ್ನೆಲ್ಲಾ ಬಹಳ ಸಂತೋಷದಿಂದ ಪೂಜೆಮಾಡಿದನು. ॥೧೩೭॥

ಅನಂತರ, ಮುನಿಗಳ ಅಪ್ಪಣೆಯಂತೆ ಅತ್ರಿಮಹರ್ಷಿಯು, ಮೇಧಾವಿಯಾದ ಆ ಉಮಾರಮಣನ ಅನುಗ್ರಹದಿಂದ ಜನಿಸಿರುವ ತನ್ನ ಕುಮಾರನಿಗೆ 'ಸೋಮ'ನೆಂದೇ ನಾಮಕರಣಮಾಡಿದನು. ॥೧೩೮॥

ಉಮಾದೇವಿಯ ಒಡನಾಡಿಯಾದ ಆ ಸ್ವಾಮಿಗೆ ಸೋಮನೆಂದು ಹೆಸರು. ಜ್ಞಾನಸ್ವರೂಪಿಣಿಯಾದ ಶಕ್ತಿಯೇ ಉಮೆಯಾಗಿರುವಳು ; ಆ ಶಕ್ತಿಯನ್ನೇ ವಿದ್ಯೆಯೆಂದೂ ಕರೆಯುವರು. ॥೧೩೯॥

ಉಮಾದೇವಿಯು ಸಕಲ ವಿದ್ಯಾಸ್ವರೂಪಿಣಿಯಾಗಿರುವಳು. ಅಂತಹ ವಿದ್ಯಾಸ್ವರೂಪಿಣಿಯಾದ ಉಮೆಗೆ ಸಕಲೈಶ್ವರ್ಯಸಂಪನ್ನನಾದ ಪರಶಿವನೇ ಪತಿಯಾಗಿರುವನು. ಆದ್ದರಿಂದ, ಸಕಲ ವಿದ್ಯೆಗಳಿಗೂ ಆ ಪರಶಿವನಲ್ಲದೇ ಬೇರೆಯವರು ಎಂದಿಗೂ ಸ್ವಾಮಿಯಾಗಲಾರರು. ಅಲ್ಲದೇ ಬೇರೆ ಯಾರಲ್ಲಿಯೂ, ನಿಶ್ಚಯವಾಗಿ ವಿದ್ಯೆಯು ಈರೀತಿಯಾಗಿ ಇರುವುದಿಲ್ಲ. ॥೧೪೦॥

ಈಶಾನಃ ಸರ್ವವಿದ್ಯಾನಾಂ ಭೂತಾನಾಮೀಶ್ವರಃ ಶಿವಃ ।
ವಿಷ್ಣುಬ್ರಹ್ಮಾದಿದೇವಾನಾಂ ಪ್ರಭುಃ ಸಾಂಬಃ ಸದಾಶಿವಃ ॥೧೪೧॥

ರುದ್ರಪಿಂಡಸಮುತ್ಪನ್ನಾ ಬ್ರಾಹ್ಮಣಾ ರುದ್ರದೇವತಾಃ ।
ತತಃ ಕಾರ್ಯಂ ದ್ವಿಜೈರ್ನಿತ್ಯಂ ಶ್ರೀರುದ್ರಸ್ಯೈವ ಪೂಜನಂ ॥೧೪೨॥

ದೇವಾಶ್ಚ ಬ್ರಾಹ್ಮಣೋತ್ಪನ್ನಾಃ ಶಿವಾನ್ಯಾ ಬ್ರಾಹ್ಮಣಾಃ ಸುರಾಃ ।
ತತೋ ದೇವೈಶ್ಚ ಕರ್ತವ್ಯಂ ರುದ್ರಸ್ಯೈವ ಹಿ ಪೂಜನಂ ॥೧೪೩॥

ವಿಶ್ವಾಧಿಕೋ ಋಷೀ ರುದ್ರೋ ಮಹಾನ್ಯದ್ಯಪಿ ಸಃಸ್ವಯಂ ।
ತಥಾಽಪಿ ನಿತ್ಯೋಽಜನ್ಯತ್ವಾಚ್ಛಿವಜ್ಞಾನಾತ್ಮಕಃ ಸ್ವಯಂ ॥೧೪೪॥

ಸ್ವಾಧಿಕಃ ಪೂಜ್ಯತೇ ಲೋಕೇ ಪೂಜಾ ಚ ಸ್ವಾಧಿಕೇ ಮತಾ ।
ಸ್ವತೋಽಧಮೋ ಸ್ವತುಲ್ಯೇ ವಾ ಪೂಜಾ ನೈವ ವಿಧೀಯತೇ ॥೧೪೫॥

ಸಕಲ ವಿದ್ಯೆಗಳಿಗೂ, ಎಲ್ಲಾ ಭೂತಗಳಿಗೂ ಸರ್ವೈಶ್ವರ್ಯ ಸಂಪೂರ್ಣನಾದ, ಆ ಶಿವನೊಬ್ಬನೇ ಸ್ವಾಮಿಯು. ವಿಷ್ಣು, ಬ್ರಹ್ಮ, ಮುಂತಾದ ದೇವತೆಗಳೆಲ್ಲರಿಗೂ, ಅಂಬಾಸಮೇತನಾದ ಆ ಸದಾಶಿವಪ್ರಭುವೊಬ್ಬನೇ ಒಡೆಯನಾಗಿರುವನು. ॥೧೪೧॥

ರುದ್ರಪಿಂಡದಿಂದ ಹುಟ್ಟಿದ ಬ್ರಾಹ್ಮಣರೆಲ್ಲರೂ ಆ ರುದ್ರನನ್ನೇ ದೇವತೆಯನ್ನಾಗಿ ಪೂಜಿಸುತ್ತಾರೆ. ಆದುದರಿಂದ ಬ್ರಾಹ್ಮಣರೆಲ್ಲರೂ ನಿತ್ಯವೂ ಆ ರುದ್ರನ ಪೂಜೆಯನ್ನೇ ಮಾಡಬೇಕು. ॥೧೪೨॥

ದೇವತೆಗಳೆಲ್ಲರೂ ಬ್ರಹ್ಮಸೃಷ್ಟಿಯಿಂದ ಜನಿಸಿದವರು, ಆ ಪರಶಿವನನ್ನು ಬಿಟ್ಟು ಉಳಿದ ದೇವತೆಗಳೆಲ್ಲರೂ ಬ್ರಾಹ್ಮಣರೇ ಆಗಿರುವರು. ಆದುದರಿಂದ ಆ ಬ್ರಾಹ್ಮಣರೆನಿಸಿದ ದೇವತೆಗಳು ಸದಾ ರುದ್ರನನ್ನೇ ಪೂಜೆಮಾಡಬೇಕು. ॥೧೪೩॥

ಈ ಪ್ರಪಂಚದಲ್ಲೆಲ್ಲಾ ಶ್ರೇಷ್ಠನೆನಿಸಿ ಸಕಲ ತತ್ವಗಳನ್ನೂ ತಿಳಿದಿರುವ ಆ ರುದ್ರನು ಯದ್ಯಪಿ ದೊಡ್ಡವನಾದಾಗ್ಯೂ ಉತ್ಪತ್ತಿರಹಿತನಾಗಿ ಪರಶಿವನ ಜ್ಞಾನಸ್ವರೂಪನಾದ್ದರಿಂದ ಅವನು ನಿತ್ಯನೆನಿಸಿರುವನು. ॥೧೪೪॥

ಪ್ರಪಂಚದಲ್ಲಿ ತನಗಿಂತಲೂ ಶ್ರೇಷ್ಠವೆನಿಸಿದ ದೊಡ್ಡವರಾದವರನ್ನು ಪೂಜಿಸುವುದು ವಾಡಿಕೆಯಲ್ಲಿದೆ ಪೂಜೆಯೆಂದರೆ ತನಗಿಂತಲೂ ದೊಡ್ಡವರಲ್ಲಿ ಮಾಡುವ ಗೌರವಯುತವಾದ ಉಪಚಾರ. ಇಂತಹ ಪೂಜೆಯು ತನಗಿಂತ ಕಡಿಮೆಯ

ನ ಶಿವಾದಧಿಕೋ ಯಸ್ಮಾದ್ವಿಶ್ವಾಧಿಕ ಇತಿ ಶ್ರುತಿಃ ।
ಬಾಧಿತಂ ಸ್ಯಾದತೋ ರುದ್ರೋ ವಿಶ್ವಾಧಿಕ ಉದೀರ್ಯತೇ ॥೧೪೬॥

ತತೋ ರುದ್ರಃ ಸ್ವಪೂಜಾಂ ತು ಸ್ವಯಂ ನೈವ ಕರಿಷ್ಯತಿ ।
ರೌದ್ರೈಸ್ತು ಬ್ರಾಹ್ಮಣೈಃ ಸರ್ವೈಃ ಕ್ರಿಯತೇ ರುದ್ರಪೂಜನಂ ॥೧೪೭॥

ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।
ಸ ಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠದ್ದಶಾಂಗುಲಂ ॥೧೪೮॥

ದರ್ಜೆಯುಳ್ಳವರಲ್ಲಿಯೂ ಅಥವಾ ತನಗೆ ಸರಿಸಮಾನರಾದವರಲ್ಲಿಯೂ ಎಂದಿಗೂ ನಡೆಯುವುದಿಲ್ಲ. ||೧೪೫||

ಶಿವನಿಗಿಂತಲೂ ಹೆಚ್ಚಿನ ಪ್ರಭಾವವುಳ್ಳವರು ಇಲ್ಲದಿರುವುದರಿಂದ ಆ ಶಿವನನ್ನೇ ವಿಶ್ವಾಧಿಕನೆಂದು ಶ್ರುತಿಯು ಹೇಳುತ್ತಿರುವುದು. ಈ ಶ್ರುತಿಯು ಬೇರೇ ರೀತಿಯಲ್ಲಿ ಅರ್ಥಮಾಡಿದರೆ ಅಲ್ಲಿ ಬಾಧಿಸಲ್ಪಡುವುದರಿಂದ ಆ ರುದ್ರನನ್ನು ವಿಶ್ವಾಧಿಕನೆಂದೇ ಹೇಳುವರು. ||೧೪೬||

ಆ ರುದ್ರನು ಜಗಚ್ಛ್ರೇಷ್ಠನೆನಿಸಿರುವುದರಿಂದಲೂ, ತನಗಿಂತಲೂ ಶ್ರೇಷ್ಠವಾದ ವಸ್ತುವೇ ಇಲ್ಲದ್ದರಿಂದಲೂ ತಾನು ಬೇರೆ ಯಾರನ್ನೂ ಪೂಜೆಮಾಡುವುದಿಲ್ಲ. ರುದ್ರನ ಭಕ್ತರಾದ ಬ್ರಾಹ್ಮಣರೆಲ್ಲರೂ ಆ ರುದ್ರನನ್ನು ನಿಯಮದಿಂದ ಪೂಜೆ ಮಾಡುವರು. ||೧೪೭||

ವಿರಾಟ್ಪುರುಷನೆನಿಸಿದ ಶಂಕರನು ಸಾವಿರ ತಲೆಗಳುಳ್ಳವನು. ಅವನಿಗೆ ಸಾವಿರ ಕಣ್ಣುಗಳೂ, ಸಹಸ್ರ ಪಾದಗಳೂ ಇರುವುವು. (ಇಲ್ಲಿ ಸಹಸ್ರ ಎಂದರೆ ಅಸಂಖ್ಯಾತವೆಂದು ತಿಳಿಯಬೇಕು. ಅನೇಕ ಜೀವಕೋಟಿಗಳೆಲ್ಲವೂ ಆ ಮಹಾ ಪುರುಷನ ದೇಹದಲ್ಲಿ ಅಡಗಿರುವುವಾದ ಕಾರಣ ಅವನಿಗೆ ಈ ರೀತಿಯಾಗಿ ಅಸಂಖ್ಯಾತವಾದ ತಲೆ, ಕಣ್ಣು, ಕಾಲು ಇವೇ ಮೊದಲಾದವುಗಳಿವೆಯೆಂದು ಹೇಳಿದೆ). ಈ ಬ್ರಹ್ಮಾಂಡವನ್ನೆಲ್ಲಾ ವ್ಯಾಪಿಸಿ, ಕೇವಲ ಹತ್ತು ಅಂಗುಲ ಪರಿಮಾಣವುಳ್ಳ ದೇಶವನ್ನು ಆಶ್ರಯಿಸಿ ನೆಲಸಿರುವನು. (ಅಂದರೆ ಇಲ್ಲಿ ಸಕಲ ಬ್ರಹ್ಮಾಂಡವನ್ನು ಆಕ್ರಮಿಸಿರುವುದಲ್ಲದೆ, ಈ ಬ್ರಹ್ಮಾಂಡದ ಹೊರಗೂ ವ್ಯಾಪಿಸಿರುವನೆಂದು ಅರ್ಥಮಾಡಿರುವರು.) ||೧೪೮||

ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಂ ।
ಉತಾಽಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ ॥೧೪೯॥

ಏತಾವಾನಸ್ಯ ಮಹಿಮಾ ಅತೋ ಜ್ಯಾಯಾಂಶ್ಚ ಪೂರುಷಃ ।
ಪಾದೋಽಸ್ಯ ವಿಶ್ವಾಭೂತಾನಿ ತ್ರಿಪಾದಸ್ಯಾಽಮೃತಂ ದಿವಿ ॥೧೫೦॥

ತ್ರಿಪಾದೂರ್ಧ್ವ ಉದೈತ್ಪುರುಷಃ ಪರಮೋ
ರುದ್ರೋ ದೇವದೇವೋತ್ತಮೋತ್ತಮಃ ।
ಪುರುಷೋ ವೈ ರುದ್ರ ಏವ
ಶ್ರುತಿರೇಷಾ ಯತೋ ಮತಾ ॥೧೫೧॥

ಭೂತ, ಭವಿಷ್ಯದ್ವರ್ತಮಾನರೂಪವಾದ ಆ ಜಗತ್ತೆಲ್ಲಾ ಪರಮಪುರುಷನೇ ಆಗಿರುತ್ತಾನೆ. ಅಲ್ಲದೇ ದೇವತ್ವಕ್ಕೆಲ್ಲಾ ಆ ಶಿವನು ಸ್ವಾಮಿಯಾಗಿರುವನು. ತಾನು ಜಗದುತ್ಪತ್ತಿ, ಸ್ಥಿತಿ, ನಾಶರೂಪವಾದ ಈ ಜಗದ್ವ್ಯಾಪಾರಕ್ಕೆಲ್ಲಾ ಉಪಾದಾನಕಾರಣ ವಾಗಿದ್ದರೂ, ಪ್ರಾಣಿಗಳ ಜೀವಿಕೆಗೆ ಆವಶ್ಯಕವಾದ ಅನ್ನರೂಪವನ್ನು ಹೊಂದಿ ನಿಮಿತ್ತಕಾರಣವಾಗಿ ತೋರುತ್ತಾನೆ. ||೧೪೯||

ವರ್ತಮಾನ, ಭೂತ ಮತ್ತು ಭವಿಷ್ಯರೂಪವಾದ ಈ ಜಗತ್ತಿನ ವ್ಯಾಪಾರ ವೆಲ್ಲವೂ ಆ ಪರಮಪುರುಷನ ಮಹಿಮೆಯೇ ಆಗಿರುವುದು. (ಅಂದರೆ ಅದೇ ಪರಮ ಪುರುಷನ ಸ್ವರೂಪವಲ್ಲ. ಇದು ಆವನ ಸಾಮರ್ಥ್ಯವಿಶೇಷವೆಂದು ಭಾವವು.) ಆ ಪರಮ ಪುರುಷನು ಈರೀತಿಯಾದ ಅವನ ಮಹಿಮೆಗಿಂತಲೂ ಶ್ರೇಷ್ಠನಾದವನು. (ಅಂದರೆ ಆ ಮಹಿಮೆಗಿಂತಲೂ ಇವನು ಅತಿರಿಕ್ತನೆನಿಸಿ ಶ್ರೇಷ್ಠನಾಗಿರುವನೆಂದು ಭಾವವು.) ಭೂತ, ಭವಿಷ್ಯದ್ವರ್ತಮಾನರೂಪವಾದ ಈ ಪ್ರಪಂಚವೆಲ್ಲವೂ ಆ ಪರಮಪುರುಷನ ಉಳಿದ ಮೂರು ಪಾದಗಳು ಅವು ನಾಶರಹಿತವಾದುವೆನಿಸಿ, ಸ್ವತಃ ಪ್ರಕಾಶಮಾನವಾದ ಆಕಾಶದಲ್ಲಿ ಅಡಗಿರುವುವು. ||೧೫೦||

ಈ ಮೂರು ಪಾದಗಳಿಂದ ಯುಕ್ತನಾದ ಪರಮಪುರುಷನು, ಈ ಸಂಸಾರ ಸಂಬಂಧರಹಿತನಾಗಿ ವ್ಯಾಪಕನೆನಿಸಿ, ಈ ಅಜ್ಞಾನರೂಪವಾದ ಕಾರ್ಯವುಳ್ಳ ಸಂಸಾರ ದಿಂದ ಬಹಿರ್ಭೂತನಾಗಿ ಉನ್ನತವಾದ ಸ್ಥಾನವನ್ನು ಹೊಂದಿರುವನು. ಈ ರುದ್ರನು ಪರಮಶ್ರೇಷ್ಠನೆನಿಸಿ, ಸಕಲ ದೇವತೆಗಳಲ್ಲಿಯೂ ಸರ್ವೋತ್ತಮನಾಗಿರುವನು.

ಯೋ ರುದ್ರೋಽಗ್ನಾವಪ್ಸು ರುದ್ರೋ ಯೋ ರುದ್ರಸ್ತ್ವೋಷಧೀಷ್ವಪಿ ।
ಯೋ ವಿಶ್ವಾ ಭುವನಾನ್ಯೇಕೋ ವಿವೇಶ ಸ ಪರಾತ್ಪರಃ ॥೧೫೨॥

ವಿಶ್ವಂ ಭೂತಂ ಚ ಭುವನಂ ಚಿತ್ರಂ ಚ ಬಹುಧಾ ಚ ಯತ್ ।
ತಜ್ಜಾತಂ ಜಾಯಮಾನಂ ಚ ರುದ್ರಾದ್ರುದ್ರಾತ್ಮಕಂ ವಿದುಃ ॥೧೫೩॥

ಋಚೋ ಯಜೂಂಷಿ ಸಾಮಾನಿ ರುದ್ರಾದೇವ ಹಿ ಜಜ್ಞಿರೇ ।
ಛಂದಾಂಸಿ ಜಜ್ಞಿರೇ ರುದ್ರಾಜ್ಜಜ್ಞಿರೇ ವಿವಿಧಾಃ ಪ್ರಜಾಃ ॥೧೫೪॥

ಸೋಮೋ ಮತೀನಾಂ ಜನಿತಾ ಸೋಮೋ ಹಿ ಜನಿತಾ ದಿವಃ ।
ಸ ಶೈಲಾಯಾಃ ಪೃಥಿವ್ಯಾಶ್ಚ ಜನಿತಾ ಸೋಮ ಏವ ಹಿ ॥೧೫೫॥

ಈರೀತಿಯಾಗಿ ಮಹಾಮಹಿಮೆಗಳಿಂದ ಯುಕ್ತನಾಗಿರುವ ಪರಮಪುರುಷನು ಆ ರುದ್ರನೇ ಆಗಿರುತ್ತಾನೆಂದು ಈ ಶ್ರುತಿಯು ಹೇಳುತ್ತಿದೆ. ॥೧೫೧॥

ಬೆಂಕಿಯಲ್ಲಿಯೂ, ನೀರಿನಲ್ಲಿಯೂ, ಜ್ಯೋತಿರ್ಲತೆಗಳಲ್ಲಿಯೂ ಸಕಲ ಔಷಧಿಗಳಲ್ಲಿಯೂ ಆ ರುದ್ರನೊಬ್ಬನೇ ನೆಲಸಿರುವನು. ಸರ್ವಶ್ರೇಷ್ಠನಾದ ಆ ಶಿವನೊಬ್ಬನೇ ಸಕಲಲೋಕಗಳನ್ನೂ ವ್ಯಾಪಿಸಿರುವನು. ॥೧೫೨॥

ಭೂತ ಭವಿಷ್ಯದ್ವರ್ತಮಾನರೂಪವಾದ ಈ ಪ್ರಪಂಚವೆಲ್ಲವೂ ನಾನಾವಿಧವಾಗಿ ವಿಚಿತ್ರವಾಗಿರುವುದು. ಈರೀತಿಯಾದ ಪ್ರಪಂಚವೆಲ್ಲವೂ ಆ ರುದ್ರಸ್ವರೂಪವೇ ಆಗಿರುವುದೆಂದು ದೊಡ್ಡವರು ಹೇಳುತ್ತಾರೆ. ॥೧೫೩॥

ಋಗ್ವೇದ, ಯಜುರ್ವೇದ, ಸಾಮವೇದರೂಪವಾದ ಮೂರು ಛಂದಸ್ಸುಗಳೂ ಈ ರುದ್ರದೇವನಿಂದಲೇ ಹುಟ್ಟಿದುವು. ಉಳಿದ ಛಂದಸ್ಸುಗಳೂ, ನಾನಾವಿಧವಾದ ಪ್ರಜೆಗಳೂ ಸಹ ಆ ರುದ್ರದೇವನಿಂದಲೇ ಜನಿಸಿದವು. ॥೧೫೪॥

ಸಕಲ ಚರಾಚರವಾದ ಜಗತ್ತಿನಲ್ಲಿ ಬುದ್ಧಿಯನ್ನು ಸೃಷ್ಟಿಮಾಡಿದವನೂ ಆ ಶಿವನೇ. ಅಂತರಿಕ್ಷ, ಬೆಟ್ಟಗುಡ್ಡಗಳೊಡಗೂಡಿರುವ ಭೂಮಿ, ಇವುಗಳನ್ನೂ ಆ ಉಮಾರಮಣನಾದ ಶಂಕರನೇ ಸೃಷ್ಟಿಸಿದನು. ॥೧೫೫॥

ಅಗ್ನೇಶ್ಚ ಜನಿತಾ ಸೋಮೋ ನಾನ್ಯೋಽಸ್ಯ ಜನಿತಾ ಧ್ರುವಂ ।
ಸೂರ್ಯಾಣಾಂ ಜನಿತಾ ಸೋಮೋ ದ್ವಾದಶಾನಾಮಪಿ ಪ್ರಭುಃ ॥೧೫೬॥

ಚಂದ್ರಸ್ಯ ಜನಿತಾ ಸೋಮಃ ಕಲಾನಾಂ ಜನಿತಾ ತಥಾ ।
ಇಂದ್ರಸ್ಯ ಜನಿತಾ ಸೋಮೋ ಯಮಸ್ಯ ವರುಣಸ್ಯ ಚ ॥೧೫೭॥

ಮನಸೋ ಜನಿತಾ ಸೋಮಃ ಸ್ಕಂದಸ್ಯ ಗಣಪಸ್ಯ ಚ ।
ಆಕಾಶಸ್ಯಾಪಿ ಜನಿತಾ ಔಷಧೀನಾಮಪಾಮಪಿ ॥೧೫೮॥

ವಿಷ್ಣೋಶ್ಚ ಜನಿತಾ ಸೋಮೋ ಬ್ರಹ್ಮಣಃ ಪವನಸ್ಯ ಚ ।
ನದೀನಾಂ ಜನಿತಾ ಸೋಮಃ ಸಮುದ್ರಾಣಾಮಪಿ ಪ್ರಭುಃ ॥೧೫೯॥

ಬ್ರಾಹ್ಮಣೋ ರುದ್ರಮಭ್ಯರ್ಚ್ಯಮನಭ್ಯರ್ಚ್ಯಂ ತು ಯೋ ಭ್ರಮಾತ್ ।
ಭುಂಕ್ತೇ ಸ ಪಾಪಕೃದ್ಭೂಯಃ ಪಾಪಭುಗ್ಜಾಯತೇ ಧ್ರುವಂ ॥೧೬೦॥

ಅಗ್ನಿಯೂ ಈ ಉಮಾಕಾಂತನಿಂದಲೇ ಜನಿಸಿದನು. ಈ ಉಮಾರಮಣನು ಮಾತ್ರ ಯಾರಿಂದಲೂ ಜನಿಸಿದೇ ನಿತ್ಯನಾಗಿರುವನು. ಹನ್ನೆರಡು ಮಂದಿ ಸೂರ್ಯರನ್ನೂ ಪ್ರಭುವಾದ ಉಮಾಮಹೇಶ್ವರನೇ ಸೃಷ್ಟಿಮಾಡಿರುವನು. ॥೧೫೬॥

ಆ ಉಮಾರಮಣನು ಚಂದ್ರ, ಅರುವತ್ತು ನಾಲ್ಕುಕಲೆಗಳು, ಇಂದ್ರ, ಯಮ, ವರುಣ, ಮನಸ್ಸು, ಕುಮಾರಸ್ವಾಮಿ, ಗಣಪತಿ, ಆಕಾಶ, ಸಕಲ ಓಷಧಿಗಳು, ಇವುಗಳನ್ನೆಲ್ಲಾ ತಾನೇ ನಿರ್ಮಿಸಿರುವನು. ॥೧೫೭-೧೫೮॥

ವಿಷ್ಣು, ಬ್ರಹ್ಮ, ವಾಯು, ಸಕಲ ನದಿಗಳು, ಎಲ್ಲಾ ಸಮುದ್ರಗಳು, ಇವುಗಳಿಗೆಲ್ಲಾ ಜನ್ಮದಾತನು ಆ ಉಮಾರಮಣನೇ ಆಗಿರುತ್ತಾನೆ. ಅಲ್ಲದೆ ಅವುಗಳಿಗೆಲ್ಲಾ ಅವನೇ ಪ್ರಭುವೂ ಆಗಿರುವನು. ॥೧೫೯॥

ಬ್ರಾಹ್ಮಣನಾದವನು ರುದ್ರನನ್ನು ಪೂಜೆಮಾಡಿ, ಆ ದೇವದೇವನಿಗೆ ಪೂಜೆ ಮಾಡುವಾಗ ನಿವೇದನಮಾಡದೇ ಇರುವ ಪದಾರ್ಥಗಳನ್ನು ಭ್ರಾಂತಿಯಿಂದ ತಿನ್ನುವನಾದರೆ, ಅವನು, ವಿಶೇಷವಾಗಿ ಪಾಪವನ್ನೇ ಮಾಡಿದಂತಾಗಿ, ನಿಶ್ಚಯವಾಗಿಯೂ ಪಾಪಫಲಭೋಗಿಯಾಗುವನು. ॥೧೬೦॥

ವಿಶ್ವಾಧಿಕಮುಮಾಕಾಂತಮುಸಮಂ ದೇವತೋತ್ತಮಂ ।
ಜಾನಾತಿ ಯೋಽನ್ಯಸದೃಶಂ ಸ ಚಂಡಾಲಃ ಸ ಮದ್ಯಪಃ ॥೧೬೧॥

ಪುರಾ ಕಶ್ಚಿದಭೂದ್ವಿಪ್ರೋ ದೇವದಾರುವನಾಶ್ರಿತಃ ।
ಸ ಸರ್ವತ್ರ ಸಮತ್ವೇನ ಬುದ್ಧಿಂ ಕೃತ್ವೈವ ಸಂಸ್ಥಿತಃ ॥೧೬೨॥

ತಂ ತಥಾವಿಧಮಾಲೋಕ್ಯ ಕಶ್ಚಿಚ್ಛೈವಃ ಶಿವಾರ್ಚಕಃ ।
ತಮಬ್ರವೀದ್ಭ್ರಾಂತಚಿತ್ತಂ ಜ್ಞಾತುಂ ತಸ್ಯ ಮನಸ್ತದಾ ॥೧೬೩॥

॥ ಶೈವ ಉವಾಚ ॥

ತ್ವಯಾ ಕಿಂ ಧ್ಯಾಯತೇ ನಿತ್ಯಂ ಪ್ರತ್ಯಹಂ ಕ್ರಿಯತೇ ಚ ಕಿಂ ।
ಕೋ ವಾ ದೇವೇಷು ವಿಜ್ಞಾತೋ ದೇವೋತ್ತಮ ಇತಿ ತ್ವಯಾ ॥೧೬೪॥

॥ ವಿಪ್ರ ಉವಾಚ ॥

ದೇವೋತ್ತಮೋ ನ ಕೋಽಪ್ಯಸ್ತಿ ದೇವಾಃ ಸರ್ವೇ ಸಮಾಃ ಸ್ಮೃತಾಃ ।
ಧ್ಯೇಯೋಽನ್ಯೋ ಮಮ ನಾಸ್ತ್ಯೇವ ಶರೀರೇ ಧ್ಯಾಯತೇ ಮಯಾ॥೧೬೫॥

ಜಗಚ್ಛ್ರೇಷ್ಠನೂ, ಅಸದೃಶನೂ, ದೇವತಾಸಾರ್ವಭೌಮನೂ, ಆದ ಉಮಾರಮಣನನ್ನು ಬೇರೆ ದೇವತೆಗಳಿಗೆ ಸಮಾನನಾದವನು, ಎಂದು ಹೇಳುವ ಮಾನವನು ನಿಜವಾಗಿಯೂ ಚಂಡಾಲನೇ ಆಗುವನು. ಅಲ್ಲದೆ ಅವನು ಮದ್ಯಪಾಯಿಗೆ ಸಮನೂ ಆಗುತ್ತಾನೆ. ॥೧೬೧॥

ಹಿಂದೆ ದೇವದಾರುವನದಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಅವನು ಯಾವಾಗಲೂ, ಎಲ್ಲಾ ದೇವತೆಗಳಲ್ಲಿಯೂ ಒಂದೇ ಸಮಾನವಾದ ಬುದ್ಧಿಯನ್ನಿಟ್ಟು ಕಾಲ ಕಳೆಯುತ್ತಿದ್ದನು. ಈರೀತಿಯಿಂದಿರುವ ಆ ಬ್ರಾಹ್ಮಣನನ್ನು ಒಂದು ದಿನ ಒಬ್ಬ ಶಿವಪೂಜಕನು ನೋಡಿ, ಭ್ರಮೆಗೊಂಡಿರುವ ಮನಸ್ಸುಳ್ಳ ಆ ಬ್ರಾಹ್ಮಣನ ಮನಸ್ಸನ್ನು ತಿಳಿಯುವುದಕ್ಕೋಸ್ಕರ ಅವನನ್ನು ಕುರಿತು ಹೀಗೆ ಪ್ರಶ್ನೆಮಾಡಿದನು.॥೧೬೨-೧೬೩॥

ಅಯ್ಯ ಬ್ರಾಹ್ಮಣನೇ! ಪ್ರತಿನಿತ್ಯವೂ ನೀನು ಯಾರನ್ನು ಧ್ಯಾನಮಾಡುತ್ತಿದ್ದೀಯೆ? ನೀನು ಯಾರನ್ನು ದೇವಶ್ರೇಷ್ಠನೆಂದು ತಿಳಿದಿರುವೆ? ಎಂದು ಆ ಶೈವನು ಪ್ರಶ್ನೆಮಾಡಿದನು. ॥೧೬೪॥

ದೇವತಾಶ್ರೇಷ್ಠನು ಯಾರೂ ಇಲ್ಲವು. ನನಗೆ ಎಲ್ಲಾ ದೇವತೆಗಳೂ ಒಂದೇ ಸಮನಾಗಿರುವರು. ಈ ನನ್ನ ಶರೀರದಲ್ಲಿ ನನಗೆ ಧ್ಯಾನಮಾಡಬೇಕಾದ ಪದಾರ್ಥ

ಯಥಾ ರುದ್ರಸ್ತಥಾ ವಿಷ್ಣುರ್ಯಥಾವಿಷ್ಣುಸ್ತಥಾ ವಿಧಿಃ ।
ಯಥಾ ವಿಧಿಸ್ತಥೈವೇಂದ್ರೋ ಯಥೈವೇಂದ್ರಸ್ತಥಾನಲಃ ॥೧೬೬॥

ಯಥಾಽನಲಸ್ತಥಾ ವಾಯುರ್ಯಥಾ ವಾಯುಸ್ತಥಾ ಯಮಃ ।
ಯಥಾ ಯಮಸ್ತಥಾಽನ್ಯೇಽಪಿ ತತಃ ಕೋಽಪ್ಯಧಿಕೋ ನ ಹಿ ॥೧೬೭॥

ಇತಿ ತದ್ವಚನಂ ಶ್ರುತ್ವಾ ತತ್ವಜ್ಞಃ ಶಿವಚಿಂತಕಃ ।
ತಂ ಭ್ರಾಂತಚಿತ್ತಮುಭ್ರಾಂತಂ ಕರ್ತುಮೇವ ವಚೋಽಬ್ರವೀತ್ ॥೧೬೮॥

ದೇವಿ ಪ್ರಭ್ರಾಂತಚಿತ್ತೋಽಸಿ ದೇವಃ ಕಿಂ ವಿಸ್ಮೃತಸ್ತ್ವಯಾ ।
ವೇದತತ್ವಂ ನ ವಿಜ್ಞಾತಂ ನಿಸ್ತಾರಸ್ತೇ ಕಥಂ ವದ ॥೧೬೯॥

ವಾವುದೂ ತೋರುವುದಿಲ್ಲ. ಕೇವಲ ಶರೀರಧ್ಯಾನವೊಂದೇ ನನಗೆ ಮುಖ್ಯವಾಗಿರುವುದು. ||೧೬೫||

ರುದ್ರನಂತೆಯೇ ವಿಷ್ಣುವೂ, ವಿಷ್ಣುವಿನಂತೆ ಬ್ರಹ್ಮನೂ, ಬ್ರಹ್ಮನಂತೆ ಇಂದ್ರನೂ, ಇಂದ್ರನಂತೆ ಅಗ್ನಿಯೂ, ಅಗ್ನಿಯಂತೆ ವಾಯುವೂ, ವಾಯುವಿನಂತೆ ಯಮನೂ, ಯಮನಂತೆ ಇತರ ದೇವತೆಗಳೂ, ಹೀಗೆಯೇ ಒಬ್ಬರಂತೆ ಒಬ್ಬರು, ಇರುವರೇ ಹೊರತು, ನನಗೆ ಯಾರೊಬ್ಬರೂ ಶ್ರೇಷ್ಠರಾಗಲೀ, ಉತ್ತಮರಾಗಲೀ ಇರುವುದಿಲ್ಲವೆಂದು ಹೇಳಿದನು. ||೧೬೬-೧೬೭||

ಈರೀತಿಯಾದ ಆ ಬ್ರಾಹ್ಮಣನ ಮಾತುಗಳನ್ನು ಕೇಳಿ, ತತ್ತ್ವವನ್ನರಿತ ಶಿವಧ್ಯಾನಾಸಕ್ತನಾದ ಆ ಶೈವನು, ಭ್ರಮೆಯನ್ನು ಹೊಂದಿರುವ ಆ ಬ್ರಾಹ್ಮಣನ ಮನಸ್ಸಿನ ಭ್ರಾಂತಿಯನ್ನು ಹೋಗಲಾಡಿಸುವುದಕ್ಕೋಸ್ಕರ, ಈರೀತಿಯಾಗಿ ಮಾತನಾಡಿದನು. ||೧೬೮||

ಎಲೈ ಬ್ರಾಹ್ಮಣನೆ; ನೀನು ಭ್ರಾಂತನಾಗಿ ಆ ಮಹಾದೇವನನ್ನೇ ಮರೆತಿರುವಂತೆ ತೋರುವುದು. ಆ ದೇವೋತ್ತಮನನ್ನು ಹೇಗೆ ತಾನೆ ಮರೆತಿರುವೆ? ವೇದಗಳ ರಹಸ್ಯವೇ ನಿನಗೆ ಇನ್ನೂ ತಿಳಿದಿಲ್ಲ. ಹೀಗಿರುವಾಗ ನೀನು ಹೇಗೆ ತಾನೆ ಉದ್ಧಾರವಾಗುವೆ? ||೧೬೯||

ಈಶ್ವರಃ ಸರ್ವವಿದ್ಯಾನಾಮಿತ್ಯಾದಿರ್ನ ಶ್ರುತಿಃ ಶ್ರುತಃ ।
ನಮಸ್ತೇಽಸ್ತು ಭಗವನ್ಬಹುಧಾ ವದತಿ ಶ್ರುತಿಃ ॥೧೭೦॥

ನಿಷ್ಕಲಂ ನಿರ್ಗುಣಂ ಶಾಂತಮಿತ್ಯಾದಿರ್ನ ಶ್ರುತಾ ಶ್ರುತಿಃ ।
ಸೋಮಃ ಪವತ ಇತ್ಯಾದಿ ರುದ್ರಸೂಕ್ತಂ ಚ ವಿಸ್ಮೃತಂ ॥೧೭೧॥

ತತ್ರಾಪಿ ಜನಿತಾ ವಿಷ್ಣೋಃ ಸೋಮ ಇತ್ಯಯಮುತ್ತಮಃ ।
ಯೋ ರುದ್ರ ಇತಿ ವೇದೋಽಪಿ ತ್ವಯಾ ನ ಸ್ಮರ್ಯತೇ ಧ್ರುವಂ ॥೧೭೨॥

ನ ವಿಶ್ವಂ ಭೂತಮಿತ್ಯಾದಿ ವೇದೋಽಪಿ ಸ್ಮರ್ಯತೇ ತ್ವಯಾ ।
ಹರಿಂ ಹರಂ ತಮಿತ್ಯಾದಿ ವೇದೋ ನ ಸ್ಮರ್ಯತೇ ತ್ವಯಾ ॥೧೭೩॥

ನಮಸ್ತೇ ರುದ್ರ ಇತ್ಯಾದಿ ವೇದಸಾರೋಽಪಿ ವಿಸ್ಮೃತಃ ।
ಸದ್ಯೋ ಜಾತಂ ಪ್ರಪದ್ಯಾಮೀತ್ಯಾದಿವೇದೋಽಪಿ ವಿಸ್ಮೃತಃ ॥೧೭೪॥

'ಸಕಲ ವಿದ್ಯೆಗಳಿಗೂ ಆ ಮಹಾದೇವನು ಸ್ವಾಮಿಯೆಂದು' ತಿಳಿಸುತ್ತಿರುವ ವೇದವಾಕ್ಯಗಳು ನಿನಗೆ ತಿಳಿದಿಲ್ಲವೆ? 'ಭಗವಂತನೇ! ನಿನಗೆ ನಮಸ್ಕಾರವು' ಎಂದು ಆ ಶ್ರುತಿಗಳೇ ಬಹಳ ವಿಧವಾಗಿ ಸಾರುತ್ತಿರುವುವು. ಅಲ್ಲದೇ, ಶ್ರುತಿಗಳು, ಕಲಾರಹಿತನು, ಗುಣಹೀನನು, ಶಾಂತನು, ಇವೇ ಮೊದಲಾದವುಗಳಿಂದ ಆ ಮಹಾದೇವನ ಸ್ವರೂಪವನ್ನು ಕೊಂಡಾಡುತ್ತಿರುವುವು. 'ಸೋಮಃ ಪವತೆ' ಮುಂತಾದ ರುದ್ರಸೂಕ್ತ ಮಂತ್ರಗಳು ನಿನಗೆ ಮರತೇ ಹೋದವೆ? ॥೧೭೦-೧೭೧॥

ವಿಷ್ಣುವಿಗೂ ಆ ಉಮಾರಮಣನೇ ಜನ್ಮದಾತನೆಂದೂ, ಅವನೇ ಸರ್ವೋತ್ತಮನೆಂದೂ ಹೇಳುತ್ತಿರುವ ಶ್ರುತಿಗಳು ನಿನ್ನ ಗಮನಕ್ಕೆ ಬರಲಿಲ್ಲವೆ? ಆ ರುದ್ರನೇ ಅಗ್ನಿ ಮುಂತಾದ ಎಲ್ಲಾ ದೇವತೆಗಳಲ್ಲಿಯೂ ನೆಲಸಿ, ಆಯಾ ಕಾರ್ಯಗಳನ್ನು ನಡೆಸುತ್ತಿರುವನೆಂಬ 'ಯೋ ರುದ್ರ' ಎಂಬ ವೇದವಾಕ್ಯವನ್ನು ನೀನು ಸ್ಮರಣೆಮಾಡುವುದಿಲ್ಲವೆ? ॥೧೭೨॥

'ವಿಶ್ವಂ ಭೂತಂ' 'ಹರಿಂ ಹರಂ ತಂ'. ಇವೇ ಮೊದಲಾದ ವೇದವಾಕ್ಯಗಳು ನಿನ್ನ ಸ್ಮರಣೆಗೆ ಬರುವುದಿಲ್ಲವೆ. (ಇವೆಲ್ಲವೂ ಆ ಮಹಾದೇವನ ಸಾಮರ್ಥ್ಯವನ್ನೇ ಪ್ರಕಟಪಡಿಸುತ್ತಿರುವುವು.) ॥೧೭೩॥

'ನಮಸ್ತೇ ರುದ್ರ' ಮೊದಲಾದ ವೇದವಾಕ್ಯಗಳ ಸಾರವೂ, 'ಸದ್ಯೋ

ನ ತಮೀಶಾನಮಿತ್ಯಾದಿ ವೇದೋಽಪಿ ಸ್ಮರ್ಯತೇ ತ್ವಯಾ ।
ಇಮಾ ರುದ್ರಾಯ ಇತ್ಯಾದಿಮಂತ್ರೋ ನ ಸ್ಮರ್ಯತೇ ತ್ವಯಾ ॥೧೭೫॥

ತಮುಷ್ಟುಹೀತಿ ಮಂತ್ರೋಽಪಿ ಸ್ಮರ್ಯತೇ ನ ತ್ವಯಾ ಧ್ರುವಂ ।
ಕದ್ರುದ್ರಾಯೇತಿ ಮಂತ್ರೋಽಪಿ ಸ್ಮರ್ಯತೇ ನ ತ್ವಯಾ ಧ್ರುವಂ॥೧೭೬॥

ಕಿಂ ಚ ಸರ್ವೇಶ್ವರಃ ಶಂಭುಃ ಸರ್ವೋಪನಿಷದಾಂ ಪ್ರಭುಃ ।
ಸರ್ವೋಪನಿಷದಾಮೀಶಃ ಪರಮಾತ್ಮಾ ಸದಾಶಿವಃ ॥೧೭೭॥

ಯ ಏಕೋ ಜಾಲವಾನೀಶ ಈಶನೀಭಿಃ ಸಮೀಶತೇ ।
ಉದ್ಭವೇ ಸಂಭವೇ ಚೈವ ಏಕ ಏವ ಶಿವಃ ಪ್ರಭುಃ ॥೧೭೮॥

ಯ ಏವಂ ವಿದುರೀಶಾನಮಮೃತಾಸ್ತೇ ಭವಂತಿ ಹಿ ।
ಏಕ ಏವ ಹಿ ರುದ್ರೋಽಯಂ ನ ದ್ವಿತೀಯೋಽಯಮೀಶ್ವರಃ ॥೧೭೯॥

ಜಾತಂ ಪ್ರಪದ್ಯಾಮಿ' ಮೊದಲಾದ ವೇದವಾಕ್ಯಗಳ ರಹಸ್ಯವೂ ನಿನಗೆ ಮರೆತು ಹೋಗಲು ಕಾರಣವೇನು? ||೧೭೪||

'ತಮೀಶಾನಂ' 'ಇಮಾ ರುದ್ರಾಯ ತವಸೇ' ಮೊದಲಾದ ವೇದಮಂತ್ರಗಳು ನಿನಗೆ ಸ್ಮರಣೆಗೆ ಬರುವುದೇ ಇಲ್ಲವೇ? ||೧೭೫||

'ತಮುಷ್ಟುಹಿ ಯಸ್ಸ್ವಿಷುಃ ಸುಧನ್ವಾ' ಎಂಬ ಮಂತ್ರವನ್ನೂ ನೀನು ನಿಶ್ಚಯವಾಗಿಯೂ ಸ್ಮರಣೆಮಾಡುತ್ತಿಲ್ಲವೆಂದು ತೋರುವುದು. ||೧೭೬||

ಮತ್ತು, ಸಕಲರಿಗೂ ಒಡೆಯನಾದ ಆ ಶಂಭುವು ಉಪನಿಷತ್ತುಗಳಿಗೆಲ್ಲಾ ಸ್ವಾಮಿಯಾಗಿರುವನು. ನಿತ್ಯಕಲ್ಯಾಣಸ್ವರೂಪನಾದ ಆ ಪರಮಾತ್ಮನೇ ಸಕಲ ಉಪನಿಷತ್ತುಗಳಿಗೂ ಒಡೆಯನಾಗಿರುವನು. ||೧೭೭||

ಆ ಈಶ್ವರನೊಬ್ಬನೇ ಬಲೆಗಾರನಾಗಿ ಸಕಲ ಪ್ರಪಂಚವನ್ನೂ ಬಲೆಯೊಡ್ಡಿ ಬೇಟೆಯಾಡುತ್ತಿರುವನು. ಉತ್ಪತ್ತಿಕಾರ್ಯದಲ್ಲಿಯೂ, ರಕ್ಷಣೆಯಕಾರ್ಯದಲ್ಲಿಯೂ ಅಲ್ಲದೇ ಸಂಹಾರಕಾರ್ಯದಲ್ಲಿಯೂ ಆ ಸರ್ವಸಮರ್ಥನಾದ ಶಿವನೊಬ್ಬನೇ ಶಕ್ತನು. ||೧೭೮||

ಆ ಪರಮೇಶ್ವರನನ್ನು ಈರೀತಿಯಾಗಿ ತಿಳಿದವರು, ಮರಣರಹಿತನಾಗಿ ದೇವತ್ವವನ್ನು ಪಡೆಯುವರು. ರುದ್ರನು ಅದ್ವಿತೀಯನಾಗಿರುವನು. ಇವನಿಗೆ ಸಮಾನವಾದ ಈಶ್ವರನು ಬೇರೆ ಇಲ್ಲವು. ||೧೭೯||

ಸರ್ವಲೋಕಾನೀಶತೇ ಯ ಈಶನೀಭಿಃ ಸದಾಶಿವಃ ।
ಇಮಾಂ ಲೋಕಾನೀಶನೀಭಿರೀಶತೇ ತಸ್ಥುರತ್ರ ತೇ ॥೧೮೦॥

ಪ್ರತ್ಯಗಾತ್ಮನಿ ವಿಶ್ವೇಶೇ ಶಿವೇ ತಿಷ್ಠಂತಿ ಯೇ ಜನಾಃ ।
ತಾನೇವ ಸಂಚುಕೋಚಾಯಮಂತಕಾಲೇ ತ್ರಿಶೂಲಧೃಕ್ ॥೧೮೧॥

ಸಂಸೃಜ್ಯ ವಿಶ್ವಭುವನಾನ್ಯೇವಮೇವ ಪುನಃ ಪುನಃ ।
ಪಾತಿ ಹಂತಿ ಪುನಃ ಸೃಷ್ಟ್ವಾ ಪಾತಿ ಹಂತಿ ಪುನಃ ಪುನಃ ॥೧೮೨॥

ವಿಶ್ವತಶ್ಚಕ್ಷುರೀಶಾನೋ ವಿಶ್ವತೋಽಂತಮುಖಃ ಶಿವಃ ।
ವಿಶ್ವತೋಬಾಹುರನಘೋ ವಿಶ್ವತಸ್ಸ್ಯನ್ಮಹೇಶ್ವರಃ ॥೧೮೩॥

ಸಕಲ ಲೋಕಗಳನ್ನೂ ಕಾಪಾಡುವ ಆ ಸದಾಶಿವನು, ತನ್ನ ಅಂಶಗಳಿಂದ ಸಕಲ ಲೋಕಗಳನ್ನೂ ರಕ್ಷಿಸುತ್ತಾನೆ. ಅಂತಹ ಪರಮೇಶ್ವರನಲ್ಲಿ ಈ ಪ್ರಪಂಚವೆಲ್ಲವೂ ನೆಲಸಿರುವುವು. ॥೧೮೦॥

ಪ್ರತ್ಯಕ್ಸ್ವರೂಪನೂ, ಜಗದೊಡೆಯನೂ ಆದ ಆ ಶಿವನಲ್ಲಿ ತನ್ನ ಮನಸ್ಸನ್ನಿಟ್ಟುಕೊಂಡಿರುವ ಜನಗಳನ್ನು ಆ ಮಹಾದೇವನು, ಪ್ರಳಯಕಾಲದಲ್ಲಿಯೂ ತ್ರಿಶೂಲಾಯುಧವನ್ನು ಧರಿಸಿ ಕಾಪಾಡುತ್ತಾನೆಯೇ ಹೊರತು, ಸಂಹಾರಮಾಡುವುದಿಲ್ಲ. ॥೧೮೧॥

ಹೀಗೆಯೇ ಸಕಲ ಪ್ರಪಂಚಗಳನ್ನೂ ಈ ಮಹಾದೇವನು, ಪುನಃ ಪುನಃ ಸೃಷ್ಟಿಸುತ್ತಾ, ಪುನಃ ಪುನಃ ತಾನು ಸೃಷ್ಟಿಸಿದ ಲೋಕಗಳನ್ನು ಕಾಪಾಡಿಕೊಂಡು, ಪುನಃ ಅದನ್ನೇ ನಾಶಮಾಡುತ್ತಾನೆ. ॥೧೮೨॥

ಸಕಲ ಚರಾಚರಾತ್ಮಕವಾದ ಜಗತ್ತೇ ಆ ಮಹಾದೇವನಲ್ಲಿ ಅಡಗಿರುವುದರಿಂದ, ಈ ಪ್ರಪಂಚವೆಲ್ಲವೂ ಅವನ ಕಣ್ಣುಗಳೇ ಆಗಿರುವುವು. ಹಾಗೆಯೇ ಅನೇಕ ಮುಖಗಳಿಂದಲೂ ಶಿವನು ಪ್ರಕಾಶಿಸುತ್ತಿರುವನು. ಪಾಪರಹಿತನಾದ ಈ ಮಹೇಶ್ವರನು ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿರುವ ಬಾಹುಗಳಿಂದ ರಾರಾಜಿಸುತ್ತಿರುವನು. ॥೧೮೩॥

ದ್ಯಾವಾಭೂಮೀ ಚ ಜನಯನ್ನೇಕ ಏವ ಸದಾಶಿವಃ ।
ಸ ಬಾಹುಭ್ಯಾಂ ಸಂಪತತ್ರೈರ್ಧಮತ್ಯೇವ ಪುನಃ ಪುನಃ ॥೧೪೪॥

ಪ್ರಭವಶ್ಚೋದ್ಭವಶ್ಚಾಸೀದ್ರುದ್ರೋ ವಿಶ್ವಾಧಿಕೋ ಋಷಿಃ ।
ಬ್ರಹ್ಮವಿಷ್ಣ್ವೀಶದೇವಾನಾಂ ಯಃ ಸ ಏವ ಸದಾಶಿವಃ ॥೧೪೫॥

ಹಿರಣ್ಯಗರ್ಭಮೇವಾದೌ ಜನಯಾಮಾಸ ಶಂಕರಃ ।
ವಿಷ್ಣುಂ ಚ ಜನಯಾಮಾಸ ತಸ್ಮಾದ್ವಿಷ್ಣೋಃ ಪಿತಾ ಶಿವಃ ॥೧೪೬॥

ತತಶ್ಚೇಂದ್ರಮುಖಾನ್ದೇವಾನ್ ಜನಯಾಮಾಸ ಶಂಕರಃ ।
ತತೋ ಭೂಮಿಂ ತತೋ ವಾಯುಂ ತತೋ ಗಗನಮೀಶ್ವರಃ॥೧೪೭॥

ತತೋ ನಾನಾವಿಧಾನ್ ಜೀವಾನ್ಸಸರ್ಜೋಮಾಮಹೇಶ್ವರಃ ।
ತತಃ ಸಮುದ್ರಾನ್ಸರಿತೋ ಗಿರೀನಪ್ಯೋಷಧೀನ್ಪರಃ ॥೧೪೮॥

ಸದಾಶಿವನೊಬ್ಬನೇ ಈ ಭೂಮ್ಯಂತರಿಕ್ಷಗಳನ್ನು ನಿರ್ಮಿಸಿ, ಪುನಃ ಪುನಃ ಅವುಗಳನ್ನು ತನ್ನ ಬಾಹುಗಳಿಂದ ನಾಶವಾಗುವಂತೆ ಮಾಡುತ್ತಾನೆ. ||೧೪೪||

ಜಗಚ್ಛ್ರೇಷ್ಠನಾದ, ತತ್ವವನ್ನರಿತ ಆ ರುದ್ರನೊಬ್ಬನೇ ಬ್ರಹ್ಮ, ವಿಷ್ಣು, ಈಶ್ವರ, ಮುಂತಾದ ದೇವತೆಗಳಿಗೆಲ್ಲರಿಗೂ, ಉತ್ಪತ್ತಿ ಕಾರಣನೂ, ಅವರವರ ಪ್ರಭಾವಗಳಿಗೆ ಆಶ್ರಯನೂ ಆಗಿರುವನು. ||೧೪೫||

ಆ ಶಂಕರನು, ಮೊದಲು ಹಿರಣ್ಯಗರ್ಭನೆನಿಸಿದ ಬ್ರಹ್ಮನನ್ನೇ ನಿರ್ಮಿಸಿದನು. ಹೀಗೆಯೇ ವಿಷ್ಣುವನ್ನೂ ಕೂಡ ಸೃಷ್ಟಿಸಿರುವನು. ಆದುದರಿಂದಲೇ ಶಿವನು ವಿಷ್ಣುವಿನ ತಂದೆಯು. ||೧೪೬||

ಅನಂತರ, ಇಂದ್ರನೇ ಮೊದಲಾದ ದೇವತೆಗಳನ್ನೂ, ಆಮೇಲೆ ಭೂಮಿ, ವಾಯು, ಅಂತರಿಕ್ಷ, ಇವುಗಳನ್ನೂ ಈ ಪರಮೇಶ್ವರನು ಕ್ರಮವಾಗಿ ನಿರ್ಮಿಸಿದನು. ಆಮೇಲೆ, ನಾನಾವಿಧವಾದ ಜೀವರಾಶಿಗಳನ್ನೂ ಆ ಉಮಾಮಹೇಶ್ವರನು ನಿರ್ಮಿಸಿ, ಅನಂತರ, ಸಮುದ್ರಗಳು, ನದಿಗಳು, ಬೆಟ್ಟಗಳು, ಮತ್ತು ಜ್ಯೋತಿರ್ಲತೆಗಳು, ಇವುಗಳನ್ನು ಸೃಷ್ಟಿಸಿದನು. ||೧೪೭-೧೪೮||

ಯ ಏವ ನಿಷ್ಕಲಃ ಶಾಂತೋ ನಿರವದ್ಯೋ ನಿರಂಜನಃ ।
ಸ ಏವೋಮಾಸಮೇತಃ ಸನ್ಮೃತ್ಯುಂ ಜಯತಿ ಹಂತಿ ಚ ॥೧೮೯॥

ತತಃ ಪರಂ ಬ್ರಹ್ಮ ಪರಂ ಬೃಹಂತಂ ಸಾಂಬಮೇವ ಹಿ ।
ಯಥಾ ನಿಕಾಯಂ ಭೂತೇಷು ಗೂಢಂ ಸರ್ವೇಷು ಸರ್ವದಾ ॥೧೯೦॥

ಏಕ ಏವ ಹಿ ರುದ್ರೋಽಯಂ ವಿಶ್ವಸ್ಯ ಪರಿವೇಷ್ಟಿತಃ ।
ಜ್ಞಾತ್ವಾ ತಮೀಶಮಮೃತಾಃ ಭವಂತ್ಯೇವ ಸದಾಶಿವಂ ॥೧೯೧॥

ಮಹಾಂತಮೇತಂ ಪುರುಷಂ ಪರಸ್ತಾತ್ತಮಸಃ ಪರಂ ।
ಆದಿತ್ಯವರ್ಣಂ ವೇದಾಶ್ಚ ನ ಜಾನಂತ್ಯೇವ ಶಂಕರಂ ॥೧೯೨॥

ಶಿವಮೇವಂ ವಿದಿತ್ವಾತಿಮೃತ್ಯುಮೇತಿ ತಮಾತ್ಮವಾನ್ ।
ನ ವಿದ್ಯತೇಽಯನಾಯಾಸ್ಯ ಚಾನ್ಯಃ ಪಂಥಾ ಶಿವಂ ವಿನಾ ॥೧೯೩॥

ಕಲ್ಮಷರಹಿತನೂ, ಶಾಂತಸ್ವಭಾವವುಳ್ಳವನೂ, ನಿರ್ದುಷ್ಟನೂ, ನಿರ್ಲಿಪ್ತನೂ, ಆದ ಆ ಉಮಾರಮಣನೇ ಮೃತ್ಯುವನ್ನು ಜಯಿಸುತ್ತಲೂ, ಮತ್ತು ಸಂಹರಿಸುತ್ತಲೂ ತನ್ನ ಲೀಲೆಯನ್ನು ತೋರ್ಪಡಿಸುವನು. ॥೧೮೯॥

ಸರ್ವಶ್ರೇಷ್ಠನೂ, ದೊಡ್ಡ ಆಕಾರದಿಂದ ಕೂಡಿದವನೂ, ವ್ಯಾಪಕನಾಗಿರುವನೂ ಆ ಅಂಬಿಕಾರಮಣನೇ. ಪರಬ್ರಹ್ಮನು, ಸಕಲ ಭೂತಗಳಿಗೂ ಮನೆಯಂತೆ ಆಶ್ರಯನಾಗಿ, ಎಲ್ಲರಲ್ಲಿಯೂ ಗೂಢವಾಗಿ ಅಡಗಿ ಯಾವಾಗಲೂ ತೋರುತ್ತಿರುವನು. ಆ ರುದ್ರನೊಬ್ಬನೇ ಈ ಪ್ರಪಂಚವನ್ನೆಲ್ಲಾ ವ್ಯಾಪಿಸಿರುವನು. ಈರೀತಿಯಾಗಿ ಸರ್ವೇಶ್ವರನಾದ ಆ ಸದಾಶಿವನನ್ನು ತಿಳಿದ ಮಾನವರು ದೇವತೆಗಳಾಗುವರು. ॥೧೯೦-೧೯೧॥

ಮಹಾಪುರುಷನಾದ ಈ ಮಹೇಶ್ವರನು, ಪಶ್ಚಿಮ ದಿಕ್ಕಿನಲ್ಲಿರುವ ಕತ್ತಲೆಗಿಂತಲೂ ಶ್ರೇಷ್ಠನಾದವನು. ಸೂರ್ಯನಂತೆ ಶುಭ್ರವಾದ ಬಣ್ಣವುಳ್ಳವನು. ಇಂತಹ ಸ್ವರೂಪವುಳ್ಳ ಈ ಶಂಕರನನ್ನು ವೇದಗಳೂ ಸಹ ತಿಳಿಯಲಾರವು. ॥೧೯೨॥

ಈರೀತಿಯಾಗಿ ಪರಶಿವನ ತತ್ವವನ್ನು ತಿಳಿದು, ಆತ್ಮಜ್ಞಾನಿಯಾದವನು ಮೃತ್ಯುವನ್ನೇ ಜಯಿಸುವನು. ಆ ಪರಶಿವನನ್ನು ಆರಾಧಿಸದೇ ಇರುವ ಮಾನವನು ಉದ್ಧಾರವಾಗುವ ಬೇರೆ ಮಾರ್ಗವೇ ಇಲ್ಲವು. ॥೧೯೩॥

ಯಸ್ಮಾತ್ಪರಂ ನಾಸ್ತಿ ಪರಂ ಶಿವಾತ್ಸರ್ವೋತ್ತಮಾತ್ತತಃ ।
ನಾಸ್ತಿ ಕಶ್ಚಿಚ್ಛಿವಾಜ್ಜ್ಯಾಯಾನ್ನಾಣೀಯೋSತಸ್ತಮರ್ಚಯೇತ್ ॥೧೯೪॥

ತೇನ ಪೂರ್ಣಮಿದಂ ಸರ್ವಂ ಪುರುಷೇಣ ಶಿವೇನ ಹಿ ।
ತತೋ ಯದುತ್ತರತರಂ ತದರೂಪಮನಾಮಯಂ ॥೧೯೫॥

ಯ ಏವಂ ವಿದುರೀಶಾನಮಮೃತಾಸ್ತೇ ಭವಂತಿ ಹಿ ।
ದುಃಖಮೇವಾಭಿಯಾಂತ್ಯನ್ಯೇ ಶಿವಧ್ಯಾನಪರಾಙ್ಮುಖಾಃ ॥೧೯೬॥

ಸರ್ವಾನನಶಿರೋಗ್ರೀವಃ ಸರ್ವಭೂತಗುಹಾಶ್ರಯಃ ।
ಸರ್ವವ್ಯಾಪೀ ಚ ಭಗವಾಂಸ್ತಸ್ಮಾತ್ಸರ್ವಗತಃ ಶಿವಃ ॥೧೯೭॥

ಸರ್ವೋತ್ತಮನಾದ ಆ ಪರಶಿವನಿಗಿಂತಲೂ ಶ್ರೇಷ್ಠವಾದ ವಸ್ತುವೇ ಇಲ್ಲ. ಆ ಶಿವನಿಗಿಂತಲೂ ದೊಡ್ಡವನೂ, ಮತ್ತು ಚಿಕ್ಕವನೂ ಯಾರೂ ಇರುವುದಿಲ್ಲ. (ಅಂದರೆ, ಸಕಲ ಜೀವರಾಶಿಗಳಲ್ಲಿಯೂ ನೆಲಸಿರುವುದರಿಂದ ಅವನಿಗಿಂತಲೂ ಚಿಕ್ಕವನಾಗಲೀ ದೊಡ್ಡವನಾಗಲೀ ಅವನೇ ಆಗಬೇಕೇ ಹೊರತು, ಬೇರೆ ಯಾರೂ ಬರುವುದಿಲ್ಲ.) ಆದ್ದರಿಂದ ಅಸದೃಶವಾದ ಮಹಿಮೆಯುಳ್ಳ ಆ ಪರಶಿವನನ್ನು ಸರ್ವದಾ ಪೂಜಿಸಬೇಕು. ॥೧೯೪॥

ಆ ಪರಮಪುರುಷನಾದ ಶಿವನಿಂದಲೇ ಈ ಸಕಲ ಜಗತ್ತೂ ಪರಿಪೂರ್ಣವಾಗಿ ವ್ಯಾಪಿಸಿದೆ. ಅವನಿಗಿಂತಲೂ ಮುಂದಿರುವುದು ನಿರ್ಗುಣಸ್ವರೂಪವಾದ ಆ ಪರಶಿವನ ರೂಪವಿಲ್ಲದಿರುವಿಕೆಯು, (ಅಂದರೆ, ಅವನೇ ಶ್ರೇಷ್ಠನು, ಅವನಿಗಿಂತಲೂ ಶ್ರೇಷ್ಠನಾಗಿರುವನೂ ಅವನೇ ಹೊರತು ಬೇರೆ ಯಾರೂ ಇಲ್ಲವೆಂದು ತಾತ್ಪರ್ಯ.) ॥೧೯೫॥

ಈರೀತಿಯಾಗಿ ಆ ಪರಶಿವನನ್ನು ತಿಳಿಯುವವರು ದೇವತೆಗಳಾಗುವರು. (ಮರಣವನ್ನು ಹೊಂದುವುದಿಲ್ಲವು.) ಹಾಗಲ್ಲದೇ ಆ ಪರಶಿವನ ಧ್ಯಾನವನ್ನು ಮಾಡದೇ ಪರಾಙ್ಮುಖರಾಗಿರುವರಿಗೆ ಯಾವಾಗಲೂ ದುಃಖವೇ ಒದಗುವುದು. ॥೧೯೬॥

ಎಲ್ಲಾ ಜೀವರಾಶಿಗಳ, ಮುಖ, ತಲೆ, ಕೊರಳು, ಇವುಗಳನ್ನುಳ್ಳವನೂ, ಸಕಲ ಭೂತಗಳಿಗೂ ಗುಹೆಯಂತೆ ಆಶ್ರಯನೂ, ಸರ್ವವ್ಯಾಪಿಯೂ, ಭಗವಂತನೂ ಆದ ಪರಶಿವನು, ಎಲ್ಲಾ ಜೀವರಾಶಿಗಳಲ್ಲಿಯೂ ಅಡಗಿರುವನು. ॥೧೯೭॥

ಮಹಾನ್ಪ್ರಭುರ್ವೈ ಪುರುಷಃ ಸರ್ವಸ್ಯೈಷ ಪ್ರವರ್ತಕಃ ।
ಸುನಿರ್ಮಲಮಿದಂ ಶಾಂತಮೀಶಾನೋ ಜ್ಯೋತಿರವ್ಯಯಃ ॥೧೯೮॥

ಅಂತರಾತ್ಮಾಂಗುಷ್ಠಮಾತ್ರಃ ಪುರುಷೋಽಯಂ ಸದಾಶಿವಃ ।
ಯ ಏವಂ ವಿದುರೀಶಾನಮಮೃತಾಸ್ತೇ ಭವಂತಿ ಹಿ ॥೧೯೯॥

ಸದಾ ಮನೀಷಾಮನಸಾ ಹಿ ಕ್ಲೃಪ್ತಃ ಸದಾಶಿವಃ ।
ಯ ಏವಂ ವಿದುರೀಶಾನಮಮೃತಾಸ್ತೇ ಭವಂತಿ ಹಿ ॥೨೦೦॥

ಸರ್ವತಃ ಪಾಣಿಪಾದಂ ತತ್ಸರ್ವತೋಽಕ್ಷಿಶಿರೋಮುಖಂ ।
ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥೨೦೧॥

ಸರ್ವಸಮರ್ಥನೆನಿಸಿದ ಆ ಮಹಾಪುರುಷನು ಎಲ್ಲಕ್ಕೂ ಪ್ರವರ್ತಕನಾಗಿರುವನು. ತುಂಬಾ ಪರಿಶುದ್ಧನೂ, ಶಾಂತನೂ, ಜ್ಯೋತಿಃಸ್ವರೂಪನೂ ಆದ ಈಶ್ವರನು ನಾಶರಹಿತನು. ॥೧೯೮॥

ಸಕಲ ಪ್ರಾಣಿಗಳ ಶರೀರದಲ್ಲಿಯೂ ಅಂತರಂಗಸ್ವರೂಪನಾಗಿ ನೆಲಸಿರುವ ಈ ಪರಮಪುರುಷನು, ನಿತ್ಯಮಂಗಳ ವಿಗ್ರಹನು. ಈ ಮಹಾನುಭಾವನು ಸಕಲ ಬ್ರಹ್ಮಾಂಡವನ್ನೇ ತನ್ನ ಶರೀರದಲ್ಲಿ ಹುದುಗಿಸಿಟ್ಟುಕೊಂಡಿದ್ದರೂ ತಾನು ಮಾತ್ರ ಅಂಗುಷ್ಠಮಾತ್ರ ಪ್ರಮಾಣದ ಜಾಗದಲ್ಲಿ ಇರುವನು. ಈರೀತಿಯಾಗಿ ಈಶ್ವರಸ್ವರೂಪವನ್ನು ತಿಳಿದವರು ಮರಣವಿಲ್ಲದ ದೇವತಾಸ್ವರೂಪವನ್ನು ಹೊಂದುತ್ತಾರೆ. ॥೧೯೯॥

ಯಾವಾಗಲೂ ಬುದ್ಧಿಪೂರ್ವಕವಾದ ಮನಸ್ಸಿನಿಂದ ಆ ಸದಾಶಿವನನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ನಿರಂತರವೂ ಧ್ಯಾನಮಾಡಬೇಕು. ಆ ಪರಶಿವನ ಸ್ವರೂಪವನ್ನು ಹೀಗೆ ಅರಿತವರು, ದೇವತೆಗಳಾಗುವರು. (ಅಥವಾ, ಮರಣವನ್ನು ಹೊಂದದೆ ಶಾಶ್ವತವಾಗಿರುವರು.) ॥೨೦೦॥

ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿರುವ, ಕೈ, ಕಾಲು, ಕಣ್ಣು, ತಲೆ, ಮುಖ, ಕಿವಿ, ಇವುಗಳಿಂದ ಕೂಡಿರುವ ಆ ಮಹಾದೇವನು, ಈ ಬ್ರಹ್ಮಾಂಡವನ್ನೆಲ್ಲಾ ವ್ಯಾಪಿಸಿ ನೆಲಸಿರುವನು. ॥೨೦೧॥

ಸರ್ವೇಂದ್ರಿಯಗುಣಾಭಾಸಂ ಸರ್ವೇಂದ್ರಿಯವಿವರ್ಜಿತಂ।
ಸರ್ವಸ್ಯ ಪ್ರಭುಮೀಶಾನಂ ಸರ್ವಸ್ಯ ಶರಣಂ ಸುಹೃತ್ ॥೨೦೨॥

ನವದ್ವಾರೇ ಪುರೇ ದೇಹೇ ಹಂಸೋ ಲೀಲಾಯತೇ ಬಹಿಃ।
ವಶೀ ಸರ್ವಸ್ಯ ಭೂತಸ್ಯ ಸ್ಥಾವರಸ್ಯ ಚರಸ್ಯ ಚ ॥೨೦೩॥

ಅಪಾಣಿಪಾದೋ ಜವನೋ ಗೃಹೀತಾ
ಪಶ್ಯತ್ಯಚಕ್ಷುಃ ಸ ಶೃಣೋತ್ಯಕರ್ಣಃ।
ಸ ವೇತ್ತಿ ಸರ್ವಂ ನ ಚ ತಸ್ಯಾಽಸ್ತಿ ವೇತ್ತಾ
ತಮಾಹುರಗ್ರ್ಯಂ ಪುರುಷಂ ಮಹಾಂತಂ ॥೨೦೪॥

ಎಲ್ಲಾ ಇಂದ್ರಿಯಗಳ ಗುಣಗಳಾದ, ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವುಗಳಂತೆ ತೋರುತ್ತಿರುವವನೂ, ಚರ್ಮ, ಕಣ್ಣು, ಕಿವಿ, ನಾಲಿಗೆ, ಮೂಗು, ಮೊದಲಾದ ಇಂದ್ರಿಯಗಳಿಂದ ವಿಹೀನನೂ, ಸಕಲ ಜಗತ್ತಿಗೂ ಸ್ವಾಮಿಯಾದವನೂ, ಆದ ಈಶ್ವರನು, ಎಲ್ಲರಿಗೂ ರಕ್ಷಕನೂ, ಸ್ನೇಹಿತನೂ, ಆಗಿರುವನು. ॥೨೦೨॥

ಒಂಭತ್ತು ಬಾಗಿಲುಳ್ಳ ದೇಹವೆಂಬ ಪಟ್ಟಣದಲ್ಲಿ, ಆ ಪರಮ ಪುರುಷನು ಹಂಸಪಕ್ಷಿಯಂತೆ ಒಳಗೂ ಹೊರಗೂ ಲೀಲೆಯಿಂದ ವಿಹರಿಸುತ್ತಿರುವನು. ಆ ಮಹಾನುಭಾವನು, ಸ್ಥಾವರ ಜಂಗಮಾತ್ಮಕವಾದ ಈ ಸಕಲ ಜಗತ್ತುಗಳನ್ನೂ ತನ್ನ ಅಧೀನವನ್ನಾಗಿ ಮಾಡಿಕೊಂಡಿರುವನು. ॥೨೦೩॥

ಆ ಮಹಾಪುರುಷನು, ಕಾಲುಗಳಿಲ್ಲದಿದ್ದರೂ, ವೇಗವಾಗಿ ಸಂಚರಿಸುವನು. ಕೈಗಳಿಲ್ಲದಿದ್ದರೂ ಬೇಕಾದುದನ್ನು ಗ್ರಹಣಮಾಡುವನು. ಕಣ್ಣಿಲ್ಲದಿದ್ದರೂ ನೋಡುವನು. ಕಿವಿಯಿಲ್ಲದಿದ್ದರೂ ಕೇಳುವನು. ತಾನು ಸಕಲ ವಿಚಾರವನ್ನು ತಿಳಿದರೂ, ಅವನು ಮತ್ತೊಬ್ಬರಿಗೆ ಗೋಚರವಾಗುವುದಿಲ್ಲ. ಆ ಮಹಾಪುರುಷನು ಎಲ್ಲರಿಗಿಂತಲೂ ಅಗ್ರಗಣ್ಯನೂ ಸರ್ವೋತ್ತಮನೂ ಆಗಿರುವನೆಂದು ದೊಡ್ಡವರು ಹೇಳುತ್ತಾರೆ. ॥೨೦೪॥

ಅಣೋರಣೀಯಾನ್ಮಹತೋ ಮಹೀಯಾ
ನಾತ್ಮಾ ಗುಹಾಯಾಂ ನಿಹಿತೋಽಸ್ಯ ಜಂತೋಃ ।
ತಮಕ್ರತುಂ ಪಶ್ಯತಿ ವೀತಶೋಕೋ
ಧಾತುಃ ಪ್ರಸಾದಾನ್ಮಹಿಮಾನಮೀಶಂ ॥೨೦೫॥

ವೇದಾಹಮೇತಮಜರಂ ಪುರಾಣಂ
ಸರ್ವಾತ್ಮನಾ ಸರ್ವಗತಂ ವಿಭುತ್ವಾತ್ ।
ಜನ್ಮನಿರೋಧಂ ಪ್ರವದಂತಿ ಯಸ್ಯ
ಬ್ರಹ್ಮಾದಯೋ ಹಿ ಪ್ರವದಂತಿ ನಿತ್ಯಂ ॥೨೦೬॥

ಯ ಏಕವರ್ಣಃ ಶಕ್ತಿಯೋಗಾದ್ಯನೇಕೋ ಬಹುಧಾ ಶಿವಃ ।
ವರ್ಣಾನನೇಕಾನುಮಯಾ ಸ ಹಿತೋಽರ್ಥಾನ್ದದಾತಿ ಹಿ ॥೨೦೭॥

ಅತ್ಯಂತ ಸಣ್ಣ ಅಣು ಪದಾರ್ಥಕ್ಕಿಂತಲೂ ಚಿಕ್ಕವನಾಗಿ ತೋರುವವನೂ, ಅತಿ ದೊಡ್ಡ ಪದಾರ್ಥಕ್ಕಿಂತಲೂ ಹಿರಿದಾಗಿ ಗೋಚರಿಸುವ ಸಾಮರ್ಥ್ಯವುಳ್ಳವನೂ ಆದ ಪರಮಾತ್ಮನು, ಪ್ರಾಣಿಗಳ ಶರೀರವೆಂಬ ಗುಹೆಗಳಲ್ಲಿ ಅಡಗಿರುವನು. ಅಂತಹ ಮಹಿಮೆಯುಳ್ಳ ಪರಮೇಶ್ವರನನ್ನು ಆ ಪರಬ್ರಹ್ಮನ ಅನುಗ್ರಹದಿಂದ ಶೋಕವನ್ನು ಕಳೆದುಕೊಂಡವನು ಮಾತ್ರ ನೋಡಬಲ್ಲನು. ॥೨೦೫॥

ಮುಪ್ಪನ್ನು ಹೊಂದದವನೂ, ಪುರಾಣಪುರುಷನೂ, ವ್ಯಾಪಕನಾದುದರಿಂದ ಸಕಲ ಸ್ವರೂಪವನ್ನೂ ತಾಳಿ ಎಲ್ಲರಲ್ಲಿಯೂ ಅಡಗಿರುವವನೂ ಆದ ಆ ಮಹಾನುಭಾವನನ್ನು ನಾವು ತಿಳಿಯುವುದು ಹೇಗೆ? ಜನ್ಮವಿಲ್ಲದ ಆ ಮಹಾನುಭಾವನನ್ನು ಬ್ರಹ್ಮಾದಿ ದೇವತೆಗಳೂ ಸಹ ನಿತ್ಯನೆಂದೂ ಶಾಶ್ವತನೆಂದೂ ಹೇಳುತ್ತಿರುವರು.॥೨೦೬॥

ಆ ಮಹಾದೇವನು, ಒಬ್ಬನೇ ಆಗಿ, ಒಂದೇ ಬಣ್ಣವುಳ್ಳವನಾಗಿದ್ದರೂ, ಶಕ್ತಿಯೋಗದ ಬಲದಿಂದ (ಶಕ್ತಿಸ್ವರೂಪಿಣಿಯಾದ ಆ ದೇವಿಯ ಸಂಬಂಧದಿಂದ) ನಾನಾವಿಧವಾಗಿ, ಅನೇಕ ವರ್ಣಗಳುಳ್ಳ ಪದಾರ್ಥಗಳನ್ನು ಉಮಾದೇವಿಯೊಡನೆ ಯುಕ್ತನಾಗಿ ಪ್ರಪಂಚದಲ್ಲಿ ತೋರ್ಪಡಿಸುವನು. ॥೨೦೭॥

ಏಚ್ಯೈತಿ ಚಾಂತೇ ವಿಶ್ವಾತ್ಮಾ ವಿಶ್ವಮಾದೌ ಸ ಶಂಕರಃ ।
ಸಂಯುನಕ್ತಿ ಸ ನೋಽಬುದ್ಧ್ಯಾ ಶುಭಯಾ ದೇವತೋತ್ತಮಃ ॥೨೦೮॥

ಸ ಏವಾಗ್ನಿಃ ಸ ಆದಿತ್ಯಃ ಸ ವಾಯುಃ ಸ ತು ಚಂದ್ರಮಾಃ ।
ಶುದ್ಧಬ್ರಹ್ಮ ಸ ಏವೇಶಃ ಸ ಚಾಪಃ ಸಃ ಪ್ರಜಾಪತಿಃ ॥೨೦೯॥

ಸ್ತ್ರೀರೂಪಃ ಪುರುಷಾಕಾರಃ ಸರ್ವಾಕಾರಃ ಸದಾಶಿವಃ ।
ಕುಮಾರಾತ್ಮಾ ಕುಮಾರ್ಯಾತ್ಮಾ ಸರ್ವಾತ್ಮಾ ವಿಶ್ವತೋಮುಖಃ ॥೨೧೦॥

ನೀಲೋ ಗೌರಶ್ಚ ಹರಿತೋ ಲೋಹಿತಾಕ್ಷಃ ಸದಾಶಿವಃ ।
ನಿರ್ಮಲೋ ನಿಯತೋ ಯಂತಾ ನಿರವದ್ಯಶ್ಚಿದಾಕೃತಿಃ ॥೨೧೧॥

ಛಂದಾಂಸಿ ಯಜ್ಞಾಃ ಕ್ರತವೋ ವ್ರತಾನಿ
ಭೂತಂ ಭವ್ಯಂ ಯಚ್ಚ ವೇದಾ ವದಂತಿ ।

ಜಗತ್ಸ್ವರೂಪನಾದ ಶಂಕರನು, ಕೊನೆಯಲ್ಲಿ ಈ ಜಗತ್ತನ್ನೆಲ್ಲಾ ಹುಡುಕುತ್ತಾನೆ. (ನಾಶಮಾಡುತ್ತಾನೆ.) ಅನಂತರ ದೇವತೋತ್ತಮನಾದ ಆ ಮಹಾದೇವನೇ, ಒಳ್ಳೆಯ ಬುದ್ಧಿಯಿಂದ ಸೇರಿಸಿ ನಮ್ಮನ್ನು ಸೃಷ್ಟಿಮಾಡುತ್ತಾನೆ. ॥೨೦೮॥

ಆ ಶಿವನೇ ಅಗ್ನಿ, ಸೂರ್ಯ, ವಾಯು, ಚಂದ್ರ, ಇವರೆಲ್ಲರ ಸ್ವರೂಪವೂ ಆಗಿರುವನು. ಆ ಈಶ್ವರನೇ ಶುದ್ಧಬ್ರಹ್ಮಸ್ವರೂಪಿಯು. ನೀನೂ ಪ್ರಜಾಪತಿಯೆನಿಸಿದ ಬ್ರಹ್ಮನೂ ಅವನೇ ಆಗಿರುವಿರಿ. ॥೨೦೯॥

ಹೆಣ್ಣಿನ ಆಕೃತಿಯೂ, ಪುರುಷಾಕಾರವೂ, ಅಲ್ಲದೇ ಉಳಿದ ಎಲ್ಲಾ ಸ್ವರೂಪವೂ ಆ ಸದಾಶಿವನದೇ ಆಗಿರುವುದು. ಕುಮಾರರ ಸ್ವರೂಪನೂ, ಕುಮಾರಿಯರ ಸ್ವರೂಪನೂ, ಅಲ್ಲದೆ ಸಕಲ ಜೀವಸ್ವರೂಪನೂ, ಎಲ್ಲ ಕಡೆಯಲ್ಲಿಯೂ ವ್ಯಾಪಿಸಿರುವ ಮುಖವುಳ್ಳ ಆ ಪರಮೇಶ್ವರನೇ ಆಗಿರುವನು. ॥೨೧೦॥

ನೀಲವರ್ಣನೂ, ಶುಭ್ರವಾದ ಬಣ್ಣವುಳ್ಳವನೂ, ಹಸುರು ಬಣ್ಣದಿಂದ ಶೋಭಿಸುವವನೂ, ಕೆಂಪಾದ ಕಣ್ಣುಗಳುಳ್ಳವನೂ, ಆದ ಸದಾಶಿವನು ನಿರ್ಮಲ ಸ್ವರೂಪನು, ಶಾಶ್ವತನು, ನಿಯಮವುಳ್ಳವನು, ದೋಷರಹಿತನು ಮತ್ತು ಜ್ಞಾನ ಸ್ವರೂಪನೂ ಸಹ ಆಗಿರುವನು. ॥೨೧೧॥

ಛಂದಸ್ಸುಗಳೂ, ಯಜ್ಞಗಳೂ, ಕ್ರತುಗಳೂ, ವ್ರತಗಳೂ, ಮತ್ತು ವೇದಗಳೂ ಸಹ ಈ ಪ್ರಪಂಚವನ್ನು ಭೂತ, ಭವಿಷ್ಯದ್ವರ್ತಮಾನರೂಪವಾಗಿರುವುದೆಂದು

ತಸ್ಮಾನ್ಮಾಯೀ ಸೃಜತೇ ವಿಶ್ವಮೇತತ್ತ
ಸ್ಮಿಂಶ್ಚಾನ್ಯೋ ಮಾಯಯಾ ಸಂನಿರುದ್ಧಃ ॥೨೧೨॥

ಮಾಯಾಂ ತು ಪ್ರಕೃತಿಂ ವಿದ್ಯಾ
ನ್ಮಾಯಿನಂ ತು ಮಹೇಶ್ವರಂ ।
ತಸ್ಯಾವಯವಭೂತೈಸ್ತು
ವ್ಯಾಪ್ತಂ ಸರ್ವಮಿದಂ ಜಗತ್ ॥೨೧೩॥

ಯೋ ಯೋನಿಂ ಯೋನಿಮಧಿತಿಷ್ಠತ್ಯೇಕೋ
ಯಸ್ಮಿನ್ನಿದಂ ಸಂಚವಿಚೈತಿ ಸರ್ವಂ ।
ತಮೀಶಾನಂ ವರದಂ ದೇವಮೀಡ್ಯಂ
ನಿಚಾಯ್ಯ ಮಾಂ ಶಾಂತಿರತ್ಯಂತಮೇತಿ ॥೨೧೪॥

ಯೋ ದೇವಾನಾಂ ಪ್ರಭವಶ್ಚೋದ್ಭವಶ್ಚ
ವಿಶ್ವಾಧಿಕೋ ರುದ್ರೋ ಮಹರ್ಷಿಃ ।

ಹೇಳುತ್ತಿರುವುವು. ಆದುದರಿಂದ ಮಾಯಾಸಂಬಂಧಿಯಾಗಿ ಮಹೇಶ್ವರನು ಈ ಜಗತ್ತನ್ನೆಲ್ಲಾ ಸೃಷ್ಟಿಮಾಡುತ್ತಿರುವನು. ಅವನ ಮಾಯೆಯಿಂದಲೇ ಎಲ್ಲರೂ ಬದ್ಧರಾಗಿ ಆ ಪ್ರಪಂಚದಲ್ಲಿಯೇ ನೆಲಸಿರುವರು. ॥೨೧೨॥

ಪ್ರಕೃತಿಯೇ ಆ ಜಗದೀಶ್ವರನ ಮಾಯೆಯು. ಆ ಮಾಯೆಯನ್ನುಳ್ಳವನೇ ಜಗದೀಶ್ವರನಾದ ಮಹಾದೇವನು. ಅವನ ಅವಯವಭೂತವಾದ ಈ ಮಾಯೆಯಿಂದಲೇ ಪ್ರಪಂಚವೆಲ್ಲವೂ ವ್ಯಾಪ್ತವಾಗಿದೆ. ॥೨೧೩॥

ತಾನು ಒಬ್ಬನೇ ಆದರೂ ನಾನಾವಿಧವಾದ ಯೋನಿಗಳನ್ನು ಆಶ್ರಯಿಸಿ, ನಾನಾ ರೀತಿ ಗೋಚರಿಸುತ್ತಿರುವ ಪರಮೇಶ್ವರನಲ್ಲಿ ಈ ಸಕಲ ಪ್ರಪಂಚವೂ ಅಡಗಿರುವುದು. ಆ ಸರ್ವೇಶ್ವರನು ತನ್ನ ಭಕ್ತರಿಗೆ ಇಷ್ಟವಾದ ವರಗಳನ್ನು ಕೊಡುತ್ತಾ ಸ್ತುತ್ಯರ್ಹನಾದ ದೇವನಾಗಿರುವನು. ಇಂತಹ ಮಹಾಮಹಿಮನಾದ ಮಹಾದೇವನನ್ನು ಧ್ಯಾನ ಮಾಡಿದ ನನಗೆ ವಿಶೇಷವಾಗಿ ಶಾಂತಿಯು ದೊರೆಯುತ್ತಿದೆ. ॥೨೧೪॥

ಈ ಜಗತ್ತಿನಲ್ಲಿ ಶ್ರೇಷ್ಠನಾದ ರುದ್ರನೆಂಬ ಮಹರ್ಷಿಯು (ತತ್ವವನ್ನು ತಿಳಿದವರಲ್ಲಿ ದೊಡ್ಡವನಾದ ರುದ್ರದೇವನು) ಸಕಲ ದೇವತೆಗಳಿಗೂ ಉತ್ಪತ್ತಿ

ಹಿರಣ್ಯಗರ್ಭಂ ಜನಯಾಮಾಸ
ಜಾಯಮಾನಂ ಚ ಪಶ್ಯತ ॥೨೧೫॥

ವಿಷ್ಣುಂ ಚ ಜನಯಾಮಾಸ ಜಾಯಮಾನಂ ಚ ಪಶ್ಯತ ।
ಇಂದ್ರಂ ಚ ಜನಯಾಮಾಸ ಜಾಯಮಾನಂ ಚ ಪಶ್ಯತ ॥೨೧೬॥

ವಹ್ನಿಂ ಚ ಜನಯಾಮಾಸ ಜಾಯಮಾನಂ ಚ ಪಶ್ಯತ ।
ವಾಯುಂ ಚ ಜನಯಾಮಾಸ ಜಾಯಮಾನಂ ಚ ಪಶ್ಯತ ॥೨೧೭॥

ವರುಣಂ ಚ ಜನಯಾಮಾಸ ಜಾಯಮಾನಂ ಚ ಪಶ್ಯತ ।
ಯಮಂ ಚ ಜನಯಾಮಾಸ ಜಾಯಮಾನಂ ಚ ಪಶ್ಯತ ॥೨೧೮॥

ಲೋಕಾಂಶ್ಚ ಜನಯಾಮಾಸ ಜಾಯಮಾನಂ ಚ ಪಶ್ಯತ ।
ಯ ಈದೃಶಃ ಸರ್ವಗೋಪ್ತಾ ಸ ನೋಬುದ್ಧ್ಯಾ ಶಂಕರಃ ಸಂಯುನಕ್ತು ॥೨೧೯॥

ಯೋ ದೇವಾನಾಮಧಿಪೋ ಯಸ್ಮಿನ್ದೇವಾ ಅಧಿಶ್ರಿತಾಃ ।
ಯ ಏವ ಸರ್ವದೇವೇಶಃ ಶಂಕರಃ ಪರಮಾಗತಿಃ ॥೨೨೦॥

ಕಾರಣನು. ದೇವತೆಗಳ ಪರಿಪಾಲನೆಗೋಸ್ಕರವೇ ನಾನಾವಿಧವಾದ ರೂಪುಗಳನ್ನು ಧರಿಸಿ, ತಾನು ಜನ್ಮವೆತ್ತುವನಂತೆ ತೋರುವನು. ಈ ರುದ್ರದೇವನು ಬ್ರಹ್ಮದೇವನನ್ನು ಸೃಷ್ಟಿಸಿದನು. ಅವನು ನಾನಾರೀತಿ ಹುಟ್ಟುತ್ತಿರುವುದನ್ನು ನೋಡಿರಿ. ॥೨೧೫॥

ವಿಷ್ಣು, ಇಂದ್ರ, ಅಗ್ನಿ, ವಾಯು. ಈ ದೇವತೆಗಳನ್ನೂ ಆ ರುದ್ರದೇವನೇ ಸೃಷ್ಟಿಸಿದನು. ಅವರೆಲ್ಲರೂ ಹುಟ್ಟುವುದನ್ನು ನೀವು ನೋಡಿರಿ. ॥೨೧೬-೨೧೭॥

ವರುಣನನ್ನೂ ಯಮನನ್ನೂ ಹಾಗೆಯೇ ಸಕಲ ಲೋಕಗಳನ್ನೂ ನಿರ್ಮಿಸಿದವನು ಶಂಕರನೇ. ಅವುಗಳು ಹುಟ್ಟುತ್ತಿರುವುದನ್ನೂ ನೀವು ನೋಡಿರಿ. ಈ ರೀತಿಯಾಗಿ ಸಕಲರನ್ನೂ ರಕ್ಷಿಸುತ್ತಿರುವ ಆ ಶಂಕರನು ನನಗೆ ಒಳ್ಳೆಯ ಬುದ್ಧಿಯುಂಟಾಗುವಂತೆ ಅನುಗ್ರಹಿಸಲಿ. ॥೨೧೮-೨೧೯॥

ಎಲ್ಲಾ ದೇವತೆಗಳಿಗೂ ಅಧಿಪತಿಯಾಗಿ, ದೇವತೆಗಳಿಗೆಲ್ಲಾ ಆಶ್ರಯನಾಗಿರುವ, ಸಕಲ ದೇವತೋತ್ತಮನಾದ ಆ ಲೋಕಶಂಕರನೇ, ನಮಗೆ ಉತ್ಕೃಷ್ಟವಾದ ಗತಿಯಾಗಿರುವನು. ॥೨೨೦॥

ಯಸ್ಮಿನ್ಸದಾಶಿವೇ ದೇವಾಃ ದ್ವಿಪದಶ್ಚ ಚತುಷ್ಪದಃ ।
ತಸ್ಮೈ ದೇವಾಯ ಹವಿಷಾ ಶಂಕರಾಯಾಮಿತಾತ್ಮನೇ ॥೨೨೧॥

ಸೂಕ್ಷ್ಮಾತಿಸೂಕ್ಷ್ಮಂ ಕಲಿಲಸ್ಯ ಮಧ್ಯೇ
ವಿಶ್ವಸ್ಯ ಸ್ರಷ್ಟಾರಮನೇಕರೂಪಂ ।
ವಿಶ್ವಸ್ಯೇಕಂ ಪರಿವೇಷ್ಟಿತಾರಂ ಜ್ಞಾತ್ವಾ
ಶಿವಂ ಶಾಂತಿಮತ್ಯಂತಮೇತಿ ॥೨೨೨॥

ಸ ಏವ ಕಾಲೋ ಭುವನಸ್ಯ ಗೋಪ್ತಾ
ವಿಶ್ವಾಧಿಕಃ ಸರ್ವಭೂತೇಷು ಗೂಢಃ ।
ಯಸ್ಮಿನ್ಯುಕ್ತಾ ಬ್ರಹ್ಮರ್ಷಯೋ ದೇವತಾಶ್ಚ
ತಮೇವಂ ಜ್ಞಾತ್ವಾ ಮೃತ್ಯುಪಾಶಂ ಛಿನತ್ತಿ ॥೨೨೩॥

ನಿತ್ಯಮಂಗಳಸ್ವರೂಪನಾದ ಆ ಶಂಕರನಲ್ಲಿ ದೇವತೆಗಳೂ, ಎರಡು ಕಾಲು ಮತ್ತು ನಾಲ್ಕು ಕಾಲಿನ ಪ್ರಾಣಿಗಳೂ ಸಹ (ಅಂದರೆ ಮಾನವರೂ ಪಶುಪಕ್ಷ್ಯಾದಿಗಳೂ ಸಹ) ಅಡಗಿರುವರು. ಅಂತಹ ಅಪರಿಮಿತವಾದ ಸ್ವರೂಪವುಳ್ಳ ಶಂಕರದೇವನನ್ನು ಹವಿಸ್ಸಿನಿಂದ ತೃಪ್ತಿಪಡಿಸುವೆನು. ॥೨೨೧॥

ತಾವರೆಯ ಮೊಗ್ಗಿನ ಮಧ್ಯದಲ್ಲಿರುವ ಕುಸುಮದಂತೆ ಅತ್ಯಂತಸೂಕ್ಷ್ಮವಾಗಿ ತೋರುತ್ತಾ, ನಾನಾ ವಿಧವಾದ ಆಕಾರವನ್ನು ಹೊಂದಿ, ಈ ಸಕಲ ಪ್ರಪಂಚವನ್ನೂ ಸೃಷ್ಟಿ ಮಾಡುವ ಆ ವಿಶ್ವೇಶ್ವರನು ಸಕಲ ಜಗತ್ತನ್ನೂ ಸುತ್ತಿ, ವ್ಯಾಪಿಸಿರುವನು. ಈ ರೀತಿಯಾಗಿ ಪರಶಿವನ ಸ್ವರೂಪವನ್ನು ತಿಳಿಯುವವನು ಸ್ಥಿರವಾದ ಶಾಂತಿಯನ್ನು ಪಡೆಯುವನು. ॥೨೨೨॥

ಕಾಲಸ್ವರೂಪನಾದ ಅವನೇ ಈ ಪ್ರಪಂಚವನ್ನೆಲ್ಲಾ ರಕ್ಷಣೆಮಾಡುತ್ತಿರುವನು. ಜಗಚ್ಛ್ರೇಷ್ಠನಾದ ಆ ಮಹೇಶನೇ ಸಕಲ ಭೂತಗಳಲ್ಲಿಯೂ ರಹಸ್ಯವಾಗಿ ಅಡಗಿರುವನು. ಆ ಮಹಾದೇವನಲ್ಲಿ ಹಿಂದೆ ಹೇಳಿದ ಬ್ರಹ್ಮರ್ಷಿಗಳೂ, ದೇವತೆಗಳೂ ಕೂಡ ಅನನ್ಯಮನಸ್ಕರಾಗಿರುವರು. ಈ ರೀತಿಯಾದ ಆ ಮಹಾದೇವನ ಸ್ವರೂಪವನ್ನು ಚೆನ್ನಾಗಿ ತಿಳಿದವನು ಈ ಮೃತ್ಯುಪಾಶವನ್ನು ಕತ್ತರಿಸಿ ಸುಖಿಯಾಗುತ್ತಾನೆ. ॥೨೨೩॥

ಘೃತಾತ್ಪರಂ ಮಂಡಮಿವಾತಿಸೂಕ್ಷ್ಮಂ
ಜ್ಞಾತ್ವಾ ಶಿವಂ ಸರ್ವಭೂತೇಷು ಗೂಢಂ ।
ವಿಶ್ವಸ್ಯೈಕಂ ಪರಿವೇಷ್ಟಿತಾರಮೀಶಂ
ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ ॥೨೨೪॥

ಯ ಏವ ದೇವೋ ವಿಶ್ವಕರ್ಮಾ ಮಹಾತ್ಮಾ
ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ ।
ಹೃದಾ ಮನೀಷಾ ಮನಸಾಭಿಕ್ಲ್ಪಪ್ತಾ
ಯ ಏವಂ ವಿದುರಮೃತಾಸ್ತೇ ಭವಂತಿ ॥೨೨೫॥

ಯದಾ ತಮಸ್ತಂ ನ ದಿವಾ ನ ರಾತ್ರಿ
ರ್ನಸನ್ನಚಾಸಂಛಿವ ಏವ ಕೇವಲಃ ।
ತದಕ್ಷರಂ ತತ್ಸವಿತುರ್ವರೇಣ್ಯಂ
ಪ್ರಜ್ಞಾ ಚ ತಸ್ಮಾತ್ಪ್ರಸೃತಾ ಪುರಾಣೀ ॥೨೨೬॥

ಹಾಲಿನ ಕೆನೆಯು ಗರಣೆಗಿಂತಲೂ ಶ್ರೇಷ್ಠವಾಗಿ ಅತಿ ಸೂಕ್ಷ್ಮವಾಗಿರುವಂತೆ ಸಕಲ ಭೂತಗಳಲ್ಲಿಯೂ ಅತ್ಯಂತ ಸೂಕ್ಷ್ಮವಾಗಿ ಗುಟ್ಟಾಗಿ ಅಡಗಿರುವ ಆ ಪರಶಿವನನ್ನು ತಿಳಿದು, ಜಗತ್ತಿಗೆಲ್ಲಾ ಒಬ್ಬನೇ ಪ್ರಭುವಾದ ಮತ್ತು ಸಕಲ ಪ್ರಪಂಚವನ್ನೆಲ್ಲಾ ವ್ಯಾಪಿಸಿರುವ ಈಶ್ವರನನ್ನು ಅರಿತವನು ಎಲ್ಲಾ ದುಃಖಮಯವಾದ ಪಾಶಗಳಿಂದಲೂ ಬಿಡುಗಡೆ ಹೊಂದುತ್ತಾನೆ. ॥೨೨೪॥

ಜಗತ್ಸೃಷ್ಟಿ, ಸ್ಥಿತಿ, ಸಂಹಾರರೂಪವಾದ ಕಾರ್ಯದಲ್ಲಿ ದಕ್ಷನಾದ ಆ ಮಹಾಪುರುಷನು ಸಕಲ ಜನಗಳ ಮನಸ್ಸಿನಲ್ಲಿಯೂ ನೆಲಸಿರುವನು. ಆ ಮಹೇಶ್ವರನನ್ನು ಹೃದಯದಿಂದಲೂ, ಬುದ್ಧಿಯಿಂದಲೂ, ಮನಸ್ಸಿನಿಂದಲೂ ಈ ರೀತಿಯಾಗಿ ಧ್ಯಾನಿಸುತ್ತಾ ತಿಳಿಯುವವರು, ನಾಶವಿಲ್ಲದ ಶಾಶ್ವತವಾದ ಸದ್ಗತಿಯನ್ನು ಪಡೆಯುವರು. ॥೨೨೫॥

ಯಾವಾಗಲೂ ಅವನಿಗೆ ಅಸ್ತಮಯವೂ, ಹಗಲೂ, ರಾತ್ರಿಯೂ, ವಸ್ತುಸ್ಥಿತಿಯೂ ಒಂದೇ ರೀತಿಯಾಗಿರುವುದು. ಆ ಮಹಾಪುರುಷನು ಯಾವಾಗಲೂ ಕೇವಲ ಮಂಗಳ ಸ್ವರೂಪನೇ ಆಗಿರುವನು. ನಾಶರಹಿತವಾದ ಆ ಪರಶಿವನ ಸ್ವರೂಪವು ವಾಕ್ಕು ಮತ್ತು ಮನಸ್ಸು ಇವುಗಳಿಗೆ ಗೋಚರವಾಗದುದಾಗಿ, ಸಕಲ ಶ್ರುತಿಗಳಲ್ಲಿಯೂ

ನೈನಮೂರ್ಧ್ವಂ ನ ತಿರ್ಯಂಚಂ ನ ಮಧ್ಯೇ ಪರಿಜಗ್ರಭತ್ ।
ನ ತಸ್ಯ ಪ್ರತಿಮಾಽಪ್ಯಸ್ತಿ ತಸ್ಯ ನಾಮ ಮಹದ್ಯಶಃ ॥೨೨೭॥

ನ ಸಂದೃಶೇ ತಿಷ್ಠತಿ ರೂಪಮಸ್ಯ
ನ ಚಕ್ಷುಷಾ ಪಶ್ಯತಿ ಕಶ್ಚನೈನಂ ।
ಹೃದಾ ಮನೀಷಾ ಮನಸಾಽಭಿಕ್ಲಪ್ತೋ
ಯ ಏನಂ ವಿದುರಮೃತಾಸ್ತೇ ಭವಂತಿ ॥೨೨೪॥

ನಿಷ್ಕಲಂ ನಿರ್ಗುಣಂ ಶಾಂತಂ ನಿರವದ್ಯಂ ನಿರಂಜನಂ ।
ಅಮೃತಸ್ಯ ಪರಂ ಸೇತುಂ ದಗ್ಧೇಂಧನಮಿವಾನಲಂ ॥೨೨೯॥

ಪ್ರಸಿದ್ಧವಾಗಿ ಸೃಷ್ಟಿಕರ್ತನಾದ ಆ ಪರಮೇಶ್ವರನ ಆತ್ಮಭೂತವಾದ ಸ್ಥಾನವಾಗಿರುವುದು. ಆ ಪರಮಪುರುಷನಿಂದ ಪ್ರಾಚೀನಕಾಲದಿಂದ ಪ್ರಜ್ಞೆಯು (ಸ್ಥಿರಪ್ರಜ್ಞೆ) ಹರಡುತ್ತಾ ಬಂದಿರುವುದು. ॥೨೨೬॥

ಈ ಮಹಾಪುರುಷನು ಮೇಲುಭಾಗದಲ್ಲಿಯೂ, ಅಡ್ಡಡ್ಡಲಾಗಿಯೂ, ಮಧ್ಯದಲ್ಲಿಯೂ ಪ್ರತ್ಯೇಕವಾಗಿ ತೋರುವುದಿಲ್ಲ. (ಅಂದರೆ ಸರ್ವವ್ಯಾಪಕನಾಗಿರುವ ಆ ಮಹಾದೇವನು ಇಂತಹ ಕಡೆಯಲ್ಲಿಯೇ ಇರುವನೆಂದು ಹೇಳಲು ಸಾಧ್ಯವಿಲ್ಲವು.) ಆ ಪರಮಾತ್ಮನಿಗೆ ಒಂದು ಆಕಾರವೂ ಇಲ್ಲ. ಅವನ ಅಪಾರವಾದ ನಾಮಗಳು ಕೀರ್ತಿಯೂ ಎಲ್ಲೆಲ್ಲಿಯೂ ಕೊಂಡಾಡಲ್ಪಡುತ್ತಿರುವುವು. ॥೨೨೭॥

ಆ ಮಹಾತ್ಮನ ರೂಪವು ಗೋಚರವಾಗುವುದಿಲ್ಲ. ಯಾವ ಪುರುಷನೂ ಈ ಮಹಾನುಭಾವನನ್ನು ಕಣ್ಣಿನಿಂದ ನೋಡಲಾರನು. ಹೃದಯದಿಂದಲೂ, ಬುದ್ಧಿಯಿಂದಲೂ, ಮನಸ್ಸಿನಿಂದಲೂ, ಒಟ್ಟಿಗೆ ಆತನನ್ನು ತಿಳಿಯುವವರು ನಿಜವಾಗಿಯೂ ನಾಶವಿಲ್ಲದ ದೇವತ್ವವನ್ನು ಪಡೆಯುವರು. ॥೨೨೪॥

ಕಲಂಕವಿಲ್ಲದವನೂ, ಗುಣರಹಿತನೂ, ಶಾಂತವಾದ ಸ್ವಭಾವವುಳ್ಳವನೂ, ದೋಷಗಳಿಗೆ ಆಶ್ರಯನಾಗದವನೂ, ನಿರ್ಲಿಪ್ತನೂ, ಆದ ಆ ಪರಶಿವನು, ಅಮೃತ ಪ್ರಾಪ್ತಿಗೆ ಶ್ರೇಷ್ಠವಾದ ಸೇತುವೆಯಂತಿರುವನು. ಜಗತ್ತೆಂಬ ಕಟ್ಟಿಗೆಗೆ ಬೆಂಕಿಯಂತಿರುವನು. ಮಾನವರು, ತಮ್ಮ ಶರೀರವನ್ನು ಆವರಿಸಿರುವ ಚರ್ಮದಂತೆ ಸಕಲ ಆಕಾಶವನ್ನೂ ಯಾವಾಗ ವ್ಯಾಪಿಸುವರೋ ಆಗ ಪರಶಿವನ ಸ್ವರೂಪವನ್ನು ತಿಳಿದು

ಯದಾ ಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾಃ ।
ತದಾ ಶಿವಂ ಸುವಿಜ್ಞಾಯ ದುಃಖಸ್ಯಾಂತೋ ಭವಿಷ್ಯತಿ ॥೨೩೦॥

ಶಿವಂ ಸಾಂಬಂ ವಿದಿತ್ವೈನಂ ಬ್ರಹ್ಮನಿರ್ವಾಣಮೃಚ್ಛತಿ ॥೨೩೧॥

ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ
ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ ।
ತಮೇವ ಭಾಂತಮನುಭಾತಿ ಸರ್ವಂ
ತಸ್ಯ ಭಾಸಾ ಸರ್ವಮಿದಂ ವಿಭಾತಿ ॥೨೩೨॥

ಏಕೋ ಹಂಸೋ ಭುವನಸ್ಯಾಸ್ಯ ಮಧ್ಯೇ
ಸ ಏವಾಗ್ನಿಃ ಸಲಿಲೇ ಸನ್ನಿವಿಷ್ಟಃ ।
ತಮೇವಂ ವಿದಿತ್ವಾಽತಿಮೃತ್ಯುಮೇತಿ
ನಾನ್ಯೋ ಹೇತುರ್ವಿದ್ಯತೇ ಈಶನಾಯ ॥೨೩೩॥

ಯಾವ ವಿಧವಾದ ದುಃಖವನ್ನೂ ಹೊಂದದೇ ಸುಖವನ್ನೈದುವರು, (ಅಂದರೆ ಆಕಾಶದಂತೆ, ಪರಶಿವನು ಸಕಲ ಭೂಮಂಡಲವನ್ನೂ ವ್ಯಾಪಿಸಿರುವನೆಂಬ ತತ್ವವನ್ನರಿತವರಿಗೆ ದುಃಖವು ಮುಂದೆ ಬರದಂತೆ ನಾಶವಾಗುವುದು. ॥೨೨೯-೨೩೦॥

ಈರೀತಿಯಾಗಿ ಅಂಬಿಕಾಸಮೇತನಾದ ಆ ಮಹೇಶ್ವರನನ್ನು ತಿಳಿದವರಿಗೆ ಬ್ರಹ್ಮಸಾಯುಜ್ಯವು ದೊರೆಯುವುದು. ॥೨೩೧॥

ಆ ಪರಶಿವನ ಸಮ್ಮುಖದಲ್ಲಿ ಸೂರ್ಯ, ಚಂದ್ರ, ನಕ್ಷತ್ರ, ಈ ಮಿಂಚುಗಳು, ಇವಾವೂ ಪ್ರಕಾಶಿಸಲಾರವು. ಹೀಗಿರುವಾಗ ಅಗ್ನಿಯು ಹೇಗೆ ತಾನೇ ಅವನ ಮುಂದೆ ತನ್ನ ತೇಜಸ್ಸನ್ನು ಪ್ರಕಾಶಪಡಿಸಿಯಾನು? ಇವರೆಲ್ಲರೂ ದಿವ್ಯ ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವ ಪರಮೇಶ್ವರನನ್ನೇ ಆಶ್ರಯಿಸಿ, ಆ ಮಹಾದೇವನ ತೇಜಸ್ಸಿನಿಂದಲೇ ಬೆಳಗುತ್ತಿರುವರು. ಈ ಸಕಲ ಪ್ರಪಂಚವೂ ಆ ದೇವದೇವನ ಕಾಂತಿಯಿಂದಲೇ ಬೆಳಗುತ್ತಿರುವುದು. ॥೨೩೨॥

ಅದ್ವಿತೀಯನಾದ ಆ ಮಹಾದೇವನೊಬ್ಬನೇ ಈ ಭೂಮಂಡಲದ ಮಧ್ಯದಲ್ಲಿ ಹಂಸಪಕ್ಷಿಯಂತೆ ವಿರಾಜಿಸುತ್ತಿರುವನು. ಅವನೇ ಅಗ್ನಿಯಲ್ಲಿಯೂ, ನೀರಿನಲ್ಲಿಯೂ, ನೆಲಸಿರುವನು. ಈರೀತಿಯಾದ ಆ ಪರಮಪುರುಷನ ಸ್ವರೂಪವನ್ನು ತಿಳಿದು ನಡೆ

ಸ ವಿಶ್ವಕೃದ್ವಿಶ್ವವಿದಾತ್ಮಯೋನಿಃ
ಸ ಕಾಲಕಾಲೋ ಗುಣೀ ಸರ್ವವಿದ್ಯಃ ।
ಪ್ರಧಾನಕ್ಷೇತ್ರಜ್ಞಪತಿರ್ಗುಣೇಶಃ
ಸಂಸಾರಮೋಕ್ಷಸ್ಥಿತಿಬಂಧಹೇತುಃ ॥೨೩೪॥

ನಾತಃ ಪರಂ ವೇದ್ಯಮಚಿಂತ್ಯರೂಪಂ
ಶಿವಾಚ್ಚ ಸಾಂಬಾದದ್ವಯಾದಿತ್ಯವೈಮಿ ।
ಶಿವಾತ್ಮಕಂ ಯಚ್ಚ ಸಮಸ್ತಮೇತ
ಚ್ಛಿವಾನ್ನ ಕಿಂಚಿದ್ವ್ಯತಿರಿಕ್ತಮಸ್ತಿ ॥೨೩೫॥

ಯುವವನು ಈ ಮೃತ್ಯುಭಯವನ್ನು ಕಳೆದುಕೊಂಡು, ಸುಖಿಯಾಗುವನು. ಮಾನವನಿಗೆ ಇದಕ್ಕಿಂತಲೂ, ಸಕಲೈಶ್ವರ್ಯ ಪ್ರಾಪ್ತಿಗೆ ಬೇರೆ ಯಾವ ಕಾರಣವೂ ಇರುವುದಿಲ್ಲ. ॥೨೩೩॥

ತನ್ನ ಉತ್ಪತ್ತಿಗೆ ತಾನೇ ಕಾರಣನಾದ ಆ ಮಹಾದೇವನು ಜಗತ್ಸೃಷ್ಟಿ ಕರ್ತನು, ಜಗದ್ರಕ್ಷಣ ಧುರೀಣನು ; ಕಾಲಸ್ವರೂಪನಾದ ಯಮನಿಗೂ ಮೃತ್ಯುಸ್ವ ರೂಪನೆನಿಸಿರುವ ಈ ಮಹೇಶ್ವರನು, ಸಕಲ ವಿದ್ಯಾಜ್ಞಾನಿಯೆನಿಸಿ, ಸದ್ಗುಣಗಳಿಗೆ ನಿಧಿಯಾಗಿರುವನು. ಪ್ರಧಾನ, ಕ್ಷೇತ್ರಜ್ಞ, ಪತಿ, ಎಂಬ ನಾಮಗಳೂ ಈ ಮಹಾದೇ ವನಿಗೇ ಸಲ್ಲುವುವು. ಸಕಲ ಸದ್ಗುಣಗಳಿಗೂ ಒಡೆಯನಾದ ಈ ಮಹೇಶ್ವರನು, ಸಂಸಾರದಿಂದ ಮಾನವನಿಗೆ ಮೋಕ್ಷಪ್ರಾಪ್ತಿ, ಮತ್ತು ಅಲ್ಲಿಯೇ ಇದ್ದರೂ ಅವನ ರಕ್ಷಣೆ, ಮತ್ತು ಸಾಂಸಾರಿಕವಾದ ಬಂಧನದಿಂದ ಅವನನ್ನು ಬಿಡುಗಡೆ ಮಾಡುವುದು, ಇವೆಲ್ಲಕ್ಕೂ ತಾನೇ ಕಾರಣನಾಗಿರುವನು. ॥೨೩೪॥

ಆ ಪರಬ್ರಹ್ಮಸ್ವರೂಪನಾದ ಮಹೇಶ್ವರನ ಸ್ವರೂಪವು ಆಲೋಚನೆಗೆ ಸಿಕ್ಕದಿ ರುವುದು. ಇದಕ್ಕಿಂತಲೂ ತಿಳಿಯಬೇಕಾದ ಅಂಶವೇನೂ ಇಲ್ಲ. ಅಂಬಿಕಾರಮ ಣನೂ, ಅದ್ವಿತೀಯನೂ, ಆದ ಶಿವನಿಗಿಂತಲೂ ಶ್ರೇಷ್ಠವಾದ ವಸ್ತುವೇ ಇಲ್ಲವು ಈ ಸಕಲ ಪ್ರಪಂಚವೂ ಆ ಪರಶಿವನ ಸ್ವರೂಪವೇ ಆಗಿರುವುದಲ್ಲದೇ ಅವನಿಗಿಂತ ಬೇರೆಯಾದುದಾವುದೂ ನನಗೆ ತೋರುವುದಿಲ್ಲ. ॥೨೩೫॥

ಅವಿಜ್ಞಾಯ ಮಹಾದೇವಮಚಿಂತ್ಯವಿಭವಂ ಶಿವಂ।
ಅಸುರಾಶ್ಚಾಪಿ ಮುಹ್ಯಂತಿ ಕಿಮನ್ಯೇ ಮನುಜಾಧಮಾಃ ॥೨೩೬॥

ದ್ವೇ ಅಕ್ಷರೇ ಬ್ರಹ್ಮಪರೇ ತ್ವನಂತೇ
ವಿದ್ಯಾಽವಿದ್ಯೇ ನಿಹಿತೇ ಯಸ್ಯ ಗೂಢೇ।
ಕ್ಷರಂತ್ವವಿದ್ಯಾ ಹ್ಯಮೃತಂ ತು ವಿದ್ಯಾ
ವಿದ್ಯಾಽವಿದ್ಯಾ ಈಶತೇ ಯಸ್ತು ಸೋಽನ್ಯಃ ॥೨೩೭॥

ಮಹೇಶ್ವರೋಽಯಂ ಯಮಥೋ ನಿನೀಷತೇ
ಸ ಚೋದಯತ್ಯೇನಮಸಾಧುಕರ್ಮಣಿ।
ಯಶ್ಚೈನಮೂರ್ಧ್ವಂ ಸ ತಥೋ ನಿನೀಷತೇ
ತಂ ಸಾಧುಕರ್ಮಣ್ಯನುಸಂನಿಯೋಜತಿ ॥೨೩೮॥

ಚಿಂತಿಸಲೂ ಯೋಗ್ಯವಲ್ಲದ ವೈಭವವುಳ್ಳ ಆ ಪರಶಿವನನ್ನು ತಿಳಿಯದೇ ಎಷ್ಟೋ ಮಂದಿ ದೇವತೆಗಳೇ ಮೋಹಗೊಳ್ಳುತ್ತಿರುವರು. ಹೀಗಿರುವಾಗ ಜ್ಞಾನ ಶೂನ್ಯರಾದ ಮಿಕ್ಕ ಜನಗಳ ಪಾಡೇನು! ॥೨೩೬॥

ಶಿವನೆಂಬ ಎರಡೇ ಅಕ್ಷರಗಳು ಪರಬ್ರಹ್ಮರೂಪವಾದ ಅರ್ಥಪರವಾಗಿರುವುವು. ಅವು ಅನಂತವಾದವುಗಳು. ವಿದ್ಯಾ ಮತ್ತು ಅವಿದ್ಯೆಗಳೆಂಬೆರಡೂ ಆ ಪರಬ್ರಹ್ಮ ಸ್ವರೂಪದಲ್ಲಿ ಗೂಢವಾಗಿ ಅಡಗಿರುವುವು. ಅವಿದ್ಯೆಯು ಈಶ್ವರೀಯಜ್ಞಾನವನ್ನು ಆಚ್ಛಾದನೆಮಾಡುತ್ತದೆ. ಜ್ಞಾನ ಸ್ವರೂಪವಾದ ವಿದ್ಯೆಯು ಅಮೃತವನ್ನು (ನಾಶರಹಿತವಾದ ಬ್ರಹ್ಮಸ್ವರೂಪವನ್ನು) ಕೊಡುತ್ತದೆ. ಈ ವಿದ್ಯೆ ಮತ್ತು ಅವಿದ್ಯೆಗಳೆರಡನ್ನೂ ತನ್ನ ಸ್ವಾಧೀನದಲ್ಲಿಟ್ಟುಕೊಂಡು ಈ ಜಗತ್ತನ್ನು ನಿಯಮಿಸುವ ಶಕ್ತಿ ಪರಶಿವನಿಗೆ ಮಾತ್ರವಲ್ಲದೆ ಮತ್ತಾರಿಗೂ ಇಲ್ಲ. ॥೨೩೭॥

ಆ ಮಹಾತ್ಮನ ರೂಪವು ಯಾರಿಗೂ ಗೋಚರವಾಗುವುದಿಲ್ಲ. ಆ ಮಹೇಶ್ವರನು ಕೆಟ್ಟಮಾರ್ಗಗಳಲ್ಲಿ ಪ್ರವರ್ತಿಸುವವರನ್ನು ಹೆಚ್ಚಾದ ದುರವಸ್ಥೆಗೆ ಗುರಿಮಾಡುತ್ತಾನೆ. ಒಳ್ಳೆಯ ಮಾರ್ಗದಲ್ಲಿ ನಡೆಯುವವರನ್ನು ಅವರಲ್ಲಿಯೇ ಪ್ರೇರಿಸುತ್ತಾ ಅವರಿಗೆ ಉನ್ನತವಾದ ಸದ್ಗತಿಯನ್ನೇ ಕೊಡುತ್ತಾನೆ. ॥೨೩೮॥

ತಸ್ಮಾತ್ಕರ್ತಾ ಪ್ರಭುಃ ಸರ್ವಗಶ್ಚ
ಸರ್ವಸ್ಯಾತ್ಮಾ ಪ್ರೇರಕಃ ಸರ್ವರೂಪಃ ।
ಶಿವಃ ಸಾಂಬಃ ಸಚ್ಚಿದಾನಂದರೂಪೋ
ಧ್ಯೇಯೋ ನಿತ್ಯಂ ಮೋಕ್ಷಹೇತುರ್ನಿರೀಶಃ ॥೨೩೯॥

ಅವಮಾನ್ಯ ತಮೀಶಂ ನಿರಯಂ ಯಾಂತಿ ದುರ್ಜನಾಃ ।
ಸಂಮಾನಯಿತ್ವಾ ತಂ ದೇವಂ ಪ್ರಯಾಂತಿ ಪರಮಂ ಪದಂ ॥೨೪೦॥

ತಸ್ಯೈವ ಮಾಯಯಾ ವ್ಯಾಪ್ತಾಸ್ತಮವಿಜ್ಞಾಯ ವಸ್ತುತಃ ।
ನಾನಾವಿಧಾನಿ ದುಃಖಾನಿ ಪ್ರಾಪ್ನುವಂತಿ ನ ಸಂಶಯಃ ॥೨೪೧॥

ಪುರಾ ಕೃತಾನೇಕಧರ್ಮೋ ದಕ್ಷೋ ದಕ್ಷಪ್ರಜಾಪತಿಃ ।
ಶಿವಾನ್ಯಸುರಸಂಯುಕ್ತೋ ಯಾಗಂ ಕರ್ತುಂ ಸಮಾರಭೇ ॥೨೪೨॥

ಆದುದರಿಂದ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಕರ್ತೃವೂ, ಸರ್ವಸಮರ್ಥನೂ, ಸರ್ವವ್ಯಾಪಿಯೂ, ಸಕಲಜೀವರಾಶಿಗಳ ಆತ್ಮಸ್ವರೂಪನೂ, ಪ್ರೇರಕನೂ, ಸಕಲ ಚರಾಚರ ಪ್ರಾಣಿಗಳ ರೂಪನೂ, ಆದ ಆ ಅಂಬಿಕಾರಮಣನಾದ ಪರಶಿವನು ಸಚ್ಚಿದಾನಂದ ಸ್ವರೂಪನಾಗಿರುವನು. ಮೋಕ್ಷಪ್ರಾಪ್ತಿಗೆ ಹೇತುವಾದ ಆ ಗಿರಿಜಾರಮಣನನ್ನೆ ನಿತ್ಯವೂ ಧ್ಯಾನಮಾಡಬೇಕು. ॥೨೩೯॥

ದುಷ್ಟ ಜನಗಳು ಆ ಪರಮಪುರುಷನಾದ ಶಿವನನ್ನು ಅವಮಾನಗೊಳಿಸಿ, ನರಕವನ್ನು ಹೊಂದುವರು. ಆದರೆ ಮಹಾದೇವನನ್ನು ಗೌರವದಿಂದ ಪೂಜಿಸುವವರು ಉತ್ತಮವಾದ ಸದ್ಗತಿಯನ್ನು ಪಡೆಯುತ್ತಾರೆ. ॥೨೪೦॥

ಶಿವಮಾಯಾಪರವಶರಾಗಿ ಆ ದೇವದೇವನ ನಿಜವಾದ ಸ್ವರೂಪವನ್ನರಿಯದೆ, ಅನೇಕ ಬಗೆಯ ದುಃಖಗಳನ್ನು ಹೊಂದುವರು. ಇದರಲ್ಲಿ ಸಂಶಯವೇ ಇಲ್ಲ. ॥೨೪೧॥

ಹಿಂದೆ ಅನೇಕ ಧರ್ಮಕಾರ್ಯಗಳನ್ನು ಮಾಡಿ, ಸಮರ್ಥನೆನಿಸಿದ ದಕ್ಷಬ್ರಹ್ಮನು ಶಿವನೊಬ್ಬನನ್ನು ಬಿಟ್ಟು ಉಳಿದ ದೇವತೆಗಳೊಡನೆ ಯಾಗವನ್ನು ಮಾಡಲು ಪ್ರಾರಂಭಿಸಿದನು. ॥೨೪೨॥

ತಸ್ಮಿನ್ಯಾಗೇ ಸಮಾರಬ್ಧೇ ಸುರಾ ವಿಷ್ಣುಪುರೋಗಮಾಃ ।
ಸರ್ವೇಽಪ್ಯಾಗತ್ಯ ದಕ್ಷಾಯ ಚಕ್ರುಃ ಸಾಹಾಯ್ಯಮಾದರಾತ್ ॥೨೪೩॥

ಸುರರ್ಷಯೋ ನಾರದಾದ್ಯಾಃ ಸರ್ವೇ ತತ್ರ ಸಮಾಗತಾಃ ।
ದಕ್ಷಾಯ ಜನಯಾಮಾಸುಃ ಸಂತೋಷಂ ಯಾಗಮಂಟಪೇ॥೨೪೪॥

ಭೌಮಾಶ್ಚ ಋಷಯೋ ಯೇ ಚ ನಾನಾದೇಶಸಮಾಶ್ರಿತಾಃ ।
ತೇ ಚ ಸರ್ವೇ ಸಮಾಗತ್ಯ ದಕ್ಷಂ ಚಕ್ರುಃ ಪ್ರಹರ್ಷಿತಂ ॥೨೪೫॥

ಗಂಧರ್ವಾಃ ಕಿನ್ನರಾಃ ಸಿದ್ಧಾಃ ಯಕ್ಷಾಶ್ಚಾತಿಬಲಾನ್ವಿತಾಃ ।
ಉರಗಾಶ್ಚ ಸಮಾಗತ್ಯ ದಕ್ಷಂ ಚಕ್ರುಃ ಪ್ರಹರ್ಷಿತಂ ॥೨೪೬॥

ತಾಶ್ಚ ಸರ್ವಾಃ ಸಮಾಗತ್ಯ ದಕ್ಷಂ ಚಕ್ರುಃ ಪ್ರಹರ್ಷಿತಂ
ಸೋಮಾಯ ರಾಜ್ಞೇ ಯಾ ದತ್ತಾ ಯಾವಂತ್ಯೋ ದಕ್ಷಕನ್ಯಕಾಃ ।
ತಾಶ್ಚ ಸರ್ವಾಃ ಸಮಾಗತ್ಯ ದಕ್ಷಂ ಚಕ್ರುಃ ಪ್ರಹರ್ಷಿತಂ ॥೨೪೭॥

ಆ ಯಾಗವು ಪ್ರಾರಂಭವಾಗಲು, ವಿಷ್ಣುವೇ ಮೊದಲಾದ ದೇವತೋತ್ತಮರೆಲ್ಲರೂ ಬಂದು, ದಕ್ಷಬ್ರಹ್ಮನಿಗೆ ಯಾಗವಿಷಯದಲ್ಲಿ ಆದರದಿಂದ ಸಹಾಯ ಮಾಡಿದರು. ||೨೪೩||

ಅಲ್ಲದೆ ನಾರದರೇ ಮೊದಲಾದ ದೇವರ್ಷಿಗಳೆಲ್ಲರೂ ಅಲ್ಲಿಗೆ ಬಂದು, ಆ ಯಾಗಮಂಟಪದಲ್ಲಿ ಸೇರಿ ಆ ದಕ್ಷಬ್ರಹ್ಮನಿಗೆ ಯಾಗಸಮಾರಂಭದಲ್ಲಿ ತುಂಬಾ ಸಂತೋಷವನ್ನುಂಟುಮಾಡಿದರು. ||೨೪೪||

ಭೂಮಿಯ ಮೇಲೆ ವಾಸಮಾಡುವ ಮುನಿಗಳನೇಕರು, ನಾನಾದೇಶಗಳಲ್ಲಿ ನೆಲಸಿದ್ದವರು ಕೂಡ ದಕ್ಷಬ್ರಹ್ಮನು ಮಾಡುವ ಯಾಗಕ್ಕೋಸ್ಕರ ಬಂದು ಅವನಿಗೆ ನೆರವಾಗಿ ದಕ್ಷನಿಗೆ ತುಂಬಾ ಸಂತೋಷವನ್ನುಂಟುಮಾಡಿದರು. ||೨೪೫||

ಗಂಧರ್ವರೂ, ಕಿನ್ನರರೂ, ಸಿದ್ಧಪುರುಷರೂ, ಅತ್ಯಂತ ಬಲಶಾಲಿಗಳಾದ ಯಕ್ಷರೂ, ಸರ್ಪಗಳೂ (ನಾಗರೂ) ಆ ಯಾಗಸಮಾರಂಭಕ್ಕೆ ಬಂದು ಯಾಗ ಕಾರ್ಯಕ್ಕೆ ನೆರವಾಗಿ ದಕ್ಷಬ್ರಹ್ಮನಿಗೆ ಸಂತೋಷವುಂಟಾಗುವಂತೆ ಮಾಡಿದರು. ||೨೪೬||

ಸುಂದರನಾದ ಚಂದ್ರನಿಗೆ ಕೊಟ್ಟಿದ್ದ ಇಪ್ಪತ್ತೇಳು ಮಂದಿ ದಕ್ಷಬ್ರಹ್ಮನ

ದೇವಪತ್ನ್ಯಶ್ಚಿತ್ರವೇಷಾ ಯಾಶ್ಚ ಲಕ್ಷ್ಮೀಪುರೋಗಮಾಃ
ಅನುಯಾರುಂಧತೀಮುಖ್ಯಾ ಋಷಿಪತ್ನ್ಯಶ್ಚ ಯಾ ಸ್ಥಿತಾಃ ।
ತಾಶ್ಚ ಸರ್ವಾಃ ಸಮಾಗತ್ಯ ದಕ್ಷಂ ಚಕ್ರುಃ ಪ್ರಹರ್ಷಿತಂ ॥೨೪೮॥

ಯಕ್ಷಗಂಧರ್ವಪತ್ನ್ಯಶ್ಚ ಯಾಶ್ಚಾನ್ಯಾ ನಾಗಕನ್ಯಕಾಃ ।
ದಕ್ಷಃ ಸ ಸರ್ವಸಂಭಾರಾನ್ಸಂಪ್ರಾಪ್ಯ ತದನಂತರಂ ॥೨೪೯॥

ದದೌ ಋಷೀಣಾಮಾರ್ತ್ವಿಜ್ಯಂ ಶ್ರೌತಾಧಿಷ್ಠಿತತೇಜಸಾಂ ।
ದೇವಾ ಬಭೂವುರ್ವಿಷ್ಣ್ವಾದ್ಯಾಃ ಸದಸ್ಯಾ ದಕ್ಷಯಂತ್ರಿತಾಃ ॥೨೫೦॥

ಕ್ರತುಸಂರಕ್ಷಕಾ ಜಾತಾ ಗಂಧರ್ವಾದ್ಯಾ ಬಲಾನ್ವಿತಾಃ ।
ಏತಸ್ಮಿನ್ನಂತರೇ ಕಾಲೇ ಕೈಲಾಸನಿಲಯಂ ಶಿವಂ ॥೨೫೧॥

ಹೆಣ್ಣುಮಕ್ಕಳೂ, ತಮ್ಮ ತಂದೆಯು ನಡೆಸುತ್ತಿದ್ದ ಯಾಗಕ್ಕೆ ಬಂದು ಅವನಿಗೆ ಸಹಾಯ ಮಾಡುತ್ತಾ ತಂದೆಗೆ ಸಂತೋಷವನ್ನುಂಟುಮಾಡಿದರು. ॥೨೪೭॥

ಚಿತ್ರವಿಚಿತ್ರವಾಗಿ ಅಲಂಕಾರಮಾಡಿಕೊಂಡಿದ್ದ ಲಕ್ಷ್ಮಿಯೇ ಮೊದಲಾದ ದೇವಪತ್ನಿಯರೂ, ಅನುಯಾ, ಅರುಂಧತಿ ಮೊದಲಾದ ಋಷಿಪತ್ನಿಯರೂ ಸಹ ಅಲ್ಲಿಗೆ ಬಂದು, ಎಲ್ಲರೂ ಯಾಗದ ಕೆಲಸದಲ್ಲಿ ನೆರವಾಗಿ ದಕ್ಷಬ್ರಹ್ಮನಿಗೆ ಸಂತೋಷ ವುಂಟಾಗುವಂತೆ ಮಾಡಿದರು. ॥೨೪೮॥

ಯಕ್ಷರು, ಗಂಧರ್ವರು, ನಾಗರು ಇವರೇ ಮೊದಲಾದ ದೇವಯೋನಿಗಳ ಪತ್ನಿಯರೆಲ್ಲರೂ ಆ ಯಾಗಕ್ಕೆ ಬಂದು ಅವನಿಗೆ ಸಂತೋಷವನ್ನುಂಟುಮಾಡಿದರು. ಹೀಗೆ ತನ್ನ ಯಾಗಮಂಟಪಕ್ಕೆ ಬಂದ ದೇವರ್ಷಿಗಳೇ ಮೊದಲಾದವರನ್ನು ನೋಡಿ, ತನ್ನ ಯಾಗಕ್ಕೆ ಬೇಕಾದ ಸಲಕರಣೆಗಳನ್ನೆಲ್ಲಾ ಸಿದ್ಧಪಡಿಸಿಕೊಂಡು, ಉತ್ಸಾಹದಿಂದ ದಕ್ಷಬ್ರಹ್ಮನು, ಶ್ರೌತಪ್ರಯೋಗವನ್ನು ಚೆನ್ನಾಗಿ ತಿಳಿದು ತೇಜಸ್ವಿಗಳಾಗಿದ್ದ ಋಷಿ ಗಳನ್ನು ಆ ಯಾಗದಲ್ಲಿ ಋತ್ವಿಜರನ್ನಾಗಿಯೂ, ವಿಷ್ಣುವೇ ಮೊದಲಾದ ದೇವತೆ ಗಳನ್ನು ಸದಸ್ಯರನ್ನಾಗಿಯೂ ನಿಯಮಿಸಿದನು. ॥೨೪೯-೨೫೦॥

ಅತ್ಯಂತ ಬಲಶಾಲಿಗಳಾದ ಗಂಧರ್ವರೇ ಮೊದಲಾದವರು ಆ ಯಾಗವನ್ನು ರಕ್ಷಿಸುವುದಕ್ಕೋಸ್ಕರ ಬದ್ಧಕಂಕಣರಾಗಿ ನಿಂತರು. ಹೀಗೆ ವಿಜೃಂಭಣೆಯಿಂದ ದಕ್ಷಬ್ರಹ್ಮನು ಯಾಗವನ್ನು ನಡೆಸುತ್ತಿರಲು, ಇತ್ತಲಾಗಿ ಗೌರಿಯು, ವಿನಯದಿಂದ

ಗೌರೀ ವಿನಯಸಂಪನ್ನಾಂಗಾ ಸ್ಮಿತಪೂರ್ವಮಭಾಷತ ॥೨೫೨॥

॥ ಗೌರ್ಯುವಾಚ ॥

ಶಂಭೋ ದಕ್ಷೋಽಧ್ವರಂ ಕರ್ತುಮಿದಾನೀಮುದ್ಯತೋಽಸ್ತ್ಯತಃ ।
ತತ್ರಾಹಂ ಗಂತುಮಿಚ್ಛಾಮಿ ಯದಾಜ್ಞಾ ತೇ ತದಾ ಪ್ರಭೋ ॥೨೫೩॥

ಇತಿ ತದ್ವಚನಂ ಶ್ರುತ್ವಾ ಮಹಾದೇವಃ ಕೃಪಾನಿಧಿಃ ।
ಉವಾಚ ಮಂಗಲಾಂ ಶುದ್ಧಾಂ ಸರ್ವಜ್ಞಃ ಸ್ಮಿತಪೂರ್ವಕಂ ॥೨೫೪॥

॥ ಶ್ರೀ ಮಹಾದೇವ ಉವಾಚ ॥

ಗಂತುಮಿಚ್ಛಸಿ ಕಲ್ಯಾಣಿ ದಕ್ಷಯಾಗಂ ಪ್ರತಿ ಪ್ರಿಯೇ ।
ಗತ್ವಾ ಸತ್ವರಮಾಯಾಹಿ ಚಿರಂ ಮಾ ತತ್ರ ಸಂವಸ ॥೨೫೫॥

ಇತ್ಯುಕ್ತ್ವಾ ಪ್ರೇಷಯಾಮಾಸ ಮಂಗಲಾಂ ಮಂಗಲಾಪತಿಃ ।
ಗಣಾಂಶ್ಚ ಪ್ರೇಷಯಾಮಾಸ ಕೋಟಿಶೋಽಂಬಿಕಯಾ ಸಹ ॥೨೫೬॥

ತನ್ನ ಶರೀರವನ್ನು ಬಾಗಿಸಿ ನಿಂತು, ಕೈಲಾಸವಾಸಿಯಾದ ಪರಶಿವನನ್ನು ಕುರಿತು, ಮುಗುಳುನಗೆಯನ್ನು ಹೊರಸೂಸುತ್ತಿರುವ ಮಾತುಗಳಿಂದ ಹೀಗೆ ಪ್ರಾರ್ಥಿಸಿದಳು. ||೨೫೧-೨೫೨||

ಶಂಭುವೇ! (ಮಂಗಳಕರನಾದ ಸ್ವಾಮಿಯೇ!) ಈಗ ದಕ್ಷಬ್ರಹ್ಮನು ಯಾಗವನ್ನು ಮಾಡಲು ಪ್ರಾರಂಭಿಸಿರುವನು. ಪ್ರಭೋ! ನಾನು ಅಲ್ಲಿಗೆ ಹೋಗಬೇಕೆಂದು ಅಪೇಕ್ಷಿಸುತ್ತಿರುವೆನು. ನಿನ್ನ ಅಪ್ಪಣೆಯಾದರೆ, ಯಾವಾಗ ಬೇಕಾದರೂ ಹೊರಡಲು ಸಿದ್ಧಳಿರುವೆನು. ಅನುಜ್ಞೆಕೊಡಬೇಕೆಂದು ಗೌರೀದೇವಿಯು ಶಿವನನ್ನು ಪ್ರಾರ್ಥಿಸಿದಳು. ||೨೫೩||

ಮಹಾದೇವನು, ಪರಿಶುದ್ಧ ವ್ರತಳೂ ಮಂಗಳಾಂಗಿಯೂ ಆದ ಗಿರಿಜಾದೇವಿಯನ್ನು ಕುರಿತು ಮಂದಹಾಸದಿಂದ ಹೀಗೆಂದನು. ||೨೫೪||

ಮಂಗಳಾಂಗಿಯಾದ ಪ್ರೇಯಸಿಯೇ! ‘ ನಿನ್ನ ಆಪೇಕ್ಷೆಯಂತೆಯೇ ನೀನು ದಕ್ಷನ ಯಾಗಕ್ಕೆ ಹೋಗಿ ಜಾತ್ರೆಯಾಗಿ ಬಂದುಬಿಡು. ಅಲ್ಲಿ ಹೆಚ್ಚು ಕಾಲ ನೆಲಸ ಬೇಡ, ಎಂದು ಹೇಳಿ ಆ ಸರ್ವಮಂಗಳಾ ಪತಿಯಾದ ಮಹಾದೇವನು ಅವಳಿಗೆ ಅನುಮತಿ

ರತ್ನಛತ್ರಾರ್ಬುದಾಕೀರ್ಣಾ ಶ್ಚಾಮರಾರ್ಬುದಶೋಭಿತಾಃ ।
ವಿಮಾನರತ್ನಮಾರುಹ್ಯ ಯಯೌ ದಕ್ಷಗೃಹಂ ಶಿವಾ ॥೨೫೭॥

ಪುಷ್ಪವೃಷ್ಟಿರಭೂದ್ದಿವ್ಯಾ ತದಾ ರಮ್ಯಾ ಪ್ರತಿಕ್ಷಣಂ ।
ಸುಪುಷ್ಪಗಂಧಮಂದಾಶ್ಚ ತದಾ ಗಂಧವಹಾ ವವುಃ ॥೨೫೮॥

ತದಾ ತೂರ್ಯಧ್ವನಿರಭೂನ್ನಾನಾವೀಣಾಸ್ವರಾನ್ವಿತಃ ।
ದೇವದುಂದುಭಯೋ ನೇದುರ್ಜಗುರ್ಗಂಧರ್ವನಾಯಕಾಃ ॥೨೫೯॥

ನನೃತುಶ್ಚೋರ್ವಶೀಮುಖ್ಯಾಃ ಮಂಗಲಾದರ್ಶನೋತ್ಸುಕಾಃ ।
ಗಾನಶಾಸ್ತ್ರಾನುಸಾರೇಣ ಸಂಜಗುರ್ನಾಗಕನ್ಯಕಾಃ ॥೨೬೦॥

ಲಕ್ಷ್ಮೀಮುಖ್ಯಾ ದೇವಪತ್ನ್ಯೋ ದೂರಾದ್ದೃಷ್ಟ್ವಾ ಶಿವಪ್ರಿಯಾಂ ।
ಹೃಷ್ಟಾಃ ಸತ್ವರಮುತ್ಥಾಯ ಪ್ರಣೇಮುರ್ವಿನಯಾನ್ವಿತಾಃ ॥೨೬೧॥

ಕೊಟ್ಟು, ದೇವಿಯ ಜೊತೆಯಲ್ಲಿ ಅನೇಕ ಕೋಟಿ ರುದ್ರಗಣಗಳನ್ನೂ ಕಳುಹಿಸಿ ಕೊಟ್ಟನು. ॥೨೫೫-೨೫೬॥

ಅರ್ಬುದ ಸಂಖ್ಯಾಕವಾದ ರತ್ನಛತ್ರಗಳೂ, ಅರ್ಬುದ ಸಂಖ್ಯಾಕವಾದ ಚಾಮರಗಳೂ, ಇವೇ ಮೊದಲಾದುವುಗಳಿಂದ ಕೂಡಿ ತಾನೂ ರತ್ನಮಯವಾದ ವಿಮಾನದಲ್ಲಿಯೇ ಕುಳಿತು ಶಿವನ ರಾಣಿಯು, ದಕ್ಷಬ್ರಹ್ಮನ ಮನೆಗೆ ಹೊರಟಳು. ॥೨೫೭॥

ಆಗ ಕ್ಷಣಕ್ಷಣಕ್ಕೂ ಮನೋಹರವಾಗಿ ಅಂತರಿಕ್ಷದಿಂದ ಪುಷ್ಪವೃಷ್ಟಿ ಯಾಯಿತು. ವಾಯುವು ಚೆನ್ನಾಗಿ ಅರಳಿ ಸುಗಂಧಭರಿತವಾದ ಪುಷ್ಪಗಳ ಸುವಾಸನೆಯನ್ನು ಹೊತ್ತುಕೊಂಡು ಮೆಲ್ಲಗೆ ತಂಪಾಗಿ ಬೀಸಿತು. ಅನೇಕ ವೀಣೆಗಳ ಧ್ವನಿಗಳೊಡನೆ ತೂರ್ಯಧ್ವನಿಯಾಯಿತು. ದೇವದುಂದುಭಿಗಳು ಭೋರ್ಗರೆದವು. ಗಂಧರ್ವಶ್ರೇಷ್ಠರೆಲ್ಲರೂ ಇಂಪಾಗಿ ಹಾಡಿದರು. ॥೨೫೮-೨೫೯॥

ಊರ್ವಶಿಯೇ ಮೊದಲಾದ ಅಪ್ಸರಸ್ತ್ರೀಯರು ಸರ್ವಮಂಗಳಾದೇವಿಯನ್ನು ನೋಡುವ ಉತ್ಸಾಹದಿಂದ ಮನೋಹರವಾಗಿ ನರ್ತನಮಾಡಿದರು. ನಾಗಕನ್ನಿಕೆಯರು ಸಂಗೀತಶಾಸ್ತ್ರವನ್ನನುಸರಿಸಿ ಚೆನ್ನಾಗಿ ಗಾನಮಾಡಿದರು. ॥೨೬೦॥

ಮಹಾಲಕ್ಷ್ಮಿಯೇ ಮೊದಲಾದ ದೇವಪತ್ನಿಯರು ದೂರದಿಂದಲೇ ಆ

ಶಿವಾಂ ಸರಸ್ವತೀ ನತ್ವಾ ಗೃಹಿತ್ವಾ ವೇತ್ರಮುತ್ತಮಂ ।
ಕೃತಾಂಜಲಿಪುಟಾ ಭೂತ್ವಾ ತುಷ್ಟಾವ ವಿವಿಧೈಃಸ್ತವೈಃ ॥೨೬೨॥

ದೃಷ್ಟ್ವಾ ದೂರಾತ್ಸುರಾಶ್ಚಾಂಬಾಂ ಬ್ರಹ್ಮವಿಷ್ಣುಪುರೋಗಮಾಃ ।
ಪ್ರಣೇಮುರ್ದಂಡವದ್ಭೂಮೌ ಮುನಿವೃಂದಸಮನ್ವಿತಾಃ ॥೨೬೩॥

ಯಕ್ಷಪನ್ನಗಗಂಧರ್ವಾ ಸಿದ್ಧವಿದ್ಯಾಧರಾದಯಃ ।
ಪ್ರಣೇಮುರಂಬಿಕಾಂ ದೃಷ್ಟ್ವಾ ದೂರಾದೇವ ಪುನಃ ಪುನಃ ॥೨೬೪॥

ಅಂಬಿಕಾವೀಕ್ಷಣೋದ್ಯುಕ್ತದೇವಾದ್ಯಾಗಮನಾತ್ತದಾ ।
ಭೂಯಾನ್ಸಭೂವ ಸಂಮರ್ದೋ ದುರ್ಧರ್ಷೋ ಗಣಪೈರಪಿ ॥೨೬೫॥

ಪರಶಿವನ ಪತ್ನಿಯನ್ನು ನೋಡಿ, ಸಂತೋಷ ಹೊಂದಿದವರಾಗಿ ಕೂಡಲೇ ಎದ್ದು, ವಿನಯದಿಂದ ಈಶ್ವರಪತ್ನಿಗೆ ನಮಸ್ಕಾರ ಮಾಡಿದರು. ||೨೬೧||

ಸರಸ್ವತೀ ದೇವಿಯು ಆ ಪರಶಿವನ ರಾಣಿಗೆ ನಮಸ್ಕಾರಮಾಡಿ, ಕೈಯಲ್ಲಿ ಉತ್ತಮವಾದ ಒಂದು ಬೆತ್ತವನ್ನು ಹಿಡಿದು, ಕೈಮುಗಿಯುತ್ತಾ ನಾನಾ ವಿಧವಾಗಿ ಸ್ತೋತ್ರಮಾಡಿದಳು. ||೨೬೨||

ಬ್ರಹ್ಮ, ವಿಷ್ಣು, ಮುಂತಾದ ದೇವತೆಗಳು ದೂರದಿಂದಲೇ ಆ ಅಂಬಿಕೆಯನ್ನು ನೋಡಿ, ಮಹರ್ಷಿಗಳ ಗುಂಪಿನೊಡನೆ ಭೂಮಿಯಮೇಲೆ ಬಿದ್ದು ದಂಡ ಪ್ರಣಾಮಮಾಡಿದರು. ||೨೬೩||

ಯಕ್ಷರೂ, ಪನ್ನಗರೂ, ಗಂಧರ್ವರೂ, ಸಿದ್ಧರೂ, ವಿದ್ಯಾಧರರೇ ಮೊದಲಾದವರೂ ದೂರದಲ್ಲಿ ಬರುತ್ತಿರುವಾಗಲೇ ಆ ಅಂಬಿಕಾದೇವಿಯನ್ನು ನೋಡಿ, ಬಾರಿಬಾರಿಗೂ ಅವಳಿಗೆ ನಮಸ್ಕಾರಮಾಡಿದರು. ||೨೬೪||

ಆ ಜಗದಂಬಿಕೆಯನ್ನು ನೋಡುವುದಕ್ಕೋಸ್ಕರವೇ ಮುಂದೆ ಮುಂದೆ ಬರುತ್ತಿರುವ ದೇವತೆಗಳ ಗೊಂದಲದಿಂದ, ಶ್ರೇಷ್ಠರಾದ ರುದ್ರಗಣಗಳಿಗೂ ಅಲ್ಲಿ ಪ್ರವೇಶಿಸಲು ಸಾಧ್ಯವಿಲ್ಲದಂತಾಯಿತು. (ಅಂದರೆ ದೇವತೆಗಳೆಲ್ಲಾ ಗುಂಪು ಕಟ್ಟಿಕೊಂಡಿದ್ದುದರಿಂದ ಗಣಾಧಿಪತಿಗಳೂ ಆ ಗುಂಪಿನಲ್ಲಿ ಪ್ರವೇಶಿಸಲು ಸಾಧ್ಯವಾಗುತ್ತಿರಲಿಲ್ಲವೆಂದು ಭಾವವು.) ||೨೬೫||

ಸಂಮರ್ದಾಂ ವಿಕಲೀಕರ್ತುಂ ವೇತ್ರಹಸ್ತಾಸ್ತದಾ ಗಣಾಃ ।
ಸಕಿರೀಟಾನ್ಸುರಾನ್ಸರ್ವಾನ್ತಾಡಯಮಾಸುರುದ್ಧತಾನ್ ॥೨೬೬॥

ಗತರತ್ನಕಿರೀಟಾಶ್ಚ ವಿಷ್ಣುಮುಖ್ಯಾಃ ಸುರಾಸ್ತದಾ ।
ಪ್ರಹೃಷ್ಟವದನಾಂ ದೇವೀಂ ತುಷ್ಟುವುರ್ವಿವಿಧೈಃಸ್ತವೈಃ ॥೨೬೭॥

॥ ದೇವಾ ಊಚುಃ ॥

ನಮೋದೇವ್ಯೈ ನಮೋದೇವ್ಯೈ ನಮೋದೇವ್ಯೈ ನಮೋನಮಃ ।
ನಮೋ ನಮೋ ಜಗದ್ಧಾತ್ರ್ಯೈ ಜಗದ್ಧಾತ್ರ್ಯೈ ನಮೋನಮಃ ॥೨೬೮॥

ನಮೋ ನಮಸ್ತೇ ಕಲ್ಯಾಣ್ಯೈ ಮಂಗಲಾಯೈ ನಮೋನಮಃ ।
ನಮೋ ನಮಸ್ತೇ ಶರ್ವಾಣ್ಯೈ ಸುಖದಾಯೈ ನಮೋನಮಃ ॥೨೬೯॥

ನಮೋ ನಮಸ್ತೇ ಭದ್ರಾಯೈ ಶೋಭನಾಯೈ ನಮೋನಮಃ ।
ನಮೋ ನಮಸ್ತೇ ಶುದ್ಧಾಯೈ ಶಾಂಭವ್ಯೈ ತೇ ನಮೋ ನಮಃ ॥೨೭೦॥

ಆಗ ಆ ಗುಂಪನ್ನು ಚದುರಿಸಲು ರುದ್ರಗಣಗಳು ಕೈಯಲ್ಲಿ ಬೆತ್ತವನ್ನು ಹಿಡಿದು ಸಂಚರಿಸುತ್ತಾ, ಕಿರೀಟಧಾರಿಗಳಾಗಿದ್ದ ಕೊಬ್ಬಿದ ದೇವತೆಗಳನ್ನೆಲ್ಲಾ ಹೊಡೆದು ಹಿಂದಕ್ಕಟ್ಟಿದರು. ॥೨೬೬॥

ಆಗ ವಿಷ್ಣುವೇ ಮೊದಲಾದ ದೇವತೆಗಳೆಲ್ಲರೂ, ರುದ್ರಗಣಗಳ ಹೊಡೆತದಿಂದ ತಮ್ಮ ರತ್ನ ಕಿರೀಟಗಳನ್ನು ಕಳೆದುಕೊಂಡು ದುಃಖಿತರಾಗಿ, ಸಂತೋಷವನ್ನು ಬೀರುತ್ತಿರುವ ಮುಖವುಳ್ಳ ಆ ಗಿರಿಜಾದೇವಿಯನ್ನು ನಾನಾ ವಿಧವಾದ ಸ್ತೋತ್ರಗಳಿಂದ ಹೀಗೆ ಸ್ತುತಿಸಿದರು. ॥೨೬೭॥

"ದಿವ್ಯತೇಜಸ್ಸಿನಿಂದ ಕೂಡಿದವಳೂ, ದಿಗ್ವಿಜಯಶೀಲಳೂ, ವಿಹಾರಲೋಲಳೂ, ಜಗಜ್ಜನನಿಯೂ ಆದ ಗಿರಿಜಾದೇವಿಗೆ ನಮಸ್ಕಾರವು. ॥೨೬೮॥

ಕಲ್ಯಾಣಗುಣಪರಿಪೂರ್ಣಳೂ, ಮಂಗಳಸ್ವರೂಪಿಣಿಯೂ, ಈಶ್ವರನ ಪತ್ನಿಯೂ, ಸುಖಪ್ರದಳೂ ಆದ ಅಂಬಿಕೆಗೆ ನಮಸ್ಕಾರವು. ॥೨೬೯॥

ಮಂಗಳಸ್ವರೂಪಳೂ, ಶೋಭನವಾದ ಆಕಾರವುಳ್ಳವಳೂ, ಪರಮಪಾವನಳೂ, ಸುಖಪ್ರದನಾದ ಆ ಪರಮೇಶ್ವರನ ಅರ್ಧಾಂಗಿಣಿಯೂ ಆದ ದೇವಿಯೇ! ನಿನಗೆ ನಮಸ್ಕಾರ ಮಾಡುವೆವು. ॥೨೭೦॥

ನಮೋ ನಮೋ ನಮೋ ಮಾತರ್ನಮೋ ಮಾತರ್ನಮೋ ನಮಃ ।
ನಮೋ ನಮೋ ನಮೋ ಮಾತರ್ನಮೋ ಮಾತರ್ನಮೋ ನಮಃ ॥೨೭೦॥

ನಮಸ್ತೇ ಪರಮೇಶ್ವರ್ಯೈ ಪರಮಾಯೈ ನಮೋನಮಃ ।
ನಮಸ್ತೇ ಭುಕ್ತಿದಾಯಿನ್ಯೈ ಮುಕ್ತಿದಾಯೈ ನಮೋನಮಃ ॥೨೭೧॥

ನಮಸ್ತೇ ವಿಶ್ವರೂಪಿಣ್ಯೈ ವಿಶ್ವಮಾತ್ರೇ ನಮೋನಮಃ ।
ನಮಸ್ತೇ ಲಿಂಗರೂಪಿಣ್ಯೈ ಭೂತಿದಾಯೈ ನಮೋನಮಃ ॥೨೭೩॥

ನಮಃ ಸಂತುಷ್ಟಚಿತ್ತಾಯೈ ಪುಷ್ಟಿದಾಯೈ ನಮೋನಮಃ ।
ನಮೋ ನಮೋಽನ್ನಪೂರ್ಣಾಯೈ ಸುವರ್ಣಾಯೈ ನಮೋನಮಃ ॥೨೭೪॥

ನಮಶ್ಚಂದ್ರಾವತಂಸಾಯೈ ಸರ್ವೈಶ್ವರ್ಯೈ ನಮೋನಮಃ ।
ನಮಸ್ತೇ ಚಂದ್ರಸೂರ್ಯಾಗ್ನಿಪ್ರತಿಮಾಯೈ ಶಿವಪ್ರಿಯೇ ॥೨೭೫॥

ಸಕಲ ಜಗಜ್ಜನನಿಯಾದ ದೇವಿಯೇ! ತಾಯಿಯಂತೆ ತನ್ನ ಭಕ್ತರನ್ನು ಸಲಹುವ ನಿನಗೆ ನಮಸ್ಕಾರ ಮಾಡುವೆವು. ಅಮ್ಮಾ ಜಗದಂಬಿಕೇ! ನಮ್ಮ ತಾಯಿಯಾದ ನಿನಗೆ ಮತ್ತೆ ನಮಸ್ಕಾರ ಮಾಡುವೆನು. ॥೨೭೦॥

ದೇವಿ! ಪರಮ ಸಂಪತ್ತುಗಳುಳ್ಳವಳೂ, ಪರಮಶ್ರೇಷ್ಠಳೂ ಆದ ನಿನಗೆ ನಮಸ್ಕಾರ. ದೇವಿ! ಸಕಲ ಜೀವರಾಶಿಗಳಿಗೂ, ಭುಕ್ತಿಯನ್ನೂ (ಆಹಾರವನ್ನೂ) ಮೋಕ್ಷವನ್ನೂ ನೀನು ಕೊಡುತ್ತಿರುವೆ. ತಾಯೇ! ನಿನಗೆ ನನ್ನ ಅನಂತವಾದ ನಮಸ್ಕಾರಗಳು. ॥೨೭೨॥

ಜಗತ್ಸ್ವರೂಪಿಣಿಯೂ, ಜಗದ್ರಕ್ಷಣೆ ಮಾಡತಕ್ಕವಳೂ ಆದ ದೇವಿಯೇ! ಲಿಂಗಸ್ವರೂಪಿಣಿಯಾಗಿ, ಅಷ್ಟೈಶ್ವರ್ಯಗಳನ್ನೂ ಕೊಡುವ ನಿನಗೆ ನಮಸ್ಕಾರಮಾಡುವೆವು. ॥೨೭೩॥

ಯಾವಾಗಲೂ, ಸಂತುಷ್ಟವಾದ ಮನಸ್ಸುಳ್ಳವಳೂ, ಪುಷ್ಟಿಯನ್ನು ಕೊಡುವವಳೂ ಆಗಿ, ಒಳ್ಳೆಯ ಬಣ್ಣದಿಂದ ಕೂಡಿದ ಮೈಯುಳ್ಳ ಅನ್ನಪೂರ್ಣಾದೇವಿಗೆ ನಮಸ್ಕಾರ ಮಾಡುವೆವು. ॥೨೭೪॥

ಚಂದ್ರನನ್ನು ತಲೆಯ ಆಭರಣವನ್ನಾಗಿ ಧರಿಸಿರುವ ದೇವಿಯೇ! ಸಕಲೈಶ್ವರ್ಯಕ್ಕೂ ನಿಧಿಯಂತಿರುವ ನಿನಗೆ ನಮಸ್ಕಾರವು. ಶಿವನ ಪ್ರಿಯಪತ್ನಿಯಾದ

ನಮಸ್ತೇ ಭಾಗ್ಯದಾಯಿನ್ಯೈ ಭೋಗದಾಯೈ ನಮೋನಮಃ ।
ನಮಸ್ತೇ ಶಾಂತಿದಾಯಿನ್ಯೈ ದಮದಾಯೈ ನಮೋನಮಃ ॥೨೭೬॥

ನಮಸ್ತೇ ಪುಣ್ಯರೂಪಿಣ್ಯೈ ಪುಣ್ಯದಾಯೈ ನಮೋನಮಃ ।
ನಮಸ್ತೇ ಕೀರ್ತಿರೂಪಿಣ್ಯೈ ಕೀರ್ತಿದಾಯೈ ನಮೋನಮಃ ॥೨೭೭॥

ನಮಸ್ತೇ ಧರ್ಮರೂಪಿಣ್ಯೈ ಧರ್ಮದಾಯೈ ನಮೋನಮಃ ।
ನಮಸ್ತೇ ಬುದ್ಧಿರೂಪಿಣ್ಯೈ ಬುದ್ಧಿದಾಯೈ ನಮೋನಮಃ ॥೨೭೮॥

ಯಾ ತ್ವಂ ವಿದ್ಯಾಸ್ವರೂಪೇಣ ವಿದ್ಯಾವದ್ಧೃದಯೇ ಸ್ಥಿತಾ ।
ತಸ್ಯೈ ಶಿವಾಂಗಭಾಗಿನ್ಯೈ ನಮಸ್ತುಭ್ಯಂ ನಮೋನಮಃ ॥೨೭೯॥

ದೇವಿಯೇ! ಚಂದ್ರ, ಸೂರ್ಯ, ಅಗ್ನಿ, ಇವರ ತೇಜಸ್ಸಿಗೆ ಸಮಾನವಾದ ಕಾಂತಿಯಿಂದ ಶೋಭಿಸುವ ನಿನ್ನನ್ನು ವಂದಿಸುವೆವು. ॥೨೭೫॥

ದಿವ್ಯವಾದ ಭಾಗ್ಯಸಂಪತ್ತನ್ನೂ, ನಾನಾ ವಿಧವಾದ ಭೋಗಗಳನ್ನೂ ಕೊಡುವ ದೇವಿಯೇ! ಶಾಂತಿಯನ್ನುಂಟುಮಾಡುವವಳೂ, ಇಂದ್ರಿಯ ನಿಗ್ರಹತೆಯನ್ನು ಕರುಣಿಸುವಳೂ ಆದ ನಿನಗೆ ನಮಸ್ಕಾರವು. ॥೨೭೬॥

ಪುಣ್ಯಸ್ವರೂಪಿಣಿಯೂ ಪುಣ್ಯವನ್ನುಂಟುಮಾಡುವವಳೂ ಆದ ದೇವಿಯೇ! ನಿನಗೆ ನಮಸ್ಕಾರವು. ದೇವಿ! ಕೀರ್ತಿಸ್ವರೂಪಿಣಿಯಾದ ನೀನು, ಎಲ್ಲರಿಗೂ ಕೀರ್ತಿಯುಂಟಾಗುವಂತೆ ಅನುಗ್ರಹಿಸುತ್ತೀಯೆ. ಇದೋ ನಿನಗೆ ನಮಸ್ಕಾರಮಾಡುವೆವು. ॥೨೭೭॥

ತಾನು ಧರ್ಮಸ್ವರೂಪಿಣಿಯಾಗಿ, ಎಲ್ಲರಿಗೂ ಧರ್ಮವನ್ನು ಕೊಡುತ್ತಿರುವ ದೇವಿಯೇ! ನಿನಗೆ ನಮಸ್ಕಾರವು. ದೇವಿ! ನೀನು ಬುದ್ಧಿಸ್ವರೂಪಿಣಿಯೂ ಆಗಿರುವೆ. ಅಲ್ಲದೇ ಎಲ್ಲರಿಗೂ ಬುದ್ಧಿಯನ್ನುಂಟುಮಾಡುವವಳೂ ನೀನೇ ಆಗಿರುವೆ. ಇದೋ ನಿನಗೆ ನನ್ನ ಅನಂತವಾದ ಪ್ರಣಾಮಗಳು. ॥೨೭೮॥

ದೇವಿ, ನೀನೇ ಸಕಲ ವಿದ್ಯಾವಂತರ ಹೃದಯದಲ್ಲಿಯೂ ವಿದ್ಯೆಯ ರೂಪಿನಿಂದಿರುವೆ. ಪರಶಿವನ ಅರ್ಧಶರೀರವನ್ನು ಹೊಂದಿರುವ ನಿನಗೆ ಭಕ್ತಿಯಿಂದ ನಮಸ್ಕಾರ ಮಾಡುವೆವು. ॥೨೭೯॥

ಯಾ ತ್ವಂ ಕೀರ್ತಿಸ್ವರೂಪೇಣ ಕೀರ್ತಿಮದ್ಧೃದಯೇ ಸ್ಥಿತಾ ।
ತಸ್ಯೈ ಶಿವಾಂಗಭಾಗಿನ್ಯೈ ನಮಸ್ತುಭ್ಯಂ ನಮೋನಮಃ ॥೨೮೦॥

ಯಾ ತ್ವಂ ಪುಣ್ಯಸ್ವರೂಪೇಣ ಪುಣ್ಯವದ್ಧೃದಯೇ ಸ್ಥಿತಾ ।
ತಸ್ಯೈ ಶಿವಾಂಗಭಾಗಿನ್ಯೈ ನಮಸ್ತುಭ್ಯಂ ನಮೋನಮಃ ॥೨೮೧॥

ಯಾ ತ್ವಂ ಧರ್ಮಸ್ವರೂಪೇಣ ಧರ್ಮವದ್ಧೃದಯೇ ಸ್ಥಿತಾ ।
ತಸ್ಯೈ ಶಿವಾಂಗಭಾಗಿನ್ಯೈ ನಮಸ್ತುಭ್ಯಂ ನಮೋನಮಃ ॥೨೮೨॥

ಯಾ ತ್ವಂ ಶಾಂತಿಸ್ವರೂಪೇಣ ಶಾಂತಿವದ್ಧೃದಯೇ ಸ್ಥಿತಾ ।
ತಸ್ಯೈ ಶಿವಾಂಗಭಾಗಿನ್ಯೈ ನಮಸ್ತುಭ್ಯಂ ನಮೋನಮಃ ॥೨೮೩॥

ಯಾ ತ್ವಂ ದಮಸ್ವರೂಪೇಣ ದಮವದ್ಧೃದಯೇ ಸ್ಥಿತಾ ।
ತಸ್ಯೈ ಶಿವಾಂಗಭಾಗಿನ್ಯೈ ನಮಸ್ತುಭ್ಯಂ ನಮೋನಮಃ ॥೨೮೪॥

ಯಾ ತ್ವಂ ದಯಾಸ್ವರೂಪೇಣ ದಯಾವದ್ಧೃದಯೇ ಸ್ಥಿತಾ ।
ತಸ್ಯೈ ಶಿವಾಂಗಭಾಗಿನ್ಯೈ ನಮಸ್ತುಭ್ಯಂ ನಮೋನಮಃ ॥೨೮೫॥

ಯಾ ತ್ವಂ ಜ್ಞಾನಸ್ವರೂಪೇಣ ಜ್ಞಾನವದ್ಧೃದಯೇ ಸ್ಥಿತಾ ।
ತಸ್ಯೈ ಶಿವಾಂಗಭಾಗಿನ್ಯೈ ನಮಸ್ತುಭ್ಯಂ ನಮೋನಮಃ ॥೨೮೬॥

ಕೀರ್ತಿಸ್ವರೂಪಿಣಿಯಾಗಿ ಸಕಲ ಕೀರ್ತಿವಂತರ ಹೃದಯದಲ್ಲಿಯೂ ನೆಲಸಿರುವ ದೇವಿಯೇ, ಶಿವನ ಅರ್ಧಶರೀರಿಣಿಯಾದ ನಿನಗೆ ನಮಸ್ಕಾರವು. ॥೨೮೦॥

ಪುಣ್ಯಸ್ವರೂಪದಿಂದ ಪುಣ್ಯವಂತರ ಮನಸ್ಸಿನಲ್ಲಿ ನೆಲಸಿರುವವಳೂ, ಧರ್ಮಸ್ವರೂಪದಿಂದ ಧರ್ಮಿಷ್ಠರ ಹೃದಯದಲ್ಲಿ ನೆಲಸಿರುವವಳೂ ಆಗಿ ಆ ಪರಶಿವನ ಅರ್ಧಾಂಗಿಣಿಯಾದ ದೇವಿಯೇ, ನಿನಗೆ ನಮಸ್ಕಾರಮಾಡುವೆವು. ॥೨೮೧-೨೮೨॥

ಶಾಂತಿರೂಪದಿಂದ ಶಾಂತಿಯುಳ್ಳವರ ಮನೆಯಲ್ಲಿಯೂ, ದಮಸ್ವರೂಪದಿಂದ ಇಂದ್ರಿಯನಿಗ್ರಹವುಳ್ಳವರ ಹೃದಯದಲ್ಲಿಯೂ ನೆಲಸಿ, ಪರಶಿವನ ಅರ್ಧಾಂಗಿನಿಯಾಗಿರುವ ದೇವಿಗೆ ಪ್ರಣಾಮಮಾಡುವೆನು. ॥೨೮೩-೨೮೪॥

ದಯಾಳುಗಳ ಮನಸ್ಸಿನಲ್ಲಿ ದಯಾರೂಪಿನಿಂದಲೂ, ಜ್ಞಾನಿಗಳ ಹೃದಯದಲ್ಲಿ ಜ್ಞಾನಸ್ವರೂಪದಿಂದಲೂ ನೆಲಸಿ, ಆ ಪರಮೇಶ್ವರನ ಅರ್ಧಶರೀರಿಣಿಯಾಗಿರುವ ಮಹಾದೇವಿಗೆ ನಮಸ್ಕಾರಮಾಡುವೆವು. ॥೨೮೫-೨೮೬॥

ಯಾತ್ವಂ ಪುಷ್ಟಿಸ್ವರೂಪೇಣ ಪುಷ್ಟಿವದ್ಧೃದಯೇ ಸ್ಥಿತಾ ।
ತಸ್ಯೈ ಶಿವಾಂಗಭಾಗಿನ್ಯೈ ನಮುಸ್ತುಭ್ಯಂ ನಮೋನಮಃ ॥೨೮೭॥

ಯಾತ್ವಂ ತುಷ್ಟಿಸ್ವರೂಪೇಣ ತುಷ್ಟಿವದ್ಧೃದಯೇ ಸ್ಥಿತಾ ।
ತಸ್ಯೈ ಶಿವಾಂಗಭಾಗಿನ್ಯೈ ನಮುಸ್ತುಭ್ಯಂ ನಮೋನಮಃ ॥೨೮೮॥

ಯಾತ್ವಂ ಶುಭಸ್ವರೂಪೇಣ ಶುಭವದ್ಧೃದಯೇ ಸ್ಥಿತಾ ।
ತಸ್ಯೈ ಶಿವಾಂಗಭಾಗಿನ್ಯೈ ನಮುಸ್ತುಭ್ಯಂ ನಮೋನಮಃ ॥೨೮೯॥

ಯಾತ್ವಂ ಯೋಗಸ್ವರೂಪೇಣ ಯೋಗವದ್ಧೃದಯೇ ಸ್ಥಿತಾ ।
ತಸ್ಯೈ ಶಿವಾಂಗಭಾಗಿನ್ಯೈ ನಮುಸ್ತುಭ್ಯಂ ನಮೋನಮಃ ॥೨೯೦॥

ಯಾತ್ವಂ ಸಿದ್ಧಿಸ್ವರೂಪೇಣ ಸಿದ್ಧಿವದ್ಧೃದಯೇ ಸ್ಥಿತಾ ।
ತಸ್ಯೈ ಶಿವಾಂಗಭಾಗಿನ್ಯೈ ನಮುಸ್ತುಭ್ಯಂ ನಮೋನಮಃ ॥೨೯೧॥

ಯಾತ್ವಂ ಕಲ್ಯಾಣರೂಪೇಣ ಭಕ್ತಕಲ್ಯಾಣದಾಯಿನೀ ।
ತಸ್ಯೈ ಶಿವಾಂಗಭಾಗಿನ್ಯೈ ನಮುಸ್ತುಭ್ಯಂ ನಮೋನಮಃ ॥೨೯೨॥

ಯಾತ್ವಂ ಧ್ಯಾನಸ್ವರೂಪೇಣ ಭಕ್ತಾನಾಂ ಧ್ಯಾನದಾಯಿನೀ ।
ತಸ್ಯೈ ಶಿವಾಂಗಭಾಗಿನ್ಯೈ ನಮುಸ್ತುಭ್ಯಂ ನಮೋನಮಃ ॥೨೯೩॥

ಪುಷ್ಟಿರೂಪದಿಂದ ಪುಷ್ಟರಾದ ಜನಗಳ ಮನಸ್ಸಿನಲ್ಲಿಯೂ, ತುಷ್ಟಿರೂಪದಿಂದ ತೃಪ್ತರಾದ ಜನಗಳ ಮನಸ್ಸಿನಲ್ಲಿಯೂ ನೆಲಸಿರುವ ಆ ಪರಶಿವನ ಅರ್ಧಶರೀರವನ್ನು ಹೊಂದಿರುವ ದೇವಿಯೇ, ನಿನಗೆ ಪ್ರಣಾಮುಮಾಡುವೆವು. ॥೨೮೭-೨೮೮॥

ಶುಭಸ್ವರೂಪದಿಂದ ಶುಭವಂತರ ಮನಸ್ಸಿನಲ್ಲಿಯೂ, ಯೋಗಸ್ವರೂಪದಿಂದ ಯೋಗಿಗಳ ಹೃದಯುದಲ್ಲಿಯೂ ನೆಲಸಿ, ಶಿವನ ಅರ್ಧಶರೀರಭಾಗಿಯಾಗಿರುವ ಗಿರಿಜಾದೇವಿಗೆ ನಮುಸ್ಕಾರವು. ॥೨೮೯-೨೯೦॥

ಸಿದ್ಧಪುರುಷರ ಹೃದಯುದಲ್ಲಿ ಸಿದ್ಧಿಯು ರೂಪಿನಿಂದ ನೆಲಸಿ ಕಲ್ಯಾಣಸ್ವರೂಪಳಾಗಿ ತನ್ನ ಭಕ್ತರಿಗೆ ಮಂಗಳವನ್ನುಂಟುಮಾಡುತ್ತಾ, ಆ ಪರಶಿವನ ಅರ್ಧಾಂಗಿಣಿಯಾಗಿರುವ ಗಿರಿಜಾದೇವಿಗೆ ಪ್ರಣಾಮುಮಾಡುವೆವು. ॥೨೯೧-೨೯೨॥

ಧ್ಯಾನಸ್ವರೂಪದಿಂದ ಭಕ್ತರಿಗೆ ಧ್ಯಾನವನ್ನುಂಟುಮಾಡುವವಳೂ, ಸಂತೋಷ

ಯಾತ್ವಂ ಸಂತೋಷರೂಪೇಣ ಭಕ್ತಸಂತೋಷದಾಯಿನೀ ।
ತಸ್ಯೈ ಶಿವಾಂಗಭಾಗಿನ್ಯೈ ನಮುಸ್ತುಭ್ಯಂ ನಮೋನಮಃ ॥೨೯೪॥

ಯಾತ್ವಮೈಶ್ವರ್ಯರೂಪೇಣ ಭಕ್ತೈಶ್ವರ್ಯಪ್ರದಾಯಿನೀ ।
ತಸ್ಯೈ ಶಿವಾಂಗಭಾಗಿನ್ಯೈ ನಮುಸ್ತುಭ್ಯಂ ನಮೋನಮಃ ॥೨೯೫॥

ಯಾತ್ವಂ ರಕ್ಷಣರೂಪೇಣ ಭಕ್ತರಕ್ಷಣದಾಯಿನೀ ।
ತಸ್ಯೈ ಶಿವಾಂಗಭಾಗಿನ್ಯೈ ನಮುಸ್ತುಭ್ಯಂ ನಮೋನಮಃ ॥೨೯೬॥

ಯಾತ್ವಮಾರೋಗ್ಯರೂಪೇಣ ಭಕ್ತಾರೋಗ್ಯಪ್ರದಾಯಿನೀ ।
ತಸ್ಯೈ ಶಿವಾಂಗಭಾಗಿನ್ಯೈ ನಮುಸ್ತುಭ್ಯಂ ನಮೋನಮಃ ॥೨೯೭॥

ಯಾ ತ್ವಂ ಸುಖಸ್ವರೂಪೇಣ ಭಕ್ತಾನಾಂ ಸುಖದಾಯಿನೀ ।
ತಸ್ಯೈ ಶಿವಾಂಗಭಾಗಿನ್ಯೈ ನಮುಸ್ತುಭ್ಯಂ ನಮೋ ನಮಃ ॥೨೯೮॥

ಇತಿ ದೇವೈಃ ಸ್ತುತಾ ದೇವೀ ಬ್ರಹ್ಮವಿಷ್ಣುಪುರೋಗಮೈಃ ।
ವಿದ್ಯುಲ್ಲತೇವ ವಿಮಲಾ ವಿವೇಶಾಧ್ವರಮಂಟಪಂ ॥೨೯೯॥

ರೂಪದಿಂದ ತನ್ನ ಭಕ್ತರಿಗೆ ಸಂತೋಷವನ್ನುಂಟುಮಾಡುವವಳೂ ಆದ ಶಿವನ ಅರ್ಧಾಂಗಿಣಿಯಾದ ದೇವಿಯೇ, ನಿನಗೆ ನಮುಸ್ಕಾರವು. ॥೨೯೩-೨೯೪॥

ಐಶ್ವರ್ಯರೂಪದಿಂದ ಭಕ್ತರಿಗೆ ಸಕಲೈಶ್ವರ್ಯಗಳನ್ನು ಕೊಡುವವಳೂ, ರಕ್ಷಣೆಯ ರೂಪಿನಿಂದ ತನ್ನ ಭಕ್ತರನ್ನು ಕಾಪಾಡುವವಳೂ ಆದ ದೇವಿಯೇ, ಶಿವನ ಅರ್ಧಶರೀರಕ್ಕೇ ಭಾಗಿನಿಯಾದ ನಿನಗೆ ನಮುಸ್ಕಾರಮಾಡುತ್ತೇವೆ. ॥೨೯೫-೨೯೬॥

ಆರೋಗ್ಯಸ್ವರೂಪದಿಂದ ಭಕ್ತರಿಗೆ ಆರೋಗ್ಯವನ್ನುಂಟುಮಾಡುವವಳೂ, ಸುಖಸ್ವರೂಪದಿಂದ ಭಕ್ತರಿಗೆ ಸುಖವನ್ನುಂಟುಮಾಡುವವಳೂ ಆದ ದೇವಿಯೇ, ಶಿವನ ಅರ್ಧಶರೀರಕ್ಕೆ ಒಡತಿಯಾದ ನಿನಗೆ ನಮುಸ್ಕಾರಮಾಡುವೆವು.''॥೨೯೭-೨೯೮॥

ಈ ರೀತಿಯಾಗಿ ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳಿಂದ ಸ್ತೋತ್ರ ಮಾಡಲ್ಪಟ್ಟ ಗಿರಿಜಾದೇವಿಯು ಮಿಂಚಿನ ಬಳ್ಳಿಯಂತೆ ಪ್ರಕಾಶಿಸುತ್ತಾ ಆ ಬ್ರಹ್ಮನ ಯಾಗಮಂಟಪವನ್ನು ಪ್ರವೇಶಮಾಡಿದಳು. ॥೨೯೯॥

ತಾಮಾಗತಾಂ ಸುರಾರಾಧ್ಯಾಂ ದಕ್ಷೋ ದೃಷ್ಟ್ವಾಽಪಿ ಶಾಂಕರೀಂ ।
ಅರ್ಘ್ಯಪಾದ್ಯಾದಿಭಿಃ ಶೀಘ್ರಂ ನೋಪತಸ್ಥೇ ಭ್ರಮಾನ್ವಿತಃ ॥೩೦೦॥

ತದಾ ತಂ ತಾದೃಶಂ ದಕ್ಷಮುಪವಿಷ್ಟಂ ಕುಶಾಸನೇ ।
ವಿಲೋಕ್ಯಾಹ ಋಷಿಶ್ರೇಷ್ಠೋ ದಧೀಚಿಃ ಕ್ರೋಧಸಂಯುತಃ ॥೩೦೧॥

॥ ದಧೀಚಿರುವಾಚ ॥

ರೇರೇ ದಕ್ಷ ದುರಾಚಾರ ದಂಭಾಚಾರಪರಾಯಣ ।
ನ ಕರೋಷಿ ಕಥಂ ಪೂಜಾಂ ಮಂಗಲಾಯೈ ಯಥಾವಿಧಿ ॥೩೦೨॥

ಇಯಮೇವ ಸುರಾರಾಧ್ಯಾ ಸರ್ವಯಾಗಫಲಪ್ರದಾ ।
ಇಯಮೇವಾದ್ಯ ಕಲ್ಯಾಣೀ ಶಂಕರಾರ್ಧಾಂಗಭಾಗಿನೀ ॥೩೦೩॥

ಇಯಮೇವಾರ್ಚಿತಾ ನಿತ್ಯಂ ಸಂಸಾರಭಯನಾಶಿನೀ ।
ಇಯಮೇವಾರ್ಚಿತಾ ನಿತ್ಯಂ ಸರ್ವಸೌಭಾಗ್ಯದಾಯಿನೀ ॥೩೦೪॥

ದೇವತೆಗಳಿಂದ ಪೂಜಿಸಲು ಯೋಗ್ಯಳೆನಿಸಿದ ಆ ಶಂಕರಿಯು ಬರುತ್ತಿರುವದನ್ನು ನೋಡಿದರೂ, ದಕ್ಷಬ್ರಹ್ಮನು ದೇವಿಯನ್ನು ಅರ್ಘ್ಯ, ಪಾದ್ಯಾದಿಗಳೊಡನೆ ಜಾಗ್ರತೆ ಉಪಚರಿಸದೆ ಭ್ರಾಂತನಾಗಿ ಸುಮ್ಮನೆ ಕುಳಿತಿದ್ದನು. ॥೩೦೦॥

ಆಗ, ಪೂಜಾರ್ಹಳಾದ ದೇವಿಯನ್ನು ಪೂಜೆಮಾಡದೇ ಉದಾಸೀನವಾಗಿ ದರ್ಭೆಗಳ ಆಸನದಮೇಲೆ ಕುಳಿತಿದ್ದ ಆ ದಕ್ಷಬ್ರಹ್ಮನನ್ನು ನೋಡಿ, ಋಷಿಶ್ರೇಷ್ಠನಾದ ದಧೀಚಿಮುನಿಯು ಕೋಪದಿಂದ ಹೀಗೆ ನುಡಿದನು. ॥೩೦೧॥

“ಎಲೈ ದುರಾಚಾರಿಯಾದ ದಕ್ಷನೇ! ಕೇವಲ ಮೂಢನಾಗಿ ದಂಭಾಚಾರದಲ್ಲಿಯೇ ತತ್ಪರನಾಗಿರುವ ನೀನು, ಸರ್ವಮಂಗಳಾದೇವಿಯು ನಿನ್ನ ಯಾಗಮಂಟಪಕ್ಕೆ ಬಂದರೂ ಅವಳನ್ನು ಉಚಿತವಾಗಿ ಸತ್ಕರಿಸದೇ ಏಕೆ ಉದಾಸೀನನಾಗಿರುವೆ? ॥೩೦೨॥

ಈ ಮಹಾದೇವಿಯೇ ಸಕಲ ದೇವತೆಗಳಿಂದಲೂ ಪೂಜಾರ್ಹಳು. ಸಕಲ ಯಾಗಗಳ ಫಲವನ್ನು ಕೊಡುವವಳೂ ಇವಳೇ ಆಗಿರುವಳು. ಮಂಗಳಸ್ವರೂಪಳಾದ ಇವಳೇ ಶಂಕರನ ಅರ್ಧಾಂಗ ಭಾಗಿನಿಯಾಗಿರುವಳು. ನಿತ್ಯವೂ ಈ ದೇವಿಯನ್ನು ಪೂಜೆಮಾಡಿದರೆ ಸಕಲ ಸಂಸಾರದ ಭಯವನ್ನೂ ಹೋಗಲಾಡಿಸುವಳು. ಅಲ್ಲದೇ

ಇಯಮೇವಾರ್ಚಿತಾ ನಿತ್ಯಂ ಸರ್ವಮಂಗಲದಾಯಿನೀ ।
ಇಯಮೇವಾರ್ಚಿತಾ ನಿತ್ಯಂ ಸರ್ವೋಪದ್ರವಹಾರಿಣೀ ॥೩೦೫॥

ಇಯಮೇವಾರ್ಚಿತಾ ನಿತ್ಯಂ ಕೀರ್ತಿಸಂಪತ್ಪ್ರದಾಯಿನೀ ।
ಇಯಮೇವಾರ್ಚಿತಾ ನಿತ್ಯಂ ಭುಕ್ತಿಮುಕ್ತಿಪ್ರದಾಯಿನೀ ॥೩೦೬॥

ಇಯಮೇವ ಜಗದ್ಧಾತ್ರೀ ಜಗದ್ರಕ್ಷಣಕಾರಿಣೀ ।
ಇಯಮೇವ ಹಿ ಕಲ್ಪಾಂತೇ ಜಗತ್ಸಂಹಾರಕಾರಿಣೀ ॥೩೦೭॥

ಇಯಮೇವ ಹಿ ಕಲ್ಯಾಣೀ ವಿಷ್ಣುಮಾತಾ ಯಶಸ್ವಿನೀ ।
ಇಯಮೇವೇಂದ್ರಚಂದ್ರಾರ್ಕಬ್ರಹ್ಮಾದಿಜನನೀ ಸ್ಮೃತಾ ॥೩೦೮॥

ಇಯಮೇವ ತಪೋಧರ್ಮದಾನಾದಿಫಲದಾಯಿನೀ ।
ಇಯಮೇವ ಹಿ ವೇದೋಕ್ತಸರ್ವಕರ್ಮಫಲಪ್ರದಾ ॥೩೦೯॥

ಅನವರತವೂ ಪೂಜಿಸಲ್ಪಟ್ಟ ಇವಳು ಸಕಲ ಸೌಭಾಗ್ಯವನ್ನೂ ಉಂಟುಮಾಡುವಳು. ||೩೦೩-೩೦೪||

ಈ ದೇವಿಯನ್ನೇ ನಿತ್ಯವೂ ಪೂಜೆಮಾಡಿದರೆ ಸಕಲ ಸನ್ಮಂಗಳಗಳೂ ಉಂಟಾಗುವುವಲ್ಲದೇ ಸಕಲ ತೊಂದರೆಗಳೂ ನಾಶವಾಗುವುವು. ನಿತ್ಯವೂ ಪೂಜಿಸಲ್ಪಟ್ಟ ಈ ದೇವಿಯು ತನ್ನ ಭಕ್ತರ ಕೀರ್ತಿಯನ್ನೂ ಮತ್ತು ಐಶ್ವರ್ಯವನ್ನೂ ಅಭಿವೃದ್ಧಿಪಡಿಸಿ, ಅವರಿಗೆ ಭುಕ್ತಿಯನ್ನೂ ಮುಕ್ತಿಯನ್ನೂ ಕೊಡುವಳು. ||೩೦೫-೩೦೬||

ಸಕಲ ಜಗಜ್ಜನನಿಯೂ, ಜಗದ್ರಕ್ಷಣಕಾರಿಣಿಯೂ ಇವಳೇ ಆಗಿರುವಳು. ಕಲ್ಪದ ಕೊನೆಯಲ್ಲಿ ಸಕಲ ಜಗತ್ತನ್ನು ಸಂಹಾರಮಾಡುವವಳೂ ಈಕೆಯೇ. ಮಂಗಳ ಸ್ವರೂಪಳಾದ ಈಕೆಯೇ ವಿಷ್ಣುವಿನ ತಾಯಿಯಾಗಿರುವಳು. ಅಲ್ಲದೇ ಕೀರ್ತಿವಂತಳಾದ ಈ ದೇವಿಯೇ, ಇಂದ್ರ, ಚಂದ್ರ, ಸೂರ್ಯ, ಬ್ರಹ್ಮ ಮೊದಲಾದ ದೇವತೆಗಳಿಗೂ ತಾಯಿಯಾಗಿರುವಳು. ||೩೦೭-೩೦೮||

ತಪಸ್ಸು, ಧರ್ಮಕಾರ್ಯಗಳು, ದಾನ, ಮೊದಲಾದವುಗಳಿಗೆಲ್ಲಾ ಫಲ ಕೊಡುವವಳೂ ಇವಳೇ ಆಗಿರುವಳು. ಅಲ್ಲದೆ ವೇದದಲ್ಲಿ ಹೇಳಿದ ಎಲ್ಲಾ ಕರ್ಮಗಳಿಗೂ ಈ ದೇವಿಯೇ ಫಲಗಳನ್ನು ಕೊಡುವಳಾಗಿರುವಳು. ||೩೦೯||

ಇಯಮೇವ ಸ್ತುತಾ ದೇವೈರ್ವೇದಾಂತೈರಖಿಲೈರಪಿ ।
ಇಯಮೇವ ಸ್ತುತಾ ಸರ್ವೈರಿತಿಹಾಸಾದಿಭಿಃ ಪುನಃ ॥೩೧೦॥

ತಪ್ಯತೇ ಹಿ ತಪಃಸಿದ್ಧೈರೇತದ್ದರ್ಶನಕಾಂಕ್ಷಿಭಿಃ ।
ಪೂಜ್ಯತೇ ಯೋಗಿಭಿರ್ಯೋಗೈರೇತದ್ದರ್ಶನಕಾಂಕ್ಷಿಭಿಃ ॥೩೧೧॥

ಧರ್ಮಾಃ ಕ್ರಿಯಂತೇ ಮುನಿಭಿರೇತದ್ದರ್ಶನಕಾಂಕ್ಷಿಭಿಃ ।
ಇಜ್ಯತೇ ಯಜ್ವಿಭಿರ್ಯಾಗೈರೇತದ್ದರ್ಶನಕಾಂಕ್ಷಿಭಿಃ ॥೩೧೨॥

ಅನಂತದಾನಧರ್ಮಾಣಾಂ ಶಾಂಕರೀದರ್ಶನಂ ಫಲಂ ।
ಯಾಗಾದೀನಾಂ ಚ ಧರ್ಮಾಣಾಂ ಶಾಂಕರೀದರ್ಶನಂ ಫಲಂ॥೩೧೩॥

ಇಯಮೇವ ಜಗನ್ಮಾತಾ ಸರ್ವವಿದ್ಯಾಸ್ವರೂಪಿಣೀ ।
ಇಯಮೇವಾದಿವಿದ್ಯೇಯಂ ಸರ್ವಮಂಗಳರೂಪಿಣೀ ॥೩೧೪॥

ದೇವತೆಗಳೂ, ಸಕಲ ವೇದಾಂತಶಾಸ್ತ್ರಗಳೂ, ಎಲ್ಲಾ ಇತಿಹಾಸಪುರಾಣಾದಿಗಳೂ ಈ ಜಗದಂಬಿಕೆಯನ್ನೇ ಸ್ತೋತ್ರಮಾಡುತ್ತಿರುವುವು. ॥೩೧೦॥

ಸಿದ್ಧಪುರುಷರೆಲ್ಲರೂ, ಈ ದೇವಿಯ ದರ್ಶನ ಹೊಂದುವುದಕ್ಕಾಗಿಯೇ ತಪಸ್ಸು ಮಾಡುತ್ತಿರುವರು. ಈ ಜಗದಂಬಿಕೆಯ ದರ್ಶನವನ್ನು ಅಪೇಕ್ಷಿಸಿ, ಯೋಗಿಗಳು ತಮ್ಮ ಯೋಗಸಾಧನೆಗಳಿಂದ ಇವಳನ್ನು ಪೂಜಿಸುತ್ತಿರುವರು. ॥೩೧೧॥

ಮುನಿಗಳು ಈ ದೇವಿಯ ದರ್ಶನವನ್ನು ಹೊಂದಲು ಸಕಲ ಧರ್ಮಕಾರ್ಯಗಳನ್ನೂ ನಡೆಸುತ್ತಿರುವರು. ಇವಳ ದರ್ಶನವನ್ನು ಪಡೆಯುವುದಕ್ಕಾಗಿಯೇ ಯಾಗವನ್ನು ಮಾಡುವ ಹೋತೃಗಳೆಲ್ಲರೂ ಯಾಗಾದಿಗಳಿಂದ ಈಕೆಯನ್ನು ಸಂತೋಷಪಡಿಸುತ್ತಿರುವರು. ॥೩೧೨॥

ಅಪಾರವಾದ ದಾನಧರ್ಮಗಳಿಗೂ, ಯಜ್ಞಕರ್ಮಗಳೇ ಮೊದಲಾದ ಧರ್ಮಕಾರ್ಯಗಳಿಗೂ ಈ ಜಗನ್ಮಂಗಳೆಯಾದ ದೇವಿಯ ದರ್ಶನವೇ ಫಲವಾಗಿರುವುದು. ॥೩೧೩॥

ಜಗಜ್ಜನನಿಯೂ, ಸಕಲ ವಿದ್ಯಾರೂಪಿಣಿಯೂ ಈ ದೇವಿಯೇ ಆಗಿರುವಳು. ಸರ್ವಮಂಗಳಸ್ವರೂಪಿಣಿಯಾದ ಈ ದೇವಿಯು ಆದಿವಿದ್ಯಾರೂಪಿಣಿಯೂ ಆಗಿರುವಳು. ॥೩೧೪॥

ಭವಾನ್ಯಾಃ ಪೂಜನಂ ಶೀಘ್ರಂ ಯತೋಽದ್ಯ ನ ಕೃತಂ ತ್ವಯಾ ।
ಅತ ಏವಾಧ್ವರಸ್ಯಾಸ್ಯ ವಿನಾಶೋಽದ್ಯ ಭವಿಷ್ಯತಿ ॥೩೧೫॥

ಅಮಂಗಲಂ ಭವತ್ಯೇವ ಪೂಜಾರ್ಹಾಣಾಮಪೂಜಯಾ ।
ಪೂಜ್ಯಮಾತ್ರಾಪಿ ನೈವೇಯಂ ಯತಃ ಪೂಜ್ಯತಮಾ ಶಿವಾ ॥೩೧೬॥

ಸಹಸ್ರೇಣಾಪಿ ಶಿರಸಾಮಪಿ ಯತ್ಪಾದಾಂಬುಜಂ ರಜಃ ।
ವಹತ್ಯನ್ವಹಭುಗ್ನಾಂಗಃ ಸೇಯಂ ಭಗವತೀ ಶಿವಾ ॥೩೧೭॥

ವಿಧಿಃ ಪ್ರಾಪ್ಯಾತಿಯತ್ನೇನ ಯತ್ಪಾದಾಬ್ಜರಜಃ ಕಣಂ ।
ರಚಯತ್ಯಖಿಲಾನ್ಲೋಕಾನ್ಸೇಯಂ ಭಗವತೀ ಶಿವಾ ॥೩೧೮॥

ಎಲೈ ದಕ್ಷನೇ! ಈ ಭವಾನೀದೇವಿಯ ಪೂಜೆಯನ್ನು ನೀನು ಶೀಘ್ರವಾಗಿ ಮಾಡದೇ ಹೋದುದರಿಂದ ಈಗಲೇ ನಿನ್ನ ಯಾಗವು ನಾಶವಾಗುವುದು ನಿಜ.॥೩೧೫॥

ಪೂಜಾಯೋಗ್ಯರಾದವರನ್ನು ಪೂಜಿಸದೇ ಬಿಡುವುದರಿಂದ ವಿಶೇಷವಾಗಿ ಅಮಂಗಳವುಂಟಾಗುವುದು ಸ್ವಭಾವವೇ ಆಗಿದೆ. ಹೀಗೆ ಕೇವಲ ಪೂಜಾರ್ಹಳೇ ಅಲ್ಲದೇ, ವಿಶೇಷವಾಗಿ ಪೂಜನೀಯಳಾದ ಈ ಶಿವನ ಅರ್ಧಾಂಗಿಯನ್ನು ಪೂಜೆ ಮಾಡದಿರುವುದು ದೊಡ್ಡ ಅಪರಾಧವೇ ಅಲ್ಲವೆ! ॥೩೧೬॥

ಸಾವಿರ ತಲೆಗಳುಳ್ಳ ಆದಿಶೇಷನೂ ಸಹ ಪ್ರತಿನಿತ್ಯವೂ, ತನ್ನ ಸಹಸ್ರ ತಲೆಗಳಲ್ಲಿಯೂ ಯಾವ ದೇವಿಯ ಪಾದಧೂಳಿಯನ್ನು ಧರಿಸಿ ನಮ್ರವಾದ ಶರೀರಾವಯವವುಳ್ಳವನಾಗಿ ವಿರಾಜಿಸುತ್ತಿರುವನೋ, ಅಂತಹ ಷಡ್ಗುಣೈಶ್ವರ್ಯಸಂಪನ್ನಳಾದ ಈ ದೇವಿಯು, ಪರಶಿವನ ಪತ್ನಿಯೂ ಪರಮಪಾವನಳೂ ಆಗಿರುವಳು. ॥೩೧೭॥

ಭಗವತಿಯಾದ ಈ ಗಿರಿಜಾದೇವಿಯ ಪಾದಧೂಳಿಯ ಕಣಗಳನ್ನು ಅತ್ಯಂತ ಪ್ರಯಾಸದಿಂದ ಪಡೆದು, ಬ್ರಹ್ಮನು ಸಕಲ ಲೋಕಗಳನ್ನೂ ಸೃಷ್ಟಿಮಾಡುತ್ತಿರುವನು. (ಅಂದರೆ ಸೃಷ್ಟಿಕರ್ತನಾದ ಬ್ರಹ್ಮನೂ ದೇವಿಯ ಪಾದಧೂಳಿಯ ಅನುಗ್ರಹದಿಂದಲೇ ಜಗತ್ಸೃಷ್ಟಿಕಾರ್ಯವನ್ನು ನಿರಾತಂಕವಾಗಿ ನಡೆಸುವ ಸಾಮರ್ಥ್ಯವನ್ನು ಪಡೆದಿರುವನೆಂದು ಭಾವವು.) ॥೩೧೮॥

ಇಂದ್ರೋಽಪಿ ಯತ್ಪ್ರಸಾದೇನ ವೃತ್ರಂ ಹತ್ವಾ ಮಹಾಸುರಂ ।
ಸ್ವರ್ಗಾಧಿಪತ್ಯಂ ಸಂಪ್ರಾಪ ಸೇಯಂ ಭಗವತೀ ಶಿವಾ ॥೩೧೯॥

ಯತ್ಪಾದಪದ್ಮಮನಿಶಂ ಧ್ಯಾತ್ವಾ ಸಂಪೂಜ್ಯ ಸಾದರಂ ।
ವಿಷ್ಣುರ್ವಿಷ್ಣುತ್ವಮಾಪನ್ನಃ ಸೇಯಂ ಭಗವತೀ ಶಿವಾ ॥೩೨೦॥

ಯತ್ಪಾದಪದ್ಮಮನಿಶಂ ಧ್ಯಾತ್ವಾ ಸಂಪೂಜ್ಯ ಸಾದರಂ ।
ಬ್ರಹ್ಮಾ ಬ್ರಹ್ಮತ್ವಮಾಪನ್ನಃ ಸೇಯಂ ಭಗವತೀ ಶಿವಾ ॥೩೨೧॥

ಯತ್ಪಾದಪದ್ಮಮನಿಶಂ ಧ್ಯಾತ್ವಾ ಸಂಪೂಜ್ಯ ಸಾದರಂ ।
ಈಶೋ ಈಶತ್ವಮಾಪನ್ನಃ ಸೇಯಂ ಭಗವತೀ ಶಿವಾ ॥೩೨೨॥

ಯತ್ಪಾದಪದ್ಮಮನಿಶಂ ಧ್ಯಾತ್ವಾ ಸಂಪೂಜ್ಯ ಸಾದರಂ ।
ಇಂದ್ರೋಪೀಂದ್ರತ್ವಮಾಪನ್ನಃ ಸೇಯಂ ಭಗವತೀ ಶಿವಾ ॥೩೨೩॥

ಯತ್ಪಾದಪದ್ಮಮನಿಶಂ ಧ್ಯಾತ್ವಾ ಸಂಪೂಜ್ಯ ಸಾದರಂ ।
ಸೂರ್ಯಃ ಸೂರ್ಯತ್ವಮಾಪನ್ನಃ ಸೇಯಂ ಭಗವತೀ ಶಿವಾ ॥೩೨೪॥

ಭಗವತಿಯಾದ ಈ ದೇವಿಯ ಅನುಗ್ರಹವನ್ನು ಪಡೆದು, ಇಂದ್ರನು ವೃತ್ರನೆಂಬ ಘೋರರಾಕ್ಷಸನನ್ನು ಕೊಂದು ಸ್ವರ್ಗಕ್ಕೆ ಅಧಿಪತಿಯೆನಿಸಿದನು. ವಿಷ್ಣುವೂ ಕೂಡ ಅನವರತವೂ ಈ ದೇವಿಯ ಅಡಿದಾವರೆಗಳನ್ನು ಭಕ್ತಿಯಿಂದ ಧ್ಯಾನಿಸುತ್ತಲೂ, ಪೂಜೆಮಾಡುತ್ತಲೂ, ತಾನು ವಿಷ್ಣು ಪದವಿಯನ್ನು ಹೊಂದಿ ವಿರಾಜಿಸುತ್ತಿರುವನು. ॥೩೧೯-೩೨೦॥

ಯಾವ ದೇವಿಯ ಕಮಲದಂತಿರುವ ಕಾಲುಗಳ ಪೂಜೆ ಮತ್ತು ಧ್ಯಾನ ಮಹಿಮೆ, ದೃಢಭಕ್ತಿ ಇವುಗಳಿಂದ ಬ್ರಹ್ಮನಿಗೆ ಬ್ರಹ್ಮಪದವಿಯೂ, ಈಶ್ವರನಿಗೆ ಈಶತ್ವವೂ ಉಂಟಾದುವೋ ಅಂತಹ ಮಹಾಮಹಿಮೆಯುಳ್ಳ ಈ ಶಿವನ ಅರ್ಧಾಂಗಿಯು, ಷಡ್ಗುಣೈಶ್ವರ್ಯಸಂಪನ್ನಳಾಗಿರುವಳು. ॥೩೨೧-೩೨೨॥

ಭಗವತಿಯಾದ ಈ ದೇವಿಯ ಪಾದಕಮಲಗಳನ್ನೇ ಅನವರತವೂ ಧ್ಯಾನ ಮಾಡಿ, ಭಕ್ತಿಯಿಂದ ಪೂಜಿಸಿ, ಇಂದ್ರನು ಇಂದ್ರಪದವಿಯನ್ನೂ, ಸೂರ್ಯನು ಸೂರ್ಯಪದವಿಯನ್ನೂ ಹೊಂದಿರುವರು. ॥೩೨೩-೩೨೪॥

ಯತ್ಪಾದಪದ್ಮಮನಿಶಂ ಧ್ಯಾತ್ವಾ ಸಂಪೂಜ್ಯ ಸಾದರಂ ।
ಚಂದ್ರಶ್ಚಂದ್ರತ್ವಮಾಪನ್ನಃ ಸೇಯಂ ಭಗವತೀ ಶಿವಾ ॥೩೨೫॥

ಯತ್ಪಾದಪದ್ಮಮನಿಶಂ ಧ್ಯಾತ್ವಾ ಸಂಪೂಜ್ಯ ಸಾದರಂ ।
ವಹ್ನಿರ್ವಹ್ನಿತ್ವಮಾಪನ್ನಃ ಸೇಯಂ ಭಗವತೀ ಶಿವಾ ॥೩೨೬॥

ಯತ್ಪಾದಪದ್ಮಮನಿಶಂ ಧ್ಯಾತ್ವಾ ಸಂಪೂಜ್ಯ ಸಾದರಂ ।
ವಾಯುರ್ವಾಯುತ್ವಮಾಪನ್ನಃ ಸೇಯಂ ಭಗವತೀ ಶಿವಾ ॥೩೨೭॥

ಯತ್ಪಾದಪದ್ಮಮನಿಶಂ ಧ್ಯಾತ್ವಾ ಸಂಪೂಜ್ಯ ಸಾದರಂ ।
ಯಮೋ ಯಮತ್ವಮಾಪನ್ನಃ ಸೇಯಂ ಭಗವತೀ ಶಿವಾ ॥೩೨೮॥

ಯತ್ಪಾದಪದ್ಮಮನಿಶಂ ಧ್ಯಾತ್ವಾ ಸಂಪೂಜ್ಯ ಸಾದರಂ ।
ಪಾಶೀ ಪಾಶತ್ವಮಾಪನ್ನಃ ಸೇಯಂ ಭಗವತೀ ಶಿವಾ ॥೩೨೯॥

ಮಹಾದೇವೋಽಪಿ ಯಾಂ ತ್ಯಕ್ತ್ವಾ ಕ್ಷಣಮಾತ್ರಮಪಿ ಪ್ರಭುಃ ।
ನ ತಿಷ್ಠತ್ಯೇವ ಸಹಸಾ ಸೇಯಂ ಭಗವತೀ ಶಿವಾ ॥೩೩೦॥

ಶಿವನ ಪತ್ನಿಯಾದ ಈ ಭಗವತಿಯ, ಪಾದಕಮಲಗಳನ್ನು ಅನವರತವೂ ಧ್ಯಾನಮಾಡಿ ಆದರದಿಂದ ಪೂಜಿಸಿದನಂತರ, ಚಂದ್ರನು ಚಂದ್ರಪದವಿಯನ್ನೂ ಹಾಗೆಯೇ ಯಜ್ಞೇಶ್ವರನು ತನ್ನ ಆಧಿಪತ್ಯವನ್ನೂ ಪಡೆದನು. ॥೩೨೫-೩೨೬॥

ಶಿವನ ಅರ್ಧಾಂಗಿಯಾದ ಈ ಭಗವತಿಯ ಪಾದಕಮಲಗಳನ್ನು ಯಾವಾಗಲೂ ಎಡಬಿಡದೇ ಧ್ಯಾನಿಸಿ, ಪೂಜೆಯನ್ನೂ ಮಾಡಿ, ಆದರದಿಂದ ಸೇವಿಸಿದ ವಾಯುದೇವನಿಗೆ ವಾಯುಪದವಿಯೂ, ಯಮನಿಗೆ ಯಮಪಟ್ಟವೂ ಉಂಟಾದುವು. ॥೩೨೭-೩೨೮॥

ಆದರದಿಂದ ಈ ಮಂಗಳಾಂಗಿಯಾದ ಭಗವತಿಯ ಚರಣಕಮಲಗಳ ಅನವರತ ಧ್ಯಾನ, ಮತ್ತು ಪೂಜೆಗಳನ್ನು ಮಾಡಿದ ವರುಣನಿಗೆ(ಪಾಶಾಯುಧಧಾರಿಗೆ) ಜಲಾಧಿಪತ್ಯವು ಪ್ರಾಪ್ತವಾಯಿತು. ಸರ್ವಸಮರ್ಥನಾದ ಆ ಮಹಾದೇವನೂ ಕೂಡ, ಈ ಭಗವತಿಯನ್ನು ಒಂದು ಕ್ಷಣಕಾಲವೂ ಬಿಟ್ಟಿರಲಾರದೇ ಚಿಂತಿಸುವನು. ಅಂತಹ ಮಹಿಮೆಯು ಈ ದೇವಿಯಲ್ಲಿಯೇ ಅಡಗಿರುವುದಲ್ಲವೆ! ॥೩೨೯-೩೩೦॥

ಏತಸ್ಯಾಃ ಶೋಭನಾ ದೃಷ್ಟಿಃ ಯಸ್ಮಿನ್ಪ್ರಸರತಿ ಕ್ಷಣಂ ।
ಸ ಧನ್ಯಃ ಸ ಗುಣೀ ಧನ್ಯಃ ಸರ್ವಸೌಭಾಗ್ಯಸಂಶ್ರಯಃ ॥೩೩೧॥

ಭವಾನ್ಯಾ ಕುಟಿಲಾ ದೃಷ್ಟಿಃ ಯಸ್ಮಿನ್ಪ್ರಸರತಿ ಕ್ಷಣಂ ।
ಸ ದುರ್ಭಗೋ ನಿರ್ಗುಣಶ್ಚ ಸರ್ವಾಪತ್ಸಂಶ್ರಯಶ್ಚ ಸಃ ॥೩೩೨॥

ಸೇಯಂ ಭಗವತೀ ಧನ್ಯಾ ಭವಾನೀ ಭಾಗ್ಯದಾಯಿನೀ ।
ಯದಿ ನಾರಾಧ್ಯತೇ ಭಕ್ತ್ಯಾ ಕಥಂ ಭಾಗ್ಯಂ ಭವಿಷ್ಯತಿ ॥೩೩೩॥

ದೌರ್ಭಾಗ್ಯಂ ತ್ವಯಿ ಸಂಕ್ರಾಂತಂ ಸಂಕ್ರಾಂತಾಶ್ಚಾಪದಸ್ತ್ವಯಿ ।
ಯತೋ ನಾರಾಧಿತಾ ಭಕ್ತ್ಯಾ ಭವಾನೀ ಸರ್ವಮಂಗಲಾ ॥೩೩೪॥

ಕಲ್ಯಾಣಂ ತನುತೇ ಸೇಯಂ ಸ್ಮೃತಾಽಪಿ ಶುಭದಾ ಶಿವಾ ।
ಸೇಯಂ ಕಥಂ ತ್ವಯಾ ಭಕ್ತ್ಯಾ ದಕ್ಷ ನಾರಾಧ್ಯತೇ ವದ ॥೩೩೫॥

ಈ ದೇವಿಯ ಶುಭಕರವಾದ ದೃಷ್ಟಿಯು, ಒಂದು ಕ್ಷಣಕಾಲ ಯಾರಮೇಲೆ ಬೀಳುವುದೋ ಆತನೇ ಧನ್ಯನೂ, ಗುಣಶಾಲಿಯೂ, ಸಕಲ ಸೌಭಾಗ್ಯಗಳಿಗೂ ಆಶ್ರಯನೂ ಆಗುವನು. ॥೩೩೧॥

ಈ ಭವಾನೀದೇವಿಯ ಕುಟಿಲವಾದ ದೃಷ್ಟಿಯು ಯಾರಮೇಲೆ ಬೀಳುವುದೋ, ಅವರು ದುರದೃಷ್ಟಶಾಲಿಯೂ (ಐಶ್ವರ್ಯಹೀನನೂ) ಗುಣರಹಿತನೂ, ಎಲ್ಲಾ ವಿಧವಾದ ತೊಂದರೆಗಳಿಗೂ ಆಶ್ರಯನಾದವನೂ ಆಗುವನು. ॥೩೩೨॥

ಷಡ್ಗುಣೈಶ್ವರ್ಯಸಂಪನ್ನಳೂ, ಧನ್ಯಳೂ, ಆದ ಈ ಭವಾನೀದೇವಿಯು ಸಕಲ ಸೌಭಾಗ್ಯಗಳನ್ನೂ ಕೊಡುವಳು. ಇಂತಹ ಮಹಾಮಹಿಮಳಾದ ದೇವಿಯನ್ನು ಪೂಜೆಮಾಡದಿದ್ದರೆ ಹೇಗೆ ತಾನೇ ಭಾಗ್ಯವುಂಟಾದೀತು ? ॥೩೩೩॥

ಸರ್ವಮಂಗಳಸ್ವರೂಪಿಣಿಯಾದ ಭವಾನಿಯನ್ನು ಭಕ್ತಿಯಿಂದ ನೀನು ಪೂಜಿಸದೇ ಹೋದುದರಿಂದ, ದೌರ್ಭಾಗ್ಯವೂ ಸಕಲವಾದ ವಿಪತ್ತುಗಳೂ ನಿನಗೆ ತಪ್ಪದೇ ಉಂಟಾಗುತ್ತವೆ. ॥೩೩೪॥

ಕೇವಲ ಸ್ಮರಿಸಿದ ಮಾತ್ರದಿಂದಲೇ ಮಂಗಳಕರಳಾದ ಈ ದೇವಿಯು ಕಲ್ಯಾಣಪರಂಪರೆಗಳನ್ನೇ ಕೊಡುವಳು. ಎಲೈ ದಕ್ಷನೇ ! ಇಂತಹ ದೇವಿಯನ್ನು ಭಕ್ತಿಯಿಂದ ಏಕೆ ಪೂಜೆಮಾಡುವುದಿಲ್ಲವೋ, ತಿಳಿಯದು. ॥೩೩೫॥

ಅನಭ್ಯರ್ಚ್ಯಾಪಿ ಕಲ್ಯಾಣೀಂ ಕಲ್ಯಾಣಂ ಪ್ರಾಪ್ನುಯಾಮಿತಿ ।
ಕಿಮಸ್ತಿ ಗರ್ವೋ ದುರ್ವಾದಃ ಸಗರ್ವೋಽದ್ಯ ವಿನಶ್ಯತಿ ॥೩೩೬॥

ದಕ್ಷ ತೇ ಗರ್ವನಿರ್ವಾಹಃ ಕಮಾಶ್ರಿತ್ಯ ಭವಿಷ್ಯತಿ ।
ನಾಸ್ತಿ ಕೋಽಪ್ಯತ್ರ ದೇವೇಶೋ ಗರ್ವನಿರ್ವಾಹಕಸ್ತವ ॥೩೩೭॥

ಶರ್ವಾಣೀ ವಿಮುಖೀ ಭೂತ್ವಾ ದೇವೇಷ್ವೇತೇಷು ಕಸ್ತವ ।
ಕರಿಷ್ಯತ್ಯದ್ಯ ಸಾಹಾಯ್ಯಂ ತಂ ನ ಪಶ್ಯಾಮಿ ಸರ್ವಥಾ ॥೩೩೮॥

ಯದಿ ದೇವಾಃ ಕರಿಷ್ಯಂತಿ ಸಾಹಾಯ್ಯಮಧುನಾ ತವ ।
ತದಾ ನಾಶಂ ಪ್ರಯಾಸ್ಯಂತಿ ಶಲಭಾ ಇವ ವಹ್ನಿಗಾಃ ॥೩೩೯॥

ತವಾದ್ಯ ಶೂಲಸಂಭೂತಪಾವಕೇನಾಮಿತೌಜಸಾ ।
ದಹನಂ ಪ್ರಾಯಶೋ ಭಾವಿ ಸಂಶಯೋ ನಾತ್ರ ಸರ್ವಥಾ ॥೩೪೦॥

ಮಂಗಳಸ್ವರೂಪಳಾದ ಈ ದೇವಿಯನ್ನು ಪೂಜೆಮಾಡದೆಯೇ ನಾನು ಮಂಗಳವನ್ನು ಹೊಂದುವೆನೆಂಬ ಅಸಾಧ್ಯವಾದ ಗರ್ವವು ನಿನಗೆ ಇದೆ. ಈ ಅಹಂಕಾರವೆಲ್ಲಾ ಈ ಕ್ಷಣದಲ್ಲೇ ನಾಶವಾಗುವುದು. ॥೩೩೬॥

ಅಯ್ಯಾ ದಕ್ಷನೇ, ಯಾರ ಬಲದಿಂದ ನೀನು ಹೀಗೆ ಗರ್ವಪಡುತ್ತಿರುವೆ? ನಿನ್ನ ಅಹಂಕಾರವನ್ನು ನಿರ್ವಹಿಸುವ ದೇವೋತ್ತಮನು ಇಲ್ಲಿ ಯಾರೂ ಇಲ್ಲವೆಂದು ತಿಳಿ. ॥೩೩೭॥

ಶರ್ವನ ಪತ್ನಿಯೇ ನಿನಗೆ ವಿರುದ್ಧವಾಗಿರುವಾಗ, ದೇವತೆಗಳಲ್ಲಿ ಯಾರು ನಿನಗೆ ಸಹಾಯ ಮಾಡುತ್ತಾರೋ ಕಾಣೆನು. (ಯಾವ ದೇವತೆಗಳೂ ಈ ದೇವಿಯು ವಿಮುಖಳಾದ ಮೇಲೆ ನಿನಗೆ ಸಹಾಯ ಮಾಡಲಾರರು. ಯಾರಿಂದಲೂ ಸಹಾಯ ಮಾಡಲು ಸಾಧ್ಯವಿಲ್ಲವೆಂದು ಭಾವವು.) ॥೩೩೮॥

ಈಗ ದೇವತೆಗಳೇನಾದರೂ ನಿನಗೆ ಸಹಾಯಮಾಡುವುದಾದರೆ, ಅವರೆಲ್ಲರೂ ಬೆಂಕಿಗೆ ಬಿದ್ದ ಪತಂಗದ ಹುಳುಗಳಂತೆ ಕ್ಷಣಕಾಲದಲ್ಲಿ ಭಸ್ಮವಾಗುತ್ತಾರೆ. ॥೩೩೯॥

ಶೂಲಾಯುಧದಿಂದುಂಟಾದ ಅಪಾರವಾದ ತೇಜಸ್ಸುಳ್ಳ ಅಗ್ನಿಜ್ವಾಲೆಯಿಂದ ನಿಶ್ಚಯವಾಗಿಯೂ ನೀನು ಭಸ್ಮವಾಗುತ್ತೀಯೆ. ಇದರಲ್ಲಿ ಸ್ವಲ್ಪವೂ ಸಂಶಯವೇ ಇಲ್ಲವು. ॥೩೪೦॥

ಸಂಭಾವಿತಂ ನ ಕಲ್ಯಾಣಂ ಭವಾನೀವಿಮುಖಸ್ಯ ತೇ ।
ಸತ್ಯಮೇತತ್ಪುನಃ ಸತ್ಯಮುದ್ಧೃತ್ಯ ಭುಜಮುಚ್ಯತೇ ॥೩೪೧॥

ಜ್ವಲತ್ವದ್ಯ ಮುಖಂ ತೇಽದ್ಯ ಯಾಗಧ್ವಂಸೋ ಭವಿಷ್ಯತಿ ।
ಸಹಾಯಾಸ್ತವ ಯಾವಂತಸ್ತೇ ಜ್ವಲಂತ್ವದ್ಯ ಸತ್ವರಂ ॥೩೪೨॥

ಅಮರಾಣಾಂ ಸದಸ್ಯಾನಾಂ ಶಪಥೋ ಮಂಗಲಾಪತೇಃ ।
ಕರಿಷ್ಯಂತ್ಯದ್ಯ ಸಾಹಾಯ್ಯಂ ಯದ್ಯೇತಸ್ಯ ದುರಾತ್ಮನಃ ॥೩೪೩॥

ಗಂಧರ್ವಾಣಾಂ ಸದಸ್ಯಾನಾಂ ಶಪಥೋ ಮಂಗಲಾಪತೇಃ ।
ಕರಿಷ್ಯಂತ್ಯದ್ಯ ಸಾಹಾಯ್ಯಂ ಯದ್ಯೇತಸ್ಯ ದುರಾತ್ಮನಃ ॥೩೪೪॥

ಪನ್ನಗಾನಾಂ ಸದಸ್ಯಾನಾಂ ಶಪಥೋ ಮಂಗಲಾಪತೇಃ ।
ಕರಿಷ್ಯಂತ್ಯದ್ಯ ಸಾಹಾಯ್ಯಂ ಯದ್ಯೇತಸ್ಯ ದುರಾತ್ಮನಃ ॥೩೪೫॥

ಕಿನ್ನರಾಣಾಂ ಸದಸ್ಯಾನಾಂ ಶಪಥೋ ಮಂಗಲಾಪತೇಃ ।
ಕರಿಷ್ಯಂತ್ಯದ್ಯ ಸಾಹಾಯ್ಯಂ ಯದ್ಯೇತಸ್ಯ ದುರಾತ್ಮನಃ ॥೩೪೬॥

ಆ ಭವಾನೀದೇವಿಯ ಅನುಗ್ರಹವಿಲ್ಲದ ನಿನಗೆ ಮಂಗಳವೆಂದಿಗೂ ಉಂಟಾಗಲಾರದೆಂದು ನಾನು ತೋಳುಗಳನ್ನು ಮೇಲಕ್ಕೆತ್ತಿ ಶಪಥಪೂರ್ವಕವಾಗಿ ಹೇಳುತ್ತಿರುವೆನು. ॥೩೪೧॥

ಈಗ ನಿನ್ನ ಮುಖವೇ ಸುಟ್ಟುಹೋಗುವುದು. ಅಲ್ಲದೇ ನೀನು ಮಾಡಲೆಳಸಿರುವ ಈ ಯಾಗವೂ ಈಗ ಧ್ವಂಸವಾಗುವುದು. ಈ ವಿಷಯದಲ್ಲಿ ನಿನಗೆ ಸಹಾಯ ಮಾಡಲು ಬರುವವರೆಲ್ಲರೂ ಕೂಡಲೇ ಉರಿದು ಭಸ್ಮವಾಗುವರು. ॥೩೪೨॥

ದುಷ್ಟನಾದ ಈ ದಕ್ಷನಿಗೆ ಸದಸ್ಯರಾದ ದೇವತೆಗಳಾರಾದರೂ ಸಹಾಯ ಮಾಡುವುದಾದರೆ, ಮಂಗಳಾದೇವಿಯ ಪತಿಯಾದ ಶಿವನ ಆಣೆಯೆಂದು ತಿಳಿಯಿರಿ. ॥೩೪೩॥

ಎಲೈ ಸಭಾಸದರುಗಳಿರಾ, ಗಂಧರ್ವರಾಗಲೀ, ನಾಗರಾಗಲೀ ಯಾರಾದರೂ ಈ ದುಷ್ಟನಾದ ದಕ್ಷನಿಗೆ ಸಹಾಯಮಾಡುವುದಾದರೆ, ಅವರ ಮೇಲೆ ಸರ್ವಮಂಗಳಾಪತಿಯಾದ ಪರಶಿವನ ಆಣೆಯಿರುವುದು. ॥೩೪೪-೩೪೫॥

ಎಲೈ ಸದಸ್ಯರೇ! ಕಿನ್ನರರಾಗಲೀ, ಯಕ್ಷರಾಗಲೀ, ಯಾರಾದರೂ ಈ

ಯಕ್ಷಾಣಾಂ ಚ ಸದಸ್ಯಾನಾಂ ಶಪಥೋ ಮಂಗಲಾಪತೇಃ ।
ಕರಿಷ್ಯಂತ್ಯದ್ಯ ಸಾಹಾಯ್ಯಂ ಯದ್ಯೇತಸ್ಯ ದುರಾತ್ಮನಃ ॥೩೪೭॥

ಸಿದ್ಧಾನಾಂ ಚ ಸದಸ್ಯಾನಾಂ ಶಪಥೋ ಮಂಗಲಾಪತೇಃ ।
ಕರಿಷ್ಯಂತ್ಯದ್ಯ ಸಾಹಾಯ್ಯಂ ಯದ್ಯೇತಸ್ಯ ದುರಾತ್ಮನಃ ॥೩೪೮॥

ಋಷೀಣಾಂ ಚ ಸದಸ್ಯಾನಾಂ ಶಪಥೋ ಮಂಗಳಾಪತೇಃ ।
ಕರಿಷ್ಯಂತ್ಯದ್ಯ ಸಾಹಾಯ್ಯಂ ಯದ್ಯೇತಸ್ಯ ದುರಾತ್ಮನಃ ॥೩೪೯॥

ಋತ್ವಿಜಾಂ ತಾಪಸಾನಾಂ ಚ ಶಪಥೋ ಮಂಗಲಾಪತೇಃ ।
ಕರಿಷ್ಯಂತ್ಯದ್ಯ ಸಾಹಾಯ್ಯಂ ಯದ್ಯೇತಸ್ಯ ದುರಾತ್ಮನಃ ॥೩೫೦॥

ನಿರ್ಗಚ್ಛಂತ್ವಮರಾಃ ಶೀಘ್ರಂ ಏತದಧ್ವರಮಂಡಪಾತ್ ।
ಅನ್ಯಥಾ ಭವತಾಂ ನಾಶೋ ಭವಿಷ್ಯತ್ಯದ್ಯ ಸರ್ವಥಾ ॥೩೫೧॥

ನಿರ್ಗಚ್ಛಂತು ಸಗಂಧರ್ವಾಃ ಪನ್ನಗಾ ಯಾಗಮಂಡಪಾತ್ ।
ಅನ್ಯಥಾ ಭವತಾಂ ನಾಶೋ ಭವಿಷ್ಯತ್ಯದ್ಯ ಸರ್ವಥಾ ॥೩೫೨॥

ದುರುಳನಾದ ದಕ್ಷಬ್ರಹ್ಮನಿಗೆ ಸಹಾಯಮಾಡುವುದಾದರೆ, ಅವರಮೇಲೆ ಆ ಪರಶಿವನ ಆಣೆಯಿರುವುದೆಂದು ತಿಳಿಯಿರಿ. ||೩೪೬-೩೪೭||

ಸಭಾಭೂಷಣರಾದ ಸಿದ್ಧಪುರುಷರೇ! ಋಷಿಗಳಿರಾ! ನಿಮ್ಮಲ್ಲಿ ಯಾರಾದರೂ ಈ ದುಷ್ಟನಾದ ದಕ್ಷನಿಗೆ ಸಹಾಯಮಾಡುವುದಾದರೆ ನಿಮ್ಮಮೇಲೆ, ಆ ಸರ್ವಮಂಗಳಾಪತಿಯ ಆಣೆಯಿರುವುದು. ||೩೪೮-೩೪೯||

ತಪಸ್ವಿಗಳಾದ ಋತ್ವಿಜರೇ, ದುರುಳನಾದ ದಕ್ಷಬ್ರಹ್ಮನಿಗೆ ನೀವು ಸಹಾಯಮಾಡುತ್ತೀರಾದರೆ ನಿಮ್ಮ ಮೇಲೆ ಮಂಗಳಾಂಗಿಯಾದ ಗಿರಿಜೆಯ ಪತಿಯ ಆಣೆಯಿರುವುದೆಂದು ತಿಳಿಯಿರಿ. ||೩೫೦||

ಓ ದೇವತೆಗಳಿರಾ! ಗಂಧರ್ವಸಹಿತರಾದ ಪನ್ನಗರಿರಾ! ಜಾಗ್ರತೆಯಾಗಿ ನೀವೆಲ್ಲರೂ ಈ ಯಾಗಮಂಟಪದಿಂದ ಹೊರಟುಬನ್ನಿರಿ. ಇಲ್ಲದಿದ್ದರೆ ನಿಮ್ಮೆಲ್ಲರಿಗೂ ನಿಶ್ಚಯವಾಗಿ ನಾಶ ಸಂಭವಿಸುವುದು. ||೩೫೧-೩೫೨||

ಯಕ್ಷಾಃ ಸ ಕಿನ್ನರಾಃ ಶೀಘ್ರಂ ನಿರ್ಯಾಂತ್ವಧ್ವರಮಂಟಪಾತ್ ।
ಅನ್ಯಥಾ ಭವತಾಂ ನಾಶೋ ಭವಿಷ್ಯತ್ಯದ್ಯ ಸರ್ವಥಾ ॥೩೫೩॥

ಸಿದ್ಧಾಃ ಸ ಋಷಯಃ ಶೀಘ್ರಂ ನಿರ್ಯಾಂತ್ವಧ್ವರಮಂಟಪಾತ್ ।
ಅನ್ಯಥಾ ಭವತಾಂ ನಾಶೋ ಭವಿಷ್ಯತ್ಯದ್ಯ ಸರ್ವಥಾ ॥೩೫೪॥

ಋತ್ವಿಜೋ ಋಷಯಃ ಸರ್ವೇ ನಿರ್ಯಾಂತ್ವಧ್ವರಮಂಟಪಾತ್ ।
ಅನ್ಯಥಾ ಭವತಾಂ ನಾಶೋ ಭವಿಷ್ಯತ್ಯದ್ಯ ಸರ್ವಥಾ ॥೩೫೫॥

ಶೈವಂ ಶಪಥಮುಲ್ಲಂಘ್ಯ ದಕ್ಷಸ್ಯಾಸ್ಯಾಧ್ವರೇ ಬಲಾತ್ ।
ಯಸ್ತಿಷ್ಠತಿ ಸ ಪಾಪಿಷ್ಠೋ ವಿನಶ್ಯತ್ಯದ್ಯ ಸತ್ವರಂ ॥೩೫೬॥

ಇತ್ಯುಕ್ತ್ವಾ ಕ್ರೋಧಲೋಲಾಕ್ಷೋ ದಧೀಚಿರ್ಮುನಿಪುಂಗವಃ ।
ಕ್ರೋಧಾನಲಂ ತ್ಯಜನ್ನೇವ ಯಯಾವಧ್ವರಮಂಟಪಾತ್ ॥೩೫೭॥

ಮುನಯಃ ಕೋಟಿಶಃ ಶೀಘ್ರಂ ದಧೀಚಿಸಹಿತಾಸ್ತದಾ ।
ನಿರ್ಯಯುಃ ಸಿದ್ಧಸಂಯುಕ್ತಾಃ ಸಂಕ್ರುದ್ಧಾ ಯಾಗಮಂಟಪಾತ್ ॥೩೫೮॥

ಓ ಕಿನ್ನರ ಸಮೇತರಾದ ಯಕ್ಷರಿರಾ, ಸಿದ್ಧರೊಡಗೂಡಿದ ಋಷಿಗಳಿರಾ, ಕೂಡಲೆ ಯಾಗಮಂಟಪದಿಂದ ಹೊರಹೊರಡಿರಿ. ಇಲ್ಲದಿದ್ದರೆ ನಿಮಗೆಲ್ಲಾ ಈಗ ಖಂಡಿತವಾಗಿಯೂ ನಾಶವೊದಗುತ್ತದೆ. ॥೩೫೩-೩೫೪॥

ಋತ್ವಿಕ್ಕುಗಳಾದ ಋಷಿಗಳಿರಾ! ನೀವೆಲ್ಲರೂ ಈ ಕ್ಷಣವೇ ಯಾಗಮಂಟಪ ದಿಂದ ಹೊರಟು ಬನ್ನಿರಿ. ಇಲ್ಲದಿದ್ದರೆ ನಿಮಗೆಲ್ಲಾ ನಿಶ್ಚಯವಾಗಿಯೂ ವಿಪತ್ತುಂಟಾಗುವುದು. ಎಲೈ ದೇವತೆಗಳಿರಾ! ಈ ನಾನು ಮಾಡಿರುವ ಶಿವನ ಆಣೆಯನ್ನೂ ಮೀರಿ ದಕ್ಷನ ಈ ಯಾಗದಲ್ಲಿ ಯಾರು ಬಲಾತ್ಕಾರದಿಂದ ನಿಲ್ಲುವಿರೋ, ಅವರು ಪಾಪಿಷ್ಠರು. ಎಲ್ಲರೂ ಜಾಗ್ರತೆಯಾಗಿ ನಾಶವಾಗುವರು. ॥೩೫೫-೩೫೬॥

ಹೀಗೆಂದು ಹೇಳಿ ಕೋಪದಿಂದ ಚಂಚಲವಾದ ಕಣ್ಣುಗಳುಳ್ಳ ದಧೀಚಿ ಮುನಿಯು, ಕೋಪಾಗ್ನಿಯನ್ನು ಸುರಿಸುತ್ತಲೇ ಆ ದಕ್ಷಬ್ರಹ್ಮನ ಯಾಗಮಂಟಪ ದಿಂದ ಹೊರಟುಹೋದನು. ॥೩೫೭॥

ಆ ಮುನಿಪುಂಗವನು ಹೀಗೆ ನುಡಿದಕೂಡಲೇ ಅನೇಕ ಮಂದಿ ಮುನಿಗಳು, ದಧೀಚಿ ಮುನಿಯೊಡನೆ ಹೊರಟು ಸಿದ್ಧರೊಡನೆ ಕೂಡಿಕೊಂಡು ಅತ್ಯಂತ ಕುಪಿತ ರಾಗಿ ಆ ಯಾಗಮಂಟಪವನ್ನು ಬಿಟ್ಟು ಹೊರಟುಹೋದರು. ॥೩೫೮॥

ವಿಮಾನವರಮಾರುಹ್ಯ ಮಂಗಲಾಪಿ ತತಃ ಪರಂ ।
ಚಕಾರ ಗಂತುಮುದ್ಯೋಗಂ ಶ್ರೀಮತ್ಕೈಲಾಸಮಂದಿರಂ ॥೩೫॥

ತದಾ ಪ್ರಾಹುರ್ಭಗವತೀಂ ಪ್ರಮಥಾಃ ಶೂಲಪಾಣಯಃ ।
ಕೃತಾಂಜಲಿಪುಟಾ ಭೂತ್ವಾ ವಿನಯಾನತಕಂಧರಾಃ ॥೩೬೦॥

ಆಜ್ಞಾಂ ದೇಹಿ ಸುರಾರಾಧ್ಯೇ ದಕ್ಷನಾಶಾಯ ಸತ್ವರಂ ।
ಸೋಢುಂ ನ ಶಕ್ಯತೇಽಸ್ಮಾಭಿರವಜ್ಞಾ ತ್ವಯಿ ಯತ್ಕೃತಾ ॥೩೬೧॥

ಕೋ ವಾ ವರಾಕೋ ದಕ್ಷೋಽಯಂ ಗರ್ವೋಽಸ್ಯ ಕಥಮೀದೃಶಃ ।
ಏತತ್ಸಹಾಯಭೂತಾಶ್ಚ ಕೇ ವರಾಕಾ ವದಸ್ವ ನಃ ॥೩೬೨॥

ಸತ್ವರಂ ಭಸ್ಮಸಾತ್ಕೃತ್ವಾ ದಕ್ಷಮೇನಂ ತತಃ ಪರಂ ।
ಭವಾಮಃ ಸುಖಿನೋ ದೇವಿ ನಾನ್ಯಥಾ ಸುಖಿನೋ ವಯಂ ॥೩೬೩॥

ಆ ಸನ್ನಿವೇಶವನ್ನು ನೋಡಿ, ಮಂಗಳಸ್ವರೂಪಳಾದ ಗಿರಿಜಾದೇವಿಯೂ ಕೂಡ, ತನ್ನ ಉತ್ತಮವಾದ ವಿಮಾನವನ್ನೇರಿ ಅಲ್ಲಿಂದ ಹೊರಟು, ಸಂಪದ್ಭರಿತವಾದ ಕೈಲಾಸಪರ್ವತಕ್ಕೆ ಹೋಗುವ ಪ್ರಯತ್ನಮಾಡಿದಳು. ॥೩೫॥

ಹೀಗೆ ಕೈಲಾಸವನ್ನು ಕುರಿತು ಪ್ರಯಾಣೋನ್ಮುಖಳಾಗಿರುವ ದೇವಿಯನ್ನು ನೋಡುತ್ತಾ, ಶೂಲಾಯುಧಧಾರಿಗಳಾದ ಪ್ರಮಥಗಣಗಳು, ವಿನಯದಿಂದ ತಲೆಬಾಗಿಸಿ, ಕೈಜೋಡಿಸಿಕೊಂಡು ಹೀಗೆ ಪ್ರಾರ್ಥಿಸಿಕೊಂಡರು. ॥೩೬೦॥

ದೇವಪೂಜ್ಯಳಾದ ದೇವಿಯೇ! ಕೂಡಲೇ ಈ ದಕ್ಷಬ್ರಹ್ಮನನ್ನು ನಾಶಮಾಡಲು ನಮಗೆ ಅಪ್ಪಣೆ ಕೊಡು. ಇವನಿಂದ ನಿನಗೆ ಒದಗಿದ ತಿರಸ್ಕಾರವು ನಮ್ಮಿಂದ ಸಹಿಸಲು ಅಸಾಧ್ಯವಾಗಿರುವುದು. ॥೩೬೧॥

ದೇವಿ! ನಿನ್ನನುಗ್ರಹದಿಂದ ನಮಗೆ ಈ ವರಾಕನಾದ ದಕ್ಷನು ಎಷ್ಟರವನು? ಇವನ ಅಹಂಕಾರವೆಂಥದು? ಇವನ ಸಹಾಯಕರಾಗಿರುವ ಈ ಅಲ್ಪ ದೇವತೆಗಳು ನಮ್ಮನ್ನೇನು ಮಾಡಿಯಾರು? ॥೩೬೨॥

ದೇವಿ! ಈ ಕೂಡಲೇ ದುರುಳನಾದ ದಕ್ಷನನ್ನು ಭಸ್ಮಮಾಡಿ, ಅನಂತರ ನಾವು ಸುಖಿಯಾಗುವೆವು. ಹಾಗಿಲ್ಲದಿದ್ದರೆ ನಮಗೆಂದಿಗೂ ಮನಸ್ಸು ನೆಮ್ಮದಿಯಾಗಿರಲಾರದು. ೩೬೩॥

ಪೀತಾ ಯೈಃ ಪೂರ್ವಮಸ್ಮಾಭಿಃ ಸಮುದ್ರಾಃ ಸಪ್ತ ಸತ್ವರಂ ।
ಅಸ್ಮಾಕಂ ತಾದೃಶಾನಾಂ ತು ಕಿಮಶಕ್ಯಂ ಜಗತ್ರಯೇ ॥೩೬೪॥

ಜಗತ್ರಯಂ ಚ ವಿಮುಖಂ ತ್ವಯಾಽದ್ಯ ಯದಿ ಸತ್ವರಂ ।
ತದಾ ಜಗತ್ರಯಂ ಚೈತನ್ನಾಶಯಾಮಃ ಕ್ಷಣಾಂತರೇ ॥೩೬೫॥

ದೇಹಿ ದೇಹಿ ಶಿವೇ ಶೀಘ್ರಂ ಆಜ್ಞಾಂ ದಕ್ಷವಿನಾಶಕಾಂ ।
ನಾಸ್ಮಾಭಿರಸ್ಯ ವದನಂ ಶಕ್ಯತೇ ದ್ರಷ್ಟುಮಂಬಿಕೇ ॥೩೬೬॥

ಇತ್ಯುಕ್ತಂ ತದ್ವಚಃ ಶ್ರುತ್ವಾ ತಾನಾಶ್ವಾಸ್ಯ ತತಃ ಶಿವಾ ।
ವಿಮಾನರತ್ನಮಾರುಹ್ಯ ಯಯೌ ಶಂಕರಸನ್ನಿಧಿಂ ॥೩೬೭॥

ತತಃ ಸಮುತ್ಥಿತಃ ಶೀಘ್ರಂ ದಧೀಚಿಕ್ರೋಧಪಾವಕಃ ।
ಜ್ವಾಲಾಮಾಲಾಸಮಾಕೀರ್ಣೋ ದದಾಹಾಧ್ವರಮಂಟಪಂ ॥೩೬೮॥

ಹಿಂದೆ ಏಳು ಸಮುದ್ರಗಳನ್ನೂ ಪಾನಮಾಡಿರುವ ನಮಗೆ ಈ ಅಲ್ಪರಾದ ದೇವತೆಗಳು ಏನುಮಾಡಿಯಾರು! ಅಂತಹ ನಮಗೆ ಮೂಲೋಕದಲ್ಲಿ ತಾನೇ ಅಸಾಧ್ಯವಾದುದಾವುದಿರುವುದು ? ॥೩೬೪॥

ನಿನ್ನ ಕೃಪಾದೃಷ್ಟಿಯಿಂದ ನಮ್ಮನ್ನು ಮೂರುಲೋಕವೂ ಎದುರಿಸುವುದಾದರೂ ಈ ಕೂಡಲೇ ಈ ಮೂಲೋಕವನ್ನೂ ಒಂದು ಕ್ಷಣಕಾಲದಲ್ಲಿ ನಾಶಮಾಡಿಬಿಡುವೆವು. ॥೩೬೫॥

ಶಿವನ ಪ್ರೇಯಸಿಯೇ! ಕೂಡಲೇ ಈ ದಕ್ಷನನ್ನು ನಾಶಪಡಿಸಲು ಅಪ್ಪಣೆ ಕೊಡು. ಜಗದಂಬಿಕೆ! ಈ ದುಷ್ಟಾತ್ಮನ ಮುಖವನ್ನು ನಮ್ಮಿಂದ ನೋಡಲು ಸಾಧ್ಯವಿಲ್ಲ. ಜಾಗ್ರತೆ ಅಪ್ಪಣೆಮಾಡು, ಎಂದು ಪ್ರಮಥಗಣಗಳು ದೇವಿಯನ್ನು ಪ್ರಾರ್ಥಿಸಿದವು. ॥೩೬೬॥

ಶಿವಗಣಗಳು ಹೀಗೆ ನುಡಿದುದನ್ನು ಕೇಳಿ ಆ ಗಿರಿಜೆಯು ಅವರನ್ನೆಲ್ಲಾ ಕೋಪಗೊಳ್ಳದಂತೆ ಸಮಾಧಾನಮಾಡಿ, ತಾನು ಶ್ರೇಷ್ಠವಾದ ವಿಮಾನದಮೇಲೆ ಕುಳಿತು ಶಂಕರನ ಸನ್ನಿಧಾನಕ್ಕೆ ತೆರಳಿದಳು. ॥೩೬೭॥

ಹೀಗೆ ದೇವಿಯು ಕೈಲಾಸಕ್ಕೆ ಹಿಂತಿರುಗಲು, ಆ ದಧೀಚಿಮುನಿಯ ಕೋಪಾಗ್ನಿಯು ತನ್ನ ಮಾಲಾಕಾರವಾದ ಜ್ವಾಲೆಗಳನ್ನು ಬೀರುತ್ತಾ ಆ ದಕ್ಷನ ಯಾಗಮಂಟಪವನ್ನು ಸುಟ್ಟುಹಾಕಿತು. ॥೩೬೮॥

ತೇನೈವ ಯಾಗಸಂಭಾರಾ ದಗ್ಧಾಃ ಕ್ರೋಧಾಗ್ನಿನಾ ತದಾ ।
ಪ್ರಪಲಾಯ್ಯ ಗತಾ ದೇವಾ ದಕ್ಷಯಕ್ಷಾದಿಸಂಯುತಾಃ ॥೩೯॥

ಭಸ್ಮೀಭೂತಾಂ ಯಾಗಶಾಲಾಂ ದೃಷ್ಟ್ವಾ ದಕ್ಷಃ ಪುನಃ ಸುರಾನ್ ।
ಸಹಾಯೀಕೃತ್ಯ ಸಹಸಾ ಯಾಗಶಾಲಾಮಕಾರಯತ್ ॥೩೭೦॥

ಸಂಪಾದ್ಯ ಯಾಗಸಂಭಾರಾನ್ಸ ಕೈಶ್ಚಿನ್ಮುನಿಭಿಃ ಸಹ ।
ಯಾಗಂ ಕರ್ತುಂ ಸಮಾರೇಭೇ ಬಲವೀರ್ಯಸಮನ್ವಿತಃ ॥೩೭೧॥

ತದಾ ದಕ್ಷಂ ಸಮಾಲೋಕ್ಯ ವಿಷ್ಣುರಿಂದ್ರಾದಿಸಂಯುತಃ ।
ನೀತಿಶಾಸ್ತ್ರಾವಿರೋಧೇನ ಪ್ರಾಹ ವಾಚಮುದಾರಧೀಃ ॥೩೭೨॥

॥ ವಿಷ್ಣುರುವಾಚ ॥

ಯಾಗಾನ್ಕರ್ತುಮನಾಯಾಸಂ ದಕ್ಷ ದಕ್ಷೋಽಸಿ ಯದ್ಯಪಿ ।
ತಥಾಪಿ ಋಷಿಶಾಪೋ ಯಃ ಸೋಽನ್ಯಥಾ ನ ಭವಿಷ್ಯತಿ ॥೩೭೩॥

ಅದೇ ಕೋಪಾಗ್ನಿಯ ಜ್ವಾಲೆಗಳಿಂದಲೇ ಸಮಸ್ತ ಯಾಗ ಸಲಕರಣೆಗಳೂ ಸುಟ್ಟುಹೋದವು. ಆಗ ಆ ಯಾಗಮಂಟಪದಲ್ಲಿದ್ದ ದೇವತೆಗಳೆಲ್ಲರೂ ದಕ್ಷನೊಡನೆಯೂ ಯಕ್ಷರೊಡನೆಯೂ ಚೆಲ್ಲಾಪಿಲ್ಲಿಯಾದರು. ॥೩೯॥

ಹೀಗೆ ಸುಟ್ಟುಹೋದ ತನ್ನ ಯಾಗಶಾಲೆಯನ್ನು ನೋಡಿ, ದಕ್ಷಬ್ರಹ್ಮನು ಪುನಃ ಆ ದೇವತೆಗಳನ್ನೆಲ್ಲಾ ಸೇರಿಸಿಕೊಂಡು ಅವರ ಸಹಾಯದಿಂದ ಜಾಗ್ರತೆಯಾಗಿ ಮತ್ತೆ ಯಾಗಶಾಲೆಯನ್ನು ನಿರ್ಮಿಸಿದನು. ॥೩೭೦॥

ಹಾಗೆಯೇ ಯಾಗ ಸಲಕರಣೆಗಳನ್ನೆಲ್ಲಾ ಪುನಃ ಸಿದ್ಧಪಡಿಸಿಕೊಂಡು, ಕೆಲವು ಮಂದಿ ಮುನಿಗಳ ಸಹಾಯದಿಂದ, ಬಲವಿಶಿಷ್ಟನಾಗಿ ತಿರುಗಿ ಯಾಗವನ್ನು ಮಾಡಲು ಪ್ರಾರಂಭಮಾಡಿದನು. ॥೩೭೧॥

ಪುನಃ ಯಾಗವನ್ನು ಮಾಡಲು ಸಿದ್ಧನಾಗಿರುವ ಆ ದಕ್ಷನನ್ನು ನೋಡಿ ಮಹಾವಿಷ್ಣುವು, ಇಂದ್ರನೊಡನೆ ಸೇರಿ, ಉದಾರವಾದ ಮನಸ್ಸುಳ್ಳವನಾಗಿ, ನೀತಿ ಶಾಸ್ತ್ರಕ್ಕೆ ಸ್ವಲ್ಪವೂ ವಿರೋಧವಿಲ್ಲದಂತೆ ಹೀಗೆ ಮಾತನಾಡಿದನು. ॥೩೭೨॥

"ದಕ್ಷಬ್ರಹ್ಮನೇ! ನೀನು ಅನಾಯಾಸವಾಗಿ ಯಾಗವನ್ನು ಮಾಡಲು ನಿಜವಾಗಿಯೂ ಸಮರ್ಥನೇನೋ ಅಹುದು. ಆದರೆ ಋಷಿಶಾಪವು ಎಂದಿಗೂ ಬೇರೆಯಾಗುವುದಿಲ್ಲವೆಂಬುದನ್ನು ಮಾತ್ರ ಮರೆಯದಿರು. ॥೩೭೩॥

ದಧೀಚಿರ್ಮುನಿಶಾರ್ದೂಲಃ ಶ್ರೀಮಹಾರುದ್ರಪೂಜಕಃ ।
ತಸ್ಯ ಶಕ್ತಿರ್ನ ಕೇನಾಪಿ ಜ್ಞಾಯತೇ ದಕ್ಷ ವಸ್ತುತಃ ॥೩೭೪॥

ತ್ರೈಲೋಕ್ಯದಹನೇ ಶಕ್ತೋ ದಧೀಚಿಃ ಕ್ರೋಧಸಂಕುಲಃ ।
ಶಕ್ತಿಸ್ತಥಾವಿಧಾ ಪ್ರಾಪ್ತಾ ತೇನ ಶ್ರೀರುದ್ರಪೂಜಯಾ ॥೩೭೫॥

ರುದ್ರಮವ್ಯಭಿಚಾರೇಣ ಯೇಽರ್ಚಯಂತ್ಯನ್ವಹಂ ಮುದಾ ।
ತೇ ಸರ್ವೇಽಪ್ಯತಿದುರ್ಧರ್ಷಾಃ ಸತ್ಯಂ ಸತ್ಯಂ ನ ಸಂಶಯಃ ॥೩೭೬॥

ಅಗಸ್ತ್ಯೇನ ಯದಾ ಪೀತಾಃ ಸಮುದ್ರಾಃ ಸಪ್ತ ಲೀಲಯಾ ।
ತದಾ ಲಕ್ಷ್ಮೀಸಮೇತೇನ ಮಯಾ ತದುದರೇ ಸ್ಥಿತಃ ॥೩೭೭॥

ಅಗಸ್ತ್ಯೇನ ತತಸ್ತ್ಯಕ್ತೋ ನಿಸ್ಸೃತಂ ಚ ಮಯಾ ತತಃ ।
ಏತಾದೃಶಂ ಹಿ ಸಾಮರ್ಥ್ಯಂ ತೇನ ಪ್ರಾಪ್ತಂ ಶಿವಾರ್ಚಯಾ ॥೩೭೮॥

ಮುನಿಶ್ರೇಷ್ಠನಾದ ದಧೀಚಿಮುನಿಯು ಮಹಾರುದ್ರನನ್ನು ಪೂಜೆಮಾಡುವವರಲ್ಲಿ ಅಗ್ರಗಣ್ಯನಾಗಿರುವನು. ಅವನ ಶಕ್ತಿಯು ಇಷ್ಟೇ ಎಂದು ಹೇಳಲು ವಸ್ತುತಃ ಯಾರಿಂದಲೂ ಸಾಧ್ಯವಿಲ್ಲ. ||೩೭೪||

ಆ ದಧೀಚಿ ಮಹರ್ಷಿಯು ಕೋಪಹೊಂದಿದರೆ ಮೂರು ಲೋಕಗಳನ್ನೂ ಸುಡಬಲ್ಲನು. ಅವನಿಗೆ ಅಂತಹ ಅಸಾಧಾರಣವಾದ ಶಕ್ತಿಯು ಆ ರುದ್ರದೇವನ ಪೂಜಾಬಲದಿಂದಲೇ ದೊರೆತಿರುವುದು. ||೩೭೫||

ಪ್ರತಿನಿತ್ಯವೂ ತಪ್ಪದೇ ಶ್ರೀರುದ್ರನನ್ನು ಸಂತೋಷದಿಂದ ಪೂಜೆಮಾಡುವವರೆಲ್ಲರೂ ಅಜೇಯರೂ ಅಪರಿಮಿತವಾದ ಬಲವುಳ್ಳವರೂ ಆಗುವರು. ಇದು ಸತ್ಯವು. ಇದರಲ್ಲಿ ಸಂಶಯವೇ ಇಲ್ಲ. ||೨೭೬||

ಮಹಾದೇವನ ಪೂಜಾಬಲದಿಂದ ಅಗಸ್ತ್ಯಮುನಿಯು ಸಪ್ತಸಮುದ್ರಗಳನ್ನೂ ಪಾನಮಾಡಿದಾಗ ನಾನು ಲಕ್ಷ್ಮಿಯೊಡನೆ ಆ ಮುನಿಯ ಹೊಟ್ಟೆಯಲ್ಲಿಯೇ ಅಡಗಿದ್ದೆನು. ||೩೭೭||

ಅನಂತರ ಆ ಅಗಸ್ತ್ಯಮುನಿಯು ಸಮುದ್ರಗಳನ್ನು ಮತ್ತೆ ಬಿಡಲಾಗಿ ನಾನೂ ಅವನ ಹೊಟ್ಟೆಯೊಳಗಿನಿಂದ ಹೊರಗೆ ಬಂದೆನು. ಆ ಅಗಸ್ತ್ಯಮುನಿಗೆ ಇಂತಹ ಸಾಮರ್ಥ್ಯವು ಪರಶಿವನ ಪೂಜೆಯಿಂದಲೇ ಬಂದಿರುವುದಲ್ಲವೆ? ||೩೭೮||

ತಾಡಿತೋಽಹಂ ಪುರಾ ಶೂಲೈರ್ಬಹುಧಾ ಶಿವಕಿಂಕರೈಃ ।
ಅನಿವಾರ್ಯಬಲಾ ಯಸ್ಮಾತ್ಕ್ರೂರಾಃ ಶಂಕರಕಿಂಕರಾಃ ॥೩೭೯॥

ಭುವನಾನಾಂ ಕೃತಃ ಪೂರ್ವಂ ವ್ಯತ್ಯಾಸಃ ಶಿವಕಿಂಕರೈಃ ।
ತೇಷಾಮಶಕ್ಯಂ ಲೋಕೇಷು ನ ಕಿಮಪ್ಯಸ್ತಿ ವಸ್ತುತಃ ॥೩೮೦॥

ಶಾಂಕರಾಣಾಂ ಪ್ರತಿದ್ವಂದ್ವಂ ನಾಸ್ತಿ ಲೋಕೇಷು ಸರ್ವಥಾ ।
ತೃಣೀಕುರ್ವಂತ್ಯಸ್ಮದಾದೀನಮರಾಂಛಾಂಕರಾ ಯತಃ ॥೩೮೧॥

ಕುಪಿತಾ ನ ಭವಂತ್ಯೇವ ಸಹಸಾ ಶಾಂಕರಾ ಧ್ರುವಂ ।
ಕುಪಿತಾಶ್ಚ ತದಾ ಲೋಕಾನ್ದಹಿಷ್ಯಂತ್ಯೇವ ಶಾಂಕರಾಃ ॥೩೮೨॥

ಶಕ್ತೋ ದಧೀಚಿರದ್ಯೈವ ದಗ್ಧುಮಸ್ಮಾನ್ಸ ಯದ್ಯಪಿ ।
ತಥಾಪ್ಯಸ್ಮಾನದಗ್ಧ್ವೈವ ಸ ಗತಃ ಕರುಣಾನಿಧಿಃ ॥೩೮೩॥

ಹಿಂದೆ ನಾನೂ ಶಿವನ ಕಿಂಕರರಿಂದ ನಾನಾವಿಧವಾಗಿ ತ್ರಿಶೂಲಗಳ ಏಟು ತಿಂದಿರುವೆನು. ಅತ್ಯಂತ ಕ್ರೂರರಾದ ಆ ಶಂಕರನ ಸೇವಕರು ಅಪ್ರತಿಹತವಾದ ಬಲವುಳ್ಳವರು. ॥೩೭೯॥

ಹಿಂದೆ ಇದೇ ಶಿವಭಟರು ಈ ಪ್ರಪಂಚವನ್ನೇ ವ್ಯತ್ಯಾಸವಾಗಿ ಮಾಡಿಬಿಟ್ಟಿದ್ದರು. ಆ ಶಿವಕಿಂಕರರಿಗೆ ಮೂರುಲೋಕಗಳಲ್ಲಿ ಯಾವುದೂ ಅಸಾಧ್ಯವಾದುದೇ ಇಲ್ಲವು. ॥೩೮೦॥

ಶಂಕರನ ಕಿಂಕರರಾದವರಿಗೆ ಪ್ರತಿಯಾಗಿ ನಿಲ್ಲುವ ಭಟರು ಈ ಪ್ರಪಂಚದಲ್ಲಿಯೇ ಇಲ್ಲ. ಆ ಶಿವಭಟರು ನಮ್ಮಂತಹ ದೇವತೆಗಳನ್ನು ಹುಲ್ಲಿಗಿಂತಲೂ ಕಡೆಯಾಗಿ ಭಾವಿಸುತ್ತಾರೆ. ॥೩೮೧॥

ಶಂಕರನ ಗಣಗಳು ಜಾಗ್ರತೆಯಾಗಿ ನಿಜವಾಗಿಯೂ ಕೋಪಹೊಂದುವುದಿಲ್ಲ. ಒಂದುವೇಳೆ ಅವರು ಕುಪಿತರಾದದ್ದೇ ಆದರೆ ಎಲ್ಲಾ ಲೋಕಗಳನ್ನೂ ಖಂಡಿತ ಸುಟ್ಟು ಭಸ್ಮಮಾಡುವರು. ॥೩೮೨॥

ಆ ದಧೀಚಿಮಹರ್ಷಿಗೇ ಈಗ ನಮ್ಮನ್ನು ಸುಟ್ಟುಹಾಕುವ ಸಾಮರ್ಥ್ಯವಿದ್ದಿತು. ಆದರೂ ದಯಾಸಮುದ್ರನಾದ ಆ ಮುನಿಯು ಏನೋ ನಮ್ಮ ಮೇಲೆ ದಯೆಮಾಡಿ ನಮ್ಮನ್ನು ಸುಡದೇ ಸುಮ್ಮನೇ ಹಿಂತಿರುಗಿದನು. ॥೩೮೩॥

ಧನ್ಯಾ ಹಿ ಶಾಂಕರಾ ಯಸ್ಮಾತ್ಸದಯಾಃ ಕುಪಿತಾ ಅಪಿ ।
ಅತೋ ನ ಶಾಂಕರಾದನ್ಯೋ ಧನ್ಯೋ ನಾಸ್ತಿ ಜಗತ್ತ್ರಯೇ ॥೩೮೪॥

ಕಿಂ ಚ ದತ್ತೋಽಸ್ತಿ ಶಪಥಃ ತೇನ ವಿಶ್ವಪತೀರತಃ ।
ಕ್ಷಣಮಪ್ಯತ್ರ ನ ಮಯಾ ಸಂಸ್ಥಾತುಮುಚಿತಂ ಧ್ರುವಂ ॥೩೮೫॥

ಸರ್ವೇಶ್ವರಸ್ಯ ಶಪಥಃ ಕೇನೋಲ್ಲಂಘ್ಯೋ ಭವಿಷ್ಯತಿ ।
ತಮುಲ್ಲಂಘ್ಯ ಪುನಃ ಕೋಽತ್ರ ಕ್ಷಣಂ ಜೀವಿತುಮಿಚ್ಛತಿ ॥೩೮೬॥

ಆದಾವೇವ ಜಗನ್ಮಾತುಸ್ತ್ವಯಾ ನಾಭ್ಯರ್ಚನಂ ಕೃತಂ ।
ಅತ ಏವ ತ್ವಯಾ ದುಃಖಂ ಪ್ರಾಪ್ಯಮದ್ಯ ನ ಸಂಶಯಃ ॥೩೮೭॥

ಯದವಜ್ಞಾಂ ವಿಧಿಃ ಕೃತ್ವಾ ಛಿನ್ನಮೂರ್ಧಾಽಭವತ್ಪುರಾ ।
ತತ್ಪ್ರಿಯಾವಜ್ಞಯಾ ದಕ್ಷ ತವ ನಾಶೋ ಭವಿಷ್ಯತಿ ॥೩೮೮॥

ಕೋಪಗೊಂಡರೂ, ದಯೆಗರೆಯುವ ಆ ಶಂಕರನ ಗಣಗಳು ನಿಜವಾಗಿಯೂ ಧನ್ಯರೇ ಸರಿ. ಈ ಮೂರು ಲೋಕಗಳಲ್ಲಿ ಎಲ್ಲಿ ಹುಡುಕಿದರೂ ಆ ಶಾಂಕರರಿಗಿಂತ ಧನ್ಯರಾದವರು ನನಗೆ ತೋರುವುದಿಲ್ಲ. ॥೩೮೪॥

ಅದೂ ಅಲ್ಲದೇ ಆ ಜಗದೊಡೆಯನ ಮೇಲೆ ಪ್ರತಿಜ್ಞೆಯೂ ಸಹ ಮಾಡಲ್ಪಟ್ಟಿದೆ. ಆದ್ದರಿಂದ ಇನ್ನೊಂದು ಕ್ಷಣಕಾಲವೂ ನಾನು ನಿಶ್ಚಯವಾಗಿಯೂ ಇಲ್ಲಿ ನಿಲ್ಲಲಾರೆನು. (ನಿಲ್ಲುವುದು ಉಚಿತವಲ್ಲ). ॥೩೮೫॥

ಈ ಸಕಲ ಲೋಕಗಳಿಗೂ ಒಡೆಯನಾದ ಆ ಮಹಾದೇವನ ಪ್ರತಿಜ್ಞೆಯನ್ನು ಯಾರು ತಾನೇ ಮೀರಿಯಾರು? ಹಾಗೆ ಮೀರಿ ಒಂದು ಕ್ಷಣಕಾಲವಾದರೂ ಯಾರಿಂದ ಬದುಕಲು ಸಾಧ್ಯ? ॥೩೮೬॥

ಮೊಟ್ಟಮೊದಲೇ ನೀನು ಆ ಜಗಜ್ಜನನಿಯನ್ನು ಪೂಜೆಮಾಡಲಿಲ್ಲವಾದ್ದರಿಂದ ನೀನು ನಿಶ್ಚಯವಾಗಿಯೂ ದುಃಖವನ್ನು ಅನುಭವಿಸಿಯೇ ತೀರಬೇಕು. ॥೩೮೭॥

ಅಯ್ಯ ದಕ್ಷನೇ! ಯಾವ ಪರಶಿವನನ್ನು ತಿರಸ್ಕಾರಮಾಡಿ, ಹಿಂದೆ ಬ್ರಹ್ಮನು ತನ್ನ ತಲೆಗಳನ್ನೇ ಕಳೆದುಕೊಂಡನೋ, ಅಂತಹ ಮಹಾಮಹಿಮನಾದ ಮಹಾದೇವನ ಪ್ರೇಯಸಿಯಾದ ಅಂಬಿಕಾ ಪತಿಯನ್ನು ತಿರಸ್ಕರಿಸಿರುವ ನೀನು ಖಂಡಿತವಾಗಿಯೂ ನಾಶವಾಗುತ್ತೀಯೆ. ॥೩೮೮॥

ಯಾ ಶರ್ವಾಣೀ ಭಗವತೀ ಭಕ್ತಮಂಗಲದಾಯಿನೀ ।
ತದವಜ್ಞಾಗ್ನಿನಾ ದಕ್ಷ ತವ ನಾಶೋ ಭವಿಷ್ಯತಿ ॥೩೮೯॥

ಯಾಮಾಹುಃ ಪರಮಾಂ ವಿದ್ಯಾಂ ಪರಬ್ರಹ್ಮಸ್ವರೂಪಿಣೀಂ ।
ತದವಜ್ಞಾಗ್ನಿನಾ ದಕ್ಷ ತವ ನಾಶೋ ಭವಿಷ್ಯತಿ ॥೩೯೦॥

ಯಾಮಾಹುರ್ದೇವಜನನೀಂ ನಿಷ್ಕಲಾಮಪಿ ಶಾಶ್ವತೀಂ ।
ತದವಜ್ಞಾಗ್ನಿನಾ ನಾಶೋ ತವ ದಕ್ಷ ಭವಿಷ್ಯತಿ ॥೩೯೧॥

ಯಾಮಾಹುರ್ವೇದಜನನೀಂ ವೇದವಾದರತಾ ಬುಧಾಃ ।
ತದವಜ್ಞಾಗ್ನಿನಾ ದಕ್ಷ ತವ ನಾಶೋ ಭವಿಷ್ಯತಿ ॥೩೯೨॥

ಯಾಮಾಹುರ್ನಿರ್ಗುಣಾಂ ಶಾಂತಾಮಾನಂದಾಮಮೃತಾಂ ಶಿವಾಂ ।
ತದವಜ್ಞಾಗ್ನಿನಾ ದಕ್ಷ ತವ ನಾಶೋ ಭವಿಷ್ಯತಿ ॥೩೯೩॥

ದಕ್ಷ! ಇವಳು ಭಕ್ತರಿಗೆ ಮಂಗಳವನ್ನುಂಟುಮಾಡುವ ಭಗವತಿಯಾದ ಶರ್ವಾಣಿಯು. (ಶರ್ವನೆನಿಸಿದ ಶಿವನ ಪತ್ನಿಯು) ಈ ದೇವಿಯನ್ನು ಪೂಜಿಸದೇ ಅವಳಿಗೆ ಅವಮಾನ ಮಾಡಿರುವ ನಿನಗೆ ನಿಜವಾಗಿಯೂ ಮೃತ್ಯು ಸಂಭವಿಸುವುದು. ||೩೮೯||

ದಕ್ಷನೇ ! ಶ್ರೇಷ್ಠವಾದ ವಿದ್ಯಾ (ಜ್ಞಾನ) ರೂಪಿಣಿಯೂ, ಪರಬ್ರಹ್ಮ ಸ್ವರೂಪವುಳ್ಳವಳೂ, ಎಂದು ಯಾರನ್ನು ದೊಡ್ಡವರು ಹೇಳುವರೋ, ಅಂತಹ ದೇವಿಯ ತಿರಸ್ಕಾರ ರೂಪವಾದ ಬೆಂಕಿಯಿಂದ ನಿನಗೆ ನಿಜವಾಗಿ ನಾಶವುಂಟಾಗುವುದು. ||೩೯೦||

ದಕ್ಷನೇ ! ದೇವಮಾತೆಯೂ, ಕಲಂಕ ಶೂನ್ಯಳೂ, ಶಾಶ್ವತಸ್ವರೂಪಳೂ, ಎಂದು, ವೇದವಿದ್ಯಾವಾದಗಳಲ್ಲಿ ನಿರತರಾದ ಪಂಡಿತರು ಹೇಳುತ್ತಿರುವ ಆ ದೇವಿಯನ್ನು ತಿರಸ್ಕರಿಸಿದುದರಿಂದುಂಟಾದ ಅಗ್ನಿಯು ನಿನ್ನನ್ನು ನಿಜವಾಗಿ ನಾಶಮಾಡುವುದು. ||೩೯೧-೩೯೨||

ಅಯ್ಯ ದಕ್ಷನೇ ! ಗುಣಶೂನ್ಯಳೂ, ಶಾಂತನೂ, ಆನಂದರೂಪಿಣಿಯೂ, ಅಮೃತಸ್ವರೂಪಿಣಿಯೂ, ಮಂಗಳಾಂಗಿಯೂ, ಪರಮಶಕ್ತಿ ಸ್ವರೂಪಿಣಿಯೂ, ತನ್ನ ಶಕ್ತಿಯಿಂದಲೇ ಸಕಲ ದಿಕ್ಕುಗಳನ್ನೂ ವ್ಯಾಪಿಸಿರುವವಳೂ ಎಂದು ವಿದ್ವಾಂಸರು,

ಯಾಮಾಹುಃ ಪರಮಾಂ ಶಕ್ತಿಂ ಸ್ವಶಕ್ತ್ಯಾವೃತದಿಙ್ಮುಖಾಂ ।
ತದವಜ್ಞಾಗ್ನಿನಾ ದಕ್ಷ ತವ ನಾಶೋ ಭವಿಷ್ಯತಿ ॥೩೯೪॥

ಯಾಮಾಹುರಕ್ಷರಾಂ ಶುದ್ಧಾಂ ವೇದವೇದಾಂತವಾದಿನಃ ।
ತದವಜ್ಞಾಗ್ನಿನಾ ದಕ್ಷ ತವ ನಾಶೋ ಭವಿಷ್ಯತಿ ॥೩೯೫॥

ಯಾಮಾಹುರೀಶ್ವರಾರ್ಧಾಂಗೀಮಂಗಸಂಗವಿವರ್ಜಿತಾಂ ।
ತದವಜ್ಞಾಗ್ನಿನಾ ದಕ್ಷ ತವ ನಾಶೋ ಭವಿಷ್ಯತಿ ॥೩೯೬॥

ಯಾಮಾಹುಃ ಸಚ್ಚಿದಾನಂದಸ್ವರೂಪಾಮಪರಾಜಿತಾಂ ।
ತದವಜ್ಞಾಗ್ನಿನಾ ದಕ್ಷ ತವ ನಾಶೋ ಭವಿಷ್ಯತಿ ॥೩೯೭॥

ಯಾಮಾಹುಃ ಕೃತಕಲ್ಯಾಣೀಂ ಕಲ್ಯಾಣಗುಣಸಾಗರಾಂ ।
ತದವಜ್ಞಾಗ್ನಿನಾ ದಕ್ಷ ತವ ನಾಶೋ ಭವಿಷ್ಯತಿ ॥೩೯೮॥

ಯಾಮಾಹುರ್ಯಾಗಫಲದಾಂ ತಥಾ ಯೋಗಫಲಪ್ರದಾಂ ।
ತದವಜ್ಞಾಗ್ನಿನಾ ದಕ್ಷ ತವ ನಾಶೋ ಭವಿಷ್ಯತಿ ॥೩೯೯॥

ಹೇಳುತ್ತಿರುವ ಆ ಮಹಾದೇವಿಯ ತಿರಸ್ಕಾರರೂಪವಾದ ಅಗ್ನಿಯಿಂದ ನಿನಗೆ ಖಂಡಿತ ನಾಶವುಂಟಾಗುವುದು. ॥೩೯೩-೩೯೪॥

ದಕ್ಷ ಬ್ರಹ್ಮನೇ! ನಾಶರಹಿತಳೂ, ಪರಿಶುದ್ಧ ಸ್ವರೂಪಿಣಿಯೂ, ಈಶ್ವರನ ಅರ್ಧಶರೀರಕ್ಕೆ ಭಾಗಿನಿಯೂ, ಅವಯವ ಸಂಬಂಧ ಶೂನ್ಯಳೂ ಎಂದು ವೇದಾಂತ ಶಾಸ್ತ್ರಪಾರಂಗತರಾದ ಪಂಡಿತರು ಹೇಳುತ್ತಿರುವ ದೇವಿಯನ್ನು ತಿರಸ್ಕರಿಸಿರುವುದರಿಂದುಂಟಾದ ಅಗ್ನಿಯು ನಿನ್ನನ್ನು ನಾಶಮಾಡಿಬಿಡುವುದು. ॥೩೯೫-೩೯೬॥

ದಕ್ಷನೇ, ಸಚ್ಚಿದಾನಂದಸ್ವರೂಪಿಣಿಯೂ, ಎಂದೆಂದಿಗೂ ಪರಾಜಯವನ್ನೇ ಹೊಂದದವಳೂ, ಮಂಗಳಕಾರ್ಯಗಳನ್ನು ಮಾಡಿದವಳೂ, ಕಲ್ಯಾಣಗುಣಗಳಿಗೆ ಸಾಗರದಂತೆ ಆಶ್ರಯವಾಗಿರುವವಳೂ ಎಂಬುದಾಗಿ ಜ್ಞಾನಿಗಳು ಸಾರುತ್ತಿರುವ ದೇವಿಯನ್ನು ತಿರಸ್ಕಾರಮಾಡಿದುದರಿಂದುಂಟಾದ ಅಗ್ನಿಯು ನಿನ್ನನ್ನು ನಾಶಮಾಡುವುದು. ॥೩೯೭-೩೯೮॥

ದಕ್ಷನೇ, ಸಕಲ ಯಾಗಗಳ ಫಲವನ್ನೂ ಯೋಗಗಳ ಫಲವನ್ನೂ ಕೊಡುವವಳೂ ಎಂದು ಯಾರನ್ನು ಜ್ಞಾನಿಗಳು ಸಾರುತ್ತಿರುವರೋ, ಯಾರು

ಯಯಾ ತತಮಿದಂ ವಿಶ್ವಂ ಯಸ್ಯಾಮಂತೇ ಪ್ರಲೀಯತೇ ।
ತದವಜ್ಞಾಗ್ನಿನಾ ದಕ್ಷ ತವ ನಾಶೋ ಭವಿಷ್ಯತಿ ॥೪೦೦॥

ಯತಂತೇ ಯತ್ಪ್ರಸಾದಾರ್ಥಂ ಯೋಗಮಾರ್ಗವಿಚಕ್ಷಣಾಃ ।
ತದವಜ್ಞಾಗ್ನಿನಾ ದಕ್ಷ ತವ ನಾಶೋ ಭವಿಷ್ಯತಿ ॥೪೦೧॥

ಯಾ ಶಂಕರಪ್ರಿಯಾ ಸಾಕ್ಷಾತ್ಸರ್ವಮಂಗಳರೂಪಿಣೀ ।
ತದವಜ್ಞಾಗ್ನಿನಾ ದಕ್ಷ ತವ ನಾಶೋ ಭವಿಷ್ಯತಿ ॥೪೦೨॥

ತಿರಸ್ಕುರ್ವಂತ್ಯಲ್ಪಭಾಗ್ಯಾ ಮೋಹಾದ್ಭಗವತೀಂ ಶಿವಾಂ ।
ತದವಜ್ಞಾಗ್ನಿನಾ ದಕ್ಷ ತವ ನಾಶೋ ಭವಿಷ್ಯತಿ ॥೪೦೩॥

ಕುರ್ವಂತಿ ತತ್ತಿರಸ್ಕಾರಂ ನಿರ್ಭಾಗ್ಯಾ ಭುವಿ ಸಂತತಂ ।
ತ ಏವ ದುರ್ಭಗಾ ದುಷ್ಟಾಸ್ತ ಏವಾಭಾಗ್ಯಸಂಶ್ರಯಾಃ ॥೪೦೪॥

ಸಕಲ ಪ್ರಪಂಚವನ್ನೂ ವ್ಯಾಪಿಸಿರುವಳೋ, ಪ್ರಳಯಕಾಲದಲ್ಲಿ ಯಾರಲ್ಲಿ ಈ ಜಗತ್ತೆಲ್ಲವೂ ನಾಶಹೊಂದುವುದೋ ಅಂತಹ ಮಹಾದೇವಿಯನ್ನು ತಿರಸ್ಕಾರ ಮಾಡಿದುದರಿಂದುಂಟಾದ ಅಗ್ನಿಯು ನಿನ್ನನ್ನು ನಾಶಪಡಿಸುವುದು. ||೩೯-೪೦೦||

ಯೋಗಮಾರ್ಗದಲ್ಲಿ ನಿಪುಣರಾದವರು, ಯಾರ ಅನುಗ್ರಹವನ್ನು ಪಡೆಯಲು ಯಾವಾಗಲೂ ಪ್ರಯತ್ನಿಸುತ್ತಿರುವರೋ, ಯಾವ ದೇವಿಯು ಆ ಜಗನ್ಮಂಗಳ ರೂಪನಾದ ಶಂಕರನ ಪ್ರಿಯಪತ್ನಿಯೂ, ಸಾಕ್ಷಾತ್ ಸರ್ವಮಂಗಳಸ್ವರೂಪಿಣಿಯೂ ಆಗಿರುವಳೋ, ಅಂತಹ ದೇವಿಯನ್ನು ತಿರಸ್ಕರಿಸಿದುದರಿಂದುಂಟಾದ ಬೆಂಕಿಯು ನಿನ್ನನ್ನು ನಾಶಪಡಿಸುವುದು. ||೪೦೧-೪೦೨||

ಅಲ್ಪೈಶ್ವರ್ಯವುಳ್ಳವರು ಅಜ್ಞಾನದಿಂದ ಷಡ್ಗುಣೈಶ್ವರ್ಯಸಂಪನ್ನಳಾದ ಪರಶಿವೆಯನ್ನು ತಿರಸ್ಕರಿಸುವರು. ಅಯ್ಯೋ ದಕ್ಷಬ್ರಹ್ಮನೇ, ಅಹಂಕಾರಿಯಾದ ನೀನೂ ಆ ದೇವಿಯನ್ನು ತಿರಸ್ಕಾರಮಾಡಿದುದರಿಂದುಂಟಾದ ಬೆಂಕಿಯಿಂದ ನಾಶವಾಗುವೆ. ||೪೦೩||

ಭಾಗ್ಯಹೀನರಾದ ಜನಗಳು ಭೂಮಿಯಲ್ಲಿ ಯಾವಾಗಲೂ ಆ ದೇವಿಯನ್ನು ತಿರಸ್ಕಾರಮಾಡುತ್ತಿರುವರು. ಅಂತಹವರೆಲ್ಲರೂ ದರಿದ್ರರೂ, ದುಷ್ಟರೂ, ನಿರ್ಭಾಗ್ಯರೂ ಎನಿಸಿಕೊಳ್ಳುವರು. ||೪೦೪||

ತಿರಸ್ಕುರ್ವಂತಿ ಯೇ ಮೋಹಾದಂಬಾಂ ಭಗವತೀಂ ಶಿವಾಂ ।
ಯದ್ದರ್ಶನಂ ವಿರಕ್ತಾನಾಂ ಸಿದ್ಧಾನಾಮಪಿ ದುರ್ಲಭಂ ॥೪೦೫॥

ತಾಂ ದೃಷ್ಟ್ವಾಪಿ ತ್ವಯಾ ಮೋಹಾತ್ಕಥಂ ನಾರಾಧನಂ ಕೃತಂ ।
ಕಿಂ ಕರ್ತವ್ಯಂ ತ್ವಯಾ ದಕ್ಷ ದುರದೃಷ್ಟಂ ತವೇದೃಶಂ ॥೪೦೬॥

ತವಾಪಿ ನಾಪರಾಧೋಽಸ್ತಿ ದುರದೃಷ್ಟಾಶ್ರಯೋ ಯತಃ ।
ಇತ್ಯುಕ್ತ್ವಾಧ್ವರಶಾಲಾಯಾಂ ಸ್ಥಿತೋ ವಿಷ್ಣುಸ್ತದಂತರೇ ॥೪೦೭॥

ಭವಾನೀ ಪೂರ್ವವೃತ್ತಾಂತಂ ಜ್ಞಾಪಯಾಮಾಸ ಶಂಭವೇ ।
ಶಂಭುಸ್ತದ್ವಚನಂ ಶ್ರುತ್ವಾ ಶಾಂತೋಽಪಿ ಕ್ರೋಧಸಂಯುತಃ ॥೪೦೮॥

ಕ್ರೋಧೇನ ಜನಯಾಮಾಸ ವೀರಭದ್ರಂ ದುರಾಸದಂ ।
ವೀರಭದ್ರಃ ಸಮುತ್ಪನ್ನಃ ಸಹಸ್ರಾಕ್ಷಃ ಸಹಸ್ರಪಾತ್ ॥೪೦೯॥

ಅಜ್ಞಾನಿಗಳು ತಮ್ಮ ದಡ್ಡತನದಿಂದ, ಮಂಗಳಸ್ವರೂಪಿಣಿಯೂ, ಭಗವತಿಯೂ ಆದ ಅಂಬಿಕೆಯನ್ನು ತಿರಸ್ಕಾರಮಾಡುತ್ತಿರುವರು. ಆ ಮಹಾದೇವಿಯ ದರ್ಶನವು ವಿರಕ್ತರಾದ ಸಿದ್ಧಪುರುಷರಿಗೂ ದುರ್ಲಭವಾಗಿರುವುದು. ಎಲೈ ದಕ್ಷನೇ, ಇಂತಹ ಮಹಾಮಹಿಮಳಾದ ದೇವಿಯ ದರ್ಶನವು ನಿನಗೆ ಸುಲಭವಾಗಿಯೇ ಆದರೂ ನೀನು ಅಜ್ಞಾನದಿಂದ ಆಕೆಯನ್ನು ಪೂಜಿಸದೇಹೋದೆ. ನಿನ್ನ ಈರೀತಿಯಾದ ದುರದೃಷ್ಟಕ್ಕೆ ನಾವೇನುಮಾಡುವುದು ? ॥೪೦೫-೪೦೬॥

ಎಲೈ ದಕ್ಷಬ್ರಹ್ಮನೇ! ಇವೆಲ್ಲವೂ ನಿನ್ನ ದುರದೃಷ್ಟದ ದೆಸೆಯಿಂದ ಆಗಿರುವುದೇ ಹೊರತು, ಈ ವಿಷಯದಲ್ಲಿ ನಿನ್ನ ತಪ್ಪು ಏನೂ ಇಲ್ಲವೆಂದು ಹೇಳಿ ಮಹಾವಿಷ್ಣುವು ಆ ದಕ್ಷಬ್ರಹ್ಮನ ಯಾಗಮಂಟಪದಲ್ಲಿ ಅವನ ಹತ್ತಿರವೇ ನಿಂತುಕೊಂಡನು. ॥೪೦೭॥

ಇತ್ತಲಾಗಿ, ಆ ಭವಾನೀದೇವಿಯು, ತನಗೆ ದಕ್ಷಯಾಗದಲ್ಲಿ ಉಂಟಾದ ಹಿಂದಿನ ಅವಮಾನ ಸಂಗತಿಗಳನ್ನೆಲ್ಲಾ ಶಂಭುವಿಗೆ ತಿಳಿಸಿದಳು. ಅದನ್ನು ಕೇಳಿ ಶಂಕರನು ಶಾಂತಸ್ವಭಾವದವನಾದರೂ ತುಂಬಾ ಕೋಪ ತಾಳಿ, ಅದೇ ಕೋಪದಿಂದ ಮಹಾಪರಾಕ್ರಮಶಾಲಿಯಾದ ವೀರಭದ್ರನೆಂಬುವನನ್ನು ಸೃಷ್ಟಿಸಿದನು. ಆ ವೀರಭದ್ರನು ಸಾವಿರಕಣ್ಣು, ಸಾವಿರ ಕಾಲುಳ್ಳವನಾಗಿ ಜನಿಸಿದನು. ॥೪೦೮-೪೦೯॥

ಸ ಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠದ್ದಶಾಂಗುಲಂ ।
ಸಮುತ್ಪನ್ನೋ ವೀರಭದ್ರಃ ಪ್ರಣಮ್ಯ ಪರಮೇಶ್ವರಂ ॥೪೧೦॥

ಕೃತಾಂಜಲಿಪುಟಃ ಪ್ರಾಹ ವಾಕ್ಯಂ ವಾಕ್ಯವಿಶಾರದಃ ॥೪೧೧॥

ಮಹಾರುದ್ರ ಮಹಾರೌದ್ರ ಸೋಮಸೂರ್ಯಾಗ್ನಿಲೋಚನ ।
ಕಿಂ ಕರ್ತವ್ಯಂ ಮಯಾ ಕಾರ್ಯಂ ಶೀಘ್ರಮಾಜ್ಞಾಪಯ ಪ್ರಭೋ ॥೪೧೨॥

ತ್ವತ್ಕ್ರೋಧಾನಲಸಂಭೂತಃ ಸೋಽಹಂ ಕಾಲಾಗ್ನಿರುಜ್ವಲಃ ।
ಕ್ವ ಕಸ್ಯ ದಹನಂ ಕಾರ್ಯಂ ತದ್ವದಸ್ವ ಮಹೇಶ್ವರ ॥೪೧೩॥

ಶೋಷಣೀಯಾಃ ಕಿಮೀಶಾನ ಕ್ಷಣಾರ್ಧೇನೈವ ಸಿಂಧವಃ ।
ಪೇಷಣೀಯಾಃ ಕಿಮೀಶಾನ ಕ್ಷಣಾರ್ಧೇನೈವ ಪರ್ವತಾಃ ॥೪೧೪॥

ಕ್ಷಣೇನ ಭಸ್ಮಸಾತ್ಕಾರ್ಯಂ ಬ್ರಹ್ಮಾಂಡಮುತ ಕಿಂ ಹರ ।
ಕ್ಷಣೇನ ಭಸ್ಮಸಾತ್ಕಾರ್ಯಾಃ ಸುರಾ ವಾ ಕಿಮುತೇಶ್ವರ ॥೪೧೫॥

ಈ ಭೂಮಂಡಲವನ್ನೆಲ್ಲಾ ವ್ಯಾಪಿಸಿ, ಅದನ್ನು ಹತ್ತಂಗುಲಪ್ರದೇಶವನ್ನಾಗಿ ಮಾಡಿ ನಿಂತುಕೊಂಡನು. ಈ ರೀತಿಯಾಗಿ ಜನಿಸಿದ ವೀರಭದ್ರನು, ಪರಮೇಶ್ವರನಿಗೆ ಪ್ರಣಾಮಮಾಡಿ, ಮಾತನಾಡುವುದರಲ್ಲಿ ನಿಪುಣನಾದುದರಿಂದ ಕೈಜೋಡಿಸಿ ವಿನಯದಿಂದ ಆ ಮಹೇಶ್ವರನನ್ನು ಕುರಿತು ಹೀಗೆ ನುಡಿದನು. ||೪೧೦-೪೧೧||

" ಸಕಲ ಪ್ರಾಣಿಗಳ ಪಾಪಗಳನ್ನೂ ನಾಶಮಾಡುವವನೂ, ಮಹಾ ಭಯಂಕರವಾದ ಆಕಾರವುಳ್ಳವನೂ, ಚಂದ್ರ, ಸೂರ್ಯ, ಮತ್ತು ಅಗ್ನಿ, ಇವರನ್ನೇ ತನ್ನ ಕಣ್ಣಾಗಿ ಮಾಡಿಕೊಂಡಿರುವವನೂ, ಆದ ಪ್ರಭುವೇ ! ನಾನು ಮಾಡಬೇಕಾದ ಕೆಲಸವನ್ನು ಕೂಡಲೇ ಆಜ್ಞಾಪಿಸು ; ಸ್ವಾಮಿ. ||೪೧೨||

ಮಹೇಶ್ವರಸ್ವಾಮಿಯೇ ! ನಿನ್ನ ಕೋಪಾಗ್ನಿಯಿಂದ ಹುಟ್ಟಿರುವ ನಾನು ಕಾಲಾಗ್ನಿಯಂತೆ ಪ್ರಕಾಶಿಸುತ್ತಿರುವೆನು. ದೇವ ! ಈಗ ನಾನು ಯಾರನ್ನು ಎಲ್ಲಿ ದಹಿಸಲಿ, ಅಪ್ಪಣೆ ಕೊಡುವನಾಗು. ||೪೧೩||

ಈಶ್ವರ ! ಸಮುದ್ರಗಳನ್ನೆಲ್ಲಾ ಅರ್ಧಕ್ಷಣಕಾಲದಲ್ಲಿ ಒಣಗಿಸಿಬಿಡಲೇ ? ಕ್ಷಣಾರ್ಧದಲ್ಲಿ ಪರ್ವತಗಳನ್ನೇನಾದರೂ ಕುಟ್ಟಿ ಪುಡಿಮಾಡಲೇ ಏನು ? ||೧೧೪||

ಪಾಪ ಧ್ವಂಸಕನಾದ ಶಿವನೇ ! ಕ್ಷಣಕಾಲದಲ್ಲಿ ಬ್ರಹ್ಮಾಂಡವನ್ನೇನಾದರೂ

ವ್ಯತ್ಯಾಸಃ ಸರ್ವಲೋಕಾನಾಂ ಕಿಮು ಕಾರ್ಯೋಽಸ್ತಿ ಶಂಕರ ।
ಕಿಂ ಕರ್ತವ್ಯಮುತೇಶಾನ ಸರ್ವಪ್ರಾಣಿವಿನಾಶನಂ ॥೪೧೬॥

ಮಮಾಶಕ್ಯಂ ನ ಕುತ್ರಾಪಿ ತ್ವತ್ಪ್ರಸಾದಾನ್ಮಹೇಶ್ವರ ।
ಪರಾಕ್ರಮೇಣ ಮತ್ತುಲ್ಯೋ ನ ಭೂತೋ ನ ಭವಿಷ್ಯತಿ ॥೪೧೭॥

ಯತ್ರ ಯತ್ಕಾರ್ಯಮುದ್ದಿಶ್ಯ ಪ್ರೇಷಯಿಷ್ಯಸಿ ಮಾಂ ಪ್ರಭೋ ।
ತತ್ರತತ್ಕಾರ್ಯಂ ಸಾಧಯಾಮಿ ಸಾಧಯಾಮ್ಯೇವ ಸತ್ವರಂ ॥೪೧೮॥

ಸರ್ವತ್ರ ಗತಿರೀಶಾನ ಮಮಾಸ್ತಿ ತ್ವತ್ಪ್ರಸಾದತಃ ।
ನರಾಸ್ತರಂತಿ ಸಂಸಾರಸಾಗರಂ ಶಂಕರಸ್ಮೃತೇಃ ॥೪೧೯॥

ಭಸ್ಮಮಾಡಿಬಿಡಲೇ? ಈಶ್ವರ! ದೇವತೆಗಳನ್ನೇನಾದರೂ ಸುಟ್ಟು ಭಸ್ಮ ಮಾಡಬೇಕೇ ಹೇಗೆ? ॥೪೧೫॥

ಶಂಕರ! ಲೋಕಗಳನ್ನೆಲ್ಲಾ ಏನಾದರೂ ವ್ಯತ್ಯಾಸಮಾಡಬೇಕಾಗಿದೆಯೋ ಹೇಗೆ? ಈಶಾನಮೂರ್ತಿಯೇ! ಸಕಲ ಪ್ರಾಣಿಗಳನ್ನೂ ಈಗಲೇ ನಾಶಮಾಡಿಬಿಡಲೇ? ॥೪೧೬॥

ಮಹೇಶ್ವರ, ನಿನ್ನ ಅನುಗ್ರಹದಿಂದ ನನಗೆ ಯಾವುದೂ ಅಸಾಧ್ಯವಾಗಿಲ್ಲ. ನನಗೆ ಸರಿಸಮಾನನಾದ ಪರಾಕ್ರಮಶಾಲಿಯು ಹಿಂದಿಲ್ಲವು. ಮುಂದೆ ಹುಟ್ಟುವುದೂ ಇಲ್ಲವೆಂದು ತಿಳಿದಿರುವೆನು. ॥೪೧೭॥

ಪ್ರಭೋ, ಎಲ್ಲಿ ಯಾವಕಾರ್ಯಕ್ಕೋಸ್ಕರ ನನ್ನನ್ನು ಕಳುಹಿಸುವೆಯೋ ಆ ಕಾರ್ಯವನ್ನು ಸಾಧನೆಮಾಡುವುದಕ್ಕೋಸ್ಕರ ನಾನು ಜಾಗ್ರತೆಯಾಗಿ ಹೊರಡಲು ಸಿದ್ಧನಾಗಿರುವೆನು. ॥೪೧೮॥

ಈಶ್ವರಸ್ವಾಮಿಯೇ, ನಿನ್ನ ಅನುಗ್ರಹದಿಂದ ನನಗೆ ಎಲ್ಲಾ ಕಡೆಯಲ್ಲಿಯೂ ತಡೆಯಿಲ್ಲದ ಗತಿಯಿರುವುದು. ದೇವ! ಲೋಕಮಂಗಳಕರನಾದ ನಿನ್ನ ನಾಮಸ್ಮರಣೆ ಮಾತ್ರದಿಂದಲೇ ಮಾನವರು ಈ ಘೋರವಾದ ಸಂಸಾರವೆಂಬ ಸಾಗರವನ್ನೂ ದಾಟುತ್ತಿರುವರು. ॥೪೧೯॥

ಹರಾತೋಽಹಂ ನ ಕಿಂ ತರ್ತುಂ ಮಹಾಪತ್ಸಾಗರಂ ಕ್ಷಮಃ ।
ತ್ವತ್ಪ್ರೇಷಿತತೃಣೇನಾಪಿ ಮಹತ್ಕಾರ್ಯಮಯತ್ನತಃ ॥೪೨೦॥

ಕ್ಷಣೇನ ಶಕ್ಯತೇ ಕರ್ತುಂ ಶಂಕರಾತ್ರ ನ ಸಂಶಯಃ ।
ಲೀಲಾಮಾತ್ರೇಣ ತೇ ಶಂಭೋ ಕಾರ್ಯಂ ಯದ್ಯಪಿ ಸಿದ್ಧ್ಯತಿ ॥೪೨೧॥

ತಥಾಪ್ಯಹಂ ಪ್ರೇಷಣೀಯಃ ಮನ್ಯೈವಾನುಗ್ರಹೋಹ್ಯಯಂ ।
ಶಕ್ತಿರೇತಾದೃಶೀ ಶಂಭೋ ಮಮಾಪಿ ತ್ವದನುಗ್ರಹಾತ್ ॥೪೨೨॥

ವಿನಾ ಶಕ್ತಿರ್ನ ಕಸ್ಯಾಪಿ ಶಂಕರ ತ್ವದನುಗ್ರಹಾತ್ ।
ತ್ವದಾಜ್ಞಯಾ ವಿನಾ ಕೋಽಪಿ ತೃಣಾದೀನ್ಯಪಿ ವಸ್ತುತಃ ॥೪೨೩॥

ನೈವ ಚಾಲಯಿತುಂ ಶಕ್ಯಃ ಸತ್ಯಮೇತನ್ನ ಸಂಶಯಃ ।
ತ್ವದಾಜ್ಞಯಾಗ್ನಿರ್ದಹತಿ ತೃಣಾದೀನಿ ಸ ವಸ್ತುತಃ ॥೪೨೪॥

ಪಾಪಧ್ವಂಸಕನಾದ ಪರಶಿವನೇ, ನಿನ್ನ ಅನುಗ್ರಹವಿರುವ ನನಗೆ ಮಹಾ ವಿಪತ್ತುಗಳೆಂಬ ಸಾಗರವನ್ನು ದಾಟಲು ಸಾಮರ್ಥ್ಯವಿಲ್ಲದೇ ಇಲ್ಲ. ಇದು ನಿಶ್ಚಯ. ನೀನು ಅನುಗ್ರಹಿಸಿ ಕಳುಹಿಸಿದ ಒಂದು ಹುಲ್ಲುಕಡ್ಡಿಯಾದರೂ ಕ್ಷಣಮಾತ್ರದಲ್ಲಿ ಎಂತಹ ದೊಡ್ಡ ಕೆಲಸವನ್ನಾದರೂ ಅನಾಯಾಸವಾಗಿ ಮಾಡಬಲ್ಲದು. ಇದರಲ್ಲಿ ಸಂಶಯವೇ ಇಲ್ಲ. ಮಂಗಳಕರನಾದ ಶಂಭುವೇ. ನೀನು ಅಪ್ಪಣೆಕೊಡಿಸುವ ಕೆಲಸವು ಲೀಲಾಮಾತ್ರದಿಂದಲೇ ನನ್ನಿಂದ ಸಿದ್ಧಿಸುವುದು. ॥೪೨೦-೪೨೧॥

ಹಾಗಾದರೂ ನನ್ನನ್ನು ನೀನು ಕಳುಹಿಸುತ್ತಿರುವುದು ನನ್ನ ಅನುಗ್ರಹ ವೆಂದೇ ತಿಳಿಯುವೆನು. ಶಂಭುವೇ, ನಿನ್ನ ಅನುಗ್ರಹದಿಂದ ನನಗೆ ಈರೀತಿಯಾದ ಶಕ್ತಿಯುಂಟಾಗಿರುವುದು. ॥೪೨೨॥

ಶಂಕರನೇ, ನಿನ್ನ ಅನುಗ್ರಹವಿಲ್ಲದೇ ಯಾರಿಗೂ ಶಕ್ತಿಯುಂಟಾಗಲಾರದು. ನಿನ್ನ ಅಪ್ಪಣೆಯಿಲ್ಲದೇ ಹುಲ್ಲುಕಡ್ಡಿಯೇ ಮೊದಲಾದ ಅಲ್ಪ ವಸ್ತುಗಳನ್ನೂ ಸಹ; ॥೪೨೩॥

ಸತ್ಯವಾಗಿಯೂ ಅಲುಗಾಡಿಸಲು ಸಾಧ್ಯವಾಗುವುದಿಲ್ಲ. ಅಗ್ನಿಯೂ ನಿನ್ನ ಅಪ್ಪಣೆಯಿಂದಲೇ ಹುಲ್ಲು ಮೊದಲಾದ ಅಲ್ಪವಸ್ತುಗಳನ್ನೆಲ್ಲಾ ದಹಿಸುತ್ತಿರು ವನು. ॥೪೨೪॥

ವಿನಾ ತ್ವದಾಜ್ಞಾಮಗ್ನಿಶ್ಚ ದಗ್ಧುಂ ನೈವ ಕ್ಷಮೋ ಧ್ರುವಂ ।
ಕ್ವ ಶಕ್ತಿರ್ದಹನೇ ವಹ್ನೇಸ್ತೃಣಾನಾಮಪಿ ಚಾಲನೇ ॥೪೨೫॥

ನ ತಸ್ಯ ಶಕ್ತಿರಸ್ತ್ಯೇವ ವಿನಾಜ್ಞಾಂ ತವ ಶಂಕರ ।
ಭೀತಸ್ತ್ವತ್ತೋಯಮಗ್ನಿಶ್ಚ ಪವನಶ್ಚ ತಥಾ ರವಿಃ ॥೪೨೬॥

ಇಂದುರ್ಯಮೋ ವಸುಶ್ಚಾಪಿ ತಿಷ್ಠತೀಂದ್ರೋ ನ ಸಂಶಯಃ ।
ತತೋ ನಿಯಮ್ಯಾಃ ಸರ್ವೇಽಪಿ ದೇವಾಸ್ತವ ಮಹೇಶ್ವರ ॥೪೨೭॥

ತಥೈವಾಹಂ ನಿಯಮ್ಯಸ್ತೇ ನಾನಿಯಮ್ಯೋಽಸ್ತಿ ಸರ್ವಥಾ ।
ಪ್ರಣತೋಽಸ್ಮಿ ಮಹಾದೇವ ಭೂಯೋಽಪಿ ಪ್ರಣತೋಽಸ್ಮ್ಯಹಂ ॥೪೨೮॥

ಪ್ರೇಷಯಸ್ವೇಷ್ಟಸಿದ್ಧ್ಯರ್ಥಂ ಮಮಾದ್ಯ ಹರ ಸತ್ವರಂ ।
ಸ್ಪಂದೋಽಪಿ ಜಾಯತೇ ಶಂಭೋ ದಕ್ಷಿಣಸ್ಯ ಭುಜಸ್ಯ ಮೇ ॥೪೨೯॥

ನಿನ್ನ ಅಪ್ಪಣೆಯಿಲ್ಲದೇ ಬೆಂಕಿಗೂ ನಿಜವಾಗಿ ಸುಡುವ ಸಾಮರ್ಥ್ಯವಿಲ್ಲ. ಸುಡುವ ಶಕ್ತಿಯಿರಲಿ, ಬೆಂಕಿಗೆ ಒಂದು ಹುಲ್ಲುಕಡ್ಡಿಯನ್ನೂ ನಿನ್ನ ಅನುಗ್ರಹ ವಿಲ್ಲದೇ ಅಲ್ಲಾಡಿಸಲು ಸಾಧ್ಯವಿಲ್ಲ. ॥೪೨೫॥

ಶಂಕರನೇ! ನಿನ್ನ ಅಪ್ಪಣೆಯಿಲ್ಲದೇ ಯಾರಿಗೂ ಯಾವ ಶಕ್ತಿಯೂ ಇಲ್ಲ. ಈ ಅಗ್ನಿ, ವಾಯು, ಸೂರ್ಯ, ಚಂದ್ರ, ಯಮ, ವಸುಗಳು, ಇವರೆಲ್ಲರೂ ನಿನಗೆ ಭಯಪಡುತ್ತಿರುವರು. ಮಹೇಶ್ವರ! ಆ ದೇವೇಂದ್ರನೂ ನಿನಗೆ ಹೆದರಿ ನಿನ್ನ ಮುಂದೆ ನಿಲ್ಲಲಾರದೇ ಇರುವನು. ದೇವ! ಎಲ್ಲರೂ ನಿನ್ನಿಂದ ನಿಯಮಿಸಲ್ಪಡುವ ರಾಗಿರುವರು. ॥೪೨೭॥

ನಾನೂ ನಿನ್ನ ನಿಯಮಕ್ಕೆ ಒಳಪಟ್ಟಿರುವೆನು. ದೇವ! ಹೆಚ್ಚೇನು! ಒಟ್ಟಿನಲ್ಲಿ ನಿನ್ನ ನಿಯಮಕ್ಕೆ ಒಳಪಡದಿರುವವರು ಯಾರೂ ಇಲ್ಲವೆಂದೇ ತಿಳಿದಿರು ವೆನು. ಮಹಾದೇವ! ನಿನಗೆ ಪದೇ ಪದೇ ನಮಸ್ಕಾರಮಾಡುವೆನು. ಪರಮೇಶ್ವರ! ನಿನ್ನ ಮನಸ್ಸಿನಲ್ಲಿರುವ ಕೆಲಸವು ಸಿದ್ಧಿಸುವುದಕ್ಕೋಸ್ಕರ, ನನಗೆ ಜಾಗ್ರತೆ ಅಪ್ಪಣೆ ಕೊಟ್ಟು ಕಳುಹಿಸು. ದೇವ! ನನ್ನ ಬಲಭುಜವು ಬೇರೆ ಹಾರುತ್ತಿರುವುದು. ॥೪೨೮-೪೨೯॥

ಭವಿಷ್ಯತ್ಯದ್ಯ ವಿಜಯೋ ಮಾಮತಃ ಪ್ರೇಷಯ ಪ್ರಭೋ ।
ಸ್ಪಂದೋ ದಕ್ಷಿಣನೇತ್ರಸ್ಯಾಪ್ಯಧುನಾ ಜಾಯತೇ ಮಮ ॥೪೩೦॥

ಭವಿಷ್ಯತ್ಯದ್ಯ ವಿಜಯೋ ಮಾಮತಃ ಪ್ರೇಷಯ ಪ್ರಭೋ ।
ಹರೋತ್ಸಾಹವಿಶೇಷೋಽಪಿ ಜಾಯತೇ ಮಮ ಕಶ್ಚನ ॥೪೩೧॥

ಭವಿಷ್ಯತ್ಯದ್ಯ ವಿಜಯೋ ಮಾಮತಃ ಪ್ರೇಷಯ ಪ್ರಭೋ
ಶಿವ ತ್ವತ್ಪಾದಕಮಲಸಂಸಕ್ತಾಮಲಚೇತಸಃ ।
ಮಮ ಪ್ರತಿಪದೇ ಭಾವಿ ಶುಭಸಂತಾನಸಂತತಿಃ ॥೪೩೨॥

ತಸ್ಯೈವ ವಿಜಯೋ ಭಾವಿ ತಸ್ಯೈವ ಶುಭಮುನ್ನಹಂ ।
ತಸ್ಯ ಭಕ್ತಿರ್ದೃಢಾ ಶಂಭೋ ತ್ವಯಿ ಶೋಭನಸಂಶ್ರಯೇ ॥೪೩೩॥

ಇತ್ಯುಕ್ತಂ ತದ್ವಚಃ ಶ್ರುತ್ವಾ ಸಂತುಷ್ಟೋ ಮಂಗಲಾಪತಿಃ ।
ವೀರಭದ್ರ ಜಯಸ್ವೇತಿ ಪ್ರಾಹಾಶೀರ್ವಾದಪೂರ್ವಕಂ ॥೪೩೪॥

ಪ್ರಭುವೇ! ನನ್ನ ಬಲಗಣ್ಣು ಅದುರುತ್ತಿರುವುದು. ಆದ್ದರಿಂದ ನನಗೆ ವಿಜಯವಾಗುವುದೆಂದು ತೋರುವುದು. ದೇವ! ನನಗೆ ಅಪ್ಪಣೆಕೊಡು. ಪರಮೇಶ್ವರ! ವಿಶೇಷವಾದ ಉತ್ಸಾಹವೂ ನನ್ನಲ್ಲಿ ಉಂಟಾಗುತ್ತಿರುವುದರಿಂದ ನನ್ನನ್ನು ಅಪ್ಪಣೆ ಕೊಟ್ಟು ಕಳುಹಿಸಿಕೊಡು. ದೇವ! ನಿಜವಾಗಿಯೂ ನನಗೆ ವಿಜಯವಾಗುವುದೆಂದು ತೋರುತ್ತಿರುವುದು. ॥೪೩೦-೪೩೧॥

ನನಗೆ ಶುಭ ಶಕುನಗಳಾಗುತ್ತಿರುವುದರಿಂದ ನನ್ನನ್ನು ಜಾಗ್ರತೆ ಕಳುಹಿಸಿಕೊಡು. ಪ್ರಭು! ಶಿವ! ಸದಾ ನಿನ್ನ ಪಾದಕಮಲಗಳಲ್ಲಿಯೇ ನೆಲಸಿರುವ ಮನಸ್ಸುಳ್ಳ ನನಗೆ ಪ್ರಯಾಣಕಾಲದಲ್ಲಿ ಹೆಜ್ಜೆ ಹೆಜ್ಜೆಗೂ ಮಂಗಳ ಪರಂಪರೆಯು ಉಂಟಾಗುವಂತೆ ಅನುಗ್ರಹಿಸು. ಸ್ವಾಮಿ. ॥೪೩೨॥

ಶಂಭುವೇ! ಸನ್ಮಂಗಳಗಳಿಗೆ ಆಶ್ರಯನಾಗಿರುವ ಆ ನಿನ್ನಲ್ಲಿ ಯಾರು ಪ್ರತಿನಿತ್ಯವೂ ಭಕ್ತಿಯುಳ್ಳವರಾಗಿರುವರೋ ಅವರಿಗೆ ವಿಜಯವೂ ಶುಭವೂ ತಪ್ಪದೇ ಉಂಟಾಗುವುದು." ॥೪೩೩॥

ವೀರಭದ್ರನು ಹೀಗೆ ನುಡಿದುದನ್ನು ಕೇಳಿ ಸಂತುಷ್ಟನಾದ ಮಂಗಲಾದೇವಿಯ ಪ್ರಿಯನಾದ ಶಿವನು, ಎಲೈ ವೀರಭದ್ರನೇ! ನಿನಗೆ ವಿಜಯವಾಗಲಿ, ಎಂದು ಆಶೀರ್ವಾದ ಮಾಡುತ್ತ ಅವನಿಗೆ ಹೀಗೆ ಹೇಳಿದನು. ॥೪೩೪॥

|| ಶ್ರೀಮಹಾದೇವ ಉವಾಚ ||

ಯಾಗಂ ಕರ್ತುಂ ಸಮುದ್ಯುಕ್ತೋ ದಕ್ಷೋ ಮದ್ವಿಮುಖೋಽಧುನಾ ।
ತಮದ್ಯ ಭಸ್ಮಸಾತ್ಕೃತ್ವಾ ಪುನರಾಯಾಹಿ ಸತ್ವರಂ ||೪೩೫||

ಕಿಂ ಚ ತಿಷ್ಠಂತಿ ಮೋಹೇನ ಯೇ ದಕ್ಷಾಧ್ವರಮಂಟಪೇ ।
ತಾನಪ್ಯದ್ಯೈವ ಸಹಸಾ ಭಸ್ಮಸಾತ್ಕುರು ಸತ್ವರಂ ||೪೩೬||

ಕಿಂ ಚ ತಿಷ್ಠಂತಿ ಮೋಹೇನ ಯೇ ದಕ್ಷಾಧ್ವರಮಂಟಪೇ ।
ಸುರಾ ಭವಂತು ಗಂಧರ್ವಾ ಯಕ್ಷಾ ವಾ ಯೇ ಚ ಕೇಚನ ||೪೩೭||

ತಾನಪ್ಯದ್ಯೈವ ಸಹಸಾ ಭಸ್ಮಸಾತ್ಕುರು ಸತ್ವರಂ ।
ದಧೀಚ್ಯುಕ್ತಂ ಸಮುಲ್ಲಂಘ್ಯ ಶಪಥಂ ಮಯಿ ತತ್ರ ಯೇ ||೪೩೮||

ತಿಷ್ಠಂತಿ ಯೇ ಪ್ರಯತ್ನೇನ ಜ್ವಾಲನೀಯಾಸ್ತ್ವಯಾ ಧ್ರುವಂ ।
ತತ್ರಾಸ್ತು ವಿಷ್ಣುರ್ಬ್ರಹ್ಮಾ ವಾ ಶಚೀನಾಥೋ ಯಮೋಽಥವಾ ||೪೩೯||

ಎಲೈ ವೀರಭದ್ರನೇ, ನನಗೆ ವಿರುದ್ಧವಾಗಿ, ದಕ್ಷನೆಂಬುವನು ಈಗ ಯಾಗ ಮಾಡಲು ಆರಂಭಿಸಿರುವನು. ಅವನನ್ನು ಈ ಕೂಡಲೇ ಭಸ್ಮಮಾಡಿ ತಿರುಗಿ ಜಾಗ್ರತೆ ಇಲ್ಲಿಗೆ ಹೊರಟು ಬಾ. ||೪೩೫||

ಅಜ್ಞಾನದಿಂದ ಆ ದಕ್ಷಬ್ರಹ್ಮನ ಯಾಗಮಂಟಪದಲ್ಲಿ ನಿಂತಿರುವರನ್ನೆಲ್ಲಾ ಜಾಗ್ರತೆಯಾಗಿ ಸುಟ್ಟು ಭಸ್ಮಮಾಡಿಬಿಡು. ಆ ಯಾಗಮಂಟಪದಲ್ಲಿರುವವರು, ಗಂಧರ್ವರು, ಯಕ್ಷರು, ಅಥವ ಇನ್ನು ಯಾರು ಬೇಕಾದರೂ ಆಗಲಿ ಅವರಾರನ್ನೂ ಲಕ್ಷಿಸದೇ ಕೂಡಲೇ ಸುಟ್ಟುಬೂದಿಮಾಡಿಬಿಡು. ||೪೩೬-೪೩೭||

ದಧೀಚಿಮಹರ್ಷಿಯು ಮಾಡಿದ ನನ್ನ ಮೇಲಿನ ಪ್ರತಿಜ್ಞೆಯನ್ನು ಮೀರುತ್ತಾ ಬಲಾತ್ಕಾರವಾಗಿ ಯಾರು ಆ ಯಾಗಮಂಟಪದಲ್ಲಿರುವರೋ ಅವರನ್ನೆಲ್ಲಾ ಬೆಂಕಿಯ ಜ್ವಾಲೆಗಳ ಸಮೂಹದಿಂದ ಸುತ್ತಿ ಖಂಡಿತವಾಗಿ ಬೂದಿಮಾಡು. ಒಂದುವೇಳೆ ಅಲ್ಲಿ ವಿಷ್ಣು, ಬ್ರಹ್ಮ, ಶಚೀಪತಿಯಾದ ದೇವೇಂದ್ರ, ಯಮ ಅಥವ ಮತ್ತಾರಾದರೂ ದೇವತೆಗಳು, ಇವರಾರಿದ್ದರೂ ಯಾರನ್ನೂ ನೋಡದೇ ಅವರನ್ನೆಲ್ಲಾ ಬೆಂಕಿಯ ಜ್ವಾಲೆಯಲ್ಲಿ ಕೆಡವಿ ಸಾಯಿಸುವವನಾಗು. ||೪೩೮-೪೩೯||

ಅವಿಚಾರ್ಯೈವ ತಾನ್ಸರ್ವಾನ್ಪಾತಯಸ್ವ ಪ್ರಯತ್ನತಃ ।
ಪ್ರಪಲಾಯ್ಯ ಗಮಿಷ್ಯಂತಿ ಯದಿ ವಿಷ್ಣ್ವಾದಯೋ ಭ್ರಮಾತ್॥೪೪೦॥

ತಾನಾಕರ್ಷಯ ಮಂತ್ರೇಣ ಜ್ವಾಲಯಾನಯ ಸತ್ವರಂ ।
ಯೇ ತತ್ರೋಲ್ಲಂಘ್ಯ ಶಪಥಂ ಮದೀಯಂ ಗರ್ವತಃ ಸ್ಥಿತಾಃ॥೪೪೧॥

ತೇ ಹಿ ಮದ್ರೋಹಿಣೋಽತಸ್ತಾನ್ಜ್ವಾಲಯಾನಲಮಾಲಯಾ ।
ಸಪತ್ನೀಕಾನ್ಸಸಂಭಾರಾನ್ದಕ್ಷಯಾಗಸ್ಥಲೇ ಸ್ಥಿತಾನ್ ॥೪೪೨॥

ಪ್ರಜ್ವಾಲ್ಯ ಭಸ್ಮಸಾತ್ಕೃತ್ವಾ ಪುನರಾಯಾಹಿ ಸತ್ವರಂ।
ತತ್ರ ತ್ವಯಿ ಗತೇ ದೇವಾ ವಿಷ್ಣ್ವಾದ್ಯಾ ಯದಿ ಸಾದರಂ ॥೪೪೩॥

ಸ್ತೋಷ್ಯಂತಿ ತ್ವಾಂ ತದಾಪ್ಯಾಶು ಜ್ವಾಲಯಾ ಜ್ವಾಲಯಾಶು ತಾನ್ ।
ದೇವಾನ್ಮಯಿ ಕೃತದ್ರೋಹಾನ್ಜ್ವಾಲಾಮಾಲಾಸಮಾಕುಲೈಃ ॥೪೪೪॥

ವಿಷ್ಣುವೇ ಮೊದಲಾದ ದೇವತೆಗಳು ಒಂದುವೇಳೆ ನಿನ್ನ ಏಟನ್ನು ತಾಳಲಾರದೇ ಅಜ್ಞಾನದಿಂದ ಓಡಿಹೋಗುವರಾದರೆ, ಅವರನ್ನೆಲ್ಲಾ ಮಂತ್ರದಿಂದ ಆಕರ್ಷಿಸಿ ಕೂಡಲೇ ಬೆಂಕಿಯ ಜ್ವಾಲೆಯಿಂದ ಸುಡುವನಾಗು. ||೪೪೦||

ನನ್ನ ಪ್ರತಿಜ್ಞೆಯನ್ನು ಮೀರಿ ಅಹಂಕಾರದಿಂದ ಅಲ್ಲಿಯೇ ಯಾಗಮಂಟಪದಲ್ಲಿರುವರೆಲ್ಲರೂ ನನಗೆ ದ್ರೋಹಮಾಡಿದವರೆಂದು ತಿಳಿದರೆ ಎಲ್ಲರನ್ನೂ ಈ ಬೆಂಕಿಯ ಜ್ವಾಲೆಯಿಂದ ಸುಟ್ಟು ಭಸ್ಮಮಾಡು. ||೪೪೧||

ಆ ದಕ್ಷನ ಯಾಗಭೂಮಿಯಲ್ಲಿರುವವರನ್ನು ಅವರವರ ಪತ್ನಿಯರೊಡನೆಯೂ ಅವರ ಸಲಕರಣೆಗಳೊಡನೆಯೂ ಸುಟ್ಟು ಬೂದಿಮಾಡಿ ಜಾಗ್ರತೆ ಹಿಂತಿರುಗಿ ಬಾ. ||೪೪೨||

ನೀನು ಒಂದುವೇಳೆ ಅಲ್ಲಿಗೆ ಹೋದಾಗ ವಿಷ್ಣುವೇ ಮೊದಲಾದ ದೇವತೆಗಳು ನಿನ್ನನ್ನು ಆದರದಿಂದ ಸ್ತೋತ್ರಮಾಡುವುದೇ ಆದರೆ, ಅವರ ಸ್ತೋತ್ರಗಳಿಗೆ ಮರುಳಾಗದೇ ಅವರನ್ನೆಲ್ಲಾ ಕೂಡಲೆ ಬೆಂಕಿಯ ಜ್ವಾಲೆಗಳಿಂದ ಸುಟ್ಟು ಭಸ್ಮಮಾಡು. ||೪೪೩||

ನನಗೆ ದ್ರೋಹಮಾಡಿರುವ ದೇವತೆಗಳನ್ನೆಲ್ಲಾ ಅಗ್ನಿಯ ಜ್ವಾಲೆಗಳ ಸಮೂಹದಿಂದ ಸುತ್ತಿ, ಉರಿಯುತ್ತಿರುವ ಬೆಂಕಿಯನ್ನು ಮತ್ತೆ ಹೆಚ್ಚಾಗಿ

ಜ್ವಾಲಯ ಜ್ವಲನೈಃ ಶೀಘ್ರಮಾಧ್ಮಾಯಾಧ್ಮಾಯ ಪಾವಕಾನ್ ।
ವಿಷ್ಣ್ವಾದೀನ್ದಕ್ಷಯಜ್ಞಸ್ಥಾನ್ಸಪತ್ನೀಕಾನ್ಸಬಾಂಧವಾನ್ ॥೪೪೫॥

ಪ್ರಜ್ವಾಲ್ಯ ವೀರ ತದನು ಸಲೀಲಂ ಸಲಿಲಂ ಪಿಬ
ಇತ್ಯುಕ್ತಂ ಶ್ರೀಮಹೇಶಸ್ಯ ಶ್ರುತ್ವಾ ವಚನಮಾದರಾತ್ । ॥೪೪೬॥

ವೀರಭದ್ರೋಽತಿಸಂತುಷ್ಟಃ ಪ್ರಣನಾಮ ಮಹೇಶ್ವರಂ ॥೪೪೭॥

ಪ್ರಣಂತಂ ಶಂಕರಃ ಪ್ರಾಹ ವೀರಭದ್ರ ಜಯೇತಿ ತಂ ।
ತತಃ ಪ್ರಚಲಿತಃ ಶೀಘ್ರಂ ವೀರಭದ್ರೋಽದ್ರಿರಾಡಿವ ॥೪೪೮॥

ಶಂಕರಃ ಪ್ರೇಷಯಾಮಾಸ ಶೋಭಾರ್ಥಂ ಕೋಟಿಶೋ ಗಣಾನ್ ।
ವೀರಭದ್ರಸ್ಯ ಪುರತಃ ಪಶ್ಚಾದಪಿ ಯಯುರ್ಗಣಾಃ ॥೪೪೯॥

ಉರಿಯುವಂತೆ ಮಾಡಿ ಭಸ್ಮಮಾಡುವನಾಗು. ಆ ದಕ್ಷನ ಯಜ್ಞಶಾಲೆಯಲ್ಲಿರುವ ವಿಷ್ಣುವೇ ಮೊದಲಾದವರನ್ನೆಲ್ಲಾ ಅವರ ಪತ್ನಿಯರೂ ನೆಂಟರೂ ಇವರೊಡನೆ ಚೆನ್ನಾಗಿ ಸುಟ್ಟು ಬೂದಿಮಾಡಿದನಂತರ ಲೀಲೆಯಿಂದ ನಿನಗೆ ಬೇಕಾದ ಹಾಗೆ ನೀರನ್ನು ಕುಡಿಯುವನಾಗು, ಎಂದು ಮಹೇಶ್ವರನು ವೀರಭದ್ರನಿಗೆ ಆಜ್ಞೆಮಾಡಿದನು. ॥೪೪೪-೪೪೫-೪೪೬॥

ಈರೀತಿಯಾಗಿ ನುಡಿದ ಆ ಮಹೇಶ್ವರನ ಮಾತುಗಳನ್ನು ಆದರದಿಂದ ಕೇಳಿ ವೀರಭದ್ರನು ಸಂತೋಷಭರಿತನಾಗಿ, ಆ ಮಹಾದೇವನ ಪಾದಕಮಲಗಳಿಗೆ ನಮಸ್ಕಾರಮಾಡಿದನು. ಹೀಗೆ ತನಗೆ ವಿನಯದಿಂದ ನಮಸ್ಕಾರಮಾಡುತ್ತಿರುವ ಆ ವೀರಭದ್ರನನ್ನು ಕುರಿತು, ನಿನಗೆ ಜಯವಾಗಲಿ, ನೀನು ಹೊರಡು ಎಂದು ಆ ಶಂಕರನು ಆಶೀರ್ವಾದಮಾಡಲು, ಆಗ ವೀರಭದ್ರನು ಅಲ್ಲಿಂದ ಜಾಗ್ರತೆಯಾಗಿ ಪರ್ವತರಾಜನೇ ಬರುತ್ತಿರುವನೋ ಎಂಬಂತೆ ಹೊರಟನು. ॥೪೪೭-೪೪೮॥

ಆಗ ಆ ಲೋಕಶಂಕರನು, ಗೌರವಕ್ಕೋಸ್ಕರ ಕೋಟ್ಯಂತರ ಶಿವಗಣಗಳನ್ನು ಆ ವೀರಭದ್ರನ ಜೊತೆಯಲ್ಲಿ ಕಳುಹಿಸಿಕೊಟ್ಟನು. ಆ ರುದ್ರಗಣಗಳು ವೀರಭದ್ರನ ಮುಂದುಗಡೆಯಲ್ಲಿಯೂ ಹಿಂಭಾಗದಲ್ಲಿಯೂ ಹೊರಟರು. ॥೪೪೯॥

ಕಲ್ಪವೃಕ್ಷಸಮುತ್ಸೃಷ್ಟಾ ಪುಷ್ಪವೃಷ್ಟಿರಭೂತ್ತದಾ ।
ತುಷ್ಟುವುಶ್ಚ ಗಣಾ ವೀರಂ ಶಿಪಿವಿಷ್ಟೇಷ್ಟಚೇಷ್ಟಿತಂ ॥೪೫೦॥

ವೀರಭದ್ರೇ ಪ್ರಚಲಿತೇ ದಕ್ಷನಾಶಾಯ ಸತ್ವರಂ ।
ದಕ್ಷೇಣ ದುಷ್ಟಚಿಹ್ನಾನಿ ದೃಷ್ಟಾನಿ ವಿಬುಧೈರಪಿ ॥೪೫೧॥

ದಕ್ಷವಾಮಭುಜಸ್ಪಂದೋ ಬಹುಧಾ ಸಮಜಾಯತ ।
ಸುರವಾಮಭುಜಸ್ಪಂದೋ ತಥೈವ ಸಮಜಾಯತ ॥೪೫೨॥

ಭೂಕಂಪಃ ಸಮಭೂತ್ತತ್ರ ದಕ್ಷಯಾಗಸ್ಥಲೇ ತದಾ ।
ದಕ್ಷೋ ದದರ್ಶ ಮಧ್ಯಾಹ್ನೇ ನಕ್ಷತ್ರಾಣ್ಯದ್ಭುತಾನಿ ಸಃ ॥೪೫೩॥

ದಿಶೋ ಬಭೂವುರ್ಮಲಿನಾಃ ಕರ್ಬುರೋಽಭೂದ್ದಿವಾಕರಃ ।
ಪರಿವೇಷಸಹಸ್ರೇಣ ಸಂಕ್ರಾಂತಶ್ಚಾಭವದ್ರವಿಃ ॥೪೫೪॥

ನಕ್ಷತ್ರಾಣಿ ತದಾ ಪೇತುರ್ವಿದ್ಯುದಗ್ನಿಸಮನ್ವಿತಾಃ ।
ನಕ್ಷತ್ರಾಣಾಮಭೂದ್ವಕ್ರಾ ಗತಿಶ್ಚಾಧೋಮುಖೀ ತದಾ ॥೪೫೫॥

ಆಗ ಕಲ್ಪವೃಕ್ಷದಿಂದ ಹೂವಿನಮಳೆಯು ಸುರಿಯಿತು. ಶಿವಗಣಗಳೆಲ್ಲವೂ ವೀರನಾದ ಶಿಪಿವಿಷ್ಟನೆನಿಸಿದ ಆ ಮಹಾದೇವನ ಚರಿತ್ರೆಯನ್ನು ಸ್ಮರಿಸುತ್ತಾ ಸ್ತೋತ್ರ ಮಾಡಿದವು. ॥೪೫೦॥

ಹೀಗೆ ಆ ವೀರಭದ್ರನು ದಕ್ಷಬ್ರಹ್ಮನ ನಾಶಕ್ಕೋಸ್ಕರ ಮಹೇಶ್ವರನ ಅಪ್ಪಣೆ ಪಡೆದು ಹೊರಡಲು, ದಕ್ಷನಿಗೂ ದೇವತೆಗಳಿಗೂ ದುಷ್ಟಶಕುನಗಳಾದವು. ॥೪೫೧॥

ಆಗ ದಕ್ಷನಿಗೂ, ಅಲ್ಲಿ ನೆರೆದಿದ್ದ ಇತರ ದೇವತೆಗಳಿಗೂ ಎಡಭುಜಗಳು ಹಾರಿದವು. ಆ ದಕ್ಷನ ಯಾಗಭೂಮಿಯಲ್ಲಿ ಭೂಕಂಪವಾಯಿತು. ಮಧ್ಯಾಹ್ನ ಕಾಲದಲ್ಲಿ ಅವನಿಗೆ ನಕ್ಷತ್ರಗಳು ಗೋಚರವಾದವು. ॥೪೫೨-೪೫೩॥

ದಿಕ್ಕುಗಳೆಲ್ಲವೂ ಮಲಿನವಾದವು. ಸೂರ್ಯನು ಚಿತ್ರಬಣ್ಣದವನಾದನು. ಸೂರ್ಯನಿಗೆ ಸಾವಿರಾರು ಪರಿವೇಷಗಳು ಕಟ್ಟಿದುವು. ನಕ್ಷತ್ರಗಳಿಗೆಲ್ಲಾ ವಕ್ರಗಮನವುಂಟಾಗಿ ಅವೆಲ್ಲವೂ ಕೆಳಮುಖವಾದ ಗಮನವುಳ್ಳವುಗಳಾದವು. ॥೪೫೪-೪೫೫॥

ಗೃಧ್ರಾ ದಕ್ಷಶಿರಃ ಸ್ಪೃಷ್ಟ್ವಾ ಸಮುದ್ಭೂತಾಃ ಸಹಸ್ರಶಃ ।
ಗೃಧ್ರಪಕ್ಷಚ್ಛಾಯಯಾಸೀತ್ಸಚ್ಛಾಯೋ ಯಾಗಮಂಡಪಃ ॥೪೫೬॥

ಪವಾಶಿರೇ ಯಾಗಭೂಮೌ ಕ್ರೋಷ್ಟಾರಃ ಕೋಟಿಶಸ್ತದಾ ।
ಉಲ್ಕಾವೃಷ್ಟಿರಭೂತ್ತತ್ರ ಶ್ವೇತವೃಶ್ಚಿಕಸಂಯುತಾ ॥೪೫೭॥

ತದಾ ಸೋಷ್ಣಾ ವವುರ್ವಾತಾ ಪಾಂಸುವೃಷ್ಟಿಸಮನ್ವಿತಾಃ ।
ಶಲಭಾಶ್ಚ ಸಮುದ್ಭೂತಾಃ ವಿವರ್ತಾನಿಲಕಂಪಿತಾಃ ॥೪೫೮॥

ನೀತಶ್ಚ ಪವನೈರೂರ್ಧ್ವಂ ಸ ದಕ್ಷಾಧ್ವರಮಂಟಪಃ ।
ದೇವಾನ್ವಿತೇನ ದಕ್ಷೇಣ ಯಃ ಕೃತೋ ನೂತನಃ ಪುನಃ ॥೪೫೯॥

ನೇಮುರ್ದಕ್ಷಾದಯಃ ಸರ್ವೇ ತದಾ ಶೋಣಿತಮದ್ಭುತಂ ।
ನೇಮುಶ್ಚ ಮಾಂಸಖಂಡಾನಿ ಸಶಲ್ಯಾನಿ ಮುಹುರ್ಮುಹುಃ ॥೪೬೦॥

ಸಾವಿರಾರು ಹದ್ದುಗಳು ಹುಟ್ಟಿ ಆ ದಕ್ಷಬ್ರಹ್ಮನ ತಲೆಯನ್ನು ಮುಟ್ಟಿ ಹಾರಿಹೋದವು. ಆ ಯಾಗಭೂಮಿಯೆಲ್ಲಾ ಹದ್ದುಗಳ ರೆಕ್ಕೆಗಳ ನೆಳಲಿನಿಂದ ನೆಳಲುಳ್ಳದುದಾಗಿ ತೋರಿಬಂದಿತು. ಕೋಟ್ಯಂತರ ನರಿಗಳು ಆ ಯಾಗಶಾಲೆಯ ಭೂಮಿಯಲ್ಲಿ ವಾಸಮಾಡತೊಡಗಿದವು. ಆ ಸಂದರ್ಭದಲ್ಲಿ ಬಿಳಿಯ ಚೇಳುಗಳಿಂದ ಕೂಡಿದ ಉಲ್ಕಾಪಾತವಾಯಿತು. ||೪೫೬-೪೫೭||

ಗಾಳಿಯು ಬಿಸಿಯಾಗಿ ಬೀಸತೊಡಗಿತು. ಮರಳಿನ ಮಳೆಗರೆಯಿತು. (ಮರಳಿನ ಮಳೆಗರೆಯುತ್ತಾ ಗಾಳಿಯು ಬಿಸಿಯಾಗಿ ಬೀಸತೊಡಗಿತು.) ಸುಳಿಗಾಳಿಯಿಂದ ಯಾಗಮಂಟಪವೇ ನಡುಗಿತು. ಶಲಭಗಳು ಯಥೇಚ್ಛವಾಗಿ ಉಂಟಾದವು. ಬಿರುಗಾಳಿಯು ಹಿಂದೆ ದೇವತೆಗಳೊಡನೆ ಸೇರಿ ಪುನಃ ಆ ದಕ್ಷನು ಹೊಸದಾಗಿ ಕಟ್ಟಿಸಿದ್ದ ದಕ್ಷಬ್ರಹ್ಮನ ಯಾಗಮಂಟಪವನ್ನೇ ಹೊತ್ತು ಮೇಲೆ ತೆಗೆದುಕೊಂಡು ಹೋಗಿ ಹಾರಿಸಿತು. ||೪೫೮-೪೫೯||

ದಕ್ಷನೇ ಮೊದಲಾದವರೆಲ್ಲರೂ ಅದ್ಭುತವಾಗಿ ರಕ್ತವನ್ನು ಕಾರಿದರು. ಅಲ್ಲದೆ ಅವರು ನರಗಳೊಡನೆ ಮಾಂಸಖಂಡಗಳನ್ನು ಪದೇ ಪದೇ ವಾಂತಿಮಾಡಿಕೊಂಡರು. ||೪೬೦||

ಸಕಂಪಾಶ್ಚ ಬಭೂವುಸ್ತೇ ದೀಪವಾತಾಹತಾ ಇವ।
ದುಃಖಿತಾಶ್ಚ ಬಭೂವುಸ್ತೇ ಶಸ್ತ್ರಧಾರಾಹತಾ ಇವ ॥೪೬೧॥

ತದಾನನಾನಿ ಜಾತಾನಿ ಖಿನ್ನಾನಿ ವಿಶದಾನ್ಯಪಿ।
ನಿಶಾಯಾಂ ಕಮಲಾನೀವ ಕುಮುದಾನೀವ ಸಂಗವೇ ॥೪೬೨॥

ದಕ್ಷಾದ್ಯಕ್ಷೀಣಿ ಜಾತಾನಿ ಬಾಷ್ಪವರ್ಷಾಣಿ ತತ್ಕ್ಷಣೇ।
ಪ್ರಾತಸ್ತುಷಾರವರ್ಷಾಣಿ ಪದ್ಮಾನೀವ ವನಾಂತರೇ ॥೪೬೩॥

ಭುವಿ ತೇ ಮೂರ್ಛಿತಾಃ ಪೇತುಃ ಹಾಹಂತಾಃ ಸ್ಮ ಇತಿ ದ್ರುತಂ।
ತರವಸ್ತೀರಸಂಜಾತಾ ನದೀವೇಗಹತಾ ಇವ ॥೪೬೪॥

ಪತಿತ್ವಾ ತೇ ಸ್ಥಿತಾ ಭೂಮೌ ಕ್ರೂರಾಃ ಸರ್ಪಾ ಇವಾಹತಾಃ।
ಕಂತುಕಾ ಇವ ತೇ ಭೂಯಃ ಪತಿತಾಃ ಪುನರುತ್ಥಿತಾಃ ॥೪೬೫॥

ಗಾಳಿಯ ಹೊಡತಕ್ಕೆ ಸಿಕ್ಕಿದ ದೀಪಗಳಂತೆ ಅವರೆಲ್ಲರೂ ನಡುಗಿದರು. ಶಸ್ತ್ರಗಳ ಅಲಗುಗಳಿಂದ ಹೊಡೆಯಲ್ಪಟ್ಟವರಂತೆ ಎಲ್ಲರೂ ತುಂಬಾ ದುಃಖಿತರಾದರು. ॥೪೬೧॥

ಆ ದಕ್ಷಬ್ರಹ್ಮನೇ ಮೊದಲಾದವರ ಮುಖಗಳು ವಿಶಾಲವಾಗಿ ಶುಭ್ರವಾಗಿದ್ದರೂ, ರಾತ್ರಿಕಾಲದ ಕಮಲಗಳಂತೆಯೂ, ಬೆಳಗಿನ ಕಾಲಗಳಲ್ಲಿಯ ಕನ್ನೈದಿಲೆಯಂತೆಯೂ ಬಾಡಿಹೋದವು. ॥೪೬೨॥

ದಕ್ಷನೇ ಮೊದಲಾದವರ ಕಣ್ಣುಗಳೆಲ್ಲವೂ ಕಣ್ಣೀರುಗಳನ್ನು ಸುರಿಸುತ್ತಾ ಮುಂಕಾಗಿ, ಬೆಳಗಿನ ಕಾಲದಲ್ಲಿ ಹಿಮದ ಮಳೆಯಿಂದ ಕಮಲಗಳು ಕಾಡಿನ ಮಧ್ಯದಲ್ಲಿ ಶೋಭಿಸುವಂತೆ ತೋರುತ್ತಿದ್ದವು. ಅಯ್ಯೋ ಕೆಟ್ಟೆವೆಂದು ಹೇಳುತ್ತಾ ಜಾಗ್ರತೆಯಾಗಿ ಅವರೆಲ್ಲರೂ ಭೂಮಿಯ ಮೇಲೆ ಬಿದ್ದು ಮೂರ್ಛೆ ಹೊಂದಿದರು. ಅವರನ್ನು ನೋಡಿದರೆ ನದಿಯ ವೇಗದಿಂದ ಹೊಡೆಯಲ್ಪಟ್ಟ ದಡದಲ್ಲಿ ಬೆಳೆದ ಮರಗಳಂತೆ ಕಾಣುತ್ತಿದ್ದರು. ॥೪೬೩-೪೬೪॥

ಅವರು ಭೂಮಿಯ ಮೇಲೆ ಕ್ರೂರವಾದ ಸರ್ಪಗಳಿಂದ ಕಚ್ಚಲ್ಪಟ್ಟವರಂತೆ ಕೆಳಕ್ಕೆ ಬಿದ್ದರು. ಹಾಗೆ ಬಿದ್ದವರು ಚೆಂಡನ್ನು ಕೆಳಗೆ ಹೊಡೆದರೆ, ಅದು ತಾನು ಕೆಳಗೆ

ತತಸ್ತೇ ತಾಪಸಂತಪ್ತಾ ರುರುದುಃ ಕುರರಾ ಇವ ।
ರೋದನಧ್ವನಿಸಂಕ್ರಾಂತಾ ಸಂಕ್ರಾಂತೋತ್ಕ್ರಾಂತಿಕಾ ಇವ ॥೪೬೬॥

ಸವೈಕುಂಠಾಸ್ತತಃ ಸರ್ವೇ ತದಾ ಕುಂಠಿತಶಕ್ತಯಃ ।
ಸ್ವಸ್ವೋಪಕಂಠಮಾಕಂಠಂ ಲುಲುಠುಃ ಕಮಠಾ ಇವ ॥೪೬೭॥

ದುರ್ಭಗಾ ಭಾಗ್ಯಸಂಕ್ರಾಂತಾಃ ಶಿವಪೂಜಾಪರಾಙ್ಮುಖಾಃ ।
ಧಿಗ್ಜನ್ಮ ತವ ದಕ್ಷೇತಿ ಸಂಜಾತಾ ಚಾಶರೀರವಾಕ್ ॥೪೬೮॥

ತದಾನೀಮಾಗತೋ ಭೀಮೋ ವೀರಭದ್ರೋಽರಿಮರ್ದನಃ ।
ನರಸಿಂಹವಿನಾಶಾರ್ಥಂ ಪುರಾರಿರಿವ ಸತ್ವರಂ ॥೪೬೯॥

ಬಿದ್ದು ಪುನಃ ಮೇಲಕ್ಕೆ ಪುಟಹಾರಿ ಬರುವಂತೆ ಎಲ್ಲರೂ ತಾವು ಬಿದ್ದರೂ ತಿರುಗಿ ಮೇಲೆ ಎದ್ದು ನಿಲ್ಲುತ್ತಿದ್ದರು. ॥೪೬೫॥

ಅನಂತರ ದುಃಖದಿಂದ ಕಡುನೊಂದ ಈ ದಕ್ಷಾದಿಗಳು ಹುಲ್ಲೆಮರಿಗಳಂತೆ ಗೋಳಾಡಿದರು. ಇವರು ಅಳುವ ಧ್ವನಿಯಿಂದ ವ್ಯಾಪ್ತವಾದ ಆ ಪ್ರದೇಶವು ಚಕ್ರವಾಕಪಕ್ಷಿಗಳ ರೋದನಧ್ವನಿಗಳಂತಿದ್ದವು. ॥೪೬೬॥

ವೈಕುಂಠಾಧಿಪತಿಯಾದ ಆ ಮಹಾವಿಷ್ಣುವಿನೊಡನೆ ಅವರೆಲ್ಲರೂ ಬಲಗುಂದಿದವರಾಗಿ ಆಮೆಗಳಂತೆ ತಮ್ಮ ಕುತ್ತಿಗೆಯ ವರೆಗೂ ತುಂಬಿದ ದುಃಖದಿಂದ ಹೊರಳಾಡಿದರು. ॥೪೬೭॥

ಎಲೈ ನಿರ್ಭಾಗ್ಯದೇವತೆಗಳಿರಾ, ಐಶ್ವರ್ಯಮದದಿಂದ ಕೊಬ್ಬಿದ ನೀವು ಆ ಶಿವಪೂಜೆಯಲ್ಲಿ ವಿಮುಖರಾಗಿರುವಿರಿ. ನಿಮ್ಮ ಬಾಳು ವ್ಯರ್ಥವಾದುದು. ಓ ದಕ್ಷಬ್ರಹ್ಮನೇ, ನಿನ್ನ ಜನ್ಮವನ್ನು ಸುಡಲಿ ಎಂದು ಅಶರೀರವಾಣಿಯಾಯಿತುತು. ॥೪೬೮॥

ಆ ಸಮಯಕ್ಕೆ ಸರಿಯಾಗಿ ಭಯಂಕರವಾದ ಆಕಾರವುಳ್ಳವನೂ, ಶತ್ರುಧ್ವಂಸಮಾಡುವವನೂ ಆದ ವೀರಭದ್ರನು, ಹಿಂದೆ ನರಸಿಂಹರೂಪವನ್ನು ತಾಳಿದ ಮಹಾವಿಷ್ಣುವನ್ನು ನಿಗ್ರಹಿಸಿ ಅವನ ಗರ್ವವನ್ನು ಹೋಗಲಾಡಿಸುವುದಕ್ಕೋಸ್ಕರ ಹೊರಟ ತ್ರಿಪುರಾಸುರಧ್ವಂಸಕನಾದ ಶರಭಾವತಾರಿಯಾದ ಮಹೇಶ್ವರನಂತೆ ಉಗ್ರವಾಗಿ ಅಲ್ಲಿಗೆ ಬಂದನು. ॥೪೬೯॥

ಉಪೇಂದ್ರೇಂದ್ರಪ್ರಭೃತಯೋ ದಕ್ಷಾದ್ಯಾಶ್ಚ ತತಃ ಪರಂ ।
ದದೃಶುರ್ವೀರಭದ್ರಂ ತಂ ಜ್ವಲಂತಮಿವ ಪರ್ವತಂ ॥೪೭೦॥

ವಿಲೋಕ್ಯೈನಂ ವೀರಭದ್ರಂ ದಕ್ಷಮಾಹ ಹರಿಸ್ತದಾ ।
ಪ್ರಭಂಜನಹತೋತ್ಕ್ರಾಂತತಾಲವೃಂತಮಿವ ಸ್ಥಿತಂ ॥೪೭೧॥

॥ ವಿಷ್ಣುರುವಾಚ ॥

ಅಯಂ ರುದ್ರಗಣಶ್ರೇಷ್ಠೋ ವೀರಭದ್ರೋಽರಿಮರ್ದನಃ ।
ರುದ್ರಕ್ರೋಧಾಗ್ನಿಸಂಭೂತಃ ಸಮಾಯಾತೋಽಧ್ವರಾಂಗಣೇ॥೪೭೨॥

ಅಯಮಸ್ಮದ್ವಿನಾಶಾರ್ಥಮಾಗತೋಽಸ್ತಿ ನ ಸಂಶಯಃ ।
ಅಶಕ್ಯಮಸ್ಯ ನಾಸ್ತ್ಯೇವ ಕಿಮಪ್ಯತ್ರೈವ ವಸ್ತುತಃ ॥೪೭೩॥

ಪ್ರಜ್ವಾಲ್ಯಾಸ್ಮಾನಯಂ ಸರ್ವಾನಧುನಾದ್ಯೈವ ಸತ್ವರಂ ।
ತತಃ ಪ್ರಶಾಂತಹೃದಯೋ ಭವಿಷ್ಯತಿ ನ ಸಂಶಯಃ ॥೪೭೪॥

ವಿಷ್ಣು, ಇಂದ್ರ ಮೊದಲಾದ ದೇವತೆಗಳೂ, ದಕ್ಷನೇ ಮೊದಲಾದವರೂ ಸಹ ಉರಿಯುತ್ತಿರುವ ಪರ್ವತದಂತಿರುವ ಆ ವೀರಭದ್ರನನ್ನು ನೋಡಿ ಬೆರಗಾದರು. ॥೪೭೦॥

ಬಿರುಗಾಳಿಯಿಂದ ಹೊಡೆಯಲ್ಪಟ್ಟು ಅಲ್ಲಾಡುವ ಬೀಸಣಿಗೆಯಂತಿರುವ ಆ ದಕ್ಷಬ್ರಹ್ಮನನ್ನು ಕುರಿತು, ಆ ಭಯಂಕರ ರೂಪಿನ ವೀರಭದ್ರನನ್ನು ನೋಡಿದ ಮೇಲೆ ವಿಷ್ಣುವು ಹೀಗೆ ಹೇಳಿದನು. ॥೪೭೧॥

ಎಲೈ ದಕ್ಷನೇ, ಶತ್ರುಗಳನ್ನು ಧ್ವಂಸಮಾಡುವ ಸಾಮರ್ಥ್ಯವುಳ್ಳ ಈ ವೀರಭದ್ರನು ರುದ್ರನ ಗಣಗಳಲ್ಲೆಲ್ಲಾ ಶ್ರೇಷ್ಠನಾದವನು. ಈ ಮಹಾನುಭಾವನು ರುದ್ರದೇವನ ಕೋಪಾಗ್ನಿಯಿಂದ ಹುಟ್ಟಿದವನು. ಈಗ ಇವನು ಈ ಯಾಗಶಾಲೆಗೆ ಕೋಪದಿಂದ ಬಂದಿದ್ದಾನೆ. ॥೪೭೨॥

ಈ ವೀರಭದ್ರನು ನಮ್ಮನ್ನು ನಾಶಮಾಡುವುದಕ್ಕೋಸ್ಕರವೇ ಇಲ್ಲಿಗೆ ಬಂದಿದ್ದಾನೆ. ಇದರಲ್ಲಿ ಸಂದೇಹವೇ ಇಲ್ಲ. ಈ ಮಹಾಪ್ರಭಾವಶಾಲಿಗೆ ಅಸಾಧ್ಯವಾದುದು ಯಾವುದೂ ವಸ್ತುತಃ ಇಲ್ಲವೆಂದೇ ನಾನು ತಿಳಿದಿರುವೆನು. ಈತನು ನಮ್ಮೆಲ್ಲರನ್ನೂ ಈಗಲೇ ಜಾಗ್ರತೆ ಸುಟ್ಟು ಬೂದಿಮಾಡಿದ ನಂತರ ಸಂತುಷ್ಟನಾಗುವನೆಂಬುದರಲ್ಲಿ ಸಂದೇಹವೇ ಇಲ್ಲ. ॥೪೭೩-೪೭೪॥

ಶ್ರೀಮಹಾದೇವಶಪಥಂ ಸಮುಲ್ಲಂಘ್ಯ ಭ್ರಮಾನ್ಮಯಾ ।
ಯತಃ ಸ್ಥಿತಂ ತತಃ ಪ್ರಾಪ್ಯಂ ಮಯಾ ದುಃಖಂ ತ್ವಯಾ ಸಹ ॥೪೭೫॥

ಶಕ್ತಿರ್ಮಮ ತು ನಾಸ್ತ್ಯೇವ ದಕ್ಷಾದ್ಯೈತನ್ನಿವಾರಣೇ ।
ಶಪಥೋಲ್ಲಂಘನಾದದ್ಯ ಶಿವದ್ರೋಹೀ ಯತೋಽಸ್ಮ್ಯಹಂ ॥೪೭೬॥

ಕಾಲತ್ರಯೇಽಪಿ ನ ಯತೋ ಮಹೇಶದ್ರೋಹಿಣಾಂ ಸುಖಂ ।
ತತೋಽವಶ್ಯಂ ಮಯಾ ಪ್ರಾಪ್ಯಂ ದುಃಖಮದ್ಯ ತ್ವಯಾ ಸಹ ॥೪೭೭॥

ಸುದರ್ಶನಾಭಿದಂ ಚಕ್ರಮೇತಸ್ಮಿನ್ನ ಲಗಿಷ್ಯತಿ ।
ಶೈವಚಕ್ರಮಿದಂ ಯಸ್ಮಾದಶೈವಕ್ಷಯಕಾರಕಂ ॥೪೭೮॥

ವಿನಾಪಿ ವೀರಭದ್ರೇಣ ಮಾಮೇತಚ್ಚಕ್ರಮೈಶ್ವರಂ ।
ಹತ್ವಾ ಗಮಿಷ್ಯತ್ಯಧುನಾ ಸತ್ವರಂ ಹರಸಂನಿಧಿಂ ॥೪೭೯॥

ಆ ಮಹಾದೇವನ ಮೇಲೆ ದಧೀಚಿಮುನಿಯು ಹೂಡಿದ ಶಪಥವನ್ನು ಮೀರಿ ಭ್ರಾಂತಿಯಿಂದ ನಾನು ಈ ಯಾಗಮಂಟಪದಲ್ಲಿ ನಿಂತಿದ್ದರಿಂದ ಈಗ ನಾನೂ ನಿನ್ನೊಡನೆ ದುಃಖವನ್ನನುಭವಿಸಬೇಕಾಗಿ ಬಂದಿದೆ. ॥೪೭೫॥

ಅಯ್ಯ ದಕ್ಷನೇ, ಈಗ ಈತನನ್ನು ನಿವಾರಣೆಮಾಡಲು ನನಗೆ ನಿಜವಾಗಿಯೂ ಶಕ್ತಿಯಿಲ್ಲವು. ಆ ಮಹಾದೇವನ ಪ್ರತಿಜ್ಞೆಯನ್ನು ಮೀರಿರುವ ನಾನು ಈಗ ಆ ಶಿವನಿಗೆ ದ್ರೋಹಿಯಾಗಿರುವೆನು. ॥೪೭೬॥

ಆ ಪರಶಿವನಿಗೆ ದ್ರೋಹಮಾಡಿದವರಿಗೆ ಮೂರುಕಾಲಗಳಲ್ಲಿಯೂ (ವರ್ತಮಾನ ಭೂತ ಭವಿಷ್ಯತ್) ಸುಖವಿಲ್ಲದ್ದರಿಂದ ಈಗ ನಾನೂ ನಿನ್ನೊಡನೆ ಅವಶ್ಯವಾಗಿ ದುಃಖವನ್ನನುಭವಿಸಬೇಕಾಗಿದೆ. ॥೪೭೭॥

ಈ ನನ್ನ ಸುದರ್ಶನವೆಂಬ ಚಕ್ರವೂ ಈ ವೀರಭದ್ರನಲ್ಲಿ ಪ್ರವೇಶಿಸಿ, ತೊಂದರೆಮಾಡಲಾರದು. ಇದು ಆ ಪರಶಿವನ ಚಕ್ರವೇ ಆಗಿರುವುದು. ಇದು ಕೇವಲ ಶಿವಭಕ್ತರಲ್ಲದವರನ್ನು ಮಾತ್ರ ನಿಗ್ರಹಿಸಬಲ್ಲದು. ॥೪೭೮॥

ಒಂದುವೇಳೆ ವೀರಭದ್ರನು ಬರದಿದ್ದರೂ ಪರಮೇಶ್ವರನ ಈ ಚಕ್ರವು ನನ್ನನ್ನು ಈಗ ಕೊಂದು ಜಾಗ್ರತೆಯಾಗಿ ಆ ಪರಮೇಶ್ವರನ ಸನ್ನಿಧಾನಕ್ಕೆ ಹೊರಟು ಹೋಗುತ್ತಿದ್ದಿತು. ॥೪೭೯॥

ಶೈವಂ ಶಪಥಮುಲ್ಲಂಘ್ಯ ಸ್ಥಿತಂ ಮಾಂ ಚಕ್ರಮೀದೃಶಂ ।
ಅಸಂಹೃತ್ಯೈವ ಸಹಸಾ ಕೃಪಯೈವ ಸ್ಥಿತಂ ಪರಂ ॥೪೮೦॥

ಅತಃ ಪರಮಿದಂ ಚಕ್ರಂ ಮಯಿ ನ ಸ್ಥಾಸ್ಯತಿ ಧ್ರುವಂ ।
ಗಮಿಷ್ಯತ್ಯಧುನಾ ಶೀಘ್ರಂ ಜ್ವಾಲಾಮಾಲಾಸಮಾಕುಲಂ ॥೪೮೧॥

ವೀರಭದ್ರಃ ಪೂಜಿತೋಽಪಿ ಶೀಘ್ರಮಸ್ಮಾಭಿರಾದರಾತ್ ।
ಮಹಾಕ್ರೋಧಸಮಾಕ್ರಾಂತೋ ನಾಸ್ಮಾನ್ಸಂರಕ್ಷಯಿಷ್ಯತಿ ॥೪೮೨॥

ಅಕಾಂಡಂ ಪ್ರಲಯೋಽಸ್ಮಾಕಮಾಗತೋಽದ್ಯ ಹಿ ಹಾಹಹಾ ।
ಹಾಹಾ ಬತ ಬತೇದಾನೀಂ ನಾಶೋಽಸ್ಮಾಕಮುಪಸ್ಥಿತಃ ॥೪೮೩॥

ಶರಣ್ಯೋಽಸ್ಮಾಕಮಧುನಾ ನಾಸ್ತ್ಯೇವ ಹಿ ಜಗತ್ರಯೇ ।
ಶಂಕರದ್ರೋಹಿಣಾಂ ಲೋಕೇ ಕಃ ಶರಣ್ಯೋ ಭವಿಷ್ಯತಿ ॥೪೮೪॥

ಆ ಪರಶಿವನ ಮೇಲಿನ ಪ್ರತಿಜ್ಞೆಯನ್ನು ಮೀರಿ ಇಲ್ಲಿದ್ದ ನನ್ನನ್ನು, ಈ ಶಿವನ ಚಕ್ರವು ಸಂಹಾರಮಾಡದೇ ನನ್ನ ಮೇಲೆ ದಯೆಯಿಂದ ಇಲ್ಲಿಯವರೆಗೂ ಸುಮ್ಮನಿದ್ದಿತು. ||೪೮೦||

ಇನ್ನುಮುಂದೆ ಶಿವದ್ರೋಹಿಯಾದ ನನ್ನ ಸಮೀಪದಲ್ಲಿ ನಿಶ್ಚಯವಾಗಿಯೂ ಈ ಚಕ್ರವಿರದೆ, ಬೆಂಕಿಯ ಜ್ವಾಲೆಗಳ ಸಮೂಹದಿಂದ ವ್ಯಾಪ್ತವಾಗಿ ಹೊರಟು ಹೋಗುತ್ತದೆ. ||೪೮೧||

ಅತ್ಯಂತ ಕೋಪದಿಂದ ಕೂಡಿದ ಈ ವೀರಭದ್ರನನ್ನು ನಾವು ಜಾಗ್ರತೆ ಆದರದಿಂದ ಪೂಜೆಮಾಡಿದರೂ ಅವನು ನಮ್ಮನ್ನೆಂದಿಗೂ ಕಾಪಾಡುವುದಿಲ್ಲ. ||೪೮೨||

ಅಕಾಲದಲ್ಲಿ ನಮಗೆ ಈ ರೀತಿಯಾಗಿ ನಾಶವೊದಗಿತಲ್ಲ! ಅಯ್ಯೋ ಕೆಟ್ಟೆವು! ಅಯ್ಯೋ! ಇನ್ನೇನು ಮಾಡುವುದು? ವಿಪತ್ತೊದಗಿತಲ್ಲ! ಈಗ ಈ ಮೂರು ಲೋಕಗಳಲ್ಲಿಯೂ ನಮಗೆ ಯಾರೂ ರಕ್ಷಕರಿಲ್ಲವಲ್ಲ! ಅಯ್ಯ ದಕ್ಷನೇ, ಆ ಶಂಕರನಿಗೆ ದ್ರೋಹಮಾಡಿದವರಿಗೆ ಲೋಕದಲ್ಲಿ ಯಾರುತಾನೆ ರಕ್ಷಣೆ ಮಾಡಬಲ್ಲರು? ||೪೮೩-೪೮೪||

ನ ತು ನಾಶೋಽಪಿ ಸಂಪ್ರಾಪ್ಯೋಽಹ್ಯಸ್ಮಾಭಿರ್ಯಮಯಾತನಾ ।
ಸಾ ನೈವ ಶಕ್ಯತೇ ಸೋಢುಂ ಬಹುದುಃಖಪ್ರದಾಯಿನೀ ॥೪೮೫॥

ಶಿವದ್ರೋಹಿಣಮಾಲೋಕ್ಯ ದಷ್ಟದಂತೋ ಯಮಃ ಸ್ವಯಂ ।
ತಪ್ತತೈಲಕಟಾಹೇಷು ಪಾತಯಿಷ್ಯತ್ಯಸಂಶಯಂ ॥೪೮೬॥

ಮಾಮಿಂದ್ರಂ ವಾ ವಿಧಿಂ ವಾನ್ಯಂ ಶಿವದ್ರೋಹಪರಂ ಯಮಃ ।
ವಿಲೋಕ್ಯ ಸಹಸಾ ಕ್ರೂರಃ ಸ ಕೃಪಾಂ ನ ಕರಿಷ್ಯತಿ ॥೪೮೭॥

ಯಮಸ್ಯ ನ ಯತೋಽಸ್ಮಾಕಮಪೇಕ್ಷಾಽಸ್ಮಾನ್ತತೋ ಯಮಃ ।
ಪಾತಯಿಷ್ಯತಿ ಘೋರೇಷು ವಹ್ನಿಕುಂಡೇಷು ಸತ್ವರಂ ॥೪೮೮॥

ಆಜ್ಞಪ್ತಃ ಶ್ರೀಮಹೇಶೇನ ವಿಷ್ಣುರ್ಬ್ರಹ್ಮಾಸ್ತು ವಾಸವಃ ।
ಮದ್ದ್ರೋಹಪರಚಿತ್ತಶ್ಚೇತ್ತಮಗ್ನೌ ಪಾತಯೇತಿ ಸಃ ॥೪೮೯॥

ನಮಗೆ ಜಾಗ್ರತೆ ಮರಣವೂ ಉಂಟಾಗುವುದಿಲ್ಲ. ಕೇವಲ ಯಮಯಾತನೆಗಳನ್ನು ನಾವು ಅನುಭವಿಸಬೇಕಾಗಿದೆ. ಹೆಚ್ಚಾದ ದುಃಖವನ್ನು ಕೊಡುವ ಆ ಯಮಲೋಕದ ಯಾತನೆಗಳಾದರೋ ಸಹಿಸುವುದಕ್ಕೇ ಸಾಧ್ಯವಿಲ್ಲದಂತೆ ಅತಿ ಭಯಂಕರವಾಗಿರುವುವು. ॥೪೮೫॥

ಆ ಪರಶಿವನಿಗೆ ದ್ರೋಹಮಾಡಿದವರನ್ನು ನೋಡಿ ಆ ಯಮನು ತಾನು ಹಲ್ಲು ಕಡಿಯುತ್ತಾ ಚೆನ್ನಾಗಿ ಕಾದ ಎಣ್ಣೆಯ ಕೊಪ್ಪರಿಗೆಗಳಲ್ಲಿ ನಿಶ್ಚಯವಾಗಿಯೂ ಹಾಕಿಸುವನು. ॥೪೮೬॥

ನಾನು (ವಿಷ್ಣು), ಬ್ರಹ್ಮ, ಅಥವಾ ಬೇರೆ ಯಾರಾದರೂ ಶಿವದ್ರೋಹಿಗಳಾಗಲೀ, ಇವರಾರನ್ನೂ ಕ್ರೂರನಾದ ಆ ಯಮನು ನೋಡಿ, ಸ್ವಲ್ಪವೂ ದಯೆ ತೋರುವುದಿಲ್ಲ. ಯಮನಿಗೆ ನಮ್ಮ ಅಪೇಕ್ಷೆಯೇನೂ ಇಲ್ಲದಿರುವುದರಿಂದ ಆ ಯಮನು, ಘೋರವಾದ ಅಗ್ನಿಕುಂಡಗಳಲ್ಲಿ ನಮ್ಮನ್ನು ಜಾಗ್ರತೆ ತಳ್ಳುತ್ತಾನೆ. ॥೪೮೭-೪೮೮॥

ಮಹೇಶ್ವರನು, ಆ ಯಮನಿಗೆ ವಿಷ್ಣು, ಬ್ರಹ್ಮ, ಇಂದ್ರ ಇವರು ಯಾರೇ ಆಗಲೀ ನನ್ನಲ್ಲಿ ದ್ರೋಹವನ್ನಾಚರಿಸಿದರೆ ಅವರನ್ನು ಬೆಂಕಿಗೆ ಹಾಕಿ ಸುಟ್ಟುಬಿಡೆಂದು ಆಜ್ಞೆಮಾಡಿರುವನು. ॥೪೮೯॥

ಅತೋಽವಶ್ಯಂ ಯಮಃ ಕ್ರೂರಃ ಶಿವದ್ರೋಹಿಜನಾನಲಃ ।
ಅಸ್ಮಾನನಲಕುಂಡೇಷು ಪಾತಯಿಷ್ಯತ್ಯಸಂಶಯಂ ॥೪೯೦॥

ಯದ್ಯದ್ಯ ವೀರಭದ್ರೋಽಯಮಸ್ಮಾನ್ಶೂಲೇನ ಸತ್ವರಂ ।
ಪ್ರೋಥಯಿತ್ವಾ ವಿಪೋಥ್ಯೇತ ತದಾ ನ ಯಮಯಾತನಾ ॥೪೯೧॥

ಅಸ್ಮಾಕಮೀದೃಶಂ ಭಾಗ್ಯಂ ಕಥಂ ವಾ ಸಂಭವಿಷ್ಯತಿ ।
ಯತ್ತ್ರಿಶೂಲಪರಿಪ್ರೋತಾಸ್ತ್ಯಕ್ಷ್ಯಾಮೋಽಸೂನಿಹಾಧುನಾ ॥೪೯೨॥

ತ್ರಿಶೂಲಪ್ರೋಥಿತಾಃ ಪೂರ್ವಂ ಮುಕ್ತಾ ಜಾತಾಃ ಪುರಾದಯಃ ।
ಮುಕ್ತಾ ಜಾತಾಸ್ತದನ್ಯೇಽಪಿ ತ್ರಿಶೂಲೇನ ನಿಪಾತಿತಾಃ ॥೪೯೩॥

ಶೂಲದರ್ಶನಮಾತ್ರೇಣ ಮುಕ್ತಿರ್ಭವತಿ ವಸ್ತುತಃ ।
ತತ್ಸಂಯೋಗಾತ್ತದಾ ಮುಕ್ತಿರ್ಭವತೀತ್ಯತ್ರ ನಾದ್ಭುತಂ ॥೪೯೪॥

ಆದ್ದರಿಂದ ಅತಿ ಕ್ರೂರನಾದ ಆ ಯಮನು ಶಿವದ್ರೋಹಿಗಳಾದ ಜನರಿಗೆ ಅಗ್ನಿಪ್ರಾಯನಾಗಿರುವನು. ಅವನು ನಿಜವಾಗಿಯೂ ನಮ್ಮನ್ನು ಬೆಂಕಿಯ ಕುಂಡದಲ್ಲಿ ತಳ್ಳಿಯೇ ತಳ್ಳುವನು. ಇದರಲ್ಲಿ ಸ್ವಲ್ಪವೂ ಸಂದೇಹವೇ ಇಲ್ಲ. ॥೪೯೦॥

ಈ ವೀರಭದ್ರನೇನಾದರೂ ಈಗ ನಮ್ಮನ್ನು ತ್ರಿಶೂಲದಿಂದ ಕೂಡಲೇ ತಿವಿದು ಕೊಂದುಹಾಕಿದರೆ ಆಗ ನಾವು ಆ ಯಮಬಾಧೆಯನ್ನು ಅನುಭವಿಸಬೇಕಾಗಿಲ್ಲ. ಅಯ್ಯ ದಕ್ಷನೇ, ನಾವು ಆ ವೀರಭದ್ರನ ತ್ರಿಶೂಲದಿಂದ ತಿವಿಯಲ್ಪಟ್ಟು ಪ್ರಾಣವನ್ನು ಬಿಡುವಂತಹ ಭಾಗ್ಯವು ನಮಗೆಲ್ಲಿರುವುದು ? ॥೪೯೨॥

ಹಿಂದೆ ತ್ರಿಶೂಲಾಯುಧದಿಂದ ತಿವಿಯಲ್ಪಟ್ಟು ತ್ರಿಪುರರೇ ಮೊದಲಾದ ರಾಕ್ಷಸರು ಮುಕ್ತಿಹೊಂದಿರುವರು. ಇವರಲ್ಲದೇ ಇನ್ನೂ ಕೆಲವರು ತ್ರಿಶೂಲದಿಂದ ಕೆಡವಲ್ಪಟ್ಟು ಮೋಕ್ಷಪಡೆದಿರುವರು. ವಸ್ತುತಃ ಆ ಶೂಲಾಯುಧವನ್ನು ನೋಡಿದ ಮಾತ್ರದಿಂದಲೇ ಮುಕ್ತಿಯುಂಟಾಗುವುದು ಸಹಜವಾಗಿರುವಾಗ, ಆ ಶೂಲಾಯುಧದ ಸಂಬಂಧವೇರ್ಪಟ್ಟು ಅದರಿಂದಲೇ ಮೃತರಾಗುವವರಿಗೆ ಮೋಕ್ಷವುಂಟಾಗುವುದೆಂಬುದರಲ್ಲಿ ಆಶ್ಚರ್ಯವೇನು ! ॥೪೯೩-೯೪॥

ಗಂತುಮೇನಾಹಮುದ್ಯುಕ್ತಃ ಸರ್ವಥಾ ಶಪಥೋತ್ತರಂ ।
ತಥಾಽಪಿ ನ ಗತಂ ಶೀಘ್ರಂ ದುಷ್ಟಸಂಗಮಪಾಪತಃ ॥೪೯೫॥

ಅತ ಏವ ಹಿ ಸತ್ಸಂಗಃ ಕರ್ತವ್ಯಃ ಸರ್ವದಾ ಬುಧೈಃ ।
ಅಸತ್ಸಂಗಃ ಪ್ರಯತ್ನೇನ ಪರಿತ್ಯಾಜ್ಯೋ ಹಿತೈಷಿಭಿಃ ॥೪೯೬॥

ಯದ್ಯದ್ಯ ಕ್ರಿಯತೇಽಸ್ಮಾಭಿಃ ಪಲಾಯನಮಿತಸ್ತತಃ ।
ಅಸ್ಮಾನಾಕರ್ಷಕೈಃ ಶಸ್ತ್ರೈಃ ಸ ಸಮಾಕರ್ಷಯಿಷ್ಯತಿ ॥೪೯೭॥

ಸ್ವರ್ಗೇ ವಾ ಭುವಿ ಪಾತಾಲೇ ಯತ್ರ ಕುತ್ರಾಪಿ ವಾ ಯತಃ ।
ಶ್ರೀವೀರಭದ್ರಶಸ್ತ್ರಾಣಾಂ ಗಮನಂ ನ ಹಿ ದುರ್ಲಭಂ ॥೪೯೮॥

ಗಣಾ ವಸಂತಿ ಯಾವಂತಃ ಶ್ರೀರುದ್ರಸ್ಯ ತ್ರಿಶೂಲಿನಃ ।
ತಾವತಾಮಪಿ ಸರ್ವೇಷಾಂ ಶಕ್ತಿರೇತಾದೃಶೀ ಧ್ರುವಂ ॥೪೯೯॥

ಹಿಂದೆ ದಧೀಚಿಮುನಿಯು ಪ್ರತಿಜ್ಞೆಮಾಡಿದಮೇಲೆ ನಾನು ಈ ಯಾಗ ಮಂಟಪದಿಂದ ಹೊರಡಲು ಪ್ರಯತ್ನಿಸಿದೆನು. ಆದರೆ ದುಷ್ಟಜನಗಳ ಸಂಬಂಧ ದಿಂದುಂಟಾದ ಪಾಪದ ದೆಸೆಯಿಂದ ನನಗೆ ಜಾಗ್ರತೆಯಾಗಿ ಇಲ್ಲಿಂದ ಹೊರಡಲು ಸಾಧ್ಯವಾಗಲಿಲ್ಲ. ಆದ್ದರಿಂದಲೇ ಯಾವಾಗಲೂ ಸತ್ಪುರುಷರ ಸಹವಾಸವನ್ನೇ ಮಾಡಬೇಕು. ಹಿತವನ್ನಪೇಕ್ಷಿಸುವವರು ದುಷ್ಟರ ಸಹವಾಸವನ್ನು ಬಲವಂತದಿಂದ ಲಾದರೂ ಬಿಡಬೇಕೆಂದು ಪಂಡಿತರು ಹೇಳುತ್ತಿರುವರು. ॥೪೯೫-೪೯೬॥

ಒಂದುವೇಳೆ ನಾವು ಇಲ್ಲಿಂದ ಓಡಿಹೋಗುವುದಾದರೆ ಈ ಮಹಾನುಭಾವನು ನಮ್ಮನ್ನು ಆಕರ್ಷಣೆಮಾಡುವ ಅಸ್ತ್ರಮಂತ್ರಗಳಿಂದ ಎಳೆದುಹಾಕುತ್ತಾನೆ. ಸ್ವರ್ಗ, ಭೂಮಿ, ಪಾತಾಳ ಈ ಮೂರು ಲೋಕಗಳಲ್ಲಿ ಎಲ್ಲಿಯೂ ಶ್ರೀವೀರಭದ್ರನ ಶಸ್ತ್ರಗಳಿಗೆ ಪ್ರವೇಶವು ದುರ್ಲಭವಲ್ಲ. ॥೪೯೭-೪೯೮॥

ತ್ರಿಶೂಲಾಯುಧಧಾರಿಯಾದ ಆ ರುದ್ರದೇವನಿಗೆ ಎಷ್ಟುಮಂದಿ ಗಣಗಳಿರು ವುವೋ ಅವುಗಳೆಲ್ಲಕ್ಕೂ ಇದೇ ರೀತಿಯಾದ ಶಕ್ತಿಯಿರುವುದರಲ್ಲಿ ಸಂದೇಹವೇ ಇಲ್ಲ. ॥೪೯೯॥

ಶ್ರೀಕಾಲಭೈರವಃ ಕಾಶ್ಯಾಂ ನಖಾಗ್ರೇಣೈವ ಲೀಲಯಾ ।
ಪುರಾ ಶಿರಾಂಸಿ ಚಿಚ್ಛೇದ ಚತ್ವಾರಿ ಬ್ರಹ್ಮಣೋಽದ್ಭುತಂ ॥೫೦೦॥

ಏತಾದೃಶಗಣಾಃ ಸಂತಿ ಕೋಟಿಶೋ ಮಂಗಲಾಪತೇಃ ।
ತೇಷಾಮಜೇಯಂ ನಾಸ್ತ್ಯೇವ ತ್ರಿಷು ಲೋಕೇಷು ವಸ್ತುತಃ ॥೫೦೧॥

ಏವಮುಕ್ತ್ವಾ ಸ್ಥಿತೋ ವಿಷ್ಣುರತಿಮ್ಲಾನಮುಖಾಂಬುಜಃ ।
ವೀರಭದ್ರೋಽಪಿ ಸಂಪ್ರಾಪ ತದೇವಾಧ್ವರಮಂಟಪಂ ॥೫೦೨॥

ವೀರಭದ್ರಃ ಶೂಲಪಾಣಿರ್ನಾನಾಗಣಸಮನ್ವಿತಃ ।
ದದರ್ಶ ವಿಷ್ಣುಪ್ರಮುಖಾನ್ಯಾಗಮಂಡಪಸಂಸ್ಥಿತಾನ್ ॥೫೦೩॥

ತಾನ್ದೃಷ್ಟ್ವಾ ವೀರಭದ್ರೋಽಭೂದ್ಭ್ರುಕುಟೀಕೃತಲೋಚನಃ ।
ಕೃತಾಂತ ಇವ ಪಾಪಿಷ್ಠಾನ್ ಮೃಗೇಂದ್ರ ಇವ ವಾರಣಾನ್ ॥೫೦೪॥

ಹಿಂದೆ ಶ್ರೀಕಾಲಭೈರವನೆಂಬ ಶಿವನ ಗಣಶ್ರೇಷ್ಠನು, ಕಾಶೀಪಟ್ಟಣದಲ್ಲಿ ಎಲ್ಲರಿಗೂ ಆಶ್ಚರ್ಯವಾಗುವಂತೆ, ಲೀಲೆಯಿಂದ ಬ್ರಹ್ಮನ ನಾಲ್ಕು ತಲೆಗಳನ್ನೂ ತನ್ನ ಉಗುರಿನ ತುದಿಯಿಂದಲೇ ಚಿಗುಟಿಹಾಕಿದನು. ಇಂತಹ ಪರಾಕ್ರಮವುಳ್ಳ ಗಣಗಳು ಆ ಶಿವನಲ್ಲಿ ಕೋಟ್ಯಂತರವಿರುವುವು. ಮೂರು ಲೋಕಗಳಲ್ಲಿ ಎಲ್ಲಿಯೂ ಅವರಿಂದ ಜಯಿಸಲಸಾಧ್ಯವಾಗಿರುವುದು ಯಾವುದೂ ತೋರುವುದಿಲ್ಲ.'' ॥೫೦೦-೫೦೧॥

ಈ ರೀತಿಯಾಗಿ ಆ ಮಹಾವಿಷ್ಣುವು ದಕ್ಷನಿಗೆ ಹೇಳಿ ತಾನು ತುಂಬಾ ಖಿನ್ನವಾದ ಮುಖವುಳ್ಳವನಾದನು. ಅಷ್ಟರಲ್ಲಿಯೇ ವೀರಭದ್ರನೂ ದಕ್ಷನ ಆ ಯಾಗ ಮಂಟಪಕ್ಕೆ ಬಂದು ಸೇರಿದನು. ॥೫೦೨॥

ಶೂಲಾಯುಧವನ್ನು ಧರಿಸಿದ್ದ ಆ ವೀರಭದ್ರನು ಅನೇಕ ರುದ್ರಗಣಗಳಿಂದ ಕೂಡಿದವನಾಗಿ, ದಕ್ಷನ ಯಾಗಮಂಟಪದಲ್ಲಿದ್ದ ವಿಷ್ಣುವೇ ಮೊದಲಾದ ದೇವತೆಗಳನ್ನೆಲ್ಲಾ ನೋಡಿದನು. ॥೫೦೩॥

ಆ ವೀರಭದ್ರನು ಕೋಪದಿಂದ ಹುಬ್ಬುಗಂಟುಹಾಕಿಕೊಂಡು, ಕೆಂಗಣ್ಣುಳ್ಳವನಾಗಿ, ಯಮನು ಪಾಪಮಾಡಿದವರನ್ನೂ, ಸಿಂಹವು ಆನೆಗಳನ್ನೂ, ನೋಡುವಂತೆ ಆ ದೇವತೆಗಳನ್ನು ನೋಡಿದನು. ॥೫೦೪॥

ತತೋ ವಿಷ್ಣ್ವಾದಯಃ ಸರ್ವೇ ದ್ರುತಮುತ್ಥಾಯ ಸಾದರಂ ।
ಪ್ರಣಾಮಾನ್ಕರ್ತುಮುದ್ಯುಕ್ತಾಂಸ್ತದಾ ಪ್ರಾಹ ಹರಾತ್ಮಜಃ ॥೫೦೫॥

|| ವೀರಭದ್ರ ಉವಾಚ ||

ರೇ ರೇ ಹರೇ ಮಹಾದೇವಶಪಥೋಲ್ಲಂಘನಂ ತ್ವಯಾ ।
ಕಥಮದ್ಯ ಕೃತಂ ದುಷ್ಟ ಗರ್ವಃ ಕಿಮಭವತ್ತವ ॥೫೦೬॥

ತವ ಶ್ರೀರುದ್ರಶಪಥೋಲ್ಲಂಘನೇ ಶಕ್ತಿರಸ್ತಿ ಕಿಂ ।
ಕೋ ವಾ ತ್ವಮಸಿ ಕೋ ವಾ ತೇ ರಕ್ಷಕೋಽಸ್ತಿ ಜಗತ್ತ್ರಯೇ ॥೫೦೭॥

ವಕ್ಷೋ ವಿದಾರಯಿಷ್ಯಾಮಿ ತ್ರಿಶೂಲೇನ ಹರೇ ತವ ।
ಕಸ್ತವಾಸ್ತಿ ಸಮಾಯಾತು ರಕ್ಷಕೋಽದ್ಯ ಮಮಾಂತಿಕಂ ॥೫೦೮॥

ಪಾತಯಿಷ್ಯಾಮಿ ಭೂಪೃಷ್ಠೇ ಜ್ವಾಲಯಿಷ್ಯಾಮಿ ವಹ್ನಿನಾ ।
ದಗ್ಧಂ ಭವಂತಮಧುನಾ ಪೇಷಯಿಷ್ಯಾಮಿ ಸತ್ವರಂ ॥೫೦೯॥

ಆಗ ವಿಷ್ಣುವೇ ಮೊದಲಾದ ದೇವತೆಗಳೆಲ್ಲರೂ ಜಾಗ್ರತೆಯಾಗಿ ಎದ್ದು ಆದರದಿಂದ ನಮಸ್ಕಾರಮಾಡಲು ಪ್ರಯತ್ನಿಸುತ್ತಿರುವುದನ್ನು ನೋಡಿ, ಆ ಪರಮೇಶ್ವರನ ತನೂಭವನಾದ ವೀರಭದ್ರನು ಅವರನ್ನು ಕುರಿತು ಹೀಗೆ ನುಡಿದನು. ||೫೦೫||

ಎಲೈ ನೀಚನಾದ ವಿಷ್ಣುವೇ, ಆ ಮಹಾದೇವನ ಮೇಲಿಟ್ಟಿದ್ದ ಶಪಥವನ್ನು ನೀನು ಹೇಗೆಮೀರಿದೆ? ಓ ದುಷ್ಟನೇ, ನಿನಗೆ ಇಷ್ಟೊಂದು ಗರ್ವವುಂಟಾಯಿತೇ? ||೫೦೬||

ನಿನಗೆ ಆ ರುದ್ರನ ಪ್ರತಿಜ್ಞೆಯನ್ನು ಮೀರುವ ಶಕ್ತಿಯಿದೆಯೇ? ನೀನು ಯಾರು? ಈ ಮೂಲೋಕಗಳಲ್ಲಿ ನಿನ್ನನ್ನು ಕಾಪಾಡುವವರಾರು? ಏ ವಿಷ್ಣುವೇ, ಈ ತ್ರಿಶೂಲದಿಂದ ನಿನ್ನ ಎದೆಯನ್ನು ಈಗಲೇ ಸೀಳಿಹಾಕುತ್ತೇನೆ. ನಿನ್ನನ್ನು ಕಾಪಾಡಲು ನನ್ನ ಸಮೀಪಕ್ಕೆ ಯಾರು ಬರುತ್ತಾರೋ ನೋಡೋಣ! ||೫೦೭-೫೦೮||

ನಿನ್ನನ್ನು ಭೂಮಿಯಮೇಲೆ ಕೆಡವಿ, ಬೆಂಕಿಯಿಂದ ಮೊದಲು ಸುಟ್ಟುಹಾಕುತ್ತೇನೆ. ಅರ್ಧ ಸುಟ್ಟುಹೋದ ನಿನ್ನನ್ನು ಜಾಗ್ರತೆ ಅರೆದುಬಿಡುತ್ತೇನೆ. ||೫೦೯||

ರೇ ರೇ ಹರೇ ದುರಾಚಾರ ತ್ವಮೇವಂ ಕರ್ತುಮಿಚ್ಛಸಿ ।
ಶ್ರೀರುದ್ರದೇವಮಾಹಾತ್ಮ್ಯಂ ಕಿಂ ನ ಜಾನಾಸಿ ಶಾಶ್ವತಂ ॥೫೧೦॥

ಇತ್ಯುಕ್ತ್ವಾ ಶೂಲಮಾದಾಯ ವೀರಭದ್ರೋಽರುಣೇಕ್ಷಣಃ ।
ಹರಿಂ ವಿದಾರ್ಯ ಭೂಪೃಷ್ಠೇ ಪಾತಯಾಮಾಸ ಸತ್ವರಂ ॥೫೧೧॥

ತತೋ ದಕ್ಷಂ ಸಮಾಲೋಕ್ಯ ಕಶಾಭಿಃ ಕೋಟಿಶಸ್ತದಾ ।
ಸಂತಾಡ್ಯ ಪಾತಯಾಮಾಸ ವಿದಾರ್ಯಾಸ್ತ್ರೇಣ ತತ್ತನುಂ ॥೫೧೨॥

ತತೋ ವಿಧೀಂದ್ರಯಕ್ಷಾದೀನ್ವಿದಾರ್ಯ ಪೃಥಿವೀತಲೇ ।
ಪಾತಯಾಮಾಸ ಶೀಘ್ರೇಣ ಕ್ರೋಧಾಕ್ರಾಂತಾರುಣೇಕ್ಷಣಃ ॥೫೧೩॥

ವೀರಭದ್ರೋ ವಿದಾರ್ಯಾಪಿ ವಿಷ್ಣುಬ್ರಹ್ಮಪುರೋಗಮಾನ್ ।
ನಾಭೂಚ್ಛಾಂತೋ ಭವಕ್ರೋಧಃ ಫಣಿರಾಡಿವ ಮಂತ್ರತಃ ॥೫೧೪॥

ದಿಶೋ ವಿಲೋಕಯಾಮಾಸ ಕಃ ಕುತ್ರಾಸ್ತೀತ್ಯನುಕ್ಷಣಂ ।
ವೀರಭದ್ರೋ ಹತಾರಾತಿಃ ಕೇಸರೀವ ವನದ್ವಿಪಾನ್ ॥೫೧೫॥

ಎಲೈ ದುಷ್ಟಾಚಾರವುಳ್ಳ ವಿಷ್ಣುವೇ, ನೀನು ಹೀಗೆ ಮಾಡಲು ಪ್ರವರ್ತಿಸಿದೆಯೋ ? ಶಾಶ್ವತವಾದ ಆ ರುದ್ರದೇವನ ಮಹಿಮೆಯು ನಿನಗೆ ಗೊತ್ತೇ ಇಲ್ಲವೋ ?" ಎಂದು ಹೇಳಿ, ಕೋಪದಿಂದ ಕೆಂಪಾದ ಕಣ್ಣುಗಳುಳ್ಳವನಾಗಿ ಆ ವೀರಭದ್ರನು ವಿಷ್ಣುವನ್ನು ಸೀಳಿ ಕೂಡಲೇ ಭೂಮಿಯಮೇಲೆ ಬೀಳಿಸಿದನು. ॥೫೧೦-೫೧೧॥

ಅನಂತರ, ಅಲ್ಲಿಯೇ ಇದ್ದ ದಕ್ಷನನ್ನು ನೋಡಿ, ಅವನನ್ನು ಅನೇಕಬಾರಿ ಚಾವಟಿಗಳಿಂದ ಹೊಡೆದು ಕೆಡವಿ, ಬಾಣದಿಂದ ಅವನ ಶರೀರವನ್ನು ಸೀಳಿಹಾಕಿದನು. ಆಮೇಲೆ ಬ್ರಹ್ಮ, ಇಂದ್ರ, ಕುಬೇರ ಇವರೇ ಮೊದಲಾದವರನ್ನು ಸೀಳಿಹಾಕಿ ಅವರನ್ನು ಭೂಮಿಯ ಮೇಲೆ ಕೆಡವಿ, ಕೋಪದಿಂದ ಕೆಂಪಾದ ಕಣ್ಣುಗಳುಳ್ಳ ಆ ವೀರಭದ್ರನು ಮೊರೆಯುತ್ತಿದ್ದನು. ॥೫೧೨-೫೧೩॥

ವೀರಭದ್ರನು ವಿಷ್ಣು, ಬ್ರಹ್ಮ ಮೊದಲಾದವರನ್ನೆಲ್ಲಾ ಸೀಳಿಹಾಕಿದರೂ ಶಾಂತನಾಗಲಿಲ್ಲ. ಆ ಪರಶಿವನ ಕೋಪವು ಮಂತ್ರವಶದಿಂದ ಕೆದರಿದ ಕೋಪವುಳ್ಳ ಸರ್ಪರಾಜನಂತೆ ಶಾಂತವಾಗದೇ, ಯಾರು ಎಲ್ಲಿರುವರು, ಎಂದು ಕ್ಷಣ ಕ್ಷಣಕ್ಕೂ

ಬಭೌ ಹತ್ವಾ ಹರೀಂದ್ರಾದೀನ್ಸಪತ್ನೀಕಾನ್ಗಣಾನ್ವಿತಃ ।
ತ್ರಿಪುರಾರಿರಿವಾರಾಧ್ಯೋ ಹತ್ವಾ ತ್ರಿಪುರಕಾನನಂ ॥೫೧೬॥

ರೇಜೇ ತದಾ ವೀರಭದ್ರೋ ತ್ರಿಶೂಲಂ ಭ್ರಾಮಯನ್ಕರೇ ।
ಕ್ರೋಧಾರುಣಾಕ್ಷಃ ಸಂವೃತ್ತಃ ಪ್ರಜ್ವಲನ್ಪರ್ವತೋಪಮಃ ॥೫೧೭॥

ವೀರಭದ್ರಹತಾಸ್ತಸ್ಥುರ್ಭುವಿ ವಿಷ್ಣುಪುರೋಗಮಾಃ ।
ತೂರ್ಣಂ ವಜ್ರಹತಾಃ ಪೂರ್ವಂ ಪರ್ವತಾ ಇವ ಗರ್ವಿತಾಃ ॥೫೧೮॥

ಅನಾಯಾಸೇನ ಹತ್ವೈತಾನ್ವೀರಭದ್ರಸ್ತತೋಽಗ್ನಿನಾ ।
ಜ್ವಾಲಯಾಮಾಸ ವಿಷ್ಣ್ವಾದೀನ್ದೀಪ್ತಾಗ್ನಿಃ ಶಲಭಾ ಇವ ॥೫೧೯॥

ವೀರಭದ್ರಃ ಕ್ಷಣಾರ್ಧೇನ ದಗ್ಧ್ವಾ ವಿಷ್ಣುಪುರೋಗಮಾನ್ ।
ಅಟ್ಟಹಾಸಂ ತತಶ್ಚಕ್ರೇ ಪೂರಯನ್ನಗತಾಂ ಜಯಂ ॥೫೨೦॥

ದಿಕ್ಕುಗಳನ್ನೆಲ್ಲಾ ನೋಡತೊಡಗಿತು. ಹೀಗೆ ಶತ್ರುಗಳನ್ನು ಧ್ವಂಸಮಾಡಿದ ವೀರಭದ್ರನು, ಕಾಡಾನೆಗಳನ್ನೆಲ್ಲಾ ಕೊಂದುಹಾಕಿದ ಸಿಂಹದಂತೆ, ವಿಷ್ಣು ಬ್ರಹ್ಮಾದಿಗಳನ್ನೆಲ್ಲಾ ಅವರವರ ಪತ್ನಿಯರೊಡನೆ ಸಂಹಾರಮಾಡಿ, ತನ್ನ ಗಣಗಳೊಡಗೂಡಿ ಮೆರೆದನು. ॥೫೧೪-೫೧೫॥

ತ್ರಿಪುರಾಸುರಶತ್ರುವಾದ ಮಹೇಶ್ವರನಂತೆ ಪೂಜ್ಯನಾದ ಆ ವೀರಭದ್ರನು ಸಮಸ್ತ ಸುರರನ್ನು ಅವರ ಪಟ್ಟಣ, ಪರಿವಾರಗಳೊಡನೆ ಕೊಂದುಹಾಕಿದನು. ಕೈಯಲ್ಲಿ ವೇಗದಿಂದ ತ್ರಿಶೂಲವನ್ನು ತಿರುಗಿಸುತ್ತ ವಿರಾಜಿಸಿದನು. ಕೋಪದಿಂದ ಕೆಂಪಾದ ಕಣ್ಣುಗಳಿಂದ ಕೂಡಿದ ಅವನು ದೂರಕ್ಕೆ ಉರಿಯುತ್ತಿರುವ ಪರ್ವತದಂತೆ ಕಾಣುತ್ತಿದ್ದನು. ॥೫೧೬-೫೧೭॥

ಆ ವೀರಭದ್ರನಿಂದ ಕೊಲ್ಲಲ್ಪಟ್ಟ ವಿಷ್ಣುವೇ ಮೊದಲಾದವರೆಲ್ಲರೂ ಹಿಂದೆ (ಜಾಗ್ರತೆಯಾಗಿ) ಇಂದ್ರನ ವಜ್ರಾಯುಧದಿಂದ ಹೊಡೆಯಲ್ಪಟ್ಟ ಕೊಬ್ಬಿದ ಪರ್ವತಗಳಂತೆ ಭೂಮಿಯಮೇಲೆ ಕಾಣಿಸುತ್ತಿದ್ದರು. ಆ ವೀರಭದ್ರನು ಅನಾಯಾಸವಾಗಿ ವಿಷ್ಣ್ವಾದಿಗಳನ್ನೆಲ್ಲಾ ಕೊಂದು ಅನಂತರ ಅವರನ್ನು ಉರಿಯುವ ಬೆಂಕಿಯು ಶಲಭಗಳನ್ನು ಸುಡುವಂತೆ ಬೆಂಕಿಯಿಂದ ಸುಟ್ಟುಬಿಟ್ಟನು. ॥೫೧೮-೫೧೯॥

ಆ ವೀರಭದ್ರನು ಅರ್ಧಕ್ಷಣದಲ್ಲಿ ವಿಷ್ಣುವೇ ಮೊದಲಾದ ದೇವತೆಗಳನ್ನು

ಚಂಚರೀಕಸಮಾಕ್ರಾಂತಾ ತತೋ ನಂದನಸಂಭವಾ ।
ಪುಷ್ಪವೃಷ್ಟಿರಭೂದ್ಭೂಮ್ಯಾಂ ವೀರಭದ್ರೇ ಗಣಾನ್ವಿತೇ ॥೫೨೧॥

ವವುರ್ಗಂಧವಹಾಃ ಶೀತಾಃ ಸುಗಂಧಾಸ್ತದನಂತರಂ ।
ದೇವದುಂದುಭಯೋ ನೇದುಃ ಸ್ವಯಮೇವ ತತಃ ಪರಂ ॥೫೨೨॥

ದಿಶೋ ಬಭೂವುರ್ನಿರ್ಮಲಾ ಭಾನುಮಾನಪಿ ಸಂಬಭೌ ।
ಭೂತಾಃ ಪ್ರಶಾಂತಾಃ ಸರ್ವೇಽಪಿ ತತೋಽಭೂನ್ಮಂಗಲಂ ಭುವಿ॥೫೨೩॥

ವೀರಭದ್ರಃ ಪ್ರಚಲಿತಃ ಕೃತಕಾರ್ಯಸ್ತತಃ ಪರಂ ।
ವಿನಾಶಿತದೃಢಧ್ವಾಂತೋ ಭಾನುಮಾನಿವ ಸತ್ವರಂ ॥೫೨೪॥

ಉತ್ಫುಲ್ಲಪದ್ಮಪತ್ರಾಕ್ಷೋ ವೀರಭದ್ರೋ ಗಣಾನ್ವಿತಃ ।
ದದರ್ಶ ಪಾರ್ವತೀಕಾಂತಂ ನನಾಮ ಚ ಪುನಃ ಪುನಃ ॥೫೨೫॥

ಸುಟ್ಟು ಪ್ರಪಂಚಕ್ಕೆಲ್ಲಾ ತನ್ನ ವಿಜಯವನ್ನು ತೋರಿಸುತ್ತಾ ಅಟ್ಟಹಾಸದಿಂದ ಸಂಚರಿಸಿದನು. ॥೫೨೦॥

ನಂದನವನದಲ್ಲಿ ಬೆಳೆದಿರುವ ಹೂಗಿಡಗಳಿಂದ ದುಂಬಿಗಳೊಡಗೊಂಡ ಪುಷ್ಪವೃಷ್ಟಿಯು ಗಣಗಳೊಡನೆ ಭೂಮಿಯಲ್ಲಿ ನಿಂತಿದ್ದ ಆ ವೀರಭದ್ರನ ತಲೆಯ ಮೇಲೆ ಸುರಿಯಿತು. ॥೫೨೧॥

ಗಾಳಿಯು ಸುಗಂಧಭರಿತವಾಗಿಯೂ ತಂಪಾಗಿಯೂ ಬೀಸಿತು. ಆಮೇಲೆ ದೇವದುಂದುಭಿವಾದ್ಯಗಳು ತಾವಾಗಿಯೇ ಧ್ವನಿಮಾಡಿದುವು. ॥೫೨೨॥

ದಿಕ್ಕುಗಳೆಲ್ಲವೂ ನಿರ್ಮಲವಾದವು. ಸೂರ್ಯನೂ ಸಹ ಚೆನ್ನಾಗಿ ಪ್ರಕಾಶಿಸಿದನು. ಪಂಚಭೂತಗಳೆಲ್ಲವೂ ತಮ್ಮ ಕ್ರೌರ್ಯವನ್ನು ಬಿಟ್ಟು ಶಾಂತವಾದವು. ಭೂಮಿಯಲ್ಲೆಲ್ಲಾ ಅಲ್ಲಿಂದ ಮುಂದೆ ಮಂಗಳಧ್ವನಿಯೇ ಕೇಳಿಬರುತ್ತಿತ್ತು. ॥೫೨೩॥

ಆ ವೀರಭದ್ರನು ತಾನು ಬಂದ ಕೆಲಸವನ್ನು ಮುಗಿಸಿಕೊಂಡನಂತರ ಅಲ್ಲಿಂದ ಗಾಢವಾದ ಕತ್ತಲೆಯನ್ನು ಹೋಗಲಾಡಿಸಿದ ಸೂರ್ಯದೇವನಂತೆ ಜಾಗ್ರತೆಯಾಗಿ ಹೊರಟನು. ॥೫೨೪॥

ಚೆನ್ನಾಗಿ ಅರಳಿದ ತಾವರೆಯ ಎಸಳಿನಂತೆ ಕಣ್ಣುಗಳುಳ್ಳ ಆ ವೀರಭದ್ರನು ತನ್ನ ಗಣಗಳೊಡನೆ ಹೊರಟು ಕೈಲಾಸಪರ್ವತಕ್ಕೆ ಬಂದು ಅಲ್ಲಿ ಆ ಪಾರ್ವತೀರಮಣನನ್ನು ನೋಡಿ ಬಾರಿಬಾರಿಗೂ ಅವನಿಗೆ ನಮಸ್ಕಾರಮಾಡಿದನು. ॥೫೨೫॥

ಕೃತಕಾರ್ಯಂ ವೀರಭದ್ರಂ ದೃಷ್ಟ್ವಾ ಸಂತುಷ್ಟಮಾನಸಃ ।
ವೀರಂ ವೀರಗಣಾಧ್ಯಕ್ಷಂ ಚಕಾರ ಪರಮೇಶ್ವರಃ ॥೫೨೬॥

ತತೋ ಹಿಮಗಿರಿಂ ಪ್ರಾಂತೇ ಶಿವಪೂಜಾಪರಾಯಣಾನ್ ।
ದೃಷ್ಟ್ವಾ ಸ್ವಭಕ್ತಾನ್ಗೌರೀಶಸ್ತದ್ದೇಶಂ ಪ್ರಾಪ ಲೀಲಯಾ ॥೫೨೭॥

ತತಸ್ತತ್ಪೂಜಿತಃ ಶಂಭುಃ ಸ್ತುತಶ್ಚ ವಿವಿಧೈಃ ಸ್ತವೈಃ ।
ಸಂತುಷ್ಟೋಽಭೂನ್ಮಹಾದೇವಃ ಸಗಣೋ ಮಂಗಲಾನ್ವಿತಃ ॥೫೨೮॥

ತತಃ ಕಸ್ಮೈಚಿದೀಶಾನೋ ದದೌ ವಿಷ್ಣುತ್ವಮಾದರಾತ್ ।
ಸೃಷ್ಟ್ವಾ ಲಕ್ಷ್ಮೀಂ ತದಾ ತಸ್ಮೈ ದದೌ ಲಕ್ಷ್ಮೀಂ ಗುಣಾನ್ವಿತಾಂ ॥೫೨೯॥

ತತಃ ಕಸ್ಮೈಚಿದೀಶಾನೋ ಬ್ರಹ್ಮತ್ವಂ ಚ ತತೋ ದದೌ ।
ಸೃಷ್ಟ್ವಾ ಸರಸ್ವತೀಂ ತಸ್ಮೈ ದದಚ್ಚಾಂಬಾಮನೋಹರಃ ॥೫೩೦॥

ತಾನು ಹೇಳಿದ ಕೆಲಸವನ್ನು ಸಾಂಗವಾಗಿ ನಡೆಸಿಕೊಂಡು ಬಂದಿರುವ ಆ ವೀರಭದ್ರನನ್ನು ನೋಡಿ, ಅತ್ಯಂತ ಸಂತೋಷದಿಂದ ಪರಮೇಶ್ವರನು ಆ ವೀರನನ್ನು ತನ್ನ ವೀರರಾದ ಶಿವಗಣಗಳಿಗೆ ಅಧ್ಯಕ್ಷನನ್ನಾಗಿ ಮಾಡಿದನು. ॥೫೨೬॥

ಆಮೇಲೆ ಹಿಮಾಲಯಪರ್ವತದ ಪ್ರದೇಶಗಳಲ್ಲಿ ಶಿವಪೂಜಾಸಕ್ತರಾಗಿರುವ ತನ್ನ ಭಕ್ತರನ್ನು ನೋಡಿ, ಗೌರೀರಮಣನು ಕೈಲಾಸದಿಂದ ಹೊರಟು ಆ ಪ್ರದೇಶಕ್ಕೆ ಲೀಲೆಯಿಂದ ಹೋದನು. ॥೫೨೭॥

ಭಕ್ತವತ್ಸಲನಾದ ಶಂಭುವು ಅಲ್ಲಿ ತನ್ನ ಭಕ್ತರಿಂದ ಪೂಜೆಗೊಂಡು ನಾನಾವಿಧವಾದ ಸ್ತೋತ್ರಗಳಿಂದ ಹೊಗಳಲ್ಪಟ್ಟವನಾಗಿ, ಮಂಗಳಾದೇವಿಯೊಡನೆಯೂ ತನ್ನ ಗಣಗಳೊಡನೆಯೂ ಆನಂದಭರಿತನಾದನು. ॥೫೨೮॥

ಹೀಗೆ ಸಂತುಷ್ಟನಾದ ಆ ಮಹಾದೇವನು, ಆದರದಿಂದ ತನ್ನ ಒಬ್ಬ ಭಕ್ತನಿಗೆ ವಿಷ್ಣುಪದವಿಯನ್ನೂ, ಮತ್ತೊಬ್ಬನಿಗೆ ಬ್ರಹ್ಮಪದವಿಯನ್ನೂ ಕೊಟ್ಟು ಅವರಿಗೆ ಕ್ರಮವಾಗಿ ಲಕ್ಷ್ಮಿ ಮತ್ತು ಸರಸ್ವತೀದೇವಿಯರನ್ನು ಬೇರೆಯಾಗಿ ಸೃಷ್ಟಿಮಾಡಿ ಕೊಟ್ಟನು. ॥೫೨೯-೫೩೦॥

ದದಾವೀಶತ್ವಮೇಕಸ್ಮೈ ಗೌರೀಂ ಸೃಷ್ಟ್ವಾ ತತಃ ಪರಂ ।
ದದೌ ಕಸ್ಮೈಚಿದಿಂದ್ರತ್ವಂ ಶಚೀಂ ಸೃಷ್ಟ್ವಾ ತತಃ ಪರಂ ॥೫೩೧॥

ತಸ್ಮೈ ಶಚೀಂ ದದೌ ತಸ್ಮೈ ಸ್ವರ್ಗಲೋಕಂ ಚ ಶಂಕರಃ ।
ಗಂಧರ್ವಾದೀಂಸ್ತತಃ ಶಂಭುರ್ಯಥಾಪೂರ್ವಮಕಲ್ಪಯತ್ ॥೫೩೨॥

ತತಃ ಶಿವಾನ್ವಿತೋ ರೇಮೇ ಸ್ವತಂತ್ರಃ ಪರಮೇಶ್ವರಃ ।
ಅತ ಏವ ಯದಾ ಭ್ರಾಂತಾ ಗಣಯಂತಿ ನ ಶಂಕರಂ ॥೫೩೩॥

ತದಾ ನಶ್ಯಂತಿ ವಿಷ್ಣ್ವಾದ್ಯಾಃ ರುದ್ರರೌದ್ರಾಸ್ತ್ರವಹ್ನಿನಾ ।
ಕಾಮಃ ಕೃತಶಿವಾವಜ್ಞಃ ಪಪಾತ ನರಕೇ ಪುರಾ ॥೫೩೪॥

ಅತೋಽವಜ್ಞಾಂ ಮಹಾದೇವೇ ನ ಕುರ್ವಂತಿ ಹಿತೈಷಿಣಃ ।
ಮದನೇನ ಮುದಾ ಪೂರ್ವಂ ಇತರಾಮರತುಲ್ಯತಾಂ ॥೫೩೫॥

ಆಮೇಲೆ ಆ ಅಂಬಿಕಾರಮಣನಾದ ಮಹಾದೇವನು ಮತ್ತೊಬ್ಬ ತನ್ನ ಭಕ್ತನಿಗೆ ಈಶ್ವರಪದವಿಯನ್ನು ಕೊಟ್ಟು ಅವನಿಗೆ ಹೊಸದಾಗಿ ಗೌರಿಯೊಬ್ಬಳನ್ನು ಸೃಷ್ಟಿಮಾಡಿಕೊಟ್ಟನು. ಹಾಗೆಯೇ ಇನ್ನೊಬ್ಬನಿಗೆ ಇಂದ್ರಪದವಿಯನ್ನೂ, ಹೊಸದಾಗಿ ನಿರ್ಮಿಸಿದ ಶಚೀದೇವಿಯನ್ನೂ ಕೊಟ್ಟು ಸ್ವರ್ಗಲೋಕಾಧಿಪತ್ಯವನ್ನೂ ಅವನಿಗೆ ವಹಿಸಿದನು. ॥೫೩೧॥

ಆಮೇಲೆ ಶಂಭುವು ಗಂಧರ್ವರೇ ಮೊದಲಾದವರನ್ನೆಲ್ಲಾ ಮೊದಲಿದ್ದಂತೆಯೇ ಸೃಷ್ಟಿಮಾಡಿದನು. ಹೀಗೆ ವೀರಭದ್ರನಿಂದ ಸಂಹರಿಸಲ್ಪಟ್ಟಿದ್ದ ದೇವತೆಗಳೇ ಮೊದಲಾದವರನ್ನೆಲ್ಲಾ ನಿರ್ಮಿಸಿದಮೇಲೆ ಸರ್ವಸ್ವತಂತ್ರನಾದ ಆ ಪರಮೇಶ್ವರನು ಮಂಗಳಾಂಗಿಯಾದ ಗಿರಿಜೆಯೊಡನೆ ಸ್ವೇಚ್ಛೆಯಾಗಿ ವಿಹರಿಸಿದನು. ಆದ್ದರಿಂದ ವಿಷ್ಣುವೇ ಮೊದಲಾದವರೆಲ್ಲರೂ ಹೀಗೆ ಭ್ರಾಂತರಾಗಿ ಆ ಲೋಕಶಂಕರನನ್ನು ಗಣನೆ ಮಾಡದೇ ಗರ್ವಿಷ್ಠರಾದಾಗ, ಈ ರೀತಿ ರುದ್ರನ ಭಯಂಕರವಾದ ಅಸ್ತ್ರಗಳ ಬೆಂಕಿಗೆ ತುತ್ತಾಗಿ ನಾಶವಾಗುವರು. ॥೫೩೨-೫೩೩॥

ಹಿಂದೆ ಮನ್ಮಥನು ಆ ಪರಶಿವನನ್ನು ತಿರಸ್ಕರಿಸಿ ನರಕದಲ್ಲಿ ಬಿದ್ದನಾದ್ದರಿಂದ ಹಿತವನ್ನು ಬಯಸುವವರು ಆ ಮಹಾದೇವನಲ್ಲಿ ಎಂದಿಗೂ ತಿರಸ್ಕಾರಭಾವನೆಯನ್ನಿಡುವುದಿಲ್ಲ. ॥೫೩೪॥

ವಿಧಾಯ ಶಂಕರೇ ಮೋಹಾತ್ಸ್ವನಾಶಃ ಪರಿಕಲ್ಪಿತಃ ।
ಇಂದ್ರಃ ಪೂರ್ವಂ ಸಮಾಹೂಯ ವರುಣಾದೀನುವಾಚ ಹ ॥೫೩೬॥

॥ ಇಂದ್ರ ಉವಾಚ ॥

ಕಾಶಕ್ತಿರಸ್ತಿ ಭವತಾಂ ತಾಂ ವದಂತ್ವಿತಿ ಸಾದರಂ ।
ಇತಿ ತದ್ವಚನಂ ಶ್ರುತ್ವಾ ಸ್ವಸ್ವಶಕ್ತಿಂ ಯಥಾರ್ಥತಃ ॥೫೩೭॥

ಸರ್ವೇ ನಿವೇದಯಾಮಾಸುರಿಂದ್ರಾಯೇಂದ್ರಹಿತಾರ್ಥಿನಃ ।
ತತೋ ಮನ್ಮಥಮಾಲೋಕ್ಯ ಸ್ವಸಭಾಮಧ್ಯವರ್ತಿನಂ ॥೫೩೮॥

ತವ ಕಾ ಶಕ್ತಿರಸ್ತೀತಿ ದೇವೇಂದ್ರಃ ಪ್ರಾಹ ಮನ್ಮಥಂ ।
ಶಚೀಪತೇ ಮದೀಯಾನಾಮಸ್ತ್ರಾಣಾಂ ಕಾಮಗಾಗತಿಃ ॥೫೩೯॥

ಮಚ್ಛಸ್ತ್ರಾಣಾಂ ಗತಿಃ ಕ್ವಾಪಿ ನೈವ ಪ್ರತಿಹತಾ ಧ್ರುವಂ ।
ಮಯಾ ಮದೀಯಶಸ್ತ್ರೇಣ ಮುನಯೋಽಪಿ ವಶೀಕೃತಾಃ ॥೫೪೦॥

ಹಿಂದೆ ಅಜ್ಞಾನದಿಂದ ಮನ್ಮಥನು, ಆ ಮಹಾದೇವನನ್ನು ಇತರ ಸಾಮಾನ್ಯ ದೇವತೆಗಳಿಗೆ ಸಮಾನನೆಂಬುದಾಗಿ ತಿಳಿದು ತಾನೇ ತನ್ನ ನಾಶಕ್ಕೆ ಗುರಿಯಾದನು. ಒಂದು ಸಂದರ್ಭದಲ್ಲಿ ದೇವೇಂದ್ರನು ವರುಣನೇ ಮೊದಲಾದವರನ್ನು ಕರೆಸಿ ಹೀಗೆ ನುಡಿದನು. ॥೫೩೫-೫೩೬॥

ಇಂದ್ರನು ವರುಣನೇ ಮೊದಲಾದ ದೇವತೆಗಳನ್ನು ಕುರಿತು, ನಿಮಗೆ ಇರುವ ಸಾಮರ್ಥ್ಯವೆಷ್ಟು ತಿಳಿಸಿರಿ, ಎಂದು ಆದರದಿಂದ ಕೇಳಲು ಆಗ ಇಂದ್ರನ ಹಿತವನ್ನು ಬಯಸುವ ಅವರೆಲ್ಲರೂ ದೇವೇಂದ್ರನ ಮಾತನ್ನು ಕೇಳಿ ತಮ್ಮ ತಮ್ಮ ನಿಜವಾದ ಶಕ್ತಿಯನ್ನು ಸರಿಯಾಗಿ ತಿಳಿಯಪಡಿಸಿದರು. ॥೫೩೭॥

ಅನಂತರ ದೇವೇಂದ್ರನು ಹಿಂದಿನಂತೆಯೇ ತನ್ನ ಸಭೆಯ ಮಧ್ಯದಲ್ಲಿರುವ ಮನ್ಮಥನನ್ನು ನೋಡಿ, ಎಲೈ ಮನ್ಮಥನೇ, ನಿನ್ನ ಶಕ್ತಿಯ ಪರಿಮಿತಿಯೆಷ್ಟೆಂದು ಪ್ರಶ್ನೆಮಾಡಿದನು. ॥೫೩೮॥

ಶಚೀದೇವಿಯ ಪತಿಯಾದ ದೇವೇಂದ್ರನೇ, ನನ್ನ ಅಸ್ತ್ರಗಳು ಸ್ವಚ್ಛಂದಚಾರಿಗಳು. ನಿಜವಾಗಿಯೂ ನನ್ನ ಶಸ್ತ್ರಗಳಿಗೆ ಎಲ್ಲಿಯೂ ತಡೆಯೇ ಇಲ್ಲವು. ನಾನು ಮತ್ತು ನನ್ನ ಶಸ್ತ್ರಗಳೂ ಸಹ ಅಧೀನವಾಗಿರುವರು. ॥೫೩೯-೫೪೦॥

ವಶೀಕೃತಾ ಮಯಾ ಸಿದ್ಧಾ ಮದೀಯೈಃ ಶಸ್ತ್ರಪಂಜರೈಃ ।
ಕುಸುಮಾನ್ಯೇವ ಶಸ್ತ್ರಾಣಿ ಮೃದುಲಾನಿ ತಥಾಪಿ ತೈಃ ॥೫೪೧॥

ಲೋಕತ್ರಯಜಯಂ ಕೃತ್ವಾ ವಸಾಮ್ಯಹಮಹರ್ನಿಶಂ ॥೫೪೨॥

ಪ್ರಯುಕ್ತಾನಿ ಮಹಾಸ್ತ್ರಾಣಿ ಶಿವಾನ್ಯೇಷ್ವಖಿಲೇಷ್ವಪಿ ।
ಯತೋ ಮದೀಯಶಸ್ತ್ರಾಣಾಂ ಲಕ್ಷ್ಯಭೂತಮಿದಂ ಜಗತ್ ॥೫೪೩॥

ನ ಪ್ರಯುಕ್ತಂ ಮಯಾ ಶಂಭೌ ಶಸ್ತ್ರಮಿಂದ್ರ ಕದಾಚನ ।
ಶಕ್ಯಂ ಪ್ರಯೋಕ್ತುಂ ಶಸ್ತ್ರಾಣಿ ಶಿವಾನ್ಯೇಷ್ವಿವ ಶಂಕರೇ ॥೫೪೪॥

ಇತ್ಯುಕ್ತಂ ತದ್ವಚಃ ಶ್ರುತ್ವಾ ಶಚೀಪತಿರುವಾಚ ತಂ ।
ಶೃಣು ಮದ್ವಚನಂ ಕಾಮ ಸಾವಧಾನಂ ಯದುಚ್ಯತೇ ॥೫೪೫॥

ಸಿದ್ಧಪುರುಷರೂ ಸಹ ನನ್ನ ಬಾಣಪರಂಪರೆಗಳಿಗೆ ವಶರಾಗಿರುವರು. ಮೃದುವಾದ ಹೂಗಳೇ ನನ್ನ ಬಾಣಗಳಾದರೂ ನಾನು ಅವುಗಳಿಂದಲೇ ಈ ಮೂಲೋಕವನ್ನೂ ಜಯಿಸಿ, ಹಗಲೂ ರಾತ್ರಿ ವಿಜಯಹೊಂದುತ್ತಾ ವಾಸಮಾಡುತ್ತಿರುವೆನು. ॥೫೪೧-೫೪೨॥

ಆ ಪರಶಿವನೊಬ್ಬನನ್ನು ಬಿಟ್ಟು ಉಳಿದವರೆಲ್ಲರ ಮೇಲೂ ನನ್ನ ಮಹಾಸ್ತ್ರಗಳು ಪ್ರಯೋಗಿಸಲ್ಪಟ್ಟಿವೆ. ಈ ಪ್ರಪಂಚವೆಲ್ಲವೂ ನನ್ನ ಬಾಣಗಳಿಗೆ ಲಕ್ಷ್ಯವಾಗಿದೆ. ದೇವೇಂದ್ರನೆ, ಆದರೆ ಯಾವಾಗಲೂ ಈ ನನ್ನ ಬಾಣಗಳನ್ನು ಆ ಪರಶಿವನ ಮೇಲೆ ಮಾತ್ರ ಪ್ರಯೋಗಿಸಿಲ್ಲ. ಅಯ್ಯ ದೇವೇಂದ್ರನೇ, ಅನ್ಯರಂತೆ ಆ ಶಿವನಮೇಲೆ ಬೇಕಾದರೂ ನಾನು ಹೆದರದೆ ಬಾಣಪ್ರಯೋಗಮಾಡಬಲ್ಲೆನು" ಎಂದು ಮನ್ಮಥನು ದೇವೇಂದ್ರನಿಗೆ ಹೇಳಿದನು. ॥೫೪೩-೫೪೪॥

ಮನ್ಮಥನ ಈ ರೀತಿಯಾದ ನುಡಿಗಳನ್ನು ಕೇಳಿ, ಶಚೀಪತಿಯು, ಎಲೈ ಕಾಮನೇ, ನಾನು ಹೇಳುವ ಮಾತನ್ನು ಸಾವಧಾನವಾಗಿ ಲಾಲಿಸೆಂದು ಹೀಗೆ ನುಡಿದನು. ॥೫೪೫॥

|| ಇಂದ್ರ ಉವಾಚ ||

ಅವತೀರ್ಣೋಽಸ್ತಿ ಭೂಲೋಕೇ ಪ್ರಬಲಸ್ತಾರಕಾಸುರಃ ।
ತೇನೋಪದ್ರಾವಿತಾಃ ಸರ್ವೇ ಸುರಾ ಮತ್ಪ್ರಮುಖಾಃ ಸದಾ ॥೫೪೬॥

ಸಂಭುಕ್ತೋ ತಾರಕೋ ನಿತ್ಯಂ ಯಜ್ಞಭಾಗಾನ್ಯಥೇಚ್ಛಯಾ ।
ಅತ್ರಾಗತ್ಯ ಸ್ವರ್ಗಲೋಕೇ ಪೀಡಾಮಪಿ ಕರೋತಿ ಸಃ ॥೫೪೭॥

ಸ ಮಾಂ ನ ಗಣಯತ್ಯೇವ ವಿಷ್ಣುಮಪ್ಯತಿದುರ್ಜನಃ ।
ವಿಧಿಮಪ್ಯಮರಾನನ್ಯಾನಪಿ ಸರ್ವಾತ್ಮನಾ ಬಲೀ ॥೫೪೮॥

ಸ ಚಕಾರ ಪುರಾಯುದ್ಧಂ ವಿಷ್ಣುನಾ ಸಹ ವೀರ್ಯವಾನ್ ।
ಯುದ್ಧೇ ಪರಾಜಿತೋ ವಿಷ್ಣುಸ್ತೇನೈವಾಮಿತತೇಜಸಾ ॥೫೪೯॥

ತಸ್ಯ ಹುಂಕೃತಿಮಾತ್ರೇಣ ಚೂರ್ಣೋ ಭವತಿ ಪರ್ವತಃ ।
ವಿದಾರಿತಾ ಭವತ್ಯೇವ ಪೃಥಿವೀ ಚ ಸಕಾನನಾ ॥೫೫೦॥

ಅಯ್ಯ ಮನ್ಮಥನೇ, ಪ್ರಬಲಪರಾಕ್ರಮಿಯಾದ ತಾರಕಾಸುರನು ಭೂಲೋಕದಲ್ಲಿ ಅವತರಿಸಿ, ನನ್ನನ್ನೂ ಇತರ ದೇವತೆಗಳನ್ನೂ ಯಾವಾಗಲೂ ತೊಂದರೆ ಪಡಿಸುತ್ತಿರುವನು. ಆ ತಾರಕಾಸುರನು ಸ್ವೇಚ್ಛೆಯಿಂದ ಪ್ರತಿನಿತ್ಯವೂ ನಮಗೆ ಮಾನವರು ಕೊಡುತ್ತಿದ್ದ ಹವಿರ್ಭಾಗಗಳನ್ನೆಲ್ಲಾ ತಿಂದು ತೇಗುತ್ತಿರುವನು. ಹೀಗೆ ಮಾಡುತ್ತಿರುವುದಲ್ಲದೇ ಈ ಸ್ವರ್ಗಲೋಕಕ್ಕೂ ಬಂದು ಇಲ್ಲಿಯೂ ನಮ್ಮನ್ನು ಪೀಡಿಸುತ್ತಿರುವನು. ||೫೪೭||

ಅತ್ಯಂತ ಬಲಶಾಲಿಯೂ ಅತಿ ದುಷ್ಟನೂ ಆದ ಆ ತಾರಕಾಸುರನು, ವಿಷ್ಣುವನ್ನೂ, ಬ್ರಹ್ಮನೇ ಮೊದಲಾದ ದೇವತೆಗಳನ್ನೂ ಯಾವ ರೀತಿಯಿಂದಲೂ ಗಣನೆ ಮಾಡದೇ ಕೊಬ್ಬಿ ಮೆರೆಯುತ್ತಿರುವನು. ಪ್ರಬಲ ಪರಾಕ್ರಮಿಯಾದ ಆ ರಾಕ್ಷಸನು ಮೊದಲು ವಿಷ್ಣುವಿನೊಡನೆ ಯುದ್ಧಮಾಡಿದನು. ಆಗ ಅಪರಿಮಿತವಾದ ತೇಜಸ್ಸುಳ್ಳ ಆ ರಾಕ್ಷಸನಿಂದ ಯುದ್ಧದಲ್ಲಿ ವಿಷ್ಣುವೇ ಸೋತುಹೋದನು. ||೫೪೮-೫೪೯||

ಅವನ ಹುಂಕಾರ ಮಾತ್ರದಿಂದಲೇ ಪರ್ವತಗಳೂ, ಕಾಡುಗಳ ಸಮೇತವಾದ ಭೂಮಿಯೂ ಒಡೆದು ಪುಡಿಪುಡಿಯಾಗಿ ಹೋಗುತ್ತವೆ. ಅವನ ಕೋಪದ ನಿಟ್ಟುಸಿರು

ತತ್ಕ್ರೋಧಶ್ವಾಸಮಾತ್ರೇಣ ಮಹಾಪರ್ವತಸನ್ನಿಭಾಃ ।
ಕೋಟಿಶಃ ಪ್ರಬಲಾಃ ಸದ್ಯೋ ಭವಂತ್ಯಸುರಪುಂಗವಾಃ ॥೫೫೧॥

ತಸ್ಯ ಸಂಹಾರಕಃ ಕೋಽಪಿ ನಾಸ್ತ್ಯಸ್ಮಾಸು ತತಃ ಸದಾ ।
ಅಸ್ಮಾಭಿಃ ಪ್ರಾಪ್ಯತೇ ದುಃಖಂ ತತ್ಕೃತೋದ್ಯೋಗಸಂಭವಂ॥೫೫೨॥

ಏತದರ್ಥಂ ತು ಗುರುಣಾ ಬ್ರಹ್ಮಲೋಕೇ ಗತಂ ಪುರಾ ।
ಮಯಾ ನಿವೇದಿತಂ ದುಃಖಂ ಬ್ರಹ್ಮಣೇ ಕಾಮ ವೇದಿತಂ ॥೫೫೩॥

ತದಾಽತಿಖಿನ್ನವದನಂ ಮಾಂ ದೃಷ್ಟ್ವಂ ಸಗುರುಂ ವಿಧಿಃ ।
ಪ್ರಾಹ ಮಾಂ ವಿಧಿವದ್ಧ್ಯಾತ್ವಾ ಬಹುಕಾಲಂ ಪ್ರಯತ್ನತಃ ॥೫೫೪॥

॥ ಬ್ರಹ್ಮೋವಾಚ ॥

ತಾರಕಾಸುರಸಂಹರ್ತಾ ರುದ್ರೋ ರೌದ್ರೋಽಥವಾ ತಯೋಃ ।
ಯತಸ್ತದ್ಧನನೇ ಶಕ್ತಿರ್ಯತಸ್ತಾವಮಿತೌಜಸೌ ॥೫೫೫॥

ನಿಂದ ದೊಡ್ಡ ದೊಡ್ಡ ಪರ್ವತಗಳಿಗೆ ಸಮಾನವಾದ ಕೋಟ್ಯಂತರ ರಾಕ್ಷಸಶ್ರೇಷ್ಠರು ಕೂಡಲೇ ಪ್ರಬಲರಾಗಿ ಹುಟ್ಟುವರು. ॥೫೫೦-೫೫೧॥

ನಮ್ಮಲ್ಲಿ ಆ ತಾರಕಾಸುರನನ್ನು ಕೊಲ್ಲುವ ಸಾಮರ್ಥ್ಯವುಳ್ಳವನಾರೂ ಇಲ್ಲದಿರುವುದರಿಂದ ನಮಗೆ ಯಾವಾಗಲೂ ಅವನ ಸಂಬಂಧದಿಂದ ಅತಿ ದುಃಖ ವುಂಟಾಗುತ್ತಿರುವುದು. ॥೫೫೨॥

ಈ ವಿಷಯಕ್ಕೋಸ್ಕರವೇ ನಾನು ಹಿಂದೆ ಬೃಹಸ್ಪತ್ಯಾಚಾರ್ಯರೊಡನೆ ಬ್ರಹ್ಮ ಲೋಕಕ್ಕೆ ಹೋಗಿ ನಮ್ಮ ಕಷ್ಟಸಮಾಚಾರವನ್ನೆಲ್ಲಾ ಆ ಬ್ರಹ್ಮದೇವನಿಗೆ ಅರಿಕೆ ಮಾಡಿದೆನು. ಆಯ್ಯ ಮನ್ಮಥನೇ, ಆಗ ಆ ಬ್ರಹ್ಮದೇವನು ತುಂಬಾ ಖಿನ್ನಮುಖ ವುಳ್ಳವನಾಗಿ ಗುರುವಿನೊಡನೆ ನಿಂತಿರುವ ನನ್ನನ್ನು ನೋಡಿ ಬ್ರಹ್ಮದೇವನು ವಿಧಿಪೂರ್ವಕವಾಗಿ ಬಹಳ ಹೊತ್ತು ಚೆನ್ನಾಗಿ ಯೋಚನೆಮಾಡಿ ನನ್ನನ್ನು ಕುರಿತು ಹೀಗೆ ನುಡಿದನು. ॥೫೫೩-೫೫೪॥

" ರುದ್ರ ಅಥವಾ ಅವನ ಮಗ, ಇವರಿಬ್ಬರಲ್ಲೊಬ್ಬರು ಆ ತಾರಕಾಸುರನನ್ನು ಸಂಹಾರಮಾಡಬಲ್ಲರು. ಅವರಿಬ್ಬರೂ ಅಪರಿಮಿತವಾದ ಪರಾಕ್ರಮವುಳ್ಳವರಾದುದ

ರುದ್ರರೌದ್ರಸಮೋ ನಾಸ್ತಿ ಸುರೇಷ್ವನ್ಯೇಷು ವಾ ತತಃ ।
ತಾರಕೋ ರುದ್ರರೌದ್ರಾನ್ಯತರೇಣೈವ ಮರಿಷ್ಯತಿ ॥೫೫೬॥

ತಾರಕಾಸುರಸಂಹರ್ತಾ ವಿಷ್ಣುಸ್ತು ನ ಭವಿಷ್ಯತಿ ।
ವಿಷ್ಣುನಾ ಹ್ಯಲ್ಪವೀರ್ಯೇಣ ಕಾರ್ಯಂ ತದ್ಧನನೇ ಕಥಂ ॥೫೫೭॥

ಶ್ರೀರುದ್ರಶಕ್ತಿಕೋಟ್ಯಂಶೋಽಪ್ಯುಪೇಂದ್ರೇ ನ ಯತಸ್ತತಃ ।
ತಸ್ಯ ತದ್ಧನನೇ ಶಕ್ತಿರ್ನ ಭವಿಷ್ಯತಿ ವಸ್ತುತಃ ॥೫೫೮॥

ಸ್ವತಂತ್ರಃ ಶ್ರೀಮಹಾರುದ್ರಸ್ತಸ್ಯ ರುದ್ರಸ್ಯ ವಸ್ತುತಃ ।
ಕರ್ತವ್ಯಂ ನಾಸ್ತಿ ಕುತ್ರಾಪಿ ನಿತ್ಯಾನಂದೋ ಯತಃ ಪ್ರಭುಃ ॥೫೫೯॥

ತದಿಚ್ಛಾಸ್ಮದದೃಷ್ಟೇನ ಯದಿ ಸಂಚಲಿತಾ ಭವೇತ್ ।
ತದಾ ಕರಿಷ್ಯತ್ಯಸ್ಮಾಕಂ ಕಾರ್ಯಂ ಸ ಗಿರಿಜಾಪತಿಃ ॥೫೬೦॥

ರಿಂದ ಆ ತಾರಕಾಸುರನನ್ನು ಕೊಲ್ಲುವ ಸಾಮರ್ಥ್ಯವು ಅವರಿಗೆ ಮಾತ್ರವಿರುವುದು. ಸಕಲ ದೇವತೆಗಳಲ್ಲಿ ಶ್ರೀರುದ್ರ ಮತ್ತು ಆವನ ಮಗ ಇವರಿಗೆ ಸರಿಸಮಾನರಾರೂ ಇಲ್ಲ. ಈ ದುಷ್ಟನಾದ ತಾರಕನು ಇವರಿಬ್ಬರಲ್ಲೊಬ್ಬನಿಂದಲೇ ನಿಜವಾಗಿಯೂ ಮರಣಹೊಂದುತ್ತಾನೆ. ||೫೫೫-೫೫೬||

ವಿಷ್ಣುವು ಆ ತಾರಕಾಸುರನನ್ನು ಸಂಹಾರಮಾಡಲಾರನು. ಅಲ್ಪ ಪರಾಕ್ರಮಿಯಾದ ಈ ವಿಷ್ಣುವು ಪ್ರಬಲಪರಾಕ್ರಮಿಯಾದ ಆ ತಾರಕಾಸುರನನ್ನು ಕೊಲ್ಲುವುದಕ್ಕೆ ಹೇಗೆ ಸಾಧ್ಯವಾದೀತು? ಆ ರುದ್ರದೇವನ ಕೋಟ್ಯಂಶದಲ್ಲಿ ಒಂದಂಶ ಶಕ್ತಿಯೂ ವಿಷ್ಣುವಿನಲ್ಲಿ ಇಲ್ಲವಾದ್ದರಿಂದ ಆ ತಾರಕನನ್ನು ಕೊಲ್ಲಲು ಅವನಿಗೆ ವಸ್ತುತಃ ಸಾಧ್ಯವೇ ಇಲ್ಲ. ||೫೫೭-೫೫೮||

ಮಹಾರುದ್ರದೇವನು ಸ್ವತಂತ್ರನು, ವಸ್ತುತಃ ಆ ದೇವನು ಮಾಡಬೇಕಾದುದೇನೂ ಇಲ್ಲವು. ಆ ಪ್ರಭುವು ನಿತ್ಯಾನಂದಸ್ವರೂಪನು. ಆ ಮಹಾದೇವನಿಗೆ ನಮ್ಮ ಅದೃಷ್ಟವಿಶೇಷದಿಂದ ತಾರಕವಧೆಯಲ್ಲಿ ಅಪೇಕ್ಷೆಯುಂಟಾದರೆ ಸಾಕು. ಆ ಗಿರಿಜಾರಮಣನು ನಮ್ಮ ಕೆಲಸವನ್ನು ಕೂಡಲೇ ಮಾಡಿಕೊಡುವನು. ||೫೫೯-೫೬೦||

ತಾರಕಾಸುರಸಂಹರ್ತಾ ನ ರೌದ್ರೋ ಯಚ್ಚ ಕಶ್ಚನ ।
ತತ್ಸಂಹರ್ತಾ ಷಣ್ಮುಖಾದನ್ಯೋ ರೌದ್ರೋಽಪಿ ನ ಭವಿಷ್ಯತಿ ॥೫೬೧॥

ತಥಾ ಚ ಷಣ್ಮುಖೋತ್ಪತ್ತಿರ್ಭವಿಷ್ಯತಿ ಯಥಾ ತಥಾ ।
ಪ್ರಯತ್ನಶ್ಚಿಂತನೀಯೋಽಸ್ತಿ ಸರ್ವಥಾ ಸರ್ವಸಾಧನೈಃ ॥೫೬೨॥

ಷಣ್ಮುಖೋ ರುದ್ರವೀರ್ಯೇಣ ಭವಿಷ್ಯತಿ ಯದಾ ತದಾ ।
ಸ ಸಂಹರ್ತಾ ತಾರಕಸ್ಯ ಭವಿಷ್ಯತ್ಯೇವ ಸರ್ವಥಾ ॥೫೬೩॥

ಅಯಮರ್ಥೋ ಮಯಾ ಜ್ಞಾತೋ ಧ್ಯಾನೇನಾದ್ಯ ಮಯಾ ತತಃ ।
ವಿಶ್ವಾಸೋ ಮಯಿ ಕರ್ತವ್ಯೋ ನಾನ್ಯಥಾ ಮದ್ವಚೋ ಧ್ರುವಂ ॥೫೬೪॥

ಶಿವಯೋಃ ಸಂಗಮೇನೈವ ಶಿವವೀರ್ಯಸಮುದ್ಭವಃ ।
ಭವಿಷ್ಯತಿ ಮಹಾವೀರಃ ಷಣ್ಮುಖಸ್ತಾರಕಾಶನಿಃ ॥೫೬೫॥

ಶಿವಯೋಃ ಸಂಗಮಃ ಶೀಘ್ರಂ ಭವೇದ್ಯದಿ ತದಾ ತತಃ ।
ತಾರಕಾಸುರಸಂಹರ್ತಾ ಜಾತಸ್ತಂ ನಾಶಯಿಷ್ಯತಿ ॥೫೬೬॥

ಆ ತಾರಕಾಸುರನನ್ನು ಸಂಹಾರಮಾಡಲು ಮಹಾ ರುದ್ರನ ಮಕ್ಕಳಲ್ಲಿ ಷಣ್ಮುಖಸ್ವಾಮಿಯೊಬ್ಬನೇ ಹೊರತು, ಬೇರೆ ಯಾರಿಂದಲೂ ಸಾಧ್ಯವಾಗಲಾರದು. ಅಯ್ಯಾ ದೇವೇಂದ್ರನೇ, ಆದ್ದರಿಂದ ಈಗ ನೀನು ಎಲ್ಲಾ ಸಾಧನಗಳನ್ನೂ ನಡೆಸಿ, ಆ ಷಣ್ಮುಖನು ಹುಟ್ಟುವಂತೆ ಪ್ರಯತ್ನಮಾಡಬೇಕಾಗಿದೆ. ॥೫೬೧-೫೬೨॥

ಶ್ರೀರುದ್ರದೇವನ ವೀರ್ಯದಿಂದ ಷಣ್ಮುಖಸ್ವಾಮಿಯು ಹುಟ್ಟಿದಾಗ ಆ ತಾರಕಾಸುರನ ಸಂಹಾರವಾಗುವುದು. ಆ ಷಣ್ಮುಖನೇ ತಾರಕನನ್ನು ಸಂಹಾರಮಾಡುತ್ತಾನೆ. ಎಲೈ ಇಂದ್ರನೇ, ನಾನು ಪ್ರಯತ್ನಪಟ್ಟು ಇಷ್ಟು ಹೊತ್ತು ಆಲೋಚಿಸಿ ಈ ಸಮಾಚಾರವನ್ನು ತಿಳಿದು ನಿನಗೆ ಹೇಳಿರುವೆನು. ನನ್ನ ಮಾತಿನಲ್ಲಿ ನಂಬಿಕೆಯಿಡು. ಎಂದಿಗೂ ನನ್ನ ಮಾತು ಹುಸಿಯಾಗದೆಂದು ತಿಳಿಯುವನಾಗು. ॥೫೬೩-೫೬೪॥

ಶಿವ ಪಾರ್ವತಿಯರ ಪರಸ್ಪರ ಸಮಾಗಮದಿಂದಲೇ ಆ ಶಿವನ ವೀರ್ಯವು ಪ್ರಕಾಶವಾಗಬೇಕು. ಆಗಲೇ ಅವನ ವೀರ್ಯದಿಂದ ತಾರಕನೆಂಬ ರಾಕ್ಷಸನಿಗೆ ವಜ್ರಾಯುಧಕ್ಕೆ ಸಮಾನನಾದ ಮಹಾವೀರ ಷಣ್ಮುಖಸ್ವಾಮಿಯು ಹುಟ್ಟುತ್ತಾನೆ. ಎಲೈ ದೇವೇಂದ್ರನೇ, ಆದ್ದರಿಂದ ಆದಷ್ಟು ಜಾಗ್ರತೆ ಆ ಪಾರ್ವತೀಪರಮೇಶ್ವರರಿಗೆ ಸಮಾಗ

ಇತಿ ತದ್ವಚನಂ ಶ್ರುತ್ವಾ ಬ್ರಹ್ಮಣಾ ಪ್ರೇಷಿತೋಽಧುನಾ ।
ಸಮಾಗತೋಽಸ್ಮಿ ಕಾಮಾತಸ್ತತ್ಕಾರ್ಯಂ ಕುರು ಸಾದರಂ ॥೫೬೭॥

ಇತಿ ತದ್ವಚನಂ ಶ್ರುತ್ವಾ ಮನ್ಮಥೋ ಮದಮೋಹಿತಃ ।
ಪ್ರಾಹ ಪ್ರಗಲ್ಭವಚನಂ ಸ್ವವಿನಾಶೈಕಸಾಧನಂ ॥೫೬೮॥

॥ ಮನ್ಮಥ ಉವಾಚ ॥

ಮದೀಯಪುಷ್ಪಶಸ್ತ್ರಾಣಿ ಯೋಗಿನಾಮಪಿ ಮಾನಸಂ ।
ಮೋಹಯಿಷ್ಯಂತ್ಯತಸ್ತಾವನ್ಮೋಹಯಿಷ್ಯಂತಿ ಶಂಕರಂ ॥೫೬೯॥

ಯಥಾ ಮದೀಯಶಸ್ತ್ರೇಣ ಮೋಹಿತಾ ಭವದಾದಯಃ ।
ಭವಿಷ್ಯತಿ ತಥೇಶೋಽಪಿ ಭವಂತ ಇವ ಮೋಹಿತಃ ॥೫೭೦॥

ಮವಾದರೆ ಆಗ ಆ ತಾರಕಾಸುರನನ್ನು ಸಂಹಾರಮಾಡುವ ವೀರನು ಹುಟ್ಟಿ, ಅವನನ್ನು ನಾಶಮಾಡುತ್ತಾನೆ'' ಹೀಗೆಂದು ಬ್ರಹ್ಮದೇವನು ನನಗೆ ಹೇಳಿದನು. ॥೫೬೫-೫೬೬॥

ಹೀಗೆ ಆ ಮಾತುಗಳನ್ನು ಕೇಳಿ ಆ ಬ್ರಹ್ಮದೇವನ ಸಮೀಪದಿಂದ ನಾನು ಇಲ್ಲಿಗೆ ಬಂದಿರುವೆನು. ಅಯ್ಯ ಮನ್ಮಥನೇ, ಆದ್ದರಿಂದ ನೀನು ಈ ಕಾರ್ಯವನ್ನು ಆದರದಿಂದ ನಡೆಸಿಕೊಡುವನಾಗು ಎಂದು ಇಂದ್ರನು ಮನ್ಮಥನನ್ನು ಪ್ರಾರ್ಥಿಸಿದನು. ॥೫೬೭॥

ಆ ಇಂದ್ರನ ಮಾತುಗಳನ್ನು ಕೇಳಿ ಮನ್ಮಥನು ಮದದಿಂದ ಕೊಬ್ಬಿದವನಾಗಿ, ತನ್ನ ನಾಶಕ್ಕೇ ಕಾರಣವಾದ ಕೆಲವು ಪ್ರೌಢವಚನಗಳನ್ನು ಈರೀತಿ ಇಂದ್ರನಲ್ಲಿ ಹೇಳಿಕೊಂಡನು. ॥೫೬೮॥

" ನನ್ನ ಈ ಹೂಬಾಣಗಳು ಯೋಗಿಗಳ ಮನಸ್ಸನ್ನು ಸಹ ಕಲಕಿ ಅವರನ್ನು ಮೋಹಗೊಳಿಸುತ್ತವೆಯಾದುದರಿಂದ ಆ ಶಂಕರನನ್ನೂ ಮೋಹಗೊಳಿಸುವುವು. ನನ್ನ ಬಾಣಗಳಿಂದ ನೀವೆಲ್ಲರೂ ಮೋಹಗೊಂಡಂತೆಯೇ ಆ ಜಗದೀಶ್ವರನಾದ ಶಿವನೂ ಮೋಹಿತನಾಗುವನು. ಇಂದ್ರನೇ, ಈ ವಿಷಯದಲ್ಲಿ ಹೆದರಬೇಡ. ॥೫೬೯-೫೭೦॥

ಭವತು ಶ್ರೀಮಹಾದೇವೋ ಮಸ್ತುತಃ ಸುರಪುಂಗವಃ ।
ಮದಸ್ತ್ರಲಕ್ಷ್ಯಭಾವೇನ ಭವದ್ಭಿಃ ಸ ಸಮೋ ಧ್ರುವಂ ॥೫೭೧॥

ಇತಿ ತದ್ವಚನಂ ಶ್ರುತ್ವಾ ಸಂತೋಷ್ಯ ಕುಸುಮಾಯುಧಂ ।
ಬಾಣಪ್ರಯೋಗಂ ಗೌರೀಶೇ ಕುರುಷ್ವೇತ್ಯಾಹ ಸಾದರಂ ॥೫೭೨॥

ಇತಿ ತದ್ವಚನಂ ಶ್ರುತ್ವಾ ಮನ್ಮಥಃ ಪರಮೇಶ್ವರೇ ।
ಬಾಣಂ ಪ್ರಯೋಕ್ತುಮುದ್ಯೋಗಂ ಚಕಾರ ಭ್ರಾಂತಮಾನಸಃ॥೫೭೩॥

ತತಃ ಸಮಾಗತಃ ಶೀಘ್ರಂ ಜ್ವಾಲಾಮಾಲಾಸಮಾಕುಲಃ ।
ಫಾಲಾಕ್ಷಫಾಲಸಂಭೂತಶ್ಚಿತ್ರಭಾನುರ್ಭಯಂಕರಃ ॥೫೭೪॥

ಸ ಪಾವಕಃ ಸಮಾಗತ್ಯ ಜಜ್ವಾಲ ಕುಸುಮಾಯುಧಂ ।
ಭಸ್ಮಾವಶೇಷಂ ಕೃತ್ವೈವ ಪ್ರಶಾಂತಸ್ತದನಂತರಂ ॥೫೭೫॥

ಆ ಮಹಾದೇವನು ನಿಜವಾಗಿಯೂ ದೇವತೋತ್ತಮನೇನೋ ಹೌದು. ಆದರೆ ನನ್ನ ಬಾಣಕ್ಕೆ ಗುರಿಯಾಗುವ ವಿಷಯದಲ್ಲಿ ಅವನೂ ನಿಮ್ಮಗಳಿಗೆ ಸರಿ ಸಮಾನನೇ ಆಗಿರುವನೆಂದು ತಿಳಿಯಿರಿ." ॥೫೭೧॥

ಈರೀತಿಯಾಗಿ ನುಡಿದ ಮನ್ಮಥನ ಮಾತುಗಳನ್ನು ಕೇಳಿ, ಆ ದೇವೇಂದ್ರನು ಪುಷ್ಪಬಾಣನಾದ ಮನ್ಮಥನನ್ನು ಸಂತೋಷಪಡಿಸಿ, ಆ ಗೌರೀರಮಣನಲ್ಲಿ ಬಾಣ ಪ್ರಯೋಗವನ್ನು ಮಾಡೆಂದು ಆದರದಿಂದ ಅವನಲ್ಲಿ ಮತ್ತೂ ಹೇಳಿಕೊಂಡನು. ॥೫೭೨॥

ಆ ಮನ್ಮಥನು ದೇವೇಂದ್ರನ ಮಾತುಗಳನ್ನು ಕೇಳಿ, ಭ್ರಾಂತಚಿತ್ತನೆನಿಸಿ, ಪರಮೇಶ್ವರನಲ್ಲಿ ಬಾಣಪ್ರಯೋಗಮಾಡಲುದ್ಯುಕ್ತನಾದನು. ॥೫೭೩॥

ಆ ಮನ್ಮಥನು ಮಹೇಶ್ವರನಮೇಲೆ ಉದ್ಧತನಾಗಿ ಬಾಣಪ್ರಯೋಗಮಾಡಲು ಕೂಡಲೇ ಮಹಾದೇವನ ಹಣೆಗಣ್ಣಿನಿಂದ ಭಯಂಕರವಾದ ಅಗ್ನಿಯು ಜ್ವಾಲೆಗಳ ಸಮೂಹವನ್ನೇ ಕಾರುತ್ತಾ ಜಾಗ್ರತೆಯಾಗಿ ಹೊರಹೊರಟು, ಆ ಕುಸುಮ ಬಾಣನಾದ ಮನ್ಮಥನನ್ನು ಸುಟ್ಟು ಬೂದಿಮಾಡಿದ ನಂತರ ತಾನಾಗಿ ಶಾಂತವಾಯಿತು. ॥೫೭೪-೫೭೫॥

ವಿನಾ ತ್ವದಾಜ್ಞಾಮಗ್ನಿಶ್ಚ ದಗ್ಧುಂ ನೈವ ಕ್ಷಮೋ ಧ್ರುವಂ ।
ಕ್ವ ಶಕ್ತಿರ್ದಹನೇ ವಹ್ನೇಸ್ತೃಣಾನಾಮಪಿ ಚಾಲನೇ ॥೪೨೫॥

ನ ತಸ್ಯ ಶಕ್ತಿರಸ್ತ್ಯೇವ ವಿನಾಜ್ಞಾಂ ತವ ಶಂಕರ ।
ಭೀತಸ್ತ್ವತ್ತೋಽಯಮಗ್ನಿಶ್ಚ ಪವನಶ್ಚ ತಥಾ ರವಿಃ ॥೪೨೬॥

ಇಂದುರ್ಯಮೋ ವಸುಶ್ಚಾಪಿ ತಿಷ್ಠತೀಂದ್ರೋ ನ ಸಂಶಯಃ ।
ತತೋ ನಿಯಮ್ಯಾಃ ಸರ್ವೇಽಪಿ ದೇವಾಸ್ತವ ಮಹೇಶ್ವರ ॥೪೨೭॥

ತಥೈವಾಹಂ ನಿಯಮ್ಯಸ್ತೇ ನಾನಿಯಮ್ಯೋಽಸ್ತಿ ಸರ್ವಥಾ ।
ಪ್ರಣತೋಽಸ್ಮಿ ಮಹಾದೇವ ಭೂಯೋಽಪಿ ಪ್ರಣತೋಽಸ್ಮ್ಯಹಂ ॥೪೨೮॥

ಪ್ರೇಷಯಸ್ವೇಷ್ಟಸಿದ್ಧ್ಯರ್ಥಂ ಮಮಾದ್ಯ ಹರ ಸತ್ವರಂ ।
ಸ್ಪಂದೋಽಪಿ ಜಾಯತೇ ಶಂಭೋ ದಕ್ಷಿಣಸ್ಯ ಭುಜಸ್ಯ ಮೇ ॥೪೨೯॥

ನಿನ್ನ ಅಪ್ಪಣೆಯಿಲ್ಲದೇ ಬೆಂಕಿಗೂ ನಿಜವಾಗಿ ಸುಡುವ ಸಾಮರ್ಥ್ಯವಿಲ್ಲ. ಸುಡುವ ಶಕ್ತಿಯಿರಲಿ, ಬೆಂಕಿಗೆ ಒಂದು ಹುಲ್ಲುಕಡ್ಡಿಯನ್ನೂ ನಿನ್ನ ಅನುಗ್ರಹ ವಿಲ್ಲದೇ ಅಲ್ಲಾಡಿಸಲು ಸಾಧ್ಯವಿಲ್ಲ. ||೪೨೫||

ಶಂಕರನೇ! ನಿನ್ನ ಅಪ್ಪಣೆಯಿಲ್ಲದೇ ಯಾರಿಗೂ ಯಾವ ಶಕ್ತಿಯೂ ಇಲ್ಲ. ಈ ಅಗ್ನಿ, ವಾಯು, ಸೂರ್ಯ, ಚಂದ್ರ, ಯಮ, ವಸುಗಳು, ಇವರೆಲ್ಲರೂ ನಿನಗೆ ಭಯಪಡುತ್ತಿರುವರು. ಮಹೇಶ್ವರ! ಆ ದೇವೇಂದ್ರನೂ ನಿನಗೆ ಹೆದರಿ ನಿನ್ನ ಮುಂದೆ ನಿಲ್ಲಲಾರದೇ ಇರುವನು. ದೇವ! ಎಲ್ಲರೂ ನಿನ್ನಿಂದ ನಿಯಮಿಸಲ್ಪಡುವ ರಾಗಿರುವರು. ||೪೨೭||

ನಾನೂ ನಿನ್ನ ನಿಯಮಕ್ಕೆ ಒಳಪಟ್ಟಿರುವೆನು. ದೇವ! ಹೆಚ್ಚೇನು! ಒಟ್ಟಿನಲ್ಲಿ ನಿನ್ನ ನಿಯಮಕ್ಕೆ ಒಳಪಡದಿರುವವರು ಯಾರೂ ಇಲ್ಲವೆಂದೇ ತಿಳಿದಿರು ವೆನು. ಮಹಾದೇವ! ನಿನಗೆ ಪದೇ ಪದೇ ನಮಸ್ಕಾರಮಾಡುವೆನು. ಪರಮೇಶ್ವರ! ನಿನ್ನ ಮನಸ್ಸಿನಲ್ಲಿರುವ ಕೆಲಸವು ಸಿದ್ಧಿಸುವುದಕ್ಕೋಸ್ಕರ, ನನಗೆ ಜಾಗ್ರತೆ ಅಪ್ಪಣೆ ಕೊಟ್ಟು ಕಳುಹಿಸು. ದೇವ! ನನ್ನ ಬಲಭುಜವು ಬೇರೆ ಹಾರುತ್ತಿರುವುದು ||೪೨೮-೪೨೯||

ಭವಿಷ್ಯತ್ಯದ್ಯ ವಿಜಯೋ ಮಾಮತಃ ಪ್ರೇಷಯ ಪ್ರಭೋ ।
ಸ್ಪಂದೋ ದಕ್ಷಿಣನೇತ್ರಸ್ಯಾಪ್ಯಧುನಾ ಜಾಯತೇ ಮಮ ॥೪೩೦॥

ಭವಿಷ್ಯತ್ಯದ್ಯ ವಿಜಯೋ ಮಾಮತಃ ಪ್ರೇಷಯ ಪ್ರಭೋ ।
ಹರೋತ್ಸಾಹವಿಶೇಷೋಽಪಿ ಜಾಯತೇ ಮಮ ಕಶ್ಚನ ॥೪೩೧॥

ಭವಿಷ್ಯತ್ಯದ್ಯ ವಿಜಯೋ ಮಾಮತಃ ಪ್ರೇಷಯ ಪ್ರಭೋ
ಶಿವ ತ್ವತ್ಪಾದಕಮಲಸಂಸಕ್ತಾಮಲಚೇತಸಃ ।
ಮಮ ಪ್ರತಿಪದೇ ಭಾವಿ ಶುಭಸಂತಾನಸಂತತಿಃ ॥೪೩೨॥

ತಸ್ಯೈವ ವಿಜಯೋ ಭಾವಿ ತಸ್ಯೈವ ಶುಭಮನ್ವಹಂ ।
ತಸ್ಯ ಭಕ್ತಿರ್ದೃಢಾ ಶಂಭೋ ತ್ವಯಿ ಶೋಭನಸಂಶ್ರಯೇ ॥೪೩೩॥

ಇತ್ಯುಕ್ತಂ ತದ್ವಚಃ ಶ್ರುತ್ವಾ ಸಂತುಷ್ಟೋ ಮಂಗಲಾಪತಿಃ ।
ವೀರಭದ್ರ ಜಯಸ್ವೇತಿ ಪ್ರಾಹಾಶೀರ್ವಾದಪೂರ್ವಕಂ ॥೪೩೪॥

ಪ್ರಭುವೇ! ನನ್ನ ಬಲಗಣ್ಣು ಅದುರುತ್ತಿರುವುದು. ಆದ್ದರಿಂದ ನನಗೆ ವಿಜಯುವಾಗುವುದೆಂದು ತೋರುವುದು. ದೇವ! ನನಗೆ ಅಪ್ಪಣೆಕೊಡು. ಪರಮೇಶ್ವರ! ವಿಶೇಷವಾದ ಉತ್ಸಾಹವೂ ನನ್ನಲ್ಲಿ ಉಂಟಾಗುತ್ತಿರುವುದರಿಂದ ನನ್ನನ್ನು ಅಪ್ಪಣೆ ಕೊಟ್ಟು ಕಳುಹಿಸಿಕೊಡು. ದೇವ! ನಿಜವಾಗಿಯೂ ನನಗೆ ವಿಜಯುವಾಗುವುದೆಂದು ತೋರುತ್ತಿರುವುದು. ॥೪೩೦-೪೩೧॥

ನನಗೆ ಶುಭ ಶಕುನಗಳಾಗುತ್ತಿರುವುದರಿಂದ ನನ್ನನ್ನು ಜಾಗ್ರತೆ ಕಳುಹಿಸಿಕೊಡು. ಪ್ರಭು! ಶಿವ! ಸದಾ ನಿನ್ನ ಪಾದಕಮಲಗಳಲ್ಲಿಯೇ ನೆಲಸಿರುವ ಮನಸ್ಸುಳ್ಳ ನನಗೆ ಪ್ರಯಾಣಕಾಲದಲ್ಲಿ ಹೆಜ್ಜೆ ಹೆಜ್ಜೆಗೂ ಮಂಗಳ ಪರಂಪರೆಯು ಉಂಟಾಗುವಂತೆ ಅನುಗ್ರಹಿಸು. ಸ್ವಾಮಿ. ॥೪೩೨॥

ಶಂಭುವೇ! ಸನ್ಮಂಗಳಗಳಿಗೆ ಆಶ್ರಯನಾಗಿರುವ ಆ ನಿನ್ನಲ್ಲಿ ಯಾರು ಪ್ರತಿನಿತ್ಯವೂ ಭಕ್ತಿಯುಳ್ಳವರಾಗಿರುವರೋ ಅವರಿಗೆ ವಿಜಯವೂ ಶುಭವೂ ತಪ್ಪದೇ ಉಂಟಾಗುವುದು." ॥೪೩೩॥

ವೀರಭದ್ರನು ಹೀಗೆ ನುಡಿದುದನ್ನು ಕೇಳಿ ಸಂತುಷ್ಟನಾದ ಮಂಗಲಾದೇವಿಯ ಪ್ರಿಯನಾದ ಶಿವನು, ಎಲೈ ವೀರಭದ್ರನೇ! ನಿನಗೆ ವಿಜಯುವಾಗಲಿ, ಎಂದು ಆಶೀರ್ವಾದ ಮಾಡುತ್ತ ಅವನಿಗೆ ಹೀಗೆ ಹೇಳಿದನು. ॥೪೩೪॥

॥ ಶ್ರೀಮಹಾದೇವ ಉವಾಚ ॥

ಯಾಗಂ ಕರ್ತುಂ ಸಮುದ್ಯುಕ್ತೋ ದಕ್ಷೋ ಮದ್ವಿಮುಖೋಽಧುನಾ ।
ತಮದ್ಯ ಭಸ್ಮಸಾತ್ಕೃತ್ವಾ ಪುನರಾಯಾಹಿ ಸತ್ವರಂ ॥೪೩೫॥

ಕಿಂ ಚ ತಿಷ್ಠಂತಿ ಮೋಹೇನ ಯೇ ದಕ್ಷಾಧ್ವರಮಂಟಪೇ ।
ತಾನಪ್ಯದ್ಯೈವ ಸಹಸಾ ಭಸ್ಮಸಾತ್ಕುರು ಸತ್ವರಂ ॥೪೩೬॥

ಕಿಂ ಚ ತಿಷ್ಠಂತಿ ಮೋಹೇನ ಯೇ ದಕ್ಷಾಧ್ವರಮಂಟಪೇ ।
ಸುರಾ ಭವಂತು ಗಂಧರ್ವಾ ಯಕ್ಷಾ ವಾ ಯೇ ಚ ಕೇಚನ ॥೪೩೭॥

ತಾನಪ್ಯದ್ಯೈವ ಸಹಸಾ ಭಸ್ಮಸಾತ್ಕುರು ಸತ್ವರಂ ।
ದಧೀಚ್ಯುಕ್ತಂ ಸಮುಲ್ಲಂಘ್ಯ ಶಪಥಂ ಮಯಿ ತತ್ರ ಯೇ ॥೪೩೮॥

ತಿಷ್ಠಂತಿ ಯೇ ಪ್ರಯತ್ನೇನ ಜ್ವಾಲನೀಯಾಸ್ತ್ವಯಾ ಧ್ರುವಂ ।
ತತ್ರಾಸ್ತು ವಿಷ್ಣುರ್ಬ್ರಹ್ಮಾ ವಾ ಶಚೀನಾಥೋ ಯಮೋಽಥವಾ ॥೪೩೯॥

ಎಲೈ ವೀರಭದ್ರನೇ, ನನಗೆ ವಿರುದ್ಧವಾಗಿ, ದಕ್ಷನೆಂಬುವನು ಈಗ ಯಾಗ ಮಾಡಲು ಆರಂಭಿಸಿರುವನು. ಅವನನ್ನು ಈ ಕೂಡಲೇ ಭಸ್ಮಮಾಡಿ ತಿರುಗಿ ಜಾಗ್ರತೆ ಇಲ್ಲಿಗೆ ಹೊರಟು ಬಾ. ॥೪೩೫॥

ಅಜ್ಞಾನದಿಂದ ಆ ದಕ್ಷಬ್ರಹ್ಮನ ಯಾಗಮಂಟಪದಲ್ಲಿ ನಿಂತಿರುವರನ್ನೆಲ್ಲಾ ಜಾಗ್ರತೆಯಾಗಿ ಸುಟ್ಟು ಭಸ್ಮಮಾಡಿಬಿಡು. ಆ ಯಾಗಮಂಟಪದಲ್ಲಿರುವವರು, ಗಂಧರ್ವರು, ಯಕ್ಷರು, ಅಥವ ಇನ್ನು ಯಾರು ಬೇಕಾದರೂ ಆಗಲಿ ಅವರಾರನ್ನೂ ಲಕ್ಷಿಸದೇ ಕೂಡಲೇ ಸುಟ್ಟುಬೂದಿಮಾಡಿಬಿಡು. ॥೪೩೬-೪೩೭॥

ದಧೀಚಿಮಹರ್ಷಿಯು ಮಾಡಿದ ನನ್ನ ಮೇಲಿನ ಪ್ರತಿಜ್ಞೆಯನ್ನು ಮೀರುತ್ತಾ ಬಲಾತ್ಕಾರವಾಗಿ ಯಾರು ಆ ಯಾಗಮಂಟಪದಲ್ಲಿರುವರೋ ಅವರನ್ನೆಲ್ಲಾ ಬೆಂಕಿಯ ಜ್ವಾಲೆಗಳ ಸಮೂಹದಿಂದ ಸುತ್ತಿ ಖಂಡಿತವಾಗಿ ಬೂದಿಮಾಡು. ಒಂದುವೇಳೆ ಅಲ್ಲಿ ವಿಷ್ಣು, ಬ್ರಹ್ಮ, ಶಚೀಪತಿಯಾದ ದೇವೇಂದ್ರ, ಯಮ ಅಥವ ಮತ್ತಾರಾದರೂ ದೇವತೆಗಳು, ಇವರಾರಿದ್ದರೂ ಯಾರನ್ನೂ ನೋಡದೇ ಅವರನ್ನೆಲ್ಲಾ ಬೆಂಕಿಯ ಜ್ವಾಲೆಯಲ್ಲಿ ಕೆಡವಿ ಸಾಯಿಸುವವನಾಗು. ॥೪೩೮-೪೩೯॥

ಅವಿಚಾರ್ಯೈವ ತಾನ್ಸರ್ವಾನ್ಪಾತಯಸ್ವ ಪ್ರಯತ್ನತಃ ।
ಪ್ರಪಲಾಯ್ಯ ಗಮಿಷ್ಯಂತಿ ಯದಿ ವಿಷ್ಣ್ವಾದಯೋ ಭ್ರಮಾತ್॥೪೪೦॥

ತಾನಾಕರ್ಷಯ ಮಂತ್ರೇಣ ಜ್ವಾಲಯಾನಯ ಸತ್ವರಂ ।
ಯೇ ತತ್ರೋಲ್ಲಂಘ್ಯ ಶಪಥಂ ಮದೀಯಂ ಗರ್ವತಃ ಸ್ಥಿತಾಃ॥೪೪೧॥

ತೇ ಹಿ ಮದ್ರೋಹಿಣೋಽತಸ್ತಾನ್ಜ್ವಾಲಯಾನಲಮಾಲಯಾ ।
ಸಪತ್ನೀಕಾನ್ಸಸಂಭಾರಾನ್ದಕ್ಷಯಾಗಸ್ಥಲೇ ಸ್ಥಿತಾನ್ ॥೪೪೨॥

ಪ್ರಜ್ವಾಲ್ಯ ಭಸ್ಮಸಾತ್ಕೃತ್ವಾ ಪುನರಾಯಾಹಿ ಸತ್ವರಂ ।
ತತ್ರ ತ್ವಯಿ ಗತೇ ದೇವಾ ವಿಷ್ಣ್ವಾದ್ಯಾ ಯದಿ ಸಾದರಂ ॥೪೪೩॥

ಸ್ತೋಷ್ಯಂತಿ ತ್ವಾಂ ತದಾಪ್ಯಾಶು ಜ್ವಾಲಯಾ ಜ್ವಾಲಯಾಶು ತಾನ್ ।
ದೇವಾನ್ಮಯಿ ಕೃತದ್ರೋಹಾನ್ಜ್ವಾಲಾಮಾಲಾಸಮಾಕುಲೈಃ ॥೪೪೪॥

ವಿಷ್ಣುವೇ ಮೊದಲಾದ ದೇವತೆಗಳು ಒಂದುವೇಳೆ ನಿನ್ನ ಏಟನ್ನು ತಾಳಲಾರದೇ ಅಜ್ಞಾನದಿಂದ ಓಡಿಹೋಗುವರಾದರೆ, ಅವರನ್ನೆಲ್ಲಾ ಮಂತ್ರದಿಂದ ಆಕರ್ಷಿಸಿ ಕೂಡಲೇ ಬೆಂಕಿಯ ಜ್ವಾಲೆಯಿಂದ ಸುಡುವನಾಗು. ॥೪೪೦॥

ನನ್ನ ಪ್ರತಿಜ್ಞೆಯನ್ನು ಮೀರಿ ಅಹಂಕಾರದಿಂದ ಅಲ್ಲಿಯೇ ಯಾಗಮಂಟಪದಲ್ಲಿರುವರೆಲ್ಲರೂ ನನಗೆ ದ್ರೋಹಮಾಡಿದವರೆಂದು ತಿಳಿದರೆ ಎಲ್ಲರನ್ನೂ ಈ ಬೆಂಕಿಯ ಜ್ವಾಲೆಯಿಂದ ಸುಟ್ಟು ಭಸ್ಮಮಾಡು. ॥೪೪೧॥

ಆ ದಕ್ಷನ ಯಾಗಭೂಮಿಯಲ್ಲಿರುವವರನ್ನು ಅವರವರ ಪತ್ನಿಯರೊಡನೆಯೂ ಅವರ ಸಲಕರಣೆಗಳೊಡನೆಯೂ ಸುಟ್ಟು ಬೂದಿಮಾಡಿ ಜಾಗ್ರತೆ ಹಿಂತಿರುಗಿ ಬಾ. ॥೪೪೨॥

ನೀನು ಒಂದುವೇಳೆ ಅಲ್ಲಿಗೆ ಹೋದಾಗ ವಿಷ್ಣುವೇ ಮೊದಲಾದ ದೇವತೆಗಳು ನಿನ್ನನ್ನು ಆದರದಿಂದ ಸ್ತೋತ್ರಮಾಡುವುದೇ ಆದರೆ, ಅವರ ಸ್ತೋತ್ರಗಳಿಗೆ ಮರುಳಾಗದೇ ಅವರನ್ನೆಲ್ಲಾ ಕೂಡಲೆ ಬೆಂಕಿಯ ಜ್ವಾಲೆಗಳಿಂದ ಸುಟ್ಟು ಭಸ್ಮಮಾಡು. ॥೪೪೩॥

ನನಗೆ ದ್ರೋಹಮಾಡಿರುವ ದೇವತೆಗಳನ್ನೆಲ್ಲಾ ಅಗ್ನಿಯ ಜ್ವಾಲೆಗಳ ಸಮೂಹದಿಂದ ಸುತ್ತಿ, ಉರಿಯುತ್ತಿರುವ ಬೆಂಕಿಯನ್ನು ಮತ್ತೆ ಹೆಚ್ಚಾಗಿ

ಜ್ವಾಲಯ ಜ್ವಲನ್ನೈಃ ಶೀಘ್ರಮಾಧ್ಮಾಯಾಧ್ಮಾಯ ಪಾವಕಾನ್ ।
ವಿಷ್ಣ್ವಾದೀನ್ದಕ್ಷಯಜ್ಞಸ್ಥಾನ್ಸಪತ್ನೀಕಾನ್ಸಬಾಂಧವಾನ್ ॥೪೪೫॥

ಪ್ರಜ್ವಾಲ್ಯ ವೀರ ತದನು ಸಲೀಲಂ ಸಲಿಲಂ ಪಿಬ
ಇತ್ಯುಕ್ತಂ ಶ್ರೀಮಹೇಶಸ್ಯ ಶ್ರುತ್ವಾ ವಚನಮಾದರಾತ್ । ॥೪೪೬॥

ವೀರಭದ್ರೋಽತಿಸಂತುಷ್ಟಃ ಪ್ರಣನಾಮ ಮಹೇಶ್ವರಂ ॥೪೪೭॥

ಪ್ರಣಂತಂ ಶಂಕರಃ ಪ್ರಾಹ ವೀರಭದ್ರ ಜಯೇತಿ ತಂ ।
ತತಃ ಪ್ರಚಲಿತಃ ಶೀಘ್ರಂ ವೀರಭದ್ರೋಽದ್ರಿರಾಡಿವ ॥೪೪೮॥

ಶಂಕರಃ ಪ್ರೇಷಯಾಮಾಸ ಶೋಭಾರ್ಥಂ ಕೋಟಿಶೋ ಗಣಾನ್ ।
ವೀರಭದ್ರಸ್ಯ ಪುರತಃ ಪಶ್ಚಾದಪಿ ಯಯುರ್ಗಣಾಃ ॥೪೪೯॥

ಉರಿಯುವಂತೆ ಮಾಡಿ ಭಸ್ಮಮಾಡುವನಾಗು. ಆ ದಕ್ಷನ ಯಜ್ಞಶಾಲೆಯಲ್ಲಿರುವ ವಿಷ್ಣುವೇ ಮೊದಲಾದವರನ್ನೆಲ್ಲಾ ಅವರ ಪತ್ನಿಯರೂ ನೆಂಟರೂ ಇವರೊಡನೆ ಚೆನ್ನಾಗಿ ಸುಟ್ಟು ಬೂದಿಮಾಡಿದನಂತರ ಲೀಲೆಯಿಂದ ನಿನಗೆ ಬೇಕಾದ ಹಾಗೆ ನೀರನ್ನು ಕುಡಿಯುವನಾಗು, ಎಂದು ಮಹೇಶ್ವರನು ವೀರಭದ್ರನಿಗೆ ಆಜ್ಞೆಮಾಡಿದನು. ||೪೪೪-೪೪೫-೪೪೬||

ಈರೀತಿಯಾಗಿ ನುಡಿದ ಆ ಮಹೇಶ್ವರನ ಮಾತುಗಳನ್ನು ಆದರದಿಂದ ಕೇಳಿ ವೀರಭದ್ರನು ಸಂತೋಷಭರಿತನಾಗಿ, ಆ ಮಹಾದೇವನ ಪಾದಕಮಲಗಳಿಗೆ ನಮಸ್ಕಾರಮಾಡಿದನು. ಹೀಗೆ ತನಗೆ ವಿನಯದಿಂದ ನಮಸ್ಕಾರಮಾಡುತ್ತಿರುವ ಆ ವೀರಭದ್ರನನ್ನು ಕುರಿತು, ನಿನಗೆ ಜಯವಾಗಲಿ, ನೀನು ಹೊರಡು ಎಂದು ಆ ಶಂಕರನು ಆಶೀರ್ವಾದಮಾಡಲು, ಆಗ ವೀರಭದ್ರನು ಅಲ್ಲಿಂದ ಜಾಗ್ರತೆಯಾಗಿ ಪರ್ವತರಾಜನೇ ಬರುತ್ತಿರುವನೋ ಎಂಬಂತೆ ಹೊರಟನು. ||೪೪೭-೪೪೮||

ಆಗ ಆ ಲೋಕಶಂಕರನು, ಗೌರವಕ್ಕೋಸ್ಕರ ಕೋಟ್ಯಂತರ ಶಿವಗಣಗಳನ್ನು ಆ ವೀರಭದ್ರನ ಜೊತೆಯಲ್ಲಿ ಕಳುಹಿಸಿಕೊಟ್ಟನು. ಆ ರುದ್ರಗಣಗಳು ವೀರಭದ್ರನ ಮುಂದುಗಡೆಯಲ್ಲಿಯೂ ಹಿಂಭಾಗದಲ್ಲಿಯೂ ಹೊರಟರು. ||೪೪೯||

ಕಲ್ಪವೃಕ್ಷಸಮುತ್ಸೃಷ್ಟಾ ಪುಷ್ಪವೃಷ್ಟಿರಭೂತ್ತದಾ ।
ತುಷ್ಟುವುಶ್ಚ ಗಣಾ ವೀರಂ ಶಿಪಿವಿಷ್ಟೇಷ್ಟಚೇಷ್ಟಿತಂ ॥೪೫೦॥

ವೀರಭದ್ರೇ ಪ್ರಚಲಿತೇ ದಕ್ಷನಾಶಾಯ ಸತ್ವರಂ ।
ದಕ್ಷೇಣ ದುಷ್ಟಚಿಹ್ನಾನಿ ದೃಷ್ಟಾನಿ ವಿಬುಧೈರಪಿ ॥೪೫೧॥

ದಕ್ಷವಾಮಭುಜಸ್ಪಂದೋ ಬಹುಧಾ ಸಮಜಾಯತ ।
ಸುರವಾಮಭುಜಸ್ಪಂದೋ ತಥೈವ ಸಮಜಾಯತ ॥೪೫೨॥

ಭೂಕಂಪಃ ಸಮಭೂತ್ತತ್ರ ದಕ್ಷಯಾಗಸ್ಥಲೇ ತದಾ ।
ದಕ್ಷೋ ದದರ್ಶ ಮಧ್ಯಾಹ್ನೇ ನಕ್ಷತ್ರಾಣ್ಯದ್ಭುತಾನಿ ಸಃ ॥೪೫೩॥

ದಿಶೋ ಬಭೂವುರ್ಮಲಿನಾಃ ಕರ್ಬುರೋಽಭೂದ್ದಿವಾಕರಃ ।
ಪರಿವೇಷಸಹಸ್ರೇಣ ಸಂಕ್ರಾಂತಶ್ಚಾಭವದ್ರವಿಃ ॥೪೫೪॥

ನಕ್ಷತ್ರಾಣಿ ತದಾ ಪೇತುರ್ವಿದ್ಯುದಗ್ನಿಸಮನ್ವಿತಾಃ ।
ನಕ್ಷತ್ರಾಣಾಮಭೂದ್ವಕ್ರಾ ಗತಿಶ್ಚಾಧೋಮುಖೀ ತದಾ ॥೪೫೫॥

ಆಗ ಕಲ್ಪವೃಕ್ಷದಿಂದ ಹೂವಿನಮಳೆಯು ಸುರಿಯಿತು. ಶಿವಗಣಗಳೆಲ್ಲವೂ ವೀರನಾದ ಶಿಪಿವಿಷ್ಟನೆನಿಸಿದ ಆ ಮಹಾದೇವನ ಚರಿತ್ರೆಯನ್ನು ಸ್ಮರಿಸುತ್ತಾ ಸ್ತೋತ್ರ ಮಾಡಿದವು. ॥೪೫೦॥

ಹೀಗೆ ಆ ವೀರಭದ್ರನು ದಕ್ಷಬ್ರಹ್ಮನ ನಾಶಕ್ಕೋಸ್ಕರ ಮಹೇಶ್ವರನ ಅಪ್ಪಣೆ ಪಡೆದು ಹೊರಡಲು, ದಕ್ಷನಿಗೂ ದೇವತೆಗಳಿಗೂ ದುಷ್ಟಶಕುನಗಳಾದವು. ॥೪೫೧॥

ಆಗ ದಕ್ಷನಿಗೂ, ಅಲ್ಲಿ ನೆರೆದಿದ್ದ ಇತರ ದೇವತೆಗಳಿಗೂ ಎಡಭುಜಗಳು ಹಾರಿದವು. ಆ ದಕ್ಷನ ಯಾಗಭೂಮಿಯಲ್ಲಿ ಭೂಕಂಪವಾಯಿತು. ಮಧ್ಯಾಹ್ನ ಕಾಲದಲ್ಲಿ ಅವನಿಗೆ ನಕ್ಷತ್ರಗಳು ಗೋಚರವಾದವು. ॥೪೫೨-೪೫೩॥

ದಿಕ್ಕುಗಳೆಲ್ಲವೂ ಮಲಿನವಾದವು. ಸೂರ್ಯನು ಚಿತ್ರಬಣ್ಣದವನಾದನು. ಸೂರ್ಯನಿಗೆ ಸಾವಿರಾರು ಪರಿವೇಷಗಳು ಕಟ್ಟಿದುವು. ನಕ್ಷತ್ರಗಳಿಗೆಲ್ಲಾ। ವಕ್ರಗಮನವುಂಟಾಗಿ ಅವೆಲ್ಲವೂ ಕೆಳಮುಖವಾದ ಗಮನವುಳ್ಳವುಗಳಾದವು. ॥೪೫೪-೪೫೫॥

ಗೃಧ್ರಾ ದಕ್ಷಶಿರಃ ಸ್ಪೃಷ್ಟ್ವಾ ಸಮುದ್ಭೂತಾಃ ಸಹಸ್ರಶಃ ।
ಗೃಧ್ರಪಕ್ಷಚ್ಛಾಯಯಾಸೀತ್ಸಚ್ಛಾಯೋ ಯಾಗಮಂಡಪಃ ॥೪೫೬॥

ವವಾಶಿರೇ ಯಾಗಭೂಮೌ ಕ್ರೋಷ್ಟಾರಃ ಕೋಟಿಶಸ್ತದಾ ।
ಉಲ್ಕಾವೃಷ್ಟಿರಭೂತ್ತತ್ರ ಶ್ವೇತವೃಶ್ಚಿಕಸಂಯುತಾ ॥೪೫೭॥

ತದಾ ಸೋಷ್ಣಾ ವವುರ್ವಾತಾ ಪಾಂಸುವೃಷ್ಟಿಸಮನ್ವಿತಾಃ ।
ಶಲಭಾಶ್ಚ ಸಮುದ್ಭೂತಾಃ ವಿವರ್ತಾನಿಲಕಂಪಿತಾಃ ॥೪೫೮॥

ನೀತಶ್ಚ ಪವನೈರೂರ್ಧ್ವಂ ಸ ದಕ್ಷಾಧ್ವರಮಂಟಪಃ ।
ದೇವಾನ್ವಿತೇನ ದಕ್ಷೇಣ ಯಃ ಕೃತೋ ನೂತನಃ ಪುನಃ ॥೪೫೯॥

ವೇಮುರ್ದಕ್ಷಾದಯಃ ಸರ್ವೇ ತದಾ ಶೋಣಿತಮದ್ಭುತಂ ।
ವೇಮುಶ್ಚ ಮಾಂಸಖಂಡಾನಿ ಸಶಲ್ಯಾನಿ ಮುಹುರ್ಮುಹುಃ ॥೪೬೦॥

ಸಾವಿರಾರು ಹದ್ದುಗಳು ಹುಟ್ಟಿ ಆ ದಕ್ಷಬ್ರಹ್ಮನ ತಲೆಯನ್ನು ಮುಟ್ಟಿ ಹಾರಿಹೋದವು. ಆ ಯಾಗಭೂಮಿಯೆಲ್ಲಾ ಹದ್ದುಗಳ ರೆಕ್ಕೆಗಳ ನೆಳಲಿನಿಂದ ನೆಳಲುಳ್ಳದುದಾಗಿ ತೋರಿಬಂದಿತು. ಕೋಟ್ಯಂತರ ನರಿಗಳು ಆ ಯಾಗಶಾಲೆಯ ಭೂಮಿಯಲ್ಲಿ ವಾಸಮಾಡತೊಡಗಿದವು. ಆ ಸಂದರ್ಭದಲ್ಲಿ ಬಿಳಿಯ ಚೇಳುಗಳಿಂದ ಕೂಡಿದ ಉಲ್ಕಾಪಾತವಾಯಿತು. ॥೪೫೬-೪೫೭॥

ಗಾಳಿಯು ಬಿಸಿಯಾಗಿ ಬೀಸತೊಡಗಿತು. ಮರಳಿನ ಮಳೆಗರೆಯಿತು. (ಮರಳಿನ ಮಳೆಗರೆಯುತ್ತಾ ಗಾಳಿಯು ಬಿಸಿಯಾಗಿ ಬೀಸತೊಡಗಿತು.) ಸುಳಿಗಾಳಿಯಿಂದ ಯಾಗಮಂಟಪವೇ ನಡುಗಿತು. ಶಲಭಗಳು ಯಥೇಚ್ಛವಾಗಿ ಉಂಟಾದವು. ಬಿರುಗಾಳಿಯು ಹಿಂದೆ ದೇವತೆಗಳೊಡನೆ ಸೇರಿ ಪುನಃ ಆ ದಕ್ಷನು ಹೊಸದಾಗಿ ಕಟ್ಟಿಸಿದ್ದ ದಕ್ಷಬ್ರಹ್ಮನ ಯಾಗಮಂಟಪವನ್ನೇ ಹೊತ್ತು ಮೇಲೆ ತೆಗೆದುಕೊಂಡು ಹೋಗಿ ಹಾರಿಸಿತು. ॥೪೫೮-೪೫೯॥

ದಕ್ಷನೇ ಮೊದಲಾದವರೆಲ್ಲರೂ ಅದ್ಭುತವಾಗಿ ರಕ್ತವನ್ನು ಕಾರಿದರು. ಅಲ್ಲದೆ ಅವರು ನರಗಳೊಡನೆ ಮಾಂಸಖಂಡಗಳನ್ನು ಪದೇ ಪದೇ ವಾಂತಿಮಾಡಿಕೊಂಡರು. ॥೪೬೦॥

ಸಕಂಪಾಶ್ಚ ಬಭೂವುಸ್ತೇ ದೀಪವಾತಾಹತಾ ಇವ ।
ದುಃಖಿತಾಶ್ಚ ಬಭೂವುಸ್ತೇ ಶಸ್ತ್ರಧಾರಾಹತಾ ಇವ ॥೪೬೧॥

ತದಾನನಾನಿ ಜಾತಾನಿ ಖಿನ್ನಾನಿ ವಿಶದಾನ್ಯಪಿ ।
ನಿಶಾಯಾಂ ಕಮಲಾನೀವ ಕುಮುದಾನೀವ ಸಂಗವೇ ॥೪೬೨॥

ದಕ್ಷಾದ್ಯಕ್ಷೀಣಿ ಜಾತಾನಿ ಬಾಷ್ಪವರ್ಷಾಣಿ ತತ್ಕ್ಷಣೇ ।
ಪ್ರಾತಸ್ತುಷಾರವರ್ಷಾಣಿ ಪದ್ಮಾನೀವ ವನಾಂತರೇ ॥೪೬೩॥

ಭುವಿ ತೇ ಮೂರ್ಛಿತಾಃ ಪೇತುಃ ಹಾಹಂತಾಃ ಸ್ಮ ಇತಿ ದ್ರುತಂ ।
ತರವಸ್ತೀರಸಂಜಾತಾ ನದೀವೇಗಹತಾ ಇವ ॥೪೬೪॥

ಪತಿತ್ವಾ ತೇ ಸ್ಥಿತಾ ಭೂಮೌ ಕ್ರೂರಾಃ ಸರ್ಪಾ ಇವಾಹತಾಃ ।
ಕಂತುಕಾ ಇವ ತೇ ಭೂಯಃ ಪತಿತಾಃ ಪುನರುತ್ಥಿತಾಃ ॥೪೬೫॥

ಗಾಳಿಯು ಹೊಡತಕ್ಕೆ ಸಿಕ್ಕಿದ ದೀಪಗಳಂತೆ ಅವರೆಲ್ಲರೂ ನಡುಗಿದರು. ಶಸ್ತ್ರಗಳ ಅಲಗುಗಳಿಂದ ಹೊಡೆಯಲ್ಪಟ್ಟವರಂತೆ ಎಲ್ಲರೂ ತುಂಬಾ ದುಃಖಿತರಾದರು. ॥೪೬೧॥

ಆ ದಕ್ಷಬ್ರಹ್ಮನೇ ಮೊದಲಾದವರ ಮುಖಗಳು ವಿಶಾಲವಾಗಿ ಶುಭ್ರವಾಗಿದ್ದರೂ, ರಾತ್ರಿಕಾಲದ ಕಮಲಗಳಂತೆಯೂ, ಬೆಳಗಿನ ಕಾಲಗಳಲ್ಲಿಯ ಕನ್ನೈದಿಲೆಯಂತೆಯೂ ಬಾಡಿಹೋದವು. ॥೪೬೨॥

ದಕ್ಷನೇ ಮೊದಲಾದವರ ಕಣ್ಣುಗಳೆಲ್ಲವೂ ಕಣ್ಣೀರುಗಳನ್ನು ಸುರಿಸುತ್ತಾ ಮಂಕಾಗಿ, ಬೆಳಗಿನ ಕಾಲದಲ್ಲಿ ಹಿಮದ ಮಳೆಯಿಂದ ಕಮಲಗಳು ಕಾಡಿನ ಮಧ್ಯದಲ್ಲಿ ಶೋಭಿಸುವಂತೆ ತೋರುತ್ತಿದ್ದವು. ಅಯ್ಯೋ ಕೆಟ್ಟೆವೆಂದು ಹೇಳುತ್ತಾ ಜಾಗ್ರತೆಯಾಗಿ ಅವರೆಲ್ಲರೂ ಭೂಮಿಯ ಮೇಲೆ ಬಿದ್ದು ಮೂರ್ಛೆ ಹೊಂದಿದರು. ಅವರನ್ನು ನೋಡಿದರೆ ನದಿಯ ವೇಗದಿಂದ ಹೊಡೆಯಲ್ಪಟ್ಟ ದಡದಲ್ಲಿ ಬೆಳೆದ ಮರಗಳಂತೆ ಕಾಣುತ್ತಿದ್ದರು. ॥೪೬೩-೪೬೪॥

ಅವರು ಭೂಮಿಯ ಮೇಲೆ ಕ್ರೂರವಾದ ಸರ್ಪಗಳಿಂದ ಕಚ್ಚಲ್ಪಟ್ಟವರಂತೆ ಕೆಳಕ್ಕೆ ಬಿದ್ದರು. ಹಾಗೆ ಬಿದ್ದವರು ಚೆಂಡನ್ನು ಕೆಳಗೆ ಹೊಡೆದರೆ, ಅದು ತಾನು ಕೆಳಗೆ

ತತಸ್ತೇ ತಾಪಸಂತಪ್ತಾ ರುರುದುಃ ಕುರರಾ ಇವ ।
ರೋದನಧ್ವನಿಸಂಕ್ರಾಂತಾ ಸಂಕ್ರಾಂತೋತ್ಕ್ರಾಂತಿಕಾ ಇವ ॥೪೬೬॥

ಸರ್ವೈಕುಂಠಾಸ್ತತಃ ಸರ್ವೇ ತದಾ ಕುಂಠಿತಶಕ್ತಯಃ ।
ಸ್ವಸ್ವೋಪಕಂಠಮಾಕಂಠಂ ಲುಲುಠುಃ ಕಮಠಾ ಇವ ॥೪೯೭॥

ದುರ್ಭಗಾ ಭಾಗ್ಯಸಂಕ್ರಾಂತಾಃ ಶಿವಪೂಜಾಪರಾಙ್ಮುಖಾಃ ।
ಧಿಗ್ಜನ್ಮ ತವ ದಕ್ಷೇತಿ ಸಂಜಾತಾ ಚಾಶರೀರವಾಕ್ ॥೪೬೮॥

ತದಾನೀಮಾಗತೋ ಭೀಮೋ ವೀರಭದ್ರೋಽರಿಮರ್ದನಃ ।
ನರಸಿಂಹವಿನಾಶಾರ್ಥಂ ಪುರಾರಿರಿವ ಸತ್ವರಂ ॥೪೬೯॥

ಬಿದ್ದು ಪುನಃ ಮೇಲಕ್ಕೆ ಪುಟಹಾರಿ ಬರುವಂತೆ ಎಲ್ಲರೂ ತಾವು ಬಿದ್ದರೂ ತಿರುಗಿ ಮೇಲೆ ಎದ್ದು ನಿಲ್ಲುತ್ತಿದ್ದರು. ॥೪೬೫॥

ಅನಂತರ ದುಃಖದಿಂದ ಕಡುನೊಂದ ಈ ದಕ್ಷಾದಿಗಳು ಹುಲ್ಲೆಮರಿಗಳಂತೆ ಗೋಳಾಡಿದರು. ಇವರು ಅಳುವ ಧ್ವನಿಯಿಂದ ವ್ಯಾಪ್ತವಾದ ಆ ಪ್ರದೇಶವು ಚಕ್ರವಾಕಪಕ್ಷಿಗಳ ರೋದನಧ್ವನಿಗಳಂತಿದ್ದವು. ॥೪೬೬॥

ವೈಕುಂಠಾಧಿಪತಿಯಾದ ಆ ಮಹಾವಿಷ್ಣುವಿನೊಡನೆ ಅವರೆಲ್ಲರೂ ಬಲಗುಂದಿದವರಾಗಿ ಆಮೆಗಳಂತೆ ತಮ್ಮ ಕುತ್ತಿಗೆಯ ವರೆಗೂ ತುಂಬಿದ ದುಃಖದಿಂದ ಹೊರಳಾಡಿದರು. ॥೪೬೭॥

ಎಲೈ ನಿರ್ಭಾಗ್ಯದೇವತೆಗಳಿರಾ, ಐಶ್ವರ್ಯಮದದಿಂದ ಕೊಬ್ಬಿದ ನೀವು ಆ ಶಿವಪೂಜೆಯಲ್ಲಿ ವಿಮುಖರಾಗಿರುವಿರಿ. ನಿಮ್ಮ ಬಾಳು ವ್ಯರ್ಥವಾದುದು. ಓ ದಕ್ಷಬ್ರಹ್ಮನೇ, ನಿನ್ನ ಜನ್ಮವನ್ನು ಸುಡಲಿ ಎಂದು ಅಶರೀರವಾಣಿಯಾಯಿತುತು. ॥೪೬೮॥

ಆ ಸಮಯಕ್ಕೆ ಸರಿಯಾಗಿ ಭಯಂಕರವಾದ ಆಕಾರವುಳ್ಳವನೂ, ಶತ್ರುಧ್ವಂಸಮಾಡುವವನೂ ಆದ ವೀರಭದ್ರನು, ಹಿಂದೆ ನರಸಿಂಹರೂಪವನ್ನು ತಾಳಿದ ಮಹಾವಿಷ್ಣುವನ್ನು ನಿಗ್ರಹಿಸಿ ಅವನ ಗರ್ವವನ್ನು ಹೋಗಲಾಡಿಸುವುದಕ್ಕೋಸ್ಕರ ಹೊರಟ ತ್ರಿಪುರಾಸುರಧ್ವಂಸಕನಾದ ಶರಭಾವತಾರಿಯಾದ ಮಹೇಶ್ವರನಂತೆ ಉಗ್ರವಾಗಿ ಅಲ್ಲಿಗೆ ಬಂದನು. ॥೪೬೯॥

ಉಪೇಂದ್ರೇಂದ್ರಪ್ರಭೃತಯೋ ದಕ್ಷಾದ್ಯಾಶ್ಚ ತತಃ ಪರಂ ।
ದದೃಶುರ್ವೀರಭದ್ರಂ ತಂ ಜ್ವಲಂತಮಿವ ಪರ್ವತಂ ॥೪೭೦॥

ವಿಲೋಕ್ಯೈನಂ ವೀರಭದ್ರಂ ದಕ್ಷಮಾಹ ಹರಿಸ್ತದಾ ।
ಪ್ರಭಂಜನಹತೋತ್ಕ್ರಾಂತತಾಲವೃಂತಮಿವ ಸ್ಥಿತಂ ॥೪೭೧॥

॥ ವಿಷ್ಣುರುವಾಚ ॥

ಅಯಂ ರುದ್ರಗಣಶ್ರೇಷ್ಠೋ ವೀರಭದ್ರೋಽರಿಮರ್ದನಃ ।
ರುದ್ರಕ್ರೋಧಾಗ್ನಿಸಂಭೂತಃ ಸಮಾಯಾತೋಽಧ್ವರಾಂಗಣೇ॥೪೭೨॥

ಅಯಮಸ್ಮದ್ವಿನಾಶಾರ್ಥಮಾಗತೋಽಸ್ತಿ ನ ಸಂಶಯಃ ।
ಅಶಕ್ಯಮಸ್ಯ ನಾಸ್ತ್ಯೇವ ಕಿಮಪ್ಯತ್ರೈವ ವಸ್ತುತಃ ॥೪೭೩॥

ಪ್ರಜ್ವಾಲ್ಯಾಸ್ಮಾನಯಂ ಸರ್ವಾನಧುನಾದ್ಯೈವ ಸತ್ವರಂ ।
ತತಃ ಪ್ರಶಾಂತಹೃದಯೋ ಭವಿಷ್ಯತಿ ನ ಸಂಶಯಃ ॥೪೭೪॥

ವಿಷ್ಣು, ಇಂದ್ರ ಮೊದಲಾದ ದೇವತೆಗಳೂ, ದಕ್ಷನೇ ಮೊದಲಾದವರೂ ಸಹ ಉರಿಯುತ್ತಿರುವ ಪರ್ವತದಂತಿರುವ ಆ ವೀರಭದ್ರನನ್ನು ನೋಡಿ ಬೆರಗಾದರು. ॥೪೭೦॥

ಬಿರುಗಾಳಿಯಿಂದ ಹೊಡೆಯಲ್ಪಟ್ಟು ಅಲ್ಲಾಡುವ ಬೀಸಣಿಗೆಯಂತಿರುವ ಆ ದಕ್ಷಬ್ರಹ್ಮನನ್ನು ಕುರಿತು, ಆ ಭಯಂಕರ ರೂಪಿನ ವೀರಭದ್ರನನ್ನು ನೋಡಿದ ಮೇಲೆ ವಿಷ್ಣುವು ಹೀಗೆ ಹೇಳಿದನು. ॥೪೭೧॥

ಎಲೈ ದಕ್ಷನೇ, ಶತ್ರುಗಳನ್ನು ಧ್ವಂಸಮಾಡುವ ಸಾಮರ್ಥ್ಯವುಳ್ಳ ಈ ವೀರಭದ್ರನು ರುದ್ರನ ಗಣಗಳಲ್ಲೆಲ್ಲಾ ಶ್ರೇಷ್ಠನಾದವನು. ಈ ಮಹಾನುಭಾವನು ರುದ್ರದೇವನ ಕೋಪಾಗ್ನಿಯಿಂದ ಹುಟ್ಟಿದವನು. ಈಗ ಇವನು ಈ ಯಾಗಶಾಲೆಗೆ ಕೋಪದಿಂದ ಬಂದಿದ್ದಾನೆ. ॥೪೭೨॥

ಈ ವೀರಭದ್ರನು ನಮ್ಮನ್ನು ನಾಶಮಾಡುವುದಕ್ಕೋಸ್ಕರವೇ ಇಲ್ಲಿಗೆ ಬಂದಿದ್ದಾನೆ. ಇದರಲ್ಲಿ ಸಂದೇಹವೇ ಇಲ್ಲ. ಈ ಮಹಾಪ್ರಭಾವಶಾಲಿಗೆ ಅಸಾಧ್ಯವಾದುದು ಯಾವುದೂ ವಸ್ತುತಃ ಇಲ್ಲವೆಂದೇ ನಾನು ತಿಳಿದಿರುವೆನು. ಈತನು ನಮ್ಮೆಲ್ಲರನ್ನೂ ಈಗಲೇ ಜಾಗ್ರತೆ ಸುಟ್ಟು ಬೂದಿಮಾಡಿದ ನಂತರ ಸಂತುಷ್ಟನಾಗುವನೆಂಬುದರಲ್ಲಿ ಸಂದೇಹವೇ ಇಲ್ಲ. ॥೪೭೩-೪೭೪॥

ಶ್ರೀಮಹಾದೇವಶಪಥಂ ಸಮುಲ್ಲಂಘ್ಯ ಭ್ರಮಾನ್ಮಯಾ ।
ಯತಃ ಸ್ಥಿತಂ ತತಃ ಪ್ರಾಪ್ಯಂ ಮಯಾ ದುಃಖಂ ತ್ವಯಾ ಸಹ ॥೪೭೫॥

ಶಕ್ತಿರ್ಮಮ ತು ನಾಸ್ತ್ಯೇವ ದಕ್ಷಾದ್ಯೈತನ್ನಿವಾರಣೇ ।
ಶಪಥೋಲ್ಲಂಘನಾದದ್ಯ ಶಿವದ್ರೋಹೀ ಯತೋಽಸ್ಮ್ಯಹಂ ॥೪೭೬॥

ಕಾಲತ್ರಯೇಽಪಿ ನ ಯತೋ ಮಹೇಶದ್ರೋಹಿಣಾಂ ಸುಖಂ ।
ತತೋಽವಶ್ಯಂ ಮಯಾ ಪ್ರಾಪ್ಯಂ ದುಃಖಮದ್ಯ ತ್ವಯಾ ಸಹ ॥೪೭೭॥

ಸುದರ್ಶನಾಭಿದಂ ಚಕ್ರಮೇತಸ್ಮಿನ್ನ ಲಗಿಷ್ಯತಿ ।
ಶೈವಚಕ್ರಮಿದಂ ಯಸ್ಮಾದಶೈವಕ್ಷಯಕಾರಕಂ ॥೪೭೮॥

ವಿನಾಪಿ ವೀರಭದ್ರೇಣ ಮಾಮೇತಚ್ಚಕ್ರಮೈಶ್ವರಂ ।
ಹತ್ವಾ ಗಮಿಷ್ಯತ್ಯಧುನಾ ಸತ್ವರಂ ಹರಸಂನಿಧಿಂ ॥೪೭೯॥

ಆ ಮಹಾದೇವನ ಮೇಲೆ ದಧೀಚಿಮುನಿಯು ಹೂಡಿದ ಶಪಥವನ್ನು ಮೀರಿ ಭ್ರಾಂತಿಯಿಂದ ನಾನು ಈ ಯಾಗಮಂಟಪದಲ್ಲಿ ನಿಂತಿದ್ದರಿಂದ ಈಗ ನಾನೂ ನಿನ್ನೊಡನೆ ದುಃಖವನ್ನನುಭವಿಸಬೇಕಾಗಿ ಬಂದಿದೆ. ॥೪೭೫॥

ಅಯ್ಯ ದಕ್ಷನೇ, ಈಗ ಈತನನ್ನು ನಿವಾರಣೆಮಾಡಲು ನನಗೆ ನಿಜವಾಗಿಯೂ ಶಕ್ತಿಯಿಲ್ಲವು. ಆ ಮಹಾದೇವನ ಪ್ರತಿಜ್ಞೆಯನ್ನು ಮೀರಿರುವ ನಾನು ಈಗ ಆ ಶಿವನಿಗೆ ದ್ರೋಹಿಯಾಗಿರುವೆನು. ॥೪೭೬॥

ಆ ಪರಶಿವನಿಗೆ ದ್ರೋಹಮಾಡಿದವರಿಗೆ ಮೂರುಕಾಲಗಳಲ್ಲಿಯೂ (ವರ್ತಮಾನ ಭೂತ ಭವಿಷ್ಯತ್) ಸುಖವಿಲ್ಲದ್ದರಿಂದ ಈಗ ನಾನೂ ನಿನ್ನೊಡನೆ ಅವಶ್ಯವಾಗಿ ದುಃಖವನ್ನನುಭವಿಸಬೇಕಾಗಿದೆ. ॥೪೭೭॥

ಈ ನನ್ನ ಸುದರ್ಶನವೆಂಬ ಚಕ್ರವೂ ಈ ವೀರಭದ್ರನಲ್ಲಿ ಪ್ರವೇಶಿಸಿ, ತೊಂದರೆಮಾಡಲಾರದು. ಇದು ಆ ಪರಶಿವನ ಚಕ್ರವೇ ಆಗಿರುವುದು. ಇದು ಕೇವಲ ಶಿವಭಕ್ತರಲ್ಲದವರನ್ನು ಮಾತ್ರ ನಿಗ್ರಹಿಸಬಲ್ಲದು. ॥೪೭೮॥

ಒಂದುವೇಳೆ ವೀರಭದ್ರನು ಬರದಿದ್ದರೂ ಪರಮೇಶ್ವರನ ಈ ಚಕ್ರವು ನನ್ನನ್ನು ಈಗ ಕೊಂದು ಜಾಗ್ರತೆಯಾಗಿ ಆ ಪರಮೇಶ್ವರನ ಸನ್ನಿಧಾನಕ್ಕೆ ಹೊರಟು ಹೋಗುತ್ತಿದ್ದಿತು. ॥೪೭೯॥

ಶೈವಂ ಶಪಥಮುಲ್ಲಂಘ್ಯ ಸ್ಥಿತಂ ಮಾಂ ಚಕ್ರಮೀದೃಶಂ ।
ಅಸಂಹೃತ್ಯೈವ ಸಹಸಾ ಕೃಪಯೈವ ಸ್ಥಿತಂ ಪರಂ ॥೪೮೦॥

ಅತಃ ಪರಮಿದಂ ಚಕ್ರಂ ಮಯಿ ನ ಸ್ಥಾಸ್ಯತಿ ಧ್ರುವಂ ।
ಗಮಿಷ್ಯತ್ಯಧುನಾ ಶೀಘ್ರಂ ಜ್ವಾಲಾಮಾಲಾಸಮಾಕುಲಂ ॥೪೮೧॥

ವೀರಭದ್ರಃ ಪೂಜಿತೋಽಪಿ ಶೀಘ್ರಮಸ್ಮಾಭಿರಾದರಾತ್ ।
ಮಹಾಕ್ರೋಧಸಮಾಕ್ರಾಂತೋ ನಾಸ್ಮಾನ್ಸಂರಕ್ಷಯಿಷ್ಯತಿ ॥೪೮೨॥

ಅಕಾಂಡಂ ಪ್ರಲಯೋಽಸ್ಮಾಕಮಾಗತೋಽದ್ಯ ಹಿ ಹಾಹಹಾ ।
ಹಾಹಾ ಬತ ಬತೇದಾನೀಂ ನಾಶೋಽಸ್ಮಾಕಮುಪಸ್ಥಿತಃ ॥೪೮೩॥

ಶರಣ್ಯೋಽಸ್ಮಾಕಮಧುನಾ ನಾಸ್ತ್ಯೇವ ಹಿ ಜಗತ್ತ್ರಯೇ ।
ಶಂಕರದ್ರೋಹಿಣಾಂ ಲೋಕೇ ಕಃ ಶರಣ್ಯೋ ಭವಿಷ್ಯತಿ ॥೪೮೪॥

ಆ ಪರಶಿವನ ಮೇಲಿನ ಪ್ರತಿಜ್ಞೆಯನ್ನು ಮೀರಿ ಇಲ್ಲಿದ್ದ ನನ್ನನ್ನು, ಈ ಶಿವನ ಚಕ್ರವು ಸಂಹಾರಮಾಡದೇ ನನ್ನ ಮೇಲೆ ದಯೆಯಿಂದ ಇಲ್ಲಿಯವರೆಗೂ ಸುಮ್ಮನಿದ್ದಿತು. ॥೪೮೦॥

ಇನ್ನು ಮುಂದೆ ಶಿವದ್ರೋಹಿಯಾದ ನನ್ನ ಸಮೀಪದಲ್ಲಿ ನಿಶ್ಚಯವಾಗಿಯೂ ಈ ಚಕ್ರವಿರದೆ, ಬೆಂಕಿಯ ಜ್ವಾಲೆಗಳ ಸಮೂಹದಿಂದ ವ್ಯಾಪ್ತವಾಗಿ ಹೊರಟು ಹೋಗುತ್ತದೆ. ॥೪೮೧॥

ಅತ್ಯಂತ ಕೋಪದಿಂದ ಕೂಡಿದ ಈ ವೀರಭದ್ರನನ್ನು ನಾವು ಜಾಗ್ರತೆ ಆದರದಿಂದ ಪೂಜೆಮಾಡಿದರೂ ಅವನು ನಮ್ಮನ್ನೆಂದಿಗೂ ಕಾಪಾಡುವುದಿಲ್ಲ. ॥೪೮೨॥

ಅಕಾಲದಲ್ಲಿ ನಮಗೆ ಈ ರೀತಿಯಾಗಿ ನಾಶವೊದಗಿತಲ್ಲ! ಅಯ್ಯೋ ಕೆಟ್ಟೆವು! ಅಯ್ಯೋ! ಇನ್ನೇನು ಮಾಡುವುದು? ವಿಪತ್ತೊದಗಿತಲ್ಲ! ಈಗ ಈ ಮೂರು ಲೋಕಗಳಲ್ಲಿಯೂ ನಮಗೆ ಯಾರೂ ರಕ್ಷಕರಿಲ್ಲವಲ್ಲ! ಅಯ್ಯ ದಕ್ಷನೇ, ಆ ಶಂಕರನಿಗೆ ದ್ರೋಹಮಾಡಿದವರಿಗೆ ಲೋಕದಲ್ಲಿ ಯಾರುತಾನೆ ರಕ್ಷಣೆ ಮಾಡಬಲ್ಲರು? ॥೪೮೩-೪೮೪॥

ನ ತು ನಾಶೋಽಪಿ ಸಂಪ್ರಾಪ್ಯೋಹ್ಯಸ್ಮಾಭಿರ್ಯಮಯಾತನಾ ।
ಸಾ ನೈವ ಶಕ್ಯತೇ ಸೋಢುಂ ಬಹುದುಃಖಪ್ರದಾಯಿನೀ ॥೪೮೫॥

ಶಿವದ್ರೋಹಿಣಮಾಲೋಕ್ಯ ದಷ್ಟದಂತೋ ಯಮಃ ಸ್ವಯಂ ।
ತಪ್ತತೈಲಕಟಾಹೇಷು ಪಾತಯಿಷ್ಯತ್ಯಸಂಶಯಂ ॥೪೮೬॥

ಮಾಮಿಂದ್ರಂ ವಾ ವಿಧಿಂ ವಾನ್ಯಂ ಶಿವದ್ರೋಹಪರಂ ಯಮಃ ।
ವಿಲೋಕ್ಯ ಸಹಸಾ ಕ್ರೂರಃ ಸ ಕೃಪಾಂ ನ ಕರಿಷ್ಯತಿ ॥೪೮೭॥

ಯಮಸ್ಯ ನ ಯತೋಽಸ್ಮಾಕಮಪೇಕ್ಷಾಽಸ್ಮಾನ್ತತೋ ಯಮಃ ।
ಪಾತಯಿಷ್ಯತಿ ಘೋರೇಷು ವಹ್ನಿಕುಂಡೇಷು ಸತ್ವರಂ ॥೪೮೮॥

ಆಜ್ಞಪ್ತಃ ಶ್ರೀಮಹೇಶೇನ ವಿಷ್ಣುರ್ಬ್ರಹ್ಮಾಸ್ತು ವಾಸವಃ ।
ಮದ್ದ್ರೋಹಪರಚಿತ್ತಶ್ಚೇತ್ತಮಗ್ನೌ ಪಾತಯೇತಿ ಸಃ ॥೪೮೯॥

ನಮಗೆ ಜಾಗ್ರತೆ ಮರಣವೂ ಉಂಟಾಗುವುದಿಲ್ಲ. ಕೇವಲ ಯಮಯಾತನೆಗಳನ್ನು ನಾವು ಅನುಭವಿಸಬೇಕಾಗಿದೆ. ಹೆಚ್ಚಾದ ದುಃಖವನ್ನು ಕೊಡುವ ಆ ಯಮಲೋಕದ ಯಾತನೆಗಳಾದರೋ ಸಹಿಸುವುದಕ್ಕೇ ಸಾಧ್ಯವಿಲ್ಲದಂತೆ ಅತಿ ಭಯಂಕರವಾಗಿರುವುವು. ॥೪೮೫॥

ಆ ಪರಶಿವನಿಗೆ ದ್ರೋಹಮಾಡಿದವರನ್ನು ನೋಡಿ ಆ ಯಮನು ತಾನು ಹಲ್ಲು ಕಡಿಯುತ್ತಾ ಚೆನ್ನಾಗಿ ಕಾದ ಎಣ್ಣೆಯ ಕೊಪ್ಪರಿಗೆಗಳಲ್ಲಿ ನಿಶ್ಚಯವಾಗಿಯೂ ಹಾಕಿಸುವನು. ॥೪೮೬॥

ನಾನು (ವಿಷ್ಣು), ಬ್ರಹ್ಮ, ಅಥವಾ ಬೇರೆ ಯಾರಾದರೂ ಶಿವದ್ರೋಹಿಗಳಾಗಲೀ, ಇವರಾರನ್ನೂ ಕ್ರೂರನಾದ ಆ ಯಮನು ನೋಡಿ, ಸ್ವಲ್ಪವೂ ದಯೆ ತೋರುವುದಿಲ್ಲ. ಯಮನಿಗೆ ನಮ್ಮ ಅಪೇಕ್ಷೆಯೇನೂ ಇಲ್ಲದಿರುವುದರಿಂದ ಆ ಯಮನು, ಘೋರವಾದ ಅಗ್ನಿಕುಂಡಗಳಲ್ಲಿ ನಮ್ಮನ್ನು ಜಾಗ್ರತೆ ತಳ್ಳುತ್ತಾನೆ. ॥೪೮೭-೪೮೮॥

ಮಹೇಶ್ವರನು, ಆ ಯಮನಿಗೆ ವಿಷ್ಣು, ಬ್ರಹ್ಮ, ಇಂದ್ರ ಇವರು ಯಾರೇ ಆಗಲೀ ನನ್ನಲ್ಲಿ ದ್ರೋಹವನ್ನಾಚರಿಸಿದರೆ ಅವರನ್ನು ಬೆಂಕಿಗೆ ಹಾಕಿ ಸುಟ್ಟುಬಿಡೆಂದು ಆಜ್ಞೆಮಾಡಿರುವನು. ॥೪೮೯॥

ಅತೋಽವಶ್ಯಂ ಯಮಃ ಕ್ರೂರಃ ಶಿವದ್ರೋಹಿಜನಾನಲಃ ।
ಅಸ್ಮಾನನಲಕುಂಡೇಷು ಪಾತಯಿಷ್ಯತ್ಯಸಂಶಯಂ ॥೪೯೦॥

ಯದ್ಯದ್ಯ ವೀರಭದ್ರೋಽಯಮಸ್ಮಾನ್ ಶೂಲೇನ ಸತ್ವರಂ ।
ಪ್ರೋಥಯಿತ್ವಾ ವಿಪ್ರೋಥ್ಯೇತ ತದಾ ನ ಯಮಯಾತನಾ ॥೪೯೧॥

ಅಸ್ಮಾಕಮೀದೃಶಂ ಭಾಗ್ಯಂ ಕಥಂ ವಾ ಸಂಭವಿಷ್ಯತಿ ।
ಯತ್ತ್ರಿಶೂಲಪರಿಪ್ರೋತಾಸ್ತ್ಯಕ್ಷ್ಯಾಮೋಽಸೂನಿಹಾಧುನಾ ॥೪೯೨॥

ತ್ರಿಶೂಲಪ್ರೋಥಿತಾಃ ಪೂರ್ವಂ ಮುಕ್ತಾ ಜಾತಾಃ ಪುರಾದಯಃ ।
ಮುಕ್ತಾ ಜಾತಾಸ್ತದನ್ಯೇಽಪಿ ತ್ರಿಶೂಲೇನ ನಿಪಾತಿತಾಃ ॥೪೯೩॥

ಶೂಲದರ್ಶನಮಾತ್ರೇಣ ಮುಕ್ತಿರ್ಭವತಿ ವಸ್ತುತಃ ।
ತತ್ಸಂಯೋಗಾತ್ತದಾ ಮುಕ್ತಿರ್ಭವತೀತ್ಯತ್ರ ನಾದ್ಭುತಂ ॥೪೯೪॥

ಆದ್ದರಿಂದ ಅತಿ ಕ್ರೂರನಾದ ಆ ಯಮನು ಶಿವದ್ರೋಹಿಗಳಾದ ಜನರಿಗೆ ಅಗ್ನಿಪ್ರಾಯನಾಗಿರುವನು. ಅವನು ನಿಜವಾಗಿಯೂ ನಮ್ಮನ್ನು ಬೆಂಕಿಯ ಕುಂಡದಲ್ಲಿ ತಳ್ಳಿಯೇ ತಳ್ಳುವನು. ಇದರಲ್ಲಿ ಸ್ವಲ್ಪವೂ ಸಂದೇಹವೇ ಇಲ್ಲ. ॥೪೯೦॥

ಈ ವೀರಭದ್ರನೇನಾದರೂ ಈಗ ನಮ್ಮನ್ನು ತ್ರಿಶೂಲದಿಂದ ಕೂಡಲೇ ತಿವಿದು ಕೊಂದುಹಾಕಿದರೆ ಆಗ ನಾವು ಆ ಯಮಬಾಧೆಯನ್ನು ಅನುಭವಿಸಬೇಕಾಗಿಲ್ಲ. ಅಯ್ಯ ದಕ್ಷನೇ, ನಾವು ಆ ವೀರಭದ್ರನ ತ್ರಿಶೂಲದಿಂದ ತಿವಿಯಲ್ಪಟ್ಟು ಪ್ರಾಣವನ್ನು ಬಿಡುವಂತಹ ಭಾಗ್ಯವು ನಮಗೆಲ್ಲಿರುವುದು ? ॥೪೯೨॥

ಹಿಂದೆ ತ್ರಿಶೂಲಾಯುಧದಿಂದ ತಿವಿಯಲ್ಪಟ್ಟು ತ್ರಿಪುರರೇ ಮೊದಲಾದ ರಾಕ್ಷಸರು ಮುಕ್ತಿಹೊಂದಿರುವರು. ಇವರಲ್ಲದೇ ಇನ್ನೂ ಕೆಲವರು ತ್ರಿಶೂಲದಿಂದ ಕೆಡವಲ್ಪಟ್ಟು ಮೋಕ್ಷಪಡೆದಿರುವರು. ವಸ್ತುತಃ ಆ ಶೂಲಾಯುಧವನ್ನು ನೋಡಿದ ಮಾತ್ರದಿಂದಲೇ ಮುಕ್ತಿಯುಂಟಾಗುವುದು ಸಹಜವಾಗಿರುವಾಗ, ಆ ಶೂಲಾಯುಧದ ಸಂಬಂಧವೇರ್ಪಟ್ಟು ಅದರಿಂದಲೇ ಮೃತರಾಗುವವರಿಗೆ ಮೋಕ್ಷವುಂಟಾಗುವುದೆಂಬುದರಲ್ಲಿ ಆಶ್ಚರ್ಯವೇನು ! ॥೪೯೩-೯೪॥

ಗಂತುಮೇನಾಹಮುದ್ಯುಕ್ತಃ ಸರ್ವಥಾ ಶಪಥೋತ್ತರಂ ।
ತಥಾಽಪಿ ನ ಗತಂ ಶೀಘ್ರಂ ದುಷ್ಟಸಂಗಮಪಾಪತಃ ॥೪೯೫॥

ಅತ ಏವ ಹಿ ಸತ್ಸಂಗಃ ಕರ್ತವ್ಯಃ ಸರ್ವದಾ ಬುಧೈಃ ।
ಅಸತ್ಸಂಗಃ ಪ್ರಯತ್ನೇನ ಪರಿತ್ಯಾಜ್ಯೋ ಹಿತೈಷಿಭಿಃ ॥೪೯೬॥

ಯದ್ಯದ್ಯ ಕ್ರಿಯತೇಽಸ್ಮಾಭಿಃ ಪಲಾಯನಮಿತಸ್ತತಃ ।
ಅಸ್ಮಾನಾಕರ್ಷಕೈಃ ಶಸ್ತ್ರೈಃ ಸ ಸಮಾಕರ್ಷಯಿಷ್ಯತಿ ॥೪೯೭॥

ಸ್ವರ್ಗೇ ವಾ ಭುವಿ ಪಾತಾಲೇ ಯತ್ರ ಕುತ್ರಾಪಿ ವಾ ಯತಃ ।
ಶ್ರೀವೀರಭದ್ರಶಸ್ತ್ರಾಣಾಂ ಗಮನಂ ನ ಹಿ ದುರ್ಲಭಂ ॥೪೯೮॥

ಗಣಾ ವಸಂತಿ ಯಾವಂತಃ ಶ್ರೀರುದ್ರಸ್ಯ ತ್ರಿಶೂಲಿನಃ ।
ತಾವತಾಮಪಿ ಸರ್ವೇಷಾಂ ಶಕ್ತಿರೇತಾದೃಶೀ ಧ್ರುವಂ ॥೪೯೯॥

ಹಿಂದೆ ದಧೀಚಿಮುನಿಯು ಪ್ರತಿಜ್ಞೆಮಾಡಿದಮೇಲೆ ನಾನು ಈ ಯಾಗ ಮಂಟಪದಿಂದ ಹೊರಡಲು ಪ್ರಯತ್ನಿಸಿದೆನು. ಆದರೆ ದುಷ್ಟಜನಗಳ ಸಂಬಂಧ ದಿಂದುಂಟಾದ ಪಾಪದ ದೆಸೆಯಿಂದ ನನಗೆ ಜಾಗ್ರತೆಯಾಗಿ ಇಲ್ಲಿಂದ ಹೊರಡಲು ಸಾಧ್ಯವಾಗಲಿಲ್ಲ. ಆದ್ದರಿಂದಲೇ ಯಾವಾಗಲೂ ಸತ್ಪುರುಷರ ಸಹವಾಸವನ್ನೇ ಮಾಡಬೇಕು. ಹಿತವನ್ನಪೇಕ್ಷಿಸುವವರು ದುಷ್ಟರ ಸಹವಾಸವನ್ನು ಬಲವಂತದಿಂದ ಲಾದರೂ ಬಿಡಬೇಕೆಂದು ಪಂಡಿತರು ಹೇಳುತ್ತಿರುವರು. ॥೪೯೫-೪೯೬॥

ಒಂದುವೇಳೆ ನಾವು ಇಲ್ಲಿಂದ ಓಡಿಹೋಗುವುದಾದರೆ ಈ ಮಹಾನುಭಾವನು ನಮ್ಮನ್ನು ಆಕರ್ಷಣೆಮಾಡುವ ಅಸ್ತ್ರಮಂತ್ರಗಳಿಂದ ಎಳೆದುಹಾಕುತ್ತಾನೆ. ಸ್ವರ್ಗ, ಭೂಮಿ, ಪಾತಾಳ ಈ ಮೂರು ಲೋಕಗಳಲ್ಲಿ ಎಲ್ಲಿಯೂ ಶ್ರೀವೀರಭದ್ರನ ಶಸ್ತ್ರಗಳಿಗೆ ಪ್ರವೇಶವು ದುರ್ಲಭವಲ್ಲ. ॥೪೯೭-೪೯೮॥

ತ್ರಿಶೂಲಾಯುಧಧಾರಿಯಾದ ಆ ರುದ್ರದೇವನಿಗೆ ಎಷ್ಟುಮಂದಿ ಗಣಗಳಿರು ವುವೋ ಅವುಗಳೆಲ್ಲಕ್ಕೂ ಇದೇ ರೀತಿಯಾದ ಶಕ್ತಿಯಿರುವುದರಲ್ಲಿ ಸಂದೇಹವೇ ಇಲ್ಲ. ॥೪೯೯॥

ಶ್ರೀಕಾಲಭೈರವಃ ಕಾಶ್ಯಾಂ ನಖಾಗ್ರೇಣೈವ ಲೀಲಯಾ ।
ಪುರಾ ಶಿರಾಂಸಿ ಚಿಚ್ಛೇದ ಚತ್ವಾರಿ ಬ್ರಹ್ಮಣೋಽದ್ಭುತಂ ॥೫೦೦॥

ಏತಾದೃಶಗಣಾಃ ಸಂತಿ ಕೋಟಿಶೋ ಮಂಗಲಾಪತೇಃ ।
ತೇಷಾಮಜೇಯಂ ನಾಸ್ತ್ಯೇವ ತ್ರಿಷು ಲೋಕೇಷು ವಸ್ತುತಃ ॥೫೦೧॥

ಏವಮುಕ್ತ್ವಾ ಸ್ಥಿತೋ ವಿಷ್ಣುರತಿಮ್ಲಾನಮುಖಾಂಬುಜಃ ।
ವೀರಭದ್ರೋಽಪಿ ಸಂಪ್ರಾಪ ತದೇವಾಧ್ವರಮಂಟಪಂ ॥೫೦೨॥

ವೀರಭದ್ರಃ ಶೂಲಪಾಣಿರ್ನಾನಾಗಣಸಮನ್ವಿತಃ ।
ದದರ್ಶ ವಿಷ್ಣುಪ್ರಮುಖಾನ್ಯಾಗಮಂಡಪಸಂಸ್ಥಿತಾನ್ ॥೫೦೩॥

ತಾನ್ದೃಷ್ಟ್ವಾ ವೀರಭದ್ರೋಽಭೂದ್ಭ್ರುಕುಟೀಕೃತಲೋಚನಃ ।
ಕೃತಾಂತ ಇವ ಪಾಪಿಷ್ಠಾನ್ ಮೃಗೇಂದ್ರ ಇವ ವಾರಣಾನ್ ॥೫೦೪॥

ಹಿಂದೆ ಶ್ರೀಕಾಲಭೈರವನೆಂಬ ಶಿವನ ಗಣಶ್ರೇಷ್ಠನು, ಕಾಶೀಪಟ್ಟಣದಲ್ಲಿ ಎಲ್ಲರಿಗೂ ಆಶ್ಚರ್ಯವಾಗುವಂತೆ, ಲೀಲೆಯಿಂದ ಬ್ರಹ್ಮನ ನಾಲ್ಕು ತಲೆಗಳನ್ನೂ ತನ್ನ ಉಗುರಿನ ತುದಿಯಿಂದಲೇ ಚಿಗುಟಿಹಾಕಿದನು. ಇಂತಹ ಪರಾಕ್ರಮವುಳ್ಳ ಗಣಗಳು ಆ ಶಿವನಲ್ಲಿ ಕೋಟ್ಯಂತರವಿರುವುವು. ಮೂರು ಲೋಕಗಳಲ್ಲಿ ಎಲ್ಲಿಯೂ ಅವರಿಂದ ಜಯಿಸಲಸಾಧ್ಯವಾಗಿರುವುದು ಯಾವುದೂ ತೋರುವುದಿಲ್ಲ.'' ॥೫೦೦-೫೦೧॥

ಈ ರೀತಿಯಾಗಿ ಆ ಮಹಾವಿಷ್ಣುವು ದಕ್ಷನಿಗೆ ಹೇಳಿ ತಾನು ತುಂಬಾ ಖಿನ್ನವಾದ ಮುಖವುಳ್ಳವನಾದನು. ಅಷ್ಟರಲ್ಲಿಯೇ ವೀರಭದ್ರನೂ ದಕ್ಷನ ಆ ಯಾಗ ಮಂಟಪಕ್ಕೆ ಬಂದು ಸೇರಿದನು. ॥೫೦೨॥

ಶೂಲಾಯುಧವನ್ನು ಧರಿಸಿದ್ದ ಆ ವೀರಭದ್ರನು ಅನೇಕ ರುದ್ರಗಣಗಳಿಂದ ಕೂಡಿದವನಾಗಿ, ದಕ್ಷನ ಯಾಗಮಂಟಪದಲ್ಲಿದ್ದ ವಿಷ್ಣುವೇ ಮೊದಲಾದ ದೇವತೆಗಳನ್ನೆಲ್ಲಾ ನೋಡಿದನು. ॥೫೦೩॥

ಆ ವೀರಭದ್ರನು ಕೋಪದಿಂದ ಹುಬ್ಬುಗಂಟುಹಾಕಿಕೊಂಡು, ಕೆಂಗಣ್ಣುಳ್ಳವನಾಗಿ, ಯಮನು ಪಾಪಮಾಡಿದವರನ್ನೂ, ಸಿಂಹವು ಆನೆಗಳನ್ನೂ, ನೋಡುವಂತೆ ಆ ದೇವತೆಗಳನ್ನು ನೋಡಿದನು. ॥೫೦೪॥

ತತೋ ವಿಷ್ಣ್ವಾದಯಃ ಸರ್ವೇ ದ್ರುತಮುತ್ಥಾಯ ಸಾದರಂ ।
ಪ್ರಣಾಮಾನ್ಕರ್ತುಮುದ್ಯುಕ್ತಾಸ್ತದಾ ಪ್ರಾಹ ಹರಾತ್ಮಜಃ ॥೫೦೫॥

॥ ವೀರಭದ್ರ ಉವಾಚ ॥

ರೇ ರೇ ಹರೇ ಮಹಾದೇವಶಪಥೋಲ್ಲಂಘನಂ ತ್ವಯಾ ।
ಕಥಮದ್ಯ ಕೃತಂ ದುಷ್ಟ ಗರ್ವಃ ಕಿಮುಭವತ್ತವ ॥೫೦೬॥

ತವ ಶ್ರೀರುದ್ರಶಪಥೋಲ್ಲಂಘನೇ ಶಕ್ತಿರಸ್ತಿ ಕಿಂ ।
ಕೋ ವಾ ತ್ವಮಸಿ ಕೋ ವಾ ತೇ ರಕ್ಷಕೋಽಸ್ತಿ ಜಗತ್ತ್ರಯೇ ॥೫೦೭॥

ವಕ್ಷೋ ವಿದಾರಯಿಷ್ಯಾಮಿ ತ್ರಿಶೂಲೇನ ಹರೇ ತವ ।
ಕಸ್ತ್ವನಾಸ್ತಿ ಸಮಾಯಾತು ರಕ್ಷಕೋಽದ್ಯ ಮಮಾಂತಿಕಂ ॥೫೦೮॥

ಪಾತಯಿಷ್ಯಾಮಿ ಭೂಪೃಷ್ಠೇ ಜ್ವಾಲಯಿಷ್ಯಾಮಿ ವಹ್ನಿನಾ ।
ದಗ್ಧಂ ಭವಂತಮಧುನಾ ಪೇಷಯಿಷ್ಯಾಮಿ ಸತ್ವರಂ ॥೫೦೯॥

ಆಗ ವಿಷ್ಣುವೇ ಮೊದಲಾದ ದೇವತೆಗಳೆಲ್ಲರೂ ಜಾಗ್ರತೆಯಾಗಿ ಎದ್ದು ಆದರ ದಿಂದ ನಮುಸ್ಕಾರಮಾಡಲು ಪ್ರಯತ್ನಿಸುತ್ತಿರುವುದನ್ನು ನೋಡಿ, ಆ ಪರಮೇಶ್ವರನ ತನೂಭವನಾದ ವೀರಭದ್ರನು ಅವರನ್ನು ಕುರಿತು ಹೀಗೆ ನುಡಿದನು. ॥೫೦೫॥

ಎಲೈ ನೀಚನಾದ ವಿಷ್ಣುವೇ, ಆ ಮಹಾದೇವನ ಮೇಲಿಟ್ಟಿದ್ದ ಶಪಥವನ್ನು ನೀನು ಹೇಗೆಮೀರಿದೆ? ಓ ದುಷ್ಟನೇ, ನಿನಗೆ ಇಷ್ಟೊಂದು ಗರ್ವವುಂಟಾಯಿತೇ? ॥೫೦೬॥

ನಿನಗೆ ಆ ರುದ್ರನ ಪ್ರತಿಜ್ಞೆಯನ್ನು ಮೀರುವ ಶಕ್ತಿಯಿದೆಯೇ? ನೀನು ಯಾರು? ಈ ಮೂರುಲೋಕಗಳಲ್ಲಿ ನಿನ್ನನ್ನು ಕಾಪಾಡುವವರಾರು? ಏ ವಿಷ್ಣುವೇ, ಈ ತ್ರಿಶೂಲದಿಂದ ನಿನ್ನ ಎದೆಯನ್ನು ಈಗಲೇ ಸೀಳಿಹಾಕುತ್ತೇನೆ. ನಿನ್ನನ್ನು ಕಾಪಾಡಲು ನನ್ನ ಸಮೀಪಕ್ಕೆ ಯಾರು ಬರುತ್ತಾರೋ ನೋಡೋಣ! ॥೫೦೭-೫೦೮॥

ನಿನ್ನನ್ನು ಭೂಮಿಯಮೇಲೆ ಕೆಡವಿ, ಬೆಂಕಿಯಿಂದ ಮೊದಲು ಸುಟ್ಟುಹಾಕುತ್ತೇನೆ. ಅರ್ಧ ಸುಟ್ಟುಹೋದ ನಿನ್ನನ್ನು ಜಾಗ್ರತೆ ಅರೆದುಬಿಡುತ್ತೇನೆ. ॥೫೦೯॥

ರೇ ರೇ ಹರೇ ದುರಾಚಾರ ತ್ವಮೇವಂ ಕರ್ತುಮಿಚ್ಛಸಿ ।
ಶ್ರೀರುದ್ರದೇವಮಾಹಾತ್ಮ್ಯಂ ಕಿಂ ನ ಜಾನಾಸಿ ಶಾಶ್ವತಂ ॥೫೧೦॥

ಇತ್ಯುಕ್ತ್ವಾ ಶೂಲಮಾದಾಯ ವೀರಭದ್ರೋsರುಣೇಕ್ಷಣಃ ।
ಹರಿಂ ವಿದಾರ್ಯ ಭೂಪೃಷ್ಠೇ ಪಾತಯಾಮಾಸ ಸತ್ವರಂ ॥೫೧೧॥

ತತೋ ದಕ್ಷಂ ಸಮಾಲೋಕ್ಯ ಕಶಾಭಿಃ ಕೋಟಿಶಸ್ತದಾ ।
ಸಂತಾಡ್ಯ ಪಾತಯಾಮಾಸ ವಿದಾರ್ಯಾಸ್ತ್ರೇಣ ತತ್ತನುಂ ॥೫೧೨॥

ತತೋ ವಿಧೀಂದ್ರಯಕ್ಷಾದೀನ್ವಿದಾರ್ಯ ಪೃಥಿವೀತಲೇ ।
ಪಾತಯಾಮಾಸ ಶೀಘ್ರೇಣ ಕ್ರೋಧಾಕ್ರಾಂತಾರುಣೇಕ್ಷಣಃ ॥೫೧೩॥

ವೀರಭದ್ರೋ ವಿದಾರ್ಯಾಪಿ ವಿಷ್ಣುಬ್ರಹ್ಮಪುರೋಗಮಾನ್ ।
ನಾಭೂಚ್ಛಾಂತೋ ಭವಕ್ರೋಧಃ ಫಣಿರಾಡಿವ ಮಂತ್ರತಃ ॥೫೧೪॥

ದಿಶೋ ವಿಲೋಕಯಾಮಾಸ ಕಃ ಕುತ್ರಾಸ್ತೀತ್ಯನುಕ್ಷಣಂ ।
ವೀರಭದ್ರೋ ಹತಾರಾತಿಃ ಕೇಸರೀವ ವನದ್ವಿಪಾನ್ ॥೫೧೫॥

ಎಲೈ ದುಷ್ಟಾಚಾರವುಳ್ಳ ವಿಷ್ಣುವೇ, ನೀನು ಹೀಗೆ ಮಾಡಲು ಪ್ರವರ್ತಿಸಿದೆಯೋ ? ಶಾಶ್ವತವಾದ ಆ ರುದ್ರದೇವನ ಮಹಿಮೆಯು ನಿನಗೆ ಗೊತ್ತೇ ಇಲ್ಲವೋ ?" ಎಂದು ಹೇಳಿ, ಕೋಪದಿಂದ ಕೆಂಪಾದ ಕಣ್ಣುಗಳುಳ್ಳವನಾಗಿ ಆ ವೀರಭದ್ರನು ವಿಷ್ಣುವನ್ನು ಸೀಳಿ ಕೂಡಲೇ ಭೂಮಿಯುಮೇಲೆ ಬೀಳಿಸಿದನು. ॥೫೧೦-೫೧೧॥

ಅನಂತರ, ಅಲ್ಲಿಯೇ ಇದ್ದ ದಕ್ಷನನ್ನು ನೋಡಿ, ಅವನನ್ನು ಅನೇಕಬಾರಿ ಚಾವಟಿಗಳಿಂದ ಹೊಡೆದು ಕೆಡವಿ, ಬಾಣದಿಂದ ಅವನ ಶರೀರವನ್ನು ಸೀಳಿಹಾಕಿದನು. ಆಮೇಲೆ ಬ್ರಹ್ಮ, ಇಂದ್ರ, ಕುಬೇರ ಇವರೇ ಮೊದಲಾದವರನ್ನು ಸೀಳಿಹಾಕಿ ಅವರನ್ನು ಭೂಮಿಯ ಮೇಲೆ ಕೆಡವಿ, ಕೋಪದಿಂದ ಕೆಂಪಾದ ಕಣ್ಣುಗಳುಳ್ಳ ಆ ವೀರಭದ್ರನು ಮೊರೆಯುತ್ತಿದ್ದನು. ॥೫೧೨-೫೧೩॥

ವೀರಭದ್ರನು ವಿಷ್ಣು, ಬ್ರಹ್ಮ ಮೊದಲಾದವರನ್ನೆಲ್ಲಾ ಸೀಳಿಹಾಕಿದರೂ ಶಾಂತನಾಗಲಿಲ್ಲ. ಆ ಪರಶಿವನ ಕೋಪವು ಮಂತ್ರವಶದಿಂದ ಕೆದರಿದ ಕೋಪವುಳ್ಳ ಸರ್ಪರಾಜನಂತೆ ಶಾಂತವಾಗದೇ, ಯಾರು ಎಲ್ಲಿರುವರು, ಎಂದು ಕ್ಷಣ ಕ್ಷಣಕ್ಕೂ

ಬಭೌ ಹತ್ವಾ ಹರೀಂದ್ರಾದೀನ್ಸಪತ್ನೀಕಾನ್ಗಣಾನ್ವಿತಃ ।
ತ್ರಿಪುರಾರಿರಿವಾರಾಧ್ಯೋ ಹತ್ವಾ ತ್ರಿಪುರಕಾನನಂ ॥೫೧೬॥

ರೇಜೇ ತದಾ ವೀರಭದ್ರೋ ತ್ರಿಶೂಲಂ ಭ್ರಾಮಯನ್ಕರೇ ।
ಕ್ರುದ್ಧಾರುಣಾಕ್ಷಃ ಸಂವೃತ್ತಃ ಪ್ರಜ್ವಲನ್ಪರ್ವತೋಪಮಃ ॥೫೧೭॥

ವೀರಭದ್ರಹತಾಸ್ತಸ್ಥುರ್ಭುವಿ ವಿಷ್ಣುಪುರೋಗಮಾಃ ।
ತೂರ್ಣಂ ವಜ್ರಹತಾಃ ಪೂರ್ವಂ ಪರ್ವತಾ ಇವ ಗರ್ವಿತಾಃ ॥೫೧೮॥

ಅನಾಯಾಸೇನ ಹತ್ವೈತಾನ್ವೀರಭದ್ರಸ್ತತೋಽಗ್ನಿನಾ ।
ಜ್ವಾಲಯಾಮಾಸ ವಿಷ್ಣ್ವಾದೀನ್ದೀಪ್ತಾಗ್ನಿಃ ಶಲಭಾ ಇವ ॥೫೧೯॥

ವೀರಭದ್ರಃ ಕ್ಷಣಾರ್ಧೇನ ದಗ್ಧ್ವಾ ವಿಷ್ಣುಪುರೋಗಮಾನ್ ।
ಅಟ್ಟಹಾಸಂ ತತಶ್ಚಕ್ರೇ ಪೂರಯನ್ನಗತಾಂ ಜಯಂ ॥೫೨೦॥

ದಿಕ್ಕುಗಳನ್ನೆಲ್ಲಾ ನೋಡತೊಡಗಿತು. ಹೀಗೆ ಶತ್ರುಗಳನ್ನು ಧ್ವಂಸಮಾಡಿದ ವೀರಭದ್ರನು, ಕಾಡಾನೆಗಳನ್ನೆಲ್ಲಾ ಕೊಂದುಹಾಕಿದ ಸಿಂಹದಂತೆ, ವಿಷ್ಣು ಬ್ರಹ್ಮಾದಿಗಳನ್ನೆಲ್ಲಾ ಅವರವರ ಪತ್ನಿಯರೊಡನೆ ಸಂಹಾರಮಾಡಿ, ತನ್ನ ಗಣಗಳೊಡಗೂಡಿ ಮೆರೆದನು. ॥೫೧೪-೫೧೫॥

ತ್ರಿಪುರಾಸುರಶತ್ರುವಾದ ಮಹೇಶ್ವರನಂತೆ ಪೂಜ್ಯನಾದ ಆ ವೀರಭದ್ರನು ಸಮಸ್ತ ಸುರರನ್ನು ಅವರ ಪಟ್ಟಣ, ಪರಿವಾರಗಳೊಡನೆ ಕೊಂದುಹಾಕಿದನು. ಕೈಯಲ್ಲಿ ವೇಗದಿಂದ ತ್ರಿಶೂಲವನ್ನು ತಿರುಗಿಸುತ್ತ ವಿರಾಜಿಸಿದನು. ಕೋಪದಿಂದ ಕೆಂಪಾದ ಕಣ್ಣುಗಳಿಂದ ಕೂಡಿದ ಅವನು ದೂರಕ್ಕೆ ಉರಿಯುತ್ತಿರುವ ಪರ್ವತದಂತೆ ಕಾಣುತ್ತಿದ್ದನು. ॥೫೧೬-೫೧೭॥

ಆ ವೀರಭದ್ರನಿಂದ ಕೊಲ್ಲಲ್ಪಟ್ಟ ವಿಷ್ಣುವೇ ಮೊದಲಾದವರೆಲ್ಲರೂ ಹಿಂದೆ (ಜಾಗ್ರತೆಯಾಗಿ) ಇಂದ್ರನ ವಜ್ರಾಯುಧದಿಂದ ಹೊಡೆಯಲ್ಪಟ್ಟ ಕೊಬ್ಬಿದ ಪರ್ವತಗಳಂತೆ ಭೂಮಿಯಮೇಲೆ ಕಾಣಿಸುತ್ತಿದ್ದರು. ಆ ವೀರಭದ್ರನು ಅನಾಯಾಸವಾಗಿ ವಿಷ್ಣ್ವಾದಿಗಳನ್ನೆಲ್ಲಾ ಕೊಂದು ಅನಂತರ ಅವರನ್ನು ಉರಿಯುವ ಬೆಂಕಿಯು ಶಲಭಗಳನ್ನು ಸುಡುವಂತೆ ಬೆಂಕಿಯಿಂದ ಸುಟ್ಟುಬಿಟ್ಟನು. ॥೫೧೮-೫೧೯॥

ಆ ವೀರಭದ್ರನು ಅರ್ಧಕ್ಷಣದಲ್ಲಿ ವಿಷ್ಣುವೇ ಮೊದಲಾದ ದೇವತೆಗಳನ್ನು

ಚಂಚರೀಕಸಮಾಕ್ರಾಂತಾ ತತೋ ನಂದನಸಂಭವಾ ।
ಪುಷ್ಪವೃಷ್ಟಿರಭೂದ್ಭೂಮ್ಯಾಂ ವೀರಭದ್ರೇ ಗಣಾನ್ವಿತೇ ॥೫೨೧॥

ವವುರ್ಗಂಧವಹಾಃ ಶೀತಾಃ ಸುಗಂಧಾಸ್ತದನಂತರಂ ।
ದೇವದುಂದುಭಯೋ ನೇದುಃ ಸ್ವಯಮೇವ ತತಃ ಪರಂ ॥೫೨೨॥

ದಿಶೋ ಬಭೂವುರ್ವಿಮಲಾ ಭಾನುಮಾನಪಿ ಸಂಬಭೌ ।
ಭೂತಾಃ ಪ್ರಶಾಂತಾಃ ಸರ್ವೇಽಪಿ ತತೋಽಭೂನ್ಮಂಗಲಂ ಭುವಿ॥೫೨೩॥

ವೀರಭದ್ರಃ ಪ್ರಚಲಿತಃ ಕೃತಕಾರ್ಯಸ್ತತಃ ಪರಂ ।
ವಿನಾಶಿತದೃಢಧ್ವಾಂತೋ ಭಾನುಮಾನಿವ ಸತ್ವರಂ ॥೫೨೪॥

ಉತ್ಫುಲ್ಲಪದ್ಮಪತ್ರಾಕ್ಷೋ ವೀರಭದ್ರೋ ಗಣಾನ್ವಿತಃ ।
ದದರ್ಶ ಪಾರ್ವತೀಕಾಂತಂ ನನಾಮ ಚ ಪುನಃ ಪುನಃ ॥೫೨೫॥

ಸುಟ್ಟು ಪ್ರಪಂಚಕ್ಕೆಲ್ಲಾ ತನ್ನ ವಿಜಯವನ್ನು ತೋರಿಸುತ್ತಾ ಅಟ್ಟಹಾಸದಿಂದ ಸಂಚರಿಸಿದನು. ||೫೨೦||

ನಂದನವನದಲ್ಲಿ ಬೆಳೆದಿರುವ ಹೂಗಿಡಗಳಿಂದ ದುಂಬಿಗಳೊಡಗೊಂಡ ಪುಷ್ಪವೃಷ್ಟಿಯು ಗಣಗಳೊಡನೆ ಭೂಮಿಯಲ್ಲಿ ನಿಂತಿದ್ದ ಆ ವೀರಭದ್ರನ ತಲೆಯ ಮೇಲೆ ಸುರಿಯಿತು. ||೫೨೧||

ಗಾಳಿಯು ಸುಗಂಧಭರಿತವಾಗಿಯೂ ತಂಪಾಗಿಯೂ ಬೀಸಿತು. ಆಮೇಲೆ ದೇವದುಂದುಭಿವಾದ್ಯಗಳು ತಾವಾಗಿಯೇ ಧ್ವನಿಮಾಡಿದುವು. ||೫೨೨||

ದಿಕ್ಕುಗಳೆಲ್ಲವೂ ನಿರ್ಮಲವಾದವು. ಸೂರ್ಯನೂ ಸಹ ಚೆನ್ನಾಗಿ ಪ್ರಕಾಶಿಸಿದನು. ಪಂಚಭೂತಗಳೆಲ್ಲವೂ ತಮ್ಮ ಕ್ರೌರ್ಯವನ್ನು ಬಿಟ್ಟು ಶಾಂತವಾದವು. ಭೂಮಿಯಲ್ಲೆಲ್ಲಾ ಅಲ್ಲಿಂದ ಮುಂದೆ ಮಂಗಳ ಧ್ವನಿಯೇ ಕೇಳಿಬರುತ್ತಿತ್ತು. ||೫೨೩||

ಆ ವೀರಭದ್ರನು ತಾನು ಬಂದ ಕೆಲಸವನ್ನು ಮುಗಿಸಿಕೊಂಡನಂತರ ಅಲ್ಲಿಂದ ಗಾಢವಾದ ಕತ್ತಲೆಯನ್ನು ಹೋಗಲಾಡಿಸಿದ ಸೂರ್ಯದೇವನಂತೆ ಜಾಗ್ರತೆಯಾಗಿ ಹೊರಟನು. ||೫೨೪||

ಚೆನ್ನಾಗಿ ಅರಳಿದ ತಾವರೆಯ ಎಸಳಿನಂತೆ ಕಣ್ಣುಗಳುಳ್ಳ ಆ ವೀರಭದ್ರನು ತನ್ನ ಗಣಗಳೊಡನೆ ಹೊರಟು ಕೈಲಾಸಪರ್ವತಕ್ಕೆ ಬಂದು ಅಲ್ಲಿ ಆ ಪಾರ್ವತೀರಮಣನನ್ನು ನೋಡಿ ಬಾರಿಬಾರಿಗೂ ಅವನಿಗೆ ನಮಸ್ಕಾರಮಾಡಿದನು. ||೫೨೫||

ಕೃತಕಾರ್ಯಂ ವೀರಭದ್ರಂ ದೃಷ್ಟ್ವಾ ಸಂತುಷ್ಟಮಾನಸಃ ।
ವೀರಂ ವೀರಗಣಾಧ್ಯಕ್ಷಂ ಚಕಾರ ಪರಮೇಶ್ವರಃ ॥೫೨೬॥

ತತೋ ಹಿಮಗಿರಿಂ ಪ್ರಾಂತೇ ಶಿವಪೂಜಾಪರಾಯಣಾನ್ ।
ದೃಷ್ಟ್ವಾ ಸ್ವಭಕ್ತಾನ್ಗೌರೀಶಸ್ತದ್ದೇಶಂ ಪ್ರಾಪ ಲೀಲಯಾ ॥೫೨೭॥

ತತಸ್ತತ್ಪೂಜಿತಃ ಶಂಭುಃ ಸ್ತುತಶ್ಚ ವಿವಿಧೈಃ ಸ್ತವೈಃ ।
ಸಂತುಷ್ಟೋಽಭೂನ್ಮಹಾದೇವಃ ಸಗಣೋ ಮಂಗಲಾನ್ವಿತಃ ॥೫೨೮॥

ತತಃ ಕಸ್ಮೈಚಿದೀಶಾನೋ ದದೌ ವಿಷ್ಣುತ್ವಮಾದರಾತ್ ।
ಸೃಷ್ಟ್ವಾ ಲಕ್ಷ್ಮೀಂ ತದಾ ತಸ್ಮೈ ದದೌ ಲಕ್ಷ್ಮೀಂ ಗುಣಾನ್ವಿತಾಂ ॥೫೨೯॥

ತತಃ ಕಸ್ಮೈಚಿದೀಶಾನೋ ಬ್ರಹ್ಮತ್ವಂ ಚ ತತೋ ದದೌ ।
ಸೃಷ್ಟ್ವಾ ಸರಸ್ವತೀಂ ತಸ್ಮೈ ದದಚ್ಚಾಂಬಾಮನೋಹರಃ ॥೫೩೦॥

ತಾನು ಹೇಳಿದ ಕೆಲಸವನ್ನು ಸಾಂಗವಾಗಿ ನಡೆಸಿಕೊಂಡು ಬಂದಿರುವ ಆ ವೀರಭದ್ರನನ್ನು ನೋಡಿ, ಅತ್ಯಂತ ಸಂತೋಷದಿಂದ ಪರಮೇಶ್ವರನು ಆ ವೀರನನ್ನು ತನ್ನ ವೀರರಾದ ಶಿವಗಣಗಳಿಗೆ ಆಧ್ಯಕ್ಷನನ್ನಾಗಿ ಮಾಡಿದನು. ॥೫೨೬॥

ಆಮೇಲೆ ಹಿಮಾಲಯಪರ್ವತದ ಪ್ರದೇಶಗಳಲ್ಲಿ ಶಿವಪೂಜಾಸಕ್ತರಾಗಿರುವ ತನ್ನ ಭಕ್ತರನ್ನು ನೋಡಿ, ಗೌರೀರಮಣನು ಕೈಲಾಸದಿಂದ ಹೊರಟು ಆ ಪ್ರದೇಶಕ್ಕೆ ಲೀಲೆಯಿಂದ ಹೋದನು. ॥೫೨೭॥

ಭಕ್ತವತ್ಸಲನಾದ ಶಂಭುವು ಅಲ್ಲಿ ತನ್ನ ಭಕ್ತರಿಂದ ಪೂಜೆಗೊಂಡು ನಾನಾವಿಧವಾದ ಸ್ತೋತ್ರಗಳಿಂದ ಹೊಗಳಲ್ಪಟ್ಟವನಾಗಿ, ಮಂಗಳಾದೇವಿಯೊಡನೆಯೂ ತನ್ನ ಗಣಗಳೊಡನೆಯೂ ಆನಂದಭರಿತನಾದನು. ॥೫೨೮॥

ಹೀಗೆ ಸಂತುಷ್ಟನಾದ ಆ ಮಹಾದೇವನು, ಆದರದಿಂದ ತನ್ನ ಒಬ್ಬ ಭಕ್ತನಿಗೆ ವಿಷ್ಣುಪದವಿಯನ್ನೂ, ಮತ್ತೊಬ್ಬನಿಗೆ ಬ್ರಹ್ಮಪದವಿಯನ್ನೂ ಕೊಟ್ಟು ಅವರಿಗೆ ಕ್ರಮವಾಗಿ ಲಕ್ಷ್ಮಿ ಮತ್ತು ಸರಸ್ವತೀದೇವಿಯರನ್ನು ಬೇರೆಯಾಗಿ ಸೃಷ್ಟಿಮಾಡಿಕೊಟ್ಟನು. ॥೫೨೯-೫೩೦॥

ದದಾವೀಶತ್ವಮೇಕಸ್ಮೈ ಗೌರೀಂ ಸೃಷ್ಟ್ವಾ ತತಃ ಪರಂ ।
ದದೌ ಕಸ್ಮೈಚಿದಿಂದ್ರತ್ವಂ ಶಚೀಂ ಸೃಷ್ಟ್ವಾ ತತಃ ಪರಂ ॥೫೩೧॥

ತಸ್ಮೈ ಶಚೀಂ ದದೌ ತಸ್ಮೈ ಸ್ವರ್ಗಲೋಕಂ ಚ ಶಂಕರಃ ।
ಗಂಧರ್ವಾದೀಂಸ್ತತಃ ಶಂಭುರ್ಯಥಾಪೂರ್ವಮಕಲ್ಪಯತ್ ॥೫೩೨॥

ತತಃ ಶಿವಾನ್ವಿತೋ ರೇಮೇ ಸ್ವತಂತ್ರಃ ಪರಮೇಶ್ವರಃ ।
ಅತ ಏವ ಯದಾ ಭ್ರಾಂತಾ ಗಣಯಂತಿ ನ ಶಂಕರಂ ॥೫೩೩॥

ತದಾ ನಶ್ಯಂತಿ ವಿಷ್ಣ್ವಾದ್ಯಾಃ ರುದ್ರರೌದ್ರಾಸ್ತ್ರವಹ್ನಿನಾ ।
ಕಾಮಃ ಕೃತಶಿವಾವಜ್ಞಃ ಪಪಾತ ನರಕೇ ಪುರಾ ॥೫೩೪॥

ಅತೋಽವಜ್ಞಾಂ ಮಹಾದೇವೇ ನ ಕುರ್ವಂತಿ ಹಿತೈಷಿಣಃ ।
ಮದನೇನ ಯದಾ ಪೂರ್ವಂ ಇತರಾಮರತುಲ್ಯತಾಂ ॥೫೩೫॥

ಆಮೇಲೆ ಆ ಅಂಬಿಕಾರಮಣನಾದ ಮಹಾದೇವನು ಮತ್ತೊಬ್ಬ ತನ್ನ ಭಕ್ತನಿಗೆ ಈಶ್ವರಪದವಿಯನ್ನು ಕೊಟ್ಟು ಅವನಿಗೆ ಹೊಸದಾಗಿ ಗೌರಿಯೊಬ್ಬಳನ್ನು ಸೃಷ್ಟಿಮಾಡಿಕೊಟ್ಟನು. ಹಾಗೆಯೇ ಇನ್ನೊಬ್ಬನಿಗೆ ಇಂದ್ರಪದವಿಯನ್ನೂ, ಹೊಸದಾಗಿ ನಿರ್ಮಿಸಿದ ಶಚೀದೇವಿಯನ್ನೂ ಕೊಟ್ಟು ಸ್ವರ್ಗಲೋಕಾಧಿಪತ್ಯವನ್ನೂ ಅವನಿಗೆ ವಹಿಸಿದನು. ॥೫೩೧॥

ಆಮೇಲೆ ಶಂಭುವು ಗಂಧರ್ವರೇ ಮೊದಲಾದವರನ್ನೆಲ್ಲಾ ಮೊದಲಿದ್ದಂತೆಯೇ ಸೃಷ್ಟಿಮಾಡಿದನು. ಹೀಗೆ ವೀರಭದ್ರನಿಂದ ಸಂಹರಿಸಲ್ಪಟ್ಟಿದ್ದ ದೇವತೆಗಳೇ ಮೊದಲಾದವರನ್ನೆಲ್ಲಾ ನಿರ್ಮಿಸಿದಮೇಲೆ ಸರ್ವಸ್ವತಂತ್ರನಾದ ಆ ಪರಮೇಶ್ವರನು ಮಂಗಳಾಂಗಿಯಾದ ಗಿರಿಜೆಯೊಡನೆ ಸ್ವೇಚ್ಛೆಯಾಗಿ ವಿಹರಿಸಿದನು. ಆದ್ದರಿಂದ ವಿಷ್ಣುವೇ ಮೊದಲಾದವರೆಲ್ಲರೂ ಹೀಗೆ ಭ್ರಾಂತರಾಗಿ ಆ ಲೋಕಶಂಕರನನ್ನು ಗಣನೆ ಮಾಡದೇ ಗರ್ವಿಷ್ಠರಾದಾಗ, ಈ ರೀತಿ ರುದ್ರನ ಭಯಂಕರವಾದ ಅಸ್ತ್ರಗಳ ಬೆಂಕಿಗೆ ತುತ್ತಾಗಿ ನಾಶವಾಗುವರು. ॥೫೩೨-೫೩೩॥

ಹಿಂದೆ ಮನ್ಮಥನು ಆ ಪರಶಿವನನ್ನು ತಿರಸ್ಕರಿಸಿ ನರಕದಲ್ಲಿ ಬಿದ್ದನಾದ್ದರಿಂದ ಹಿತವನ್ನು ಬಯಸುವವರು ಆ ಮಹಾದೇವನಲ್ಲಿ ಎಂದಿಗೂ ತಿರಸ್ಕಾರಭಾವನೆಯನ್ನಿಡುವುದಿಲ್ಲ. ॥೫೩೪॥

ವಿಧಾಯ ಶಂಕರೇ ಮೋಹಾತ್ಸ್ವನಾಶಃ ಪರಿಕಲ್ಪಿತಃ ।
ಇಂದ್ರಃ ಪೂರ್ವಂ ಸಮಾಹೂಯ ವರುಣಾದೀನುವಾಚ ಹ ॥೫೩೬॥

॥ ಇಂದ್ರ ಉವಾಚ ॥

ಕಾಶಕ್ತಿರಸ್ತಿ ಭವತಾಂ ತಾಂ ವದಂತ್ವಿತಿ ಸಾದರಂ ।
ಇತಿ ತದ್ವಚನಂ ಶ್ರುತ್ವಾ ಸ್ವಸ್ವಶಕ್ತಿಂ ಯಥಾರ್ಥತಃ ॥೫೩೭॥

ಸರ್ವೇ ನಿವೇದಯಾಮಾಸುರಿಂದ್ರಾಯೇಂದ್ರಹಿತಾರ್ಥಿನಃ ।
ತತೋ ಮನ್ಮಥಮಾಲೋಕ್ಯ ಸ್ವಸಭಾಮಧ್ಯವರ್ತಿನಂ ॥೫೩೮॥

ತವ ಕಾ ಶಕ್ತಿರಸ್ತೀತಿ ದೇವೇಂದ್ರಃ ಪ್ರಾಹ ಮನ್ಮಥಂ ।
ಶಚೀಪತೇ ಮದೀಯಾನಾಮಸ್ತ್ರಾಣಾಂ ಕಾಮಗಾಗತಿಃ ॥೫೩೯॥

ಮಚ್ಛಸ್ತ್ರಾಣಾಂ ಗತಿಃ ಕ್ವಾಪಿ ನೈವ ಪ್ರತಿಹತಾ ಧ್ರುವಂ ।
ಮಯಾ ಮದೀಯಶಸ್ತ್ರೇಣ ಮುನಯೋಽಪಿ ವಶೀಕೃತಾಃ ॥೫೪೦॥

ಹಿಂದೆ ಅಜ್ಞಾನದಿಂದ ಮನ್ಮಥನು, ಆ ಮಹಾದೇವನನ್ನು ಇತರ ಸಾಮಾನ್ಯ ದೇವತೆಗಳಿಗೆ ಸಮಾನನೆಂಬುದಾಗಿ ತಿಳಿದು ತಾನೇ ತನ್ನ ನಾಶಕ್ಕೆ ಗುರಿಯಾದನು. ಒಂದು ಸಂದರ್ಭದಲ್ಲಿ ದೇವೇಂದ್ರನು ವರುಣನೇ ಮೊದಲಾದವರನ್ನು ಕರೆಸಿ ಹೀಗೆ ನುಡಿದನು. ॥೫೩೫-೫೩೬॥

ಇಂದ್ರನು ವರುಣನೇ ಮೊದಲಾದ ದೇವತೆಗಳನ್ನು ಕುರಿತು, ನಿಮಗೆ ಇರುವ ಸಾಮರ್ಥ್ಯವೆಷ್ಟು ತಿಳಿಸಿರಿ, ಎಂದು ಆದರದಿಂದ ಕೇಳಲು ಆಗ ಇಂದ್ರನ ಹಿತವನ್ನು ಬಯಸುವ ಅವರೆಲ್ಲರೂ ದೇವೇಂದ್ರನ ಮಾತನ್ನು ಕೇಳಿ ತಮ್ಮ ತಮ್ಮ ನಿಜವಾದ ಶಕ್ತಿಯನ್ನು ಸರಿಯಾಗಿ ತಿಳಿಯಪಡಿಸಿದರು. ॥೫೩೭॥

ಅನಂತರ ದೇವೇಂದ್ರನು ಹಿಂದಿನಂತೆಯೇ ತನ್ನ ಸಭೆಯ ಮಧ್ಯದಲ್ಲಿರುವ ಮನ್ಮಥನನ್ನು ನೋಡಿ, ಎಲೈ ಮನ್ಮಥನೇ, ನಿನ್ನ ಶಕ್ತಿಯು ಪರಿಮಿತಿಯೆಷ್ಟೆಂದು ಪ್ರಶ್ನೆಮಾಡಿದನು. ॥೫೩೮॥

ಶಚೀದೇವಿಯ ಪತಿಯಾದ ದೇವೇಂದ್ರನೇ, ನನ್ನ ಅಸ್ತ್ರಗಳು ಸ್ವಚ್ಛಂದಚಾರಿಗಳು. ನಿಜವಾಗಿಯೂ ನನ್ನ ಶಸ್ತ್ರಗಳಿಗೆ ಎಲ್ಲಿಯೂ ತಡೆಯೇ ಇಲ್ಲವು. ನಾನು ಮತ್ತು ನನ್ನ ಶಸ್ತ್ರಗಳೂ ಸಹ ಅಧೀನವಾಗಿರುವರು. ॥೫೩೯-೫೪೦॥

ವಶೀಕೃತಾ ಮಯಾ ಸಿದ್ಧಾ ಮದೀಯೈಃ ಶಸ್ತ್ರಪಂಜರೈಃ ।
ಕುಸುಮಾನ್ಯೇವ ಶಸ್ತ್ರಾಣಿ ಮೃದುಲಾನಿ ತಥಾಪಿ ತೈಃ ॥೫೪೧॥

ಲೋಕತ್ರಯಜಯಂ ಕೃತ್ವಾ ವಸಾಮ್ಯಹಮಹರ್ನಿಶಂ ॥೫೪೨॥

ಪ್ರಯುಕ್ತಾನಿ ಮಹಾಸ್ತ್ರಾಣಿ ಶಿವಾನ್ಯೇಷ್ವಖಿಲೇಷ್ವಪಿ ।
ಯತೋ ಮದೀಯಶಸ್ತ್ರಾಣಾಂ ಲಕ್ಷ್ಯಭೂತಮಿದಂ ಜಗತ್ ॥೫೪೩॥

ನ ಪ್ರಯುಕ್ತಂ ಮಯಾ ಶಂಭೌ ಶಸ್ತ್ರಮಿಂದ್ರ ಕದಾಚನ ।
ಶಕ್ಯಂ ಪ್ರಯೋಕ್ತುಂ ಶಸ್ತ್ರಾಣಿ ಶಿವಾನ್ಯೇಷ್ವಿವ ಶಂಕರೇ ॥೫೪೪॥

ಇತ್ಯುಕ್ತಂ ತದ್ವಚಃ ಶ್ರುತ್ವಾ ಶಚೀಪತಿರುವಾಚ ತಂ ।
ಶೃಣು ಮದ್ವಚನಂ ಕಾಮ ಸಾವಧಾನಂ ಯದುಚ್ಯತೇ ॥೫೪೫॥

ಸಿದ್ಧಪುರುಷರೂ ಸಹ ನನ್ನ ಬಾಣಪರಂಪರೆಗಳಿಗೆ ವಶರಾಗಿರುವರು. ಮೃದುವಾದ ಹೂಗಳೇ ನನ್ನ ಬಾಣಗಳಾದರೂ ನಾನು ಅವುಗಳಿಂದಲೇ ಈ ಮೂಲೋಕವನ್ನೂ ಜಯಿಸಿ, ಹಗಲೂ ರಾತ್ರಿ ವಿಜಯಹೊಂದುತ್ತಾ ವಾಸಮಾಡುತ್ತಿರುವೆನು. ||೫೪೧-೫೪೨||

ಆ ಪರಶಿವನೊಬ್ಬನನ್ನು ಬಿಟ್ಟು ಉಳಿದವರೆಲ್ಲರ ಮೇಲೂ ನನ್ನ ಮಹಾಸ್ತ್ರಗಳು ಪ್ರಯೋಗಿಸಲ್ಪಟ್ಟಿವೆ. ಈ ಪ್ರಪಂಚವೆಲ್ಲವೂ ನನ್ನ ಬಾಣಗಳಿಗೆ ಲಕ್ಷ್ಯವಾಗಿದೆ. ದೇವೇಂದ್ರನೆ, ಆದರೆ ಯಾವಾಗಲೂ ಈ ನನ್ನ ಬಾಣಗಳನ್ನು ಆ ಪರಶಿವನ ಮೇಲೆ ಮಾತ್ರ ಪ್ರಯೋಗಿಸಿಲ್ಲ. ಅಯ್ಯ ದೇವೇಂದ್ರನೇ, ಅನ್ಯರಂತೆ ಆ ಶಿವನಮೇಲೆ ಬೇಕಾದರೂ ನಾನು ಹೆದರದೆ ಬಾಣಪ್ರಯೋಗಮಾಡಬಲ್ಲೆನು '' ಎಂದು ಮನ್ಮಥನು ದೇವೇಂದ್ರನಿಗೆ ಹೇಳಿದನು. ||೫೪೩-೫೪೪||

ಮನ್ಮಥನ ಈ ರೀತಿಯಾದ ನುಡಿಗಳನ್ನು ಕೇಳಿ, ಶಚೀಪತಿಯು, ಎಲೈ ಕಾಮನೇ, ನಾನು ಹೇಳುವ ಮಾತನ್ನು ಸಾವಧಾನವಾಗಿ ಲಾಲಿಸೆಂದು ಹೀಗೆ ನುಡಿದನು. ||೫೪೫||

|| ಇಂದ್ರ ಉವಾಚ ||

ಅವತೀರ್ಣೋಽಸ್ತಿ ಭೂಲೋಕೇ ಪ್ರಬಲಸ್ತಾರಕಾಸುರಃ ।
ತೇನೋಪದ್ರಾವಿತಾಃ ಸರ್ವೇ ಸುರಾ ಮತ್ಪ್ರಮುಖಾಃ ಸದಾ ||೫೪೬||

ಸಂಭುಕ್ತೋ ತಾರಕೋ ನಿತ್ಯಂ ಯಜ್ಞಭಾಗಾನ್ಯಥೇಚ್ಛಯಾ ।
ಅತ್ರಾಗತ್ಯ ಸ್ವರ್ಗಲೋಕೇ ಪೀಡಾಮಪಿ ಕರೋತಿ ಸಃ ||೫೪೭||

ಸ ಮಾಂ ನ ಗಣಯತ್ಯೇವ ವಿಷ್ಣುಮಪ್ಯತಿದುರ್ಜನಃ ।
ವಿಧಿಮಪ್ಯಮರಾನನ್ಯಾನಪಿ ಸರ್ವಾತ್ಮನಾ ಬಲೀ ||೫೪೮||

ಸ ಚಕಾರ ಪುರಾಯುದ್ಧಂ ವಿಷ್ಣುನಾ ಸಹ ವೀರ್ಯವಾನ್ ।
ಯುದ್ಧೇ ಪರಾಜಿತೋ ವಿಷ್ಣುಸ್ತೇನೈವಾಮಿತತೇಜಸಾ ||೫೪೯||

ತಸ್ಯ ಹುಂಕೃತಿಮಾತ್ರೇಣ ಚೂರ್ಣೋ ಭವತಿ ಪರ್ವತಃ ।
ವಿದಾರಿತಾ ಭವತ್ಯೇವ ಪೃಥಿವೀ ಚ ಸಕಾನನಾ ||೫೫೦||

ಅಯ್ಯಾ ಮನ್ಮಥನೇ, ಪ್ರಬಲಪರಾಕ್ರಮಿಯಾದ ತಾರಕಾಸುರನು ಭೂಲೋಕದಲ್ಲಿ ಅವತರಿಸಿ, ನನ್ನನ್ನೂ ಇತರ ದೇವತೆಗಳನ್ನೂ ಯಾವಾಗಲೂ ತೊಂದರೆಪಡಿಸುತ್ತಿರುವನು. ಆ ತಾರಕಾಸುರನು ಸ್ವೇಚ್ಛೆಯಿಂದ ಪ್ರತಿನಿತ್ಯವೂ ನಮಗೆ ಮಾನವರು ಕೊಡುತ್ತಿದ್ದ ಹವಿರ್ಭಾಗಗಳನ್ನೆಲ್ಲಾ ತಿಂದು ತೇಗುತ್ತಿರುವನು. ಹೀಗೆ ಮಾಡುತ್ತಿರುವುದಲ್ಲದೇ ಈ ಸ್ವರ್ಗಲೋಕಕ್ಕೂ ಬಂದು ಇಲ್ಲಿಯೂ ನಮ್ಮನ್ನು ಪೀಡಿಸುತ್ತಿರುವನು. ||೫೪೭||

ಅತ್ಯಂತ ಬಲಶಾಲಿಯೂ ಅತಿ ದುಷ್ಟನೂ ಆದ ಆ ತಾರಕಾಸುರನು, ವಿಷ್ಣುವನ್ನೂ, ಬ್ರಹ್ಮನೇ ಮೊದಲಾದ ದೇವತೆಗಳನ್ನೂ ಯಾವ ರೀತಿಯಿಂದಲೂ ಗಣನೆ ಮಾಡದೇ ಕೊಬ್ಬಿ ಮೆರೆಯುತ್ತಿರುವನು. ಪ್ರಬಲ ಪರಾಕ್ರಮಿಯಾದ ಆ ರಾಕ್ಷಸನು ಮೊದಲು ವಿಷ್ಣುವಿನೊಡನೆ ಯುದ್ಧಮಾಡಿದನು. ಆಗ ಅಪರಿಮಿತವಾದ ತೇಜಸ್ಸುಳ್ಳ ಆ ರಾಕ್ಷಸನಿಂದ ಯುದ್ಧದಲ್ಲಿ ವಿಷ್ಣುವೇ ಸೋತುಹೋದನು. ||೫೪೮-೫೪೯||

ಅವನ ಹುಂಕಾರ ಮಾತ್ರದಿಂದಲೇ ಪರ್ವತಗಳೂ, ಕಾಡುಗಳ ಸಮೇತವಾದ ಭೂಮಿಯೂ ಒಡೆದು ಪುಡಿಪುಡಿಯಾಗಿ ಹೋಗುತ್ತವೆ. ಅವನ ಕೋಪದ ನಿಟ್ಟುಸಿರು

ತತ್ಕೋಪಶ್ವಾಸಮಾತ್ರೇಣ ಮಹಾಪರ್ವತಸನ್ನಿಭಾಃ ।
ಕೋಟಿಶಃ ಪ್ರಬಲಾಃ ಸದ್ಯೋ ಭವಂತ್ಯಸುರಪುಂಗವಾಃ ॥೫೫೧॥

ತಸ್ಯ ಸಂಹಾರಕಃ ಕೋಽಪಿ ನಾಸ್ತ್ಯಸ್ಮಾಸು ತತಃ ಸದಾ ।
ಅಸ್ಮಾಭಿಃ ಪ್ರಾಪ್ಯತೇ ದುಃಖಂ ತತ್ಕೃತೋದ್ಯೋಗಸಂಭವಂ॥೫೫೨॥

ಏತದರ್ಥಂ ತು ಗುರುಣಾ ಬ್ರಹ್ಮಲೋಕೇ ಗತಂ ಪುರಾ ।
ಮಯಾ ನಿವೇದಿತಂ ದುಃಖಂ ಬ್ರಹ್ಮಣೇ ಕಾಮ ವೇದಿತಂ ॥೫೫೩॥

ತದಾಽತಿಖಿನ್ನವದನಂ ಮಾಂ ದೃಷ್ಟ್ವಂ ಸಗುರುಂ ವಿಧಿಃ ।
ಪ್ರಾಹ ಮಾಂ ವಿಧಿವದ್ಧ್ಯಾತ್ವಾ ಬಹುಕಾಲಂ ಪ್ರಯತ್ನತಃ ॥೫೫೪॥

॥ ಬ್ರಹ್ಮೋವಾಚ ॥

ತಾರಕಾಸುರಸಂಹರ್ತಾ ರುದ್ರೋ ರೌದ್ರೋಽಥವಾ ತಯೋಃ ।
ಯುತಸ್ತದ್ಧನನೇ ಶಕ್ತಿರ್ಯತಸ್ತಾವಮಿತೌಜಸೌ ॥೫೫೫॥

ನಿಂದ ದೊಡ್ಡ ದೊಡ್ಡ ಪರ್ವತಗಳಿಗೆ ಸಮಾನವಾದ ಕೋಟ್ಯಂತರ ರಾಕ್ಷಸಶ್ರೇಷ್ಠರು ಕೂಡಲೇ ಪ್ರಬಲರಾಗಿ ಹುಟ್ಟುವರು. ॥೫೫೦-೫೫೧॥

ನಮ್ಮಲ್ಲಿ ಆ ತಾರಕಾಸುರನನ್ನು ಕೊಲ್ಲುವ ಸಾಮರ್ಥ್ಯವುಳ್ಳವನಾರೂ ಇಲ್ಲದಿರುವುದರಿಂದ ನಮಗೆ ಯಾವಾಗಲೂ ಅವನ ಸಂಬಂಧದಿಂದ ಅತಿ ದುಃಖ ವುಂಟಾಗುತ್ತಿರುವುದು. ॥೫೫೨॥

ಈ ವಿಷಯಕ್ಕೋಸ್ಕರವೇ ನಾನು ಹಿಂದೆ ಬೃಹಸ್ಪತ್ಯಾಚಾರ್ಯರೊಡನೆ ಬ್ರಹ್ಮ ಲೋಕಕ್ಕೆ ಹೋಗಿ ನಮ್ಮ ಕಷ್ಟಸಮಾಚಾರವನ್ನೆಲ್ಲಾ ಆ ಬ್ರಹ್ಮದೇವನಿಗೆ ಅರಿಕೆ ಮಾಡಿದೆನು. ಅಯ್ಯ ಮನ್ಮಥನೇ, ಆಗ ಆ ಬ್ರಹ್ಮದೇವನು ತುಂಬಾ ಖಿನ್ನಮುಖ ವುಳ್ಳವನಾಗಿ ಗುರುವಿನೊಡನೆ ನಿಂತಿರುವ ನನ್ನನ್ನು ನೋಡಿ ಬ್ರಹ್ಮದೇವನು ವಿಧಿಪೂರ್ವಕವಾಗಿ ಬಹಳ ಹೊತ್ತು ಚೆನ್ನಾಗಿ ಯೋಚನೆಮಾಡಿ ನನ್ನನ್ನು ಕುರಿತು ಹೀಗೆ ನುಡಿದನು. ॥೫೫೩-೫೫೪॥

"ರುದ್ರ ಅಥವಾ ಅವನ ಮಗ, ಇವರಿಬ್ಬರಲ್ಲೊಬ್ಬರು ಆ ತಾರಕಾಸುರನನ್ನು ಸಂಹಾರಮಾಡಬಲ್ಲರು. ಅವರಿಬ್ಬರೂ ಅಪರಿಮಿತವಾದ ಪರಾಕ್ರಮವುಳ್ಳವರಾದುದ

ರುದ್ರರೌದ್ರಸಮೋ ನಾಸ್ತಿ ಸುರೇಷ್ವನ್ಯೇಷು ವಾ ತತಃ ।
ತಾರಕೋ ರುದ್ರರೌದ್ರಾನ್ಯತರೇಣೈವ ಮರಿಷ್ಯತಿ ॥೫೫೬॥

ತಾರಕಾಸುರಸಂಹರ್ತಾ ವಿಷ್ಣುಸ್ತು ನ ಭವಿಷ್ಯತಿ ।
ವಿಷ್ಣುನಾ ಹ್ಯಲ್ಪವೀರ್ಯೇಣ ಕಾರ್ಯಂ ತದ್ಧನನೇ ಕಥಂ ॥೫೫೭॥

ಶ್ರೀರುದ್ರಶಕ್ತಿಕೋಟ್ಯಂಶೋಽಪ್ಯುಪೇಂದ್ರೇ ನ ಯಾತಸ್ತತಃ ।
ತಸ್ಯ ತದ್ಧನನೇ ಶಕ್ತಿರ್ನ ಭವಿಷ್ಯತಿ ವಸ್ತುತಃ ॥೫೫೮॥

ಸ್ವತಂತ್ರಃ ಶ್ರೀಮಹಾರುದ್ರಸ್ತಸ್ಯ ರುದ್ರಸ್ಯ ವಸ್ತುತಃ ।
ಕರ್ತವ್ಯಂ ನಾಸ್ತಿ ಕುತ್ರಾಪಿ ನಿತ್ಯಾನಂದೋ ಯತಃ ಪ್ರಭುಃ ॥೫೫೯॥

ತದಿಚ್ಛಾಸ್ಮದದೃಷ್ಟೇನ ಯದಿ ಸಂಚಲಿತಾ ಭವೇತ್ ।
ತದಾ ಕರಿಷ್ಯತ್ಯಸ್ಮಾಕಂ ಕಾರ್ಯಂ ಸ ಗಿರಿಜಾಪತಿಃ ॥೫೬೦॥

ರಿಂದ ಆ ತಾರಕಾಸುರನನ್ನು ಕೊಲ್ಲುವ ಸಾಮರ್ಥ್ಯವು ಅವರಿಗೆ ಮಾತ್ರವಿರುವುದು. ಸಕಲ ದೇವತೆಗಳಲ್ಲಿ ಶ್ರೀರುದ್ರ ಮತ್ತು ಅವನ ಮಗ ಇವರಿಗೆ ಸರಿಸಮಾನರಾರೂ ಇಲ್ಲ. ಈ ದುಷ್ಟನಾದ ತಾರಕನು ಇವರಿಬ್ಬರಲ್ಲೊಬ್ಬನಿಂದಲೇ ನಿಜವಾಗಿಯೂ ಮರಣಹೊಂದುತ್ತಾನೆ. ॥೫೫೫-೫೫೬॥

ವಿಷ್ಣುವು ಆ ತಾರಕಾಸುರನನ್ನು ಸಂಹಾರಮಾಡಲಾರನು. ಅಲ್ಪ ಪರಾಕ್ರಮಿಯಾದ ಈ ವಿಷ್ಣುವು ಪ್ರಬಲಪರಾಕ್ರಮಿಯಾದ ಆ ತಾರಕಾಸುರನನ್ನು ಕೊಲ್ಲುವುದಕ್ಕೆ ಹೇಗೆ ಸಾಧ್ಯವಾದೀತು? ಆ ರುದ್ರದೇವನ ಕೋಟ್ಯಂಶದಲ್ಲಿ ಒಂದಂಶ ಶಕ್ತಿಯೂ ವಿಷ್ಣುವಿನಲ್ಲಿ ಇಲ್ಲವಾದ್ದರಿಂದ ಆ ತಾರಕನನ್ನು ಕೊಲ್ಲಲು ಅವನಿಗೆ ವಸ್ತುತಃ ಸಾಧ್ಯವೇ ಇಲ್ಲ. ॥೫೫೭-೫೫೮॥

ಮಹಾರುದ್ರದೇವನು ಸ್ವತಂತ್ರನು, ವಸ್ತುತಃ ಆ ದೇವನು ಮಾಡಬೇಕಾದುದೇನೂ ಇಲ್ಲವು. ಆ ಪ್ರಭುವು ನಿತ್ಯಾನಂದಸ್ವರೂಪನು. ಆ ಮಹಾದೇವನಿಗೆ ನಮ್ಮ ಅದೃಷ್ಟವಿಶೇಷದಿಂದ ತಾರಕವಧೆಯಲ್ಲಿ ಅಪೇಕ್ಷೆಯುಂಟಾದರೆ ಸಾಕು. ಆ ಗಿರಿಜಾರಮಣನು ನಮ್ಮ ಕೆಲಸವನ್ನು ಕೂಡಲೇ ಮಾಡಿಕೊಡುವನು ॥೫೫೯-೫೬೦॥

ತಾರಕಾಸುರಸಂಹರ್ತಾ ನ ರೌದ್ರೋ ಯಶ್ಚ ಕಶ್ಚನ ।
ತತ್ಸಂಪರ್ತಾ ಷಣ್ಮುಖಾದನ್ಯೋ ರೌದ್ರೋಽಪಿ ನ ಭವಿಷ್ಯತಿ ॥೫೬೧॥

ತಥಾ ಚ ಷಣ್ಮುಖೋತ್ಪತ್ತಿರ್ಭವಿಷ್ಯತಿ ಯಥಾ ತಥಾ ।
ಪ್ರಯತ್ನಶ್ಚಿಂತನೀಯೋಽಸ್ತಿ ಸರ್ವಥಾ ಸರ್ವಸಾಧನೈಃ ॥೫೬೨॥

ಷಣ್ಮುಖೋ ರುದ್ರವೀರ್ಯೇಣ ಭವಿಷ್ಯತಿ ಯದಾ ತದಾ ।
ಸ ಸಂಹರ್ತಾ ತಾರಕಸ್ಯ ಭವಿಷ್ಯತ್ಯೇವ ಸರ್ವಥಾ ॥೫೬೩॥

ಅಯಮರ್ಥೋ ಮಯಾ ಜ್ಞಾತೋ ಧ್ಯಾನೇನಾದ್ಯ ಮಯಾ ತತಃ ।
ವಿಶ್ವಾಸೋ ಮಯಿ ಕರ್ತವ್ಯೋ ನಾನ್ಯಥಾ ಮದ್ವಚೋ ಧ್ರುವಂ ॥೫೬೪॥

ಶಿವಯೋಃ ಸಂಗಮೇನೈವ ಶಿವವೀರ್ಯಸಮುದ್ಭವಃ ।
ಭವಿಷ್ಯತಿ ಮಹಾವೀರಃ ಷಣ್ಮುಖಸ್ತಾರಕಾಶನಿಃ ॥೫೬೫॥

ಶಿವಯೋಃ ಸಂಗಮಃ ಶೀಘ್ರಂ ಭವೇದ್ಯದಿ ತದಾ ತತಃ ।
ತಾರಕಾಸುರಸಂಹರ್ತಾ ಜಾತಸ್ತಂ ನಾಶಯಿಷ್ಯತಿ ॥೫೬೬॥

ಆ ತಾರಕಾಸುರನನ್ನು ಸಂಹಾರಮಾಡಲು ಮಹಾ ರುದ್ರನ ಮಕ್ಕಳಲ್ಲಿ ಷಣ್ಮುಖಸ್ವಾಮಿಯೊಬ್ಬನೇ ಹೊರತು, ಬೇರೆ ಯಾರಿಂದಲೂ ಸಾಧ್ಯವಾಗಲಾರದು. ಅಯ್ಯಾ ದೇವೇಂದ್ರನೇ, ಆದ್ದರಿಂದ ಈಗ ನೀನು ಎಲ್ಲಾ ಸಾಧನಗಳನ್ನೂ ನಡೆಸಿ, ಆ ಷಣ್ಮುಖನು ಹುಟ್ಟುವಂತೆ ಪ್ರಯತ್ನಮಾಡಬೇಕಾಗಿದೆ. ||೫೬೧-೫೬೨||

ಶ್ರೀರುದ್ರದೇವನ ವೀರ್ಯದಿಂದ ಷಣ್ಮುಖಸ್ವಾಮಿಯು ಹುಟ್ಟಿದಾಗ ಆ ತಾರಕಾಸುರನ ಸಂಹಾರವಾಗುವುದು. ಆ ಷಣ್ಮುಖನೇ ತಾರಕನನ್ನು ಸಂಹಾರಮಾಡುತ್ತಾನೆ. ಎಲೈ ಇಂದ್ರನೇ, ನಾನು ಪ್ರಯತ್ನಪಟ್ಟು ಇಷ್ಟು ಹೊತ್ತು ಆಲೋಚಿಸಿ ಈ ಸಮಾಚಾರವನ್ನು ತಿಳಿದು ನಿನಗೆ ಹೇಳಿರುವೆನು. ನನ್ನ ಮಾತಿನಲ್ಲಿ ನಂಬಿಕೆಯಿಡು. ಎಂದಿಗೂ ನನ್ನ ಮಾತು ಹುಸಿಯಾಗದೆಂದು ತಿಳಿಯುವನಾಗು. ||೫೬೩-೫೬೪||

ಶಿವ ಪಾರ್ವತಿಯರ ಪರಸ್ಪರ ಸಮಾಗಮದಿಂದಲೇ ಆ ಶಿವನ ವೀರ್ಯವು ಪ್ರಕಾಶವಾಗಬೇಕು. ಆಗಲೇ ಅವನ ವೀರ್ಯದಿಂದ ತಾರಕನೆಂಬ ರಾಕ್ಷಸನಿಗೆ ವಜ್ರಾಯುಧಕ್ಕೆ ಸಮಾನನಾದ ಮಹಾವೀರ ಷಣ್ಮುಖಸ್ವಾಮಿಯು ಹುಟ್ಟುತ್ತಾನೆ. ಎಲೈ ದೇವೇಂದ್ರನೇ, ಆದ್ದರಿಂದ ಆದಷ್ಟು ಜಾಗ್ರತೆ ಆ ಪಾರ್ವತೀಪರಮೇಶ್ವರರಿಗೆ ಸಮಾಗ

ಇತಿ ತದ್ವಚನಂ ಶ್ರುತ್ವಾ ಬ್ರಹ್ಮಣಾ ಪ್ರೇಷಿತೋಽಧುನಾ ।
ಸಮಾಗತೋಽಸ್ಮಿ ಕಾಮಾತಸ್ತತ್ಕಾರ್ಯಂ ಕುರು ಸಾದರಂ ॥೫೬೭॥

ಇತಿ ತದ್ವಚನಂ ಶ್ರುತ್ವಾ ಮನ್ಮಥೋ ಮದಮೋಹಿತಃ ।
ಪ್ರಾಹ ಪ್ರಗಲ್ಭವಚನಂ ಸ್ವವಿನಾಶೈಕಸಾಧನಂ ॥೫೬೮॥

॥ ಮನ್ಮಥ ಉವಾಚ ॥

ಮದೀಯಪುಷ್ಪಶಸ್ತ್ರಾಣಿ ಯೋಗಿನಾಮಪಿ ಮಾನಸಂ ।
ಮೋಹಯಿಷ್ಯಂತ್ಯತಸ್ತಾವನ್ಮೋಹಯಿಷ್ಯಂತಿ ಶಂಕರಂ ॥೫೬೯॥

ಯಥಾ ಮದೀಯಶಸ್ತ್ರೇಣ ಮೋಹಿತಾ ಭವದಾದಯಃ ।
ಭವಿಷ್ಯತಿ ತಥೇಶೋಽಪಿ ಭವಂತ ಇವ ಮೋಹಿತಃ ॥೫೭೦॥

ಮವಾದರೆ ಆಗ ಆ ತಾರಕಾಸುರನನ್ನು ಸಂಹಾರಮಾಡುವ ವೀರನು ಹುಟ್ಟಿ, ಅವನನ್ನು ನಾಶಮಾಡುತ್ತಾನೆ'' ಹೀಗೆಂದು ಬ್ರಹ್ಮದೇವನು ನನಗೆ ಹೇಳಿದನು. ॥೫೬೫-೫೬೬॥

ಹೀಗೆ ಆ ಮಾತುಗಳನ್ನು ಕೇಳಿ ಆ ಬ್ರಹ್ಮದೇವನ ಸಮೀಪದಿಂದ ನಾನು ಇಲ್ಲಿಗೆ ಬಂದಿರುವೆನು. ಅಯ್ಯ ಮನ್ಮಥನೇ, ಆದ್ದರಿಂದ ನೀನು ಈ ಕಾರ್ಯವನ್ನು ಆದರದಿಂದ ನಡೆಸಿಕೊಡುವನಾಗು ಎಂದು ಇಂದ್ರನು ಮನ್ಮಥನನ್ನು ಪ್ರಾರ್ಥಿಸಿದನು. ॥೫೬೭॥

ಆ ಇಂದ್ರನ ಮಾತುಗಳನ್ನು ಕೇಳಿ ಮನ್ಮಥನು ಮದದಿಂದ ಕೊಬ್ಬಿದವನಾಗಿ, ತನ್ನ ನಾಶಕ್ಕೇ ಕಾರಣವಾದ ಕೆಲವು ಪ್ರೌಢವಚನಗಳನ್ನು ಈರೀತಿ ಇಂದ್ರನಲ್ಲಿ ಹೇಳಿಕೊಂಡನು. ॥೫೬೮॥

" ನನ್ನ ಈ ಹೂಬಾಣಗಳು ಯೋಗಿಗಳ ಮನಸ್ಸನ್ನು ಸಹ ಕಲಕಿ ಅವರನ್ನು ಮೋಹಗೊಳಿಸುತ್ತವೆಯಾದುದರಿಂದ ಆ ಶಂಕರನನ್ನೂ ಮೋಹಗೊಳಿಸುವುವು. ನನ್ನ ಬಾಣಗಳಿಂದ ನೀವೆಲ್ಲರೂ ಮೋಹಗೊಂಡಂತೆಯೇ ಆ ಜಗದೀಶ್ವರನಾದ ಶಿವನೂ ಮೋಹಿತನಾಗುವನು. ಇಂದ್ರನೇ, ಈ ವಿಷಯದಲ್ಲಿ ಹೆದರಬೇಡ. ॥೫೬೯-೫೭೦॥

ಭವತು ಶ್ರೀಮಹಾದೇವೋ ವಸ್ತುತಃ ಸುರಪುಂಗವಃ ।
ಮದಸ್ತ್ರಲಕ್ಷ್ಯಭಾವೇನ ಭವದ್ಭಿಃ ಸ ಸಮೋ ಧ್ರುವಂ ॥೫೭೧॥

ಇತಿ ತದ್ವಚನಂ ಶ್ರುತ್ವಾ ಸಂತೋಷ್ಯ ಕುಸುಮಾಯುಧಂ ।
ಬಾಣಪ್ರಯೋಗಂ ಗೌರೀಶೇ ಕುರುಷ್ವೇತ್ಯಾಹ ಸಾದರಂ ॥೫೭೨॥

ಇತಿ ತದ್ವಚನಂ ಶ್ರುತ್ವಾ ಮನ್ಮಥಃ ಪರಮೇಶ್ವರೇ ।
ಬಾಣಂ ಪ್ರಯೋಕ್ತುಮುದ್ಯೋಗಂ ಚಕಾರ ಭ್ರಾಂತಮಾನಸಃ॥೫೭೩॥

ತತಃ ಸಮಾಗತಃ ಶೀಘ್ರಂ ಜ್ವಾಲಾಮಾಲಾಸಮಾಕುಲಃ ।
ಫಾಲಾಕ್ಷಫಾಲಸಂಭೂತಶ್ಚಿತ್ರಭಾನುರ್ಭಯಂಕರಃ ॥೫೭೪॥

ಸ ಪಾವಕಃ ಸಮಾಗತ್ಯ ಜಜ್ವಾಲ ಕುಸುಮಾಯುಧಂ ।
ಭಸ್ಮಾವಶೇಷಂ ಕೃತ್ವೈವ ಪ್ರಶಾಂತಸ್ತದನಂತರಂ ॥೫೭೫॥

ಆ ಮಹಾದೇವನು ನಿಜವಾಗಿಯೂ ದೇವತೋತ್ತಮನೇನೋ ಹೌದು. ಆದರೆ ನನ್ನ ಬಾಣಕ್ಕೆ ಗುರಿಯಾಗುವ ವಿಷಯದಲ್ಲಿ ಅವನೂ ನಿಮ್ಮಗಳಿಗೆ ಸರಿ ಸಮಾನನೇ ಆಗಿರುವನೆಂದು ತಿಳಿಯಿರಿ.” ॥೫೭೧॥

ಈರೀತಿಯಾಗಿ ನುಡಿದ ಮನ್ಮಥನ ಮಾತುಗಳನ್ನು ಕೇಳಿ, ಆ ದೇವೇಂದ್ರನು ಪುಷ್ಪಬಾಣನಾದ ಮನ್ಮಥನನ್ನು ಸಂತೋಷಪಡಿಸಿ, ಆ ಗೌರೀರಮಣನಲ್ಲಿ ಬಾಣ ಪ್ರಯೋಗವನ್ನು ಮಾಡೆಂದು ಆದರದಿಂದ ಅವನಲ್ಲಿ ಮತ್ತೂ ಹೇಳಿಕೊಂಡನು. ॥೫೭೨॥

ಆ ಮನ್ಮಥನು ದೇವೇಂದ್ರನ ಮಾತುಗಳನ್ನು ಕೇಳಿ, ಭ್ರಾಂತಚಿತ್ತನೆನಿಸಿ, ಪರಮೇಶ್ವರನಲ್ಲಿ ಬಾಣಪ್ರಯೋಗಮಾಡಲುದ್ಯುಕ್ತನಾದನು. ॥೫೭೩॥

ಆ ಮನ್ಮಥನು ಮಹೇಶ್ವರನಮೇಲೆ ಉದ್ಧತನಾಗಿ ಬಾಣಪ್ರಯೋಗಮಾಡಲು ಕೂಡಲೇ ಮಹಾದೇವನ ಹಣೆಗಣ್ಣಿನಿಂದ ಭಯಂಕರವಾದ ಅಗ್ನಿಯು ಜ್ವಾಲೆಗಳ ಸಮೂಹವನ್ನೇ ಕಾರುತ್ತಾ ಜಾಗ್ರತೆಯಾಗಿ ಹೊರಹೊರಟು, ಆ ಕುಸುಮ ಬಾಣನಾದ ಮನ್ಮಥನನ್ನು ಸುಟ್ಟು ಬೂದಿಮಾಡಿದ ನಂತರ ತಾನಾಗಿ ಶಾಂತವಾಯಿತು. ॥೫೭೪-೫೭೫॥

ಸ ಮನ್ಮಥಸ್ತತೋ ನೀತಸ್ತಥೈವ ಯಮಕಿಂಕರೈಃ ।
ಪಾತಿತಶ್ಚಾತಿಘೋರೇಷು ನರಕೇಷು ಪ್ರಯತ್ನತಃ ॥೫೭೬॥

ಅತೋಽನನ್ಯಸಮಂ ಶಂಭುಮನ್ಯತುಲ್ಯತಯಾ ಭ್ರಮಾತ್ ।
ಯೇಽಭಿಜಾನಂತಿ ದುರ್ವೃತ್ತಾಸ್ತೇಷಾಮೇತಾದೃಶೀ ಗತಿಃ ॥೫೭೭॥

ಸಂತ್ಯಾಜ್ಯ ಮೋಹಮಖಿಲಮತ ಏವ ಭವಾನಪಿ ।
ಸರ್ವದೇವೋತ್ತಮತ್ವೇನ ಜಾನೀಹಿ ಗಿರಿಜಾಪತಿಂ ॥೫೭೮॥

ಮಹಾದೇವೋಽಖಿಲಾರಾಧ್ಯಃ ಸರ್ವದೇವಶಿಖಾಮಣಿಃ ।
ನ ತತೋಽಸ್ತ್ಯಧಿಕೋ ವಿಪ್ರ ನ ತತ್ತುಲ್ಯೋಽಥವಾ ಧ್ರುವಂ ॥೫೭೯॥

ಶಿವೇ ತ್ವಯಾನ್ಯತುಲ್ಯತ್ವಮುಕ್ತ್ವಮೋಹವಶಾತ್ತತಃ ।
ತ್ವಯಾ ತದುಕ್ತಿಮಾತ್ರೇಣ ಪಾತಕಂ ಮಹದಾರ್ಜಿತಂ ॥೫೮೦॥

ಅತಸ್ತತ್ಪಾಪಶಾಂತ್ಯರ್ಥಂ ಶ್ರೀಶೈಲಸ್ಯ ಪ್ರದಕ್ಷಿಣಂ ।
ಸಹಸ್ರವಾರಂ ಯತ್ನೇನ ಕುರು ಮೌನಪುರಸ್ಸರಂ ॥೫೮೧॥

ಹೀಗೆ ಭಸ್ಮವಾದ ನಂತರ ಆ ಮನ್ಮಥನನ್ನು ಯಮಭಟರು ಎಳೆದುಕೊಂಡು ಹೋಗಿ, ತುಂಬಾ ಭಯಂಕರವಾದ ನರಕಗಳಲ್ಲಿ ಬಲಾತ್ಕಾರವಾಗಿ ತಳ್ಳಿದರು. ॥೫೭೬॥

ಆದುದರಿಂದ ಪರಶಂಭುವನ್ನು ಇತರ ಸಾಮಾನ್ಯದೇವತೆಗಳಿಗೆ ಸಮಾನವೆಂದು ಅಜ್ಞಾನದಿಂದ ತಿಳಿಯುವ ದುಷ್ಟರಿಗೆ ಇದೇ ರೀತಿಯಾದ ಗತಿಯುಂಟಾಗುವುದೆಂದು ತಿಳಿಯಿರಿ. ॥೫೭೭॥

ಅಯ್ಯಾ ಬ್ರಾಹ್ಮಣನೇ, ಆದ್ದರಿಂದ ಈ ಅಜ್ಞಾನವನ್ನೆಲ್ಲಾ ಬಿಟ್ಟು ನೀನೂ ಕೂಡ ಆ ಗಿರಿಜಾರಮಣನನ್ನು ಎಲ್ಲ ದೇವತೆಗಳಲ್ಲಿಯೂ ಉತ್ತಮನೆಂದು ತಿಳಿ. ಆ ಮಹಾದೇವನು ಸಕಲ ದೇವತೆಗಳಿಂದಲೂ ಪೂಜ್ಯನಾಗಿರುವನು. ಎಲ್ಲಾ ದೇವತೆಗಳಿಗೂ ಶಿಖಾಮಣಿಯೆನಿಸಿರುವವನೂ ಅವನೇ. ಅವನಿಗಿಂತ ಶ್ರೇಷ್ಠನೂ ಅಥವಾ ಅವನಿಗೆ ಸಮಾನನೂ ನಿಶ್ಚಯವಾಗಿ ಯಾರೂ ಇಲ್ಲವೇ ಇಲ್ಲವು. ॥೫೭೮-೫೭೯॥

ಓ ಬ್ರಾಹ್ಮಣನೇ, ನೀನು ಅಜ್ಞಾನದಿಂದ ಆ ಪರಶಿವನನ್ನು ಬೇರೆ ದೇವತೆಗಳಿಗೆ ಸಮಾನನೆಂದು ಹೇಳಿರುವೆ. ಹಾಗೆ ಹೇಳಿದ ಮಾತ್ರದಿಂದಲೇ ನಿನಗೆ

ತತ್ಪ್ರದಕ್ಷಿಣಕಾಲೇ ತು ರುದ್ರಮಾವರ್ತಯಾದರಾತ್ ।
ರುದ್ರಾಧ್ಯಾಯಜಪಾದೇವ ಯತೋ ನಶ್ಯತಿ ಪಾತಕಂ ॥೫೮೨॥

ಉದ್ಧೂಲನಂ ತ್ರಿಪುಂಡ್ರಂ ಚ ತಥಾ ರುದ್ರಾಕ್ಷಧಾರಣಂ ।
ಕುರು ಯತ್ನೇನ ತನ್ನಿತ್ಯಂ ಮನಸಾಪಿ ನ ಲಂಘಯ ॥೫೮೩॥

ಯಸ್ಮಾದುದ್ಧೂಲನಾದೀನಿ ಶ್ರುತ್ಯುಕ್ತಾನಿ ತತೋ ದ್ವಿಜ ।
ತದುಲ್ಲಂಘನಮಾತ್ರೇಣ ಪಾತಿತ್ಯಂ ತೇ ಭವಿಷ್ಯತಿ ॥೫೮೪॥

ಯಸ್ಮಾದುದ್ಧೂಲನಾದೀನಿ ದ್ವಿಜೈಃ ಕಾರ್ಯಾಣಿ ಸಂತತಂ ।
ತಸ್ಮಾತ್ತ್ವಯಾಽಪಿ ಯತ್ನೇನ ತಾನಿ ಕಾರ್ಯಾಣಿ ಸಂತತಂ ॥೫೮೫॥

ಮಾ ಪಿಬೋದ್ಧೂಲನಂ ತ್ಯಕ್ತ್ವಾ ಜಲಮಲ್ಪಮಪಿ ದ್ವಿಜ ।
ತ್ರಿಪುಂಡ್ರಧಾರಣಂ ತ್ಯಕ್ತ್ವಾ ಮಾಪಿಬಾಪಸ್ತಥಾ ದ್ವಿಜ ॥೫೮೬॥

ತುಂಬಾ ಪಾಪಸಂಘಟನೆಯಾಗಿದೆ. ಈ ಪಾಪವು ಶಾಂತವಾಗುವುದಕ್ಕೋಸ್ಕರ ನೀನು ಮೌನದಿಂದ ಸಾವಿರ ಸಾರಿ ಈ ಶ್ರೀಶೈಲವನ್ನು ಪ್ರದಕ್ಷಿಣೆಮಾಡು. ॥೫೮೦-೫೮೧॥

ಶ್ರೀಶೈಲಪರ್ವತವನ್ನು ಪ್ರದಕ್ಷಿಣೆಮಾಡುವಾಗ ಆದರದಿಂದ ರುದ್ರಮಂತ್ರವನ್ನು ಆವರ್ತಿಮಾಡುವನಾಗು. ರುದ್ರಾಧ್ಯಾಯಮಂತ್ರವನ್ನು ಜಪಮಾಡುವುದರಿಂದ ಸಮಸ್ತ ಪಾಪವೂ ನಾಶವಾಗುವುದು. ಭಸ್ಮೋದ್ಧೂಳನ, ಭಸ್ಮತ್ರಿಪುಂಡ್ರಧಾರಣ, ರುದ್ರಾಕ್ಷಧಾರಣ ಇವುಗಳನ್ನು ಪ್ರಯತ್ನಪೂರ್ವಕವಾಗಿ ನಿತ್ಯವೂ ಮನಃಪೂರ್ತಿಯಿಂದ ತಪ್ಪದೇ ಆಚರಿಸುವನಾಗು. ॥೫೮೨-೫೮೩॥

ಎಲೈ ಬ್ರಾಹ್ಮಣನೇ, ವೇದೋಕ್ತವಾದ ಭಸ್ಮೋದ್ಧೂಳನವೇ ಮೊದಲಾದವುಗಳನ್ನು ಮೀರುವುದರಿಂದ ವಿಶೇಷ ಪಾಪವುಂಟಾಗುವುದು. ಬ್ರಾಹ್ಮಣರು ಈ ಉದ್ಧೂಳನವೇ ಮೊದಲಾದವುಗಳನ್ನು ಅನವರತವೂ ತಪ್ಪದೇ ಮಾಡಬೇಕಾಗಿರುವುದರಿಂದ ಅವಶ್ಯವಾಗಿ ಯಾವಾಗಲೂ ಭಸ್ಮೋದ್ಧೂಳನವನ್ನು ಮಾಡಲೇಬೇಕು. ॥೫೮೪-೫೮೫॥

ಅಯ್ಯಾ ವಿಪ್ರನೇ, ಭಸ್ಮೋದ್ಧೂಳನಮಾಡಿಕೊಳ್ಳದೇ ಸ್ವಲ್ಪ ನೀರನ್ನೂ ನೀನು ಕುಡಿಯಬೇಡ; ತ್ರಿಪುಂಡ್ರವನ್ನು ಧರಿಸಿಕೊಳ್ಳದೇ ನೀರನ್ನೂ ಕುಡಿಯಬಾರದು. ॥೫೮೬॥

ರುದ್ರಾಕ್ಷಧಾರಣಂ ತ್ಯಕ್ತ್ವಾ ಮಾಪಿಬಾಪಸ್ತಥಾ ದ್ವಿಜ ।
ಶಿವಲಿಂಗಾರ್ಚನಂ ತ್ಯಕ್ತ್ವಾ ಮಾಪಿಬಾಪಸ್ತಥಾ ದ್ವಿಜ ॥೫೮೭॥

ಪಂಚಾಕ್ಷರಜಪಂ ತ್ಯಕ್ತ್ವಾ ಮಾಪಿಬಾಪಸ್ತಥಾ ದ್ವಿಜ ।
ರುದ್ರಾಧ್ಯಾಯಜಪಂ ತ್ಯಕ್ತ್ವಾ ಮಾಪಿಬಾಪಸ್ತಥಾ ದ್ವಿಜ ॥೫೮೮॥

ಅಯಂ ಧರ್ಮೋಪದೇಶಸ್ತು ಯಃ ಕೃತೋಽಸ್ತಿ ಮಯಾ ದ್ವಿಜ ।
ಸೋಽಯಂ ಮೋಕ್ಷಪ್ರದಃ ಸತ್ಯಂ ಸತ್ಯಂ ಸತ್ಯಂ ನ ಸಂಶಯಃ ॥೫೮೯॥

ಶಿವಂ ದೇವೋತ್ತಮಂ ಮತ್ವಾ ಯಜಾದ್ಯಪ್ರಭೃತಿ ದ್ವಿಜ ।
ಶಿವಾನ್ಯಸುರತುಲ್ಯತ್ವಂ ಶಿವೇ ಸ್ವಪ್ನೇಽಪಿ ಮಾ ವದ ॥೫೯೦॥

ಶಿವಾನ್ಯಸುರತುಲ್ಯತ್ವಂ ಯೇ ವದಂತಿ ಸದಾಶಿವೇ ।
ತೇಷಾಂ ವಂಶಕ್ಷಯಃ ಶೀಘ್ರಂ ಭವಿಷ್ಯತಿ ನ ಸಂಶಯಃ ॥೫೯೧॥

ಶಿವಾನ್ಯಸುರತುಲ್ಯತ್ವಂ ಯೇ ವದಂತಿ ಸದಾಶಿವೇ ।
ತೇ ಪತಿಷ್ಯಂತಿ ನರಕೇ ಯಾವದಾಚಂದ್ರತಾರಕಂ ॥೫೯೨॥

ಬ್ರಾಹ್ಮಣನೇ, ರುದ್ರಾಕ್ಷಧಾರಣೆ, ಶಿವಲಿಂಗಾರ್ಚನೆ, ಶಿವಪಂಚಾಕ್ಷರೀಜಪ, ರುದ್ರಾಧ್ಯಾಯಜಪ ಇವುಗಳನ್ನು ಮಾಡದೇ ನೀನು ಎಂದೂ ನೀರನ್ನೂ ಕುಡಿಯಬೇಡ. ॥೫೮೭-೫೮೮॥

ಅಯ್ಯಾ ದ್ವಿಜನೇ, ಈಗ ನಾನು ನಿನಗೆ ಮಾಡಿದ ಧರ್ಮೋಪದೇಶವು ಮೋಕ್ಷವನ್ನುಂಟುಮಾಡುವ ಮಾರ್ಗವಾಗಿರುವುದು. ಸತ್ಯವಾಗಿಯೂ ಇದನ್ನು ಮೋಕ್ಷಪ್ರದವಾದ ಮಾರ್ಗವೆಂದು ತಿಳಿ, ಇದರಲ್ಲಿ ಸಂದೇಹವೇ ಇಲ್ಲ. ॥೫೮೯॥

ಬ್ರಾಹ್ಮಣನೇ, ಇದು ಮೊದಲು ಆ ಪರಶಿವನನ್ನೇ ದೇವೋತ್ತಮನೆಂದು ತಿಳಿದು ಅವನನ್ನು ಪೂಜೆಮಾಡು. ಆ ಪರಶಿವನು ಇತರ ದೇವತೆಗಳಿಗೆ ಸರಿಸಮಾನನೆಂದು ಕನಸಿನಲ್ಲಿಯೂ ಹೇಳಬೇಡ. ॥೫೯೦॥

ಆ ನಿತ್ಯಮಂಗಳಸ್ವರೂಪನಾದ ಶಿವನನ್ನು ಇತರ ದೇವತೆಗಳಿಗೆ ಸಮಾನನೆಂದು ಹೇಳುವವರ ವಂಶವು ಶೀಘ್ರವಾಗಿ ನಾಶವಾಗುವುದರಲ್ಲಿ ಸಂದೇಹವೇ

ಶಿವಾನ್ಯಸುರತುಲ್ಯತ್ವಂ ಯೇ ವದಂತಿ ಸದಾಶಿವೇ ।
ನ ತೈಃ ಸಹ ಭ್ರಮೇಣಾಪಿ ಕುರು ಸಂಭಾಷಣಂ ದ್ವಿಜ ॥೫೯೩॥

ದೇವೋತ್ತಮಂ ಮಹಾದೇವಮನ್ಯಥಾ ಯೇ ವದಂತಿ ತೇ ।
ಚಂಡಾಲಯೋನಿಸಂಭೂತಾ ಜನ್ಮಜನ್ಮಾಂತರೇ ಧ್ರುವಂ ॥೫೯೪॥

ದೇವೋತ್ತಮಂ ಮಹಾದೇವಮನ್ಯಥಾ ಯೇವದಂತಿ ತೇ ।
ಭೂಯೋ ಭೂಯೋ ಭವಿಷ್ಯಂತಿ ಚಂಡಾಲಾ ಏವ ಸರ್ವಥಾ॥೫೯೫॥

ಅತಃ ಸಂತಃ ಸಾವಧಾನಂ ಸತತಂ ಶಾಂತಚೇತನಾಃ ।
ಉಮಾಕಾಂತಂ ಪ್ರಯತ್ನೇನ ಭಜಂತಿ ಭವಭೀರವಃ ॥೫೯೬॥

ಸಂಸಾರಾನಲತಪ್ತಾನಾಮುಮಾಕಾಂತಾರ್ಚನಾಮೃತಂ ।
ಸಂಸಾರತಾಪಂ ಪಾಪಂ ಚ ಸದ್ಯೋ ದೂರೀಕರೋತಿ ಹಿ ॥೫೯೭॥

ಇಲ್ಲ. ಅಲ್ಲದೇ ಅವರು ಈ ಸೂರ್ಯಚಂದ್ರರಿರುವವರೆಗೂ ನರಕದಲ್ಲಿ ಬಿದ್ದು ಸಾಯುವರು. ॥೫೯೧-೫೯೨॥

ವಿಪ್ರನೇ, ಆ ಸದಾಶಿವನನ್ನು ಇತರ ವಿಷ್ಣ್ವಾದಿದೇವತೆಗಳಿಗೆ ಸಮಾನನೆಂದು ಹೇಳುವವರೊಡನೆ, ಭ್ರಾಂತಿಯಿಂದಲಾದರೂ ಎಂದಿಗೂ ಸಂಭಾಷಣೆಮಾಡಬೇಡ. ॥೫೯೩॥

ದೇವತೆಗಳಲ್ಲೆಲ್ಲಾ ಉತ್ತಮನಾದ ಆ ಮಹಾದೇವನನ್ನು ದೇವೋತ್ತಮನೆಂದು ತಿಳಿಯದೇ ಬೇರೆ ರೀತಿಯಲ್ಲಿ ಭಾವನೆಮಾಡುವವರು ಬೇರೆ ಜನ್ಮಗಳಲ್ಲಿ ಚಂಡಾಲರಾಗಿ ಜನಿಸುವರು. ಇದು ನಿಶ್ಚಯವು. ಅದೂ ಅಲ್ಲದೇ ಅವರು ಪದೇ ಪದೇ ಚಂಡಾಲರೇ ಆಗಿ ಹುಟ್ಟುವರು. ॥೫೯೪-೫೯೫॥

ಆದ್ದರಿಂದ ಶಾಂತಮನಸ್ಸುಳ್ಳ ಸತ್ಪುರುಷರು, ಈ ಸಂಸಾರದಲ್ಲಿ ಭಯಗೊಂಡವರಾಗಿ, ಉಮಾರಮಣನನ್ನು ಯಾವಾಗಲೂ ಸಾವಧಾನವಾಗಿ ಭಕ್ತಿಯಿಂದ ಭಜಿಸುವರು. ಈ ಸಂಸಾರವೆಂಬ ಅಗ್ನಿಯಿಂದ ಕಾದಶರೀರವುಳ್ಳವರಿಗೆ (ಪೀಡಿತರಾದವರಿಗೆ) ಆ ಉಮಾರಮಣನಾದ ಮಹೇಶ್ವರನ ಪೂಜೆಯೆಂಬುದು ಅಮೃತವಾಗಿರುವುದು.

ಭಗವಂತಮುಮಾಕಾಂತಂ ಸಂತತಂ ಸ ಶಿವವ್ರತಾಃ ।
ಸಂತಃ ಪ್ರಶಾಂತಮಭ್ರಾಂತಾಃ ಪೂಜಯಂತಿ ಸ್ತುವಂತಿ ಚ ॥೫೮॥

ಕಃ ಕೃತಾಂತಕೃತಾಂತಂ ತಂ ನ ಚಿಂತಯತಿ ಸಂತತಂ ।
ಪೂತಃ ಸ್ವಾಂತೇ ಸಂವಸಂತಂ ನಿತಾಂತಂ ಶ್ರುತಿಸಂಸ್ತುತಂ ॥೫೯॥

ಇತಿ ಶೈವವಚಃ ಶ್ರುತ್ವಾ ನಿರ್ಧೂತಾಖಿಲಕಲ್ಮಷಃ ।
ಸರ್ವೋಪನಿಷದಾಂ ಸಾರಂ ಶ್ರುತ್ವಾ ತುಷ್ಟೋ ಬಭೂವ ಸಃ ॥೬೦॥

॥ ಸ್ಕಂದ ಉವಾಚ ॥

ತತಃ ಸ್ವಪಾಪಶಾಂತ್ಯರ್ಥಂ ಶ್ರೀಶೈಲಸ್ಯ ಪ್ರದಕ್ಷಿಣಂ ।
ಕರ್ತುಂ ಸಂಕಲ್ಪ್ಯ ವಿಧಿವತ್ತಂ ನತ್ವಾ ಸ ಯಯೌ ಮುದಾ ॥೬೧॥

ಈ ಅಮೃತವು ಸಂಸಾರದ ದುಃಖವನ್ನೂ ಮತ್ತು ಪಾಪವನ್ನೂ ಸಹ ಕೂಡಲೇ ನಾಶಮಾಡಿಬಿಡುವುದು. ॥೫೬-೫೭॥

ಉಮಾಕಾಂತನಾದ ಆ ಭಗವಂತನನ್ನು ಶಿವಪೂಜಾವ್ರತವುಳ್ಳ ಸತ್ಪುರುಷರು ಅನವರತವೂ ಶಾಂತಮನಸ್ಕರೂ, ಭ್ರಾಂತಿರಹಿತರೂ ಆಗಿ ಪೂಜೆಮಾಡುವರು. ಮತ್ತು ಸ್ತೋತ್ರವನ್ನೂ ಮಾಡುತ್ತಿರುವರು. ॥೫೮॥

ಪರಿಶುದ್ಧಾಂತಃಕರಣವುಳ್ಳ ಯಾವನು ತಾನೇ ಯಾವಾಗಲೂ ತನ್ನ ಹೃದಯದಲ್ಲಿ ನೆಲಸಿರುವವನೂ, ಅನವರತವೂ ವೇದಗಳಿಂದ ಸ್ತೋತ್ರಮಾಡಲ್ಪಡುವವನೂ, ಆ ಯಮನಿಗೆ ಯಮನೆನಿಸಿ ನಿಗ್ರಹಮಾಡಿದವನೂ ಆದ ಮಹಾದೇವನನ್ನು ಅನವರತವೂ ಧ್ಯಾನಮಾಡುವುದಿಲ್ಲ? (ಅಂದರೆ ಧ್ಯಾನಮಾಡಿಯೇಮಾಡುವನೆಂದು ಭಾವವು.) ॥೫೯॥

ಆ ಬ್ರಾಹ್ಮಣನು ಹೀಗೆ ಪರಶಿವಭಕ್ತನು ನುಡಿದ ವಚನಗಳನ್ನು ಕೇಳಿ, ತನ್ನ ಪಾಪಗಳನ್ನೆಲ್ಲಾ ಕಳೆದುಕೊಂಡು, ಸಕಲ ಉಪನಿಷತ್ತುಗಳ ಸಾರಭೂತವಾದ ಸರ್ವೇಶ್ವರನ ಕಥಾಮೃತವನ್ನು ಕೇಳಿ ಸಂತುಷ್ಟನಾದನು. ಅನಂತರ ತನ್ನ ಶಾಪವು ನಿವೃತ್ತಿಯಾಗುವುದಕ್ಕೋಸ್ಕರ ಆತನು ಹೇಳಿದಂತೆ ಶ್ರೀಶೈಲವನ್ನು ಪ್ರದಕ್ಷಿಣೆಮಾಡಲು ವಿಧಿಪ್ರಕಾರ ಸಂಕಲ್ಪಿಸಿ, ಅಲ್ಲಿಂದ ಸಂತೋಷಪೂರ್ವಕವಾಗಿ ಹೊರಟನು. ॥೬೦-೬೧॥

ಅತಃ ಸರ್ವೋತ್ತಮಃ ಸಾಂಬೋ ನಂದಿಕೇಶ ಪ್ರಯತ್ನತಃ ।
ನಿತ್ಯಮವ್ಯಭಿಚಾರೇಣ ಪೂಜ್ಯಸ್ತ್ಯಕ್ತ್ವಾನ್ಯದೈವತಂ ॥೬೦೨॥

॥ ಭಾನುರುವಾಚ ॥

ಇತಿ ಸ್ಕಂದವಚಃ ಶ್ರುತ್ವಾ ನಂದಿಕೇಶೋಽತಿಹೃಷ್ಟಧೀಃ ।
ಶಿವಪ್ರೇಷಿತವೃತ್ತಾಂತಂ ವಕ್ತುಂ ಸಮುಪಚಕ್ರಮೇ ॥೬೦೩॥

॥ ನಂದಿಕೇಶ್ವರ ಉವಾಚ ॥

ಸ್ಕಂದಯೋಗರತಂ ಶಂಭುಸ್ತ್ವಾಂ ದೃಷ್ಟ್ವಾ ಶೈಲವರ್ತಿನಂ ।
ವೃತ್ತಾಂತಮಪಿ ವಿಜ್ಞಾಯ ಸಮಾಯಾಹೀತಿ ಚಾಬ್ರವೀತ್ ॥೬೦೪॥

ಇತಿ ತದ್ವಚನಂ ಶ್ರುತ್ವಾ ಸ್ಕಂದಃ ಸಂತುಷ್ಟಮಾನಸಃ ।
ದಧ್ಯೌ ಮಹೇಶ್ವರಂ ಸಾಂಬಂ ಆನಂದಾಶ್ರೂಣಿ ಸಂತ್ಯಜನ್ ॥೬೦೫॥

ಎಲೈ ನಂದಿಕೇಶ್ವರನೆ, ಆದ್ದರಿಂದ ಅಂಬಾಸಮೇತನಾದ ಆ ಪರಮೇಶ್ವರನು ಸರ್ವೋತ್ತಮನು. ಅವನನ್ನು ಭಕ್ತಿಯಿಂದ ತಪ್ಪದೇ ಬೇರೆ ದೇವತೆಗಳ ಪೂಜೆಯನ್ನು ಬಿಟ್ಟು ಪೂಜಿಸಬೇಕು ಎಂದು ಸ್ಕಂದಸ್ವಾಮಿಯು ನಂದಿಕೇಶ್ವರನಿಗೆ ನುಡಿದನು. ॥೬೦೨॥

ಕುಮಾರಸ್ವಾಮಿಯು ಹೇಳಿದ ಆ ಮಾತುಗಳನ್ನು ಕೇಳಿ ನಂದಿಕೇಶ್ವರನು ಅತ್ಯಂತ ಸಂತುಷ್ಟಮನಸ್ಸುಳ್ಳವನಾಗಿ, ತನ್ನನ್ನು ಪರಮೇಶ್ವರನು ಅವನ ಬಳಿಗೆ ಕಳುಹಿಸಿದ್ದ ಸಮಾಚಾರವನ್ನು ತಿಳಿಸಲುಪಕ್ರಮಿಸಿ, ॥೬೦೩॥

ಕುಮಾರಸ್ವಾಮಿಯೇ! ಶ್ರೀಶೈಲದಲ್ಲಿ ಯೋಗತತ್ಪರನಾಗಿರುವ ನಿನ್ನನ್ನು ನೋಡಿ, ನಿನ್ನ ವೃತ್ತಾಂತವನ್ನು ತಿಳಿದುಕೊಂಡುಬರುವಂತೆ ಹೇಳಿ ಆ ಮಹಾದೇವನು ನನ್ನನ್ನು ನಿನ್ನಲ್ಲಿಗೆ ಕಳುಹಿಸಿರುವನೆಂದು ನಂದಿಕೇಶ್ವರನು ಷಣ್ಮುಖನಿಗೆ ಹೇಳಿದನು. ॥೬೦೪॥

ಈರೀತಿ ನಂದಿಕೇಶನು ಹೇಳಿದುದನ್ನು ಕೇಳಿ, ಸ್ಕಂದನು, ಸಂತೋಷಚಿತ್ತನಾಗಿ, ಆನಂದಬಾಷ್ಪಗಳನ್ನು ಕಣ್ಣುಗಳಲ್ಲಿ ಸುರಿಸುತ್ತಾ ಅಂಬಾಸಮೇತನಾದ ಆ ಮಹೇಶ್ವರನನ್ನು ಧ್ಯಾನಮಾಡಿದನು. ॥೬೦೫॥

ತತಃ ಪ್ರಾಹ ತದಾ ಸ್ಕಂದೋ ನಂದಿಕೇಶಂ ಮುದಾವಹಂ ।
ಸಮಾಗತಂ ತ್ವಯಾ ನಂದಿನ್ಕೇನ ಮಾರ್ಗೇಣ ತದ್ವದ ॥೬೦೬॥

॥ ನಂದಿಕೇಶ್ವರ ಉವಾಚ ॥

ಕೈಲಾಸಾನ್ನಿರ್ಗತಃ ಕಾಶೀಂ ಸಂಪ್ರಾಪ್ತೋಽಸ್ಮಿ ಶಿವಪ್ರಿಯಾಂ ।
ಯಸ್ಯಾಂ ತ್ಯಕ್ತ್ವಾ ತನುಂ ಮರ್ತ್ಯಃ ಪ್ರಾಪ್ನೋತಿ ಶಿವಮದ್ವಯಂ ॥೬೦೭॥

ಯಸ್ಯಾಂ ಸ್ಥಿತೋ ನರೋಽಲ್ಪೋಽಪಿ ಸುರೈಃ ಸಂಪೂಜ್ಯತೇ ಸದಾ ।
ಸಾ ಕಾಶೀ ಮುಕ್ತಿದಾ ಭಾಗ್ಯಾನ್ನಯನೈರತಿಥೀಕೃತಾ ॥೬೦೮॥

ಯಸ್ಯಾಂ ತೀರ್ಥಂ ಮಹತ್ಪುಣ್ಯಂ ಮಣಿಕರ್ಣ್ಯಭಿದಂ ಶುಭಂ ।
ಸಾ ಕಾಶೀ ಮುಕ್ತಿದಾ ಭಾಗ್ಯಾನ್ನಯನೈರತಿಥೀಕೃತಾ ॥೬೦೯॥

ಯಸ್ಯಾಂ ಕಾಶ್ಯಾಂ ಮಹಾದೇವಃ ಕ್ರೀಡತ್ಯಂಬಾಸಮನ್ವಿತಃ ।
ಸಾ ಕಾಶೀ ಮುಕ್ತಿದಾ ಭಾಗ್ಯಾನ್ನಯನೈರತಿಥೀಕೃತಾ ॥೬೧೦॥

ಆಗ ಕುಮಾರನು, ತನಗೆ ಸಂತೋಷವನ್ನುಂಟುಮಾಡುತ್ತಿರುವ ಆ ನಂದಿಕೇಶ್ವರನನ್ನು ಕುರಿತು, ಎಲೈ ನಂದಿಕೇಶ್ವರನೇ! ನೀನು ಯಾವ ಮಾರ್ಗವಾಗಿ ಇಲ್ಲಿಗೆ ಬಂದೆ, ಅದನ್ನು ತಿಳಿಸೆಂದು ಪ್ರಶ್ನೆಮಾಡಿದನು. ಆಗ ನಂದೀಶನು ಹೀಗೆ ನುಡಿದನು.॥೬೦೬॥

"ಕೈಲಾಸಪರ್ವತದಿಂದ ಹೊರಟು ಆ ಪರಶಿವನಿಗೆ ಅತ್ಯಂತ ಪ್ರೀತಿಕರವಾದ ಕಾಶೀಪಟ್ಟಣಕ್ಕೆ ಬಂದೆನು. ಆ ಕಾಶಿಯಲ್ಲಿ ಮೃತನಾಗುವ ಮಾನವನು, ಅದ್ವಿತೀಯವಾದ ಆ ಪರಶಿವನ ಸಾಯುಜ್ಯವನ್ನೇ ಹೊಂದುವನು. ಅಲ್ಲಿ ವಾಸಮಾಡುವ ಮನುಜನು ಅಲ್ಪನಾದರೂ ದೇವತೆಗಳೂ ಸಹ ಅವನನ್ನು ಪೂಜಿಸುತ್ತಾರೆ. ಇಂತಹ ಮಹಿಮೆಯುಳ್ಳ ಮುಕ್ತಿಪ್ರದವಾದ ಕಾಶೀಪಟ್ಟಣವು ನನ್ನ ಭಾಗ್ಯದಿಂದ ದಾರಿಯಲ್ಲಿ ನನ್ನ ಕಣ್ಣಿಗೆ ಗೋಚರವಾಯಿತು. ॥೬೦೭-೬೦೮॥

ಶುಭಕರವಾದ ಮಣಿಕರ್ಣಿಕೆಯೆಂಬ ತೀರ್ಥದಿಂದ ವಿರಾಜಿಸುತ್ತಿರುವ ಮುಕ್ತಿಪ್ರದವಾದ ಆ ಕಾಶೀಕ್ಷೇತ್ರವು ನನ್ನ ಭಾಗ್ಯದ ದೆಸೆಯಿಂದ ಬರುವಾಗ ದಾರಿಯಲ್ಲಿ ನನ್ನ ಕಣ್ಣಿಗೆ ಕಾಣಿಸಿತು. ॥೬೦೯॥

ಎಲ್ಲಿ ಆ ಮಹಾದೇವನು ಅಂಬಾಸಮೇತನಾಗಿ ವಿಹರಿಸುತ್ತಿರುವನೋ, ಮುಕ್ತಿಪ್ರದವಾದ ಲಿಂಗವೆಂದು ಆ ವಿಶ್ವೇಶ್ವರನ ದಿವ್ಯಲಿಂಗವು ಎಲ್ಲಿ ವಿರಾಜಿಸುತ್ತಿ

ಯಸ್ಯಾಂ ವೈಶ್ವೇಶ್ವರಂ ಲಿಂಗಂ ಮುಕ್ತಿಲಿಂಗಂ ಪ್ರಕೀರ್ತಿತಂ ।
ಸಾ ಕಾಶೀ ಮುಕ್ತಿದಾ ಭಾಗ್ಯಾನ್ನಯನೈರತಿಥೀಕೃತಾ ॥೬೧೧॥

ಯಸ್ಯಾಮಂಬಾ ಮೋಕ್ಷಭಿಕ್ಷಾಂ ಪ್ರಯಚ್ಛತಿ ಶಿವಪ್ರಿಯಾ ।
ಸಾ ಕಾಶೀ ಮುಕ್ತಿದಾ ಭಾಗ್ಯಾನ್ನಯನೈರತಿಥೀಕೃತಾ ॥೬೧೨॥

ಯಸ್ಯಾಂ ಸಮಸ್ತದೇವಾನಾಂ ಶಾಸ್ತಾ ಶ್ರೀಕಾಲಭೈರವಃ ।
ಸಾ ಕಾಶೀ ಮುಕ್ತಿದಾ ಭಾಗ್ಯಾನ್ನಯನೈರತಿಥೀಕೃತಾ ॥೬೧೩॥

॥ ಭಾನುರುವಾಚ ॥

ಇತಿ ತದ್ವಚನಂ ಶ್ರುತ್ವಾ ಷಣ್ಮುಖೋಽತ್ಯಂತಹೃಷ್ಟಧೀಃ ।
ಶಿವಂ ದ್ರಷ್ಟುಂ ಸಮುದ್ಯುಕ್ತಃ ಕಾಶೀಂ ಪ್ರಾಪ ಶಿವಾತ್ಮಿಕಾಂ ॥೬೧೪॥

ಸಂಪ್ರಾಪ್ಯಾನಂದದಾಂ ಕಾಶೀಂ ದೃಷ್ಟ್ವಾ ಸಂತುಷ್ಟಮಾನಸಃ ।
ಮಣಿಕರ್ಣೀಜಲೇ ಸ್ನಾತ್ವಾ ಯಯೌ ವಿಶ್ವೇಶಮಂದಿರಂ ॥೬೧೫॥

ದೆಯೋ, ಅಂತಹ ಮುಕ್ತಿಪ್ರದವಾದ ಕಾಶೀಕ್ಷೇತ್ರವನ್ನು ನನ್ನ ಭಾಗ್ಯದ ದೆಸೆಯಿಂದ ನಾನು ಮಾರ್ಗದಲ್ಲಿ ನೋಡಿದೆನು. ॥೬೧೦-೬೧೧॥

ಶಿವನ ಪ್ರೇಯಸಿಯಾದ ಅಂಬಿಕೆಯು ಎಲ್ಲಿ ಮೋಕ್ಷಭಿಕ್ಷೆಯನ್ನು ತನ್ನ ಭಕ್ತರಿಗೆ ಕೊಡಲು ಸಿದ್ಧಳಾಗಿರುವಳೋ, ಅಲ್ಲದೇ ಸಕಲ ದೇವತೆಗಳನ್ನೂ ನಿಯಮಿಸುವ ಆ ಶ್ರೀಕಾಲಭೈರವಸ್ವಾಮಿಯೇ ಎಲ್ಲಿ ನೆಲಸಿರುವನೋ, ಅಂತಹ ಮುಕ್ತಿಪ್ರದವಾದ ಕಾಶೀಕ್ಷೇತ್ರವನ್ನು ನಾನು ಭಾಗ್ಯೋದಯದಿಂದ ಕಂಡೆನು." ॥೬೧೨-೬೧೩॥

ಆ ನಂದಿಕೇಶ್ವರನ ಮಾತುಗಳನ್ನು ಕೇಳಿ ಷಣ್ಮುಖನು ಅತ್ಯಂತ ಸಂತುಷ್ಟಾಂತರಂಗನಾಗಿ ಆ ಪರಶಿವನನ್ನು ನೋಡಲು ಶಿವಸ್ವರೂಪಿಣಿಯಾದ ಆ ಕಾಶೀಪಟ್ಟಣಕ್ಕೆ ತಾನೂ ಬಂದನು. ॥೬೧೪॥

ಕಾಶೀಪಟ್ಟಣಕ್ಕೆ ಬಂದು ಕುಮಾರಸ್ವಾಮಿಯು, ಮೊದಲು ಮಣಿಕರ್ಣಿಕಾತೀರ್ಥದ ನೀರಿನಲ್ಲಿ ಸ್ನಾನಮಾಡಿ ವಿಶ್ವೇಶ್ವರನ ದೇವಾಲಯಕ್ಕೆ ಹೋದನು. ॥೬೧೫॥

ತತಃ ಸ್ನಾತ್ವಾ ಜ್ಞಾನವಾಪ್ಯಾಂ ಉದ್ಧೂಲ್ಯ ಚ ಸಮಾಹಿತಃ ।
ಜ್ಞಾನೇಶಾದೀನ್ಸಮಭ್ಯರ್ಚ್ಯ ಮುಕ್ತಿಮಂಡಪಮಾಶ್ರಿತಃ ॥೬೧೬॥

ತತೋ ದದರ್ಶ ವಿಶ್ವೇಶಂ ಸರ್ವದೇವೋತ್ತಮೋತ್ತಮಂ ।
ದೃಷ್ಟ್ವಾ ಸಮರ್ಚಯಾಮಾಸ ಪೂಜಾದ್ರವ್ಯೈರನೇಕಧಾ ॥೬೧೭॥

ತತಸ್ತುಷ್ಟಾವ ರುದ್ರೇಣ ರುದ್ರಸೂಕ್ತೈಸ್ತಥೇಶ್ವರಂ ।
ತತಃ ಪ್ರಸನ್ನೋ ವಿಶ್ವೇಶಸ್ತಮುವಾಚಾತಿಹೃಷ್ಟಧೀಃ ॥೬೧೮॥

॥ ಶ್ರೀ ಈಶ್ವರ ಉವಾಚ ॥

ಅತ್ರ ಮತ್ಪೂಜನಾಸಕ್ತೋ ನಿತ್ಯಂ ಮಾಂ ವೀಕ್ಷಯನ್ಮುದಾ ।
ಸಂವಸಾತೋ ನ ಗಂತವ್ಯಂ ಸ್ಕಂದ ಕುತ್ರಾಪಿ ಸರ್ವಥಾ ॥೬೧೯॥

ಕೃತ್ವಾ ತವಾರ್ಚನಂ ಪೂರ್ವಂ ಮತ್ಪುರಸ್ಥಿತಮಾಸ್ತಿಕಾಃ ।
ತತೋ ಮಾಮರ್ಚಯಿಷ್ಯಂತಿ ಸ್ಕಂದಾತಃ ಸಂವಸಾದರಾತ್ ॥೬೨೦॥

ಅನಂತರ ಜ್ಞಾನವಾಪಿ ಎಂಬಲ್ಲಿ ಸ್ನಾನಮಾಡಿ, ಭಸ್ಮೋದ್ಧೂಲನ ಮಾಡಿಕೊಂಡು, ಜ್ಞಾನೇಶ್ವರನೇ ಮೊದಲಾದವರೆಲ್ಲರನ್ನೂ ಪೂಜಿಸಿ, ಅನಂತರ ಮುಕ್ತಿ ಮಂಟಪಕ್ಕೆ ಬಂದನು. ॥೬೧೬॥

ಆಮೇಲೆ ಸಕಲದೇವತೆಗಳನ್ನೂ ಉತ್ತಮೋತ್ತಮವಾದ ವಿಶ್ವೇಶ್ವರನನ್ನು ದರ್ಶನಮಾಡಿ, ರುದ್ರಮಂತ್ರದಿಂದಲೂ, ರುದ್ರಸೂಕ್ತದಿಂದಲೂ ಆ ಜಗದೀಶ್ವರನನ್ನು ಸ್ತೋತ್ರಮಾಡಿದನು. ಆಗ ಆ ವಿಶ್ವೇಶ್ವರನು, ಕುಮಾರನ ಸ್ತೋತ್ರದಿಂದ ಪ್ರಸನ್ನನಾಗಿ ಷಣ್ಮುಖಸ್ವಾಮಿಯನ್ನು ಕುರಿತು ಸಂತೋಷದಿಂದ ಹೀಗೆ ನುಡಿದನು. ॥೬೧೭-೬೧೮॥

ಕುಮಾರನೇ, ನೀನು ಕಾಶೀಕ್ಷೇತ್ರದಲ್ಲಿ ನನ್ನ ಪೂಜೆಯಲ್ಲಿಯೇ ಆಸಕ್ತನಾಗಿ ನಿತ್ಯವೂ ನನ್ನನ್ನು ಪ್ರೀತಿಯಿಂದ ನೋಡುತ್ತಾ ಮತ್ತೆಲ್ಲಿಯೂ ಹೋಗದೇ ಅವಶ್ಯವಾಗಿ ಇಲ್ಲಿಯೇ ನೀನು ನೆಲಸುವನಾಗು. ಎಲೈ ಸ್ಕಂದನೇ, ನೀನು ಬೇರೆಲ್ಲಿಯೂ ಹೋಗಕೂಡದು. ನನ್ನ ಮುಂದೆ ನೆಲಸಿರುವ ನಿನ್ನನ್ನು ಮೊದಲು ಪೂಜೆಮಾಡಿ ಅನಂತರ ಆಸ್ತಿಕರಾದವರು ನನ್ನನ್ನು ಆದರದಿಂದ ಪೂಜೆಮಾಡುತ್ತಾರೆ. ಆದ್ದರಿಂದ ಎಲೈ ಷಣ್ಮುಖನೇ! ನೀನು ಇಲ್ಲಿ ಆದರದಿಂದ ಇಲ್ಲಿಯೇ ನೆಲಸುವನಾಗು." ॥೬೧೯-೬೨೦॥

ಇತಿ ದತ್ವಾ ವರಂ ತಸ್ಮೈ ನಂದಿಕೇಶಂ ಸ್ವಪೂಜಕಂ ।
ತ್ವಮಪ್ಯತ್ರೈವ ಸತತಂ ವಸಸ್ವೇತ್ಯಾಹ ಶಂಕರಃ ॥೬೨೧॥

ಇತೀರಿತೋಕ್ತೋ ನಂದಿಕೇಶೋ ವಿಶ್ವೇಶಸ್ಯಾಗ್ರತಃ ಸ್ಥಿತಃ ।
ಸ್ಕಂದೋಽಪೀಶಪುರಸ್ತಸ್ಥೌ ಸಮುಕ್ಷಂ ಶಂಕರಾಗ್ರತಃ ॥೬೨೨॥

ಪೂಜಯಿತ್ವಾ ಸ್ಥಿತಃ ಶಂಭುಂ ಸರ್ವದೇವೋತ್ತಮಂ ಪ್ರಭುಂ ।
ಶಿವಪೂಜಾಪ್ರಭಾವೇನ ಕಾಶೀಂ ಸಂಪ್ರಾಪ ಷಣ್ಮುಖಃ ॥೬೨೩॥

ಅತೋ ಭವಂತೋ ಮುನಯಃ ಪೂಜಯಧ್ವಂ ಮಹೇಶ್ವರಂ ।
ಸ ಸರ್ವದೇವದೇವೇಶಃ ಚತುರ್ವರ್ಗಫಲಪ್ರದಃ ॥೬೨೪॥

॥ ಶ್ರೀ ಶಿವ ಉವಾಚ ॥

ಇತಿ ಭಾನುವಚಃ ಶ್ರುತ್ವಾ ಶ್ರೀಶೈಲಂ ಮುನಯೋ ಯಯುಃ ।
ತಪಸಾ ತತ್ರ ಮಾಂ ನಿತ್ಯಂ ಪೂಜಯಾಮಾಸುರನ್ವಹಂ ॥೬೨೫॥

ಆ ಪರಮೇಶ್ವರನು ಸ್ಕಂದನಿಗೆ ಹೀಗೆ ವರವನ್ನು ಕೊಟ್ಟನಂತರ, ತನ್ನ ಪೂಜಕನಾದ ನಂದಿಕೇಶ್ವರನನ್ನು ಕುರಿತು, ನೀನೂ ಯಾವಾಗಲೂ ಈ ನನ್ನ ಸನ್ನಿಧಿಯಲ್ಲಿಯೇ ನೆಲಸುವನಾಗೆಂದು ಆ ಶಂಕರನು ಅಪ್ಪಣೆಮಾಡಿದನು. ॥೬೨೧॥

ಈಶ್ವರನಿಂದ ಹೀಗೆ ಹೇಳಲ್ಪಟ್ಟ ನಂದಿಕೇಶ್ವರನು ಆ ವಿಶ್ವೇಶ್ವರನ ಮುಂದುಗಡೆಯೇ ನೆಲಸಿದನು. ಕುಮಾರಸ್ವಾಮಿಯೂ ಆ ಈಶ್ವರನ ಮುಂದುಗಡೆಯಲ್ಲಿಯೇ ಅಂದರೆ ಶಂಕರನ ಸಮೀಪದಲ್ಲಿಯೇ ನೆಲಸಿ ನಿಂತುಬಿಟ್ಟನು. ॥೬೨೨॥

ಷಣ್ಮುಖಸ್ವಾಮಿಯು ವಿಶ್ವೇಶ್ವರನನ್ನು ಪೂಜಿಸಿ, ಅವನ ಅಪ್ಪಣೆಯಂತೆಯೇ ಅವನ ಮುಂದೆಯೇ ನೆಲಸಿದನು. ಆ ಕುಮಾರನು ಶಿವಪೂಜಾಮಹಿಮೆಯಿಂದಲೇ ಕಾಶಿಯನ್ನು ಪಡೆದನು. ಆದ್ದರಿಂದ ಎಲೈ ಮುನಿಗಳಿರಾ! ನೀವೂ ಆ ಮಹೇಶ್ವರನನ್ನು ಭಕ್ತಿಯಿಂದ ಪೂಜೆಮಾಡಿರಿ. ಸಕಲ ದೇವತೆಗಳಿಗೂ ಸಾರ್ವಭೌಮನಾದ ಆ ಶಂಕರನು ಧರ್ಮ, ಅರ್ಥ, ಕಾಮ, ಮತ್ತು ಮೋಕ್ಷಗಳೆಂಬ ಚತುರ್ವರ್ಗಗಳ ಫಲವನ್ನೂ ಕೊಡುವನು. ॥೬೨೩-೬೨೪॥

ಹೀಗೆ ಆ ಸೂರ್ಯದೇವನ ಮಾತುಗಳನ್ನು ಕೇಳಿ ಮುನಿಗಳೆಲ್ಲರೂ ಶ್ರೀಶೈಲ ಕ್ಷೇತ್ರಕ್ಕೆ ಹೋಗಿ, ಅಲ್ಲಿ ತಪಸ್ಸಿನಿಂದ ನಿತ್ಯವೂ ನನ್ನನ್ನು ಎಡಬಿಡದೆ ಪೂಜಿಸಿದರು. ॥೬೨೫॥

ಮಯ್ಯೇವಾರ್ಪಿತಕರ್ಮಣಾಮನುದಿನಂ ಮಯ್ಯೇವ ಸಕ್ತಾತ್ಮನಾಂ
ಮತ್ಪೂಜಾರತಚೇತಸಾಂ ನಿಯಮತೋ ಮದ್ಧ್ಯಾನಪೂಜಾತ್ಮನಾಂ।
ಸೌಭಾಗ್ಯಂ ಸುಖಮಕ್ಷಯಂ ಚ ಸತತಂ ದಾಸ್ಯೇಽಪವರ್ಗಂ ತತಃ
ಸತ್ಯಂ ಸತ್ಯಮಿದಂ ಗಿರೀಂದ್ರತನಯೇ ಸತ್ಯಂ ಪುನಃ ಶೋಭನೇ ॥೬೨॥

ಇತಿ ಶ್ರೀಶಿವರಹಸ್ಯೇ ಸಪ್ತಮಾಂಶೇ ಶ್ರೀಶೈಲಮಾಹಾತ್ಮ್ಯೇ
ಚತುರ್ದಶೋಽಧ್ಯಾಯಃ

ಎಲೌ ಗಿರಿಜೆಯೇ, ಸಕಲಕರ್ಮಗಳನ್ನೂ ನನಗೆ ಸಮರ್ಪಿಸಿ, ಪ್ರತಿದಿನವೂ ನನ್ನಲ್ಲಿಯೇ ನೆಲಸಿದ ಮನಸ್ಸುಳ್ಳವರಾಗಿ, ನಿಯಮದಿಂದ ನನ್ನ ಪೂಜೆ ಮತ್ತು ಧ್ಯಾನ ಇವುಗಳಲ್ಲೇ ತತ್ಪರರಾಗಿರುವ ನನ್ನ ಭಕ್ತರಿಗೆ ಸಕಲ ಸೌಭಾಗ್ಯಗಳನ್ನೂ ನಾಶರಹಿತವಾದ ಸುಖವನ್ನೂ ಕೊಟ್ಟು ಅನಂತರ ಅವರಿಗೆ ಶಾಶ್ವತವಾದ ಮೋಕ್ಷವನ್ನು ಕರುಣಿಸುವೆನು. ಎಲೌ ಶೋಭನಾಂಗಿಯೇ, ಸತ್ಯವಾಗಿಯೂ ಈ ನನ್ನ ಭಕ್ತರಿಗೆ ಬೇಕಾದುದನ್ನೆಲ್ಲಾ ನಾನು ತಪ್ಪದೆ ಕೊಡುವೆನು ಎಂದು ಪರಮೇಶ್ವರನು ತನ್ನ ಪ್ರಿಯೆಯಾದ ಗಿರಿಜಾದೇವಿಗೆ ಹೇಳಿದನು. ॥೬೨॥

ಇಲ್ಲಿಗೆ ಶ್ರೀಶಿವರಹಸ್ಯದ ಏಳನೆಯ ಅಂಶದ ಶ್ರೀಶೈಲಮಹಿಮೆಯಲ್ಲಿ
ಹದಿನಾಲ್ಕನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ಶ್ರೀ ಶಿವಾಯನಮಃ ॥

ಅಥ ಶ್ರೀ ಶಿವರಹಸ್ಯೇ

ಉಗ್ರಾಖ್ಯೇ

ಸಪ್ತಮಾಂಶೇ ಪೂರ್ವಾರ್ಧೇ

ಪಂಚದಶೋಽಧ್ಯಾಯಃ

॥ ಶ್ರೀಪಾರ್ವತ್ಯುವಾಚ ॥

ಮಹೇಶ ದೇವದೇವೇಶ ತವ ಪೂಜನಮನ್ವಹಂ ।
ಕಥಂ ಕಾರ್ಯಂ ಸಾಧನಾನಿ ಕಾನಿ ಶಂಭೋ ತವಾರ್ಚನೇ ॥೧॥

॥ ಶ್ರೀಶಿವ ಉವಾಚ ॥

ನಂದಿಕೇಶಃ ಪುರಾ ದೇವಿ ಮಾಮಭ್ಯರ್ಚ್ಯ ಪ್ರಯತ್ನತಃ ।
ಪೂಜಾವಿಧಾನಂ ಪಪ್ರಚ್ಛ ಮನ್ಮೈವ ಪರಮಾತ್ಮನಃ ॥೨॥

ಹದಿನೈದನೆಯ ಅಧ್ಯಾಯವು

ದೇವಾದಿದೇವನಾದ ಮಹೇಶ್ವರನೇ, ನಿನ್ನ ಪೂಜೆಯನ್ನು ಪ್ರತಿನಿತ್ಯವೂ ಹೇಗೆ ಮಾಡಬೇಕು? ಆ ನಿನ್ನ ಪೂಜೆಯ ಸಲಕರಣೆಗಳಾವುವು? ಅದನ್ನು ನನಗೆ ತಿಳಿಸಬೇಕೆಂದು ಪಾರ್ವತೀದೇವಿಯು ಮಹೇಶ್ವರನನ್ನು ಪ್ರಶ್ನೆ ಮಾಡಿದಳು. ॥೧॥

ದೇವಿಯ ಮಾತುಗಳನ್ನು ಕೇಳಿ ಮಹಾದೇವನು ಪತ್ನಿಯನ್ನು ಕುರಿತು, ದೇವಿ, ಹಿಂದೆ ನಂದೀಶ್ವರನು ನಿಯಮದಿಂದ ನನ್ನನ್ನು ಪೂಜಿಸಿ ಪರಮಾತ್ಮಸ್ವರೂಪನಾದ ನನ್ನ ಪೂಜಾವಿಧಾನವನ್ನು ಪ್ರಶ್ನೆ ಮಾಡಿದನೆಂದು ನೆನೆದು ಪರಶಿವನು ಪಾರ್ವತಿಗೆ ಹೀಗೆ ಹೇಳಿದನು. ॥೨॥

॥ ನಂದಿಕೇಶ್ವರ ಉವಾಚ ॥

ಗೌರೀವಲ್ಲಭ ದೇವೇಶ ಸರ್ವಜ್ಞ ಕರುಣಾನಿಧೇ ।
ಶಿವಪೂಜಾವಿಧಾನಂ ಮೇ ನಿರೂಪಯ ಕೃಪಾನಿಧೇ ॥೩॥

ಶಿವಸ್ಯ ಪೂಜನಾತ್ಪೂರ್ವಂ ಕಿಂ ಕರ್ತವ್ಯಂ ಪ್ರಯತ್ನತಃ ।
ಶಿವಪೂಜಾಸಾಧನಾನಿ ತಾನಿ ಪಾಪಹರಾಣಿ ಚ ॥೪॥

ಕೀದೃಶಃ ಶಿವಪೂಜಾಯಾಮಧಿಕಾರೋ ಮಹೇಶ್ವರ ।
ಕೀದೃಶೇನ ಕೃತಾ ಪೂಜಾ ತವ ಪ್ರಿಯಕರಾ ವಿಭೋ ॥೫॥

ಕಥಂ ಧ್ಯೇಯೋಽಸಿ ಭಗವನ್ಪೂಜನೀಯಃ ಕಥಂ ಭವಾನ್ ।
ಕಥಂ ವಾ ಪೂಜಿತೋ ಮೋಕ್ಷಂ ಪ್ರಯಚ್ಛಸಿ ಸದಾಶಿವ ॥೬॥

॥ ಶ್ರೀ ಸದಾಶಿವ ಉವಾಚ ॥

ಸಾಧು ಸಾಧು ಗಣಶ್ರೇಷ್ಠ ಪ್ರಶ್ನೋಽಯಂ ಶುಭದಸ್ತವ ।
ವಕ್ಷ್ಯೇ ಪೂಜಾವಿಧಿಂ ಸಮ್ಯಕ್ ಶೃಣು ಸರ್ವಾರ್ಥಸಾಧನಂ ॥೭॥

ಗೌರೀರಮಣನಾದ ದೇವೇಶ್ವರನೇ, ಸರ್ವಜ್ಞನೂ, ದಯಾಸಮುದ್ರನೂ ಆದ ನೀನು ಶಿವಪೂಜೆಮಾಡುವ ವಿಧಿಯನ್ನು ನಿರೂಪಿಸುವನಾಗು. ಎಲೈ ದಯಾ ನಿಧಿಯೇ ! ಆ ಪರಶಿವನನ್ನು ಪೂಜಿಸುವುದಕ್ಕೆ ಮೊದಲು ನಿಯಮದಿಂದ ಏನು ಮಾಡಬೇಕು ? ಪಾಪನಾಶಕಗಳಾದ ಆ ಪರಶಿವನ ಪೂಜಾಸಾಧನಗಳಾವುವು ?॥೩-೪॥

ಮಹೇಶ್ವರ, ಈ ಶಿವಪೂಜಾಕರ್ಮದಲ್ಲಿ ಅಧಿಕಾರವೆಷ್ಟರದು ? ಸರ್ವಸಮರ್ಥ ನಾದ ಶಂಭುವೇ, ಯಾವರೀತಿಯಾದ ಅಧಿಕಾರಿಯಿಂದ ನಿನಗೆ ಪೂಜೆ ನಡೆದರೆ ತುಂಬಾ ಪ್ರೀತಿಯುಂಟಾಗುತ್ತದೆ? ನಿನ್ನನ್ನು ಧ್ಯಾನಮಾಡುವ ಬಗೆ ಹೇಗೆ? ನಿನ್ನನ್ನು ಪೂಜೆಮಾಡುವ ರೀತಿಯಾವುದು? ಎಲೈ ಸದಾಶಿವಸ್ವಾಮಿಯೇ, ಹೇಗೆ ಪೂಜಿಸಿದರೆ ನೀನು ಮೋಕ್ಷವನ್ನು ಕರುಣಿಸುವೆ? ಎಲ್ಲವನ್ನೂ ದಯೆಯಿಟ್ಟು ಅಪ್ಪಣೆ ಕೊಡಿಸಬೇಕೆಂದು ನಂದಿಕೇಶ್ವರನು ಪರಮೇಶನನ್ನು ಪ್ರಾರ್ಥಿಸಿದನು. ॥೫-೬॥

ಎಲೈ ಗಣಶ್ರೇಷ್ಠನಾದ ನಂದಿಕೇಶ್ವರನೇ, ಒಳ್ಳೆಯದು, ನೀನು ಕೇಳಿದ ಪ್ರಶ್ನೆಗಳು ಸಾಧುವಾಗಿಯೂ ಶುಭಕರವಾಗಿಯೂ ಇರುವುವು. ನಿನಗೆ ಸಕಲ

ಮಹ್ಯಂ ನಿಧಾಯ ಯೋ ಪೂಜಾಂ ಮದ್ಭಕ್ತೋ ಮತ್ಪರಾಯಣಃ ।
ಮುಚ್ಯತೇ ಸರ್ವಪಾಪೇಭ್ಯಃ ಸೇಯಂ ಪೂಜಾ ಮಯೋಚ್ಯತೇ ॥೮॥

ಪೂಜ್ಯೋಽಹಮೇವ ಸರ್ವೇಭ್ಯೋ ದೇವೇಭ್ಯೋ ದೇವಪುಂಗವಃ ।
ಸರ್ವೋತ್ಕರ್ಷೇಣ ಪೂಜ್ಯೋಽಹಂ ಸರ್ವೇಭ್ಯೋಽಪ್ಯುತ್ತಮೋ ಯತಃ ॥೯॥

ದೇವಾಧಿದೇವಂ ವಿಶ್ವೇಶಂ ಮಹಾದೇವಂ ಜಗತ್ಪ್ರಭುಂ ।
ಸರ್ವೋತ್ಕರ್ಷೇಣ ಸಂಪೂಜ್ಯ ಮುಚ್ಯತೇ ಸರ್ವಕಿಲ್ಬಿಷೈಃ ॥೧೦॥

ಸರ್ವದೇವಾಧಿದೇವಂ ಮಾಂ ಅನನ್ಯಸದೃಶಂ ಶಿವಂ ।
ಯೋಽನ್ಯತುಲ್ಯತಯಾ ವೇತ್ತಿ ಸ ಏವ ಶ್ವಪಚಾಧಮಃ ॥೧೧॥

ಮನೋರಥಗಳನ್ನೂ ಪೂರ್ತಿಗೊಳಿಸುವ ನನ್ನ ಪೂಜಾವಿಧಿಯನ್ನು ಚೆನ್ನಾಗಿ ವಿವರಿಸಿ ಹೇಳುತ್ತೇನೆ, ಕೇಳೆಂದು ಆ ಶಿವನು ನಂದಿಕೇಶ್ವರನನ್ನು ಕುರಿತು, ಹೀಗೆಂದನು.॥೭॥

ನನ್ನನ್ನು ಪೂಜೆಮಾಡಿ, ಯಾವಾಗಲೂ ನನ್ನ ಪೂಜಾಧ್ಯಾನಗಳಲ್ಲಿಯೇ ತತ್ಪರನಾಗಿರುವ ನನ್ನ ಭಕ್ತನು, ಸಕಲ ಪಾಪಗಳಿಂದಲೂ ಬಿಡುಗಡೆ ಹೊಂದುವಂತಹ ನನ್ನ ಪೂಜಾವಿಧಿಯನ್ನು ಈಗ ನಾನು ನಿನಗೆ ತಿಳಿಸುವೆನು. ಕೇಳು. ॥೮॥

ದೇವೋತ್ತಮನಾದ ನಾನೇ ಸಕಲ ದೇವತೆಗಳಿಗೂ ಪೂಜ್ಯನಾಗಿರುವೆನು. ಎಲ್ಲರಿಗಿಂತಲೂ ಉತ್ಕೃಷ್ಟವಾದ ರೀತಿಯಿಂದ ಪೂಜಿಸಲ್ಪಡುವವನೂ ನಾನೇ ಆಗಿರುವೆನು. ನಾನು ಎಲ್ಲಾ ದೇವತೆಗಳಿಗಿಂತಲೂ ಉತ್ತಮನೆನಿಸಿರುವೆನು. ದೇವಾದಿದೇವನೂ, ಜಗದೊಡೆಯನೂ, ಮಹಾದೇವನೂ ಆದ ವಿಶ್ವೇಶ್ವರಲಿಂಗವನ್ನು ಶ್ರೇಷ್ಠವಾದ ರೀತಿಯಿಂದ ಪೂಜೆಮಾಡಿದವನು ಸಕಲ ಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ. ॥೯-೧೦॥

ಸಕಲ ದೇವತೆಗಳಿಗೂ ಅಧಿಪತಿಯಾದ ಮಂಗಳಸ್ವರೂಪನಾದ ನನ್ನನ್ನು ಬೇರೆ ದೇವತೆಗಳಿಗೆ ಸರಿಸಮಾನನೆಂದು ತಿಳಿದು, ಸರ್ವೋತ್ಕೃಷ್ಟನೆಂದರಿಯದೇ ಇರುವವನು (ನಾಯಿಮಾಂಸವನ್ನು ತಿನ್ನುವ) ಚಂಡಾಲರಲ್ಲಿಯೂ ಅಧಮನೆಂದು ಹೇಳಲ್ಪಡುವನು. ॥೧೧॥

ವಿಶ್ವಾಧಿಕಂ ವಿಭುಂ ರುದ್ರಂ ಯೋಽನ್ಯತುಲ್ಯಂ ವದಿಷ್ಯತಿ ।
ಸ ಜಾರಜ ಇತಿ ಜ್ಞೇಯಃ ಸಂತತಿಸ್ತಸ್ಯ ಜಾರಜಾ ॥೧೨॥

ಈಶಾನಂ ಸರ್ವವಿದ್ಯಾನಾಂ ಯೋ ಮಾಮನ್ಯಸಮಂ ವದೇತ್ ।
ಸ ಬ್ರಹ್ಮಹೇತಿ ವಿಜ್ಞೇಯೋ ನ ತೇನ ಸಹ ಸಂವದೇತ್ ॥೧೩॥

ಉಮಾಪತಿಂ ಮಹಾದೇವಂ ಯೋ ಮಾಮನ್ಯಸಮಂ ವದೇತ್ ।
ಸ ಗೋಸಹಸ್ರಹಾ ನಿತ್ಯಂ ನ ತೇನ ಸಹ ಸಂವಸೇತ್ ॥೧೪॥

ಶ್ರೀನೀಲಕಂಠಂ ವಿಶ್ವೇಶಂ ಯೋ ಮಾಮನ್ಯಸಮಂ ವದೇತ್ ।
ಸ ಚಂಡಾಲ ಇತಿ ಜ್ಞೇಯಃ ಸತ್ಯಂ ಸತ್ಯಂ ನ ಸಂಶಯಃ ॥೧೫॥

ಶಿವೋಽನ್ಯಸುರತುಲ್ಯೋಽಯಮಿತಿ ಯಸ್ತು ವದಿಷ್ಯತಿ ।
ತಜ್ಜಿಹ್ವಾಂ ದ್ರುತಮುತ್ಪಾಟ್ಯ ಪುರೀಷೇಣ ವಿಲೇಪಯೇತ್ ॥೧೬॥

ಜಗಚ್ಛ್ರೇಷ್ಠನೂ ಸರ್ವವ್ಯಾಪಿಯೂ ಆದ ರುದ್ರನನ್ನು ಇತರರಿಗೆ ಸಮಾನನೆಂದು ಹೇಳುವವನು ವ್ಯಭಿಚಾರದಿಂದ ಹುಟ್ಟಿದವನೆಂದು ತಿಳಿಯಬೇಕು. ಅವನ ವಂಶವೇ ವ್ಯಭಿಚಾರದಮೂಲಕ ಬಂದುದಾಗಿರುವುದು. ॥೧೨॥

ಸಕಲ ವಿದ್ಯೆಗಳಿಗೂ ಅಧಿಪತಿಯಾದ ನನ್ನನ್ನು ಬೇರೆಯವರಿಗೆ ಸಮಾನನೆಂದು ಹೇಳುವವರು ಬ್ರಹ್ಮಹತ್ಯಾಮಾಡಿದವರೆಂದು ತಿಳಿಯಬೇಕು. ಅವನೊಡನೆ ಮಾತನ್ನೂ ಮಾಡಬಾರದು. ॥೧೩॥

ಉಮಾರಮಣನೂ, ಮಹಾದೇವನೂ ಆದ ನನ್ನನ್ನು ಮತ್ತೊಬ್ಬರಿಗೆ ಸಮನೆಂದು ಹೇಳುವವನು, ನಿತ್ಯವೂ ಸಾವಿರ ಗೋವುಗಳನ್ನು ಕೊಂದ ಪಾಪವನ್ನು ಹೊಂದುವನು. ಅವನ ಸಂಗಡ ವಾಸಮಾಡಬಾರದು. ॥೧೪॥

ನೀಲಕಂಠನೂ (ವಿಷಪಾನದಿಂದ ಕಪ್ಪಾದ ಕೊರಳುಳ್ಳವನೂ) ಜಗದೊಡೆಯನೂ ಆದ ನನ್ನನ್ನು ಮತ್ತೊಬ್ಬರಿಗೆ ಸಮಾನನೆಂದು ಹೇಳುವವನು ಸತ್ಯವಾಗಿಯೂ ಚಂಡಾಲನೆನಿಸುವನು. ಇದರಲ್ಲಿ ಸಂಶಯವೇ ಇಲ್ಲ ॥೧೫॥

ಶಿವನೊ ಬೇರೆ ದೇವತೆಗಳಂತೆಯೇ ಅವರಿಗೆ ಸರಿಸಮಾನಸ್ಕಂಧನೆಂದು ಹೇಳುವವನ ನಾಲಿಗೆಯನ್ನು ಜಾಗ್ರತೆ ಕಿತ್ತುಹಾಕಿ ಅದನ್ನು ಅಮೇಧ್ಯದಿಂದ ಲೇಪನ ಮಾಡಬೇಕು. ॥೧೬॥

ಯೋ ಮಾಮನ್ಯಸಮಂ ಮತ್ವಾ ಕ್ಷಣಾರ್ಧಂ ವಾ ವಸೇನ್ನರಃ ।
ಸ ಮಹಾಘೋರನರಕೇ ಸ್ಥಾಸ್ಯತ್ಯಾಕಲ್ಪಮನ್ವಹಂ ॥೧೭॥

ಶಿವೋಽಯಮನ್ಯದೇವೇಭ್ಯಃ ಕನಿಷ್ಠ ಇತಿ ಯೋ ವದೇತ್ ।
ಸ ಸರ್ವಯಾತನಾಭೋಕ್ತಾ ಕಲ್ಪಾಂತೇಽಪಿ ನ ಮುಚ್ಯತೇ ॥೧೮॥

ಸ ನಷ್ಟಃ ಸ ಮಹಾಪಾಪೀ ಸ ಮಾತೃಪಿತೃಹಾ ಶಿವೇ ।
ಯಸ್ತು ಮಾಂ ಶಿವಮಾರಾಧ್ಯಮನಾರಾಧ್ಯೈವ ಸಂವಸೇತ್ ॥೧೯॥

ಸ ಮದ್ಯಪ ಇತಿ ಜ್ಞೇಯಃ ಸರ್ವದಾ ಸರ್ವದೇಹಿಭಿಃ ।
ಯಸ್ತು ಮಾಂ ಶಿವಮಾರಾಧ್ಯಮನಾರಾಧ್ಯೈವ ಸಂವಸೇತ್ ॥೨೦॥

ಸ ನಿತ್ಯಂ ಸ್ವರ್ಣಹಾರೀತಿ ವಿಜ್ಞೇಯಃ ಸರ್ವದೇಹಿಭಿಃ ।
ಯಸ್ತು ಮಾಂ ಶಿವಮಾರಾಧ್ಯಮನಾರಾಧ್ಯೈವ ಸಂವಸೇತ್ ॥೨೧॥

ಸ ಗುರುಸ್ತ್ರೀರತೋ ಜ್ಞೇಯಃ ಸರ್ವದಾ ಸರ್ವದೇಹಿಭಿಃ ।
ಯಸ್ತು ಮಾಂ ಶಿವಮಾರಾಧ್ಯಮನಾರಾಧ್ಯೈವ ಸಂವಸೇತ್ ॥೨೨॥

ನನ್ನನ್ನು ಬೇರೆ ದೇವತೆಗಳಿಗೆ ಸಮಾನನೆಂದು ತಿಳಿದು ಅರ್ಧಕ್ಷಣವಾದರೂ ವಾಸಮಾಡುವ ಮಾನವನು ಕಲ್ಪದವರೆಗೂ ಘೋರವಾದ ನರಕದಲ್ಲಿ ಬಿದ್ದು ನರಳುವನು. ಪರಶಿವನನ್ನು ಎಲ್ಲಾ ದೇವತೆಗಳಿಗಿಂತಲೂ ಅಲ್ಪನೆಂದು ಹೇಳುವವನು ಸಕಲ ಯಮಯಾತನೆಗಳನ್ನೂ ಅನುಭವಿಸುತ್ತಾ ಕಲ್ಪವು ಮುಗಿದರೂ ಬಿಡುಗಡೆ ಹೊಂದದೆ ನರಕದಲ್ಲಿಯೇ ಬಿದ್ದು ನರಳುವನು. ||೧೭-೧೮||

ಶಿವನೆನಿಸಿದ ನನ್ನನ್ನು ಪೂಜಾರ್ಹನಾದರೂ ಪೂಜಿಸದೆ ಸುಮ್ಮನೇ ಕಾಲ ಕಳೆಯುತ್ತಾ ವಾಸಮಾಡುವವನು, ನಾಶಹೊಂದುವನು. ಅಲ್ಲದೆ ಎಲೌ ಶಿವೆಯೇ, ಅವನು ಮಹಾಪಾಪಿಯೂ ತಾಯಿತಂದೆಗಳನ್ನು ಕೊಲ್ಲುವವನಿಗೆ ಸಮಾನನೂ ಆಗುತ್ತಾನೆ. ಅಲ್ಲದೇ ಅವನನ್ನು ಸಕಲ ಪ್ರಾಣಿಗಳೂ ಮದ್ಯಪಾಯಿಯೆಂದು ಕರೆಯುವರು. ||೧೯-೨೦||

ನಿತ್ಯವೂ ಶಿವನೆಂದು ಪ್ರಸಿದ್ಧನಾಗಿರುವ ನಾನು ಪೂಜ್ಯನಾದರೂ ನನ್ನನ್ನು ಪೂಜೆಮಾಡದೆ ಉದಾಸೀನವಾಡಿ ವಾಸಿಸುವನು, ಸಕಲ ಪ್ರಾಣಿಗಳಿಂದಲೂ ಚಿನ್ನ

ಯೋ ನಿತ್ಯಂ ಶಿವಪೂಜಾಯಾಂ ನಿರತಃ ಶಿವತತ್ಪರಃ ।
ಸ ವಿಷ್ಣುಮುಖ್ಯೈರಮರೈಃ ಪೂಜನೀಯೋ ನ ಸಂಶಯಃ ॥೨೩॥

ಶಿವಪೂಜಾಪರಂ ದೃಷ್ಟ್ವಾ ದೇವಾ ವಿಷ್ಣುಪುರೋಗಮಾಃ ।
ಪೂಜಯಂತಿ ಪ್ರಸ್ತುವಂತಿ ನಮಂತಿ ಚ ಮುಹುರ್ಮುಹುಃ ॥೨೪॥

ಅಯಂ ಧನ್ಯತಮೋ ಮರ್ತ್ಯಃ ಶಿವಪೂಜಾಪರಾಯಣಃ ।
ಭಾಗ್ಯವಾನಿತಿ ಸರ್ವೇಽಪಿ ವದಂತ್ಯೇವಾಮರಾಃ ಸದಾ ॥೨೫॥

ಯದ್ದೇಹಾಪಗಮೋ ಮೋಕ್ಷೋ ಯಸ್ಯ ತಸ್ಯೈವ ದೇಹಿನಃ ।
ಮಹಾದೇವಸ್ಯ ಪೂಜಾಯಾಂ ಮತಿರ್ಭವತಿ ನಾನ್ಯಥಾ ॥೨೬॥

ಶಿವೋಽಯಂ ಸರ್ವದೇವಾನಾಂ ಪ್ರಭುರಿತ್ಯಸ್ತಿ ಯಾ ಮತಿಃ ।
ಸಾ ತಸ್ಯ ಯಸ್ಯ ಯದ್ದೇಹಾಪಗಮೋ ಶಾಂಕರಂ ಪದಂ ॥೨೭॥

ವನ್ನು ಕದ್ದಿರುವನಿಗೆ ಸಮನೆಂದು ಕರೆಯಲ್ಪಡುವನು. ಅಲ್ಲದೇ ಅವನನ್ನು ಗುರುಪತ್ನೀ ಸಮಾಗಮ ಮಾಡಿದವನೆಂದೂ ಕರೆಯುವರು. (ಇವೆರಡೂ ಮಹಾಪಾಪಗಳಾದುದರಿಂದ ಅವನು ಮಹಾಪಾಪಮಾಡಿದವನೆಂದೇ ಪರಿಗಣಿಸಲ್ಪಡುವನು.) ||೨೧-೨೨||

ಪ್ರತಿನಿತ್ಯವೂ ಶಿವಪೂಜೆಯಲ್ಲಿಯೇ ತತ್ಪರನಾಗಿ ಶಿವಧ್ಯಾನದಲ್ಲಿಯೇ ನಿರತನಾಗಿರುವನು, ವಿಷ್ಣುವೇ ಮೊದಲಾದ ದೇವತೆಗಳಿಂದಲೂ ನಿಶ್ಚಯವಾಗಿಯೂ ಪೂಜ್ಯನೆನಿಸುವನು. ||೨೩||

ಶಿವಪೂಜಾತತ್ಪರನಾದವನನ್ನು ನೋಡಿ, ವಿಷ್ಣುವೇ ಮೊದಲಾದ ದೇವತೆಗಳೂ ಪದೇ ಪದೇ ಸ್ತೋತ್ರಮಾಡುತ್ತಲೂ ನಮಸ್ಕಾರಮಾಡುತ್ತಲೂ ಇರುವರು. ||೨೪||

ಶಿವಪೂಜಾಪರಾಯಣನಾದ ಮಾನವನೇ ಅತ್ಯಂತ ಧನ್ಯನು. ದೇವತೆಗಳೆಲ್ಲರೂ ಅವನನ್ನೇ ಭಾಗ್ಯವಂತನೆಂದೂ ಕರೆಯುವರು. ||೨೫||

ಮಹಾದೇವನ ಪೂಜೆಯಲ್ಲಿಯೇ ಯಾರಿಗೆ ಬುದ್ಧಿ ಹುಟ್ಟುವುದೋ ಆ ಪ್ರಾಣಿಗೆ ಮಾತ್ರ ಈ ಶರೀರವು ನಷ್ಟವಾದಮೇಲೆ ಮೋಕ್ಷದೊರೆಯುವುದೇ ಹೊರತು ಬೇರೆಯವರಿಗೆ ದೊರೆಯಲಾರದು. ||೨೬||

ಸಕಲ ದೇವತೆಗಳಿಗೂ ಆ ಪರಶಿವನೊಬ್ಬನೇ ಪ್ರಭುವೆಂಬ ಬುದ್ಧಿಯುಂಟಾಗುವ ಮಾನವನಿಗೇ ಈ ಪಾಂಚಭೌತಿಕವಾದ ಶರೀರ ನಾಶಾನಂತರ ಆ ಶಂಕರನ

ಸರ್ವೋತ್ಕೃಷ್ಟಂ ಶಿವಂ ಮತ್ವಾ ಮಾಮರ್ಚಯತಿ ಯೋ ನರಃ ।
ತಸ್ಮೈ ದಾಸ್ಯಾಮಿ ಕೈವಲ್ಯಂ ನಾನ್ಯಸ್ಮೈ ಸತ್ಯಮುಚ್ಯತೇ ॥೨೮॥

ಯಸ್ಯ ಸಾಧಾರಣಾ ಭಕ್ತಿರ್ಮಯಿ ಸರ್ವೋತ್ತಮೇ ಶಿವೇ ।
ಸ ಏವ ಮುಕ್ತಿಕಾಂತಾಯಾಃ ಕಾಂತಃ ಸತ್ಯಂ ವರಾನನೇ ॥೨೯॥

ಸರ್ವದೇವಾಧಿದೇವಂ ಮಾಂ ಶಿವಂ ಯೋಽಭ್ಯರ್ಚಯಿಷ್ಯತಿ ।
ಸ ದೇವೋರಗಗಂಧರ್ವಯಕ್ಷಪೂಜ್ಯೋ ಭವಿಷ್ಯತಿ ॥೩೦॥

ಯೋ ಮತ್ಪೂಜಾಪರೋ ಮರ್ತ್ಯಸ್ತದ್ದ್ವಾರಿ ಸಕಲಾಃ ಸುರಾಃ ।
ಕೃತಾಂಜಲಿಪುಟಾ ನಿತ್ಯಂ ಸ್ಥಾಸ್ಯಂತ್ಯೇವ ನ ಸಂಶಯಃ ॥೩೧॥

ಅನನ್ಯಶರಣೋ ಯಸ್ತು ಶಿವಪೂಜಾಪರಾಯಣಃ ।
ನ ತಸ್ಯ ಸಂಪದೋಽದೂರೇ ಸತ್ಯಂ ಸತ್ಯಂ ನ ಸಂಶಯಃ ॥೩೨॥

ಸಾನ್ನಿಧ್ಯವು ದೊರೆಯುವುದು. ಶಿವನು ಸರ್ವೋತ್ಕೃಷ್ಟನೆಂದು ತಿಳಿದು ನನ್ನನ್ನು ಭಕ್ತಿಯಿಂದ ಪೂಜಿಸುವ ಮಾನವನಿಗೇ ನಾನು ಮೋಕ್ಷವನ್ನು ಕೊಡುವೆನೇ ಹೊರತು, ಬೇರೆಯವರಿಗೆ ಸತ್ಯವಾಗಿಯೂ ಕೊಡುವುದಿಲ್ಲವೆಂದು ಹೇಳುವೆನು. ॥೨೭-೨೮॥

ಸುಂದರವಾದ ಮುಖವುಳ್ಳ ದೇವಿಯೇ, ಸರ್ವೋತ್ತಮವಾದ ಆ ಪರಶಿವನಲ್ಲಿ ಅಂದರೆ ನನ್ನಲ್ಲಿ ಸಾಧಾರಣವಾದ ಭಕ್ತಿಯಿಟ್ಟಿರುವವನೇ, ಮೋಕ್ಷವೆಂಬ ಸುಂದರಾಂಗಿಯ ಪತಿಯಾಗಲರ್ಹನಾಗುವನು. ಇದು ಸತ್ಯವೆಂದು ತಿಳಿಯುವನಾಗು.॥೨೯॥

ಸಕಲ ದೇವತೆಗಳಿಗೂ ಅಧಿಪತಿಯೂ ಪರಶಿವನೂ ಎನಿಸಿರುವ ನನ್ನನ್ನು ಪೂಜಿಸುವವನು, ದೇವತೆಗಳು, ಪನ್ನಗರು, ಗಂಧರ್ವರು, ಯಕ್ಷರು ಇವರೇ ಮೊದಲಾದವರಿಂದ ನಿತ್ಯವೂ ಪೂಜಿಸಲ್ಪಡುವನು. ॥೩೦॥

ನನ್ನ ಪೂಜೆಯಲ್ಲಿಯೇ ನಿರತನಾಗಿರುವ ಮಾನವನ ಮನೆಯ ಬಾಗಿಲಿನಲ್ಲಿ ಸಕಲ ದೇವತೆಗಳೂ ಕೈಜೋಡಿಸಿಕೊಂಡು ನಿತ್ಯವೂ ನಿಂತುಕೊಂಡಿರುವರೆಂಬುದರಲ್ಲಿ ಸಂಶಯವೇ ಇಲ್ಲ. ॥೩೧॥

ಬೇರೆ ಯಾವ ದೇವತೆಯನ್ನೂ ಶರಣುಹೊಗದೇ ಕೇವಲ ಶಿವಪೂಜಾನಿರತನಾಗಿರುವವನಿಗೇ ಸತ್ಯವಾಗಿಯೂ ಹತ್ತಿರದಲ್ಲಿಯೇ ಶೀಘ್ರವಾಗಿಯೇ ಐಶ್ವರ್ಯ

ತಸ್ಯೈಶ್ವರ್ಯಂ ತಸ್ಯ ವಿದ್ಯಾ ಯಸ್ಯ ಭಕ್ತಿಃ ಸದಾಶಿವೇ ।
ತಸ್ಯೈವ ಮುಕ್ತಿರಸ್ಯಂತೇ ಸತ್ಯಂ ಸತ್ಯಂ ನ ಸಂಶಯಃ ॥೩೩॥

ಯಸ್ಯ ನಾಸ್ತಿ ಗೃಹೇ ನಿತ್ಯಂ ಶಿವಲಿಂಗಾರ್ಚನಂ ಶಿವೇ ।
ತದ್ಗೃಹಂ ಚಂಡಚಂಡಾಲಗೃಹಮೇವ ನ ಸಂಶಯಃ ॥೩೪॥

ಶಿವಲಿಂಗಂ ನ ಯಸ್ಯಾಸ್ತಿ ಗೃಹೇ ಬಿಲ್ವದಲಾರ್ಚಿತಂ ।
ತದ್ಗೃಹಂ ದೂರತಸ್ತ್ಯಾಜ್ಯಂ ಚಂಡಾಲಾಗಾರವದ್ಧ್ರುವಂ ॥೩೫॥

ಶಿವಲಿಂಗಂ ನ ಯಸ್ಯಾಸ್ತಿ ಗೃಹೇ ಬಿಲ್ವಾದಿಪೂಜಿತಂ ।
ತದ್ಗೃಹೇ ಜಲಮಲ್ಪಂ ವಾ ನ ಗ್ರಾಹ್ಯಂ ಸರ್ವಥಾ ದ್ವಿಜೈಃ ॥೩೬॥

ಯೇನ ನಾಭ್ಯರ್ಚಿತಂ ಲಿಂಗಂ ತೇನ ಭ್ರಾಂತ್ಯಾಪಿ ಸರ್ವಥಾ ।
ನ ಸಂವಸೇದ್ಭ್ರಮೇಣಾಪಿ ತೇನ ಸಾರ್ಧಂ ನ ಸಂವದೇತ್ ॥೩೭॥

ಶಿವಲಿಂಗಾರ್ಚನಂ ಯಸ್ತು ನ ಕರಿಷ್ಯತಿ ಸನ್ಮತಂ ।
ತತ್ಸ್ಪರ್ಶೇ ಭಾನುಮಾಲೋಕ್ಯ ಸಚೇಲಸ್ನಾನಮಾಚರೇತ್ ॥೩೮॥

ಗಳುಂಟಾಗುವುವು. ಆ ಸದಾಶಿವನಲ್ಲಿ ಭಕ್ತಿಯುಳ್ಳವನಿಗೇ ಸಕಲ ಸಂಪತ್ತುಗಳೂ, ವಿದ್ಯೆಯೂ ಕೊನೆಯಲ್ಲಿ ಮುಕ್ತಿಯೂ ಸತ್ಯವಾಗಿ ಉಂಟಾಗುವುವು. ಇದರಲ್ಲಿ ಸಂಶಯವಿಲ್ಲ. ॥೩೨-೩೩॥

ಮಂಗಳಾಂಗಿಯೇ, ನಿತ್ಯವೂ ಶಿವಲಿಂಗಪೂಜೆಯಿಲ್ಲದಿರುವವನ ಮನೆಯು ನಿಜವಾಗಿಯೂ ಕ್ರೂರನಾದ ಚಂಡಾಲನ ಮನೆಯೆಂಬುದರಲ್ಲಿ ಸಂದೇಹವೇ ಇಲ್ಲ. ॥೩೪॥

ಬಿಲ್ವಪತ್ರೆಯೇ ಮೊದಲಾದ ಪೂಜಾಸಾಧನಗಳಿಂದ ಪೂಜೆಮಾಡಲ್ಪಡದೇ ಇರುವ ಶಿವಲಿಂಗವುಳ್ಳವನ ಮನೆಯನ್ನು, ಚಂಡಾಲನ ಮನೆಯಂತೆ ನಿಜವಾಗಿ ದೂರದಲ್ಲಿಯೇ ತ್ಯಾಗಮಾಡಬೇಕು. ಅಲ್ಲದೇ ಅಂತಹವನ ಮನೆಯಲ್ಲಿ ಬ್ರಾಹ್ಮಣರು ಸ್ವಲ್ಪ ನೀರನ್ನೂ ಖಂಡಿತ ಕುಡಿಯಬಾರದು. ॥೩೫-೩೬॥

ಭ್ರಾಂತಿಯಿಂದಲಾಗಲೀ, ಅಥವಾ ಉದ್ದೇಶಪೂರ್ವಕವಾಗಿಯಾಗಲೀ ಆ ಶಿವ ಲಿಂಗವನ್ನು ಪೂಜೆಮಾಡದಿರುವವನೊಡನೆ ವಾಸಮಾಡಬಾರದು. ಅಲ್ಲದೇ ಭ್ರಮೆ ಯಿಂದಲಾದರೂ ಅವರೊಡನೆ ಮಾತನಾಡಬಾರದು. ಸತ್ಪುರುಷರಿಂದ ಪೂಜ್ಯವೆಂದು

ಶಿವಲಿಂಗಾರ್ಚನೇ ಯಸ್ಯ ನಾಸ್ತ್ಯಸಾಧಾರಣೀ ಮತಿಃ ।
ತತ್ಸ್ಪರ್ಶೇ ಭಾನುಮಾಲೋಕ್ಯ ಸಚೇಲಸ್ನಾನಮಾಚರೇತ್ ॥೩೯॥

ಶಿವಲಿಂಗಾನರ್ಚಕೇಭ್ಯಃ ಶಿವಲಿಂಗಾರ್ಚಕಃ ಸದಾ ।
ಚಂಡಾಲೋಽಪಿ ವರಃ ಸತ್ಯಂ ನ ಶಿವಾನರ್ಚಕೋ ದ್ವಿಜಃ ॥೪೦॥

ಶಿವಲಿಂಗಾರ್ಚನಂ ನಿತ್ಯಂ ಯಸ್ತ್ಯಜೇದವಿವೇಕತಃ ।
ಸ ಯಾತಿ ನರಕಂ ಘೋರಂ ಯಾವದಾಚಂದ್ರತಾರಕಂ ॥೪೧॥

ಶಿವಲಿಂಗಂ ಸಮಭ್ಯರ್ಚ್ಯ ಯಃ ಪಶ್ಯತಿ ಶಿವಂ ಮುದಾ ।
ಸ ಏವ ಸರ್ವಭಾಗ್ಯಾನಾಮಾಲಯೋ ಭವತಿ ಧ್ರುವಂ ॥೪೨॥

ಶಿವೇ ಕಿಂ ಬಹುನೋಕ್ತೇನ ನಿತ್ಯಂ ಯಃ ಶಿವಪೂಜಕಃ ।
ಸ ಮಮಾತಿಪ್ರಿಯಃ ಸತ್ಯಂ ಸತ್ಯಂ ಸತ್ಯಂ ನ ಸಂಶಯಃ ॥೪೩॥

ಅಂಗೀಕರಿಸಲ್ಪಟ್ಟಿರುವ ಶಿವಲಿಂಗವನ್ನು ಪೂಜೆಮಾಡದಿರುವವನನ್ನು ಮುಟ್ಟಿದವನು, ಸೂರ್ಯನನ್ನು ನೋಡಿ ಆ ಪಾಪಪರಿಹಾರಕ್ಕೋಸ್ಕರ ತಾನು ಉಟ್ಟಿದ್ದ ಬಟ್ಟೆಯೊಡನೆ ಸ್ನಾನಮಾಡಬೇಕು. ॥೩೭-೩೮॥

ಶಿವಲಿಂಗ ಪೂಜೆಯಲ್ಲಿ ವಿಶೇಷವಾದ ಬುದ್ಧಿಯಿಲ್ಲದವನ ಸ್ಪರ್ಶವಾದರೂ, ಕೂಡಲೇ ಸೂರ್ಯನನ್ನು ನೋಡಿ ಸಚೇಲ ಸ್ನಾನಮಾಡಬೇಕು. ಶಿವಲಿಂಗವನ್ನು ಪೂಜೆಮಾಡದಿರುವವರಿಗಿಂತ ಶಿವಲಿಂಗ ಪೂಜಕನು ಯಾವಾಗಲೂ ಶ್ರೇಷ್ಠನೇ ಆಗಿರುವನು. ಶಿವಲಿಂಗ ಪೂಜೆಯನ್ನು ಮಾಡದವನಿಗಿಂತ ಚಂಡಾಲನಾದರೂ ಸತ್ಯವಾಗಿಯೂ ಶ್ರೇಷ್ಠನೆಂದು ತಿಳಿ. ॥೩೯-೪೦॥

ವಿವೇಕವಿಲ್ಲದೇ ನಿತ್ಯವೂ ಶಿವಲಿಂಗ ಪೂಜೆಯನ್ನು ಬಿಡುವವನು, ಸೂರ್ಯ ಚಂದ್ರರಿರುವವರೆಗೂ ಘೋರವಾದ ನರಕವನ್ನು ಹೊಂದುವನು. ಶಿವಲಿಂಗವನ್ನು ಪೂಜೆಮಾಡಿ, ಪ್ರೀತಿಯಿಂದ ಆ ಶಿವಲಿಂಗವನ್ನು ದರ್ಶನಮಾಡುವವನು ಸಕಲೈಶ್ವರ್ಯಗಳಿಗೂ ನಿಜವಾಗಿ ಆಶ್ರಯನಾಗುವನು. ॥೪೧-೪೨॥

ಏಕಮೇವ ಮಹಾದೇವಂ ಭಕ್ತ್ಯಾ ಯೋಽಭ್ಯರ್ಚಯಿಷ್ಯತಿ ।
ಸ ಶಾಂಕರ ಇತಿ ಜ್ಞೇಯಃ ಸ ಏವ ಮಮ ಸಂಮತಃ ॥೪೪॥

ಏಕೋಽಹಂ ಪೂಜಿತೋ ನಿತ್ಯಂ ದಾಸ್ಯಾಮಿ ಪರಮಾಂ ಗತಿಂ ।
ಸತ್ಯಂ ಸತ್ಯಂ ಪುನಃ ಸತ್ಯಮುದ್ಧೃತ್ಯ ಭುಜಮುಚ್ಯತೇ ॥೪೫॥

ಅನನ್ಯಶರಣೋ ಯಸ್ತು ಸರ್ವಾನ್ಧರ್ಮಾನ್ವಿಹಾಯ ಮಾಂ ।
ಯೋಽರ್ಚಯಿಷ್ಯತಿ ಪುಣ್ಯಾತ್ಮಾ ಸ ಏವ ಮಮ ಸಂಮತಃ ॥೪೬॥

ಯಃ ಶಂಕರೈಕಶರಣೋ ಯಃ ಶಿವೈಕಾರ್ಚನಪ್ರಿಯಃ ।
ಸ ಏವ ಸರ್ವಧರ್ಮಾಣಾಮಾಶ್ರಯೋ ಭವತಿ ಧ್ರುವಂ ॥೪೭॥

ಧರ್ಮಾರ್ಥಕಾಮಮೋಕ್ಷಾರ್ಥಂ ಮಾಮಭ್ಯರ್ಚ್ಯ ಸದಾಶಿವಂ ।
ಧರ್ಮಾರ್ಥಕಾಮಮೋಕ್ಷಾಣಾಂ ಕ್ಷಿಪ್ರಂ ಭವತಿ ಭಾಜನಂ ॥೪೮॥

ಮಂಗಳಾಂಗಿಯೇ, ಹೆಚ್ಚು ಹೇಳುವುದರಿಂದ ಪ್ರಯೋಜನವೇನು? ಪ್ರತಿನಿತ್ಯವೂ ಆ ಪರಶಿವನನ್ನು ಪೂಜೆ ಮಾಡುವವನು ಸತ್ಯವಾಗಿಯೂ ನನಗೆ ತುಂಬಾ ಪ್ರೀತಿಕರನೆನಿಸುವುದಲ್ಲಿ ಸಂಶಯವೇ ಇಲ್ಲ. ||೪೩||

ಅದ್ವಿತೀಯನಾದ ಮಹಾದೇವನೊಬ್ಬನನ್ನೇ ಭಕ್ತಿಯಿಂದ ಪೂಜೆಮಾಡುವವನು ಶಂಕರನ ಭಕ್ತನೆನಿಸಿ, ನನಗೆ ತುಂಬಾ ಪ್ರೀತಿಕರನಾಗುವನು. ನನ್ನೊಬ್ಬನನ್ನೇ ನಿತ್ಯವೂ ಪೂಜೆಮಾಡುವುದಾದರೆ ಅವನಿಗೆ ನಾನು ಉತ್ತಮವಾದ ಸದ್ಗತಿಯನ್ನು ಸತ್ಯವಾಗಿಯೂ ಕೊಡುತ್ತೇನೆಂದು ಭುಜವನ್ನು ಎತ್ತಿ ಸಾರಿ ಹೇಳುವೆನು. ||೪೪-೪೫||

ಎಲ್ಲಾ ಧರ್ಮಗಳನ್ನೂ ಬಿಟ್ಟು, ಕೇವಲ ನನ್ನನ್ನೇ ಮೊರೆಹೊಕ್ಕು ಪೂಜೆ ಮಾಡುವ ಪುಣ್ಯ ಪುರುಷನೇ ನನಗೆ ಪ್ರೀತಿಕರನೆನಿಸುವನು. ||೪೬||

ಆ ಶಂಕರನೊಬ್ಬನನ್ನೇ ರಕ್ಷಕನೆಂದು ನಂಬಿರುವವನೂ, ಮತ್ತು ಶಿವಪೂಜೆಯೊಂದರಲ್ಲಿಯೇ ತುಂಬಾ ಪ್ರೀತಿಯುಳ್ಳವನೂ ಆಗಿರುವನೊಬ್ಬನೇ ಸಕಲ ಧರ್ಮಗಳಿಗೂ ಸತ್ಯವಾಗಿಯೂ ಆಶ್ರಯನಾಗಿರುವನು. ||೪೭||

ಐಹಿಕಾಮುಷ್ಮಿಕಂ ವಾಪಿ ಯೋ ಮತ್ತಃ ಕಾಂಕ್ಷತೇ ಫಲಂ ।
ಸ ಮಾಮಭ್ಯರ್ಚ್ಯ ವಿಶ್ವೇಶಂ ಸಮವಾಪ್ನೋತಿ ತತ್ಫಲಂ ॥೪೯॥

ಮಾಮಭ್ಯರ್ಚ್ಯ ಮಹಾದೇವಂ ಸ್ವಶಕ್ತ್ಯಾ ಮನ್ಮನಾಃ ಸದಾ ।
ಕದಾಚಿದಪಿ ದುಃಖಾನಿ ನ ಪ್ರಾಪ್ನೋತ್ಯೇವ ಮಾನವಃ ॥೫೦॥

ಯೋ ಮದರ್ಪಿತಸತ್ಕರ್ಮಾ ಮದಾರಾಧನತತ್ಪರಃ ।
ಸ ಮದ್ಭಕ್ತಸ್ತತಸ್ತೇನ ಕೃತಾ ಪೂಜಾ ಮಮ ಪ್ರಿಯಾ ॥೫೧॥

ಯಸ್ಯಾಸ್ತಿ ಮತ್ತಮಾತಂಗಾಃ ಸ್ವಾಮಿತ್ವೇಚ್ಛಾತಿಸೌಖ್ಯದಾ ।
ತೇನ ಮಲ್ಲಿಂಗಮಭ್ಯರ್ಚ್ಯಂ ಸತ್ಯಂ ಸತ್ಯಂ ಮಯೋಚ್ಯತೇ ॥೫೨॥

ಯಸ್ಯೋಚ್ಚೈಃಶ್ರವತುಲ್ಯಾಶ್ವ ಸ್ವಾಮಿತ್ವೇಚ್ಛಾತಿಸೌಖ್ಯದಾ ।
ತೇನ ಮಲ್ಲಿಂಗಮಭ್ಯರ್ಚ್ಯಂ ಸತ್ಯಂ ಸತ್ಯಂ ನ ಸಂಶಯಃ ॥೫೩॥

ಧರ್ಮ, ಅರ್ಥ, ಕಾಮ ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನೂ ಹೊಂದುವುದಕ್ಕೋಸ್ಕರ ಸರ್ವಮಂಗಳಸ್ವರೂಪನಾದ ನನ್ನನ್ನು ಯಾವಾತನು ಪೂಜೆ ಮಾಡುವನೋ ಅವನು ಕೂಡಲೇ ಆ ಪುರುಷಾರ್ಥಗಳಿಗೆ ಆಶ್ರಯನಾಗುವನು. (ಅಂದರೆ ಅವುಗಳನ್ನೆಲ್ಲಾ ತಪ್ಪದೇ ಹೊಂದುವನು.) ॥೪೮॥

ವಿಶ್ವೇಶ್ವರನೆನಿಸಿದ ನನ್ನನ್ನು ಪೂಜಿಸಿದ ಮಾನವನು, ತಾನು ಬಯಸುವ ಐಹಿಕ (ಈ ಜನ್ಮದಲ್ಲಿ ಬೇಕಾದ) ಆಮುಷ್ಮಿಕ (ಪರಲೋಕದಲ್ಲಿ ಹೊಂದಬಹುದಾದ) ಫಲಗಳನ್ನು ನನ್ನಿಂದ ತಪ್ಪದೇ ಪಡೆಯುವನು. ಮಹಾದೇವನೆನಿಸಿದ ನನ್ನನ್ನು ತನ್ನ ಶಕ್ತ್ಯನುಸಾರ ಪೂಜಿಸಿ ನನ್ನಲ್ಲಿಯೇ ನೆಲಸಿರುವ ಮನಸ್ಸುಳ್ಳವನಾಗಿರುವ ಮಾನವನು, ಯಾವಾಗಲೂ ಸ್ವಲ್ಪ ದುಃಖವನ್ನೂ ಹೊಂದಲಾರನು. ॥೪೯-೫೦॥

ತಾನು ಮಾಡುವ ಶುಭಕರ್ಮಗಳನ್ನೆಲ್ಲಾ ನನಗೆ ಸಮರ್ಪಿಸುತ್ತ, ನನ್ನ ಪೂಜೆಯಲ್ಲಿಯೇ ತತ್ಪರನಾದವನು ನನ್ನಭಕ್ತನೆನಿಸಿಸುವನು. ಆ ನನ್ನ ಭಕ್ತನು ನನಗೆ ಪ್ರೀತಿಯುಂಟಾಗುವಂತೆ ನನ್ನ ಪೂಜೆಯನ್ನು ಮಾಡುವನು. ॥೫೧॥

ಮದಿಸಿದ ಆನೆಗಳನ್ನು ಹೊಂದಿ, ತಾನು ಅವುಗಳಿಗೆ ಅಧಿಪತಿಯಾಗಬೇಕೆಂದು ಅಪೇಕ್ಷಿಸುವವನು, ನನ್ನ ಲಿಂಗವನ್ನು ಪೂಜೆಮಾಡಬೇಕೆಂದು ಸತ್ಯವಾಗಿಯೂ ನಾನು ಹೇಳುವೆನು. ಮತ್ತು ಉಚ್ಚೈಃಶ್ರವಸ್ಸೆಂಬ ಕುದುರೆಗಳಿಗೆ ಸಮಾನವಾದ ಕುದುರೆ

ಯಸ್ಯ ವಹ್ನಿಪದೇ ವಾಂಛಾ ಮೋಕ್ಷವಾಂಛಾಽಪಿ ಶೋಭನೇ ।
ತೇನ ಮಲ್ಲಿಂಗಮಭ್ಯರ್ಚ್ಯಂ ಸತ್ಯಂ ಸತ್ಯಂ ನ ಸಂಶಯಃ ॥೫೪॥

ಯಸ್ಯ ರಾಜ್ಯಾಧಿಪತ್ಯೇಚ್ಛಾ ಮೋಕ್ಷವಾಂಛಾಽಪಿ ಶೋಭನೇ ।
ತೇನ ಮಲ್ಲಿಂಗಮಭ್ಯರ್ಚ್ಯಂ ಸತ್ಯಂ ಸತ್ಯಂ ನ ಸಂಶಯಃ ॥೫೫॥

ಯಸ್ಯ ಸೋಮಪದೇ ವಾಂಛಾ ಮೋಕ್ಷವಾಂಛಾಽಪಿ ಶೋಭನೇ ।
ತೇನ ಮಲ್ಲಿಂಗಮಭ್ಯರ್ಚ್ಯಂ ಸತ್ಯಂ ಸತ್ಯಂ ನ ಸಂಶಯಃ ॥೫೬॥

ಯಸ್ಯ ವಿಷ್ಣುಪದೇ ವಾಂಛಾ ಮೋಕ್ಷವಾಂಛಾಽಪಿ ಶೋಭನೇ ।
ತೇನ ಮಲ್ಲಿಂಗಮಭ್ಯರ್ಚ್ಯಂ ಸತ್ಯಂ ಸತ್ಯಂ ನ ಸಂಶಯಃ ॥೫೭॥

ಯಸ್ಯ ಬ್ರಹ್ಮಪದೇ ವಾಂಛಾ ಮೋಕ್ಷವಾಂಛಾಽಪಿ ಶೋಭನೇ ।
ತೇನ ಮಲ್ಲಿಂಗಮಭ್ಯರ್ಚ್ಯಂ ಸತ್ಯಂ ಸತ್ಯಂ ನ ಸಂಶಯಃ ॥೫೮॥

ಯಸ್ಯ ರುದ್ರಪದೇ ವಾಂಛಾ ಮೋಕ್ಷವಾಂಛಾಽಪಿ ಶೋಭನೇ ।
ತೇನ ಮಲ್ಲಿಂಗಮಭ್ಯರ್ಚ್ಯಂ ಸತ್ಯಂ ಸತ್ಯಂ ನ ಸಂಶಯಃ ॥೫೯॥

ಗಳನ್ನು ಹೊಂದಿ, ಅವುಗಳ ಸ್ವಾಮಿಯಾಗಬೇಕೆಂದು ಅಪೇಕ್ಷೆಪಡುವವನು ಸತ್ಯವಾಗಿಯೂ ನನ್ನ ಲಿಂಗವನ್ನು ಪೂಜೆಮಾಡಿದರೆ ಆ ಫಲವನ್ನು ಹೊಂದುವನೆಂಬುದರಲ್ಲಿ ಸಂಶಯವೇ ಇಲ್ಲ. ||೫೨-೫೩||

ಶೋಭನಾಂಗಿಯೇ, ಅಗ್ನಿಪದವಿಯನ್ನೂ ಮೋಕ್ಷವನ್ನೂ ಅಪೇಕ್ಷಿಸುವನೂ, ರಾಜ್ಯಾಧಿಪತಿಪದವಿಯನ್ನೂ ಮುಕ್ತಿಯನ್ನೂ ಬಯಸುವವನೂ, ನನ್ನ ಲಿಂಗವನ್ನು ಭಕ್ತಿಯಿಂದ ಪೂಜಿಸಿ ಸತ್ಯವಾಗಿಯೂ ಆ ಫಲವನ್ನು ಪಡೆಯುವನು. ||೫೪-೫೫||

ಚಂದ್ರನ ಪದವಿ, ಮೋಕ್ಷ ಇವುಗಳನ್ನೂ, ವಿಷ್ಣುಪದವಿ ಮತ್ತು ಮೋಕ್ಷ ಇವುಗಳನ್ನೂ ಬಯಸುವ ಮಾನವನು ಸತ್ಯವಾಗಿಯೂ ನನ್ನ ಶಿವಲಿಂಗವನ್ನು ಭಕ್ತಿಯಿಂದ ಪೂಜೆಮಾಡಿ ಸಂಶಯವಿಲ್ಲದೇ ತನ್ನ ಇಷ್ಟಾರ್ಥಗಳನ್ನು ಹೊಂದುತ್ತಾನೆ. ||೫೬-೫೭||

ಶುಭಾಂಗಿಯೇ, ಬ್ರಹ್ಮಪದವಿಯಲ್ಲಿಯೂ, ರುದ್ರಪದವಿಯಲ್ಲಿಯೂ ಮತ್ತು ಮೋಕ್ಷದಲ್ಲಿಯೂ ಅಪೇಕ್ಷೆಯುಳ್ಳವನು ಸತ್ಯವಾಗಿಯೂ ನನ್ನ ಲಿಂಗವನ್ನು ಪೂಜೆ

ಯಸ್ಯ ಚಂದ್ರಪದೇ ವಾಂಛಾ ಮೋಕ್ಷವಾಂಛಾऽಪಿ ಶೋಭನೇ ।
ತೇನ ಮಲ್ಲಿಂಗಮಭ್ಯರ್ಚ್ಯಂ ಸತ್ಯಂ ಸತ್ಯಂ ನ ಸಂಶಯಃ ॥೬೦॥

ಯಸ್ಯ ವಿಶ್ವೇಶತಾವಾಂಛಾ ಮೋಕ್ಷವಾಂಛಾऽಪಿ ಶೋಭನೇ ।
ತೇನ ಮಲ್ಲಿಂಗಮಭ್ಯರ್ಚ್ಯಂ ಸತ್ಯಂ ಸತ್ಯಂ ನ ಸಂಶಯಃ ॥೬೧॥

ಯಸ್ಯ ವಿತ್ತೇಶತಾವಾಂಛಾ ಮೋಕ್ಷವಾಂಛಾऽಪಿ ಶೋಭನೇ ।
ತೇನ ಮಲ್ಲಿಂಗಮಭ್ಯರ್ಚ್ಯಂ ಸತ್ಯಂ ಸತ್ಯಂ ನ ಸಂಶಯಃ ॥೬೨॥

ಯಸ್ಯ ಸೂರ್ಯಪದೇ ವಾಂಛಾ ಮೋಕ್ಷವಾಂಛಾऽಪಿ ಶೋಭನೇ ।
ತೇನ ಮಲ್ಲಿಂಗಮಭ್ಯರ್ಚ್ಯಂ ಸತ್ಯಂ ಸತ್ಯಂ ನ ಸಂಶಯಃ ॥೬೩॥

ಯಸ್ಯ ಕಾಲಪದೇ ವಾಂಛಾ ಮೋಕ್ಷವಾಂಛಾऽಪಿ ಶೋಭನೇ ।
ತೇನ ಮಲ್ಲಿಂಗಮಭ್ಯರ್ಚ್ಯಂ ಸತ್ಯಂ ಸತ್ಯಂ ನ ಸಂಶಯಃ ॥೬೪॥

ಯಸ್ಯಾಪ್ಪತಿಪದೇ ವಾಂಛಾ ಮೋಕ್ಷವಾಂಛಾऽಪಿ ಶೋಭನೇ ।
ತೇನ ಮಲ್ಲಿಂಗಮಭ್ಯರ್ಚ್ಯಂ ಸತ್ಯಂ ಸತ್ಯಂ ನ ಸಂಶಯಃ ॥೬೫॥

ಮಾಡುವನು. ಆದರೆ ಅವನ ಮನೋರಥಗಳೆಲ್ಲವೂ ಸಂಶಯವಿಲ್ಲದೇ ಸಿದ್ಧಿಸುವುವು. ॥೫೮-೫೯॥

ಶೋಭನೇ, ಚಂದ್ರಪದವಿಯಲ್ಲಿಯೂ, ವಿಶ್ವೇಶಸ್ಥಾನದಲ್ಲಿಯೂ ಮತ್ತು ಮೋಕ್ಷದಲ್ಲಿಯೂ ಇಚ್ಛೆಪಡುವವನು ನನ್ನಲಿಂಗವನ್ನು ಪೂಜೆಮಾಡಿ ತನ್ನ ಇಷ್ಟಾರ್ಥಗಳನ್ನು ತಪ್ಪದೇ ಹೊಂದುವನು. ॥೬೦-೬೧॥

ಧನಾಧಿಪತಿಯಾದ ಕುಬೇರನ ಪದವಿಯನ್ನು ಅಪೇಕ್ಷಿಸುವವನೂ, ಸೂರ್ಯಪದವಿಯನ್ನು ಬಯಸುವವನೂ ಮತ್ತು ಮೋಕ್ಷಾಪೇಕ್ಷೆಯುಳ್ಳವನೂ ಸತ್ಯವಾಗಿಯೂ ನನ್ನ ಲಿಂಗವನ್ನು ಪೂಜೆಮಾಡಬೇಕು. ॥೬೨-೬೩॥

ಯಮನ ಪದವಿಯಲ್ಲಿಯೂ, ವರುಣನ ಪದವಿಯಲ್ಲಿಯೂ ಮತ್ತು ಮೋಕ್ಷಪದವಿಯಲ್ಲಿಯೂ ಅಪೇಕ್ಷೆಯುಳ್ಳವನು ಸತ್ಯವಾಗಿಯೂ ನನ್ನ ಲಿಂಗವನ್ನು ಪೂಜೆಮಾಡಬೇಕು. ಹಾಗೆ ಮಾಡಿದರೆ ಸಂಶಯವಿಲ್ಲದೆ ಅವನಿಗೆ ಆ ಫಲಗಳು ದೊರೆಯುವುವು. ॥೬೪-೬೫॥

ಯಸ್ಯ ವಿದ್ಯಾಧಿಪತ್ಯೇಚ್ಛಾ ಮೋಕ್ಷವಾಂಛಾಽಪಿ ಶೋಭನೇ ।
ತೇನ ಮಲ್ಲಿಂಗಮಭ್ಯರ್ಚ್ಯಂ ಸತ್ಯಂ ಸತ್ಯಂ ನ ಸಂಶಯಃ ॥೬೬॥

ಗಾಣಪತ್ಯಸ್ಯ ವಾಂಛಾಽಪಿ ಮೋಕ್ಷವಾಂಛಾಽಪಿ ಶೋಭನೇ ।
ತೇನ ಮಲ್ಲಿಂಗಮಭ್ಯರ್ಚ್ಯಂ ಸತ್ಯಂ ಸತ್ಯಂ ನ ಸಂಶಯಃ ॥೬೭॥

ಪರಮೇಶ್ವರಮಾರಾಧ್ಯಂ ಸರ್ವೈಶ್ವರ್ಯಪತಿಂ ಶಿವಂ ।
ಅನಾರಾಧ್ಯೈಕಮಪ್ಯರ್ಥಂ ನೈವ ಪ್ರಾಪ್ನೋತಿ ಮಾನವಃ ॥೬೮॥

ಧನವಾನೇವ ಧನದೋ ನ ದರಿದ್ರೋ ಧನಪ್ರದಃ ।
ತತೋಽಹಮೇವ ಧನವಾನ್ಪೂಜನೀಯೋ ಧನಾರ್ಥಿಭಿಃ ॥೬೯॥

ಬ್ರಹ್ಮೋಪೇಂದ್ರೇಂದ್ರಚಂದ್ರಾದ್ಯೈರಶೇಷೈರಮರೈರಪಿ ।
ಪೂಜನೀಯೋಽತ ಏವಾಽಹಂ ಪೂಜನೀಯೋ ನರೈರಪಿ ॥೭೦॥

ಬ್ರಹ್ಮೋಪೇಂದ್ರಪ್ರಭೃತಯೋ ದೇವಾಃ ಸರ್ವೇ ಮುನೀಶ್ವರಾಃ ।
ಮಾಮರ್ಚಯಂತಿ ಮಾಮೇವ ಶರಣಂ ಪ್ರಾಪ್ನುವಂತಿ ಚ ॥೭೧॥

ಎಲೌ ಶೋಭನಾಂಗಿಯೇ, ವಿದ್ಯಾಧಿಪತಿಪದವಿಯನ್ನೂ, ಗಣಾಧಿಪತಿಸ್ಥಾನವನ್ನೂ ಮತ್ತು ಮೋಕ್ಷವನ್ನೂ ಅಪೇಕ್ಷಿಸುವ ಮಾನವನು ನನ್ನ ಲಿಂಗವನ್ನು ಭಕ್ತಿಪುರಸ್ಸರವಾಗಿ ಪೂಜೆಮಾಡಬೇಕು. ಆದರಿಂದ ಸತ್ಯವಾಗಿಯೂ ಅವೆಲ್ಲವೂ ಸಿದ್ಧಿಸುವುವು. ಇದರಲ್ಲಿ ಸಂದೇಹವೇ ಇಲ್ಲ. ||೬೬-೬೭||

ಸಕಲರಿಂದಲೂ ಪೂಜಾರ್ಹನೂ, ಸಕಲೈಶ್ವರ್ಯಗಳಿಗೂ ಸ್ವಾಮಿಯೂ, ಪರಮೇಶ್ವರನೆನಿಸಿದವನೂ ಆದ ಶಿವನನ್ನು ಪೂಜೆಮಾಡದೇ ಮಾನವನು ಯಾವುದೊಂದು ಫಲವನ್ನೂ ಹೊಂದಲಾರನು. ||೬೮||

ಧನಿಕನು ಮಾತ್ರ ಹಣವನ್ನು ಕೊಡಬಲ್ಲನೇ ಹೊರತು ದರಿದ್ರನಾದವನೆಂದಿಗೂ ಹಣವನ್ನು ಕೊಡಲು ಸಾಧ್ಯವಿಲ್ಲ. ಆದ್ದರಿಂದ ದ್ರವ್ಯಾಪೇಕ್ಷೆಯುಳ್ಳವರು ಹಣವಂತನೆನಿಸಿದ ನನ್ನನ್ನೇ ತಪ್ಪದೇ ಪೂಜೆಮಾಡಬೇಕು. ||೬೯||

ಬ್ರಹ್ಮ, ವಿಷ್ಣು, ಇಂದ್ರ, ಚಂದ್ರ ಮೊದಲಾದ ದೇವತೆಗಳಿಂದಲೂ ಮತ್ತು ಸಕಲ ಮಾನವರಿಂದಲೂ ನಾನೇ ಪೂಜಿತನಾಗಿರುವುದರಿಂದ ಅವರೆಲ್ಲರೂ ಮತ್ತು

ಸರ್ವೇಭ್ಯ ಏವ ದೇವೇಭ್ಯೋ ಯತ ಏವ ಮಹಾನಹಂ ।
ತತ ಏವ ಮಹಾದೇವಂ ವದಂತಿ ನಿಗಮಾಶ್ಚ ಮಾಂ ॥೨೨॥

ರಾಜಮಧ್ಯೇ ಮಹಾರಾಜಾ ಮಹಾರಾಜೇತಿ ಗೀಯತೇ ।
ಯಥಾ ತಥೈವ ದೇವೇಷು ಮಹಾದೇವೋಽಹಮೇವ ಹಿ ॥೨೩॥

ನ ಮತ್ತೋಽಭ್ಯಧಿಕೋ ದೇವಃ ಸರ್ವೇಭ್ಯೋಽಪಿ ಮಹಾನಹಂ ।
ಅತ ಏವ ಮಹಾದೇವಃ ಪ್ರಥಿತೋ ನಿಗಮೇಷ್ವಹಂ ॥೨೪॥

ಯಂ ಯಮುದ್ದಿಶ್ಯ ಸರ್ವೇಽಪಿ ಕರಿಷ್ಯಂತಿ ಫಲೇಪ್ಸವಃ ।
ತಾನಿ ಕರ್ಮಾಣಿ ಮಯ್ಯೇವ ಪ್ರವಿಶಂತಿ ಫಲಪ್ರದೇ ॥೨೫॥

ವಿಷ್ಣುಮುದ್ದಿಶ್ಯ ಯತ್ಕರ್ಮ ಕೃತಂ ತದ್ವಿಷ್ಣುನಾ ಮಯಿ ।
ನಿವೇದ್ಯತೇ ಫಲಂ ದಾತುಂ ಅಶಕ್ತೋ ಸ ಸ್ವಯಂ ಶಿವೇ ॥೨೬॥

ಮುನಿಶ್ರೇಷ್ಠರೂ ಸಹ ನನ್ನನ್ನೇ ಪೂಜಿಸುತ್ತಾ ನನ್ನನ್ನೇ ಶರಣುಹೊಕ್ಕಿರುವರು. ॥೨೦-೨೧॥

ದೇವತೆಗಳಲ್ಲೆಲ್ಲಾ ನಾನೇ ದೊಡ್ಡವನಾದುದರಿಂದ ವೇದಗಳೂ ನನ್ನನ್ನು ಮಹಾದೇವನೆಂದೇ ಸಾರುತ್ತಿವೆ. ರಾಜರ ಗುಂಪುಗಳಲ್ಲೆಲ್ಲಾ ದೊಡ್ಡವನಾದ ಒಬ್ಬ ರಾಜನನ್ನು ಮಹಾರಾಜನೆಂಬುವ ಹಾಗೆ, ದೇವತೆಗಳಲ್ಲೆಲ್ಲಾ ಶ್ರೇಷ್ಠನಾದ ನನಗೆ ಮಹಾದೇವನೆಂಬ ಹೆಸರು ಪ್ರಸಿದ್ಧವಾಗಿದೆ. ॥೨೨-೨೩॥

ನನಗಿಂತಲೂ ಶ್ರೇಷ್ಠರಾದ ದೇವತೆಗಳಿಲ್ಲದೆ, ಎಲ್ಲರಿಗಿಂತಲೂ ನಾನೇ ದೊಡ್ಡವನಾದುದರಿಂದ ವೇದಗಳಲ್ಲೆಲ್ಲಾ ನಾನು, ಮಹಾದೇವನೆಂದು ಪ್ರಖ್ಯಾತಿ ಹೊಂದಿರುವೆನು. ಇಷ್ಟವಾದ ಫಲಗಳನ್ನು ಅಪೇಕ್ಷಿಸುವವರು ಯಾವ ಯಾವ ಉದ್ದೇಶದಿಂದ ಕರ್ಮಗಳನ್ನು ಮಾಡುವರೋ, ಅವುಗಳೆಲ್ಲವೂ ಸಕಲ ಫಲಗಳನ್ನೂ ಕೊಡುವ ನನ್ನಲ್ಲಿಯೇ ಪ್ರವೇಶಿಸುತ್ತವೆ. ॥೨೪-೨೫॥

ಮಂಗಳಾಂಗಿಯಾದ ದೇವಿಯೇ, ವಿಷ್ಣುವನ್ನುದ್ದೇಶಿಸಿ ಮಾಡಿದ ಕರ್ಮವನ್ನು ಆ ವಿಷ್ಣುವು ತಾನು ಆ ಕರ್ಮಕ್ಕೆ ಫಲಕೊಡಲು ಅಸಮರ್ಥನಾದುದರಿಂದ ನನಗೆ ತಿಳಿಸಿ ನನ್ನ ಮೂಲಕ ಕರ್ಮಫಲವನ್ನು ಕೊಡಿಸುತ್ತಾನೆ. ಹೀಗೆಯೇ ಅಂಥ

ಏವಮಿಂದ್ರಾಗ್ನಿವರುಣಸೂರ್ಯಚಂದ್ರಾದಿಭಿಃ ಶಿವೇ ।
ನಿವೇದ್ಯತೇಽಖಿಲಂ ಕರ್ಮ ಸ್ವಮುದ್ದಿಶ್ಯ ಕೃತಂ ಮಯಿ ॥೭೭॥

ಫಲಪ್ರದಾತಾ ಭಗವಾನ್ಕರ್ಮಣಾಮಹಮೇವ ಹಿ ।
ತಸ್ಮಾನ್ಮದನ್ಯಃ ಫಲದಃ ಕರ್ಮಣಾಂ ನಾಸ್ತಿ ಸರ್ವಥಾ ॥೭೮॥

ಪ್ರಜಾಭ್ಯಃ ಕರಮಾದಾಯ ರಾಜ್ಞೇ ಪ್ರಕೃತಿಭಿರ್ಯಥಾ ।
ನಿವೇದ್ಯತೇ ತಥಾ ಮಹ್ಯಂ ಕರ್ಮ ದೇವೈರ್ನಿವೇದ್ಯತೇ ॥೭೯॥

ವಿಷ್ಣುಬ್ರಹ್ಮಾದಯಃ ಸರ್ವೇ ಮಮ ಪ್ರಕೃತಯಸ್ತತಃ ।
ನಿವೇದ್ಯತೇಽಖಿಲಂ ಕರ್ಮ ತೈರಾನೀಯ ಮಮ ಪ್ರಿಯೇ ॥೮೦॥

ಯಂ ಯಂ ದೇವಂ ಸಮುದ್ದಿಶ್ಯ ನಮಸ್ಕಾರಾಃ ಕೃತಾ ನರೈಃ ।
ತೇ ಸರ್ವೇಽಪಿ ನಮಸ್ಕಾರಾಃ ಪ್ರವಿಶಂತಿ ಚ ಮಾಂ ಶಿವೇ ॥೮೧॥

ಅಗ್ನಿ, ವರುಣ, ಸೂರ್ಯ, ಚಂದ್ರ ಮೊದಲಾದವರೆಲ್ಲರೂ ತಮ್ಮನ್ನುದ್ದೇಶಿಸಿ ಮಾಡಿದ ಕರ್ಮಗಳಿಗೆ ಸ್ವತಃ ಫಲಕೊಡಲಾರದೇ ಎಲ್ಲವನ್ನೂ ನನಗೆ ಸಮರ್ಪಿಸುತ್ತಾರೆ. ॥೭೬-೭೭॥

ಸಕಲ ಕರ್ಮಗಳಿಗೂ, ಫಲವನ್ನು ಕೊಡುವ ಭಗವಂತನು, ನಾನೇ ಆಗಿರುವೆನು. ನನ್ನನ್ನು ಬಿಟ್ಟರೆ ಬೇರೆ ಯಾರಿಗೂ ಕರ್ಮಗಳಿಗೆ ಅನುರೂಪವಾದ ಫಲಗಳನ್ನು ಕೊಡುವ ಸಾಮರ್ಥ್ಯವಿಲ್ಲ. ॥೭೮॥

ಪ್ರಜೆಗಳಿಂದ ಕಪ್ಪವನ್ನು ತೆಗೆದುಕೊಂಡು ಅಧಿಕಾರಿಗಳು ರಾಜನಿಗೆ ಸಮರ್ಪಿಸುವಂತೆ, ದೇವತೆಗಳೆಲ್ಲರೂ ತಮ್ಮನ್ನುದ್ದೇಶಿಸಿ ಮಾಡಿದ ಕರ್ಮವನ್ನು ನನಗೆ ಸಮರ್ಪಣೆಮಾಡುತ್ತಾರೆ. ಪ್ರೇಯಸಿಯೇ, ವಿಷ್ಣು, ಬ್ರಹ್ಮ ಮೊದಲಾದವರೆಲ್ಲರೂ ನನ್ನ ಪ್ರಕೃತಿಗಳೇ (ಸಾಮಂತರಂತಿರುವರು) ಆಗಿರುವುದರಿಂದ ಅವರೆಲ್ಲರೂ ತಮಗೆ ಸಮರ್ಪಿಸಿದ ಕರ್ಮಫಲಗಳನ್ನು ಮೊದಲು ತಾವು ತೆಗೆದುಕೊಂಡು, ಕೊನೆಗೆ ಎಲ್ಲವನ್ನೂ ನನಗೇ ಸಮರ್ಪಣೆ ಮಾಡುತ್ತಾರೆ. ॥೭೯-೮೦॥

ಶಿವೇ, ಯಾವ ದೇವತೆಗಳಿಗೆ ನಮಸ್ಕಾರಮಾಡಿದರೂ, ಅವೆಲ್ಲವೂ ನನಗೇ ಸಲ್ಲುತ್ತವೆ. ಅಲ್ಲದೇ ಯಾವ ಯಾವ ದೇವತೆಯನ್ನುದ್ದೇಶಮಾಡಿ, ಸಂತೋಷದಿಂದ

ಯಂ ಯಂ ದೇವಂ ಸಮುದ್ದಿಶ್ಯ ಯಾಯಾ ಪೂಜಾ ಕೃತಾ ಮುದಾ ।
ಸಾ ಮಯಿ ಪ್ರವಿಶತ್ಯೇವ ಪೂಜಾ ಸರ್ವಾಽಪಿ ಸರ್ವಥಾ ॥೪೨॥

ಯಥಾಽಧಿಕಾರಿಣೋ ದತ್ತೋಽಪ್ಯುತ್ತಮೋ ರತ್ನಸಂಚಯಃ ।
ರಾಜಾನಂ ಪ್ರವಿಶತ್ಯೇವಂ ಮಯಿ ಪೂಜಾಽಧಿತಿಷ್ಠತಿ ॥೪೩॥

ಸಾಕ್ಷಾನ್ಮತ್ಪೂಜನೇ ಯೇಷಾಮಧಿಕಾರೋ ನ ವಿದ್ಯತೇ ।
ತೇಷಾಮನ್ಯತ್ರ ಚೇತ್ಪೂಜಾ ಸಾ ಮಯ್ಯೇವಾಧಿತಿಷ್ಠತಿ ॥೪೪॥

ರಾಜ್ಞೋ ಸಾಕ್ಷಾದ್ಧನಂ ದಾತುಮಶಕ್ತೋ ಮನುಜಾಧಮಃ ।
ಧನಂ ತು ಪ್ರಕೃತಿದ್ವಾರಾ ಪ್ರವೇಶಯತಿ ಭೂಪತೌ ॥೪೫॥

ಸಾಕ್ಷಾನ್ಮತ್ಪೂಜನೇ ಯಸ್ತು ಸಮರ್ಥಸ್ತೇನ ಸರ್ವದಾ ।
ಮಮೈವ ಪೂಜಾ ಕರ್ತವ್ಯಾ ನಾನ್ಯಸ್ಯಾಲ್ಪಸ್ಯ ಸರ್ವಥಾ ॥೪೬॥

ಪೂಜೆಮಾಡಿದರೂ, ಆ ಪೂಜೆಗಳೆಲ್ಲವೂ ನಿಶ್ಚಯವಾಗಿಯೂ ನನ್ನಲ್ಲಿಯೇ ಪ್ರವೇಶ ಮಾಡಿ ನನಗೇ ಸಲ್ಲುತ್ತವೆ. ||೪೧-೪೨||

ರಾಜನ ಪರವಾಗಿರುವ ಅಧಿಕಾರಿಗಳಿಗೆ ಕೊಟ್ಟ ಉತ್ತಮವಾದ ರತ್ನಗಳ ಸಮೂಹವು ಕೊನೆಗೆ ರಾಜನಿಗೇ ಸಲ್ಲುವಂತೆ, ಯಾವ ದೇವತೆಗೇ ಸೇವೆಮಾಡಿದರೂ ಆ ಪೂಜೆಯು ನನಗೇ ಸಲ್ಲುವುದು. ನನ್ನನ್ನೇ ಸಾಕ್ಷಾತ್ಪೂಜೆಮಾಡಲು ಅಧಿಕಾರವಿಲ್ಲದವರು ಬೇರೆ ವಿಷ್ಣ್ವಾದಿದೇವತೆಗಳನ್ನೇ ಉದ್ದೇಶಮಾಡಿ ಪೂಜಿಸಿದರೂ ಅವೆಲ್ಲವೂ ನನಗೇ ಸಲ್ಲುತ್ತವೆ. ||೪೩-೪೪||

ಪ್ರತ್ಯಕ್ಷವಾಗಿ ರಾಜನಿಗೇ ಹಣವನ್ನು ಕೊಡಲು ಸಾಮರ್ಥ್ಯವಿಲ್ಲದ ಮಾನವಾಧಮನು, ಅದೇ ಹಣವನ್ನು ಅಧಿಕಾರಿಗಳ ಮೂಲಕ ರಾಜನಿಗೆ ತಲಪಿಸುವಂತೆ, ನನ್ನನ್ನೇ ಸಾಕ್ಷಾತ್ಪೂಜೆಮಾಡಲು ಸಾಮರ್ಥ್ಯವಿಲ್ಲದವನು ನನ್ನ ಪ್ರಕೃತಿಗಳಾದ ವಿಷ್ಣುವೇ ಮೊದಲಾದ ದೇವತೆಗಳನ್ನೇ ಪೂಜೆಮಾಡಿ ಅವರ ಮುಖಾಂತರ ನನ್ನನ್ನು ಸೇವಿಸುವರು. ಒಂದುವೇಳೆ ನನ್ನನ್ನೇ ಸಾಕ್ಷಾತ್ಪೂಜೆಮಾಡುವ ಸಾಮರ್ಥ್ಯವಿದ್ದರೆ ಅಂತಹವನು ನನ್ನ ಪೂಜೆಯನ್ನು ಮಾಡಬೇಕೇ ಹೊರತು ಅಲ್ಪರಾದ ಆ ವಿಷ್ಣ್ವಾದಿಗಳನ್ನೆಂದಿಗೂ ಪೂಜೆಮಾಡಬಾರದು. ||೪೫-೪೬||

ದ್ರವ್ಯದಾನೇ ಸಮರ್ಥೋ ಯಃ ಸಾಕ್ಷಾದ್ರಾಜ್ಞೇ ನರಸ್ತದಾ ।
ರಾಜ್ಞೇ ದ್ರವ್ಯಂ ದದಾತ್ಯೇವ ಸಾಕ್ಷಾನ್ಮಾನಪುರಸ್ಸರಂ ॥೮೭॥

ಅತಃ ಸಾಕ್ಷಾದ್ಧನಂ ದತ್ತಂ ಯೇನ ರಾಜ್ಞೇ ಮನೀಷಿಣಾ ।
ತೇನ ರಾಜಪ್ರಸಾದೋಽಪಿ ಪ್ರಾಪ್ಯತೇ ಸರ್ವಸೌಖ್ಯದಃ ॥೮೮॥

ಯಂ ಸಾಕ್ಷಾದ್ವೇತ್ತಿ ರಾಜಾನಂ ಯಸ್ತು ರಾಜ್ಞಾ ಪ್ರಸಾದಿತಃ ।
ಸ ರಾಜಾಽನ್ಯಾನ್ಪ್ರಧಾನಾಂಸ್ತು ನಾರಾಧಯತಿ ಸರ್ವಥಾ ॥೮೯॥

ಏವಮೇವ ಮದರ್ಚಾಯಾಮಧಿಕಾರೀ ತತಃ ಸತು ।
ಮದನ್ಯಂ ನಾರ್ಚಯತ್ಯೇವ ಮತ್ಸ್ವರೂಪವಿದಂತರಾ ॥೯೦॥

ಕಿಮನ್ಯಾರಾಧನೇನಾಽಪಿ ಮದನ್ಯಃ ಫಲದಸ್ತು ನ ।
ತತೋಽಹಮೇಕ ಏವಾರ್ಯೈಃ ಪೂಜನೀಯಃ ಪ್ರಯತ್ನತಃ ॥೯೧॥

ಪ್ರತ್ಯಕ್ಷವಾಗಿ ರಾಜನಿಗೇ ದ್ರವ್ಯವನ್ನು ಸಮರ್ಪಣೆಮಾಡುವ ಸಾಮರ್ಥ್ಯವುಳ್ಳ ಮಾನವನು ಗೌರವಪೂರ್ವಕವಾಗಿ ರಾಜನಿಗೇ ಹಣವನ್ನು ಸಮರ್ಪಿಸುತ್ತಾನೆ. ಹಾಗೆ ರಾಜನಿಗೆ ಸಾಕ್ಷಾತ್ಸಮರ್ಪಣೆಮಾಡುವ ಧೀರನಿಗೆ ಸಕಲಸೌಖ್ಯಗಳನ್ನೂ ಕೊಡುವ ರಾಜಾನುಗ್ರಹವೂ ದೊರೆಯುತ್ತದೆ. ॥೮೭-೮೮॥

ಸಾಕ್ಷಾದ್ರಾಜನನ್ನೇ ಕಂಡು ಅವನಿಂದಲೇ ಅನುಗ್ರಹಿಸಲ್ಪಟ್ಟವನು ಇತರ ಮಂತ್ರಿಗಳೇ ಮೊದಲಾದವರನ್ನು ಯಾವ ರೀತಿಯಿಂದಲೂ ಪೂಜೆಮಾಡದಿರುವಂತೆ ನನ್ನ ಪೂಜೆಯಲ್ಲಿ ಸ್ವತಃ ಅಧಿಕಾರಿಯಾಗಿರುವವನು ನನ್ನ ಸ್ವರೂಪವನ್ನರಿತು ನನ್ನನ್ನೇ ಪೂಜೆಮಾಡುವನೇ ವಿನಾ ಎಂದಿಗೂ ನನಗಿಂತಲೂ ಬೇರೆಯವರನ್ನು ಪೂಜಿಸಲಾರನು. ॥೮೯-೯೦॥

ನನಗಿಂತಲೂ ಬೇರೆಯಾದ ದೇವತೆಗಳು ಫಲದಾತರಲ್ಲವಾದುದರಿಂದ ಅವರನ್ನು ಪೂಜೆಮಾಡಿ ಉಂಟಾಗುವ ಫಲವು ತಾನೇ ಏನು ? ಆದುದರಿಂದ ಪೂಜ್ಯರಾದವರು ನನ್ನೊಬ್ಬನನ್ನೇ ನಿಯಮದಿಂದ ಪೂಜೆಮಾಡುವರು. ॥೯೧॥

ಶಿವಾನ್ಯಃ ಫಲದೋಽಸ್ತೀತಿ ಪ್ರವದಂತ್ಯಶಿವಾಸ್ತುತಃ ।
ತಾದೃಶಾನಶಿವಾನ್ಸ್ಪೃಷ್ಟ್ವಾ ಸಚೇಲಂ ಸ್ನಾನಮಾಚರೇತ್ ॥೯೨॥

ಮದನ್ಯಃ ಕರ್ಮಫಲದಃ ಕಥಂ ಭವಿತುಮರ್ಹತಿ ।
ಮತ್ಪ್ರೇರ್ಯಾ ಮದಧೀನಾಸ್ತೇ ವಿಷ್ಣ್ವಾದ್ಯಾಃ ಫಲದಾಸ್ತು ನ ॥೯೩॥

ಪುರಾ ತು ವಿಷ್ಣುಮುದ್ದಿಶ್ಯ ತಪಸ್ತೇಪೇ ಜಲಾಕರಃ ।
ವಿಷ್ಣುಪೂಜಾಪರೋ ನಿತ್ಯಂ ಸಾಲಗ್ರಾಮಶಿಲಾಸ್ಥಲೇ ॥೯೪॥

ತದ್ಘೋರತಪಸಾ ಕ್ಷುಬ್ಧಂ ಸರ್ವಂ ಚ ಪೃಥಿವೀತಲಂ ।
ಫಣಿದಿಕ್ಕರಿಮುಖ್ಯಾಶ್ಚ ಕ್ಷುಬ್ಧಾಃ ಸರ್ವೇಽಪ್ಯಹರ್ನಿಶಂ ॥೯೫॥

ದೇವಾಶ್ಚೇಂದ್ರಾದಯಃ ಸರ್ವೇ ಕ್ಷುಬ್ಧಂ ದೃಷ್ಟ್ವಾ ಮಹೀತಲಂ ।
ಕ್ಷುಬ್ಧಾ ಬಭೂವುಃ ಕರ್ತವ್ಯಾಕರ್ತವ್ಯಂ ಜ್ಞಾನವಿಹ್ವಲಾಃ ॥೯೬॥

ಶಿವಭಕ್ತರಲ್ಲದವರು ನಾನಲ್ಲದೆ ಬೇರೆ ವಿಷ್ಣ್ವಾದಿದೇವತೆಗಳು ಫಲಗಳನ್ನು ಕೊಡುತ್ತಾರೆಂದು ಹೇಳುವರು. ಅಂತಹ ಶಿವಭಕ್ತರಲ್ಲದವರನ್ನು ಮುಟ್ಟಿದರೆ ಕೂಡಲೇ ಸಚೇಲಸ್ನಾನಮಾಡಬೇಕು. (ತಾನು ಉಟ್ಟಿದ್ದ ಬಟ್ಟೆಯೊಡನೆ ಸ್ನಾನಮಾಡಬೇಕು.) ॥೯೨॥

ನನ್ನಿಂದ ಇತರ ಕಾರ್ಯಗಳಲ್ಲಿ ನಿಯಮಿಸಲ್ಪಡುತ್ತಾ ನನಗೆ ಅಧೀನರಾಗಿರುವ ವಿಷ್ಣ್ವಾದಿ ದೇವತೆಗಳೆಲ್ಲರೂ ಪರಾಧೀನರಾದುದರಿಂದ ನಾನೊಬ್ಬನೇ ಸಕಲ ಫಲಗಳನ್ನೂ ಕೊಡಬಲ್ಲೆನೇ ಹೊರತು ಅವರು ಹೇಗೆತಾನೇ ಫಲಗಳನ್ನು ಕೊಡಬಲ್ಲರು ? ॥೯೩॥

ಹಿಂದೆ ವಿಷ್ಣುಪೂಜಾತತ್ಪರನಾದ ಸಮುದ್ರರಾಜನು ನಿತ್ಯವೂ ಸಾಲಿಗ್ರಾಮವಿರುವ ಸ್ಥಳಗಳಲ್ಲಿ ನಿಯಮದಿಂದ ವಿಷ್ಣುವನ್ನು ಕುರಿತು ತಪಸ್ಸುಮಾಡಿದನು. ಆ ವರುಣನ ಘೋರವಾದ ತಪಸ್ಸಿನಿಂದ ಪ್ರಪಂಚವೆಲ್ಲವೂ ಕ್ಷೋಭೆ ಹೊಂದಿತು. ಆದಿಶೇಷ, ಅಷ್ಟದಿಗ್ಗಜಗಳು ಇವೇ ಮೊದಲಾದವುಗಳೆಲ್ಲವೂ ತಪೋಜ್ವಾಲೆಯಿಂದ ಹಗಲೂ ರಾತ್ರಿ ಖಿನ್ನವಾದವು. ॥೯೪-೯೫॥

ಶಿವೇ, ಇಂದ್ರಾದಿದೇವತೆಗಳೆಲ್ಲರೂ ಹೀಗೆ ಭೂಮಿಯೆಲ್ಲಾ ಅಲ್ಲೋಲಕಲ್ಲೋಲವಾದದ್ದನ್ನು ನೋಡಿ, ಪ್ರಕೃತ ಏನೂ ಮಾಡಲಾರದೇ ಬುದ್ಧಿಗೆಟ್ಟವರಾದರು. ಆಗ

ತತಶ್ಚೇಂದ್ರಾದಯೋ ದೇವಾ ಬ್ರಹ್ಮಾಣಂ ಶರಣಂ ಗತಾಃ ।
ಪರಿಮ್ಲಾನಗತಾಃ ಸರ್ವೇ ಕೃತಾಂಜಲಿಪುಟಾಃ ಶಿವೇ ॥೯೭॥

ದೇವಾನ್ದೃಷ್ಟ್ವಾ ಸ ದೇವೇಂದ್ರಪ್ರಮುಖಾಂಶ್ಚತುರಾನನಃ ।
ಜಗಾದ ವಚನಂ ಚಾರು ಸುರದುಃಖವಿನಾಶಕಂ ॥೯೮॥

॥ ಬ್ರಹ್ಮೋವಾಚ ॥

ಕಿಂ ಭೋ ದೇವಾ ಭಯಗ್ರಸ್ತಾಃ ಕಿಂ ವಾ ತದ್ಭಯಕಾರಣಂ ।
ಕಿಮೀದೃಶಂ ಭಯಂ ಯೇನ ಬಹುದುಃಖಮವಾಪ್ಯತೇ ॥೯೯॥

ಕುರ್ವಂತು ದೇವದೇವಸ್ಯ ಮಹಾದೇವಸ್ಯ ಶೂಲಿನಃ ।
ಸ್ಮರಣಂ ಪೂಜನಂ ಭಕ್ತ್ಯಾ ಭಯಸಂಹರ್ತುರಾದರಾತ್ ॥೧೦೦॥

ಶಂಕರಾರ್ಚನಶೀಲಾನಾಂ ಶಿವೈಕರತಚೇತಸಾಂ ।
ಭಯಲೇಶೋಽಪಿ ನಾಸ್ತ್ಯೇವ ಕ್ವ ಮಹದ್ಭಯಮುಚ್ಯತೇ ॥೧೦೧॥

ಆ ಇಂದ್ರಾದಿದೇವತೆಗಳೆಲ್ಲರೂ ಬಾಡಿದ ಮುಖವುಳ್ಳವರಾಗಿ ಕೈಜೋಡಿಸಿಕೊಂಡು, ಬ್ರಹ್ಮನನ್ನು ಮರೆಹೊಕ್ಕರು. ॥೯೬-೯೭॥

ಆಗ ಆ ಚತುರ್ಮುಖಬ್ರಹ್ಮನು ಈ ರೀತಿಯಾಗಿ ತನ್ನ ಸಮೀಪಕ್ಕೆ ಬಂದ ದೇವೇಂದ್ರನೇ ಮೊದಲಾದ ದೇವತೆಗಳನ್ನು ನೋಡಿ, ಆ ದೇವತೆಗಳ ದುಃಖವನ್ನು ನಾಶಪಡಿಸಿ, ಅವರಿಗೆ ಸಂತೋಷವುಂಟಾಗುವಂತೆ ಮನೋಹರವಾಗಿ ಅವರೊಡನೆ ಹೀಗೆ ಮಾತನಾಡಿದನು. ॥೯೮॥

"ಭಯಗ್ರಸ್ತರಾದ ಎಲೈ ದೇವತೆಗಳಿರಾ, ನಿಮ್ಮ ಈ ರೀತಿಯಾದ ಭಯಕ್ಕೆ ಕಾರಣವೇನು ? ಇಷ್ಟೊಂದು ದುಃಖವಾಗುವಷ್ಟು ಭಯವು ನಿಮಗೆ ಹೇಗೆ ಉಂಟಾಯಿತು ? ಓ ಇಂದ್ರಾದಿದೇವತೆಗಳಿರಾ, ಸಕಲ ಭಯವನ್ನೂ ನಾಶಮಾಡುವ ಆ ದೇವದೇವನೂ ಶೂಲಾಯುಧಧಾರಿಯೂ ಆದ ಮಹಾದೇವನನ್ನು ಸ್ಮರಣೆಮಾಡಿ ಭಕ್ತಿಯಿಂದ ಆ ದೇವೋತ್ತಮನನ್ನು ಪೂಜೆಮಾಡಿರಿ. ॥೯೯-೧೦೦॥

ಯಾವಾಗಲೂ ಶಂಕರನ ಪೂಜೆಯೇ ಯಾರಿಗೆ ಸ್ವಾಭಾವಿಕವಾಗಿರುವುದೋ ಅವರಿಗೂ ಪರಶಿವನಲ್ಲಿಯೇ ನೆಲಸಿರುವ ಮನಸ್ಸುಳ್ಳವರಿಗೂ ಸ್ವಲ್ಪವೂ ಭಯವೇ ಉಂಟಾಗದೇ ಇರುವಾಗ ಇಂತಹ ಭಯವು ಹೇಗೆತಾನೇ ಉಂಟಾದೀತು ? ॥೧೦೧॥

ಗೌರೀಕಾಂತೋ ಯದಾ ಚಿತ್ತೇ ಸಂಚರತ್ಯಮರೋತ್ತಮಃ ।
ತದಾ ಭಯಾನಿ ಯಾಂತ್ಯೇವ ದೂರತಃ ಶಿವಶಾಸನಾತ್ ॥೧೦೨॥

ಲಾಭಃ ಪ್ರತಿಪದೇ ತೇಷಾಂ ತೇಷಾಂ ಪ್ರತಿಪದಂ ಜಯಃ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೦೩॥

ಸಂಪದೋಽನುದಿನಂ ತೇಷಾಂ ತೇಷಾಂ ಕಲ್ಯಾಣಮನ್ವಹಂ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೦೪॥

ತೇಷಾಂ ಪುತ್ರಾಶ್ಚ ಪೌತ್ರಾಶ್ಚ ವೇದಶಾಸ್ತ್ರವಿಶಾರದಾಃ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೦೫॥

ತೇಷಾಮಾರೋಗ್ಯಮೈಶ್ವರ್ಯಂ ತೇಷಾಮೌದಾರ್ಯಮುತ್ಕಟಂ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೦೬॥

ತೇಷಾಂ ಭಾಗ್ಯಾನಿ ಪುಣ್ಯಾನಿ ತೇಷಾಮಾನಂದಮನ್ವಹಂ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೦೭॥

ದೇವೋತ್ತಮನಾದ ಆ ಗೌರೀರಮಣನೇ ಮನಸ್ಸಿನಲ್ಲಿ ನೆಲಸಿರಲು ಆಗ ಆ ಪರಶಿವನ ಆಜ್ಞೆಯಿಂದ ಭಯಗಳೆಲ್ಲವೂ ದೂರದಲ್ಲಿಯೇ ಓಡಿಹೋಗುತ್ತವೆಯಲ್ಲವೆ? ॥೧೦೨॥

ಕುಂದಪುಷ್ಪ ಮತ್ತು ಚಂದ್ರ ಇವರಂತೆ ಶುಭ್ರವಾದ ಬಣ್ಣದಿಂದ ಶೋಭಿಸುವ ಆ ಪಾರ್ವತೀರಮಣನು ಯಾರ ಮನಸ್ಸಿನಲ್ಲಿ ನೆಲಸಿರುವನೋ, ಅವರಿಗೆ ಹೆಜ್ಜೆ ಹೆಜ್ಜೆಗೂ ಲಾಭವೂ ವಿಜಯವೂ ಪ್ರತಿದಿನವೂ ಸಂಪತ್ತುಗಳೂ ನಿತ್ಯಮಂಗಳವೂ ಉಂಟಾಗುವುವು. ॥೧೦೩-೧೦೪॥

ತಮ್ಮ ಮನಸ್ಸಿನಲ್ಲಿ ಗಿಡಮಲ್ಲಿಗೆ, ಚಂದ್ರ ಇವುಗಳಂತೆ ಶುಭ್ರವರ್ಣದವನಾದ ಪಾರ್ವತೀರಮಣನನ್ನು ಸದಾ ಧ್ಯಾನಮಾಡುವವರಿಗೇ ಮಕ್ಕಳು ಮೊಮ್ಮಕ್ಕಳೂ, ವೇದಶಾಸ್ತ್ರಪಾಂಡಿತ್ಯವೂ, ಆರೋಗ್ಯವೂ, ಐಶ್ವರ್ಯವೂ ಮತ್ತು ಹೆಚ್ಚಾದ ಔದಾರ್ಯವೂ ಸಹ ಲಭಿಸುವುವು. ॥೧೦೫-೧೦೬॥

ಮನಸ್ಸಿನಲ್ಲಿ ಕುಂದಪುಷ್ಪ ಮತ್ತು ಚಂದ್ರ ಇವರಂತೆ ಶುಭ್ರವಾದ ವರ್ಣದಿಂದ ಶೋಭಿಸುವ ಪಾರ್ವತೀರಮಣನನ್ನು ಧ್ಯಾನಮಾಡುವವರಿಗೇ ಸಕಲ

ತೇಷಾಂ ದ್ವಾರಿ ಮದೋನ್ಮತ್ತಾ ಮಾತಂಗೋತ್ತಮಕೋಟಯಃ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೦೮॥

ತೇಷಾಂ ಗೃಹೇ ಘಟೋಧ್ನ್ಯಾಃ ಗಾವಃ ಕ್ಷೀರಾಮೃತಾಶಯಾಃ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೦೯॥

ತೇಷಾಂ ಕರಸ್ಥಿತಃ ಸ್ವರ್ಗೋ ನಾನಾಯಜ್ಞಫಲಪ್ರದಃ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೧೦॥

ತೇಷಾಂ ಕರಸ್ಥಿತೋ ಮೋಕ್ಷಃ ಪುನರಾವೃತ್ತಿವರ್ಜಿತಃ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೧೧॥

ಭಾಗ್ಯಂ ಶಂಕರಭಕ್ತಾನಾಮಮೇಯಮಮಲಂ ಧ್ರುವಂ ।
ಯೇಷಾಂ ವಯಮಮೀಂದ್ರಾದ್ಯಾಃ ಸೇವಕಾ ನಾತ್ರ ಸಂಶಯಃ ॥೧೧೨॥

ಧನ್ಯಾಃ ಶಂಕರಪಾದಾಬ್ಜಧ್ಯಾನಮಾತ್ರಪರಾ ನರಾಃ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೧೩॥

ಭಾಗ್ಯಗಳೂ, ಪುಣ್ಯಗಳೂ, ನಿತ್ಯಾನಂದವೂ, ಮನೆಯ ಬಾಗಿಲಿನಲ್ಲಿ ಮದಿಸಿದ ಅನೇಕ ಉತ್ತಮವಾದ ಆನೆಗಳೂ ಲಭಿಸುವುವು. ॥೧೦೭-೧೦೮॥

ಆ ಪಾರ್ವತೀರಮಣನನ್ನು ಭಕ್ತಿಯಿಂದ ಧ್ಯಾನಮಾಡುವವರ ಮನೆಯಲ್ಲಿ ಅಮೃತಕ್ಕೆ ಸಮಾನವಾಗಿ ಕೊಡಗಟ್ಟಲೆ ಹಾಲುಕೊಡುವ ಹಸುಗಳೂ ವಾಸಿಸುವುವು. ಅಲ್ಲದೇ ಅಂತಹವರಿಗೆ ಅನೇಕ ಯಜ್ಞಗಳ ಫಲವನ್ನು ಕೊಡುವ ಸ್ವರ್ಗವೂ ತಮ್ಮ ಕೈಯಲ್ಲಿಯೇ ಇರುವುದು. (ಅಂದರೆ ಅವರು ಒಂದುವೇಳೆ ಸ್ವರ್ಗವನ್ನು ಅಪೇಕ್ಷಿಸಿದರೆ ಸುಲಭವಾಗಿ ಅದು ದೊರೆಯುವುದೆಂದು ಭಾವ.) ॥೧೦೯-೧೧೦॥

ಗಿಡಮಲ್ಲಿಗೆ ಹೂ, ಚಂದ್ರ ಇವುಗಳಂತೆ ಶುಭ್ರವಾದ ಬಣ್ಣವುಳ್ಳ ಪಾರ್ವತೀರಮಣನು ಮನಸ್ಸಿನಲ್ಲಿ ನೆಲಸಿರುವವನಿಗೆ ಪುನರ್ಜನ್ಮವೇ ಇಲ್ಲದ ಮೋಕ್ಷವೂ ಕೈಗೆ ದೊರತಂತೆಯೇ. ಶಂಕರನ ಭಕ್ತರ ಭಾಗ್ಯವು ಅಪರಿಮಿತವೂ, ಪರಿಶುದ್ಧವೂ ಆಗಿರುವುದೆಂಬುದರಲ್ಲಿ ಸಂಶಯವೇ ಇಲ್ಲ. ಇಂದ್ರನೇ ಮೊದಲಾದ ನಾವೆಲ್ಲರೂ ಆ ದೇವದೇವನಿಗೆ ಸೇವಕರಾಗಿರುವೆವು. ॥೧೧೧-೧೧೨॥

ಮನಸ್ಸಿನಲ್ಲಿ ಕುಂದಪುಷ್ಪ, ಚಂದ್ರ ಇವುಗಳಂತೆ ಶುಭ್ರವಾದ ಬಣ್ಣವುಳ್ಳ

ಧನ್ಯಾಸ್ತೇ ಶಿವಲಿಂಗಾರ್ಚಾಸಕ್ತಾಂತಃಕರಣಾ ನರಾಃ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೧೪॥

ಧನ್ಯಾಸ್ತೇ ಶಿವಪೂಜಾರ್ಥಮುಪಾತ್ತದ್ರವಿಣಾ ನರಾಃ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೧೫॥

ಧನ್ಯಾಸ್ತೇ ಮಂತ್ರಪೂತಾಚ್ಛಭಸ್ಮಫಾಲಾ ನರೋತ್ತಮಾಃ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೧೬॥

ಧನ್ಯಾಸ್ತೇ ಕಂಠಸಂಸಕ್ತರುದ್ರಾಕ್ಷಾಭರಣಾ ನರಾಃ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೧೭॥

ಧನ್ಯಾಸ್ತೇ ಶಿವನಾಮ್ನೈಕಜೀವನಾಃ ಶಿವಪೂಜಕಾಃ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೧೮॥

ಪಾರ್ವತೀರಮಣನನ್ನು ಧ್ಯಾನಿಸುತ್ತಾ ಯಾವಾಗಲೂ ಆ ಶಂಕರನ ಅಡಿದಾವರೆಗಳ ಧ್ಯಾನತತ್ಪರರಾಗಿರುವ ಮಾನವರೇ ಧನ್ಯರು. ಮತ್ತು ಶಿವಲಿಂಗಾರ್ಚನಾನಿರತ ರಾದ ಮಾನವರೂ ಧನ್ಯರೇ ಆಗುವರು. ॥೧೧೩-೧೧೪॥

ತಮ್ಮ ಮನಸ್ಸಿನಲ್ಲಿ ಕುಂದಪುಷ್ಪ ಮತ್ತು ಚಂದ್ರ ಇವುಗಳಂತೆ ಶುಭ್ರವಾದ ಬಣ್ಣವುಳ್ಳ ಆ ಪರಶಿವನನ್ನೇ ಧ್ಯಾನಿಸುತ್ತಾ ತಮ್ಮಲ್ಲಿರುವ ದುಡ್ಡನ್ನೆಲ್ಲಾ ಶಿವ ಪೂಜೆಗೆಂದೇ ವಿನಿಯೋಗಮಾಡುವ ಮಾನವರು ಧನ್ಯರು. ಮತ್ತು ಮಂತ್ರದಿಂದ ಪರಿಶುದ್ಧವಾದ ಭಸ್ಮವನ್ನು ಹಣೆಯಲ್ಲಿ ಧಾರಣೆಮಾಡಿ ಆ ಪರಶಿವನನ್ನು ಅನವರ ತವೂ ಧ್ಯಾನಮಾಡುವ ಮಾನವಶ್ರೇಷ್ಠರೂ ತುಂಬಾ ಧನ್ಯರೇ. ॥೧೧೫-೧೧೬॥

ಕೊರಳಲ್ಲಿ ರುದ್ರಾಕ್ಷಮಾಲೆಯೆಂಬ ಆಭರಣವನ್ನು ಧರಿಸಿರುವವರೂ, ಸದಾ ಆ ಶಿವನ ನಾಮಸ್ಮರಣೆಯಿಂದಲೇ ಜೀವಿಸುವವರೂ, ಮತ್ತು ಆ ಪರಶಿವನ ಪೂಜ ಕರೂ ಆದ ಮಾನವರು, ಅನವರತವೂ ಕುಂದಪುಷ್ಪದಂತೆಯೂ, ಚಂದ್ರನಂತೆಯೂ ಶುಭ್ರವಾದ ಬಣ್ಣವುಳ್ಳ ಆ ಪಾರ್ವತೀರಮಣನನ್ನು ಧ್ಯಾನಮಾಡುವವರಾಗಿ ಧನ್ಯ ರೆನಿಸುವರು. ॥೧೧೭-೧೧೮॥

ಧನ್ಯಾಸ್ತೇ ಶಿವನಾಮಾಂಕಕಥಾಶ್ರವಣತತ್ಪರಾಃ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೧೯॥

ಧನ್ಯಾಸ್ತೇ ಶಿವನಾಮಾಂಕಶಿವೈಕಕುಲದೇವತಾಃ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೨೦॥

ಧನ್ಯಾಸ್ತೇ ಶಿವನಾಮಾಂಕಗಾಯನಾಸಕ್ತಚೇತಸಃ ।
ಯೇಷಾಂ ಚಿತ್ತೇ ಚ ಕುಂದೇಂದುಧವಲಃ ಪಾರ್ವತೀಪ್ರಿಯಃ॥೧೨೧॥

ಧನ್ಯಾಸ್ತೇ ಶಿವಪೂಜಾರ್ಥಂ ನಿತ್ಯಮುದ್ಯುಕ್ತಮಾನಸಾಃ ।
ಯೇಷಾಂ ಚಿತ್ತೇ ಚ ಕುಂದೇಂದುಧವಲಃ ಪಾರ್ವತೀಪ್ರಿಯಃ॥೧೨೨॥

ಧನ್ಯಾಸ್ತೇ ಶಿವಭಕ್ತಾರ್ಥಂ ದತ್ತವಿತ್ತಾ ನರೋತ್ತಮಾಃ ।
ಯೇಷಾಂ ಚೇತಸಿ ಕುಂದೇಂದುಧವಲಃ ಪಾರ್ವತೀಪತಿಃ ॥೧೨೩॥

ಶಿವನನಾಮ ಮತ್ತು ಶಿವನ ಗುರುತು, ಶಿವಕಥಾಶ್ರವಣ ಇವೇ ಮೊದಲಾದವುಗಳಲ್ಲಿ ತತ್ಪರರಾಗಿ, ಕುಂದಪುಷ್ಪ, ಚಂದ್ರ ಇವುಗಳಂತೆ ಶುಭ್ರವಾದ ಬಣ್ಣವುಳ್ಳ ಆ ಪಾರ್ವತೀಪತಿಯನ್ನು ಮನಸ್ಸಿನಲ್ಲಿ ಧ್ಯಾನಮಾಡುವ ಮಾನವರೇ ಧನ್ಯರು. ಶಿವನಾಮಸ್ಮರಣೆಮಾಡುತ್ತಾ ಆ ಶಿವನೊಬ್ಬನನ್ನೇ ಕುಲದೇವತೆಯನ್ನಾಗಿ ನಂಬಿರುವ ಮಾನವರೂ ಧನ್ಯರು. ॥೧೧೯-೧೨೦॥

ಶಿವನಾಮಧ್ಯಾನದಲ್ಲಿಯೇ ಆಸಕ್ತರಾದವರು, ತಮ್ಮ ಮನಸ್ಸಿನಲ್ಲಿ ಕುಂದಪುಷ್ಪ ಚಂದ್ರ ಇವುಗಳಂತೆ ಶುಭ್ರವಾದ ವರ್ಣವುಳ್ಳ ಪಾರ್ವತೀರಮಣನನ್ನು ಅನವರತವೂ ಚಿಂತಿಸುತ್ತಾ ಧನ್ಯರೆನಿಸುವರು. ॥೧೨೦॥

ಕುಂದಪುಷ್ಪ, ಚಂದ್ರ ಇವುಗಳಂತೆ ಶುಭ್ರವರ್ಣವುಳ್ಳವನಾದ ಆ ಪಾರ್ವತೀಪ್ರಿಯನಾದ ಶಿವನನ್ನು ಮನಸ್ಸಿನಲ್ಲಿ ಧ್ಯಾನಮಾಡುತ್ತಾ ನಿತ್ಯವೂ ಆ ಶಿವಪೂಜೆಗೋಸ್ಕರವೇ ಮನಃಪೂರ್ವಕವಾಗಿ ಪ್ರಯತ್ನಿಸುತ್ತಿರುವ ಮಾನವರು ಧನ್ಯರು. ॥೧೨೨॥

ಶಿವಭಕ್ತರಿಗೋಸ್ಕರವೇ ತನ್ನ ಸಕಲ ದ್ರವ್ಯವನ್ನೂ ದಾನಮಾಡುತ್ತಾ, ಸದಾ ತನ್ನ ಮನಸ್ಸಿನಲ್ಲಿಯೇ ಕುಂದಪುಷ್ಪ, ಚಂದ್ರ ಇವುಗಳಂತೆ ಶುಭ್ರವರ್ಣವುಳ್ಳ ಪಾರ್ವತೀಪತಿಯನ್ನು ಧ್ಯಾನಮಾಡುವ ಮಾನವರೇ ಧನ್ಯರು. ॥೧೨೩॥

ನ ಭಯಂ ಶಿವಭಕ್ತಾನಾಮಭಯಪ್ರದಮೀಶ್ವರಂ।
ಯತೋಽರ್ಚಯಂತಿ ಸತತಮಪ್ರಮತ್ತಾಃ ಶಿವಾರ್ಚಕಾಃ॥ ೧೨೪॥

ಉದೇತು ಭಾನುರಪ್ಯೇಷಃ ಪಶ್ಚಿಮಾದಿಶಿ ಸರ್ವಥಾ।
ತಥಾಪಿ ಶಿವಭಕ್ತಾನಾಂ ಭಯಲೇಶೋಽಪಿ ನ ಧ್ರುವಂ ॥೧೨೫॥

ಭವಂತು ಸಾಗರಾಃ ಸರ್ವೇ ಉದ್ವೇಲಾಃ ಕ್ಷೋಭಹೇತವಃ।
ತಥಾಪಿ ಶಿವಭಕ್ತಾನಾಂ ಭಯಲೇಶೋಽಪಿ ನ ಧ್ರುವಂ ॥೧೨೬॥

ಕಂಪಮೇತ್ವನಿಶಂ ಭೂಮಿಃ ಸಶೈಲವನಕಾನನಾ।
ತಥಾಪಿ ಶಿವಭಕ್ತಾನಾಂ ಭಯಲೇಶೋಽಪಿ ನ ಧ್ರುವಂ ॥೧೨೭॥

ಅಮಾಯಾಮುದಯಂ ಯಾತು ಪೂರ್ಣಚಂದ್ರೋ ಭಯಪ್ರದಃ।
ತಥಾಪಿ ಶಿವಭಕ್ತಾನಾಂ ಭಯಲೇಶೋಽಪಿ ನ ಧ್ರುವಂ ॥೧೨೮॥

ಉದಯಂ ಯಾಂತು ನಕ್ಷತ್ರಾಣ್ಯಪಿ ನಿತ್ಯಮಹರ್ನಿಶಂ।
ತಥಾಪಿ ಶಿವಭಕ್ತಾನಾಂ ಭಯಲೇಶೋಽಪಿ ಸರ್ವಥಾ ॥೧೨೯॥

ಶಿವಪೂಜಾತತ್ಪರರಾದ ಮಾನವರು ಯಾವಾಗಲೂ ಪ್ರಮಾದವಿಲ್ಲದೇ ಅಭಯಪ್ರದನಾದ ಈಶ್ವರನನ್ನು ಭಕ್ತಿಯಿಂದ ಪೂಜಿಸುವುದರಿಂದ, ಆ ಪರಶಿವ ಭಕ್ತರಿಗೆ ಎಂದಿಗೂ ಭಯವೇ ಇರುವುದಿಲ್ಲ. ||೧೨೪||

ಸೂರ್ಯನು ಒಂದುವೇಳೆ ಪಶ್ಚಿಮ ದಿಕ್ಕಿನಲ್ಲಿಯೇ ಉದಯಿಸಲಿ, ಏಳು ಸಾಗರಗಳೂ ಎಲ್ಲೆಮೀರಿ ಆಲ್ಲೋಲಕಲ್ಲೋಲವಾಗಿ ಪ್ರಪಂಚವೆಲ್ಲಾ ಪ್ರಳಯವಾಗಲಿ; ಏನೇ ಆದರೂ, ಆ ಪರಶಿವನ ಭಕ್ತರಿಗೆ ಎಂದಿಗೂ ಸ್ವಲ್ಪವೂ ಭಯವೇ ಇರುವುದಿಲ್ಲ. ||೧೨೫-೧೨೬||

ಬೆಟ್ಟಗುಡ್ಡಗಳೂ ಮತ್ತು ಕಾಡು ಇವುಗಳೊಡಗೂಡಿದ ಭೂಮಿಯೇ ಯಾವಾಗಲೂ ಕಂಪಿಸಿದರೂ (ನಡುಗಿದರೂ) ಒಂದುವೇಳೆ ಪೂರ್ಣಚಂದ್ರನೇ ಅಮಾವಾಸ್ಯೆಯಲ್ಲಿ ಹುಟ್ಟಿ ಭಯಂಕರನಾದರೂ, ಸದಾಶಿವಭಕ್ತರಿಗೆ ಸ್ವಲ್ಪವೂ ಭಯವೇ ಇಲ್ಲ. ||೧೨೭-೧೨೮||

ನಕ್ಷತ್ರಗಳು ಹಗಲುರಾತ್ರಿ ಎಡಬಿಡದೇ ಕಂಡುಬಂದರೂ ಪುಷ್ಕಲಾವರ್ತ

ವರ್ಷಂತು ಪುಷ್ಕಲಾವರ್ತಾಃ ಪ್ಲಾವಯಂತ್ವವನೀಮಿಮಾಂ ।
ತಥಾಪಿ ಶಿವಭಕ್ತಾನಾಂ ಭಯಲೇಶೋಽಪಿ ಸರ್ವಥಾ ॥೧೩೦॥

ಉಲ್ಕಾಃ ಪತಂತು ಸತತಮಾಸಮುದ್ರಾಂತಮಂಡಲೇ ।
ತಥಾಪಿ ಶಿವಭಕ್ತಾನಾಂ ಭಯಲೇಶೋಽಪಿ ಸರ್ವಥಾ ॥೧೩೧॥

ಧೂಸರಾಃ ಸಂತು ಸರ್ವಾಸ್ತಾಃ ದಿಶಃ ಪ್ರತಿದಿಶಸ್ತಥಾ ।
ತಥಾಪಿ ಶಿವಭಕ್ತಾನಾಂ ಭಯಲೇಶೋಽಪಿ ಸರ್ವಥಾ ॥೧೩೨॥

ಪತಂತ್ವಶನಿಸಂಘಾಶ್ಚ ಬಹವಃ ಸತತಂ ಭುವಿ ।
ತಥಾಪಿ ಶಿವಭಕ್ತಾನಾಂ ಭಯಲೇಶೋಽಪಿ ನ ಧ್ರುವಂ ॥೧೩೩॥

ದೇವಾಃ ಕಿಂ ಬಹುನೋಕ್ತೇನ ಸರ್ವಥಾ ಶಾಂಕರೈರ್ಜನೈಃ ।
ಪದೇಪದೇಽಪಿ ಕಲ್ಯಾಣಂ ಪ್ರಾಪ್ತವ್ಯಂ ನಾತ್ರ ಸಂಶಯಃ ॥೧೩೪॥

ಶಂಕರಾಸಕ್ತಚಿತ್ತಾನಾಂ ಶಂಕರಃ ಕರುಣಾಕರಃ ।
ದದಾತಿ ಮಂಗಲಂ ಯಸ್ಮಾನ್ಮಂಗಲಾಪತಿರೀಶ್ವರಃ ॥೧೩೫॥

ವೆಂಬ ಮೇಘಗಳು ಈ ಭೂಮಿಯಲ್ಲಿ ಅನವರತವೂ ಮಳೆಗರೆದು ಕೊಚ್ಚುವಂತೆ ಮಾಡಿದರೂ ಪರಶಿವಭಕ್ತರಿಗೆ ಸ್ವಲ್ಪವೂ ಭಯವೇ ಇಲ್ಲ. ॥೧೨೯-೧೩೦॥

ಅನವರತವೂ ಸಮುದ್ರದವರೆಗಿರುವ ಭೂಮಂಡಲದಲ್ಲಿ ಉಲ್ಕಾಪಾತಗಳೇ ತೋರಿದರೂ, ದಿಕ್ಕುಗಳೆಲ್ಲವೂ ಪ್ರತಿದಿಕ್ಕುಗಳೊಡನೆ ಧೂಸರಬಣ್ಣವನ್ನು ಹೊಂದಿದರೂ, ಈಶ್ವರಭಕ್ತರಿಗೆ ಎಂದಿಗೂ ಸ್ವಲ್ಪವೂ ಭಯವೇ ಇಲ್ಲ. ॥೧೩೧-೧೩೨॥

ಅನೇಕ ಸಿಡಿಲುಗಳ ಸಮೂಹವೇ ಈ ಭೂಮಿಯಲ್ಲಿ ಯಾವಾಗಲೂ ಹೊಡೆದರೂ ಆ ಶಿವಭಕ್ತರಿಗೆ ಕೊಂಚಭಯವೂ ಇರುವುದಿಲ್ಲ. ಇದು ನಿಶ್ಚಯವೆಂದು ತಿಳಿಯಿರಿ. ಓ ಇಂದ್ರಾದಿದೇವತೆಗಳಿರಾ, ಹೆಚ್ಚಿಗೆ ಹೇಳುವುದರಿಂದ ಪ್ರಯೋಜನವೇನು? ಸರ್ವರೀತಿಯಲ್ಲಿಯೂ ಆ ಶಂಕರನ ಭಕ್ತರಿಗೆ ಪದೇ ಪದೇ ಮಂಗಳವುಂಟಾಗುವುದರಲ್ಲಿ ಸಂಶಯವೇ ಇಲ್ಲ. ॥೧೩೩-೧೩೪॥

ತನ್ನಲ್ಲಿಯೇ ಆಸಕ್ತರಾದ ಮನಸ್ಸುಳ್ಳವರಿಗೆ ದಯಾಸಮುದ್ರನಾದ ಗೌರೀಶಂಕರನು ಮಂಗಳವನ್ನು ಉಂಟುಮಾಡುವುದರಿಂದ ಆ ಪರಮೇಶ್ವರನು ಮಂಗಳಾದೇವಿಯ ಪತಿಯೆನಿಸಿ ಅನ್ವರ್ಥನಾಮವುಳ್ಳವನಾಗಿರುವನು. ॥೧೩೫॥

ಧ್ಯಾತೋ ದದಾತಿ ಗೌರೀಶೋ ಮಂಗಲಂ ಮಂಗಲಾಶ್ರಯಃ ।
ಮಂಗಲಾಪತಿಸಂಸಕ್ತಚಿತ್ತಾನಾಂ ನಾಸ್ತ್ಯಮಂಗಲಂ ॥೧೩೬॥

ಅತ ಏವ ಮುನಿಶ್ರೇಷ್ಠಾಃ ಶಿವತತ್ವವಿಶಾರದಾಃ ।
ಶಿವಮೇವ ಶಿವಪ್ರೀತ್ಯೈ ಧ್ಯಾತ್ವಾ ತಿಷ್ಠಂತ್ಯನಾಕುಲಾಃ ॥೧೩೭॥

ಅನೇಕಜನ್ಮಭಿರ್ಯೇನ ತಪ್ತಂ ಘೋರತರಂ ತಪಃ ।
ತೇನೈವ ಶಂಕರೇ ಭಕ್ತಿಃ ಕ್ರಿಯತೇಽನನ್ಯಸೇವಿನಾ ॥೧೩೮॥

ಅನನ್ಯಭಾಙ್ಮಹಾದೇವಂ ಯೋಽರ್ಚಯಿಷ್ಯತಿ ಸರ್ವದಾ ।
ಸ ಏವ ಧನ್ಯಃ ಪುಣ್ಯಾತ್ಮಾ ತಸ್ಯಾಪ್ರಾಪ್ಯಂ ನ ಕಿಂಚನ ॥೧೩೯॥

ಯಜಂತಿ ಶಂಕರಾದನ್ಯಂ ಕೇಚಿನ್ಮಾಯಾವಿಮೋಹಿತಾಃ ।
ನ ತೇಷಾಂ ಸುಖಸಂಪತ್ತಿಃ ಕಲ್ಪಕೋಟಿಶತೈರಪಿ ॥೧೪೦॥

ಸಕಲ ಮಂಗಳಗಳಿಗೂ ಆಶ್ರಯನಾಗಿರುವ ಆ ಗೌರೀರಮಣನು ತನ್ನನ್ನು ಧ್ಯಾನಮಾಡುವ ಭಕ್ತರಿಗೆ ಮಂಗಳವನ್ನುಂಟುಮಾಡುವನು. ಮಂಗಲಾದೇವಿಯ ಪತಿಯಾದ ಆ ಪರಮೇಶ್ವರನಲ್ಲಿಯೇ ನೆಲಸಿರುವ ಮನಸ್ಸುಳ್ಳವರಿಗೆ ಸ್ವಲ್ಪವೂ ಅಮಂಗಳವೇ ಇರುವುದಿಲ್ಲ. ॥೧೩೬॥

ಆದ್ದರಿಂದಲೇ ಶಿವನ ತತ್ವವನ್ನು ಚೆನ್ನಾಗಿ ತಿಳಿದ ಮುನಿಶ್ರೇಷ್ಠರು ಆ ಪರಶಿವನ ಪ್ರೀತಿಗೋಸ್ಕರವೇ ಯಾವಾಗಲೂ ಸ್ವಲ್ಪವೂ ಆತಂಕವಿಲ್ಲದೆ ಆ ಶಿವನನ್ನು ಧ್ಯಾನಮಾಡುತ್ತಿರುವರು. ॥೧೩೭॥

ಅನೇಕಜನ್ಮಗಳಲ್ಲಿ ತುಂಬಾ ಘೋರವಾದ ತಪಸ್ಸುಮಾಡಿದವರಿಗೆ ಮಾತ್ರ ಮತ್ತಾರನ್ನೂ ಸೇವೆಮಾಡದೇ ಶಂಕರನೊಬ್ಬನಲ್ಲಿಯೇ ದೃಢವಾದ ಭಕ್ತಿಯುಂಟಾಗುವುದು. ॥೧೩೮॥

ವಿಷ್ಣ್ವಾದಿದೇವತೆಗಳನ್ನು ಪೂಜಿಸದೇ ಯಾವಾಗಲೂ ಆ ಮಹಾದೇವನೊಬ್ಬನನ್ನೇ ಪೂಜಿಸುವ ಪುಣ್ಯಾತ್ಮನೇ ಧನ್ಯನು. ಅವನಿಗೆ ಸಕಲವೂ ಸುಲಭವಾಗಿಯೇ ದೊರೆಯುವುದೇ ಹೊರತು ಯಾವ ಕಾರ್ಯವೂ ಅಸಾಧ್ಯವಾಗುವುದಿಲ್ಲ. ॥೧೩೯॥

ಕೆಲವರು ಅಜ್ಞಾನದಿಂದ ಭ್ರಾಂತರಾಗಿ ಆ ಶಂಕರನಿಗಿಂತಲೂ ಬೇರೆಯವರಾದ ವಿಷ್ಣುವೇ ಮೊದಲಾದವರನ್ನು ಪೂಜೆಮಾಡುವರು. ಅವರಿಗೆ ನೂರಾರು ಕೋಟಿ ವರ್ಷಗಳು ಕಳೆದರೂ ಸ್ವಲ್ಪವೂ ಸುಖಸಂಪತ್ತೇ ಇರುವುದಿಲ್ಲ. ॥೧೪೦॥

ಅಪ್ರಮೇಯಮನಾದ್ಯಂತಂ ನಿತ್ಯಂ ಶಂಕರಮೀಶ್ವರಂ ।
ಅನಾರಾಧ್ಯ ಜಡಾಃ ಕೇಚಿದರ್ಚಯಂತಿ ಹ್ಯನೀಶ್ವರಂ ॥೧೪೧॥

ಈಶ್ವರತ್ವೇನ ವಿಜ್ಞಾಯಾನೀಶ್ವರಂ ಯೇ ಭಜಂತಿ ತೇ ।
ಸ್ವೇಷ್ಟಂ ನ ಪ್ರಾಪ್ನುವಂತ್ಯೇವ ಕಲ್ಪಕೋಟಿಶತೈರಪಿ ॥೧೪೨॥

ರಜತತ್ವೇನ ವಿಜ್ಞಾಯಾರಜತೇ ಯಃ ಪ್ರವರ್ತತೇ ।
ತಸ್ಯ ಕಿಂ ಶುಕ್ತಿಶಕಲಂ ಕಂಕಣಾಯೋಪಯುಜ್ಯತೇ ॥೧೪೩॥

ಈಶ್ವರಃ ಶಿವ ಏವೇತಿ ವದತ್ಯೇವ ಶ್ರುತಿಸ್ತತಃ ।
ಸರ್ವಭಾವೇನ ಸತತಂ ಭಜನೀಯೋ ಮಹೇಶ್ವರಃ ॥೧೪೪॥

ಮಹಾದೇವಂ ವಿಹಾಯಾನ್ಯಂ ಸುರಂ ಯಂ ಸಮುಪಾಸತೇ ।
ತೇ ಮೂರ್ಖಾ ಇತಿ ವಿಜ್ಞೇಯಾಃ ಸತ್ಯಂ ಸತ್ಯಂ ನ ಸಂಶಯಃ ॥೧೪೫॥

ಪ್ರಮಾಣಕ್ಕೆ ಸಿಗದವನೂ, ಆದಿಶೂನ್ಯನೂ, ನಿತ್ಯನೂ, ಐಶ್ವರ್ಯಭರಿತನೂ, ಆದ ಆ ಶಂಕರನನ್ನು ಪೂಜೆಮಾಡದೇ ಕೆಲ ಮಂದಿ ಮೂರ್ಖರು ಈಶ್ವರಾತಿರಿಕ್ತರಾದ ವಿಷ್ಣುವೇ ಮೊದಲಾದವರನ್ನು ಪೂಜೆಮಾಡುತ್ತಾರೆ. ||೧೪೧||

ಐಶ್ವರ್ಯಶಾಲಿಯೆಂದು ತಿಳಿದೂ, ಆ ಈಶ್ವರನಲ್ಲದೇ ಬೇರೆಯವರನ್ನು ಸೇವೆ ಮಾಡುವವರಿಗೆ ಅನೇಕ ಕೋಟಿ ಕಲ್ಪಗಳಾದರೂ ಅವರು ತಮ್ಮ ಇಷ್ಟಾರ್ಥಗಳನ್ನು ಎಂದಿಗೂ ಹೊಂದಲಾರರು. ||೧೪೨||

ಬೆಳ್ಳಿಯಲ್ಲದ ಕಪ್ಪೆಚಿಪ್ಪಿನಲ್ಲಿ ಬೆಳ್ಳಿಯೆಂಬ ಭ್ರಮೆಯಿಂದ ಪ್ರವರ್ತಿಸುವವನು ಆ ಕಪ್ಪೆಚಿಪ್ಪಿನಿಂದ ಕಂಕಣವನ್ನು ಮಾಡಿಸಲು ಸಾಧ್ಯವಾದೀತೇ! ||೧೪೩||

ವೇದವು, ಆ ಪರಶಿವನೇ ಐಶ್ವರ್ಯಭರಿತನೆಂದು ಹೇಳುತ್ತಿರುವುದರಿಂದ ಸಕಲ ಪ್ರಕಾರದಿಂದಲೂ ಆ ಮಹೇಶ್ವರನೇ ಪೂಜಾರ್ಹನಾಗಿರುವರು. ||೧೪೪||

ಮಹಾದೇವನನ್ನು ಬಿಟ್ಟು ಬೇರೆ ದೇವತೆಗಳನ್ನು ಪೂಜೆಮಾಡುವವನು ಸತ್ಯವಾಗಿಯೂ ಮೂರ್ಖನೆಂದೇ ತಿಳಿಯಲ್ಪಡುವನು. ಇದರಲ್ಲಿ ಸಂಶಯವೇ ಇಲ್ಲ. ||೧೪೫||

ಯಃ ಶಂಕರಂ ವಿಹಾಯಾನ್ಯಂ ಸುರಮರ್ಚಿತುಮಿಚ್ಛತಿ ।
ಸ ಮುಖಸ್ಥಾಂ ಸುಧಾಂ ತ್ಯಕ್ತ್ವಾ ಕ್ಷಾರಾಂಭಃ ಪಾತುಮಿಚ್ಛತಿ॥೧೪೬॥

ಯಃ ಶಂಕರಂ ವಿಹಾಯಾನ್ಯಂ ಸುರಮರ್ಚಿತುಮಿಚ್ಛತಿ ।
ಸ ಕರಸ್ಥನಿಧಿಂ ತ್ಯಕ್ತ್ವಾ ಚಂಡಾಲಮುಪಸೇವತೇ ॥೧೪೭॥

ಯಃ ಶಂಕರಂ ವಿಹಾಯಾನ್ಯಂ ಸುರಮರ್ಚಿತುಮಿಚ್ಛತಿ ।
ಸ ಕಾಮದೋಗ್ಧ್ರೀಂ ಸಂತ್ಯಕ್ತ್ವಾ ವಿಟಸ್ತ್ರೀಮನುಸೇವತೇ ॥೧೪೮॥

ಯಃ ಶಂಕರಂ ವಿಹಾಯಾನ್ಯಂ ಸುರಮರ್ಚಿತುಮಿಚ್ಛತಿ ।
ಸ ರತ್ನಂ ಸ್ವವಶಂ ತ್ಯಕ್ತ್ವಾ ಕಾಚಂ ಸಂಪ್ರಾಪ್ತುಮಿಚ್ಛತಿ ॥೧೪೯॥

ಯಃ ಶಂಕರಂ ವಿಹಾಯಾನ್ಯಂ ಸುರಮರ್ಚಿತುಮಿಚ್ಛತಿ ।
ಸ ಭಾರ್ಯಾಂ ಯುವತೀಂ ತ್ಯಕ್ತ್ವಾ ಗಾರ್ದಭೀಮನುಸೇವತೇ ॥೧೫೦॥

ಯಃ ಶಂಕರಂ ವಿಹಾಯಾನ್ಯಂ ಸುರಮರ್ಚಿತುಮಿಚ್ಛತಿ ।
ಸ ಭಕ್ಷ್ಯಂ ಸಘೃತಂ ತ್ಯಕ್ತ್ವಾ ಲೋಷ್ಟಭಕ್ಷಣಮಿಚ್ಛತಿ ॥೧೫೧॥

ಆ ಲೋಕಶಂಕರನನ್ನು ಬಿಟ್ಟು ಬೇರೆ ದೇವತೆಯನ್ನು ಪೂಜೆಮಾಡಲು ಬಯಸುವವನು ತನ್ನ ಬಾಯಲ್ಲಿದ್ದ ಅಮೃತವನ್ನು ಬಿಟ್ಟು, ಉಪ್ಪುನೀರನ್ನು ಕುಡಿಯಲು ಅಪೇಕ್ಷೆಪಡುವವನಂತೆ ಮೂರ್ಖನೆನಿಸುವನು. ||೧೪೬||

ಶಂಕರನನ್ನು ಬಿಟ್ಟು ಬೇರೆ ದೇವತೆಯನ್ನು ಪೂಜೆಮಾಡಲು ಅಪೇಕ್ಷೆಪಡುವವನು, ತನ್ನ ಕೈಯಲ್ಲಿರುವ ನಿಧಿಯನ್ನೇ ಬಿಟ್ಟು ಚಂಡಾಲನನ್ನು ಸೇವೆಮಾಡುವವನಂತೆಯೂ, ಸಕಲ ಇಷ್ಟಾರ್ಥಗಳನ್ನೂ ಕೊಡುವ ಕಾಮಧೇನುವನ್ನು ಬಿಟ್ಟು ವೇಶ್ಯಾಸ್ತ್ರೀಯನ್ನು ಸೇವಿಸಿದಂತೆಯೂ ಆಗುವನು. ||೧೪೭-೧೪೮||

ಆ ಶಂಕರನನ್ನು ಬಿಟ್ಟು ಬೇರೆ ದೇವರನ್ನು ಪೂಜಿಸಲು ಬಯಸುವ ಮಾನವನು ತನ್ನ ಅಧೀನದಲ್ಲಿದ್ದ ರತ್ನವನ್ನು ಎಸೆದು ಗಾಜನ್ನಪೇಕ್ಷಿಸುವವನಂತೆಯೂ, ಯೌವ್ವನಭರಿತಳಾದ ತನ್ನ ಪತ್ನಿಯನ್ನು ನೂಕಿ ಹೆಣ್ಣುಕತ್ತೆಯನ್ನು ಅನುಸರಿಸುವವನಂತೆಯೂ ಹಾಸ್ಯಾಸ್ಪದನಾಗುವನು. ||೧೪೯-೧೫೦||

ಗೌರೀಶಂಕರನನ್ನು ಬಿಟ್ಟು ಬೇರೆ ದೇವರನ್ನು ಪೂಜಿಸಲು ಬಯಸುವವನು, ತುಪ್ಪದಲ್ಲಿ ಕರಿದು, ತುಪ್ಪದೊಡಗೂಡಿದ ರುಚಿಕರವಾದ ಭಕ್ಷ್ಯವನ್ನು ತಿನ್ನದೆ

ಯಃ ಶಂಕರಂ ವಿಹಾಯಾನ್ಯಂ ಸುರಮರ್ಚಿತುಮಿಚ್ಛತಿ ।
ಸ ವಿಹಾಯ ಸ್ವರ್ಗಭೋಗಂ ನರಕಾವಾಸಮಿಚ್ಛತಿ ॥೧೫೨॥

ಯಃ ಶಂಕರಂ ವಿಹಾಯಾನ್ಯಂ ಸುರಮರ್ಚಿತುಮಿಚ್ಛತಿ ।
ಸ ಪಾಯಸಾನ್ನಂ ಸಘೃತಂ ತ್ಯಕ್ತ್ವಾ ವಿಷ್ಠಾಂ ಸಮಿಚ್ಛತಿ ॥೧೫೩॥

ಯಃ ಶಂಕರಂ ವಿಹಾಯಾನ್ಯಂ ಸುರಮರ್ಚಿತುಮಿಚ್ಛತಿ ।
ಸ ಪೀತಮಂಬರಂ ತ್ಯಕ್ತ್ವಾ ಕಂಬಲಂ ಪ್ರಾಪ್ತುಮಿಚ್ಛತಿ ॥೧೫೪॥

ಯಃ ಶಂಕರಂ ವಿಹಾಯಾನ್ಯಂ ಸುರಮರ್ಚಿತುಮಿಚ್ಛತಿ ।
ಸ ವಿಹಾಯೈವ ಕಸ್ತೂರೀಂ ವಿಷ್ಠಾಲೇಪನಮಿಚ್ಛತಿ ॥೧೫೫॥

ಯಃ ಶಂಕರಂ ವಿಹಾಯಾನ್ಯಂ ಸುರಮರ್ಚಿತುಮಿಚ್ಛತಿ ।
ಸ ರತ್ನಮಾಲಿಕಾಂ ತ್ಯಕ್ತ್ವಾ ಕಾಷ್ಠಮಾಲಾಂ ಸಮಿಚ್ಛತಿ ॥೧೫೬॥

ಯಃ ಶಂಕರಂ ವಿಹಾಯಾನ್ಯಂ ಸುರಮರ್ಚಿತುಮಿಚ್ಛತಿ ।
ಸ ವಿಹಾಯ ಗಜಾರೋಹಂ ಗೃಧ್ರಾರೋಹಣಮಿಚ್ಛತಿ ॥೧೫೭॥

ಜೊಂಡು ಹುಲ್ಲನ್ನು ತಿನ್ನಲು ಬಯಸುವವನಂತೆಯೂ, ಆನಂದಪ್ರದವಾದ ಸ್ವರ್ಗಭೋಗವನ್ನು ತ್ಯಜಿಸಿ ನರಕವಾಸವನ್ನು ಅಪೇಕ್ಷೆಪಡುವವನಂತೆಯೂ ಆಗುವನು. ||೧೫೧-೧೫೨||

ಶಂಕರನನ್ನು ಬಿಟ್ಟು ಬೇರೆ ದೇವರನ್ನು ಪೂಜಿಸಲಪೇಕ್ಷಿಸುವವನು, ತುಪ್ಪದೊಡನೆ ಬೆರೆಸಿದ ಪಾಯಸಾನ್ನವನ್ನು ಒಲ್ಲದೆ ಪುರೀಷವನ್ನು ಬಯಸುವವನಂತೆಯೂ, ಪೀತಾಂಬರವನ್ನು ತ್ಯಾಗಮಾಡಿ, ಕಂಬಳಿಯನ್ನು ಹೊದಿಯ ಬಯಸುವವನಂತೆಯೂ ನಗೆಗೀಡಾಗುವನು. ||೧೫೩-೧೫೪||

ಆ ಶಂಕರನನ್ನು ಬಿಟ್ಟು ಬೇರೆ ದೇವತೆಯನ್ನು ಪೂಜೆಮಾಡಬಯಸುವವನು, ದಿವ್ಯವಾದ ಕಸ್ತೂರಿಯನ್ನು ಬಯಸದೆ ಪುರೀಷದಿಂದಲೇ ಲೇಪನೆಮಾಡಿಕೊಳ್ಳಲು ಬಯಸುವವನಂತೆಯೂ, ರತ್ನಮಾಲೆಯನ್ನು ಬಿಟ್ಟು ಗಾಜಿನ ಮಾಲೆಯನ್ನು ಅಪೇಕ್ಷಿಸುವಂತೆಯೂ ಆಗುವನು. ||೧೫೫-೧೫೬||

ಶಂಕರನನ್ನು ಬಿಟ್ಟು ಬೇರೆ ದೇವರನ್ನು ಪೂಜಿಸುವುದಕ್ಕಪೇಕ್ಷೆಪಡುವ ಮಾನವನು, ಆನೆಯ ಮೇಲೆ ಸವಾರಿಮಾಡುವುದನ್ನು ತೊರೆದು ಹದ್ದನ್ನು ಏರಿ

ಯಃ ಶಂಕರಂ ವಿಹಾಯಾನ್ಯಂ ಸುರಮರ್ಚಿತುಮಿಚ್ಛತಿ ।
ಸ ವಿಹಾಯ ಧರಾಧೀಶಂ ಕಿರಾತಮನುಸೇವತೇ ॥೧೫೮॥

ಯಃ ಶಂಕರಂ ವಿಹಾಯಾನ್ಯಂ ಸುರಮರ್ಚಿತುಮಿಚ್ಛತಿ ।
ಸ ವಿಹಾಯ ಮಹಾರಾಜ್ಯಂ ನೀಚಭೃತ್ಯತ್ವಮಿಚ್ಛತಿ ॥೧೫೯॥

ಯಃ ಶಂಕರಂ ವಿಹಾಯಾನ್ಯಂ ಸುರಮರ್ಚಿತುಮಿಚ್ಛತಿ ।
ಸ ಪರಿತ್ಯಜ್ಯ ವಿಪ್ರತ್ವಂ ಚಂಡಾಲತ್ವಂ ಸಮಿಚ್ಛತಿ ॥೧೬೦॥

ಯಃ ಶಂಕರಂ ವಿಹಾಯಾನ್ಯಂ ಸುರಮರ್ಚಿತುಮಿಚ್ಛತಿ ।
ತೇ ಸರ್ವೇ ಶಂಕರೇಣೈವ ವಂಚಿತಾಃ ಸತ್ಯಮುಚ್ಯತೇ ॥೧೬೧॥

ಯಸ್ಯಾಸ್ತ್ಯನನ್ಯಗಾ ಭಕ್ತಿರ್ಮಹಾದೇವೇ ಸುರೋತ್ತಮೇ ।
ತಸ್ಯ ತಜ್ಜನ್ಮವಿಗಮೇ ಮುಕ್ತಿರೇವ ನ ಸಂಶಯಃ ॥೧೬೨॥

ಯಸ್ಯಾಸ್ತ್ಯನನ್ಯಗಾ ಭಕ್ತಿರ್ಮಹಾದೇವೇ ಸುರೋತ್ತಮೇ ।
ಸ ಏವ ಕೃತಕೃತ್ಯಶ್ಚ ಸ ಏವ ಸುಭಗೋತ್ತಮಃ ॥೧೬೩॥

ಹೋಗ ಬಯಸುವವನಂತೆಯೂ, ಭೂಮಂಡಲಾಧಿಪತಿಯನ್ನು ಬಿಟ್ಟು ಕಿರಾತನನ್ನು ಸೇವಿಸುವವನಂತೆಯೂ ಆಗುವನು. ॥೧೫೭॥

ಶಂಕರನನ್ನಲ್ಲದೇ ಇತರ ದೇವತೆಗಳನ್ನು ಪೂಜಿಸಲಿಚ್ಛೆಪಡುವವನು ದೊಡ್ಡ ರಾಜ್ಯವನ್ನೇ ಬಿಟ್ಟು, ನೀಚನ ಸೇವಕತನವನ್ನು ಅಪೇಕ್ಷಿಸುವವನಂತೆಯೂ, ಬ್ರಾಹ್ಮಣತ್ವವನ್ನು ತೊರೆದು ಚಂಡಾಲತನವನ್ನು ಆಶಿಸುವವನಂತೆಯೂ ಆಗುವನು. ॥೧೫೯-೧೬೦॥

ಶಂಕರನನ್ನು ಬಿಟ್ಟು ಬೇರೆ ದೇವತೆಯನ್ನು ಪೂಜೆಮಾಡಲಿಚ್ಛಿಸುವವರೆಲ್ಲರೂ ಸತ್ಯವಾಗಿಯೂ ಆ ಶಂಕರನಿಂದ ವಂಚಿಸಲ್ಪಟ್ಟವರೆಂದೇ ಸಂಶಯವಿಲ್ಲದೇ ಹೇಳುವೆನು. ದೇವೋತ್ತಮನಾದ ಆ ಮಹಾದೇವನಲ್ಲಿ ಅಸಾಧಾರಣವಾದ ಭಕ್ತಿಯುಳ್ಳವನಿಗೆ ಆ ಜನ್ಮವು ಕಳೆದ ನಂತರ ಸಂಶಯವಿಲ್ಲದೇ ಮೋಕ್ಷವುಂಟಾಗುವುದು. ಇದು ಸತ್ಯ. ॥೧೬೧-೧೬೨॥

ದೇವೋತ್ತಮನಾದ ಆ ಮಹಾದೇವನಲ್ಲಿ ಮತ್ತಾವ ದೇವತೆಗಳ ವಿಷಯವೂ ಇಲ್ಲದ ನಿಶ್ಚಲವಾದ ಭಕ್ತಿಯುಳ್ಳವನು ಕೃತಕೃತ್ಯನೆನಿಸುವನು. ಅವನನ್ನೇ

ಶಿವೇ ಪರಮಕಲ್ಯಾಣನಿದಾನೇ ಪರಮೇಶ್ವರೇ ।
ಧನ್ಯಾ ಏವ ಹಿ ಕುರ್ವಂತಿ ಭಕ್ತಿಂ ಮುಕ್ತಿಪ್ರದಾಯಿನೀಂ ॥೧೬೪॥

ಯಂ ಯಂ ಸದಾಶಿವೋ ನಿತ್ಯಮನುಗೃಹ್ಣಾತುಮಿಚ್ಛತಿ ।
ತಸ್ಯೈವ ಶಂಕರೇ ಶ್ರದ್ಧಾಭಕ್ತಿಶ್ಚಾನನ್ಯಗಾ ಧ್ರುವಂ ॥೧೬೫॥

ಯಃ ಶಂಕರೈಕಶರಣೋ ನ ಭವಿಷ್ಯತಿ ಸರ್ವಥಾ ।
ಸ ಏವ ದುರ್ಭಗೋಽಭಾಗ್ಯಃ ಸ ಏವಾಘೌಘಭಾಜನಂ ॥೧೬೬॥

ಯಃ ಶಂಕರಾರ್ಚಾನಿಯತೋ ನ ಭವಿಷ್ಯತಿ ಸರ್ವಥಾ ।
ಸ ಏವ ದುರ್ಭಗೋಽಭಾಗ್ಯಃ ಸ ಏವಾಘೌಘಭಾಜನಂ ॥೧೬೭॥

ಯಃ ಶಂಕರಕಥಾಲಾಪಸಕ್ತಚಿತ್ತೋ ನ ಸರ್ವಥಾ ।
ಸ ಏವ ದುರ್ಭಗೋಽಭಾಗ್ಯಃ ಸ ಏವಾಘೌಘಭಾಜನಂ ॥೧೬೮॥

ಸೌಭಾಗ್ಯವಂತರಲ್ಲಿ ಉತ್ತಮನೆಂದೂ ಕರೆಯುವರು. ಅತಿಶಯವಾದ ಮಂಗಳಗಳಿಗೆಲ್ಲಾ ಮೂಲಕಾರಣನಾದ ಪರಮೈಶ್ವರ್ಯಭರಿತನಾದ ಆ ಶಿವನಲ್ಲಿ ಮೋಕ್ಷಪ್ರದವಾದ ಭಕ್ತಿಯನ್ನಿಡುವವರು ಧನ್ಯರೆಂದೇ ಭಾವಿಸುವೆನು. ||೧೬೩-೧೬೪||

ಯಾರನ್ನು ಆ ಸದಾಶಿವನು ನಿತ್ಯವೂ ಅನುಗ್ರಹಿಸಲು ಅಪೇಕ್ಷೆಪಡುವನೋ ಅವನಿಗೇ ಆ ಶಂಕರನಲ್ಲಿ ನಂಬಿಕೆಯೂ ಅನನ್ಯಸಾಧಾರಣವಾದ ಭಕ್ತಿಯೂ ಉಂಟಾಗುವುದು ನಿಶ್ಚಯ. ಸರ್ವಪ್ರಕಾರದಿಂದಲೂ ಆ ಶಂಕರನೊಬ್ಬನನ್ನೇ ರಕ್ಷಕನೆಂದು ತಿಳಿಯದೇ ಇರುವವನೇ ನಿರ್ಭಾಗ್ಯನೂ, ಭಾಗ್ಯಹೀನನೂ ಮತ್ತು ಸಕಲ ಪಾಪಗಳಿಗೂ ಆಶ್ರಯನೂ ಆಗುವನು. ||೧೬೫-೧೬೬||

ನಿಯಮದಿಂದ ಶಂಕರನ ಪೂಜೆಯಲ್ಲಿ ತತ್ಪರನಾಗದವನೂ, ಆ ಶಂಕರನ ಸಂಬಂಧವಾದ ಕಥಾಶ್ರವಣದಲ್ಲಿ ಆಸಕ್ತಿಯಿಲ್ಲದ ಮನಸ್ಸುಳ್ಳವನೂ ಸಹ ನಿರ್ಭಾಗ್ಯನೂ, ಭಾಗ್ಯರಹಿತನೂ ಆಗುವನಲ್ಲದೆ ಸಕಲ ಪಾಪರಾಶಿಗಳಿಗೂ ತಾನು ಆಶ್ರಯನಾಗುವನು. ||೧೬೭-೧೬೮||

ಯಃ ಶಂಕರಂ ಸಮಭ್ಯರ್ಚ್ಯ ಪೂಜಿತಂ ನಾಭಿನಂದತಿ ।
ಸ ಏವ ದುರ್ಭಗೋಽಭಾಗ್ಯಃ ಸ ಏವಾಘೌಘಭಾಜನಂ ॥೧೯॥

ಯಃ ಶಂಕರಂ ಸಮಾಲೋಕ್ಯ ಸಾದರಂ ನಾಭಿನಂದತಿ ।
ಸ ಏವ ದುರ್ಭಗೋಽಭಾಗ್ಯಃ ಸ ಏವಾಘೌಘಭಾಜನಂ ॥೨೦॥

ಯಃ ಶಂಕರಂ ಸಮಾಲೋಕ್ಯ ನರ್ತನಂ ನ ಕರಿಷ್ಯತಿ ।
ಸ ಏವ ದುರ್ಭಗೋಽಭಾಗ್ಯಃ ಸ ಏವಾಘೌಘಭಾಜನಂ ॥೨೧॥

ಯಃ ಶಂಕರಂ ಸಮಾಲೋಕ್ಯ ನ ಸ್ತೋತ್ರಂ ಕರ್ತುಮಿಚ್ಛತಿ ।
ಸ ಏವ ದುರ್ಭಗೋಽಭಾಗ್ಯಃ ಸ ಏವಾಘೌಘಭಾಜನಂ ॥೨೨॥

ಯಃ ಶಂಕರಂ ಸಮಾಲೋಕ್ಯ ನ ಸವ್ಯಂ ಪರಿವರ್ತತೇ ।
ಸ ಏವ ದುರ್ಭಗೋಽಭಾಗ್ಯಃ ಸ ಏವಾಘೌಘಭಾಜನಂ ॥೨೩॥

ಯಃ ಶಂಕರಂ ಸಮಾಲೋಕ್ಯ ತತ್ಸ್ಪರ್ಶಂ ನ ಕರಿಷ್ಯತಿ ।
ಸ ಏವ ದುರ್ಭಗೋಽಭಾಗ್ಯಃ ಸ ಏವಾಘೌಘಭಾಜನಂ ॥೨೪॥

ಆ ಶಂಕರನನ್ನು ಚೆನ್ನಾಗಿ ಪೂಜಿಸಿ, ಅದರಿಂದ ಸಂತೋಷಪಡದಿರುವವನೂ, ಶಂಕರನನ್ನು ಧ್ಯಾನಮಾಡಿ ಆನಂದಪಡದಿರುವವನೂ ಸಹ ದುರ್ಭಾಗ್ಯನೂ, ಐಶ್ವರ್ಯಹೀನನೂ, ಆಗುವನಲ್ಲದೇ ಪಾಪರಾಶಿಗಳಿಗೆಲ್ಲಾ ತಾನೇ ನೆಲೆಯಾಗುವನು. ॥೧೯-೨೦॥

ಶಂಕರನನ್ನು ನೋಡಿ, ನರ್ತನಮಾಡದವನೂ. ಸ್ತೋತ್ರಮಾಡಲು ಅಪೇಕ್ಷೆ ಪಡದಿರುವವನೂ, ನಿರ್ಭಾಗ್ಯನೂ, ದರಿದ್ರನೂ ಸಕಲ ಪಾಪರಾಶಿಗಳಿಗೂ ಆಶ್ರಯನೂ ಆಗಿರುವನು. ॥೨೧-೨೨॥

ಶಂಕರನನ್ನು ನೋಡಿ, ಬಲಮುಂದಾಗಿ ಪ್ರದಕ್ಷಿಣೆಮಾಡದವನೂ, ಆ ದೇವನನ್ನು ಸ್ಪರ್ಶಮಾಡದವನೂ, ನಿಜವಾಗಿಯೂ ಭಾಗ್ಯಹೀನನೂ, ದರಿದ್ರನೂ ಮತ್ತು ಪಾಪಗಳಿಗೆಲ್ಲಾ ಆಶ್ರಯನೂ ಆಗುವನು ॥೨೩-೨೪॥

ಯಃ ಶಂಕರಂ ಸಮಾಲೋಕ್ಯ ಪೂಜಾಂ ನೈವ ಕರಿಷ್ಯತಿ।
ಸ ದಗ್ಧಕರ ಇತ್ಯೇವ ಜ್ಞೇಯಃ ಪಾಪಕುಲಾಶ್ರಯಃ ॥೧೭೫॥

ಯಃ ಶಂಕರಂ ಸಮಾಲೋಕ್ಯ ಪ್ರಣಾಮಂ ನ ಕರಿಷ್ಯತಿ।
ಸ ದಗ್ಧದೇಹ ಇತ್ಯೇವ ಜ್ಞೇಯಃ ಪಾಪಕುಲಾಶ್ರಯಃ ॥೧೭೬॥

ಯಃ ಶಂಕರಂ ಸಮಾಲೋಕ್ಯ ಸ್ತೋತ್ರಂ ನೈವ ಕರಿಷ್ಯತಿ।
ಸ ದಗ್ಧಜಿಹ್ವ ಇತ್ಯೇವ ಜ್ಞೇಯಃ ಪಾಪಕುಲಾಶ್ರಯಃ ॥೧೭೭॥

ಯಃ ಶಂಕರಂ ಸಮಾಲೋಕ್ಯ ನಾಭಿನಂದತಿ ಸತ್ವರಂ।
ಸ ದಗ್ಧಚಿತ್ತ ಇತ್ಯೇವ ಜ್ಞೇಯಃ ಪಾಪಕುಲಾಶ್ರಯಃ ॥೧೭೮॥

ಪೂಜಿತಃ ಪ್ರಣತಃ ಸ್ಪೃಷ್ಟಃ ಚಿಂತಿತಃ ಸಂಸ್ತುತಃ ಶಿವಃ।
ದದಾತಿ ಸೌಖ್ಯಮತುಲಂ ಮುಕ್ತಿಮಪ್ಯಮರೋತ್ತಮಃ ॥೧೭೯॥

ಸ ಭಾಗ್ಯವಾನ್ಸ ಪುಣ್ಯಾತ್ಮಾ ಸ ಧನ್ಯೋ ಧನ್ಯಪೂಜಿತಃ।
ಯಃ ಶಂಕರಾರ್ಚನಧ್ಯಾನನತಿಸ್ತುತಿರತಃ ಸದಾ ॥೧೮೦॥

ಶಂಕರನನ್ನು ನೋಡಿ ಪೂಜೆಮಾಡದಿರುವವನೂ, ಪಾಪಸಮೂಹಕ್ಕೆ ಆಶ್ರಯನಾಗಿ ದಗ್ಧಹಸ್ತನೆನಿಸುವನು. (ಅವನ ಕೈಯಲ್ಲಿ ಏನು ಇದ್ದರೂ ಸುಟ್ಟು ಹೋದಂತೆಯೇ ಅಂದರೆ ಅದು ಪ್ರಯೋಜನಕ್ಕೆ ಬಾರದಂತೆಯೂ ಆಗುವುದೆಂದು ಭಾವವು.) ಮತ್ತು ಆ ದೇವನ ದರ್ಶನವಾದರೂ ಅವನಿಗೆ ನಮಸ್ಕಾರಮಾಡದಿರುವವನೂ ಪಾಪರಾಶಿಗಳಿಗೆಲ್ಲಾ ಬೀಡಾದವನಾಗಿ, ದಗ್ಧದೇಹನೆನಿಸುವನು.॥೧೭೫-೧೭೬॥

ಆ ಶಂಕರನನ್ನು ನೋಡಿ ಸ್ತೋತ್ರಮಾಡದವನೂ ಪಾಪಸಮೂಹಕ್ಕೆಲ್ಲಾ ಆಶ್ರಯನಾಗಿ ಸುಟ್ಟನಾಲಿಗೆಯುಳ್ಳವನೆನಿಸುವನು. ಅಲ್ಲದೇ ಆ ಸ್ವಾಮಿಯನ್ನು ನೋಡಿ ಕೂಡಲೇ ಆನಂದಪಡದಿರುವವನು ಸುಟ್ಟ ಮನಸ್ಸುಳ್ಳವನೆನಿಸಿ ಪಾಪರಾಶಿಗಳಿಗೆಲ್ಲಾ ತಾನು ಆಶ್ರಯನೆನಿಸುವನು. ॥೧೭೭-೧೭೮॥

ಪೂಜೆ, ನಮಸ್ಕಾರ, ಸ್ಪರ್ಶ, ಧ್ಯಾನ, ಸ್ತೋತ್ರ ಇವುಗಳಿಂದ ಸುಪ್ರೀತನಾಗಿ ದೇವೋತ್ತಮನಾದ ಪರಶಿವನು ಅಪಾರವಾದ ಸೌಖ್ಯವನ್ನೂ ಪ್ರಮಾಣರಹಿತವಾದ ಮೋಕ್ಷಸುಖವನ್ನೂ ತನ್ನ ಭಕ್ತರಿಗೆ ಕೊಡುತ್ತಾನೆ. ಆ ಲೋಕಶಂಕರನ ಪೂಜೆ, ಧ್ಯಾನ, ನಮಸ್ಕಾರ, ಸ್ತೋತ್ರ ಇವುಗಳಲ್ಲಿಯೇ ನಿರತರಾಗಿರುವವರೇ ಭಾಗ್ಯವಂತರು.

ತಸ್ಯೈವ ಜನನೀ ಧನ್ಯಾ ಜನ್ಮ ತಸ್ಯೈವ ಸಾರ್ಥಕಂ ।
ಯಸ್ಯ ಸಾಂಬೇ ಮಹಾದೇವೇ ಸಂಸಕ್ತಂ ಚಿತ್ತಮುನ್ಮಹಂ ॥೧೪೧॥

ತಸ್ಯೈವ ಹಿ ಪಿತಾ ಧನ್ಯಃ ತಸ್ಯೈವ ಕುಲಮುನ್ನತಂ ।
ಯೇನ ಸಾಂಬೋ ಮಹಾದೇವಃ ಪೂಜ್ಯತೇ ಸರ್ವದಾ ಮುದಾ॥೧೪೨॥

ಸರ್ವೋತ್ತಮಂ ಮಹಾದೇವಂ ವಿದಿತ್ವಾ ಯೋಽರ್ಚಯಿಷ್ಯತಿ ।
ನಮಸ್ತಸ್ಮೈ ನಮಸ್ತಸ್ಮೈ ನಮಸ್ತಸ್ಮೈ ನಮೋ ನಮಃ ॥೧೪೩॥

ಸರ್ವೋತ್ತಮಂ ಮಹಾದೇವಂ ವಿದಿತ್ವಾ ಸ್ತೌತಿ ಯಃ ಸದಾ ।
ನಮಸ್ತಸ್ಮೈ ನಮಸ್ತಸ್ಮೈ ನಮಸ್ತಸ್ಮೈ ನಮೋ ನಮಃ ॥೧೪೪॥

ಸರ್ವೋತ್ತಮಂ ಮಹಾದೇವಂ ವಿದಿತ್ವಾ ಯೋಽಭಿನಂದತಿ ।
ನಮಸ್ತಸ್ಮೈ ನಮಸ್ತಸ್ಮೈ ನಮಸ್ತಸ್ಮೈ ನಮೋ ನಮಃ ॥೧೪೫॥

ಸರ್ವೋತ್ತಮಂ ಮಹಾದೇವಂ ವಿದಿತ್ವಾ ಯೋಽನುಸೇವತೇ ।
ನಮಸ್ತಸ್ಮೈ ನಮಸ್ತಸ್ಮೈ ನಮಸ್ತಸ್ಮೈ ನಮೋ ನಮಃ ॥೧೪೬॥

ಪುಣ್ಯಾತ್ಮರೂ, ಧನ್ಯರೂ ಅವರೇ. ಅವರು ಧನ್ಯರಿಂದ ಪೂಜಿಸಲ್ಪಡುವವರೂ ಆಗುವರು. ॥೧೭೯-೧೪೦॥

ಅಂಬಿಕಾಸಮೇತನಾದ ಮಹಾದೇವನಲ್ಲಿಯೇ ನೆಲಸಿರುವ ಮನಸ್ಸುಳ್ಳ ಮಾನವನ ತಾಯಿಯೇ ಧನ್ಯಳು. ಅವಳ ಜನ್ಮವೇ ಸಾರ್ಥಕವಾದುದು. ಅಂಬಾಸಮೇತನಾದ ಆ ಮಹಾದೇವನನ್ನು ಯಾವಾಗಲೂ ಪ್ರೀತಿಯಿಂದ ಪೂಜೆಮಾಡುವವನ ತಂದೆಯೂ ಧನ್ಯನು. ಆತನ ವಂಶವೇ ಶ್ರೇಷ್ಠವಾದದ್ದು. ॥೧೪೧-೧೪೨॥

ಆ ಮಹಾದೇವನನ್ನು ಸರ್ವೋತ್ತಮನೆಂದು ತಿಳಿದು ಪೂಜೆಮಾಡುವವನೂ, ಸ್ತೋತ್ರಮಾಡುವವನೂ ಆದ ಮಾನವನೇ ನಮಸ್ಕಾರಾರ್ಹನು. ಅವನಿಗೇ ನಾನು ನಮಸ್ಕಾರಮಾಡುವೆನು. ॥೧೪೩-೧೪೪॥

ಆ ಮಹಾದೇವನನ್ನು ಸರ್ವೋತ್ತಮನೆಂದು ತಿಳಿದು ಸಂತೋಷಪಡುವವನೂ, ಅವನನ್ನೇ ಸೇವಿಸುವವನೂ, ಆದ ಮಾನವನೇ ನಮಸ್ಕಾರಾರ್ಹನು. ಅವನಿಗೆ ನಮಸ್ಕಾರಮಾಡುವೆನು. ॥೧೪೫-೧೪೬॥

ಸರ್ವೋತ್ತಮಂ ಮಹಾದೇವಂ ವಿದಿತ್ವಾಯೋ ನಮೋಸ್ತುಹುಃ ।
ನಮಸ್ತಸ್ಮೈ ನಮಸ್ತಸ್ಮೈ ನಮಸ್ತಸ್ಮೈ ನಮೋನಮಃ ॥೧೮೭॥

ಅನನ್ಯಶರಣಾಃ ಸಂತಃ ಸತ್ಪಾಂತಃಕರಣಾಃ ಶಿವೇ ।
ಸರ್ವೈರಪಿ ನಮಸ್ಕಾರ್ಯಾಃ ಸತ್ಯಂ ಸತ್ಯಂ ಮಯೋಚ್ಯತೇ ॥೧೮೮॥

ಅನನ್ಯಶರಣೋ ಧನ್ಯಃ ಶಾಂಕರೋ ವೇದ ಶಂಕರಂ ।
ಅತಃ ಶಾಂಕರವತ್ಸರ್ವೈಃ ಪೂಜನೀಯಃ ಪ್ರಯತ್ನತಃ ॥೧೮೯॥

ವಿದಿತ್ವಾ ಶಂಕರಂ ಧನ್ಯಾಶ್ಛಿನ್ನಸಂಸಾರಬಂಧನಾಃ ।
ಪ್ರಯಾಂತಿ ಶಾಂಕರಂ ರೂಪಮತಃ ಪೂಜ್ಯಾ ಹಿ ತೇ ಸದಾ ॥೧೯೦॥

ಅನೇಕಜನ್ಮಭಿರ್ಯೇನ ತಪಸ್ತಪ್ತಮನೇಕಧಾ ।
ಸ ವೇದ ಶಂಕರಂ ಯಸ್ಮಾತ್ಸ ಪೂಜ್ಯೋಽಸ್ಮಾಭಿರನ್ವಹಂ ॥೧೯೧॥

ಯಾವಂತಃ ಸಂತಿ ಭೂಲೋಕೇ ಶಾಂಕರಾಃ ಶಂಕರಾರ್ಚಕಾಃ ।
ತಾವದ್ಭ್ಯೋಽಪಿ ನಮೋ ನಿತ್ಯಂ ನಮೋ ನಿತ್ಯಂ ನಮಸ್ಕೃತಂ॥೧೯೨॥

ಆ ಮಹಾದೇವನು ಸರ್ವೋತ್ತಮನೆಂದು ತಿಳಿದು ಪದೇ ಪದೇ ಅವನಿಗೆ ನಮಸ್ಕಾರಮಾಡುವ ಮಾನವನಿಗೆ ನಾನೂ ನಮಸ್ಕಾರಮಾಡುವೆನು. ಸ್ಥಿರ ಮನಸ್ಸುಳ್ಳ ಸತ್ಪುರುಷರು ಮತ್ತಾರನ್ನೂ ಮರೆಹೋಗದೇ ಪರಶಿವನೊಬ್ಬನಲ್ಲಿಯೇ ನೆಟ್ಟಮನಸ್ಸುಳ್ಳವರಾಗಿ ಎಲ್ಲರಿಂದಲೂ ನಮಸ್ಕಾರಾರ್ಹರಾಗುವರೆಂದು ನಾನು ಸತ್ಯವಾಗಿಯೂ ಹೇಳುವೆನು. ||೧೮೭-೧೮೮||

ಮತ್ತೊಬ್ಬರನ್ನು ಆಶ್ರಯಿಸದೇ ಆ ಶಿವನೊಬ್ಬನನ್ನೇ ರಕ್ಷಕನೆಂದು ತಿಳಿದಿರುವ ಶಂಕರನ ಭಕ್ತನೊಬ್ಬನೇ ಧನ್ಯನು. ಆದ್ದರಿಂದ ಆ ಶಂಕರನ ಭಕ್ತರಂತೆ ಎಲ್ಲರೂ ದೇವನನ್ನು ನಿಯಮದಿಂದ ಪೂಜಿಸಬೇಕು. ಶಂಕರನ ತತ್ವವನ್ನರಿತವರು ಈ ಸಂಸಾರದ ಬಂಧನವನ್ನು ಹೊಂದದೇ ಧನ್ಯರೆನಿಸಿ, ಕೊನೆಗೆ ಶಂಕರನ ರೂಪವನ್ನೇ ಹೊಂದುವರಾದ್ದರಿಂದ ಅವರೆಲ್ಲರೂ ಯಾವಾಗಲೂ ಪೂಜ್ಯರೇ ಆಗಿರುವರು. ||೧೮೯-೧೯೦||

ನಾನಾ ಜನ್ಮಗಳಲ್ಲಿ ಅನೇಕ ರೀತಿಯಿಂದ ತಪಸ್ಸುಮಾಡಿದವರು ಆ ಶಂಕರನ ಸ್ವರೂಪವನ್ನು ತಿಳಿಯುವುದರಿಂದ ಅವರನ್ನು ಪ್ರತಿ ನಿತ್ಯವೂ ನಾವು ಪೂಜಿಸಬೇಕು.

ಶಾಂಕರಃ ಶಂಕರಃ ಸಾಕ್ಷಾತ್ತಯೋರ್ಭೇದೋ ನ ವಸ್ತುತಃ ।
ನಮಸ್ತಸ್ಮೈ ನಮಸ್ತಸ್ಮೈ ನಮಸ್ತಸ್ಮೈ ನಮೋ ನಮಃ ॥೧೯೩॥

ಶಂಕರಾರ್ಚಾರತಂ ಶೈವಂ ದೃಷ್ಟ್ವಾ ಯೋ ನಾಭಿನಂದತಿ ।
ನ ತಸ್ಮಾದಧಿಕಃ ಪಾಪೀ ಸತ್ಯಂ ಸತ್ಯಂ ನ ಸಂಶಯಃ ॥೧೯೪॥

ಶಂಕರಾರ್ಚಾರತಂ ಶೈವಂ ಯೋ ನಾರ್ಚಯತಿ ಸಾದರಂ ।
ಸ ಯಾತಿ ನರಕಂ ಘೋರಂ ಯಾವದಾಚಂದ್ರತಾರಕಂ ॥೧೯೫॥

ಶಂಕರಾರ್ಚಾಪರಃ ಶೈವಃ ಸರ್ವಪುಣ್ಯನಿಧಿಸ್ತತಃ ।
ಸ ಪೂಜನೀಯಃ ಸರ್ವೈಶ್ಚ ಸತ್ಯಮೇವ ಮಯೋಚ್ಯತೇ ॥೧೯೬॥

ಶಂಕರಃ ಪೂಜಿತೋ ನೂನಂ ಸಾಕ್ಷಾಚ್ಛಾಂಕರಪೂಜಯಾ ।
ಶಾಂಕರಸ್ತೋಷಿತಃ ಸಾಕ್ಷಾತ್ತೋಷಿತಃ ಶಂಕರೋ ಬುಧೈಃ ॥೧೯೭॥

ಈ ಭೂಲೋಕದಲ್ಲಿ ಆ ಶಂಕರನ ಪೂಜಾತತ್ಪರರಾದ ಶಿವಭಕ್ತರೆಷ್ಟು ಮಂದಿ ಇರುವರೋ ಅವರೆಲ್ಲರಿಗೂ ನಿತ್ಯವೂ ನಾನು ನಮಸ್ಕಾರ ಮಾಡುವೆನು.॥೧೯೧-೧೯೨॥

ಶಂಕರನಿಗೂ, ಶಂಕರನ ಭಕ್ತನಿಗೂ ವಸ್ತುತಃ ಸ್ವಲ್ಪವೂ ಭೇದವೇ ಇಲ್ಲದಿರುವುದರಿಂದ ಆತನಿಗೇ ನಾನು ನಮಸ್ಕಾರ ಮಾಡುವೆನು. ॥೧೯೩॥

ಶಂಕರನ ಪೂಜೆಯಲ್ಲಿ ನಿರತನಾದ ಆ ಶೈವನನ್ನು ನೋಡಿ ಸಂತೋಷಪಡದೇ ಇರುವವನಿಗಿಂತಲೂ ಹೆಚ್ಚಿನ ಪಾಪಿಯು ಸತ್ಯವಾಗಿಯೂ ಇಲ್ಲ. ಇದರಲ್ಲಿ ಸಂದೇಹವೇ ಇಲ್ಲ. ಶಿವಪೂಜಾತತ್ಪರನಾಗಿರುವ ಶಂಕರನ ಭಕ್ತನನ್ನು ಆದರದಿಂದ ಪೂಜೆಮಾಡದೇ ಇರುವವನು, ಸೂರ್ಯಚಂದ್ರರೂ, ನಕ್ಷತ್ರಗಳೂ ಇರುವ ವರೆಗೂ ಘೋರವಾದ ನರಕದಲ್ಲಿ ಬಿದ್ದು ನರಳುವನು. ॥೧೯೪-೧೯೫॥

ಶಂಕರನ ಪೂಜಾತತ್ಪರನಾದ ಶೈವನು ಸಕಲಪುಣ್ಯಗಳಿಗೂ ಆಶ್ರಯನಾಗಿರುವುದರಿಂದ ಎಲ್ಲರೂ ಸತ್ಯವಾಗಿಯೂ ಅವನನ್ನು ಪೂಜೆಮಾಡಲೇಬೇಕೆಂದು ನಾನು ಹೇಳುತ್ತೇನೆ. ॥೧೯೬॥

ಶಂಕರನ ಭಕ್ತರನ್ನು ಪೂಜಿಸಿದರೆ ಆ ಶಂಕರನನ್ನು ನಿಶ್ಚಯವಾಗಿ ಪೂಜೆ ಮಾಡಿದಂತೆಯೇ ಆಗುವುದು. ಪರಶಿವಭಕ್ತನಿಗೆ ಸಂತೋಷಪಡಿಸಿದರೆ ಪಂಡಿತರು ಆ ಶಂಕರನನ್ನೇ ಸಂತೋಷಪಡಿಸಿದಂತೆ ಆಗುವುದೆಂದು ತಿಳಿಯಬೇಕು. ಕಾರ್ಯ

ಕರ್ಮಣಾ ಮನಸಾ ವಾಚಾ ಶಂಕರಾರ್ಚಾಪರಾಯಣಾಃ ।
ಅತೀವ ದುರ್ಲಭಾ ಲೋಕೇ ಭವಿಷ್ಯಂತಿ ನ ಸಂಶಯಃ ॥೧೯೮॥

ಅನ್ಯದೇವಪರಾ ದುಷ್ಟಾಃ ಶಂಕರಧ್ಯಾನವರ್ಜಿತಾಃ ।
ನಷ್ಟಧರ್ಮಾ ದುರಾಚಾರಾ ಭವಿಷ್ಯಂತಿ ನ ಸಂಶಯಃ ॥೧೯೯॥

ಸರ್ವದೇವೋತ್ತಮಂ ಸಾಂಬಂ ಮಹಾದೇವಮನಾಮಯಂ ।
ಅನ್ಯದೇವಸಮಂ ಜ್ಞಾತ್ವಾ ವಿನಶ್ಯಂತಿ ಕಲೌ ಯುಗೇ ॥೨೦೦॥

ಸರ್ವಾರಾಧ್ಯಂ ಮಹಾದೇವಮನಾರಾಧ್ಯಾನ್ನಭೋಜಿನಃ ।
ಸಂತ್ಯಕ್ತಶಂಕರಧ್ಯಾನಾಃ ಭವಿಷ್ಯಂತಿ ಕಲೌ ಯುಗೇ ॥೨೦೧॥

ಅನಾರಾಧ್ಯ ಮಹಾದೇವಂ ಪ್ರಾತರ್ನಿಯಮಪೂರ್ವಕಂ ।
ಜಲಪಾನರತಾ ಮರ್ತ್ಯಾ ಭವಿಷ್ಯಂತಿ ಕಲೌ ಯುಗೇ ॥೨೦೨॥

ದಿಂದಲೂ, ಮನಸ್ಸಿನಿಂದಲೂ, ಮಾತುಗಳಿಂದಲೂ ಆ ಶಂಕರನ ಪೂಜಾತತ್ಪರರಾಗಿರುವವರು ಈ ಲೋಕದಲ್ಲಿ ತುಂಬಾ ದುರ್ಲಭರಾಗಿಯೇ ಇರುವರೆಂಬುದರಲ್ಲಿ ಸಂದೇಹವೇ ಇಲ್ಲ. ||೧೯೭-೧೯೮||

ಶಂಕರನ ಧ್ಯಾನವನ್ನು ಬಿಟ್ಟು ಇತರ ದೇವತಾಧ್ಯಾನತತ್ಪರರಾಗಿರುವರು ತಮ್ಮ ಧರ್ಮಗಳನ್ನು ನಾಶಪಡಿಸಿಕೊಂಡು ದುಷ್ಟಾಚಾರಿಗಳಾಗುವುದರಲ್ಲಿ ಸಂಶಯವೇ ಇಲ್ಲ. ಸಕಲ ದೇವತೆಗಳಲ್ಲಿ ಉತ್ತಮನೆನಿಸಿ, ರೋಗರಹಿತನಾಗಿರುವ ಅಂಬಿಕಾರಮಣನಾದ ಮಹಾದೇವನನ್ನು ಇತರ ದೇವತೆಗಳಿಗೆ ಸರಿಸಮಾನನೆಂದು ತಿಳಿಯುವ ಮಾನವರು ಈ ಕಲಿಯುಗದಲ್ಲಿ ನಿಶ್ಚಯವಾಗಿಯೂ ನಾಶವಾಗುವರು. ||೧೯೯-೨೦೦||

ಸರ್ವರಿಂದಲೂ ಪೂಜಾರ್ಹನಾದ ಆ ಮಹಾದೇವನನ್ನು ಪೂಜೆಮಾಡದೇ ಅನ್ನವನ್ನು ಊಟಮಾಡುವವರು ಈ ಕಲಿಯುಗದಲ್ಲಿ ಶಂಕರನ ಧ್ಯಾನಮಾಡದವರಾಗಿ ಹುಟ್ಟುವರು. ||೨೦೧||

ಪ್ರಾತಃಕಾಲದಲ್ಲಿ ನಿಯಮದಿಂದ ಆ ಮಹಾದೇವನನ್ನು ಪೂಜೆಮಾಡದೇ ನೀರನ್ನು ಕುಡಿಯುವ ಮಾನವರು ಈ ಕಲಿಯುಗದಲ್ಲಿ ಹುಟ್ಟುವರು. ||೨೦೨||

ಅನಾರಾಧ್ಯ ಮಹಾದೇವಂ ಪ್ರಾತರ್ನಿಯಮಪೂರ್ವಕಂ ।
ಅನ್ಯಕರ್ಮರತಾ ವಿಪ್ರಾ ಭವಿಷ್ಯಂತಿ ಕಲೌ ಯುಗೇ ॥೨೦೩॥

ಭಸ್ಮಾನುಲೇಪನಂ ಕಾರ್ಯಮಿತ್ಯುಕ್ತಂ ಶ್ರುತಿಭಿರ್ಮುಹುಃ ।
ತತ್ತ್ಯಕ್ತ್ವಾ ಲೇಪಯಿಷ್ಯಂತಿ ಮೃತ್ಫಾಲೇಷು ಕಲೌ ಯುಗೇ ॥೨೦೪॥

ರುದ್ರಾಕ್ಷಧಾರಣಂ ತ್ಯಕ್ತ್ವಾ ಬೃಹಜ್ಜಾಬಾಲಚೋದಿತಂ ।
ಕಾಷ್ಟಮಾಲಾಲಗ್ನಕಂಠಾ ಭವಿಷ್ಯಂತಿ ಕಲೌ ಯುಗೇ ॥೨೦೫॥

ಶ್ರೀರುದ್ರಾಲಂಕೃತಾನ್ವೇದಾನನಧೀತ್ಯೈವ ದುರ್ಜನಾಃ ।
ಅನ್ಯಾಭ್ಯಾಸಪರಾ ನಿತ್ಯಂ ಭವಿಷ್ಯಂತಿ ಕಲೌ ಯುಗೇ ॥೨೦೬॥

ಸರ್ವವೇದಶ್ರುತಂ ಪುಣ್ಯಂ ಶಿವನಾಮಾತಿಪಾವನಂ ।
ತ್ಯಕ್ತ್ವಾಽನ್ಯನಾಮಸಂಯುಕ್ತಾ ಭವಿಷ್ಯಂತಿ ಕಲೌ ಯುಗೇ ॥೨೦೭॥

ಪ್ರಾತಃಕಾಲದಲ್ಲಿ ನಿಯಮದಿಂದ ಆ ಮಹಾದೇವನನ್ನು ಪೂಜೆಮಾಡದೇ ಇರುವ ಬ್ರಾಹ್ಮಣರು ಈ ಕಲಿಯುಗದಲ್ಲಿ ಬ್ರಾಹ್ಮಣರಿಗೆ ಅರ್ಹವಲ್ಲದ ಕಾರ್ಯಗಳಲ್ಲಿ ತತ್ಪರರಾಗುವರು. ॥೨೦೩॥

ಪದೇ ಪದೇ ಭಸ್ಮಾನುಲೇಪನವನ್ನು ಮಾಡಬೇಕೆಂದು ಶ್ರುತಿಗಳಲ್ಲಿ ಹೇಳಿದೆ. ಆ ಶ್ರುತಿವಾಕ್ಯಗಳನ್ನೂ ಬಿಟ್ಟು ಕಲಿಯುಗದಲ್ಲಿ ಮಾನವರು ಹಣೆಯಲ್ಲಿ ಮಣ್ಣನ್ನು ಲೇಪನಮಾಡಿಕೊಳ್ಳುವರು. ಬೃಹಜ್ಜಾಬಾಲ ಮುನಿಯು ಹೇಳಿರುವ ರುದ್ರಾಕ್ಷ ಧಾರಣೆಯನ್ನು ತ್ಯಜಿಸಿ ಕಲಿಯುಗದಲ್ಲಿ ಮನುಷ್ಯರು ಕಡ್ಡಿ ಮೊದಲಾದ ವಸ್ತುಗಳ ಮಾಲೆಯನ್ನು ಕೊರಳಲ್ಲಿ ಧರಿಸುವರಾಗುತ್ತಾರೆ. ॥೨೦೪-೨೦೫॥

ಶ್ರೀರುದ್ರಮಂತ್ರದಿಂದ ಅಲಂಕರಿಸಲ್ಪಟ್ಟಿರುವ ವೇದಗಳನ್ನು ಅಧ್ಯಯನ ಮಾಡದೇ ದುಷ್ಟಜನಗಳು, ಈ ಕಲಿಯುಗದಲ್ಲಿ ಬೇರೆ ದುರಭ್ಯಾಸತತ್ಪರರಾಗಿ ಜನಿಸುವರು. ॥೨೦೬॥

ಈ ಕಲಿಯುಗದಲ್ಲಿ ಮಾನವರು, ಸಕಲ ವೇದಗಳಲ್ಲಿಯೂ ಪ್ರಸಿದ್ಧವಾಗಿ, ಪುಣ್ಯಕರವೂ, ಅತ್ಯಂತ ಪಾವನವೂ ಆದ ಆ ಪರಶಿವನ ದಿವ್ಯನಾಮಗಳನ್ನು ಬಿಟ್ಟು ಬೇರೆ ದೇವತೆಗಳ ನಾಮಗಳನ್ನು ಜಪಿಸುವರು. ॥೨೦೭॥

ಸಾಯಂ ಶಿವಾರ್ಚನಂ ತ್ಯಕ್ತ್ವಾ ದುರ್ವಾರ್ತಾಸಕ್ತಚೇತಸಃ ।
ಶಿವಾನ್ಯಾರ್ಚನಸಂಸಕ್ತಾ ಭವಿಷ್ಯಂತಿ ಕಲೌ ಯುಗೇ ॥೨೦೮॥

ಶಿವಮಾಯಾವಿಮೋಹಿತಾನಾಮಭಾಗ್ಯಾನಾಂ ದುರಾತ್ಮನಾಂ ।
ಶಿವಾರ್ಚನೇ ಕಲೌ ಪ್ರೀತಿರ್ನ ಭವಿಷ್ಯತಿ ಸರ್ವಥಾ ॥೨೦೯॥

ಕಲಿಂ ಪ್ರಾಪ್ಯ ಮಹಾದೇವಂ ಯೋಽರ್ಚಯಿಷ್ಯತಿ ಸರ್ವದಾ ।
ನ ತಸ್ಮಾದಧಿಕೋ ಧನ್ಯಃ ಸತ್ಯಂ ಸತ್ಯಂ ನ ಸಂಶಯಃ ॥೨೧೦॥

ಯಾವತ್ಪುಣ್ಯಂ ಕೃತಯುಗೇ ಶಿವಸ್ಯಾಭ್ಯರ್ಚನೇ ಭವೇತ್ ।
ತತಃ ಶತಗುಣಂ ಪುಣ್ಯಂ ತ್ರೇತಾಯಾಂ ಶಿವಪೂಜನೇ ॥೨೧೧॥

ತ್ರೇತಾಯಾಂ ಪೂಜನೇ ಶಂಭೋರ್ಯಾವತ್ಪುಣ್ಯಮವಾಪ್ಯತೇ ।
ತತೋಽಯುತಗುಣಂ ಪುಣ್ಯಂ ದ್ವಾಪರೇ ಶಿವಪೂಜನೇ ॥೨೧೨॥

ಸಾಯಂಕಾಲದಲ್ಲಿ ಶಿವನ ಪೂಜೆಮಾಡುವುದನ್ನು ಬಿಟ್ಟು, ಕೆಟ್ಟ ವೃತ್ತಾಂತಗಳಲ್ಲಿಯೇ ಆಸಕ್ತವಾದ ಮನಸ್ಸುಳ್ಳ ಮಾನವರು ಈ ಕಲಿಯುಗದಲ್ಲಿ ಶಿವನನ್ನು ಬಿಟ್ಟು ಇತರ ದೇವತೆಗಳ ಪೂಜೆಯಲ್ಲಿ ತತ್ಪರರಾಗುವರು. ॥೨೦೮॥

ಆ ಪರಶಿವನ ಮಾಯೆಯಿಂದ ಮೋಹ ಹೊಂದಿ, ಭಾಗ್ಯಹೀನರಾದ ದುಷ್ಟರಿಗೆ ಶಿವಾರ್ಚನೆಯ ವಿಷಯದಲ್ಲಿ ಕಲಿಯುಗದಲ್ಲಿ ಸ್ವಲ್ಪವೂ ಪ್ರೀತಿಯುಂಟಾಗಲಾರದು. ॥೨೦೯॥

ಈ ಕಲಿಯುಗ ಬಂದರೂ ಆ ಮಹಾದೇವನನ್ನು ಭಕ್ತಿಯಿಂದ ಯಾವಾಗಲೂ ಪೂಜೆಮಾಡುವವನಿಗಿಂತಲೂ ಹೆಚ್ಚು ಧನ್ಯನಾದವನು ಸತ್ಯವಾಗಿಯೂ ಇಲ್ಲವೆಂಬುದರಲ್ಲಿ ಸಂಶಯವೇ ಇಲ್ಲ. ॥೨೧೦॥

ಕೃತಯುಗದಲ್ಲಿ ಪರಮೇಶ್ವರನ ಪೂಜೆಮಾಡಿದುದಕ್ಕಿಂತಲೂ ನೂರರಷ್ಟು ಪುಣ್ಯವು ತ್ರೇತಾಯುಗದ ಶಿವಪೂಜೆಯಿಂದುಂಟಾಗುವುದು. ದ್ವಾಪರಯುಗದಲ್ಲಿ ಆ ತ್ರೇತಾಯುಗದ ಶಿವಪೂಜೆಗಿಂತ ಹತ್ತು ಸಾವಿರ ಪಾಲು ಹೆಚ್ಚು ಪುಣ್ಯವುಂಟಾಗುವುದು. ॥೨೧೧-೨೧೨॥

ದ್ವಾಪರೇ ಶಿವಪೂಜಾಯಾಂ ಯಾವತ್ಪುಣ್ಯಮವಾಪ್ಯತೇ ।
ತತೋ ಲಕ್ಷಗುಣಂ ಪುಣ್ಯಂ ಕಲೌ ಶಂಕರಪೂಜಯಾ ॥೨೧೩॥

ಕಲಾವತಿ ಮಹಾದ್ವೀಪೋ ಜಂಬುದ್ವೀಪ ಇತಿ ಶ್ರುತಃ ।
ತತ್ರ ಶಂಕರಮಭ್ಯರ್ಚ್ಯ ದುಃಖಂ ನಾಪ್ನೋತಿ ಮಾನವಃ ॥೨೧೪॥

ಶ್ವೇತದ್ವೀಪಾದಯೋ ದ್ವೀಪಾ ಹ್ಯೇತೇಷು ಶಿವಪೂಜಯಾ ।
ಯತ್ಪುಣ್ಯಂ ತಚ್ಛತಂ ಪುಣ್ಯಂ ಜಂಬೂದ್ವೀಪೇ ಶಿವಾರ್ಚನಾತ್ ॥೨೧೫

ಜಂಬೂದ್ವೀಪೇಽಪಿ ಸಂತ್ಯೇವ ಶಿವಕ್ಷೇತ್ರಾಣಿ ಭೂರಿಶಃ ।
ತೇಷು ಶಂಕರಮಾರಾಧ್ಯ ಲಭ್ಯತೇ ಸುಕೃತಂ ಬಹು ॥೨೧೬॥

ಜಂಬೂದ್ವೀಪೇ ಶಿವಕ್ಷೇತ್ರಂ ಕುಂಭಕೋಣಾಭಿಧಂ ಮಹತ್ ।
ತಸ್ಮಿನ್ಕ್ಷೇತ್ರೇ ಜನ್ಮಮಾತ್ರಾಜ್ಜನ್ಮ ನ ಪ್ರಾಪ್ಯತೇ ಪುನಃ ॥೨೧೭॥

ತತ್ರ ಶಂಕರಮಭ್ಯರ್ಚ್ಯ ಯಾವತ್ಪುಣ್ಯಮವಾಪ್ಯತೇ ।
ತತಃ ಶತಗುಣಂ ಪುಣ್ಯಂ ಶಿವಾರ್ಚಾಯಾಂ ಚಿದಂಬರೇ ॥೨೧೮॥

ದ್ವಾಪರಯುಗದ ಶಿವಪೂಜೆಯಿಂದ ಬರುವ ಪುಣ್ಯಕ್ಕಿಂತಲೂ ಲಕ್ಷಪಾಲು ಪುಣ್ಯವು ಕಲಿಯುಗದಲ್ಲಿ ಆ ಶಂಕರನ ಪೂಜೆಯಿಂದ ಬರುವುದು. ಈ ಕಲಿಯುಗದಲ್ಲಿ ಜಂಜೂದ್ವೀಪವೆಂಬುದು ಅತ್ಯಂತ ದೊಡ್ಡದೆಂದು ಪ್ರಸಿದ್ಧವಾಗಿರುವುದು. ಆ ಜಂಬೂದ್ವೀಪದಲ್ಲಿ ಶಂಕರನನ್ನು ಪೂಜೆಮಾಡುವ ಮಾನವನಿಗೆ ಸ್ವಲ್ಪವೂ ದುಃಖ ವಿರುವುದಿಲ್ಲ. ॥೨೧೩-೨೧೪॥

ಶ್ವೇತದ್ವೀಪವೇ ಮೊದಲಾದ ದ್ವೀಪಗಳಲ್ಲಿ ಶಿವಪೂಜೆಮಾಡುವುದರಿಂದ ಉಂಟಾಗುವ ಪುಣ್ಯಕ್ಕಿಂತ ನೂರುಪಾಲು ಪುಣ್ಯವು ಈ ಜಂಬೂದ್ವೀಪದಲ್ಲಿ ಶಿವಪೂಜೆ ಮಾಡುವುದರಿಂದ ದೊರೆಯುವುದು. ಈ ಜಂಬೂದ್ವೀಪದಲ್ಲಿಯೂ ಅನೇಕ ಶಿವಕ್ಷೇತ್ರ ಗಳಿರುವುವು. ಅವುಗಳಲ್ಲಿ ಶಂಕರನನ್ನು ಪೂಜಿಸಿದರೆ ಅತಿಶಯವಾದ ಪುಣ್ಯವುಂಟಾಗು ವುದು. ॥೨೧೫-೨೧೬॥

ಈ ಜಂಬೂದ್ವೀಪದಲ್ಲಿ ಕುಂಭಕೋಣವೆಂಬ ಹೆಸರುಳ್ಳ ದೊಡ್ಡ ಶಿವಕ್ಷೇತ್ರ ವಿರುವುದು. ಆ ಕ್ಷೇತ್ರದಲ್ಲಿ ಹುಟ್ಟಿದಮಾತ್ರದಿಂದಲೇ ಮಾನವನಿಗೆ ಪುನರ್ಜನ್ಮ ವಿರುವುದಿಲ್ಲ. ಆ ಕುಂಭಕೋಣಕ್ಷೇತ್ರದಲ್ಲಿರುವ ಶಂಕರನನ್ನು ಪೂಜಿಸಿದರೆ ಬರುವ

ಚಿದಂಬರೇ ಶಿವಾರ್ಚಾತೋ ಯಾವತ್ಪುಣ್ಯಮವಾಪ್ಯತೇ ।
ತತಃ ಶತಗುಣಂ ಪುಣ್ಯಂ ಶ್ರೀಮದ್ವೃದ್ಧಾಚಲೇಶ್ವರೇ ॥೨೧೯॥

ವೃದ್ಧಾಚಲೇ ಶಿವಾರ್ಚಾತೋ ಯಾವತ್ಪುಣ್ಯಮವಾಪ್ಯತೇ ।
ತತಃ ಶತಗುಣಂ ಪುಣ್ಯಂ ಶಿವಾರ್ಚಾತೋ ನಲೇಶ್ವರೇ ॥೨೨೦॥

ತತೋಽಪ್ಯತ್ಯುತ್ತಮಂ ಕ್ಷೇತ್ರಮರುಣಾಚಲನಾಮಕಂ ।
ತತಃ ಶತಗುಣಂ ಪುಣ್ಯಂ ತತ್ರ ಶಂಕರಪೂಜಯಾ ॥೨೨೧॥

ತತೋಽಪ್ಯತ್ಯುತ್ತಮಂ ಕ್ಷೇತ್ರಂ ಕಾಂಚೀಕ್ಷೇತ್ರಂ ಶಿವಾತ್ಮಕಂ ।
ತತೋಽಯುತಗುಣಂ ಪುಣ್ಯಂ ತತ್ರ ಶಂಕರಪೂಜಯಾ ॥೨೨೨॥

ತತೋ ದಕ್ಷಿಣಕೈಲಾಸಃ ಶಿವಪ್ರಿಯಕರೋ ವರಃ ।
ತತೋಽಯುತಗುಣಂ ಪುಣ್ಯಂ ತತ್ರ ಶಂಕರಪೂಜಯಾ ॥೨೨೩॥

ಪುಣ್ಯಕ್ಕಿಂತ ನೂರರಷ್ಟು ಪುಣ್ಯವು ಚಿದಂಬರಕ್ಷೇತ್ರದಲ್ಲಿ ಶಿವಪೂಜೆಮಾಡುವುದರಿಂದ ದೊರೆಯುವುದು. ॥೨೧೭-೨೧೮॥

ಚಿದಂಬರಕ್ಷೇತ್ರದಲ್ಲಿನ ಶಿವಪೂಜೆಗಿಂತ ಸಂಪದ್ಯುಕ್ತವಾದ ವೃದ್ಧಾಚಲೇಶ್ವರ ಕ್ಷೇತ್ರದಲ್ಲಿ ಶಿವಪೂಜೆಮಾಡುವುದರಿಂದ ನೂರುಪಾಲು ಪುಣ್ಯವುಂಟಾಗುವುದು. ಈ ವೃದ್ಧಾಚಲೇಶ್ವರದಲ್ಲಿನ ಶಿವಪೂಜೆಗಿಂತ ನಲೇಶ್ವರಕ್ಷೇತ್ರದಲ್ಲಿಯ ಶಿವಪೂಜೆಯಿಂದ ನೂರುಪಾಲು ಪುಣ್ಯವುಂಟಾಗುವುದು. ॥೨೧೯-೨೨೦॥

ನಲೇಶ್ವರಕ್ಕಿಂತಲೂ ಅರುಣಾಚಲಕ್ಷೇತ್ರವು ಅತ್ಯುತ್ತಮವಾದುದರಿಂದ ಅಲ್ಲಿ ಶಿವಪೂಜೆಮಾಡಿದರೆ ನೂರುಪಾಲು ಹೆಚ್ಚುಪುಣ್ಯವುಂಟು. ಇದಕ್ಕಿಂತಲೂ ಶಿವ ಸ್ವರೂಪಾತ್ಮಕವಾದ ಕಾಂಚೀಕ್ಷೇತ್ರವು ಅತ್ಯುತ್ತಮವೆನಿಸಿರುವುದು. ಕಾಂಚೀಕ್ಷೇತ್ರ ದಲ್ಲಿ ಆ ಶಂಕರನನ್ನು ಪೂಜೆಮಾಡುವುದರಿಂದ ಹತ್ತುಸಾವಿರಪಾಲು ಪುಣ್ಯವು ಹೆಚ್ಚು ಬರುವುದು. ॥೨೨೧-೨೨೨॥

ಕಾಂಚೀಕ್ಷೇತ್ರಕ್ಕಿಂತಲೂ ದಕ್ಷಿಣಕೈಲಾಸವು ಶ್ರೇಷ್ಠವೆನಿಸಿ ಪರಮಶಿವನಿಗೆ ಪ್ರೀತಿಕರವಾಗಿದೆ. ಆದ್ದರಿಂದ ಆ ಕಾಂಚೀಕ್ಷೇತ್ರಕ್ಕಿಂತಲೂ ಈ ದಕ್ಷಿಣಕೈಲಾಸದಲ್ಲಿ ಶಂಕರನನ್ನು ಪೂಜೆಮಾಡುವುದರಿಂದ ಹತ್ತುಸಾವಿರಪಾಲು ಪುಣ್ಯವು ಅಧಿಕವಾಗಿ

ತತಃ ಪುಣ್ಯತಮಂ ಕ್ಷೇತ್ರಂ ಶ್ರೀಶೈಲಕ್ಷೇತ್ರಮುತ್ತಮಂ ।
ತತೋಽಯುತಗುಣಂ ಪುಣ್ಯಂ ತತ್ರ ಶಂಕರಪೂಜಯಾ ॥೨೨೪॥

ತತಃ ಶ್ರೇಷ್ಠತರಂ ಕ್ಷೇತ್ರಂ ಕಾಶೀಕ್ಷೇತ್ರಮನುತ್ತಮಂ ।
ತತಃ ಕೋಟಿಗುಣಂ ಪುಣ್ಯಂ ತತ್ರ ಶಂಕರಪೂಜಯಾ ॥೨೨೫॥

ತತ್ರ ಶ್ರೇಷ್ಠತಮಂ ಕ್ಷೇತ್ರಂ ಶ್ರೀಮದಂತರ್ಗೃಹಾಭಿದಂ ।
ತತ್ರ ಕೋಟಿಗುಣಂ ಪುಣ್ಯಂ ಪ್ರಾಪ್ಯಂ ಶಂಕರಪೂಜಯಾ ॥೨೨೬॥

ತತ್ರಾಪ್ಯತ್ಯುತ್ತಮಂ ಕ್ಷೇತ್ರಂ ಜ್ಞಾನವಾಪೀತಟಂ ವರಂ ।
ತತ್ರ ಕೋಟಿಗುಣಂ ಪುಣ್ಯಂ ಪ್ರಾಪ್ಯಂ ಶಂಕರಪೂಜಯಾ ॥೨೨೭॥

ತತ್ರಾಪ್ಯತ್ಯುತ್ತಮಂ ಸ್ಥಾನಂ ಮುಕ್ತಿಮಂಟಪನಾಮಕಂ ।
ತತ್ರ ಕೋಟಿಗುಣಂ ಪುಣ್ಯಂ ಪ್ರಾಪ್ಯಂ ಶಂಕರಪೂಜಯಾ ॥೨೨೮॥

ಬರುವುದು. ದಕ್ಷಿಣಕೈಲಾಸಕ್ಕಿಂತ ಪುಣ್ಯಕರವಾದ ಶ್ರೀಶೈಲಕ್ಷೇತ್ರವು ಉತ್ತಮವೆನಿಸುವುದು. ಆದ್ದರಿಂದ ಇಲ್ಲಿ ಶಿವಪೂಜೆಮಾಡುವುದರಿಂದ ಹತ್ತುಸಾವಿರಪಾಲು ಪುಣ್ಯವು ಹೆಚ್ಚಾಗಿ ಬರುವುದು. ॥೨೨೩-೨೨೪॥

ಶ್ರೀಶೈಲಕ್ಷೇತ್ರಕ್ಕಿಂತ ಅತ್ಯುತ್ತಮವಾದ ಕಾಶೀಕ್ಷೇತ್ರವು ಅತ್ಯಂತಶ್ರೇಷ್ಠವಾಗಿರುವುದು. ಅಲ್ಲಿ ಶಿವಪೂಜೆಮಾಡುವುದರಿಂದ ಕೋಟಿಪಾಲು ಪುಣ್ಯಬರುವುದು. ಆ ಕಾಶೀಕ್ಷೇತ್ರದಲ್ಲಿಯೂ, ಸಂಪದ್ಭರಿತವಾದ ಅಂತರ್ಗೃಹವೆಂಬುದು ಅತ್ಯುತ್ತಮವಾದ ಕ್ಷೇತ್ರವೆನಿಸಿದೆ. ಅಲ್ಲಿ ಶಂಕರಪೂಜೆಮಾಡುವುದರಿಂದ ಹಿಂದಿನದಕ್ಕಿಂತಲೂ ಕೋಟಿಪಾಲು ಪುಣ್ಯವು ಹೆಚ್ಚು. ॥೨೨೫-೨೨೬॥

ಅದರಲ್ಲಿಯೂ ಜ್ಞಾನವಾಪೀದಡದಲ್ಲಿರುವ ಕ್ಷೇತ್ರವು ಅತಿಶ್ರೇಷ್ಠವು. ಅದರಲ್ಲಿ ಲೋಕಶಂಕರನನ್ನು ಪೂಜೆಮಾಡುವುದರಿಂದ ಕೋಟಿಪಾಲು ಪುಣ್ಯವು ಹೆಚ್ಚಾಗಿ ಬರುವುದು. ಆ ಜ್ಞಾನವಾಪೀತಟದಲ್ಲಿಯೂ ಮುಕ್ತಿಮಂಟಪವೆಂಬ ಸ್ಥಾನವು ಅತ್ಯುತ್ತಮವಾಗಿರುವುದು. ಅದರಲ್ಲಿ ಆ ಶಂಕರನನ್ನು ಪೂಜೆಮಾಡುವುದರಿಂದ ಕೋಟಿಪಾಲು ಹೆಚ್ಚು ಪುಣ್ಯವುಂಟು. ॥೨೨೭-೨೨೮॥

ತತ್ರಾಪ್ಯತ್ಯುತ್ತಮಂ ಜ್ಞೇಯಂ ವಿಲಾಸಸ್ಥಾನಮೈಶ್ವರಂ ।
ತತ್ರ ಕೋಟಿಗುಣಂ ಪುಣ್ಯಂ ಪ್ರಾಪ್ಯಂ ಶಂಕರಪೂಜಯಾ ॥೨೨೯॥

ತತ್ರಾಪ್ಯತ್ಯುತ್ತಮಂ ಸ್ಥಾನಂ ಸರ್ವದೇವಸ್ತುತಂ ಸದಾ ।
ಶಿವಾಗಾರಮಿತಿ ಜ್ಞೇಯಂ ತತ್ತು ಸರ್ವೋತ್ತಮೋತ್ತಮಂ ॥೨೩೦॥

ತತ್ರ ಸಾಂಬೋ ಮಹಾದೇವಃ ಸರ್ವದೇವೋತ್ತಮೋತ್ತಮಃ ।
ಸರ್ವವೇದಸ್ತುತೋ ನಿತ್ಯಂ ಲಿಂಗಾಕಾರೇಣ ತಿಷ್ಠತಿ ॥೨೩೧॥

ತಸ್ಯ ಭಾಸಾ ವಿಭಾತೀದಂ ಸರ್ವಂ ಚ ಸಚರಾಚರಂ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೩೨॥

ನ ಯಂ ಭಾಸಯಿತುಂ ಶಕ್ಯಃ ಸರ್ವಥಾ ವಿದ್ಯುತಾಂ ಗಣಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೩೩॥

ನ ಯಂ ಭಾಸಯಿತುಂ ಶಕ್ತಃ ಸಹಸ್ರಕಿರಣೋ ರವಿಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೩೪॥

ಆದರಲ್ಲಿಯೂ ಆ ಈಶ್ವರನ ವಿಲಾಸಸ್ಥಾನವು ಅತ್ಯುತ್ತಮವೆನಿಸುವುದು. ಅಲ್ಲಿ ಶಂಕರನನ್ನು ಪೂಜೆಮಾಡುವುದರಿಂದ ಕೋಟಿಪಾಲು ಹೆಚ್ಚುಪುಣ್ಯ ಬರುವುದು. ಆದರಲ್ಲಿಯೂ ಪವಿತ್ರತಮವೂ ಸಕಲ ದೇವತೆಗಳಿಂದ ಸ್ತೋತ್ರಮಾಡಲ್ಪಡುವುದೂ ಆದ ಸ್ಥಾನವು ಶಿವಾಗಾರವಾಗಿರುವುದು. ಇದು ಎಲ್ಲಕ್ಕಿಂತಲೂ ಅತ್ಯುತ್ತಮವಾಗಿರುವುದು. ॥೨೨೯-೨೩೦॥

ಶಿವಾಗಾರದಲ್ಲಿ ಅಂಬಿಕಾಸಮೇತನಾದ ಮಹಾದೇವನು, ಸಕಲ ದೇವತೆಗಳಲ್ಲಿಯೂ ಉತ್ತಮೋತ್ತಮನೆನಿಸಿ, ಸಕಲ ವೇದಗಳಿಂದಲೂ ನಿತ್ಯವೂ ಸ್ತೋತ್ರಮಾಡಲ್ಪಡುತ್ತಾ ಲಿಂಗರೂಪದಿಂದ ನೆಲಸಿರುವನು. ಲಿಂಗಾಕಾರವಾಗಿ ನೆಲಸಿರುವ ಆ ಭಗವಂತನ ಪ್ರಕಾಶದಿಂದ ಸ್ಥಾವರಜಂಗಮಾತ್ಮಕವಾದ ಈ ಸಕಲ ಪ್ರಪಂಚವೂ ಬೆಳಗುತ್ತಿರುವುದು. ॥೨೩೧-೨೩೨॥

ಮಿಂಚಿನ ಸಮೂಹಗಳೂ, ಸಾವಿರಕಿರಣನಾದ ಸೂರ್ಯನೂ, ಯಾವ ದೇವನನ್ನು ತಮ್ಮ ತೇಜಸ್ಸುಗಳಿಂದ ಬೆಳಗಿಸಲಾರರೋ, ಅಂತಹ ಭಗವಂತನೇ ಅಲ್ಲಿ ಲಿಂಗರೂಪದಿಂದ ನೆಲಸಿರುವನು. ॥೨೩೩-೨೩೪॥

ನ ಯಂ ಭಾಸಯಿತುಂ ಶಕ್ತಶ್ಚಂದ್ರೋಽನೇಕಕಲಾಶ್ರಯಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೩೫॥

ನ ಯಂ ಭಾಸಯಿತುಂ ಶಕ್ತಾಸ್ತಾರಕಾಃ ಸಪ್ರಭಾ ಅಪಿ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೩೬॥

ಯೋ ನಿಷ್ಕಲೋ ನಿರ್ಗುಣಶ್ಚ ನಿರಾಕಾರೋ ನಿರಂಜನಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೩೭॥

ಯಃ ಶಾಂತೋ ನಿಷ್ಕ್ರಿಯೋ ನಿತ್ಯೋ ನಿರವದ್ಯೋ ನಿರಾಮಯಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೩೮॥

ಯಃ ಸರ್ವರೂಪೀ ಸರ್ವಾತ್ಮಾ ಯಃ ಸರ್ವಾಂತರಗಃ ಸದಾ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೩೯॥

ಯಃ ಪ್ರವಿಶ್ಯಾಂತರಂ ಸುಪ್ತಂ ಪ್ರಚೋದಯತಿ ಮಾನಸಂ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೪೦॥

ಅನೇಕ ಕಲೆಗಳಿಗೆ ಆಶ್ರಯನಾಗಿರುವ ಚಂದ್ರನೂ, ಕಾಂತಿಯುಕ್ತವಾದ ನಕ್ಷತ್ರಗಳೂ ಯಾವ ಭಗವಂತನನ್ನು ತಮ್ಮ ಪ್ರಕಾಶದಿಂದ ಬೆಳಗಿಸಲಾರವೋ, ಅಂತಹ ದೇವನು ಆ ಕಾಶೀಕ್ಷೇತ್ರದಲ್ಲಿ ಶಿವಲಿಂಗರೂಪದಿಂದ ನೆಲಸಿರುವನು. ॥೨೩೫-೨೩೬॥

ಕಲಾಶೂನ್ಯನೂ, ನಿರ್ಗುಣನೂ, ಆಕಾರರಹಿತನೂ, ನಿರ್ಲಿಪ್ತನೂ ಆದ ಭಗವಂತನೇ ಅಲ್ಲಿ ಶಿವಲಿಂಗರೂಪದಿಂದ ನೆಲಸಿರುವನು. ಶಾಂತಸ್ವರೂಪನೂ, ಕ್ರಿಯಾ ಶೂನ್ಯನೂ, ನಿತ್ಯನೂ, ನಿರ್ದುಷ್ಟನೂ, ರೋಗಶೂನ್ಯನೂ ಆದ ಆ ಭಗವಂತನೇ ಕಾಶಿಯಲ್ಲಿ ಲಿಂಗಸ್ವರೂಪದಿಂದ ನೆಲಸಿರುವನು. ॥೨೩೭-೨೩೮॥

ಸಕಲ ಪ್ರಾಣಿಸ್ವರೂಪನೂ, ಸರ್ವರೂಪಿಯೂ ಯಾವಾಗಲೂ ಸರ್ವಾಂತ ರ್ಯಾಮಿಯಾಗಿರುವನೂ ಆದ ಭಗವಂತನೇ ಆ ಕಾಶಿಯಲ್ಲಿ ಲಿಂಗರೂಪದಲ್ಲಿ ನೆಲಸಿರು ವನು. ಎಲ್ಲರ ಅಂತರಂಗದಲ್ಲಿಯೂ ಪ್ರವೇಶಮಾಡಿ ಮಲಗಿರುವ ಪ್ರಾಣಿಗಳ ಮನ ಸ್ಸನ್ನು ಪ್ರೇರಿಸುವ ಆ ಭಗವಂತನೇ ಅಲ್ಲಿ ಶಿವಲಿಂಗರೂಪದಲ್ಲಿ ನೆಲಸಿರುವನು. ॥೨೩೯-೨೪೦॥

ಯಃ ಪ್ರವಿಶ್ಯಾಂತರಂ ವಾಚಂ ಪ್ರಚೋದಯತಿ ಸರ್ವಗಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೪೧॥

ಯಃ ಪ್ರವಿಶ್ಯಾಂತರಂ ಚಕ್ಷುಃ ಪ್ರಚೋದಯತಿ ಸರ್ವಗಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೪೨॥

ಯಃ ಪ್ರವಿಶ್ಯಾಂತರಂ ಘ್ರಾಣಂ ಪ್ರಚೋದಯತಿ ಸರ್ವಗಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೪೩॥

ಯಃ ಪ್ರವಿಶ್ಯಾಂತರಂ ಶ್ರೋತ್ರಂ ಪ್ರಚೋದಯತಿ ಸರ್ವಗಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೪೪॥

ಯಃ ಪ್ರವಿಶ್ಯಾಂತರಂ ಪ್ರಾಣಂ ಪ್ರಚೋದಯತಿ ಸರ್ವಗಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೪೫॥

ಯಃ ಪ್ರವಿಶ್ಯಾಂತರಂ ತ್ವಕ್ಚ ಪ್ರಚೋದಯತಿ ಸರ್ವಗಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೪೬॥

ಎಲ್ಲರ ಅಂತರಂಗವನ್ನೂ ಪ್ರವೇಶಿಸಿ ವಾಗ್ರೂಪದಿಂದ ಪ್ರೇರಿಸುವ ಸರ್ವ ಸರ್ವಸಂಚಾರಿಯಾದ ಆ ಭಗವಂತನೇ ಅಲ್ಲಿ ಲಿಂಗರೂಪದಿಂದ ನೆಲಸಿರುವನು. ಅಲ್ಲದೇ ಸರ್ವಾಂತರ್ಯಾಮಿಯಾದ ಯಾವ ಭಗವಂತನೇ ಎಲ್ಲರ ಅಂತರಂಗವನ್ನೂ ಹೊಕ್ಕು ಕಣ್ಣುಗಳನ್ನು ಪ್ರೇರಿಸುತ್ತಾನೋ ಆ ಸ್ವಾಮಿಯೇ ಲಿಂಗರೂಪದಿಂದ ಆ ಕಾಶಿಯಲ್ಲಿ ನೆಲಸಿರುವನು. ||೨೪೧-೨೪೨||

ಸರ್ವವ್ಯಾಪಿಯಾದ ಪರಮಾತ್ಮನು ಎಲ್ಲರ ಅಂತರಂಗವನ್ನೂ ಪ್ರವೇಶಿಸಿ, ಪ್ರಾಣೇಂದ್ರಿಯ ಮತ್ತು ಶ್ರೋತ್ರೇಂದ್ರಿಯಗಳ ರೂಪಿನಿಂದ ಪ್ರಾಣಿಗಳನ್ನು ಪ್ರೇರಿಸುವನು. ಆ ಭಗವಂತನೇ ಅಲ್ಲಿ ಶಿವಲಿಂಗರೂಪದಿಂದ ನೆಲಸಿರುತ್ತಾನೆ. ||೨೪೩-೨೪೪||

ಸರ್ವವ್ಯಾಪಿಯಾದ ಪರಮಾತ್ಮನು ಎಲ್ಲರ ಅಂತರಂಗವನ್ನೂ ಪ್ರವೇಶಿಸಿ, ಅವರ ಪ್ರಾಣವನ್ನೂ ಚರ್ಮವನ್ನೂ ಪ್ರೇರಿಸುತ್ತಿರುವನು. ಆ ಸ್ವಾಮಿಯೇ ಈ ಕಾಶಿಯಲ್ಲಿ ಲಿಂಗರೂಪದಿಂದ ನೆಲಸಿರುವನು. ||೨೪೫-೨೪೬||

ಯದ್ಭೀತ್ಯಾ ಪವತೇ ವಾಯುರ್ಯದ್ಭೀತ್ಯೋದೇತಿ ಭಾನುಮಾನ್ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೪೭॥

ಯದ್ಭೀತ್ಯಾ ಪವತೇ ವಹ್ನಿರಿಂದ್ರಶ್ಚಂದ್ರಶ್ಚ ಸರ್ವದಾ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೪೮॥

ಯಃ ಸೋಮೋ ಜನಿತಾ ನಿತ್ಯೋ ಮತೀನಾಂ ಸಕಲಾತ್ಮಕಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೪೯॥

ಯಃ ಸೋಮೋ ಜನಿತಾ ಶಂಭುರ್ದಿವೋಽಪಿ ಸಕಲಾತ್ಮಕಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೫೦॥

ಯಃ ಸೋಮೋ ಜನಿತಾ ಶಂಭುಃ ಪೃಥಿವ್ಯಾಃ ಸಕಲಾತ್ಮಕಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೫೧॥

ಯಃ ಸೋಮೋ ಜನಿತಾ ಶಂಭುರಗ್ನೇಶ್ಚ ಸಕಲಾತ್ಮಕಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೫೨॥

ಯಾರ ಭಯದಿಂದ ವಾಯುವು ತಪ್ಪದೆ ಬೀಸುವನೋ, ಸೂರ್ಯನು ಉದಯಿಸುವನೋ, ಅಗ್ನಿ, ಇಂದ್ರ ಇವರೆಲ್ಲರೂ ಯಾವಾಗಲೂ ತಮ್ಮ ತಮ್ಮ ಕೆಲಸಗಳನ್ನು ತಪ್ಪದೇ ನಡೆಸುತ್ತಿರುವರೋ ಅಂತಹ ಭಗವಂತನು ಈ ಕಾಶಿಯಲ್ಲಿ ಲಿಂಗಸ್ವರೂಪದಿಂದ ನೆಲಸಿರುವನು. ॥೨೪೭-೨೪೮॥

ಉಮಾರಮಣನಾದ ಆ ಪರಮಾತ್ಮನು ಬುದ್ಧಿಗಳಿಗೆಲ್ಲಾ ಪ್ರವರ್ತಕನಾಗಿ ನಿತ್ಯನೂ, ಸಕಲಪ್ರಾಣಿಸ್ವರೂಪನೂ ಆದವನಾಗಿ ಈ ಕಾಶೀಕ್ಷೇತ್ರದಲ್ಲಿ ಲಿಂಗರೂಪದಿಂದ ನೆಲಸಿರುವನು. ಆ ಪರಮಾತ್ಮನೇ ಈ ಸ್ವರ್ಗವನ್ನೂ ನಿರ್ಮಿಸಿರುವನು. ॥೨೪೯-೨೫೦॥

ಭೂಮಿ ಮತ್ತು ಅಗ್ನಿ ಇವುಗಳನ್ನು ಸೃಷ್ಟಿಸಿದವನೂ, ಉಮಾರಮಣನೂ, ಸಕಲ ಪ್ರಾಣಿಸ್ವರೂಪನೂ ಆದ ಆ ಶಂಭುವೇ ಭಗವತ್ಸ್ವರೂಪನೆನಿಸಿ ಲಿಂಗರೂಪದಿಂದ ಕಾಶೀಕ್ಷೇತ್ರದಲ್ಲಿ ನೆಲಸಿರುವನು. ॥೨೫೧-೨೫೨॥

ಯಃ ಸೋಽಮೋ ಜನಿತಾ ಶಂಭುರ್ಭಾನೋಶ್ಚ ಸಕಲಾತ್ಮಕಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೫೩॥

ಯಃ ಸೋಽಮೋ ಜನಿತಾ ಶಂಭುಶ್ಚಂದ್ರಸ್ಯ ಸಕಲಾತ್ಮಕಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೫೪॥

ಯಃ ಸೋಽಮೋ ಜನಿತಾ ಶಂಭುರ್ವಾಯೋಶ್ಚ ಸಕಲಾತ್ಮಕಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೫೫॥

ಯಃ ಸೋಽಮೋ ಜನಿತಾ ಶಂಭುರಿಂದ್ರಸ್ಯ ಸಕಲಾತ್ಮಕಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೫೬॥

ಯಃ ಸೋಽಮೋ ಜನಿತಾ ಶಂಭುರ್ವಿಷ್ಣೋಶ್ಚ ಸಕಲಾತ್ಮಕಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೫೭॥

ಯಃ ಸೋಽಮೋ ಜನಿತಾ ಶಂಭುರ್ಬ್ರಹ್ಮಣೋ ಮಮ ಸರ್ವಗಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೫೮॥

ಯಃ ಸೋಽಮೋ ಜನಿತಾನ್ಯೇಷಾಂ ದ್ವಿಪದಾಂ ಚ ಚತುಷ್ಪದಾಂ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೫೯॥

ಸೂರ್ಯಚಂದ್ರರನ್ನು ಸೃಷ್ಟಿಸಿದವನೂ, ಸಕಲ ಜಗತ್ಸ್ವರೂಪನೂ ಆದ ಉಮಾರಮಣನಾದ ಶಂಭುವೇ ಭಗವತ್ಸ್ವರೂಪನೆನಿಸಿ ಆ ಕಾಶೀಕ್ಷೇತ್ರದಲ್ಲಿ ಲಿಂಗರೂಪದಿಂದ ನೆಲಸಿರುವನು. ॥೨೫೩-೨೫೪॥

ವಾಯು ಮತ್ತು ಇಂದ್ರ ಇವರನ್ನು ಸೃಷ್ಟಿಸಿದ ಸರ್ವಜಗತ್ಸ್ವರೂಪನೆನಿಸಿದ ಉಮಾರಮಣನಾದ ಆ ಶಂಭುವೇ ಭಗವದ್ರೂಪದಿಂದ ಲಿಂಗಾವತಾರವನ್ನು ಹೊಂದಿ ಆ ಕಾಶೀಕ್ಷೇತ್ರದಲ್ಲಿ ನೆಲಸಿರುವನು. ॥೨೫೫-೨೫೬॥

ವಿಷ್ಣುವನ್ನೂ ಬ್ರಹ್ಮನೆನಿಸಿದ ನನ್ನನ್ನೂ ಸೃಷ್ಟಿಸಿ ಸಕಲ ಪ್ರಪಂಚಸ್ವರೂಪನಾಗಿ ಉಮಾರಮಣನೆಂದು ಪ್ರಸಿದ್ಧಿಪಡೆದ ಶಂಭುವೇ ಭಗವದ್ರೂಪದಿಂದ ಲಿಂಗಾಕಾರವನ್ನು ಹೊಂದಿ ಕಾಶೀಕ್ಷೇತ್ರದಲ್ಲಿ ನೆಲಸಿರುವನು. ॥೨೫೭-೨೫೮॥

ಎರಡು ಪಾದ ಮತ್ತು ನಾಲ್ಕುಪಾದಗಳುಳ್ಳ ಪ್ರಾಣಿಗಳನ್ನೂ, ಇತರ ಮರವೇ ಮೊದಲಾದವುಗಳನ್ನೂ ಸೃಷ್ಟಿಸಿ ಸರ್ವವ್ಯಾಪಿಯಾಗಿರುವ ಉಮಾರಮಣನಾದ

ಯಃ ಸೋಽಮೋ ಜನಿತಾಽನ್ಯೇಷಾಂ ವೃಕ್ಷಾದೀನಾಂ ಚ ಸರ್ವಗಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೬೦॥

ಯಃ ಸೋಽಮೋ ಜನಿತಾಽನ್ಯೇಷಾಂ ಶೈಲಾದೀನಾಂ ಚ ಸರ್ವಗಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೬೧॥

ಯತ್ಪ್ರಸಾದೇನ ವೈಕುಂಠಂ ಪ್ರಾಪ ಪೂರ್ವಂ ಜನಾರ್ದನಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೬೨॥

ಯತ್ಪ್ರಸಾದೇನ ಲೋಕಾನಾಂ ಪಾಲಕೋಽಭೂಜ್ಜನಾರ್ದನಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೬೩॥

ಯತ್ಪ್ರಸಾದಾಚ್ಛಂಖಚಕ್ರೇ ಪೂರ್ವಂ ಪ್ರಾಪ ಜನಾರ್ದನಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೬೪॥

ಯತ್ಪ್ರಸಾದಾನ್ಮಹಾಲಕ್ಷ್ಮೀಂ ಪ್ರಾಪ ಪೂರ್ವಂ ಜನಾರ್ದನಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೬೫॥

ಆ ಶಂಭುವೇ ಭಗವತ್ಸ್ವರೂಪದಿಂದ ಲಿಂಗಾಕಾರವನ್ನು ಹೊಂದಿ ಕಾಶಿಯಲ್ಲಿ ನೆಲಸಿರುವನು. ॥೨೫೯-೨೬೦॥

ಬೆಟ್ಟಗುಡ್ಡವೇ ಮೊದಲಾದವುಗಳನ್ನೆಲ್ಲಾ ಸೃಷ್ಟಿಮಾಡಿ ಸರ್ವವ್ಯಾಪಿಯಾಗಿ ಉಮಾರಮಣನೆನಿಸಿದ ಆ ಶಂಭುವೇ ಭಗವತ್ಸ್ವರೂಪದಿಂದ ಅಲ್ಲಿ ಲಿಂಗಾಕಾರವನ್ನು ಹೊಂದಿ ನೆಲಸಿರುವನು. ಆ ಶಂಭುವಿನ ಅನುಗ್ರಹದಿಂದಲೇ ಹಿಂದೆ ಜನಾರ್ದನ ನೆನಿಸಿದ (ದುಷ್ಟಜನಗಳನ್ನು ಶಿಕ್ಷೆಮಾಡುವ) ವಿಷ್ಣುವು ವೈಕುಂಠಲೋಕಾಧಿಪತ್ಯ ವನ್ನು ಹೊಂದಿದನು. ॥೨೬೧-೨೬೨॥

ಯಾರ ಅನುಗ್ರಹವನ್ನು ಪಡೆದು ವಿಷ್ಣುವು ಜಗದ್ರಕ್ಷಣಕಾರ್ಯದಲ್ಲಿ ನಿರತ ನಾಗಿರುವನೋ, ಶಂಖ ಮತ್ತು ಚಕ್ರವೆಂಬ ಆಯುಧಗಳನ್ನೂ ಯಾರಿಂದ ಪಡೆದನೋ ಆ ಭಗವಂತನೇ ಲಿಂಗರೂಪದಿಂದ ಕಾಶಿಯಲ್ಲಿ ನೆಲಸಿರುವನು. ॥೨೬೩-೨೬೪॥

ಹಿಂದೆ ಜನಾರ್ದನನು ಯಾರ ಅನುಗ್ರಹದಿಂದ ಮಹಾಲಕ್ಷ್ಮಿಯನ್ನು ಪಡೆದನೋ, ಯಾರ ಅನುಗ್ರಹದಿಂದ ದೀನನಾದವನೂ ಧನಾಧಿಪತಿಯಾದ

ಯತ್ಪ್ರಸಾದೇನ ದೀನೋಽಪಿ ಭವತ್ಯೇವ ಧನೇಶ್ವರಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೬೬॥

ಯತ್ಪ್ರಸಾದೇನ ಮೋಕ್ಷೋಽಪಿ ಸುಲಭಸ್ತಪಸಾ ವಿನಾ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೬೭॥

ನ ಯಸ್ಮಾದಧಿಕೋ ದೇವಃ ಸುರಾಸುರನಮಸ್ಕೃತಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೬೮॥

ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೬೯॥

ಯಸ್ಯ ಸ್ಮರಣಮಾತ್ರೇಣ ಮುಚ್ಯತೇ ಕರ್ಮಬಂಧನಾತ್ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೭೦॥

ಯಸ್ಯ ಪೂಜನಮಾತ್ರೇಣ ತ್ರೈಲೋಕ್ಯಶ್ರೀರವಾಪ್ಯತೇ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೭೧॥

ಕುಬೇರನೇ ಆಗುವನೋ ಅಂತಹ ಭಗವಂತನೇ ಕಾಶೀಕ್ಷೇತ್ರದಲ್ಲಿ ಲಿಂಗರೂಪದಿಂದ ನೆಲಸಿರುವನು. ॥೨೬೫-೨೬೬॥

ಯಾರ ಅನುಗ್ರಹದಿಂದ ತಪಶ್ಚರಣೆಯಿಲ್ಲದಿದ್ದರೂ ಮೋಕ್ಷವು ಸುಲಭವಾಗಿ ದೊರೆಯುವುದೋ, ದೇವರಾಕ್ಷಸರಿಂದ ನಮಸ್ಕರಿಸಲ್ಪಡುವ ಯಾವ ದೇವನಿಗಿಂತಲೂ ಶ್ರೇಷ್ಠನಾದವನು ಯಾರೂ ಇರುವುದಿಲ್ಲವೋ ಆ ಭಗವಂತನೇ ಕಾಶೀಕ್ಷೇತ್ರದಲ್ಲಿ ಲಿಂಗ ಸ್ವರೂಪದಿಂದ ನೆಲಸಿರುವನು. ೨೬೭-೨೬೮॥

ಮಾತುಗಳೂ ಸಹ ಮನಸ್ಸಿನೊಡನೆ ಯಾವ ದೇವದೇವನ ಗುಣಗಣಗಳನ್ನು ಹೊಗಳಲಾರದೇ ಯಾವನ ಸಮೀಪಕ್ಕೇ ಹೋಗಲಾರದೇ ಹಿಂತಿರುಗಿ ಬರುತ್ತಿರುವುವೋ, ಯಾರ ಸ್ಮರಣೆಯಿಂದಲೇ ಮಾನವನು ಸಕಲಕರ್ಮಗಳ ಬಂಧನದಿಂದಲೂ ಬಿಡುಗಡೆ ಹೊಂದುವನೋ ಅಂತಹ ಭಗವಂತನಾದ ಪರಮೇಶ್ವರನೇ ಕಾಶೀಕ್ಷೇತ್ರದಲ್ಲಿ ಲಿಂಗರೂಪದಿಂದ ನೆಲಸಿರುವನು. ॥೨೬೯-೨೭೦॥

ಯಾವ ದೇವನನ್ನು ಪೂಜಿಸಿದ ಮಾತ್ರದಿಂದಲೇ ಮೂರು ಲೋಕಗಳ ಸಂಪತ್ತೂ ದೊರೆಯುವುದೋ, ಯಾವ ದೇವನ ಪೂಜಾಮಾತ್ರತತ್ಪರನಾದ ವಿಷ್ಣುವು

ಯತ್ಪೂಜಾಮಾತ್ರಸಂಸಕ್ತೋ ವಿಷ್ಣುಸ್ತ್ರೈಲೋಕ್ಯವಂದಿತಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೭೨॥

ಯತ್ಪೂಜಯಾ ಜಗತ್ಸರ್ವಂ ಸ್ವವಶೀಕ್ರಿಯತೇ ನರೈಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೭೩॥

ಯತ್ಪೂಜಾಸಕ್ತಚಿತ್ತಾನಾಂ ಯಮೋ ಭೃತ್ಯಾಯತೇ ಸದಾ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೭೪॥

ಯತ್ಪೂಜಾಸಕ್ತಚಿತ್ತಾನಾಂ ವಯಂ ಸರ್ವೇಽಪಿ ಸೇವಕಾಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೭೫॥

ಯತ್ಪೂಜಾಸಕ್ತಚಿತ್ತಾನಾಂ ನ ಕಿಂಚಿದಪಿ ದುರ್ಲಭಂ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೭೬॥

ಯೋ ವಿಷ್ಣುಬ್ರಹ್ಮಚಂದ್ರೇಂದ್ರಪ್ರಭೃತೀನಾಂ ಪ್ರಶಾಸಕಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೭೭॥

ಮೂರು ಲೋಕಗಳಿಂದಲೂ ನಮಸ್ಕರಿಸಲ್ಪಡುತ್ತಿರುವನೋ ಅಂತಹ ಭಗವಂತನೇ ಕಾಶೀಕ್ಷೇತ್ರದಲ್ಲಿ ಲಿಂಗರೂಪದಿಂದ ನೆಲಸಿರುವನು. ॥೨೭೧-೨೭೨॥

ಯಾವ ಮಹೇಶನ ಪೂಜೆಯಿಂದ ಈ ಪ್ರಪಂಚವೆಲ್ಲವನ್ನೂ ಮಾನವರು ತಮ್ಮ ಅಧೀನಮಾಡಿಕೊಳ್ಳಬಲ್ಲರೋ, ಅಲ್ಲದೇ ಯಾವ ದೇವನ ಪೂಜೆಯಲ್ಲಿಯೇ ನಿರತವಾದ ಮನಸ್ಸುಳ್ಳವರಿಗೆ ಸಾಕ್ಷಾದ್ಯಮನೂ ಸೇವಕನಾಗುವನೋ, ಅಂತಹ ಭಗವಂತನೇ ಈ ಕಾಶೀಕ್ಷೇತ್ರದಲ್ಲಿ ಲಿಂಗರೂಪದಿಂದ ನೆಲಸಿರುವನು. ॥೨೭೩-೨೭೪॥

ಯಾವ ಮಹಾದೇವನ ಪೂಜೆಯಲ್ಲಿ ನಿರತರಾದವರಿಗೆ ನಾವೆಲ್ಲರೂ ಸೇವಕರಾಗಿರುವೆವೋ, ಅಲ್ಲದೇ ಅವರಿಗೆ ಯಾವುದೂ ದುರ್ಲಭವಾಗದೇ ಎಲ್ಲವೂ ಸುಲಭವಾಗಿಯೇ ದೊರೆಯುವುವೋ, ಅಂತಹ ಭಗವಂತನೇ ಈ ಕಾಶೀಕ್ಷೇತ್ರದಲ್ಲಿ ಲಿಂಗಸ್ವರೂಪದಿಂದ ನೆಲಸಿರುವನು. ॥೨೭೫-೨೭೬॥

ಸರ್ವಶಿಕ್ಷಕನಾದ ಆ ಭಗವಂತನೇ ಈ ಕಾಶೀಕ್ಷೇತ್ರದಲ್ಲಿ ಲಿಂಗರೂಪದಿಂದ ನೆಲಸಿರುವನು. ನಾವೆಲ್ಲರೂ ಯಾವ ಭಗವಂತನ ಮನೆಯ ಬಾಗಿಲಿನಲ್ಲಿ ಯಾವಾ

ವಯಂ ವೇತ್ರಪ್ರಹಾರಾಣಾಂ ಪಾತ್ರಂ ಯದ್ದ್ವಾರಿ ಸರ್ವದಾ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೭೮॥

ಅಚಿಂತ್ಯಾಮೇಯಮಹಿಮಾ ಯಸ್ತು ದೇವಶಿಖಾಮಣಿಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೭೯॥

ಅಮಿತಾನಂತವಿಭವೋ ಯಸ್ತು ಸರ್ವಸುರಾಧಿಪಃ ।
ಸ ಏವ ಭಗವಾನ್ತತ್ರ ಲಿಂಗರೂಪೇಣ ತಿಷ್ಠತಿ ॥೨೮೦॥

ಯಃ ಸದಾ ವಿಷ್ಣುನೇತ್ರಾಬ್ಜಪೂಜಿತಾಂಘ್ರಿಸರೋರುಹಃ ।
ಸ ಏವ ಭಗವಾನೀಶೋ ಲಿಂಗರೂಪೇಣ ತಿಷ್ಠತಿ ॥೨೮೧॥

ಯಃ ಪ್ರಭುಃ ಸರ್ವದೇವಾನಾಂ ಸರ್ವದೇವಾರ್ಚಿತಃ ಸದಾ ।
ಸ ಏವ ಭಗವಾನೀಶೋ ಲಿಂಗರೂಪೇಣ ತಿಷ್ಠತಿ ॥೨೮೨॥

ಗಲೂ ಅವನ ದರ್ಶನಾಭಿಲಾಷೆಯಿಂದ ಕಾದುಕೊಂಡಿದ್ದು ಅವನ ಭೃತ್ಯರ ಬೆತ್ತದ ಏಟುಗಳಿಗೆ ಪಾತ್ರರಾಗಿರುವೆವೋ ಅಂತಹ ಸ್ವಾಮಿಯೇ, ಈ ಕಾಶಿಯಲ್ಲಿ ಲಿಂಗರೂಪ ದಿಂದ ನೆಲಸಿರುವನು. ||೨೭೭-೨೭೮||

ಯೋಚಿಸಲು ಅಸಾಧ್ಯವೂ ಪ್ರಮಾಣರಹಿತವೂ ಆದ ಮಹಿಮೆಯುಳ್ಳ ದೇವಶಿಖಾಮಣಿಯೆನಿಸಿದ ಆ ಭಗವಂತನೇ ಕಾಶೀಕ್ಷೇತ್ರದಲ್ಲಿ ಲಿಂಗರೂಪದಿಂದ ನೆಲಸಿರುವನು. ಅಪರಿಮಿತವೂ, ಅನಂತವೂ ಆದ ವೈಭವವುಳ್ಳ ಸಕಲ ದೇವತೆ ಗಳಿಗೂ ಅಧಿಪತಿಯೆನಿಸಿದ ಆ ಭಗವಂತನೇ ಕಾಶೀಕ್ಷೇತ್ರದಲ್ಲಿ ಲಿಂಗಸ್ವರೂಪದಿಂದ ನೆಲಸಿರುವನು. ||೨೭೯-೨೮೦||

ಯಾವಾಗಲೂ ವಿಷ್ಣುವಿನ ಕಣ್ಣೆಂಬ ಕಮಲದಿಂದ ಪೂಜಿಸಲ್ಪಟ್ಟ ಪಾದಕಮ ಲವುಳ್ಳವನೂ, ಸಕಲ ದೇವತೆಗಳಿಗೂ ಪ್ರಭುವೂ ಆಗಿ, ಸಕಲ ದೇವತೆಗಳಿಂದಲೂ ಪೂಜಿಸಲ್ಪಡುವ ಆ ಭಗವಂತನಾದ ಈಶ್ವರನೇ ಈ ಕಾಶೀಕ್ಷೇತ್ರದಲ್ಲಿ ಲಿಂಗಸ್ವರೂಪ ದಿಂದ ನೆಲಸಿರುವನು. ||೨೮೧-೨೮೨||

ತಲ್ಲಿಂಗಪೂಜಯಾನಂತಫಲಂ ಸಂಪ್ರಾಪ್ಯತೇ ಜನೈಃ ।
ತಲ್ಲಿಂಗಪೂಜಾಪುಣ್ಯಸ್ಯ ನೇಯತ್ತಾ ಸತ್ಯಮುಚ್ಯತೇ ॥೨೮೩॥

ತಲ್ಲಿಂಗಂ ವೀಕ್ಷಿತಂ ಯೇನ ಸ್ಪೃಷ್ಟಮಭ್ಯರ್ಚಿತಂ ಮುದಾ ।
ತತ್ಪುಣ್ಯಮಸ್ಯಪುಣ್ಯೇಭ್ಯೋ ಭವತ್ಯತ್ಯುತ್ತಮೋತ್ತಮಂ ॥೨೮೪॥

ಚತುರ್ದಶಾನಿ ಭುವನಾನ್ಯಪಿ ಕಾಶೀಸಮಾನಿ ನ ।
ಸಾ ಯತಃ ಶಿವರೂಪಾತಸ್ತತ್ತುಲ್ಯಂ ಕಿಂ ಭವಿಷ್ಯತಿ ॥೨೮೫॥

ಯತ್ರ ಕಾಶ್ಯಾಂ ಮಹಾದೇವೋ ಜಂತುಮಾತ್ರಸ್ಯ ಸಾದರಂ ।
ದೇಹಾಂತೇ ಪರಮಂ ಮಂತ್ರಂ ಶೈವಂ ದಾತುಂ ಸಮುದ್ಯತಃ ॥೨೮೬॥

ತತ್ರ ಕಾಶ್ಯಾಂ ಮಹಾದೇವೋ ಲೀಲಾರೂಪಧರಃ ಸದಾ ।
ಉಮಯಾ ಸಹಿತಃ ಪ್ರೀತ್ಯಾ ವಿಚರತ್ಯಂಬಿಕಾಪತಿಃ ॥೨೮೭॥

ಯತ್ರ ಕಾಶ್ಯಾಂ ಮಹಾದೇವಃ ಸ್ವಭಕ್ತೇಭ್ಯೋ ಯಥಾಯಥಂ ।
ಸ ದದಾತಿ ಚ ಸರ್ವಾರ್ಥಾನ್ಸಕಾಶೀ ಶ್ರುತಿಸಂಮತಾ ॥೨೮೮॥

ಆ ಶಿವಲಿಂಗಪೂಜೆಯಿಂದ ಮಾನವರಿಗೆ ಅಪಾರವಾದ ಫಲವುಂಟಾಗುತ್ತದೆ. ಆ ಲಿಂಗಪೂಜೆಯಿಂದ ಬರುವ ಪುಣ್ಯಕ್ಕೆ ಎಲ್ಲೆಯೇ ಇಲ್ಲ. ಇದು ಸತ್ಯವು. ಆ ಶಿವಲಿಂಗದ ದರ್ಶನ, ಸ್ಪರ್ಶನ, ಪೂಜೆ ಇವುಗಳನ್ನು ಪ್ರೀತಿಯಿಂದ ಮಾಡುವವರಿಗೆ ಬರುವ ಪುಣ್ಯವು ಇತರ ಪುಣ್ಯಗಳಿಗಿಂತ ಅತ್ಯುತ್ತಮವೆನಿಸುವುದು. ॥೨೮೩-೨೮೪॥

ಹದಿನಾಲ್ಕು ಲೋಕಗಳೂ ಆ ಕಾಶೀಪಟ್ಟಣಕ್ಕೆ ಸರಿಯಾಗಲಾರವು. ಆ ಕಾಶಿಯು ಸಾಕ್ಷಾತ್ಪರಶಿವನ ರೂಪವೇ ಆಗಿರುವುದರಿಂದ ಅದಕ್ಕೆ ಸಮಾನವಾದದ್ದು ಹೇಗೆ ಇದ್ದೀತು? ಆ ಕಾಶಿಯಲ್ಲಿ ಮಹಾದೇವನು ಪ್ರಾಣಿಮಾತ್ರಕ್ಕೂ ಆದರದಿಂದ ಈ ಶರೀರದ ಕೊನೆಯಲ್ಲಿ ಉತ್ಕೃಷ್ಟವಾದ ಶೈವಮಂತ್ರವನ್ನು ಉಪದೇಶಿಸಲು ಪ್ರಯತ್ನಿಸುವನು. ॥೨೮೫-೨೮೬॥

ಅಂಬಿಕಾರಮಣನಾದ ಆ ಮಹಾದೇವನು ಲೀಲಾರೂಪವನ್ನು ಧರಿಸಿ, ಯಾವಾಗಲೂ ಕಾಶಿಯಲ್ಲಿ ದೇವಿಯೊಡನೆ ಪ್ರೀತಿಯಿಂದ ವಿಹರಿಸುತ್ತಿರುವನು.

ಪಶ್ಯಂತು ಪುಣ್ಯಪುರುಷಂ ಶಿವಪೂಜಾಪರಾಯಣಂ ।
ಯೇನ ಮೇ ತಸ್ಯ ಸತತಂ ಪೂಜನಂ ಕ್ರಿಯತೇ ಮಯಾ ॥೨೮೯॥

ಅಯಂ ಧನ್ಯತಮೋ ಮರ್ತ್ಯಃ ಕಾಶೀಂ ಪ್ರಾಪ್ಯ ಮಹೇಶ್ವರಂ ।
ಪೂಜಯಿತ್ವಾ ಸ್ಥಿತಃ ಪ್ರೀತ್ಯಾ ಬಿಲ್ವಪತ್ರಾದಿಸಾಧನೈಃ ॥೨೯೦॥

ಚೈತ್ರಶುಕ್ಲಾಷ್ಟಮೀಂ ಪ್ರಾಪ್ಯ ಸೋಽಯಮುದ್ಧೂಲ್ಯ ಭಸ್ಮನಾ ।
ಕೃತ್ವಾ ವಿಶ್ವೇಶ್ವರಸ್ಯಾರ್ಚಾಂ ಜಜಾಪಾಯಂ ಷಡಕ್ಷರಂ ॥೨೯೧॥

ಅನ್ನಪೂರ್ಣಾಂ ತತಃ ಸಮ್ಯಕ್ಸಂಪೂಜ್ಯ ತದನಂತರಂ ।
ಅಷ್ಟೋತ್ತರಶತಂ ಚಕ್ರೇ ಮೌನೇನಾಯಂ ಪ್ರದಕ್ಷಿಣಂ ॥೨೯೨॥

ನಮಸ್ಕಾರಾನ್ತತಶ್ಚಕ್ರೇ ಶತಮಷ್ಟೋತ್ತರಂ ಮುದಾ ।
ಪುನಃ ಸಮರ್ಚಯಾಮಾಸ ದೇವೀಂ ತ್ರಿಭುವನೇಶ್ವರೀಂ ॥೨೯೩॥

ಆ ಕಾಶಿಯಲ್ಲಿ ಮಹಾದೇವನು ತನ್ನ ಭಕ್ತರಿಗೆ ಅವರು ಬೇಡಿದ ಮನೋರಥಗಳನ್ನೆಲ್ಲಾ ಕೊಡುತ್ತಾನೆ. ಆ ಕಾಶಿಯು ವೇದಪ್ರಸಿದ್ಧವಾಗಿದೆ. ||೨೮೭-೨೮೮||

ಶಿವಪೂಜಾಪರಾಯಣನಾದ ಈ ಪುಣ್ಯಪುರುಷನನ್ನು ನೀವು ನೋಡಿರಿ. ಈ ಮಹಾತ್ಮನನ್ನು ನಾನು ಅನವರತವೂ ಪೂಜೆಮಾಡುತ್ತಿರುವೆನು. ಈತನು ತುಂಬಾ ಧನ್ಯನೆನಿಸಿದ ಮಾನವನು. ಇವನು ಕಾಶೀಕ್ಷೇತ್ರಕ್ಕೆ ಹೋಗಿ, ಅಲ್ಲಿಯೇ ನಿಂತು ಆ ಮಹೇಶ್ವರನನ್ನು ಪ್ರೀತಿಯಿಂದ ಬಿಲ್ವಪತ್ರೆಯೇ ಮೊದಲಾದ ಸಾಧನಗಳಿಂದ ಪೂಜೆಮಾಡುತ್ತಿರುವನು. ||೨೮೯-೨೯೦||

ಈತನು ಚೈತ್ರಮಾಸದ ಶುಕ್ಲಪಕ್ಷದ ಅಷ್ಟಮಿಯ ದಿನ ಭಸ್ಮದಿಂದ ಶರೀರಕ್ಕೆಲ್ಲಾ ಉದ್ಧೂಲನಮಾಡಿಕೊಂಡು, ಆ ವಿಶ್ವೇಶ್ವರನ ಪೂಜೆಯನ್ನು ಮಾಡಿ "ಓಂ ನಮಃ ಶಿವಾಯ" ಎಂಬ ಷಡಕ್ಷರಮಂತ್ರವನ್ನು ಜಪಿಸಿದನು. ಅನಂತರ ಅನ್ನಪೂರ್ಣಾದೇವಿಯನ್ನು ಚೆನ್ನಾಗಿ ಪೂಜೆಮಾಡಿ, ಆ ಮೇಲೆ ಮೌನದಿಂದ ನೂರೆಂಟು ಪ್ರದಕ್ಷಿಣೆಮಾಡಿದನು. ||೨೯೧-೨೯೨||

ದೇವತೆಗಳಿರಾ, ಪ್ರದಕ್ಷಿಣೆಮಾಡಿದ ಮೇಲೆ ನೂರೆಂಟು ನಮಸ್ಕಾರಗಳನ್ನೂ ಸಂತೋಷದಿಂದ ಮಾಡಿದ ಬಳಿಕ ಪುನಃ ಮೂಲೋಕಜನನಿಯಾದ ಆ ಅನ್ನಪೂರ್ಣಾ

ತತಃ ಸಾಯಂ ಪುನಃ ಪ್ರೀತ್ಯಾ ಕೃತ್ವಾ ವಿಶ್ವೇಶ್ವರಾರ್ಚನಂ ।
ಅನ್ನಪೂರ್ಣಾಲಯೇ ಪ್ರೀತ್ಯಾ ಚಕ್ರೇ ಜಾಗರಣಂ ಸುರಾಃ ॥೨೯೪॥

ವಾಚಯನ್ಶಂಕರಸ್ಯೈವ ಕಥಾಃ ಶ್ರಾವ್ಯಾ ಮನೋಹರಾಃ ।
ಉಪವಾಸಂ ಚಕಾರಾಯಂ ನಿರಾಹಾರೇಣ ಸಾದರಂ ॥೨೯೫॥

ತಸ್ಯಾಂ ರಾತ್ರೌ ಮಹಾನಾಸೀತ್ಸಂಮರ್ದಃ ಸುರಸತ್ತಮಾಃ ।
ಪ್ರದಕ್ಷಿಣನಮಸ್ಕಾರಾಃ ಸಂಮರ್ದೇಽಪಿ ಕೃತಾ ಮುದಾ ॥೨೯೬॥

ಆವಹಂತೀತಿಮಂತ್ರೇಣ ಕೃತೋ ಹೋಮೋ ಮುನೀಶ್ವರೈಃ ।
ಕ್ಷೀರೇಣಾಜ್ಯೇನ ಮಧುನಾ ಸರ್ವಸಂಪತ್ಪ್ರವೃದ್ಧಿದಃ ॥೨೯೭॥

ಅನ್ನೇನಾಪಿ ಕೃತೋ ಹೋಮಃ ಕ್ಷೀರಾಜ್ಯಾದಿಭಿರಾದರಾತ್ ।
ಆವಹಂತೀತಿಮಂತ್ರೇಣ ಸರ್ವಸಂಪತ್ತಿಕಾಮ್ಯಯಾ ॥೨೯೮॥

ದೇವಿಯನ್ನು ಭಕ್ತಿಯಿಂದ ಆರಾಧಿಸಿದನು. ಆ ಮೇಲೆ ತಿರುಗಿ ಸಾಯಂಕಾಲದಲ್ಲಿ ಆ ವಿಶ್ವೇಶ್ವರನ ಪೂಜೆಯನ್ನು ಮಾಡಿ ಪ್ರೀತಿಯಿಂದ ಅನ್ನಪೂರ್ಣಾದೇವಿಯ ಆಲಯದಲ್ಲಿ (ಗುಡಿಯಲ್ಲಿ) ಆ ರಾತ್ರಿ ಜಾಗರಣೆಮಾಡಿದನು. ॥೨೯೩-೨೯೪॥

ಈತನು ಏನೂ ಆಹಾರವನ್ನು ತೆಗೆದುಕೊಳ್ಳದೇ ಮನೋಹರವಾದ ಪರಶಿವನ ಕಥೆಗಳನ್ನೇ ಓದುವನಾಗಿ, ಆದರದಿಂದ ಉಪವಾಸಮಾಡಿದನು. ಓ ದೇವೋತ್ತಮರಿರಾ, ಆ ದಿನ ರಾತ್ರಿ ಅಲ್ಲಿ ಬಹಳವಾಗಿ ಜನಗಳ ತುಂಬಳಿ (ಗುಂಪು) ಇದ್ದಿತು. ಆದರೂ ಈತನು ಪ್ರೀತಿಯಿಂದ ಬಿಡದೇ ಅಲ್ಲಿ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿದನು. ॥೨೯೫-೨೯೬॥

ಮುನೀಶ್ವರರು, ಆವಹಂತೀ ಎಂಬ ಮಂತ್ರಪೂರ್ವಕವಾಗಿ ಹಾಲು, ತುಪ್ಪ, ಜೇನು ಇವುಗಳಿಂದ ಸಕಲ ಸಂಪತ್ತುಗಳನ್ನು ಅಭಿವೃದ್ಧಿಗೊಳಿಸುವ ಹೋಮವನ್ನು ಮಾಡಿದರು. ಅನ್ನ, ಹಾಲು, ತುಪ್ಪ ಮೊದಲಾದವುಗಳಿಂದ ಆದರಪೂರ್ವಕವಾಗಿ ಸಕಲಸಂಪತ್ತುಗಳನ್ನು ಅಪೇಕ್ಷಿಸುತ್ತಾ ಮಂತ್ರಪೂರ್ವಕನಾಗಿ (ಆವಹಂತೀ) ಅವರು ಹೋಮಮಾಡಿದರು. ॥೨೯೭-೨೯೮॥

ತತಃ ಪ್ರಾತಃ ಸಮುತ್ಥಾಯ ವಿಶ್ವೇಶಾರ್ಚನಪೂರ್ವಕಂ ।
ಅನ್ನಪೂರ್ಣಾಮಪಿ ಪ್ರೀತ್ಯಾ ಪೂಜಯಾಮಾಸ ಶಕ್ತಿತಃ ॥೨೯೯॥

ತತೋಽಯಂ ಭೋಜಯಾಮಾಸ ಶೈವಾಂಶ್ಚೈವಸತೀಂಸ್ತಥಾ ।
ಸ್ವಯಂ ಚ ಪಾರಣಂ ಚಕ್ರೇ ಶಿವಧ್ಯಾನಪುರಸ್ಸರಂ ॥೩೦೦॥

ಈದೃಶೋಽಯಂ ಪುರಾ ಕಾಶ್ಯಾಂ ಸ್ಥಿತ್ವಾಽಪಿ ತದನಂತರಂ ।
ಚೈತ್ರಶುಕ್ಲಾಷ್ಟಮೀಂ ಪ್ರಾಪ್ಯ ನಾರ್ಚಯಾಮಾಸ ಶಂಕರಂ ॥೩೦೧॥

ಭ್ರಮೇಣ ಶಂಕರೀಂ ದೇವೀಮನಭ್ಯರ್ಚ್ಯ ಸ್ಥಿತಂ ಶಿವಾಂ ।
ಏನಂ ದೇಶಾಂತರಂ ಪ್ರಾಪ್ತುಮುದ್ಯುಕ್ತಂ ಚ ಚಕಾರ ಸಾ ॥೩೦೨॥

ತತಃ ಪರಮಯಂ ವಿಪ್ರೋ ನರ್ಮದಾಂ ಪ್ರಾಪ್ಯ ನಿರ್ಮಲಾಂ ।
ತತ್ರ ಸ್ನಾತ್ವಾ ತತೋಽನ್ಯತ್ರ ಮೃತಃ ಸರ್ಪೇಣ ದಂಶಿತಃ ॥೩೦೩॥

ಅನಂತರ ಬೆಳಗಾಗಲು ಎದ್ದು ವಿಶ್ವೇಶನ ಪೂಜೆಯೇ ಮೊದಲಾಗಿ ಅನ್ನಪೂರ್ಣಾದೇವಿಯ ಪೂಜೆಯನ್ನೂ ತನ್ನ ಶಕ್ತ್ಯನುಸಾರವಾಗಿ ಪ್ರೀತಿಯಿಂದ ಮಾಡಿದನು. ಹೀಗೆ ಪೂಜೆಯು ಮುಗಿದನಂತರ ಈ ಶಿವಭಕ್ತಾಗ್ರೇಸರನು ಶೈವರನ್ನೂ ಮತ್ತು ಅವರ ಪತ್ನಿಯರನ್ನೂ ಕರೆದು ಅವರಿಗೆ ತೃಪ್ತಿಯಾಗುವಂತೆ ಭೋಜನ ಮಾಡಿಸಿ ಅನಂತರ ತಾನೂ ಪರಶಿವನನ್ನು ಧ್ಯಾನಮಾಡುತ್ತಾ ಪಾರಣೆಮಾಡಿದನು. ॥೨೯೯-೩೦೦॥

ಇಂತಹ ಈಶ್ವರಭಕ್ತನು ಹಿಂದೆ ಕಾಶಿಯಲ್ಲಿ ವಾಸವಾಗಿದ್ದರೂ ಒಂದುಸಲ ಚೈತ್ರಮಾಸದ ಶುಕ್ಲಪಕ್ಷದ ಅಷ್ಟಮಿಯ ದಿನ ಭಕ್ತಿಯಿಂದ ಶಂಕರನನ್ನು ಪೂಜೆಮಾಡಲಿಲ್ಲ. ಹಾಗೆಯೇ ಭ್ರಾಂತಿಯಿಂದ ಆ ಶಂಕರಿಯನ್ನೂ ಆರಾಧಿಸಲಿಲ್ಲ. ಹೀಗೆ ತನ್ನನ್ನು ಪೂಜೆಮಾಡದೇ ಹೋದುದರಿಂದ ದೇವಿಯು ಅವನನ್ನು ಬೇರೆ ದೇಶಕ್ಕೆ ಹೋಗುವಂತೆ ಮಾಡಿದಳು. ॥೩೦೧-೩೦೨॥

ಹಾಗೆ ದೇಶಾಂತರಭ್ರಷ್ಟನಾದ ಆ ಬ್ರಾಹ್ಮಣನು ಅಲ್ಲಲ್ಲಿ ಸಂಚಾರಮಾಡುತ್ತಾ ನರ್ಮದಾನದಿಗೆ ಬಂದು ನಿರ್ಮಲವಾದ ಆ ನದಿಯ ನೀರಿನಲ್ಲಿ ಸ್ನಾನಮಾಡಿ, ಅಲ್ಲಿಂದ ಮುಂದೆ ಹೋಗುತ್ತಾ ಹಾವಿನಿಂದ ಕಚ್ಚಲ್ಪಟ್ಟು ಮೃತನಾದನು. ॥೩೦೩॥

ತತೋಽಯಂ ಭೂಪತಿರ್ಜಾತಃ ಸರ್ವಭೂಚಕ್ರಪಾಲಕಃ ।
ಸರ್ವಸೌಭಾಗ್ಯಸಂಪನ್ನಃ ಪುತ್ರಪೌತ್ರಸಮನ್ವಿತಃ ॥೩೦೪॥

ತತೋ ಮೃತೋಽಯಂ ರಾಜೇಂದ್ರೋ ವಿಮಾನವರಮಾಶ್ರಿತಃ ।
ಗೀತಸ್ತುತಶ್ಚ ಗಂಧರ್ವೈರ್ಮಮಲೋಕಮುಪಾಗತಃ ॥೩೦೫॥

ಮಯಾಽಯಂ ಪೂಜ್ಯತೇ ಭಕ್ತ್ಯಾ ಮತ್ಸಭಾಸದ್ಭಿರಪ್ಯಯಂ ।
ಸಂಪೂಜ್ಯತೇ ಸುರಾ ನಿತ್ಯಂ ಸಾದರಂ ಭಕ್ತಿಪೂರ್ವಕಂ ॥೩೦೬॥

ಕಲ್ಪಾಷ್ಟಕಮುಷಿತ್ವಾಽತ್ರ ತತೋ ಭೂತ್ವಾ ನರಾಧಿಪಃ ।
ಕಾಶೀಂ ಪ್ರಾಪ್ಯ ಮುದಾ ತತ್ರ ದೇಹತ್ಯಾಗಂ ಕರಿಷ್ಯತಿ ॥೩೦೭॥

ಶಿವಯೋಃ ಪೂಜನಂ ಪೂರ್ವಂ ಕೃತಮೇತೇನ ಯತ್ನತಃ ।
ಯತಸ್ತತಃ ಪುನಃ ಕಾಶೀಂ ಸಂಪ್ರಾಪ್ಯಾಯಂ ಶಿವಾಜ್ಞಯಾ ॥೩೦೮॥

ಅನಂತರ ಆವನು ಸಕಲ ಭೂಮಂಡಲವನ್ನೂ ರಕ್ಷಣೆಮಾಡುವ ರಾಜನಾಗಿ ಹುಟ್ಟಿ, ಪುತ್ರಪೌತ್ರಾದಿಗಳೊಡನೆ ಮೆರೆಯುತ್ತಾ ಸಕಲ ಸೌಭಾಗ್ಯಗಳಿಂದಲೂ ಶೋಭಿಸುತ್ತಿದ್ದನು. ॥೩೦೪॥

ಆಮೇಲೆ ಆ ರಾಜಶ್ರೇಷ್ಠನು ಮೃತನಾಗಿ ಉತ್ತಮವಾದ ವಿಮಾನದ ಮೇಲೆ ಕುಳಿತು, ಗಂಧರ್ವರಿಂದ ಗಾನಮಾಡಲ್ಪಡುತ್ತಲೂ ಸ್ತೋತ್ರಮಾಡಲ್ಪಡುತ್ತಲೂ ನನ್ನ (ಬ್ರಹ್ಮನ ಸತ್ಯ) ಲೋಕಕ್ಕೆ ಬಂದನು. ॥೩೦೫॥

ನಾನೂ ನನ್ನ ಸಭಾಸದರೂ, ಭಕ್ತಿಯಿಂದ ಪ್ರತಿನಿತ್ಯವೂ ಆದರಪೂರ್ವಕವಾಗಿ ಆತನನ್ನು ಪೂಜೆಮಾಡುತ್ತಿರುವೆವು. ಆತನು ನನ್ನ ಸತ್ಯಲೋಕದಲ್ಲಿ ಎಂಟು ಕಲ್ಪಗಳವರೆಗೆ ವಾಸಮಾಡಿ ಅನಂತರ ಭೂಮಂಡಲದಲ್ಲಿ ರಾಜನಾಗಿ ಜನಿಸಿ, ಆಮೇಲೆ ಕಾಶೀಪಟ್ಟಣಕ್ಕೆ ಹೋಗಿ ಅಲ್ಲಿ ಪ್ರೀತಿಯಿಂದ ಪ್ರಾಣತ್ಯಾಗಮಾಡುವನು. ॥೩೦೬-೩೦೭॥

ಹಿಂದಿನ ಜನ್ಮದಲ್ಲಿ ಇವನು ಪಾರ್ವತೀಪರಮೇಶ್ವರರನ್ನು ಪ್ರಯತ್ನಪೂರ್ವಕವಾಗಿ ಭಕ್ತಿಯಿಂದ ಪೂಜೆಮಾಡಿದ್ದುದರಿಂದ ಈತನು ಪುನಃ ಈ ಜನ್ಮದಲ್ಲಿ ಶಿವನ ಅಪ್ಪಣೆಯಿಂದ ಕಾಶೀಪಟ್ಟಣವನ್ನೇ ಹೊಂದಿ ಅಲ್ಲಿ ಸಕಲ ಸಂಸಾರಬಂಧನ

ಸರ್ವಸಂಸಾರವಿಚ್ಛಿತ್ತ್ಯೈ ಕಾಶ್ಯಾಂ ಮರಣಪೂರ್ವಕಂ ।
ಮೋಕ್ಷಂ ಮಹೇಶಕೃಪಯಾ ಪ್ರಾಪ್ನೋತ್ಯೇವ ನ ಸಂಶಯಃ ॥೩೦೯॥

ಏತಾದೃಶೈರ್ದ್ವಿಜವರ್ಯೈಃ ಪುರಾ ಕಾಶೀಮುಪಾಶ್ರಿತೈಃ ।
ಮುಕ್ತಿಃ ಪ್ರಾಪ್ತಾ ಮಹೇಶಸ್ಯ ಕೃಪಯಾ ಸತ್ಯಮುಚ್ಯತೇ ॥೩೧೦॥

ಕಲೌ ತು ಮಾನುಷಂ ಜನ್ಮ ಭವತ್ಯತ್ಯಂತದುರ್ಲಭಂ ।
ತತ್ರ ಚೇನ್ಮಾನುಷಂ ಜನ್ಮ ಕರ್ತವ್ಯಂ ಶಿವಪೂಜನಂ ॥೩೧೧॥

ಮಾನುಷೇಷ್ವಪಿ ಚೇಜ್ಜನ್ಮ ಬ್ರಾಹ್ಮಣ್ಯಾಂ ಬ್ರಾಹ್ಮಣಾದ್ಯದಿ ।
ತದಾತ್ವವಶ್ಯಂ ಕರ್ತವ್ಯಂ ಶ್ರೀಶಿವಾಭ್ಯರ್ಚನಂ ಮುದಾ ॥೩೧೨॥

ಅತ್ಯಂತದುರ್ಲಭಂ ಜನ್ಮ ಕಲೌ ಪ್ರಾಪ್ಯಾಪಿ ಮಾನುಷಂ ।
ಯದಿ ನಾರಾಧಯೇಚ್ಛಂಭುಂ ತಸ್ಯ ಜನ್ಮ ನಿರರ್ಥಕಂ ॥೩೧೩॥

ಶಿವೈಕಶರಣೋ ಭೂತ್ವಾ ಕಲೌ ಯದಿ ವಸೇನ್ನರಃ ।
ತಸ್ಯ ಮೋಕ್ಷೋ ಭವತ್ಯೇವ ಸತ್ಯಂ ಸತ್ಯಂ ಮಯೋಚ್ಯತೇ ॥೩೧೪॥

ವನ್ನೂ ಕಳೆದುಕೊಳ್ಳುದಕ್ಕೋಸ್ಕರ ಅಲ್ಲಿಯೇ ಮರಣಹೊಂದಿದವನಾಗಿ, ಆ ಮಹೇಶ್ವರನ ದಯೆಯಿಂದ ಸಂಶಯವಿಲ್ಲದೇ ಮೋಕ್ಷವನ್ನು ಹೊಂದಿಯೇ ಹೊಂದುವನು. ||೩೦೮-೩೦೯||

ಹಿಂದೆಯೂ ಈಗಲೂ ಇಂತಹ ಬ್ರಾಹ್ಮಣೋತ್ತಮರೇ ಕಾಶೀಪಟ್ಟಣವನ್ನು ಹೊಂದಿ ಆ ಮಹೇಶ್ವರನ ದಯೆಯಿಂದ ಸತ್ಯವಾಗಿಯೂ ಮೋಕ್ಷವನ್ನು ಹೊಂದಿರುವರು. ||೩೧೦||

ಈ ಕಲಿಯುಗದಲ್ಲಿ ಮನುಷ್ಯಜನ್ಮವೇ ಅತ್ಯಂತ ದುರ್ಲಭವು. ಆದರಲ್ಲಿಯೂ ಮನುಷ್ಯನಾಗಿ ಹುಟ್ಟಿದ ಮೇಲೆ ಶಿವಪೂಜೆಯನ್ನು ಮಾಡಲೇಬೇಕು. ಮನುಷ್ಯರಲ್ಲಿ ಬ್ರಾಹ್ಮಣದಂಪತಿಗಳಿಂದ ಜನಿಸಿ ಬ್ರಾಹ್ಮಣನಾದವನು ಮಾತ್ರ ಆ ಮಹೇಶ್ವರನನ್ನು ಅವಶ್ಯವಾಗಿ ಪ್ರೀತಿಯಿಂದ ಪೂಜೆಮಾಡಲೇ ಬೇಕು. ||೩೧೧-೩೧೨||

ಅತ್ಯಂತ ದುರ್ಲಭವಾದ ಈ ಮಾನವಜನ್ಮವನ್ನು ಹೊಂದಿದರೂ ಪರಶಂಭುವನ್ನು ಪೂಜೆಮಾಡದಿರುವವನ ಜನ್ಮವು ಸತ್ಯವಾಗಿಯೂ ವ್ಯರ್ಥವೇ ಸರಿ. ಈ ಕಲಿ

ಮೋಕ್ಷೋ ಭವತಿ ಮರ್ತ್ಯಾನಾಂ ಶಂಕರಸ್ಯೈವ ಪೂಜಯಾ।
ಸತ್ಯಂ ಸತ್ಯಂ ಪುನಃ ಸತ್ಯಮುದ್ಧೃತ್ಯ ಭುಜಮುಚ್ಯತೇ ॥೩೧೫॥

ಯಥಾ ವಿನಾ ಸುವರ್ಣೇನ ದುರ್ಲಭೇ ಹೇಮಕುಂಡಲೇ।
ತಥಾ ವಿನಾ ಮಹಾದೇವಪೂಜಾಂ ಮೋಕ್ಷೋಽಪಿ ದುರ್ಲಭಃ॥೩೧೬॥

ಯಥಾ ವಿನಾ ಭೋಜನೇನ ತೃಪ್ತಿರತ್ಯಂತದುರ್ಲಭಾ।
ತಥಾ ವಿನಾ ಮಹಾದೇವಪೂಜಾಂ ಮೋಕ್ಷೋಽಪಿ ದುರ್ಲಭಃ॥೩೧೭॥

ಯಥಾ ಚಕ್ಷುರ್ವಿನಾ ಜ್ಞಾನಂ ಚಾಕ್ಷುಷಂ ತ್ವತಿದುರ್ಲಭಂ।
ತಥಾ ವಿನಾ ಮಹಾದೇವಪೂಜಾಂ ಮೋಕ್ಷೋಽಪಿ ದುರ್ಲಭಃ॥೩೧೮॥

ಯಥಾ ಶ್ರೋತ್ರಂ ವಿನಾ ಜ್ಞಾನಂ ಶ್ರೋತ್ರಮತ್ಯಂತದುರ್ಲಭಂ।
ತಥಾ ವಿನಾ ಮಹಾದೇವಪೂಜಾಂ ಮೋಕ್ಷೋಽಪಿ ದುರ್ಲಭಃ॥೩೧೯॥

ಯುಗದಲ್ಲಿ ಆ ಶಿವನೊಬ್ಬನನ್ನೇ ರಕ್ಷಕನನ್ನಾಗಿ ತಿಳಿದು ಅವನನ್ನೇ ಪೂಜಾಧ್ಯಾನ ಮಾಡುತ್ತಾ ವಾಸಮಾಡುವ ಮಾನವನಿಗೆ ಸತ್ಯವಾಗಿಯೂ ಮೋಕ್ಷವು ದೊರೆತೇ ದೊರೆಯುತ್ತದೆ. ||೩೧೩-೩೧೪||

ಗೌರೀಶಂಕರರನ್ನು ಪೂಜೆಮಾಡುವುದರಿಂದಲೇ ಮಾನವರಿಗೆ ಸತ್ಯವಾಗಿಯೂ ಮೋಕ್ಷವುಂಟಾಗುವುದೆಂದು ಪುನಃ ಪುನಃ ಭುಜವೆತ್ತಿ ಸಾರುತ್ತೇನೆ. ಚಿನ್ನವೇ ಇಲ್ಲದೇ ಚಿನ್ನದ ಕುಂಡಲಗಳು ದೊರೆಯಲಾರದಂತೆ ಮಹಾದೇವನ ಪೂಜೆಯಿಲ್ಲದೇ ಮೋಕ್ಷವೂ ದುರ್ಲಭವೇ ಆಗುವುದು. ||೩೧೫-೩೧೬||

ಊಟಮಾಡದೇ ತೃಪ್ತಿಯು ದೊರೆಯುವುದು ಅಸಂಭವವಾಗಿರುವಂತೆ, ಆ ಮಹಾದೇವನ ಪೂಜೆಯಿಲ್ಲದೇ ಮೋಕ್ಷವೂ ದುರ್ಲಭವಾಗಿರುವುದು. ಕಣ್ಣೇ ಇಲ್ಲದೆ ಕಣ್ಣಿನಿಂದುಂಟಾಗುವ ಚಾಕ್ಷುಷವೆಂಬ (ನೋಟವೆಂಬ) ಜ್ಞಾನವು ಅಸಾಧ್ಯವಾಗಿರುವಂತೆ ಆ ಮಹಾದೇವನನ್ನು ಪೂಜಿಸದೇ ಮೋಕ್ಷವು ದುರ್ಲಭವೇ ಆಗಿರುವುದು. ||೩೧೭-೩೧೮||

ಕಿವಿಯೇ ಇಲ್ಲದೇ ಶಬ್ದಗಳನ್ನು ಕೇಳುವುದು ಅಸಾಧ್ಯವಾಗಿರುವಂತೆಯೂ, ನಾಲಿಗೆಯೇ ಇಲ್ಲದೆ ರುಚಿನೋಡುವ ಬುದ್ಧಿಯು ದುರ್ಲಭವಾಗಿರುವಂತೆಯೂ ಆ

ಯಥಾ ಧೀರಸನಾಭಾವೇ ರಸನಾತ್ತೃತಿದುರ್ಲಭಾ ।
ತಥಾ ವಿನಾ ಮಹಾದೇವಪೂಜಾಂ ಮೋಕ್ಷೋಽಪಿ ದುರ್ಲಭಃ॥೩೨೦॥

ಯಥಾರ್ಘಂ ಘ್ರಾಣವಿರಹೇ ಘ್ರಾಣಧೀಸ್ತೃತಿದುರ್ಲಭಾ ।
ತಥಾ ವಿನಾ ಮಹಾದೇವಪೂಜಾಂ ಮೋಕ್ಷೋಽಪಿ ದುರ್ಲಭಃ॥೨೨೧॥

ಯಥಾ ತ್ವಗಿಂದ್ರಿಯಾಭಾವೇ ತ್ವಾಚೀಯಾ ದುರ್ಲಭಾ ಮತಿಃ ।
ತಥಾ ವಿನಾ ಮಹಾದೇವಪೂಜಾಂ ಮೋಕ್ಷೋಽಪಿ ದುರ್ಲಭಃ॥೩೨೨॥

ಯಥಾ ಮನೋ ವಿನಾ ಜ್ಞಾನಂ ಮಾನಸಂ ತ್ವತಿದುರ್ಲಭಂ ।
ತಥಾ ವಿನಾ ಮಹಾದೇವಪೂಜಾಂ ಮೋಕ್ಷೋಽಪಿ ದುರ್ಲಭಃ॥೩೨೩॥

ಯಥಾಽನುಮಾನವಿರಹೇ ದುರ್ಲಭಾಽನುಮತಿರ್ಗತಾ ।
ತಥಾ ವಿನಾ ಮಹಾದೇವಪೂಜಾಂ ಮೋಕ್ಷೋಽಪಿ ದುರ್ಲಭಃ॥೩೨೪॥

ಯಥಾ ಸುಖಸ್ಯ ವಿರಹೇ ನ ಸುಖಾನುಭವೋ ಮತಃ ।
ತಥಾ ವಿನಾ ಮಹಾದೇವಪೂಜಾಂ ಮೋಕ್ಷೋಽಪಿ ದುರ್ಲಭಃ ॥೩೨೫॥

ಯಥಾ ವೃಷ್ಟಿಂ ವಿನಾ ಸಸ್ಯಂ ನ ಭವಿಷ್ಯತಿ ಸರ್ವಥಾ ।
ತಥಾ ವಿನಾ ಮಹಾದೇವಪೂಜಾಂ ಮೋಕ್ಷೋಽಪಿ ದುರ್ಲಭಃ॥೩೨೬॥

ಮಹಾದೇವನ ಪೂಜೆಯಿಲ್ಲದೆ ಮೋಕ್ಷವೂ ನಿಜವಾಗಿ ದುರ್ಲಭವೇ ಆಗಿರುವುದು. ||೩೧೯-೩೨೦||

ಮೂಗಿಲ್ಲದೆ ವಾಸನೆ ನೋಡುವ ಬುದ್ಧಿಯು ಅಸದಳವಾಗಿರುವಂತೆಯೂ ಚರ್ಮವಿಲ್ಲದೆ ಸ್ಪರ್ಶರೂಪವಾದ ತ್ವಗಿಂದ್ರಿಯದ ಗುಣವು ತಿಳಿಯದಿರುವಂತೆಯೂ, ಆ ಮಹಾದೇವನ ಪೂಜೆಯಿಲ್ಲದೇ ಮೋಕ್ಷವೂ ದುರ್ಲಭವಾಗಿರುವುದು.||೩೨೧-೩೨೨||

ಮನಸ್ಸಿಲ್ಲದ ಮಾನಸಿಕಜ್ಞಾನದಂತೆಯೂ, ಅನುಮಾನವಿಲ್ಲದ ಅನುಮತಿಯಂತೆಯೂ, ಆ ಮಹಾದೇವನ ಪೂಜೆಯಿಲ್ಲದೆ ಮೋಕ್ಷವೂ ದುರ್ಲಭವೆನಿಸುವುದು. ||೩೨೩-೩೨೪||

ಸುಖವಿಲ್ಲದ ಸೌಖ್ಯಾನುಭವದಂತೆಯೂ, ಮಳೆಯಿಲ್ಲದ ಸಸ್ಯಗಳ ಬೆಳೆಯಂತೆಯೂ ಆ ಮಹಾದೇವನನ್ನು ಪೂಜಿಸದೇ ಮೋಕ್ಷವು ದೊರೆಯುವುದು ದುರ್ಲಭ. ||೩೨೫-೩೨೬||

ಯಥಾ ವಿನಾ ತ್ರಿಪುಂಡ್ರೇಣ ಬ್ರಾಹ್ಮಣ್ಯಮತಿದುರ್ಲಭಂ ।
ತಥಾ ವಿನಾ ಮಹಾದೇವಪೂಜಾಂ ಮೋಕ್ಷೋಽಪಿ ದುರ್ಲಭಃ॥೩೨೭॥

ಶಿವಪೂಜಾಂ ವಿನಾ ಮೋಕ್ಷಂ ಯಸ್ತು ಕಾಮಯತೇ ನರಃ ।
ಸ ಮೂರ್ಖ ಇತಿ ವಿಜ್ಞೇಯಃ ಸತ್ಯಂ ಸತ್ಯಂ ನ ಸಂಶಯಃ ॥೩೨೮॥

ಮಯಾ ಯದಿ ಕಲೌ ಜನ್ಮ ಮಾನುಷಂ ಪ್ರಾಪ್ಯತೇ ತದಾ ।
ಶಿವಪೂಜಾಂ ಕರಿಷ್ಯಾಮಿ ಮೋಕ್ಷಾರ್ಥಮತಿಯತ್ನತಃ ॥೩೨೯॥

ಕ್ರಿಯತೇ ಯಾ ಮಯಾ ಪೂಜಾ ಮಹಾದೇವಸ್ಯ ಸಾ ಮಯಾ ।
ಶ್ರುತ್ಯುಕ್ತೇತ್ಯೇವ ಸತತಂ ಕ್ರಿಯತೇ ಶಿವಸಂಮತಾ ॥೩೩೦॥

ದೇವತ್ವಮೇವ ದೇವಾನಾಂ ಮೋಕ್ಷಸ್ಯ ಪ್ರತಿಬಂಧಕಂ ।
ತತಃ ಕೃತಾಽಪಿ ಸಾ ಪೂಜಾ ನಾಽಧುನಾ ಮೋಕ್ಷದಾಯಿನೀ ॥೩೩೧॥

ತದಾ ದೇವತ್ವಸಂಬಂಧನಾಶೋಽಸ್ಮಾಕಂ ಭವಿಷ್ಯತಿ ।
ಕದಾ ದಾಸ್ಯತಿ ಗೌರೀಶೋ ಮೋಕ್ಷಂ ವಿಶ್ವೇಶಪೂಜಯಾ ॥೩೩೨॥

ಭಸ್ಮತ್ರಿಪುಂಡ್ರವಿಲ್ಲದೇ ಬ್ರಾಹ್ಮಣ್ಯವು ಅನರ್ಥಕವಾಗಿರುವಂತೆ, ಆ ಮಹಾದೇವನ ಪೂಜೆಯಿಲ್ಲದೆ ಮೋಕ್ಷವೂ ದುರ್ಲಭವಾಗಿರುವುದು. ಶಿವನನ್ನು ಪೂಜೆ ಮಾಡದೇ ಮೋಕ್ಷವನ್ನು ಬಯಸುವ ಮಾನವನು ಸತ್ಯವಾಗಿಯೂ ಮೂರ್ಖನೆಂಬುವುದರಲ್ಲಿ ಲೇಶಮಾತ್ರವೂ ಸಂದೇಹವೇ ಇಲ್ಲ. ॥೩೨೭-೩೨೮॥

ಈ ಕಲಿಯುಗದಲ್ಲಿ ನನಗೇನಾದರೂ ಮನುಷ್ಯಜನ್ಮವು ಬಂದರೆ ಆಗ ನಾನೂ ಮೋಕ್ಷಪ್ರಾಪ್ತಿಗೋಸ್ಕರ ಕಡು ನಿಯಮದಿಂದ ಆ ಪರಶಿವನ ಪೂಜೆಯನ್ನು ಮಾಡುತ್ತೇನೆ. ಶಿವನಿಗೆ ಸಂಮತಿಯಿರುವ ಈ ಪೂಜೆಯು ವೇದಗಳಲ್ಲಿ ಹೇಳಿರುವುದರಿಂದ ನಾನು ಯಾವಾಗಲೂ ಆ ಮಹಾದೇವನ ಪೂಜೆಯನ್ನೇ ಮಾಡುತ್ತಿರುವೆನು. ॥೩೨೯-೩೩೦॥

ದೇವತೆಗಳಾದ ನಮಗೆ ಆ ದೇವತ್ವವೇ ಮೋಕ್ಷಪ್ರಾಪ್ತಿಗೆ ಪ್ರತಿಬಂಧಕವಾಗಿರುವುದು. (ಅಡ್ಡಿಯಾಗಿರುವುದು) ಆದ್ದರಿಂದ ಅವರು ಶಿವಪೂಜೆಮಾಡಿದರೂ ಈಗ ಅವರಿಗೆ ಮೋಕ್ಷವುಂಟಾಗುವ ಹಾಗಿಲ್ಲ. ನಮಗೆ ಈ ದೇವತ್ವಸಂಬಂಧವು ಎಂದಿಗೆ

ಪುರಾ ಶಂಕರಮಭ್ಯರ್ಚ್ಯ ಬ್ರಹ್ಮತ್ವಂ ಪ್ರಾರ್ಥಿತಂ ಮಯಾ ।
ತದ್ದತ್ತಂ ಶಂಕರೇಣೇದಂ ಕದೈತನ್ನೋ ವಿನಶ್ಯತಿ ॥೩೩೩॥

ಏವಂ ಶಂಕರಮಭ್ಯರ್ಚ್ಯ ವಿಷ್ಣುನಾಪ್ಯತಿಯತ್ನತಃ ।
ವಿಷ್ಣುತ್ವಂ ಪ್ರಾರ್ಥಿತಂ ತೇನ ತತ್ಪ್ರಾಪ್ತಂ ಶಂಕರಾರ್ಚಯಾ॥೩೩೪॥

ಏವಂ ಶಂಕರಮಭ್ಯರ್ಚ್ಯ ದೇವೈರನ್ಯೈಶ್ಚ ಸಾದರಂ ।
ಮಹಾದೇವಪ್ರಸಾದೇನ ತತ್ತತ್ಪದಮುಪಾರ್ಜಿತಂ ॥೩೩೫॥

ಇದಾನೀಂ ಮಾನುಷಂ ಜನ್ಮ ವಿಷ್ಣುಃ ಪ್ರಾರ್ಥಯತೇ ಸ್ವಯಂ ।
ಮಯಾಪಿ ಪ್ರಾರ್ಥ್ಯತೇ ನಿತ್ಯಂ ತತ್ಕದಾ ವಾ ಭವಿಷ್ಯತಿ ॥೩೩೬॥

ಇದಾನೀಂ ವಿಷ್ಣುರನಿಶಂ ಶಿವಪೂಜಾಪರಾಯಣಃ ।
ಶಿವಪೂಜಾಂ ಕರೋತ್ಯೇವ ಮೋಕ್ಷಾರ್ಥಮತಿಯತ್ನತಃ ॥೩೩೭॥

ತೊಲಗುವುದೋ, ಯಾವಾಗ ಗೌರೀರಮಣನು ಆ ವಿಶ್ವೇಶ್ವರಲಿಂಗದ ಪೂಜೆಯಿಂದ ತೃಪ್ತನಾಗಿ ನಮಗೆ ಮೋಕ್ಷವನ್ನು ಕೊಡುವನೋ ಕಾಣೆವು. ॥೩೩೧-೩೩೨॥

ಹಿಂದೆ ನಾನು ಆ ಶಂಕರನನ್ನು ಪೂಜಿಸಿಯೇ, ಈ ಬ್ರಹ್ಮಪದವಿಯನ್ನು ಪ್ರಾರ್ಥಿಸಿದನು. ಆಗ ದೇವದೇವನು ನನಗೆ ಆ ಬ್ರಹ್ಮಪದವಿಯನ್ನು ಕರುಣಿಸಿ ಕೊಟ್ಟನು. ಈ ಪದವಿಯು ಎಂದಿಗೆ ನಾಶವಾಗುತ್ತದೆಯೋ ಕಾಣೆನು. ಹೀಗೆಯೇ ವಿಷ್ಣುವೂ ಆ ಶಂಕರನನ್ನು ತುಂಬಾ ಪ್ರಯತ್ನಪುರಸ್ಸರವಾಗಿ ಪೂಜೆಮಾಡಿಯೇ ಶಂಕರನ ಅನುಗ್ರಹದಿಂದ ವಿಷ್ಣುಪದವಿಯನ್ನು ಪಡೆದನು. ॥೩೩೩-೩೩೪॥

ಇದೇ ರೀತಿ ಬೇರೆ ದೇವತೆಗಳೂ (ಇಂದ್ರಾದಿ ದೇವತೆಗಳೂ) ಆ ಶಂಕರನನ್ನು ಪೂಜಿಸಿ, ಆಯಾ ಸ್ಥಾನಗಳನ್ನು ಹೊಂದಿರುವರು. ಈಗ ವಿಷ್ಣುವೂ ಮತ್ತು ನಾನೂ, ಮನುಷ್ಯಜನ್ಮವನ್ನೇ ನಿತ್ಯವೂ ಪ್ರಾರ್ಥಿಸುತ್ತಿರುವೆವು. ಅದು ಯಾವಾಗ ದೊರೆಯುತ್ತದೆಯೋ ಕಾಣೆನು. ॥೩೩೫-೩೩೬॥

ಈಗ ವಿಷ್ಣುವು ಅನವರತವೂ ಶಿವಪೂಜಾತತ್ಪರನಾಗಿ ದೇವದೇವನನ್ನೇ ಧ್ಯಾನ ಮಾಡುತ್ತಾ ಮೋಕ್ಷಪ್ರಾಪ್ತಿಗೋಸ್ಕರ ತುಂಬಾ ಪ್ರಯತ್ನದಿಂದ ಯತ್ನಿಸುತ್ತಿರುವನು. ನಾನೂ ಈ ಶಿವಲಿಂಗವನ್ನು ನಿತ್ಯವೂ ಪ್ರಯತ್ನಪೂರ್ವಕವಾಗಿ ಪೂಜೆಮಾಡುತ್ತಿರು

ಮಯೇದಂ ಪೂಜ್ಯತೇ ನಿತ್ಯಂ ಶಿವಲಿಂಗಂ ಪ್ರಯತ್ನತಃ ।
ಭವದ್ಭಿಶ್ಚ ಮಹಾದೇವಃ ಪೂಜನೀಯಃ ಸದಾ ಸುರಾಃ ॥೩೩೮॥

ವಸಾಮಃ ಶಂಕರಂ ನಿತ್ಯಂ ಸಂಪೂಜ್ಯಾತ್ಯಂತಯತ್ನತಃ ।
ಏವಂ ಸತಿ ಮಹಾದೇವಃ ಕೃಪಾಂ ಕಿಂ ನ ಕರಿಷ್ಯತಿ ॥೩೩೯॥

ಕದಾಚಿನ್ಮಾನುಷಂ ಜನ್ಮಪ್ರಾಪ್ಯಂ ಕಾಶೀಮವಾಪ್ಯ ಚ ।
ಸಂಪೂಜ್ಯ ಶಂಕರಂ ಮೋಕ್ಷಂ ಪ್ರಾಪ್ಸ್ಯಾಮಃ ಶಿವಪೂಜಯಾ॥೩೪೦॥

ಸ್ಮರಧ್ವಂ ದೇವದೇವೇಶಂ ಶಂಕರಂ ಸಾಂಬಮನ್ವಹಂ ।
ತೇನೈವ ದುಃಖಲೇಶೋಽಪಿ ಭವತಾಂ ನ ಭವಿಷ್ಯತಿ ॥೩೪೧॥

ಭವದಾಗಮನೇ ಹೇತುಃ ಜ್ಞಾತ ಏವ ಮಯಾಽಧುನಾ ।
ತತ್ತಾಪೋ ಭವತಾಂ ದುಃಖಂ ನ ಕರಿಷ್ಯತಿ ಸರ್ವಥಾ ॥೩೪೨॥

ವೆನು. ಓ ದೇವತೆಗಳಿರಾ, ನೀವೂ ಆ ಮಹಾದೇವನನ್ನು ಯಾವಾಗಲೂ ಪೂಜೆ ಮಾಡಿರಿ. ॥೩೩೭-೩೩೮॥

ನಾವೂ ಹೆಚ್ಚಿನ ನಿಯಮದಿಂದ ಆ ಶಂಕರನನ್ನು ಪೂಜಿಸಿ, ನಿತ್ಯವೂ ಅವನ ಸನ್ನಿಧಿಯಲ್ಲಿಯೇ ವಾಸಮಾಡೋಣ. ಹೀಗೆ ನಾವು ಮಾಡಿದರೆ ಆ ಮಹಾದೇವನು ಏಕೆ ದಯೆಯಿಡುವುದಿಲ್ಲವೋ ನೋಡೋಣ. ॥೩೩೯॥

ಒಂದುಕಾಲದಲ್ಲಿ ನಾವೂ ಮನುಷ್ಯಜನ್ಮವನ್ನು ಹೊಂದಿ, ಕಾಶೀಕ್ಷೇತ್ರಕ್ಕೆ ಹೋಗಿ ಅಲ್ಲಿ ಆ ಶಂಕರನನ್ನು ಪೂಜಿಸಿ, ಆ ಶಿವಪೂಜೆಯಿಂದ ಮೋಕ್ಷವನ್ನು ಹೊಂದೋಣ. ॥೩೪೦॥

ನೀವೆಲ್ಲರೂ, ದೇವದೇವೋತ್ತಮನೆನಿಸಿರುವ ಅಂಬಿಕಾರಮಣನಾದ ಶಂಕರನನ್ನು ಸ್ಮರಣೆಮಾಡಿರಿ. ಅದರಿಂದಲೇ ದುಃಖಲೇಶವೂ ನಿಮಗೆ ಎಂದಿಗೂ ಉಂಟಾಗಲಾರದು. ॥೩೪೧॥

ಓ ದೇವತೆಗಳಿರಾ! ಈಗ ನಿಮ್ಮ ಬರುವಿಕೆಯ ಕಾರಣವು ನನಗೆ ತಿಳಿಯಿತು. ಆತನ ತಪಶ್ಚರ್ಯೆಯಿಂದ ನಿಮಗೆ ಎಂದಿಗೂ ದುಃಖವುಂಟಾಗುವುದಿಲ್ಲವೆಂದು ತಿಳಿಯಿರಿ. ॥೩೪೨॥